UNIVERSAL
LIBRARY
OU_202041
UNIVERSAL
LIBRARY

ಕರ್ಣಾಟಕ

ಸಾಹಿತ್ಯ ಪರಿಷತ್ ಪತ್ರಿಕೆ.

ಸಂಪುಟ ೨. ಪಿಂಗಳ ಸಂವತ್ಸರ, ೧೯೧೭—೧೯೧೮.

Journal of the Kannada Academy.

VOLUME II, 1917-1918.

ಬೆಂಗಳೂರು ಸಿಟಿ.

ಐರಿಷ್ ಪ್ರೆಸ್ ಮತ್ತು ಬಿ ಬಿ. ಡಿ. ಪವರ್ ಪ್ರೆಸ್ಸಿನಲ್ಲಿ
ಮುದ್ರಿತವಾಗಿದೆ.

೧೯೧೮.

(ವಾರ್ಷಿಕ ಚಂದಾ ರೂ. [illegible].

CHECKED. 1951

Checked 1965

Checked 1969

FOREWORD.

In the following 402 pages of the Parishat Journal there are four contributions written by the Editorial Board, 14 original articles written by scholars, and several reviews of books and journals together with the Annual Report for the year Nala (1916-17) and an account of the Third Literary Conference held at Mysore in the month of June 1917. The following nine articles evince critical acumen and wide reading, viz

(1) Asoka's Inscriptions with notes by Mahavidwan K Rajagopalachakravarti Saralakavisuri,

(2) Euphony in Kannada by Mr R Raghunatha Rao, B. A,

(3) Outlines of the History of the Kannada Language by Mr. R Raghunatha Rao, B A,

(4) Rare and Obsolete Tadbhava words by Mr. H Narayana Rao, B A, B L,

(5) Kannada words and Desiya words by Mr H Narayana Rao, B A, B L,

(6, 7, 8) Unification of Kannada literary forms by Mr S N Narahariaiya, B A, LL B, Mr Srinivasa Rajapurohit, Anewatti, Shimoga District, and Mr J Balavanta Rao, Bhagalkote,

(9) Adipampa and his Works by Pandit S. Thimmappaiya Sastry

Mr H Narayana Rao's articles in connection with the origin of several Kannada words evince his anxiety to produce an improved Dictionary of the Kannada Language. Mr R Raghunatha Rao's article 'Euphony in Kannada' attempts to give a comprehensive and historical view of the subject His "Outlines of the History of the Kannada Language" contains several facts relating to the development of the Kannada Language in different centres of culture. Pandit S Thimmappaiya Sastry's contribution contains numerous facts relating to Pampa and his works.

ಪೂರ್ವವಚನ.

ಈ ದ್ವಿತೀಯ ಸಂಪುಟದಲ್ಲಿರುವ ೪೦೨ ಪುಟಗಳನ್ನು ಪರಿಶೀಲಿಸುವಲ್ಲಿ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ೪ ಲೇಖನಗಳೂ ಕನ್ನಡ ಪಂಡಿತರುಗಳು ಬರೆದ ೧೪ ಲೇಖನಗಳೂ ಕಾಣಬರುವುವು. ಇವುಗಳ ಜತೆಗೆ ಗ್ರಂಥವಿಮರ್ಶೆ, ವಿವಿಧ ವಿಷಯ ವಿಮರ್ಶೆ, ನಳಸಂವತ್ಸರದ ವರದಿ, ದ್ವಿತೀಯವಾರ್ಷಿಕ ಸಭೆಯ ವಿವರ ಮತ್ತು ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನದ ವಿಷಯ ಎಂಬುವು ಇರುವುವು. ಶೋಧನಾ ಚಾತುರ್ಯವನ್ನು ತೋರಿಸುವ ಒಂಬತ್ತು ಲೇಖನಗಳು ಇರುವುವು. ಯಾವುವೆಂದರೆ —

(1) ಆಸ್ಥಾನ ಮಹಾವಿದ್ವಾನ್ ಸರಳಕವಿಸೂರಿ ರಾಜಗೋಪಾಲಚಕ್ರವರ್ತಿಗಳು ಬರೆದ ಅಶೋಕಮಹಾರಾಜನ ಶಾಸನಗಳು (ಸಶೇಷ),

(2 ಮತ್ತು 3) ಮ|| ರಾ|| ಆರ್ ರಘುನಾಥರಾಯರು ಬರೆದ ಸಂಧಿಕಾರ್ಯಗಳ ವಿಚಾರ ಮತ್ತು ಕರ್ಣಾಟಕಭಾಷಾಚರಿತ್ರೆಯ ಹೆಗ್ಗುರುತುಗಳು,

(4 ಮತ್ತು 5) ಮ|| ರಾ|| ಎಚ್ ನಾರಾಯಣರಾಯರು ಬರೆದಿರುವ ಅಜ್ಞಾತ ತದ್ಭವಗಳು ಮತ್ತು ಕರ್ಣಾಟಕ ಮತ್ತು ದೇಶೀಯ ಪದಗಳು,

(6, 7 ಮತ್ತು 8) ಗ್ರಾಂಥಿಕ ರೂಪಗಳ ಏಕೀಕರಣದ ವಿಷಯದಲ್ಲಿ ಮ|| ರಾ|| ಗಳಾದ ಎಸ್ ಎಂ ನರಹರಿಶೆಟ್ಟಿಯವರು ಶ್ರೀನಿವಾಸರಾವ್ ಪುರೋಹಿತರು, ಮತ್ತು ಜೆ. ಬಲವಂತರಾಯರು ಬರೆದ ಲೇಖನಗಳು,

(9) ಬ್ರ|| ಪಂ|| ತಿಮ್ಮಪ್ಪಯ್ಯ ಶಾಸ್ತ್ರಿಗಳು ಬರೆದ ಆದಿಪಂಪಮಹಾಕವಿಯ ವಿಷಯಗಳು

ಮ|| ರಾ|| ಎಚ್ ನಾರಾಯಣರಾಯರವರು ಪ್ರಥಮ ಸಂಪುಟದಲ್ಲಿ ಮುದ್ರಿತವಾಗಿರುವ ಕರ್ಣಾಟಕ ಧಾತುಗಳ ಜತೆಗೆ ಈ ದ್ವಿತೀಯ ಸಂಪುಟದಲ್ಲಿ ಅಜ್ಞಾತ ತದ್ಭವಗಳ, ಕರ್ಣಾಟಕ ಮತ್ತು ದೇಶೀಯ ಪದಗಳ ವಿಚಾರವನ್ನು ಮಾಡಿ ನಿಘಂಟುವಿನ ಸಂಸ್ಕರಣಕ್ಕಾಗಿ ಬಹು ಪ್ರಯಾಸಪಡುತ್ತಿರುವರು. ಮ|| ರಾ|| ಆರ್ ರಘುನಾಥರಾಯರು ಬರೆದ ಸಂಧಿಕಾರ್ಯಗಳ ವಿಚಾರವು ಕರ್ಣಾಟಕ ಸಂಧಿಕಾರ್ಯದ ಮುಖ್ಯಾಂಶಗಳೆಲ್ಲವನ್ನೂ ತೋರಿಸುತ್ತದೆ. ಕರ್ಣಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳು ಎಂಬ ಲೇಖನವು ಕರ್ಣಾಟಕ ಭಾಷೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಒಳಕೊಂಡಿದೆ. ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳವರು ಆದಿಪಂಪನ ವಿಷಯವಾಗಿ ಬರೆದಿರುವ ಲೇಖನವು ಆದಿಪಂಪನ ವಿಷಯವನ್ನು ಚೆನ್ನಾಗಿ ತಿಳಿಸುವುದು.

ವಿಷಯ ಸೂಚಿಕೆ.

ಪ್ರಥಮಸಂಚಿಕೆ

ಪುಟ.

ನವವರ್ಷ ನಿವೇದನ
The New Year 1 - 2

ಅಶೋಕಮಹಾರಾಜನ ಶಾಸನಗಳು
ಮಹಾವಿದ್ವಾನ್ ಕೆ ಆರ್ ಚಕ್ರವರ್ತಿ ಸರಳಕವಿಸೂರಿ
Asoka's Inscriptions by Mahavidwan
K. R Chakravarti Sarala Kavi Suri 3 - 26

ಸಂಧಿಕಾರ್ಯಗಳ ವಿಚಾರ—ಮ|| ರಾ|| ಆರ್. ರಘುನಾಥರಾಯರು, ಬಿ. ಎ.
Euphony in Kannada by Mr R Raghunatha Rao B A 27 - 65

ಅಜ್ಞಾತ ತದ್ಭವಗಳು-ಮ|| ರಾ|| ಎಚ್. ನಾರಾಯಣರಾಯರು ಬಿ ಎ, ಬಿ ಎಲ್
Rare and obsolete Tadbhavas by
Mr H Narayana Rao B A, B L 66 - 71

ಜಗದ್ವಿಖ್ಯಾತರಾದ ಮೂರು ಕವಿಗಳು
Three world famous Poets 70 - 79

ಮಹಾರಾಷ್ಟ್ರೀಯ ಪ್ರಾಚೀನಸಾಹಿತ್ಯ-ಮ|| ರಾ|| ಶೇಷ ಭ ಪಾರಿಶ್ವಾಡ
Early Marathi Literature by Mr S B Parishwad 79 - 85

ಕನ್ನಡ ಮರಾಠಿಗಳಲ್ಲಿರುವ ಗಾರ್ ಫೀಲ್ಡ್ ಚರಿತೆಗಳು
Life of President James A Garfield in Kannada and in Marathi 86 - 90

ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯ
The affairs of the Karnataka Sahitya Parishat 90 - 95

ಗ್ರಂಥವಿಮರ್ಶೆ
Reviews of books and periodicals 96 - 98

ವಿವಿಧ ವಿಷಯ ವಿಮರ್ಶೆ
Editorial Notes 99 - 100

ದ್ವಿತೀಯ ಸಂಚಿಕೆ

ಪರಿಷತ್ತಿನ ನಳಸಂವತ್ಸರದವರದಿ (೧೯೧೬-೧೭)
The Report of the Karnataka Sahitya Parishat
for Nala (1916 17) 101 - 115

ಪುಟ.

ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನ
The Third Kannada Literary Conference. 116 - 128

ಕರ್ಣಾಟಕಸಾಹಿತ್ಯ ಪರಿಷತ್ತಿನ ದ್ವಿತೀಯವಾರ್ಷಿಕ ಸಭೆಯ
ಕಾರ್ಯವಿವರ
The Proceedings of the Second Annual Meeting of the Karnataka
Sahitya Parishat. 128 - 138

ಗ್ರಾಂಥಿಕ ರೂಪಗಳ ಏಕೀಕರಣ
ಮ|| ರಾ|| ಎಸ್. ಎನ್. ನರಹರಯ್ಯ, ಬಿ. ಎ., ಎಲ್. ಎಲ್. ಬಿ.
Unification of Kannada Literary Forms by
Mr S N Naraharaiya B A, L L B 138 - 162

ಆದಿಪಂಪಮಹಾಕವಿಯ ವಿಷಯವು, ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳು
Adipampa & his works by Pandit S Thimmappaiya Sastry 162 - 177

ಕರ್ಣಾಟಕ ಮತ್ತು ದೇಶೀಯ ಪದಗಳು
ಮ|| ರಾ|| ಎಚ್. ನಾರಾಯಣರಾಯರು
Kannada and Desiya Words by Mr
H. Narayana Rao, B A, B L 177 - 184

ಗೋಖಲೆಯವರ ಜೀವಚರಿತ್ರೆಯಸಾರ
Lessons from the Life of Professor Gokhale 185 - 193

ಕರ್ಣಾಟಕ ಸಾಹಿತ್ಯ ಪರಿಷತ್ತಿನವಿಷಯ
The affairs of the Karnataka Sahitya Parishat 193 - 197

ಗ್ರಂಥ ವಿಮರ್ಶೆ
Reviews of Books and Journals 197 - 199

ವಿವಿಧವಿಷಯ ವಿಮರ್ಶೆ
Editorial Notes. 200

ತೃತೀಯ ಸಂಚಿಕೆ

ಪರಶುರಾಮ ರಾಮಾಯಣಂ
Parasurama Ramayanam 201 - 234

ಕರ್ಣಾಟಕ ಭಾಷೆಯ ಏಳಿಗೆಯೂ ಅದರ ಏಕೀಕರಣದ ಉತ್ಕೃಷ್ಟೋಪಾಯಗಳು- ಮ|| ರಾ|| ಜೆ. ಬಲವಂತರಾಯರು
Unification of Kannada Literary Forms by
Mr. J. Balavanta Rau 234 - 261

ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂ
ಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು
ಮು॥ ರಾ॥ ಶ್ರೀನಿವಾಸ ರಾಜ ಪುರೋಹಿತರು

Unification of Kannada Literary Forms by
Mr Srinivasa Raja Purohit. 261 - 282

ಪುಸ್ತಕ ಪರಿಚಯ

Recent Marathi Literature ... 282 - 286

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಷಯ

The affairs of the Karnataka Sahitya Parishat 286 - 291

ಗ್ರಂಥ ವಿಮರ್ಶೆ

Reviews of Books and Journals 291 - 294

ಚತುರ್ಥ ಸಂಚಿಕೆ

ಚಾವುಂಡರಾಯ ಪುರಾಣಂ

Chavundaraya Purana in Kannada 295 - 326

ಕರ್ನಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳು-
ಮು॥ ರಾ॥ ಆರ್. ರಘುನಾಥರಾಯರವರು

Outlines of the History of the Kannada Language by
Mr R Raghunatha Rao B A 327 397

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಷಯ

The affairs of the Karnataka Sahitya Parishat 398 - 401

ವಿವಿಧ ವಿಷಯ ವಿಮರ್ಶೆ

Editorial Notes 402

ಶ್ರೀ.

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೨] ಪಿಂಗಳ ಸಂ|| ಚೈತ್ರ – ಏಪ್ರಿಲ್ ೧೯೧೭ [ಸಂಚಿಕೆ ೧

ನವವರ್ಷನಿವೇದನ

ನಳಸಂವತ್ಸರದ ಪರಿಷತ್ಪತ್ರಿಕೆಯ ಸಂಪುಟವು ನಿರ್ವಿಘ್ನವಾಗಿ ನಡೆದುದಕ್ಕೆ ಸಂತೋಷಪಡಬೇಕಾಗಿದೆ ಈ ಸಂಪುಟದಲ್ಲಿರುವ ೪೦೨ ಪುಟಗಳನ್ನು ಪರಿಶೀಲಿಸುವಲ್ಲಿ ಪರಿಷತ್ಪತ್ರಿಕೆಯ ಸಂಪಾದಕಮಂಡಲಿಯ ಐದು ಲೇಖನಗಳು, ಕನ್ನಡ ಪಂಡಿತರುಗಳು ಬರೆದ ೧೭ ಲೇಖನಗಳು ಕಾಣಬರುವುವು ಇವುಗಳ ಜತೆಗೆ ಗ್ರಂಥವಿಮರ್ಶೆ, ಮಾಸ ಪತ್ರಿಕೆಯ ವಿಮರ್ಶೆ, ವಿವಿಧ ವಿಷಯ ವಿಮರ್ಶೆ ಮುಂತಾದುವು ಇರುವುವು ಕನ್ನಡ ಪಂಡಿತರುಗಳು ೧೨ ಮಂದಿ ಉತ್ತಮ ತರಗತಿಗೆ ಸೇರುವ ಲೇಖನಗಳನ್ನು ಬರೆದುದಕ್ಕಾಗಿ ಸಂತೋಷಪಡಬೇಕಾಗಿದೆ ಅವರು ಆರಾರೆಂದರೆ —

ಬೆಂಗಳೂರಿನ ರಾಜಮಂತ್ರಪ್ರವೀಣ. ಎಚ್ ವಿ. ನಂಜುಂಡಯ್ಯನವರು
ಎಂ ಎ, ಎಂ ಎಲ್, ಸಿ ಐ ಇ ೧
ಸಂಪಾದಕಮಂಡಲಿ ೫
ಬೊಂಬಾಯಿಯ ಮ|| ರಾ|| ಆರ್ ಎ ಜಹಗೀರುದಾರ್, ಎಂ ಎ, ಎಲ್ ಎಲ್ ಬಿ ೧
,, ಮ|| ರಾ|| ಎಜ್ ಜಿ. ಕರುಗುದರಿ, ಬಿ ಎ, ಎಲ್ ಎಲ್ ಬಿ ೧
ಮದ್ರಾಸಿನ ಮ|| ರಾ|| ಸಿದ್ಧಾಂತ ಶಿವಶಂಕರಶಾಸ್ತ್ರಿಗಳು ೧
,, ಮ|| ರಾ|| ಆರ್ ತಾತ, ಎಂ. ಎ, ಎಲ್ ಟಿ ಯವರು ೧
ಧಾರವಾಡದ ಮ|| ರಾ|| ಆರ್ ಎಚ್ ದೇಶಪಾಂಡೆಯವರು ಎಮ್. ಎ. ೧
ಬೆಂಗಳೂರಿನ ಪಂಡಿತ ಸರಳಕವಿಸೂರಿ ಕೆ. ರಾಜಗೋಪಾಲ ಚಕ್ರವರ್ತಿಗಳು ೩
,, ಮ|| ರಾ|| ಆರ್ ರಘುನಾಥರಾಯರು ಬಿ ಎ ೪
ಬೊಂಬಾಯಿ ಬಂದರದಲ್ಲಿರುವ ಮ|| ರಾ|| ಎಚ್ ನಾರಾಯಣರಾವ್
ಬಿ. ಎ, ಬಿ ಎಸ್ ೧
,, ಮ|| ರಾ|| ಎಸ್ ಬಿ ಪರಿಷ್ವಾದ್ ೧
ಬೆಂಗಳೂರು ಸೆಂಟ್ರಲ್ ಕಾಲೇಜಿನ ತೆಲುಗು ಪಂಡಿತರು
ನೆಲ್ಲೂರು ಶ್ರೀನಿವಾಸಾಚಾರ್ಯರು ೧
ಮೈಸೂರಿನಲ್ಲಿರುವ ಪಂಡಿತ, ಕೆ. ವರದಾಚಾರ್ಯರು ೧
೨೨

ಪ್ರಥಮ ಸಂಪುಟದ ಲೇಖನಗಳಲ್ಲಿ "ಕರ್ಣಾಟಕ ವಿದ್ವನ್ಮಂಡಲಿಯ ಸ್ನೇಹಾಭಿವೃದ್ಧಿ," "ಗ್ರಾಂಥಿಕ ಪ್ರಯೋಗಗಳ ಏಕೀಕರಣ," "ಸದುದ್ದೇಶಪಂಚಕ," "ಕನ್ನಡ ನುಡಿಯು ಬೆಳೆವಣಿಗೆಗೆ ಇರುವ ತೊಂದರೆಗಳ ನಿವಾರಣೆ" ಎಂಬುವು ಬೇರೆ ಬೇರೆ ಕನ್ನಡ ನಾಡುಗಳಲ್ಲಿರುವ ಪದ ಪ್ರಯೋಗ ಮಾರ್ಗಗಳನ್ನು ತೋರಿಸುತ್ತವೆ. ಮೊದಲನೆಯದು ಮುಂಬಯಿ ಪ್ರಾಂತದ, ಎರಡನೆಯದು ಮೈಸೂರು ಪ್ರಾಂತದ, ಮೂರನೆಯದು ತೆಲುಗುಮಾರ್ಗದ, ನಾಲ್ಕನೆಯದು ಧಾರವಾಡದ ಪ್ರಾಂತದ, ಪ್ರಯೋಗವನ್ನು ತೋರಿಸುವುದು. ಧಾರವಾಡದ ಉಪಸಂಘದವರದಿ, ಮೈಸೂರು ಉಪಸಂಘದವರದಿ ಎಂಬ ಲೇಖನಗಳು ಗ್ರಾಂಥಿಕ ಪ್ರಯೋಗಗಳ ಏಕೀಕರಣ ವಿಷಯದಲ್ಲಿ ಬಹು ಮುಖ್ಯಗಳಾಗಿವೆ. ಇಂತಹ ಪ್ರಯತ್ನವನ್ನು ಪೂರ್ವದಲ್ಲಿ ಯಾವ ಕರ್ಣಾಟಕ ಸಭೆಯೂ ಮಾಡಲಿಲ್ಲ. ದಂಡಿಯ ಕಾಲ, ಕರ್ಣಾಟಕ ವರ್ಣಮಾಲೆಯು ಚಾರಿತ್ರ್ಯಾದಿ ವಿಚಾರ, ಕರ್ಣಾಟಕ ಧಾತುಗಳು, ಬೌದ್ಧಸಾಹಿತ್ಯ, ಕನ್ನಡ ದಕ್ಷಿಣೋತ್ತರ ಮಾರ್ಗಗಳ ವಿಚಾರ, ಅಂಧ್ರಾರ್ಧಾನುಸ್ವಾರ ತತ್ತ್ವ ಎಂಬ ಆರು ಲೇಖನಗಳು ಅಸಾಧಾರಣಶೋಧನಾಚಾತುರ್ಯವನ್ನು ಪ್ರದರ್ಶಿಸುವುವು. ಈ ಆರರಲ್ಲಿ ಕರ್ಣಾಟಕ ವರ್ಣಮಾಲೆಯು ಚಾರಿತ್ರ್ಯಾದಿ ವಿಚಾರ, ಕನ್ನಡ ದಕ್ಷಿಣೋತ್ತರ ಮಾರ್ಗಗಳು ಎಂಬುವು ಕನ್ನಡಭಾಷೆಯ ಚರಿತ್ರೆಯನ್ನು ಬರೆಯುವುದಕ್ಕೆ ಮಾರ್ಗದರ್ಶಿಗಳಾಗಿರುತ್ತವೆ. ದಕ್ಷಿಣೋತ್ತರ ಮಾರ್ಗಗಳ ವಿಚಾರವೆಂಬ ಲೇಖನವು ಸುಮಾರು ಅರ್ಧಶತಮಾನದಿಂದಲೂ ವಾಡಿಕೆಗೆ ಬಂದಿರುವ ಹಳಗನ್ನಡ ಹೊಸಗನ್ನಡ ಶಬ್ದಗಳ ಅಪಾರ್ಥದ ವಿಷಯವನ್ನು ಚರ್ಚಿಸಿ ಸಿದ್ಧಾಂತ ಮಾಡಲು ಯತ್ನಿಸಿರುತ್ತದೆ. ಅಂಧ್ರಾರ್ಧಾನುಸ್ವಾರ ತತ್ತ್ವ ಎಂಬುದು ಕನ್ನಡದಲ್ಲಿ ಅನುನಾಸಿಕೋಚ್ಚಾರಣೆಯನ್ನು ತೋರಿಸುವ ಒಂದು ಚಿಹ್ನೆಯ ಅವಶ್ಯಕತೆಯನ್ನು ತೋರಿಸುತ್ತದೆ. ಪರಿಷತ್ಪತ್ರಿಕೆಯನ್ನು ಉನ್ನತಪದವಿಯ ತ್ರೈಮಾಸಿಕ ಪತ್ರಿಕೆಗಳ ವರ್ಗದಲ್ಲಿಯೇ ಇಟ್ಟುಕೊಂಡು ಬರುವುದಕ್ಕೆ ಮಾಡಿದ ಪ್ರಯತ್ನವು ನಿಷ್ಫಲವಾಯಿತೆಂದು ಹೇಳುವುದಕ್ಕೆ ಆಸ್ಪದವಿಲ್ಲವೆಂದು ಹೇಳಬಹುದಾಗಿದೆ.

"ಭಾಷಾ ಸಾಹಿತ್ಯಗಳ ಅಪೂರ್ವಶೋಧನಕಾರ್ಯದಲ್ಲಿ ಯಥೋಚಿತವಾದ ಅನುಕೂಲ್ಯಗಳನ್ನುಂಟುಮಾಡುವುದಕ್ಕೆ ಈ ಪತ್ರಿಕೆಯು ಸರ್ವಕಾಲದಲ್ಲಿಯೂ ಪ್ರಯತ್ನಿಸುವುದು" ಎಂದು ಪರಿಷತ್ಪತ್ರಿಕೆಯ ಪ್ರಥಮ ಸಂಪುಟದ ಪ್ರಥಮ ಸಂಚಿಕೆಯಲ್ಲಿ ಹೇಳಿರುವಂತೆ ಈಗಲೂ ಶ್ರುತಪಡಿಸುತ್ತೇವೆ. ಪ್ರಥಮ ಸಂಪುಟವು ನಿರ್ವಿಘ್ನವಾಗಿ ನಡೆದುಕೊಂಡು ಬರುವುದಕ್ಕೆ ಸಹಾಯಮಾಡಿದಂತೆಯೇ ವಿದ್ವಾಂಸರುಗಳು ದ್ವಿತೀಯ ಸಂಪುಟಕ್ಕೂ ಸಹಾಯಮಾಡುವರೆಂದು ದೃಢವಾಗಿ ನಂಬಿರುತ್ತೇವೆ. "ಕನ್ನಡ ನಾಡಿನ ನಾನಾಪ್ರಾಂತಗಳಲ್ಲಿರುವ ವಿಚಾರವಿಚಕ್ಷಣರಾದ ವಿದ್ವಾಂಸರು ಮಾತೃಭಾಷೆಯ ಸೇವೆಯಲ್ಲಿ ನಿರತರಾಗಿ ಈ ಪರಿಷತ್ತಿನ ಮಹಾಕಾರ್ಯನಿರ್ವಾಹದಲ್ಲಿ ಒಮ್ಮನದಿಂದ ಸಹಕರಿಸುತ್ತ ಬರಬೇಕು" ಎಂದು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯವರು ನಳಸಂವತ್ಸರದ ಆದಿಯಲ್ಲಿ ಬಿನ್ನವಿಸಿದಂತೆಯೇ ಈಗಲೂ ಬಿನ್ನವಿಸುತ್ತಿರುವರು.

ಅಶೋಕಮಹಾರಾಜನ ಶಾಸನಗಳು

ಉಪೋದ್ಘಾತ.

ಭರತಖಂಡದಲ್ಲಿ ಬಹುಕಾಲದವರೆಗೂ ಅಶೋಕ ಮಹಾರಾಜನ ಶಾಸನಗಳು ಯಾವ ದೇಶಭಾಷೆಯಲ್ಲಿಯೂ ಪರಿವರ್ತಿತವಾಗಲಿಲ್ಲ. ಆದರೆ ಈಚೆಗೆ ವಂಗದೇಶದಲ್ಲಿ ಪ್ರಖ್ಯಾತರಾದ ಚಾರುಚಂದ್ರವಸು, ಲಲಿತಮೋಹನಕರ್ ಎಂಬ ಮಹನೀಯರುಗಳು ಬಹು ಪ್ರಯಾಸದಿಂದ ಆ ಶಾಸನಗಳೆಲ್ಲವನ್ನೂ ಸಂಗ್ರಹಿಸಿ, ವಂಗಭಾಷೆಯಲ್ಲಿ ಪರಿವರ್ತಿಸಿ ಪ್ರಕಟಿಸಿದರು. ಅವರನ್ನು ಬಿಟ್ಟರೆ ಮತ್ತಾರೂ ದೇಶಭಾಷೆಯಲ್ಲಿ ಅವುಗಳನ್ನು ಬರೆಯಲು ಮುಂಬರಿದಿರುವಂತೆ ತೋರುವುದಿಲ್ಲ. ಅದುಕಾರಣ ಪ್ರಕೃತ ನಾವು ನಮ್ಮ ಕರ್ಣಾಟಕ ಭಾಷಾಭಿಮಾನಿಗಳ ಕಣ್ಮುಂದೆ ಅವನ್ನು ತಂದಿಡಲು ಮುಂದಾಗಿರುವೆವು.

ಪ್ರಕೃತ ಭರತಖಂಡದಲ್ಲಿ ಎಲ್ಲೆಲ್ಲಿ ನೋಡಿದರೂ ಐತಿಹಾಸಿಕ ವಿಷಯಗಳನ್ನು ತಿಳಿಯಲು ಬಹು ಬಹು ಜನರು ತತ್ವಾನ್ವೇಷಣತತ್ಪರರಾಗಿರುವರು. ಐತಿಹಾಸಿಕ ಸಮಾಲೋಚನಾ ಕ್ಷೇತ್ರದಲ್ಲಿ ಪ್ರಕೃತ ಒಂದು ನವಯುಗವೇ ಜನಿಸಿರುವುದೆಂಬುದು ಅತಿಶಯೋಕ್ತಿಯಲ್ಲ. ಇತಿಹಾಸದ ತತ್ವಗಳನ್ನು ಎಲ್ಲರ ಮುಂದೆ ತಂದಿಡಲು ಅನೇಕರು ಹಗಲೂ ಇರುಳೂ ಕರ್ಮಕ್ಷೇತ್ರದಲ್ಲಿ ಕೃಷಿಮಾಡುತ್ತಿರುವರು. ಇವರ ಚಿರಕಾಲದ ಸ್ಥಿರ ಸಾಧನೆಯಿಂದ ಐತಿಹಾಸಿಕ ಜ್ಞಾನ ರಾಜ್ಯದಲ್ಲಿ ನೂತನ ನೂತನ ತತ್ವಗಳು ಪ್ರತಿದಿನವೂ ಹೊರಹೊರಡುತ್ತಿರುವುವು. ಈ ವಿಧವಾದ ಅಭಿನಿವೇಶವು ಬಹಳ ಹಿಂದಿನ ಕಾಲದಲ್ಲಿಯೇ ಚೀನಾ, ಗ್ರೀಸ್, ಈಜಿಪ್ಟ್ ಮುಂತಾದ ದೇಶಗಳಲ್ಲಿ ಅಂಕುರಿಸಿ ಗಿಡವಾಗಿ ಫಲಿಸಿರುವುದು.

ನಾವು ಭರತಖಂಡದ ಪ್ರಾಚೀನೇತಿಹಾಸವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಹಿಂದೆ ಹೇಳಿದ ದೇಶಗಳ ಇತಿಹಾಸವನ್ನು ಕೊಂಚಮಟ್ಟಿಗೆ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿರುವುದು. ಅದರಿಂದ ನಮ್ಮ ಭರತಖಂಡದ ಇತಿಹಾಸವನ್ನು ಹೋಲಿಸಿ ಚೆನ್ನಾಗಿ ತಿಳಿಯಬಹುದು. ಈ ವಿಧವಾಗಿ ತಿಳಿಯುವುದನ್ನು ಐತಿಹಾಸಿಕರು ಸಾದೃಶ್ಯಪೂರ್ವಕ ಸಮಾಲೋಚನೆ (Comparative Study of History) ಎಂದು ಹೇಳುವರು.

ಐತಿಹಾಸಿಕ ತತ್ವಸಂಗ್ರಹಕ್ಕೆ ಪ್ರವೃತ್ತರಾದವರ ಮಾರ್ಗಗಳು ಅನೇಕ ವಿಧಗಳಾಗಿರುವುವು. ಅವುಗಳಲ್ಲಿ— "(1) ವಿದೇಶೀಯ ಐತಿಹಾಸಿಕರೂ, ದೇಶಸಂಚಾರಿಗಳೂ ಬರೆದಿಟ್ಟಿರುವ ಇತಿವೃತ್ತ; (2) ಶಿಲಾ ತಾಮ್ರ ಶಾಸನ ಮುಂತಾದುವುಗಳ ಲಿಪಿಗಳು, ಮತ್ತು ಲೋಹದ ಹಲಗೆಗಳ ಮೇಲೂ ಇನ್ನೂ ಇತರ ವಿಧವಾದ ಆಧಾರಗಳ ಮೇಲೆಯೂ ಕೆತ್ತಿಸಿರುವ ಲಿಪಿಗಳು; (3) ಗಾದೆ, ಕಥೆ, ವೃದ್ಧಪರಂಪರಾಗತ ವೃತ್ತಾಂತ

ಗಳು—ಇವು ಮುಖ್ಯಮಾರ್ಗಗಳೆಂದು ಭಾವಿಸಬಹುದು ಇವುಗಳಲ್ಲಿಯೂ ಶಾಸನಗಳೇ ಸರ್ವಾಪೇಕ್ಷೆಯಾ ಪ್ರಾಮಾಣಿಕಗಳೂ ಮುಖ್ಯಗಳೂ ಎಂದು ಭಾವಿಸಲ್ಪಟ್ಟಿರುವುವು. ಇವುಗಳಿಂದ ಅನೇಕ ಪ್ರಾಚೀನ ತತ್ವಗಳು ವ್ಯಕ್ತಗಳಾಗುವುವು. ಇದರಿಂದ ಅತೀತ ಕಾಲದಲ್ಲಿದ್ದ ಭಾಷೆ, ಲೇಖನಪ್ರಣಾಳಿ, ಲಿಪಿವಿದ್ಯೆಯ ಕ್ರಮೋನ್ನತಿ, ಸಮಾಜ, ಧರ್ಮ, ರಾಜಕೀಯ ನೈತಿಕ ಮುಂತಾದ ವಿಷಯಗಳು ಸ್ಪಷ್ಟವಾಗಿ ಗೋಚರವಾಗುವುವು. ಪ್ರಕೃತ ಅನೇಕ ವರ್ಷಗಳ ಹಿಂದೆ ನಮ್ಮ ಹಿಂದೂ ಸಮಾಜದಲ್ಲಿ ಸಾಮ್ರಾಜ್ಯಪದವಿಯನ್ನು ಹತ್ತಿ ಜಗದ್ವಿದಿತನಾಗಿದ್ದ ಅಶೋಕಚಕ್ರವರ್ತಿಯ ಶಾಸನಗಳನ್ನು ನಾವು ಪರಿಶೀಲಿಸುವುದಾದರೆ ಇವೆಲ್ಲವೂ ನಮಗೆ ಗೋಚರವಾಗುವುವು ಪ್ರಾಚೀನ ಭರತಖಂಡದಲ್ಲಿ ಎಲ್ಲರಿಗಿಂತಲೂ ಮೊದಲು ಅಶೋಕನೇ ಶಿಲಾಲಿಪಿಗೆ ಪ್ರವರ್ತಕನಾಗಿದ್ದನು.

ಪರ್ವತಾಗ್ರದಲ್ಲಿಯೂ ಶಿಲಾಫಲಕಗಳಮೇಲೂ ಶಾಸನಗಳನ್ನು ಕೆತ್ತಿಡುವುದು ಪ್ರಾಚೀನರಾದ ರಾಜರುಗಳಲ್ಲಿಯೂ ಧರ್ಮಯಾಜಕರುಗಳಲ್ಲಿಯೂ ವರ್ತಕರ ಮಂಡಲಿಯಲ್ಲಿಯೂ ಇದ್ದಿತು ಈಜಿಪ್ಟ್, ಅಸ್ಸಿರಿಯಾ, ಬಾಬಿಲಾನ್, ಪರ್ಷಿಯ ಮುಂತಾದ ದೇಶದ ರಾಜರುಗಳ ಇತಿಹಾಸಗಳನ್ನು ಪರ್ಯಾಲೋಚಿಸಿದರೆ ಈ ವಿಷಯವು ಚೆನ್ನಾಗಿ ಗೊತ್ತಾಗುವುದು ಪ್ರಾಚೀನತಮಕಾಲದಿಂದಲೂ ಸಭ್ಯದೇಶಗಳಲ್ಲಿ ಮಾತ್ರ ರಾಜರುಗಳು ರಾಜಕೀಯ ಶಾಸನಗಳನ್ನೂ, ಧರ್ಮಾನುಶಾಸನಗಳನ್ನೂ, ರಾಜರ ಕೀರ್ತಿವಿವರವನ್ನೂ ಎಲ್ಲರಿಗೂ ತಿಳಿಸುವುದಕ್ಕಾಗಿಯೂ ಚಿರಸ್ಥಾಯಿಗಳಾಗುವಂತೆ ಮಾಡುವುದಕ್ಕಾಗಿಯೂ ಶಿಲಾಖಂಡಗಳ ಮೇಲೂ ಲೋಹಫಲಕಗಳ ಮೇಲೂ ಬರೆದು ಎಲ್ಲರೂ ಸೇರುವ ಸ್ಥಾನಗಳಲ್ಲಿ ಇಡುತ್ತಿದ್ದರು

ಈಜಿಪ್ಟ್ ದೇಶದಲ್ಲಿ ರಾಜಗಣವೂ, ಧರ್ಮಯಾಜಕ ಗಣವೂ ನಿರ್ಮಿಸಿರುವ ದೇವಮಂದಿರದ ಗೋಡೆಯ ಮೇಲೆಯೂ, ಉಕ್ಕಿನ (Steel) ಹಲಗೆಯ ಮೇಲೆಯೂ, ಚತುಷ್ಕೋಣರೂಪವಾಗಿ ತುದಿಯಕಡೆಗೆ ಸಣ್ಣದಾಗಿರುವ ಉಕ್ಕಿನ ಕಂಭದಮೇಲೆಯೂ (Obelisk), ಚಿತ್ರಲಿಪಿಯಿಂದ (Hieroglyphic character) ತೋರಿಸಿರುವ ಲೇಖನಗಳು ಕಾಣಬರುವುವು ಬಾಬಿಲೋನಿಯ, ಅಸ್ಸಿರಿಯಾ, ಪರ್ಷಿಯ ಮುಂತಾದ ದೇಶಗಳ ಪ್ರಾಚೀನ ರಾಜರುಗಳ ಬಾಣಮುಖ (Cuneiform) ಲಿಪಿ ಯಿಂದ ಲಿಖಿತವಾದ ಶಾಸನವನ್ನೂ ನೋಡಬಹುದು ಹಿಬ್ರ್ಯೂ (Hebrew) ಜನರ ಪ್ರಾಚೀನ ಪುರಾಣದಲ್ಲಿ ಯಾತ್ರಾಖಂಡವನ್ನು (Exodus) ಓದಿದರೆ ಅವರ ಉಪಾಸ್ಯದೇವತೆಯಾದ ಜಿಹೋವಾ (Jehovah) ಎಂಬುವನ ಆಜ್ಞಾನುಸಾರ ಕೆಲವು ಕಂಬಗಳು ನೆಡಿಸಿದ್ದಂತೆ ಗೋಚರವಾಗುವುವು ಸುಮಾರು ಕ್ರಿ ಪೂ. ೮೯೦ ರಲ್ಲಿದ್ದ ಪಾಲಿಸ್ಟೈನಿಗೆ ಸೇರಿದ ಮೋವಾಬ್ ಪ್ರದೇಶದ ದೊರೆಯಾಗಿದ್ದ ಮೋಷೆಸ್ (Moses) ಎಂಬುವನಿಂದ ಹಿಬ್ರು ಭಾಷೆಯಲ್ಲಿ ಕೆತ್ತಿಸಿದ ಒಂದು ಶಾಸನವನ್ನೂ ನೋಡಬಹುದು. ಚರಿತ್ರೆಯಲ್ಲಿ ಕೂಡ ಇದಕ್ಕೆ ನೋಆಬ್ ಎಂಬ ಹೆಸರಿನಿಂದ ಪ್ರಸಿದ್ಧಿಯಿರುವುದು. ಈ ಶಾಸನದ ಲಿಪಿಯು ಫಿನಿಕ್ ಅಥವಾ ಫೇನಿಶಿಯಾ ವರ್ಣಮಾಲೆಗೆ ಪ್ರಾಚೀನತಮವಾದ ನಿದರ್ಶನವಾಗಿರುವುದು.

ರೋಮಕ ನಗರದ ಚರಿತ್ರವನ್ನು ಓದುವುದಾದರೆ ದಶವೀರ(Decemviri)ರೆಂಬ ಹೆಸರುಳ್ಳ ಶಾಸಕವರ್ಗವು ರೋಮಕರ ವ್ಯಾವಹಾರಿಕ ನಿಯಮಗಳು ಸಾಧಾರಣ ಜನರಲ್ಲಿಯೂ ಪ್ರಚಾರಕ್ಕೆ ಬರುವಂತೆ ಮಾಡಲು ಹನ್ನೆರಡು ಹಿತ್ತಾಳೆಯ ಹಲಗೆಗಳಲ್ಲಿ ಶಾಸನಗಳನ್ನು ಕೆತ್ತಿಸಿ ಕ್ರಿ. ಪೂ. ಸುಮಾರು ೪೫೦ ರಲ್ಲಿ ಬಹಿರಂಗವಾದ ಸ್ಥಾನದಲ್ಲಿ ಇರಿಸಿದರು ಈ ಹನ್ನೆರಡು ಹಲಗೆಗಳಿಗೆ ಸಾಂಸ್ಥಾನಿಕ ದ್ವಾದಶ ಫಲಕಗಳೆಂಬ (Leges Duodecim Tabularum) ಹೆಸರಿರುವುದು. ಈ ವಿಧವಾದ ಐತಿಹಾಸಿಕ ತತ್ವಗಳನ್ನು ಪರ್ಯಾಲೋಚಿಸಿದರೆ ಬಹಳ ಹಿಂದಿನಕಾಲದಿಂದಲೂ ಶಿಲಾಸ್ತಂಭ ಮುಂತಾದುವುಗಳಲ್ಲಿ ಶಾಸನಗಳನ್ನು ಬರೆಯಿಸಿಡುವ ಪದ್ಧತಿಯು ತಿಳಿದಿತ್ತೆಂದು ಗೋಚರವಾಗುವುದು. ಆದರೆ ಭರತಖಂಡದಲ್ಲಿ ಮಾತ್ರ ಮೊತ್ತಮೊದಲು ಇದನ್ನು ತಂದವನು ಮೌರ್ಯವಂಶದ ದೊರೆಯಾದ ಅಶೋಕಮಹಾರಾಜನೆಂದೇ ಹೇಳಬೇಕಾಗಿರುವುದು ಅದಕ್ಕೆ ಹಿಂದೆ ಇದ್ದ ಯಾವ ದೊರೆಯೂ ಈ ವಿಧವಾದ ಶಾಸನ ಪ್ರಣಾಳಿಯನ್ನು ತೋರಿಸಿದ್ದನೆಂಬುದು ಇದುವರೆಗೂ ಯಾರಿಗೂ ಗೋಚರವಾಗಿಲ್ಲ ಇದರಿಂದ ಅಶೋಕನ ಸಾಮ್ರಾಜ್ಯವು ಬಹಳದೂರ ವ್ಯಾಪಿಸಿತ್ತೆಂಬುದಾಗಿಯೂ, ಈಜಿಪ್ಟು, ಅಸ್ಸಿರಿಯಾ, ಎಪೈರಸ್, ಮೆಸೊಪೊಟೇಮಿಯ ಮುಂತಾದ ದೇಶಗಳಿಗೆ ತನ್ನ ಧರ್ಮಯಾಜಕರನ್ನು ಕಳುಹಿಸಿ ಅನೇಕ ಸಂಗತಿಗಳನ್ನು ತಿಳಿದಿದ್ದನೆಂದು ಗೊತ್ತಾಗುವುದು ಅಲ್ಲದೆ ಯೂರೋಪು ಮತ್ತು ಏಷ್ಯಾಖಂಡಗಳಲ್ಲಿದ್ದ ಛತ್ರಪತಿಗಳ ಮನೋಭಾವಗಳನ್ನೂ ಕಾರ್ಯಪ್ರಣಾಳಿಗಳನ್ನೂ ತಿಳಿದುಕೊಳ್ಳುತಿದ್ದನೆಂಬುದು ವ್ಯಕ್ತವಾಗುವುದು

ಮೌರ್ಯಯುಗದಲ್ಲಿದ್ದ ಪಾರಸೀಕರ ಪ್ರಭಾವ.

ಗ್ರೀಕ್ ಹಖೈಮಿನಿಸ್ (Achaimenes) ವಂಶದ ದೊರೆಯಾದ ಹಿಸ್ತಾಸ್ಪ ವಂಶದ ದಾರೆಯುಸ್ (Dareios Hystaspides) ಎಂಬುವನ ರಾಜ್ಯಭಾರ ಕಾಲವು ಕ್ರಿ ಪೂ. ೫೨೨–೪೮೫ ವರೆಗೆ ಇದ್ದಿತು ಪ್ರಸಿದ್ಧನಾದ ಗ್ರೀಸ್ ಐತಿಹಾಸಿಕನಾದ ಹೆರೋಡೋತಸ್ (Herodotos) ಎಂಬುವನಿಂದ ರಚಿತವಾದ ಗ್ರಂಥದಿಂದ ತಿಳಿಯಬರುವುದಾವುದೆಂದರೆ—ಗ್ರೀಕ್ ಸೇನಾನಾಯಕನಾದ ಸ್ಕಿಲಾಕ್ಸ್ (Skylax) ಎಂಬುವನ ಸಹಾಯದಿಂದ ದಾರಯುಸ್ ಎಂಬುವನು ಸುಮಾರು ಕ್ರಿ. ಪೂ. ೫೦೦ರಲ್ಲಿ ಭರತಖಂಡದ ಉತ್ತರ ಪಶ್ಚಿಮ ಪ್ರಾಂತದಲ್ಲಿ ಎಂದರೆ ಗಾಂಧಾರದೇಶದಲ್ಲಿಯೂ ಪಶ್ಚಿಮೋತ್ತರ ಎಂದರೆ ಪಂಜಾಬಿನಲ್ಲಿಯೂ ಅಧಿಕಾರವನ್ನು ವಹಿಸಿದ್ದನು ಅಲ್ಲಿ ಆತನ ಅನೇಕ ಶಾಸನಗಳು ದೊರೆವುವು ಈ ಶಾಸನಗಳು ಬಾಣಮುಖಾಕ್ಷರದಿಂದ ಕೆತ್ತಲ್ಪಟ್ಟಿರುವುವು ಇವುಗಳು, ಪಾರಸೀಕ, ಸೂಸಾನ್, ಮತ್ತು ಶೇಮೀಯ ಎಂಬ ಮೂರು ಭಾಷೆಗಳಲ್ಲಿವೆ. ದಾರೆಯುಸ್ಸಿನ ಶೈಲಶಾಸನವು ಕ್ರಿ. ಪೂ. ೫೧೭ ರಲ್ಲಿ ಕೆತ್ತಲ್ಪಟ್ಟಿತು. ಅದರಲ್ಲಿ ರಾಜದ್ರೋಹಿಗಳನ್ನು ಅಡಗಿಸಿ ರಾಜ್ಯವನ್ನು ಹೊಂದಿದ ಕಥೆಯು ವರ್ಣಿತವಾಗಿರುವುದು. ಅದರಲ್ಲಿ ಭರತಖಂಡದ ಹೆಸರೇ ಇಲ್ಲ.

ಸುಮಾರು ಕ್ರಿ. ಪೂ. ೪೮೬ ರಲ್ಲಿ ನಕ್ಷ್-ಈ-ರುಸ್ತುಂ ಎಂಬ ಗಿರಿಯಲ್ಲಿ ದಾರಯಸ್ಸಿನ ಮತ್ತು ಅವನಿಂದೀಚೆಗೆ ಇದ್ದ ಮೂರುಜನ ಸಮ್ರಾಟರ ಸಮಾಧಿಗಳಿರುವುವು. ಅಲ್ಲಿರುವ ಶಾಸನಗಳಲ್ಲಿ ಪಾರಸೀಕ ಸಾಮ್ರಾಜ್ಯದ ಅಧೀನದಲ್ಲಿದ್ದ ದೇಶಸಮೂಹದ ಪಟ್ಟಿಯಲ್ಲಿ ಭಾರತವರ್ಷದ ಹೆಸರೂ ಸೇರಿದೆ. ಹಿಂದೂ ಮತ್ತು ಪಾರಸೀಕ ಈ ಎರಡು ಜಾತಿಯು ಆರ್ಯ ಜಾತಿಯ ಶಾಖೆಯಾಗಿರುವುದು ಮಾತ್ರವೇ ಅಲ್ಲದೆ ಧರ್ಮವಿಶ್ವಾಸದಲ್ಲಿಯೂ ಭಾಷೆಯಲ್ಲಿಯೂ ಒಂದೇ ವಿಧವಾಗಿದ್ದಿತೆಂಬುದು ಚರಿತ್ರಾಭಿಜ್ಞರಿಗೆ ತಿಳಿದ ವಿಷಯವಾಗಿರುವುದು. ಕೆಲವು ಐತಿಹಾಸಿಕರು ಅಶೋಕಮಹಾರಾಜನ ಉಕ್ಕಿನ ಕಂಭಗಳನ್ನೂ ಅವುಗಳ ತುದಿಯಲ್ಲಿರುವ ಅನೇಕ ಚಿತ್ರಕಾರ್ಯಗಳಿಂದ ಕಂಗೊಳಿಸುವ ನಾನಾವಿಧವಾದ ಆಕೃತಿಗಳನ್ನೂ ಉದಾಹರಣೆಗಳನ್ನಾಗಿಟ್ಟುಕೊಂಡು ಅದರಿಂದ ಅಶೋಕಮಹಾರಾಜನ ಕಾಲದಲ್ಲಿ ಶಿಲ್ಪವು ಉತ್ತಮಸ್ಥಿತಿಯಲ್ಲಿದ್ದಿತೆಂದು ಗೊತ್ತುಮಾಡಿರುವರು.

ಭರತಖಂಡದಲ್ಲಿ ಪ್ರಾಚೀನತಮ ರಾಜಶಾಸನವೆಂದು ಕಾಣಬರುವ ಅಶೋಕಮಹಾರಾಜನ ಶಾಸನಗಳ ಭಾಷೆ ಮತ್ತು ರಚನಾಪ್ರಣಾಳಿಗಳೊಡನೆ ಪಾರಸೀಕ ಶಾಸನಗಳು ಬಹಳವಾಗಿ ಹೋಲಿಕೆಯನ್ನು ಹೊಂದಿರುವುವು. ಹೇಗೆಂದರೆ — ಅಶೋಕನ ಶಾಸನದಲ್ಲಿ 'ದಿಪಿ' (ಲಿಪಿ) ''ನಿಪಿಸ್ತ'' (ಲಿಖಿತ) ಮುಂತಾದ ಸಮಾನಾರ್ಥವುಳ್ಳ ಪದಗಳು ಪಾರಸೀಕ ಶಾಸನಗಳಲ್ಲಿಯೂ ವಿಶೇಷವಾಗಿ ದೊರೆವುವು. ಪಾರಸೀಕ ಸಮ್ರಾಟುಗಳು ಆಗಿನ ಕಾಲಕ್ಕೆ ಪ್ರಪಂಚಕ್ಕೆಲ್ಲ ಪರಾಕ್ರಮದಲ್ಲಿಯೂ ಸಂಪತ್ತಿನಲ್ಲಿಯೂ ಶಿಖರಪ್ರಾಯರಾಗಿದ್ದರು. ಅವರ ಅತ್ಯದ್ಭುತಗಳಾದ ಮತ್ತು ಉಪದೇಶಗರ್ಭಿತಗಳಾದ ಶಾಸನಗಳನ್ನು ಅಶೋಕನ ಶಾಸನಗಳು ಹೋಲುತ್ತಿರುವುವು. ದೃಷ್ಟಾಂತರೂಪವಾಗಿ ಇಲ್ಲಿ ಪಾರಸೀಕ ಶಾಸನದಿಂದ ಒಂದೆರಡು ನಿದರ್ಶನಗಳನ್ನು ಕೊಡುವೆವು.

ಪಾರ್ಸಿ ಪೋಲಿಸ್ ಎಂಬ ಪಟ್ಟಣದಲ್ಲಿರುವ ಒಂದು ಕಲ್ಲಿನ ಗೋಡೆಯಮೇಲೆ ಬರೆದಿರುವ ಶಾಸನ —

ಪಾರಸೀಕ	ಸಂಸ್ಕೃತ
ಥಾತೀ ದಾರಯಬೂಸ್ ಖ್ಷಾ ಯಥಿಯಃ ಇಮ ತ್ಯ ಮನಾ ಕರ್ತಮ್ ಪಶಾಚ್	ಶಂಸತಿ ದಾರಯಃ ಕ್ಷಯಃ (ರಾಜಾ) ಇದಂ (ಅಸ್ತಿ) ಯತ್ ಮಮ ಕೃತಂ ಪಶ್ಚಾತ್
ಯಥಾ ಖ್ಷಾ ಯಥಿಯ ಅಬವಂ ಕಂಬೂಜಿಯ ನಾಮ ಕೂರಊಸ್	ಯಥಾ ಕ್ಷಯಃ ಅಭವಂ ಕಂಬೋಜಿಯೋ ನಾಮ ಕೂರೋಃ
ಪೂತ್ರ ಅಮಾಖಂ ತ ಉಮಯಾ, ಹಲು ಪರುಬಂ ಇದಾ ಖ್ಷಾಯಥಿಯ	ಪುತ್ರಃ ಅಸ್ಮಾಕಂ ತೋಕ್ಮನಃ (ವಂಶಸ್ಯ), ಸಃ ಪೂರ್ವಂ ಇಹ ಕ್ಷಯಃ

ಪಾರಸೀಕ	ಸಂಸ್ಕೃತ
ಅಹ ಅವಹ್ಯಾ ಕಂಬೂಜಿಯಹ್ಯಾ ಬ್ರಾತಾ ಬರ್ದಿಯ ನಾಮ ಅಹ ಹಮಾತಾ ಹಮಪಿತಾ	ಆಸ, ಅಸ್ಯ ಕಾಂಬೋಜಸ್ಯ ಭ್ರಾತಾ ಬರ್ದ್ಯೋ ನಾಮ ಆಸ, ಸಮಾತಾ ಸಮಪಿತಾ
ಕಂಬುಜಿಯಹ್ಯಾ, ಪಶಾವ್ ಕಂಬೂಜಿಯ ಅಬಂ ಬರ್ದಿಯಂ ಅವಾಜ ಯಧಾ	ಕಾಂಬೋಜ್ಯಸ್ಯ ಪಶ್ಚಾತ್ ಕಾಂಬೋಜ್ಯಃ ಇಮಂ ಬರ್ದ್ಯಂ ಅವಾಹನ್, ಯಧಾ
ಕಂಬೂಜಿಯ ಬರ್ದಿಯಂ ಅವಾಜ, ಕಾರಹ್ಯಾ ಅಜ್ದಾ ಅಬವತ್ಯ ಬರ್ದಿಯ ಅವಜತ	ಕಾಂಬೋಜ್ಯೋ ಬರ್ದ್ಯಂ ಅವಾಹನ್, ಕಾರಸ್ಯ (ಲೋಕಸ್ಯ) ಅದಾಧ ಅಭವತ್ ಯತ್ ಬರ್ದ್ಯಃ ಅವಹತಃ

ಮತ್ತು ಅಶೋಕ ಮಹಾರಾಜನ ಶಾಸನಗಳಲ್ಲಿ ಹೇಗೆ—“ದೇವಾನಂ ಪಿಯ ಪಿಯದಸಿ ರಾಜಾ ಏವಂ ಆಹ” ಎಂಬ ಪದಗಳು ತಿರುಗಿ ತಿರುಗಿ ಹೇಳಲ್ಪಡುವುವೋ ಹಾಗೆಯೇ ದಾರಯ ಊಸಿನ (ದಾರಯುಸ್ಸಿನ) ಶಾಸನಗಳಲ್ಲಿಯೂ—“ಥಾತೀ ದಾರಯ ಬೂಸ್ ಖ್ಷಾಯಾಥಿಯ” ಎಂದು ರಾಜನಾದ ದಾರಯ ಬೂಸ್ ಎಂಬುವನೂ ಹೇಳಿರುವನು. ಆದುದರಿಂದ ಇವರ ಇಬ್ಬರ ಶಾಸನಗಳನ್ನು ನೋಡಿದರೆ ಇವರುಗಳು ಪ್ರಜೆಗಳ ಹಿತಕ್ಕಾಗಿ ಬಹು ವಿಧವಾಗಿ ಪ್ರಯತ್ನ ಮಾಡಿರುವಂತೆ ತೋರುತ್ತದೆ. ದಾರಯುಊಸಿನ ಶಾಸನಗಳೊಡನೆ ಅಶೋಕ ಮಹಾರಾಜನ ಶಾಸನಗಳು ಅನೇಕ ಭಾಗಗಳಲ್ಲಿ ಹೋಲಿಕೆಯನ್ನು ಪಡೆದಿದ್ದರೂ ಅಶೋಕನ ಶಾಸನಗಳಲ್ಲಿ ಅತ್ಯುತ್ತಮವಾದ ನೀತಿತತ್ವಕ್ಕೆ ಮೂಲಭೂತಗಳಾದ ಸೂತ್ರಗಳು ಸರಳ ಭಾಷೆಯಿಂದ ಕಂಗೊಳಿಸುವುವು. ಇತರ ದೇಶೀಯರ ಶಾಸನಗಳಲ್ಲಿ ಕೇವಲ ತಮ್ಮ ತಮ್ಮ ಪರಾಕ್ರಮ ವರ್ಣನೆಗಳು ಮಾತ್ರ ವರ್ಣಿತಗಳಾಗಿರುವುವು. ಅಶೋಕನ ಶಾಸನಗಳಲ್ಲಿಯಾದರೋ ಐಹಿಕಾಮುಷ್ಮಿಕಗಳಿಗೆ ಸಾಧಕಗಳಾದ ಸದುಪದೇಶಗಳೇ ಅಡಗಿರುವುವು

ಅಶೋಕ ಶಾಸನದ ಲಿಪಿ.

ಅಶೋಕ ಮಹಾರಾಜನೇ ಶಿಲಾಲಿಪಿಯ ಪ್ರವರ್ತನೆಯಲ್ಲಿ ಪ್ರಥಮ ಪ್ರವರ್ತಕನೆಂಬುದು ಸರ್ವಜನ ವಿದಿತವಾಗಿರುವುದು. ಆದರೆ ಈ ಲಿಪಿಯು ಮುಖ್ಯವಾಗಿ “ಬ್ರಾಹ್ಮೀ” ಲಿಪಿಯಿಂದ ಲಿಖಿತವಾಗಿರುವುದು. ಈ ಲಿಪಿಯ ಸಂಬಂಧವಾಗಿ ಅನೇಕರು ಅನೇಕ ವಿಧವಾಗಿ ಹೇಳುವರು. ಭಾರತೀಯ ವರ್ಣಮಾಲೆಯ ಇತಿಹಾಸವನ್ನು ಬರೆಯಲು ಆರಂಭಿಸಿದರೆ ಯಾವ ಲಿಪಿಯು ಯಾವ ಯುಗದಲ್ಲಿ ಯಾವ ಪ್ರಣಾಳಿಯಿಂದ ಉತ್ಪನ್ನವಾಯಿತೆಂಬುದನ್ನು ಹೀಗೆಯೇ ಎಂದು ನಿರ್ಧರಿಸುವುದು ಬಹಳ ಕಠಿನವಾಗಿರುವುದು. ಆದರೆ ಪ್ರಚಲಿತ ಪ್ರವಾದದಲ್ಲಿ ಇದು ಮೊದಲು ಬ್ರಹ್ಮನಿಂದ ಜನಿಸಿದ ಲಿಪಿಯಾದುದರಿಂದ ಈ ಪ್ರಾಚೀನ ಲಿಪಿಗೆ ಬ್ರಾಹ್ಮೀ ಲಿಪಿ ಎಂದು ಹೆಸರಾಯಿತು.

ಎಂದು ಹೇಳುವರು, ಲಲಿತ ವಿಸ್ತರ ವೆಂಬ ಗ್ರಂಥದಲ್ಲಿಯೂ ಮತ್ತು ಬೇರೆ ಎರಡು ಜೈನಗ್ರಂಥಗಳಲ್ಲಿಯೂ ಈ ಬ್ರಾಹ್ಮೀ ಲಿಪಿಯ ಉಲ್ಲೇಖವಿರುವುದು ನಮ್ಮ ಭರತ ಖಂಡದಲ್ಲಿರುವ ಎಲ್ಲಾ ಲಿಪಿಗಳಿಗಿಂತಲೂ ಅಶೋಕನ ಲಿಪಿಯಾದ ಈ ಬ್ರಾಹ್ಮಿಯೇ ಸರ್ವ ಪ್ರಾಚೀನವಾಗಿರುವುದು. ಈ ವಿಷಯವನ್ನು ಯೂರೋಪಿನವರೂ ಒಪ್ಪಿರುವರು ಇದಲ್ಲದೆ ಈ ದೇಶದಲ್ಲಿ "ಖರೋಷ್ಟಿ' ಎಂಬ ಮತ್ತೊಂದು ಲಿಪಿಯೂ ಪ್ರಚಲಿತವಾಗಿದ್ದಿತು

ಬ್ರಾಹ್ಮೀ ಲಿಪಿಯ ಉತ್ಪತ್ತಿ ವಿಷಯದಲ್ಲಿ ಕೆಲವು ಪಂಡಿತರು ಇದು ಭರತಖಂಡದಲ್ಲಿಯೇ ಉತ್ಪನ್ನವಾದ ಲಿಪಿಯಾಗಿರುವುದೆಂದು, ಮತ್ತೆ ಕೆಲವರು—"ವಿದೇಶದಿಂದ ಬಂದುದು ಎಂದು ಹೇಳುವರು ಥಾಮಸ್, ಗೋಲ್ಡ್‌ಷ್ಟ್ಯೂಕರ್, ರಾಜೇಂದ್ರಲಾಲಮಿತ್ರ, ಡಾಸ್ಸೀ ಮುಂತಾದವರು ಭಾರತೀಯವರ್ಣಮಾಲೆಯ ಉತ್ಪತ್ತಿಯು ಭರತಖಂಡದಲ್ಲಿಯೇ ಆದುದೆಂದು ಹೇಳುವರು ಕನಿಂಗ್‌ಹಾಮನು ಬ್ರಾಹ್ಮೀ ಲಿಪಿಯು ಪ್ರಾಚೀನಭಾರತೀಯ ವಸ್ತು ಚಿತ್ರದಿಂದ ಜನಿಸಿದುದೆಂದು ಹೇಳುವನು

ವೇಬರನು (Weber) ಪೇಲರನು, ಬೇಫೆಯು, ವಿಲಿಯಂಜೋನ್ಸ್, ಫುಲ್ಲರು ಮುಂತಾದವರು ಭಾರತೀಯರ ಲಿಪಿಯು ವಿದೇಶದ ಫಿನಿಷಿಯನ್ ಲಿಪಿಯಿಂದ ಬಂದುದು ಎಂದು, ಮತ್ತೆ ಕಲವರು ಅರಬ್ಬಿಯವರಿಂದ ಬಂದುದೆಂತಲೂ, ಇತರರು ಮೆಸೊಪೊಟೇಮಿಯದವರಿಂದ ಬಂದುದೆಂತಲೂ ಹೇಳುವರು ಡಾಕ್ಟರ್ ರಿಸ್‌ಡೇವಿಡ್ಸ್ ಎಂಬಾತನು ಯೂಫ್ರೈಟಿಸ್ ಎಂಬ ಕಣಿವೆಯ ಪ್ರಾಂತದಿಂದ ಬಂದುದೆಂದು ಹೇಳುತ್ತಾನೆ ಕೆಲವರು ಪೂರ್ವದಲ್ಲಿ ಭರತಖಂಡದವರು ವಾಣಿಜ್ಯಾರ್ಥವಾಗಿ ನಾನಾ ದೇಶಗಳನ್ನು ಸುತ್ತುತ್ತಿದ್ದರು, ಅಲ್ಲಲ್ಲಿ ದೊರೆತ ಲಿಪಿಗಳನ್ನು ಕಲಿತುಕೊಂಡು ತಮ್ಮ ತಮ್ಮ ದೇಶಕ್ಕೆ ಬಂದು ಅದರಂತ ಲಿಪಿಗಳನ್ನು ಕಲ್ಪಿಸಿ ಪರಿಷ್ಕರಿಸಿಕೊಂಡು ಸಂಸ್ಕೃತದ ಬರೆವಣಿಗೆಗೂ ಪ್ರಾಕೃತ ಭಾಷೆಗಳ ಬರೆವಣಿಗೆಗೂ ಉಪಯೋಗಿಸಿಕೊಂಡರೆಂದು ಹೇಳುವರು.

ಆದರೆ ಬ್ರಾಹ್ಮೀ ಲಿಪಿಯು ವಿದೇಶದಿಂದಲೇ ಬಂದುದೆಂದು ಹೇಳಲು ಸಾಧ್ಯವಿಲ್ಲ ಲಿಪಿವಿದ್ಯೆಯು ಬಹು ಪ್ರಾಚೀನಕಾಲದಿಂದಲೂ ಈ ನಮ್ಮ ಭರತಖಂಡದವರಿಗೆ ಗೊತ್ತಿತ್ತೆಂಬುದು ಸಂಸ್ಕೃತ ಸಾಹಿತ್ಯ ಗ್ರಂಥಗಳಿಂದ ಚೆನ್ನಾಗಿ ಗೊತ್ತಾಗುವುದು ಋಗ್ವೇದ ಶಾಖೆಯಲ್ಲಿ ಲಿಪಿವಿದ್ಯೆಯ ವಿಚಾರವು ಸಚ್ಛಾಗಿ ವರ್ಣಿತವಾಗಿರುವುದು ಶತಪಥ ಬ್ರಾಹ್ಮಣದಲ್ಲಿಯೂ, ಯಜುರ್ವೇದದಲ್ಲಿಯೂ ಲಿಪಿವಿದ್ಯೆಯ ಉಲ್ಲೇಖವಿರುವುದು. ಪಾಣಿನಿ ವ್ಯಾಕರಣದಲ್ಲಿಯೂ "ಲಿಪಿಕರ ಎಂಬ ಪದವು ಪ್ರಯುಕ್ತವಾಗಿರುವುದು. ಇತರ ವೈದಿಕ ಗ್ರಂಥಗಳಲ್ಲಿಯೂ "ಅಕ್ಷರ" ಎಂಬ ಶಬ್ದವು ಕಾಣ ಬರುವುದು ಪ್ರಾಚೀನಗಳಾದ ಅನೇಕ ಪುರಾಣಗಳಲ್ಲಿ 'ಲೇಖ, ಲೇಖನ, ಲೇಖಕ' ಎಂಬ ಪದಗಳು ಕಾಣಬರುವುವು ಪ್ರಾಚೀನ ಬೌದ್ಧಗ್ರಂಥವಾದ ತ್ರಿಪಿಟಕ ಎಂಬುದರಲ್ಲಿ ಲಿಪಿವಿದ್ಯೆಯು ವರ್ಣಿತವಾಗಿರುವುದು. ವಿನಯ

ಪಿಟಕದಲ್ಲಿಯೂ—'ಲೇಖ' 'ಲೇಖಕ' ಎಂಬ ಪದಗಳು ಕಾಣ ಬರುವುವು. ಬೌದ್ಧ ಜಾತಕ ಗ್ರಂಥಗಳಲ್ಲಿ ರಾಜಕೀಯ ಕಾಗದ ಪತ್ರಗಳ ವಿಚಾರವು ಕಾಣಬರುವುದು ಮತ್ತು ಕೆಲವೆಡಗಳಲ್ಲಿ ''ಅಕ್ಷರಿಕಾ' ಎಂಬ ಪದವಿರುವುದು ಮಹಾವಂಶವೆಂಬ ಬೌದ್ಧ ಗ್ರಂಥದಲ್ಲಿ ಪಾಠಶಾಲೆಯಲ್ಲಿ ಬರೆಯಲು ಮಾಡಿದ ಹಲಗೆಯೂ ಮರದಿಂದ ಮಾಡಿದ ಲೇಖಣಿಯೂ ವರ್ಣಿತಗಳಾಗಿರುವುವು—'ಲಿಖಿತ' 'ಲೇಖ' 'ಲೇಖಕ' 'ಅಕ್ಷರ' ಎಂಬ ಪದಗಳೂ ಗೋಚರವಾಗುವುವು ಇವುಗಳನ್ನೂ ಅಶೋಕ ಮಹಾರಾಜನ ಲಿಪಿಯ ಘಟನಾವಳಿಯನ್ನೂ ಪರ್ಯಾಲೋಚನೆಮಾಡಿ ನೋಡಿದರೆ ಅತ್ಯಂತ ಪ್ರಾಚೀನ ಕಾಲದಿಂದಲೂ ನಮ್ಮ ಭರತ ಖಂಡದಲ್ಲಿ ಲಿಪಿವಿದ್ಯೆಯು ಪ್ರಚಾರದಲ್ಲಿದ್ದಿತೆಂಬುದು ಚೆನ್ನಾಗಿ ಗೊತ್ತಾಗುವುದು ಅಶೋಕನ ಲಿಪಿಯು ಈಚೆಗೆ ಪರಿಷ್ಕೃತವೂ ಸರಳವೂ ಆಗಿರುವುದು ಬ್ರಾಹ್ಮೀ ಲಿಪಿಯು ಎಡಗಡೆಯಿಂದ ಬಲಗಡೆಗೆ ಬರೆಯಲ್ಪಡುವುದು ಒಂದಾನೊಂದು ಕಾಲದಲ್ಲಿ ಭರತಖಂಡದ ಹೆಚ್ಚು ಭಾಗಗಳಲ್ಲಿ ಈ ಬ್ರಾಹ್ಮೀ ಲಿಪಿಯೇ ಪ್ರಚಾರದಲ್ಲಿದ್ದಿತೆಂದು ಹೇಳಬೇಕಾಗಿದೆ ಗಾಂಧಾರ ಮುಂತಾದ ಸ್ಥಳಗಳಲ್ಲಿರುವ ಅನೇಕ ಪ್ರಾಚೀನ ಮುದ್ರೆಗಳಲ್ಲಿ ಈ ಲಿಪಿಯು ಕಾಣಬರುವುದು ಇದರಿಂದ ಇದು ಬಹಳ ಹಿಂದೆ ಅನೇಕ ಜಾತಿಯವರ ಸಾಮಾನ್ಯ ಲಿಪಿಯಾಗಿಯೂ (Common Script) ಇದ್ದಿತೆಂದೂ ತಿಳಿಯ ಬರುವುದು ಕುಷಾಣ, ಗುಪ್ತ, ಪ್ರಾಚೀನ ದ್ರಾವಿಡ, ದೇವನಾಗರಿ, ಬಂಗಾಳಿ, ಟಿಬೆಟ್, ಒರಿಯಾ, ಗುರುಮುಖಿ, ಸಾರದಾ, ಸಿಂಧಿ, ಗ್ರಂಥ, ತೆಲುಗು, ತಮಿಳು, ಮಳಯಾಳಿ, ಸಿಂಹಳಿ, ಬರ್ಮ, ಶ್ಯಾಮ, ಕಾಂಬೋಜ, ಮಾಲಯ, ಯವದ್ವೀಪಿ ಮುಂತಾದ ಭರತ ಖಂಡದ ಲಿಪಿಗಳೂ, ಹೊರಗಣ ಲಿಪಿಗಳೂ ಬ್ರಾಹ್ಮೀ ವರ್ಣಮಾಲೆಯಿಂದಲೇ ಹುಟ್ಟಿರುವುವು ಸಂಸ್ಕೃತ ಗ್ರಂಥಗಳನ್ನೂ, ಬೌದ್ಧಗ್ರಂಥಗಳನ್ನೂ ಪರ್ಯಾಲೋಚಿಸುವುದಾದರೆ ಸುಮಾರು, ಕ್ರಿ ಪೂ ೬ ನೆಯ ಶತಮಾನಕ್ಕಿಂತಲೂ ಹಿಂದೆಯೇ ಈ ಭರತ ಖಂಡದಲ್ಲಿ ವರ್ಣಮಾಲೆಯ ಪ್ರಚಾರವಿದ್ದಿತೆಂದು ಗೊತ್ತಾಗುವುದು

ಪ್ರಾಚೀನವಸ್ತು ಚಿತ್ರ.

ಈಜಿಪ್ಟ ಚೀನ ಮುಂತಾದ ದೇಶಗಳ ವರ್ಣಮಾಲೆಯು ವಸ್ತುಚಿತ್ರದಿಂದ ಉತ್ಪನ್ನವಾಗಿರುವುದು ಹೇಗಂದರೆ—< 'ಅಲಫ' ಎಂದರೆ ಎತ್ತು, T ಗಿಮೇಲ' —ಒಂಟೆ, △ ದಾಲೇಥ—ದ್ವಾರ, O ಅಯಿನ—ಕಣ್ಣು, M ಶಿನ - ಹಲ್ಲು, ಎಂಬ ರೀತಿಯಲ್ಲಿ ಆಯಾ ವಸ್ತುಗಳ ಆಕೃತಿಯನ್ನೊಳಕೊಂಡ ಲಿಪಿಯಾಗಿರುವುದು. ಭರತ ಖಂಡದ ಉತ್ತರ ಪಶ್ಚಿಮ ಪ್ರಾಂತಗಳಲ್ಲಿ ಪ್ರಚಲಿತವಾಗಿದ್ದ ವರ್ಣಮಾಲೆಗೆ ಖರೋಷ್ಠಿ ಎಂದು ಹೆಸರಿದ್ದಿತು ಎಂದರೆ ಕತ್ತೆಯ ತುಟಿಯಂತೆ ಲಿಪಿಯ ಆಕೃತಿಯಿದ್ದುದರಿಂದ ಈ ವಿಧವಾದ ಹೆಸರು ಬಂದಿರಬಹುದೆಂದು ಊಹಿಸಬೇಕಾಗಿದೆ

ಈ ಲಿಪಿಯು ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಿಂದ ಕ್ರಿಸ್ತಶಕ ಮೂರನೆಯ ಶತಮಾನದವರೆಗೂ ಭರತ ಖಂಡದಲ್ಲಿ ಪ್ರಚಾರದಲ್ಲಿದ್ದಿತು. ಪರ್ವತಾಗ್ರದಲ್ಲಿ

ಯೂ, ಲೋಹಫಲಕದಲ್ಲಿಯೂ, ಮುದ್ರಾಮಧ್ಯದಲ್ಲಿಯೂ, ಭೂರ್ಜಪತ್ರದ ಮೇಲೆಯೂ, ಬರೆದಿದ್ದ ಶಾಸನಗಳೂ, ಪುಸ್ತಕಗಳೂ ಈ ಲಿಪಿಯಲ್ಲಿ ದೊರೆವುವು ನಮ್ಮ ಮೈಸೂರು ರಾಜ್ಯದಲ್ಲಿರುವ ಸಿದ್ದಾಪುರದ ಒಂದು ಶಾಸನದಲ್ಲಿ ಒಬ್ಬ ಲೇಖಕನು ತನ್ನ ಹೆಸರನ್ನು ಖರೋಷ್ಠಿ ಲಿಪಿಯಲ್ಲಿ ಬರೆದಿರುವನು ಇದರಿಂದ ಈ ಲಿಪಿಯ ವ್ಯಾಪ್ತಿಯು ಮೈಸೂರು ರಾಜ್ಯದವರೆಗೂ ಹಬ್ಬಿತ್ತೆಂದು ಊಹಿಸಬೇಕಾಗಿದೆ ಕುಷಾಣ್ ರಾಜರ ರಾಜ್ಯಭಾರ ಕಾಲದಲ್ಲಿ ಈ ಲಿಪಿಯಿಂದ ಬರೆದ ಭೂರ್ಜಪತ್ರಾತ್ಮಕವಾದ ಒಂದು ಧರ್ಮಪದದ ಪುಸ್ತಕವು ಕಲ್ಕತ್ತೆಯ ಪ್ರಾಕ್ತನ ಪದಾರ್ಥಾನ್ವೇಷಕರಿಗೆ ದೊರೆತಿರುವುದು ಕೆಲವರು ಅಕ್ಷರ ಸಾಮ್ಯದಿಂದ ಈ ಲಿಪಿಯನ್ನು ಪಶ್ಚಿಮ ನೈಋತ್ಯದಿಂದ ಗಾಂಧಾರ (ಕಂದಾಹಾರ್) ದೇಶದವರೆಗೂ ಕ್ರಿ ಪೂ ಸುಮಾರು ನಾಲ್ಕನೆಯ ಶತಮಾನದಲ್ಲಿ ಪ್ರಸಿದ್ಧ ಸಿರಿಯಾ ಲಿಪಿಯ ಸಂಪರ್ಕದಿಂದ ಬಂದುದೆಂದು ಹೇಳುವರು ಕನಿಂಗ್‌ಹಾಮ್ ಮುಂತಾದವರು ಈ ಲಿಪಿಯು ಪಾರಸೀಕ ಸಮ್ರಾಟನಿಂದ ನಿರ್ಮಿತವಾಗಿ ಪಂಜಾಬಿನ ಪ್ರಾಂತದಲ್ಲಿ ಪ್ರಚಾರದಲ್ಲಿದ್ದು ಬಳಿಕ ಭರತ ಖಂಡಕ್ಕೆ ಬಂದು ಸೇರಿತೆಂದು ಹೇಳುವರು ಬ್ರಾಹ್ಮೀ ಲಿಪಿಯ ಅಕ್ಷರವಿನ್ಯಾಸವನ್ನು ಪಕ್ಕದ ಪುಟದಲ್ಲಿ ನೋಡಬಹುದು

ಸಂಖ್ಯೆಯ ಗಣನಾ ವಿಚಾರ.

ದಶಮ ಸಂಖ್ಯೆಯ ಗಣನಾ ಪ್ರಣಾಳಿಯು ಭರತಖಂಡದಲ್ಲಿಯೇ ಜನಿಸಿದುದು ಆದರೆ ಅಶೋಕನ ಶಾಸನಗಳಲ್ಲಿ ಮಾತ್ರ ದಶಮಾಂಕವು ದೊರೆವುದಿಲ್ಲ ಇದು ಆಶ್ಚರ್ಯದ ವಿಷಯವೇ ಸರಿ

೧, ೨, ೪, ೬, ೮ ಈ ವಿಧವಾದ ಸಂಖ್ಯೆಗಳಿಗೆ ಕೆಲವು ಅಕ್ಷರಗಳಿರುವುವು ೫೦ ಎಂಬ ಸಂಖ್ಯೆಗೆ “ನ” ಎಂಬೊಂದು ಅಕ್ಷರವಿರುವುದು ೧೦೦ ಕ್ಕೆ “ಸ” ಎಂಬ ಅಕ್ಷರವು, ೨೦೦ ರಕ್ಕೆ “ಸು” ಎಂಬ ಅಕ್ಷರವು ಇರುವುವು ಇವುಗಳನ್ನು ಬಿಟ್ಟು ಬೇರೆ ಯಾವ ಸಂಖ್ಯೆಗಾಗಲಿ ಯಾವ ಸಾಂಕೇತಿಕಾಕ್ಷರವೂ ಅಶೋಕನ ಶಾಸನಗಳಲ್ಲಿ ದೊರೆವುದಿಲ್ಲ ಆದರೆ ಬಳಿಕ ನಿರ್ಮಿತವಾದ ಸಂಖ್ಯೆಗೆ ಸಂಬಂಧಪಟ್ಟ ಕೆಲವು ಸಂಕೇತಾಕ್ಷರಗಳು ದೊರೆವುವು — ತ್ರ-೫ ಫು-೬, ಸ್ರ ೭, ಹ್ರ-೮, ಓ-೯, ನ್ನ ೧೦, ಮ ೨೦, ಲ-೩೦, ಐ ೪೦, ನ ೫೦ ವ-೬೦ ಷು, ಥು-೭೦; ಧ, ಸ ೮, ೧೦೦, ಸ್ರು ಧಾ, ಆ-೨೦೦, ನ-೧೦೦೦ ಎಂಬುದಾಗಿ ಒಂದೊಂದು ಸಂಖ್ಯೆಗೆ ಒಂದೊಂದು ಅಕ್ಷರವು ನಿರ್ದಿಷ್ಟವಾಗಿರುವುದು, ಈ ರೀತಿಯಾದ ಸಂಕೇತವು ಪೂರ್ವದಲ್ಲಿಯೂ ಇದ್ದಿತು ಲಾಟಿನ್ನಲ್ಲಿ V-೫, X-೧೦; L-೫೦, C-೧೦೦, M-೧೦೦೦ ಎಂದಿರುವುದು. ತಮಿಳು ಭಾಷೆಯಲ್ಲಿ ೧೦ ನೆಯ ಸಂಖ್ಯೆಗೆ ಅಂಕಿಯೇ ಇಲ್ಲ ಆದರೆ ಈಚೆಗೆ ಇಂಗ್ಲೀಷರ ಅಂಕಿಗಳಂತೆ ಒಂದು ಎಂಬ ಸಂಕೇತಾಕ್ಷರದ ಮುಂದೆ ಒಂದು ಸೊನ್ನೆಯನ್ನು ಹಾಕಿ ಹತ್ತು ಎಂದು ಕರೆದುಕೊಳ್ಳುತ್ತಾರೆ.



ಬ್ರಾಹ್ಮೀವರ್ಣಮಾಲೆ

(೧೦ ನೆಯ ಪುಟದ ಪಕ್ಕಕ್ಕೆ)

೧ (ಕ); ೨ (ಉ); ೩ (ನು); ೪ (ಜ), ೫ (ಞು), ೬ (ಜು); ೭ (ಎ), ೮ (ಅ); ೯ (ಕು); ೧೦ (ಕಂ); ಈ ರೀತಿ ಇರುವುದು.

ಅಶೋಕ ಮಹಾರಾಜನ ಶಾಸನದ ಭಾಷೆಯು ಗಾಂಧಾರದಿಂದ ನೈಸೂರವರೆಗೂ ಏಕರೀತಿಯಾಗಿಯೇ ಇರುವುದು ಈ ಭಾಷೆಯು ಲೌಕಿಕ ಭಾಷೆ ಅಥವಾ ಕಥಿತಮಾಗಧಿ ಭಾಷೆಯೆಂದ, ಹೇಳಲ್ಪಟ್ಟಿದೆ ಇದು ಮಗಧ ದೇಶೀಯರ ವ್ಯಾವಹಾರಿಕ ಭಾಷೆಯಾಗಿದ್ದುದಲ್ಲದೆ ಆಗಿನ ಕಾಲಕ್ಕಿದು ರಾಜಕೀಯ ಭಾಷೆ (Official Language) ಯಾಗಿಯೂ ಇದ್ದಿತು ಇದರಿಂದ ಆಗಿನ ಕಾಲದಲ್ಲಿ ಈ ಭಾಷೆಯು ಭರತಖಂಡದ ಎಲ್ಲ ಕಡೆಯಲ್ಲಿಯೂ ಸುಬೋಧವಾಗಿಯೇ ಇದ್ದಿತೆಂದು ಊಹಿಸಬಹುದಾಗಿದೆ. ಅಶೋಕನ ಶಾಸನದ ಭಾಷೆಯು ಅತಿ ಸರಳವೂ ಸುಂದರವೂ ಆಗಿರುವುದು. ಲೋಕದಲ್ಲಿ ಸಂಸ್ಕೃತ ಮತ್ತು ಪಾಲಿ ಎಂಬೀ ಎರಡು ಭಾಷೆಗಳೂ ಭಾಷೆಗಳೊಳಗೆ ಅತ್ಯಂತ ಸುಂದರಗಳೆಂದು ಪ್ರಖ್ಯಾತಗಳಾಗಿರುವುವು ಅಶೋಕ ಮಹಾರಾಜನಿಗೆ ಧರ್ಮಪ್ರಚಾರದಲ್ಲಿಯೇ ಪ್ರಧಾನಲಕ್ಷ್ಯವಿದ್ದಿತು ಅದರಿಂದ ಸರ್ವ ಸಾಧಾರಣವಾಗಿ ಪ್ರಜೆಗಳೆಲ್ಲರಿಗೂ ಧರ್ಮತತ್ತ್ವದಲ್ಲಿಯೂ, ನೀತಿತತ್ತ್ವದಲ್ಲಿಯೂ ತಿಳಿವಳಿಕೆ ಚೆನ್ನಾಗಿರಬೇಕೆಂಬುದಕ್ಕಾಗಿ ಸರಳವಾದ ಪಾಲಿ ಭಾಷೆಯಲ್ಲಿ ಅನೇಕ ಶಾಸನಗಳನ್ನು ಬರೆಯಿಸಿಟ್ಟನು.

ಮುಂದಿನ ಪುಟದಲ್ಲಿ ವಿವರಿಸುವ ಪಟ್ಟಿಯಿಂದ ಪ್ರಾಚೀನ ಮತ್ತು ಆಧುನಿಕ ಭಾರತೀಯ ಆರ್ಯಭಾಷೆಗಳೊಡನೆ ಅಶೋಕನ ಶಾಸನಗಳ ಭಾಷಾಸಂಬಂಧವೆಷ್ಟು ಮಟ್ಟಿಗೆ ಇರುವುದೆಂಬುದು ಚೆನ್ನಾಗಿ ವ್ಯಕ್ತವಾಗುವುದು

ಇತ್ತ ಕಡೆ ಕಥಿತ ಭಾಷೆಯು ವಿಶುದ್ಧವಾದ ರೀತಿಯಿಂದ ಜಾರಿಬೀಳಲು ಪ್ರಾಕೃತರೂಪಕ್ಕಿಳಿಯಿತು. ಮತ್ತೆ ಪ್ರಾಚೀನರೀತಿಗೆ ತರಲು ಶಿಕ್ಷಿತ ಸಂಪ್ರದಾಯದವರು ವ್ಯಾಕರಣ ಸಹಾಯದಿಂದ ಸಂಸ್ಕರಿಸಲು ಆರಂಭಿಸಿದರು. ಅದರಿಂದ ಭಾಷೆಯು ಸಂಸ್ಕೃತವಾಯಿತು ತದನುಗುಣವಾಗಿ ಸಂಸ್ಕೃತ ಸಾಹಿತ್ಯದ ಸೃಷ್ಟಿಯು ಹೆಚ್ಚುತ್ತ ಬಂದಿತು ಮತ್ತೊಂದು ಕಡೆ ಕಥಿತಭಾಷೆಯು ಪ್ರವಾಹವೂ ತಡೆಯಿಲ್ಲದೆ ಪ್ರವಹಿಸುತ್ತ ಬಂದಿತು ಈ ತೆರನಾದ ಭಾಷೆಯಿಂದಲೇ ಭಗವಂತನಾದ ಬುದ್ಧದೇವನ ಉಪದೇಶಗಳೆಲ್ಲವೂ ಆವಿರ್ಭವಿಸಿದುವು ಆ ಭಾಷೆಯು ವ್ಯಾವಹಾರಿಕ ಸ್ಥಿತಿಯಲ್ಲಿದ್ದ ಮಾಗಧಿಯ ರೂಪದಲ್ಲಿದ್ದಿತು ಅದೇ ಭಾಷೆಯು ಸ್ವಲ್ಪ ಬದಲಾವಣೆಯನ್ನು ಹೊಂದಿ "ಪಾಲಿ" ಯಾಗಿರುವುದು. ಈ ಭಾಷೆಯಲ್ಲಿ ಅನೇಕಾನೇಕ ಗ್ರಂಥಗಳು ಜನಿಸಿರುವುವು ಈ ಭಾಷೆಗೆ ತಕ್ಕಹಾಗೆ ವ್ಯಾಕರಣವಿರುವುದು. ನಿಘಂಟುವಿರುವುದು. ಆದರೆ ಇವೆಲ್ಲವೂ ಅಶೋಕನ ಬಳಿಕ ಬಹುಕಾಲಕ್ಕೀಚೆಗೆ ಜನಿಸಿದುವು.

ಗ್ರಿಯರ್ಸನ್, ಹೋರ್ನ್ಲೆ ಮುಂತಾದ ಪಾಶ್ಚಾತ್ಯ ಪಂಡಿತರ ಮತವನ್ನನುಸರಿಸಿ ಈ ಪ್ರಭೇದವನ್ನು ಬರೆಯಲಾಗಿದೆ.

ಆರ್ಯಭಾಷೆ.

- ಸಾಹಿತ್ಯರೂಪ (ವೈದಿಕ ಛಂದಸ್ಸು)
  - ಲೌಕಿಕ ಸಂಸ್ಕೃತ (ಪಾಣಿನಿ ಮುಂತಾದ ವೈಯಾಕರಣರಿಂದ ನಿಯಂತ್ರಿತವಾದುದು)
  - ಪಾಲಿ (ಬೌದ್ಧ ಸಾಹಿತ್ಯಭಾಷೆ) ಸಂಸ್ಕೃತ ಪ್ರಾಕೃತ ಮಿಶ್ರವಾದ ಗಾಥೆಯ ಭಾಷೆ
- ಕಥಿತರೂಪ
  - ಪ್ರಾಚೀನ ಪ್ರಾಕೃತ ಸಮೂಹ
    - ಮಾಗಧಿ
      - ಪ್ರಾಚೀನಸಿಂಹಲೀ
        - ಸಿಂಹಲೀ
      - ಅಶೋಕಶಾಸನಗಳ ಭಾಷೆ
        - ನಾಟಕೀಯಮಾಗಧಿ
          - ಅಪಭ್ರಂಶಮಾಗಧಿ
            - ಮೈಥಿಲಿ, ದಕ್ಷಿಣಬಿಹಾರಿ ಭೋಜಪುರಿ, ಅಸಾಮಿ, ಒರಿಯ, ಬಂಗಾಳಿ
    - ಅರ್ಧಮಾಗಧೀ, ಶೌರಸೇನಿ, ಆವಂತೀ, ಗುರ್ಜರೀ, ಮಹಾರಾಷ್ಟ್ರೀ, ಪೈಶಾಚೀ ಮುಂತಾದುವು
      - ಪೂರ್ವಹಿಂದೀ, ಪಶ್ಚಿಮಹಿಂದೀ, ರಾಜಸ್ಥಾನಿ, ಗುಜರಾತೀ, ಮರಾಠಿ, ಸಿಂಧೀ, ಪೂರ್ವಪಂಜಾಬೀ, ಲಹಂದಾ, ನೇಪಾಲೀ, ಕಾಶ್ಮೀರೀ ಮುಂತಾದುವು

ಉಪಸಂಹಾರ.

ಅಶೋಕನ ಶಾಸನಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು ಎಂತೆಂದರೆ—

(೧) ಶೈಲಲಿಪಿ, (೨) ಕ್ಷುದ್ರಶೈಲಲಿಪಿ, (೩) ಸ್ತಂಭಲಿಪಿ, (೪) ಗುಹಾಲಿಪಿ ಇವುಗಳನ್ನು ಪರ್ವತ ಪ್ರದೇಶದಲ್ಲಿಯೂ, ತೀರ್ಥಗಳ ಸಾನ್ನಿಧ್ಯದಲ್ಲಿಯೂ, ರಾಜಮಾರ್ಗದಲ್ಲಿಯೂ ಸಾಮಾನ್ಯವಾಗಿ ಎಲ್ಲರೂ ಸೇರುವ ಸ್ಥಾನಗಳಲ್ಲಿಯೂ ಬರೆದಿಟ್ಟಿರುವನು ಪಾಮರರಿಗೂ ತಿಳಿಯುವಂತೆ ಅಲಂಕಾರಗಳಿಲ್ಲದ ಸಾಧಾರಣ ಭಾಷೆಯಲ್ಲಿ ಬರೆಯಿಸಿರುವನು ಈ ಶಾಸನಗಳು ರಾಜಕಾರ್ಯಗಳ ಸೌಕರ್ಯಕ್ಕೂ ಪ್ರಜೆಗಳ ಅಧ್ಯಾತ್ಮಿಕ ಜ್ಞಾನಾಭಿವೃದ್ಧಿಗೂ ಸಹಾಯವಾಗಿರಬೇಕೆಂಬುದೇ ಅಶೋಕನ ಅಂತರವಾದ ಅಭಿಪ್ರಾಯವು ಅತ್ಯುನ್ನತ ಪದವಿಯಲ್ಲಿರುವವನನ್ನು ಮೊದಲುಮಾಡಿಕೊಂಡು ಅತ್ಯಂತ ನಿಕೃಷ್ಟ ಪದವಿಯಲ್ಲಿರುವವನವರೆಗೂ ಸರ್ವಸಮವಾದ ಉಪದೇಶಗಳೇ ಆ ಶಾಸನಗಳಲ್ಲಿ ತುಂಬಿರುವುವು ಎಂತೆಂದರೆ—ಮಾತಾ ಪಿತೃಗಳಲ್ಲಿ ಭಕ್ತಿ, ಗುರುಗಳಲ್ಲಿ ಶ್ರದ್ಧೆ, ಮಿತ್ರರಿಗೆ ಉಪಕಾರ, ಸಾಧು ಸಜ್ಜನರ ಸೇವೆ, ಅಹಿಂಸೆ, ಜೀವದಯೆ, ಸತ್ಯಪರಾಯಣತೆ, ಸರ್ವಸಮದೃಷ್ಟಿ, ಹಿರಿಯರವಾಕ್ಯದಲ್ಲಿ ಶ್ರದ್ಧೆ, ಔದಾರ್ಯ, ದೊಡ್ಡವರಿಗೆ ಸನ್ಮಾನ, ಸತ್ಯದಲ್ಲಿ ಸಮಾದರಣೆ ಮುಂತಾದ ನೀತಿ ರತ್ನಗಳನ್ನು ಪ್ರಕಾಶಗೊಳಿಸುವ ಸೂತ್ರದಂತೆ ಸದುದ್ದೇಶಗಳು ತುಂಬಿ ತುಳುಕುತ್ತಿರುವುವು ಸರ್ವಥಾ ಸಮಸ್ತ ಪ್ರಾಣಿಗಳ ಹಿತಚಿಂತನೆಯೇ ಅಶೋಕನಿಗೆ ಜಪ್ಯಮಂತ್ರವಾಗಿದ್ದಿತು ಆತನಿಗೆ ತರ್ಕದಿಂದಾಗಲಿ ಯುಕ್ತಿಯಿಂದಾಗಲಿ ಸ್ವಮತವನ್ನು ಸಿದ್ಧಾಂತಪಡಿಸಬೇಕೆಂಬ ಅಭಿನಿವೇಶವಿರಲಿಲ್ಲ. ಮತ್ತೇನೆಂದರೆ, ಹೇಗಾದರೂ ಸಮಸ್ತ ಜನಗಳಿಗೂ ಹಿತಪ್ರದವೂ ಮಂಗಳವೂ ಆದ ಧರ್ಮವೇ ಸರ್ವದಾ ಆಚರಣೆಗೆ ಬರಬೇಕೆಂದು ಮೃದುಮಧುರಗಂಭೀರ ಶೈಲಿಯಿಂದ ಶಾಸನಗಳನ್ನು ಬರೆದಿಟ್ಟಿರುವನು ಒಂದೆರಡು ಶಾಸನಗಳಲ್ಲಿ ಅಶೋಕ ಮಹಾರಾಜನು "ಸಮಸ್ತ ಪ್ರಜೆಗಳೂ ನನ್ನ ಮಕ್ಕಳು" ಎಂದು ಬರೆದಿಟ್ಟಿರುವನು

ಪಾಶ್ಚಾತ್ಯದೇಶದಲ್ಲಿಯೂ ಕೆಲವೆಡೆಗಳಲ್ಲಿ ಇಂತಹ ಶಾಸನಗಳಿರುವುವು ಆದರೆ ಅಶೋಕನ ಶಾಸನಗಳಂತೆ ಸಮಸ್ತ ನೀತಿಗಳನ್ನೂ ಬೋಧಿಸುವಶಾಸನಗಳಿಲ್ಲವೇ ಇಲ್ಲ.

ಅಶೋಕನಲ್ಲಿದ್ದ ಧರ್ಮಜ್ಞಾನದ ಸಂಬಂಧವಾಗಿ ವಿಮರ್ಶಕರಲ್ಲಿ ಭಿನ್ನಾಭಿಪ್ರಾಯಗಳುಂಟು ಕೆಲವರು "ಕಲಿಂಗ ವಿಜಯಾನಂತರದಲ್ಲಿ ಅಶೋಕನಿಗೆ ಧರ್ಮವಿಶ್ವಾಸವು ಹೆಚ್ಚಿತು, ಆತನು ತನ್ನ ರಾಜ್ಯಭಾರದ ಒಂಬತ್ತನೆಯ ವರ್ಷದಲ್ಲಿ ಬೌದ್ಧಮತವನ್ನವಲಂಬಿಸಿದನು" ಎಂದು, ಮತ್ತೆ ಕೆಲವರು "ಆತನ ರಾಜ್ಯಭಾರದ ಕೊನೆಯ ಕಾಲದಲ್ಲಿ ಎಂದರೆ ಸುಮಾರು ೩೦-೩೨ ವರ್ಷಗಳು ಕಳೆದಮೇಲೆ ಆತನು ಬೌದ್ಧಮತವನ್ನು ಆಶ್ರಯಿಸಿದನು" ಎಂದು ಹೇಳುವರು ಅದು ಹೇಗಾದರೂ ಇರಲಿ. ಆತನು ಕೆತ್ತಿಸಿದ ಶಾಸನಗಳಲ್ಲಿ ಪುನಃ ಪುನಃ ಜೀವಹಿಂಸೆಯನ್ನು ನಿಷೇಧಿಸುವುದನ್ನು

ನೋಡಿದರೆ ಆತನಿಗೆ ಮೊದಲು ಜೈನ ಮತದಲ್ಲಿಯೂ ಅಭಿನಿವೇಶವು ವಿಶೇಷವಾಗಿದ್ದಿತೆಂದು ಊಹಿಸಬಹುದಾಗಿದೆ.

ತನ್ನ ಪ್ರಜೆಗಳಲ್ಲಿ ಅತಿಸಾಮಾನ್ಯನೂ ಕೂಡ ತನ್ನಂತೆ ವರ್ತಿಸಬೇಕೆಂಬುದನ್ನೇ ಲಕ್ಷ್ಯವಾಗಿಟ್ಟುಕೊಂಡು ಈ ಶಾಸನಗಳನ್ನು ಬಹಿರಂಗವಾಗಿ ಅಲ್ಲಲ್ಲಿ ಇರಿಸಿದ್ದನೆಂದು ತೋರುವುದು ಇವೆಲ್ಲವನ್ನೂ ಪರ್ಯಾಲೋಚಿಸಿದರೆ ಅಶೋಕ ಮಹಾರಾಜನಂತಹ ದೊರೆ ಈ ಪ್ರಪಂಚದಲ್ಲಿ ಯಾರೂ ಜನಿಸಿಲ್ಲವೆಂದು ಹೇಳುವುದು ಅತಿಶಯೋಕ್ತಿಯೆಂದು ಪರಿಗಣಿಸಲ್ಪಡಲಾರದು.

ಇಂತಹ ಶಾಸನಗಳನ್ನು ಇಂಗ್ಲೀಷರು ಕಂಡುಹಿಡಿದು ಅವುಗಳ ಮರ್ಮಗಳನ್ನು ತಿಳಿದು ಹಿಗ್ಗುತ್ತಾ ಆನಂದಸಮುದ್ರದಲ್ಲಿ ಮುಳುಗಿ ಲೀನರಾಗಿರುವರು ಆರ್ಯರಾದ ನಾವು ನಮ್ಮ ಭಾಷೆಯನ್ನು ಮರೆತು ಚಾತಕವು ಬಾಯಿಬಿಟ್ಟುಕೊಂಡು ಮೇಘವನ್ನು ನೋಡುತ್ತಾ ಕಾದು ಕಾದು ಕೊನೆಗೆ ಎಂದಾದರೂ ಬಹುದೂರದಿಂದ ಒಂದೆರಡು ತುಂತುರು ಬಾಯಿಗೆ ಬೀಳುವುದಾದರೆ ಅಷ್ಟಕ್ಕೇ ಕೃತಾರ್ಥತೆಯನ್ನು ಪಡೆಯುವಂತೆ ನಾವೂ ಪಕ್ಕದಲ್ಲಿರುವುದನ್ನು ನಿಟ್ಟಿಸದೆ ಪಾಶ್ಚಾತ್ಯ ಮೇಘದ ಕಡೆಗೆ ಮುಖವನ್ನು ಮಾಡಿ ಬಾಯಿಬಿಟ್ಟು ಕಾಯಬೇಕಾದ ಅವಸ್ಥೆಯು ಬಂದಿರುವುದೆಂದ ಮೇಲೆ ಇದಕ್ಕಿಂತಲೂ ಮತ್ತಾವ ದುರ್ದಶೆಯು ಬೇಕು ? ಈಗಲಾದರೂ ನಮ್ಮ ಭಾರತೀಯರು ಗಾಢ ನಿದ್ರೆಯನ್ನು ಬಿಟ್ಟು ಪ್ರಬುದ್ಧರಾಗುವಂತೆ ಭಗವಂತನ ದಯೆಬರಲಿ ಪ್ರಕೃತ ಅಂತಹ ಮಹಾತ್ಮನಾದ ಅಶೋಕಮಹಾರಾಜನ ಶಾಸನಗಳನ್ನು ನಮ್ಮ ಭ್ರಾತೃ ಭಗಿನಿಯರು ನೋಡಿಯಾದರೂ ನಮ್ಮ ಹಿರಿಯರ ಮಹತ್ತ್ವವನ್ನು ಸ್ಮರಿಸಿಕೊಂಡು ಕಣ್ಣುಗಳನ್ನು ತೆರೆಯಲಿ!

ಅಶೋಕಮಹಾರಾಜನ ಶಾಸನಗಳು.

‡ ಶೈಲ ಲಿಪಿಗಳು ೧೪.

ಗಿರ್ನಾರ್ ಬೆಟ್ಟದಲ್ಲಿರುವ ಪ್ರಥಮಲಿಪಿ.

ಪಾಲಿ.

ಇಯಂ ಧಂಮಲಿಪೀ ದೇವಾನಂ ಪ್ರಿಯೇನ ಪ್ರಿಯದಸಿನಾ ರಾಜ್ಞಾ ಲೇಖಾಪಿತಾ । ಇಧ ನ ಕಿಂಚಿ ಜೀವಂ ಆರಭಿತ್ಪಾ ಪ್ರಜೂಹಿತವ್ಯಂ ನ ಚ ಸಮಾಜೋ ಕತವ್ಯೋ । ಬಹುಕಂ ಹಿ ದೋಸಂ ಸಮಾಜಮ್ಹಿ ಪಸತಿ ದೇವಾನಂ ಪ್ರಿಯೋ ಪ್ರಿಯದಸಿ ರಾಜಾ । ಅಸ್ತಿ ಪಿ ತು ಏಕಚಾ (೨) ಸಮಾಜಾ ಸಾಧುಮತಾ ದೇವಾನಂ ಪ್ರಿಯಸ ಪ್ರಿಯದಸಿನೋ ರಾಜ್ಞೋ । ಪುರಾ ಮಹಾನಸಮ್ಹಿ ದೇವಾನಂ ಪ್ರಿಯಸ ಪ್ರಿಯದಸಿನೋ ರಾಜ್ಞೋ ಅನುದಿವಸಂ ಬಹೂನಿ ಪ್ರಾಣಸತಸಹಸ್ರಾಣಿ ಆರಭಿಸು ಸೂಪಾಥಾಯ । ಸೇ ಅಜ ಯದಾ ಅಯಂ ಧಂಮಲಿಪೀ ಲಿಖಿತಾ ತೀ ಏವ ಪ್ರಾಣಾ ಆರಭರೆ ಸೂಪಾಥಾಯ ದ್ವೋ (ದ್ವೌ) ಮೋರಾ ಏಕೋ ಮಗೋ । ಸೋ ಪಿ ಮಗೋ ನ ಧ್ರುವೋ । ಏತೇ ಪಿ ತ್ರೀ ಪ್ರಾಣಾ ಪಛಾ ನ ಆರಭಿಸರೇ

ಕನ್ನಡ.

ಈ ಧರ್ಮಲಿಪಿಯನ್ನು ದೇವಪ್ರಿಯನೂ ರಾಜನೂ ಆದ ಪ್ರಿಯದರ್ಶಿಯು ಕೆತ್ತಿಸಿದನು ಈ ಸ್ಥಾನ (ಪಾಟಲಿಪುತ್ರ) ದಲ್ಲಿ ಯಾವನೊಬ್ಬನೂ ಪಶುವನ್ನು ಬಲಿಕೊಟ್ಟು ಅದರ ದೇಹವನ್ನು ತೆಗೆದು ಹೋಮವನ್ನು ಮಾಡಕೂಡದು, ಮತ್ತು ಯಾವ ವಿಧವಾದ ಸಮಾಜವನ್ನೂ ಮಾಡಕೂಡದು

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಸಮಾಜದಲ್ಲಿ (೧) ಅನೇಕ ದೋಷಗಳನ್ನು ಕಂಡು ಹಿಡಿದಿರುವನು ಆದರೆ ಒಂದು ತೆರನಾದ ಸಮಾಜ (೨) ವಿರುವುದು. ಅದನ್ನು ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಉಪಕಾರಕವೆಂದು ಮನಸ್ಸಿನಲ್ಲಿ ಭಾವಿಸಿರುವನು. ಮೊದಲು ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನ ಅಡುಗೆಯ ಮನೆಯಲ್ಲಿ ಅತಸಿಗ ವ್ಯಂಜನವನ್ನು ಸಿದ್ಧಪಡಿಸುವುದಕ್ಕಾಗಿ ಪ್ರತಿ ದಿವಸವೂ ಶತ ಸಹಸ್ರ ಪ್ರಾಣಿಗಳು ಹತವಾಗುತಿದ್ದುವು ಆದರೆ

---

‡ ಈ ೧೪ ಶಾಸನಗಳು ಅಶೋಕನ ರಾಜ್ಯಭಾರದಲ್ಲಿ ೧೩–೧೪ ನೆಯ ವರ್ಷಗಳಲ್ಲಿ ಎಂದರೆ ಕ್ರಿ. ಪೂ. ೨೫೩-೨೫೨ ನೆಯ ವರ್ಷಗಳಲ್ಲಿ ಕೆತ್ತಿಸಲ್ಪಟ್ಟುವು.

ಇವುಗಳು ಇರುವ ಸ್ಥಳ ಮುಂತಾದುವುಗಳನ್ನೂ ಈ ಶಾಸನಗಳಲ್ಲಿರುವ ಕಠಿನ ಶಬ್ದಗಳ ವ್ಯಾಖ್ಯಾನವನ್ನೂ ಕೊನೆಯಲ್ಲಿ ವಿವರಿಸುವೆವು.

(೧) ಈಗಿನಕಾಲದಲ್ಲಿ ಸಮಾಜ ಶಬ್ದಕ್ಕೆ ಗುಂಪುಕೂಡಿ ಕುಡಿದು ಸ್ವೇಚ್ಛಾವಿಹಾರಿಗಳಾಗಿರುವುದೆಂದರ್ಥ.

(೨) ಅದಕ್ಕೆ ಧರ್ಮೋತ್ಸವವೆಂದರ್ಥ.

ಪಾಲಿ.

ಕನ್ನಡ.

ಈಗ ಈ ಧರ್ಮ ಲಿಪಿಯನ್ನು ಬರೆಯುವ ವೇಳೆಗೆ ಮೂರು ಪ್ರಾಣಿಗಳನ್ನು ಮಾತ್ರ ವ್ಯಂಜನವನ್ನು ಸಿದ್ಧಪಡಿಸಲು ಕೊಲ್ಲ ಬಹುದು ಎರಡು ನವಿಲುಗಳು ಮತ್ತು ಒಂದು ಜಿಂಕೆ ಆ ಜಿಂಕೆಯನ್ನು ಪ್ರತಿ ದಿನವೂ ಕೊಲ್ಲಬೇಕಾಗಿಲ್ಲ, ಮುಂದೆ ಮತ್ತೆ ಈ ಮೂರು ಪ್ರಾಣಿಗಳನ್ನು ಕೂಡ ಕೊಲ್ಲಕೂಡದು

— — —

ಗಿರ್ನಾರ್ ಬೆಟ್ಟದಲ್ಲಿರುವ ದ್ವಿತೀಯ ಗಿರಿಲಿಪಿ.

ಪಾಲಿ

ಸರ್ವತ ವಿಜಿತಮ್ಹಿ ದೇವಾನಂ ಪ್ರಿಯಸ ಪ್ರಿಯದಸಿನೋ ರಾಞ್ಞೋ ಏವಮಪಿ ಪ್ರಚಂತೇಸು ಯಥಾ ಚೋಡಾ. ಪಾಡಾ. ಸತಿಯಪುತೋ ಕೇತಲಪುತೋ ಆ ತಂಬಪಂಣೀ ಅಂತಿಯಕೋ ಯೋನರಾಜಾ ಯೇ ವಾ ಪಿ ತಸ ಅಂತಿಯಕಸ ಸಾಮೀಪಂ ರಾಜಾನೋ ಸವತ್ರ ದೇವಾನಂ ಪ್ರಿಯಸ ಪ್ರಿಯದಸಿನೋ ರಾಞ್ಞೋ ದ್ವೇ ಚಿಕೀಛ್ಛಾ ಕತಾ ಮನುಸಚಿಕೀಛ್ಛಾ ಚ ಪಸುಚಿಕೀಛ್ಛಾ ಚ ಓಸುಧಾನಿ ಚ ಯಾನಿ ಮನುಸೋಪಗಾನಿ ಚ ಪಸೋಪಗಾನಿ ಚ ಯತ ಯತ ನಾಸ್ತಿ ಸರ್ವತ್ರ ಹಾರಾಪಿತಾನಿ ಚ ರೋಪಿತಾನಿ ಚ ಮೂಲಾನಿ ಚ ಫಲಾನಿ ಚ ಯತ ಯತ ನಾಸ್ತಿ ಸರ್ವತ್ರ ಹಾರೋಪಿತಾನಿ ಚ ರೋಪಿ

ಕನ್ನಡ

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ತನ್ನ ರಾಜ್ಯದಲ್ಲೆಲ್ಲಾ, ಚೋಳ, ಪಾಂಡ್ಯ, ಸತಿಯಪುತ್ರ, ಕೇತಲಪುತ್ರ ಮುಂತಾದ ದೇಶಗಳಲ್ಲಿಯೂ, ಹೀಗೆ ತತ್ಸಾರ್ವಭೌಮವರ್ತಿಯಾದ ತಾಮ್ರಪರ್ಣಿಯ ವರೆಗೂ, ಹೀಗೆ ಅಂತಿಯೋಕನ್ನೆಂಬ ಯವನ ರಾಜನ ಮತ್ತು ಅಂತಿಯೋಕನ್ನಿನ ಸಮೀಪವರ್ತಿಯಾದ ರಾಜಸಮೂಹದ ರಾಜ್ಯದಲ್ಲಿಯೂ ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಮನುಷ್ಯಚಿಕಿತ್ಸೆ, ಪಶುಚಿಕಿತ್ಸೆಗಳೆಂಬ ಎರಡು ತೆರನಾದ ಚಿಕಿತ್ಸೆಗಳನ್ನು ವ್ಯವಸ್ಥೆಮಾಡಿರುವನು. ಯಾವ ಯಾವ ಸ್ಥಳದಲ್ಲಿ ಮನುಷ್ಯ ಮತ್ತು ಪಶುಗಳಿಗೆ ಉಪಕಾರಕಗಳಾದ ಔಷಧಗಳೂ ಹಣ್ಣು ಗೆಣಸುಗಳೂ ಇಲ್ಲವೋ ಆಯಾಯ ಸ್ಥಳಗಳಲ್ಲಿ ಅವೆಲ್ಲವನ್ನೂ ಸಂಗ್ರಹಿಸುವುದೂ, ಬೆಳೆಯಿಸುವುದೂ ಆಗಿರುವುವು.

ಪಾಲಿ.

ತಾನಿ ಚ । ಪಂಥೇಸು ಕೂಪಾ ಚ ಖಾನಾಪಿತಾ ವ್ರಚ್ಛಾ ಚ ರೋಪಾಪಿತಾ ಪರಿಭೋಗಾಯ ಪಸುಮನುಸಾನಂ.

ಕನ್ನಡ.

ದಾರಿದಾರಿಗಳಲ್ಲಿಯೂ ಮನುಷ್ಯ ಮತ್ತು ಪಶುಗಳ ಉಪಭೋಗಕ್ಕಾಗಿ ಬಾವಿಗಳು ತೆಗೆಯಲ್ಪಟ್ಟಿರುವುವು ಮತ್ತು ಗಿಡಗಳು ನೆಡಲ್ಪಟ್ಟಿರುವುವು

ಗಿರ್ನಾರ್ ಬೆಟ್ಟದಲ್ಲಿರುವ ತೃತೀಯ ಲಿಪಿ.

ಪಾಲಿ

ದೇವಾನಾಂ ಪ್ರಿಯೋ ಪ್ರಿಯದಸಿ ರಾಜಾ ಏವಂ ಆಹ(೧)ದ್ವಾದಸ ವಾಸಾಭಿಸಿತೇನ ಮಯಾ ಇದಂ ಆಜ್ಞಾಪಿತಂ ಸರ್ವತ ವಿಜಿತೇ ಮಮ ಯುತಾ ಚ ರಾಜೂಕೇ ಚ ಪ್ರಾದೇಸಿಕೇ ಚ ಪಂಚಸು ಪಂಚಸು ವಾಸೇಸು ಅನುಸಂಯಾನಂ ನಿಯಾತು ಏತಾಯೇವ ಅಥಾಯ ಇಮಾಯ ಧಂಮಾನುಸಸ್ಟಿಯ ಯಥಾ ಅಜ್ಞಾಯ ಪಿ ಕಂಮಾಯ(೨) ಸಾಧು ಮಾತರಿ ಚ ಪಿತರಿ ಚ ಸುಸ್ರುಸಾ ಮಿತಾಸಂಸ್ತುತ ಜ್ಞಾತೀನಂ ಬ್ರಾಹ್ಮಣಸಮಣಾನಂ ಸಾಧು ದಾನಂ| ಪ್ರಾಣಾನಂ ಸಾಧು ಅನಾರಂಭೊ ಅಪ್ಪವ್ಯಯತಾ ಅಪ್ಪಭಾಂಡತಾ ಸಾಧು | ಪರಿಸಾ ಪಿ ಯುತೇ ಆಜ್ಞಪಯಿಸತಿ ಗಣನಾಯಂ ಹೇತುತೋ ಚ ವ್ಯಂಜನತೋ ಚ

ಕನ್ನಡ

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಈ ರೀತಿ ಹೇಳಿರುವನು,— ನಾನು ರಾಜ್ಯಾಭಿಷೇಕದ ಒಳಿಕ ಹನ್ನೆರಡನೆಯ ವರುಷದಲ್ಲಿ ಈ ಅಪ್ಪಣೆಯನ್ನು ಕೊಟ್ಟಿರುವೆನು ನನ್ನ ರಾಜ್ಯದಲ್ಲೆಲ್ಲಾ, ಯುಕ್ತ, ರಾಜೂಕ, ಪ್ರಾದೇಶಿಕ ಗಣವು ಧರ್ಮೋಪದೇಶದ ಪ್ರಚಾರಕ್ಕಾಗಿಯೂ, ಇನ್ನೂ ಬೇರೆ ಬೇರೆ ಕೆಲಸಕ್ಕಾಗಿಯೂ ಪ್ರತಿ ಐದನೆಯ ವರ್ಷದಲ್ಲಿಯೂ ಭ್ರಮಣ ಮಾಡಬೇಕು (ಅವರು ಪ್ರಚಾರ ಮಾಡಬೇಕಾದುವಾವುವೆಂದರೆ —)

ಮಾತಾಪಿತೃಗಳ ಶುಶ್ರೂಷೆ, ಮಿತ್ರರು, ಪರಿಚಿತರು, ಜ್ಞಾತಿಗಳು, ಬ್ರಾಹ್ಮಣರು, ಶ್ರಮಣರು ಇವರುಗಳಿಗೆ ದಾನ, ಜೀವಗಳನ್ನು ಹಿಂಸೆಪಡಿಸದೇ ಇರುವುದು. ಇವು ಅತ್ಯಂತ ಪವಿತ್ರವಾದ ಕಾರ್ಯಗಳು ಅಲ್ಪವ್ಯಯ, ಅಲ್ಪ ಸಂಚಯಗಳು ಪ್ರಶಂಸನೀಯಗಳು † ಪರಿಷತ್ತು(ಬೌದ್ಧ ಸಂಘ) ಈ ವಿಧವಾದ ಯುಕ್ತ ಮುಂತಾದವರನ್ನು ಗಣನೆಯಿಂದಲೂ ವ್ಯಂಜನದಿಂದಲೂ ನಿಯಮಿಸಬೇಕು

---

† ಈ ಉಪದೇಶವು ಬೌದ್ಧ ಸಂಘವನ್ನು ಕುರಿತು ಹೇಳಿರುವುದಾಗಿರುವುದು.

೪. ಗಿರ್ನಾರ್ ಬೆಟ್ಟದ ಚತುರ್ಥ ಲಿಪಿ.

ಪಾಲಿ.

ಅತಿಕಾತಂ ಅಂತರಂ ಬಹೂನಿ ವಾಸಸತಾನಿ ವಢಿತೋ ಏವ ಪ್ರಾಣಾರಂಭೋ ವಿಹಿಂಸಾ ಚ ಭೂತಾನಾಂ। ಞಾತೀಸು ಅಸಂಪ್ರತಿಪತೀ ಬ್ರಾಹ್ಮಣಸ್ರಮನಾಣಂ ಅಸಂಪ್ರತಿಪತೀ। ತ ಅಜ ದೇವಾನಂ ಪ್ರಿಯಸ ಪ್ರಿಯದಸಿನೋ ರಾಞೋ ಧಂಮಚರಣೇನ ಭೇರೀಘೋಸೋ ಅಹೋ ಧಂಮಘೋಸೋ ವಿಮಾನದಸನಾ ಚ ಹಸ್ತಿದಸನಾ ಚ ಅಗಿಖಂಧಾನಿ ಚ ಅಞಾನಿ ಚ ದಿವ್ಯಾನಿ ರೂಪಾನಿ ದಸಯಿತ್ಪಾ (ಜಾ) ಜನಂ ಯಾರಿಸೇ ಬಹೂಹಿ ವಾಸಸತೇಹಿ ನ ಭೂತಪ್ರುವೇ ತಾರಿಸೇ ಅಜ ವಢಿತೇ ದೇವಾನಂ ಪ್ರಿಯಸ ಪ್ರಿಯದಸಿನೋ ರಾಞೋ ಧಂಮಾನುಸಸ್ಟಿಯಾ ಅನಾರಂಭೋ ಪ್ರಾಣಾನಂ ಅವಿಹೀಸಾ ಭೂತಾನಂ ಞಾತೀನಂ ಸಂಪಟಿಪತೀ ಬ್ರಹ್ಮಣ ಸಮಣಾನಂ ಸಂಪಟಿಪತೀ ಮಾತರಿ ಪಿತರಿ ಸುಸ್ರುಸಾ ಥೈರ ಸುಸ್ರುಸಾ ಏಸ ಅಞೇ ಚ ಬಹುವಿಧೇ ಧಂಮಚರಣೇ ವಢಿತ ವಢ ಯಿಸತಿ ಚೇವ ದೇವಾನಂ ಪ್ರಿಯೋ ಪ್ರಿಯ ದಸಿ ರಾಜಾ ಧಂಮಚರಣಾಮ ಇದಂ ಪುತ್ರಾ ಚ ಪೋತ್ರಾ ಚ ಪ್ರಪೋತ್ರಾ ಚ ದೇವಾನಂ ಪ್ರಿಯಸ ಪ್ರಿಯದಸಿನೋ ರಾ

ಕನ್ನಡ.

ಕಳೆದ ಬಹು ದಿನಗಳಿಂದಲೂ ನೂರಾರು ವರ್ಷಗಳಿಲ್ಲಿಯಾಗಿ–ಪ್ರಾಣಿಹಿಂಸೆ–ಜೀವಗಣ ವಿಷಯದಲ್ಲಿ ನಿಷ್ಠುರಾಚರಣೆ–ಜ್ಞಾತಿ ಬ್ರಾಹ್ಮಣ ಶ್ರಮಣರುಗಳ ವಿಷಯದಲ್ಲಿ ಅಸದ್ವ್ಯವಹಾರ, ಇವು ವೃದ್ಧಿ ಹೊಂದುತ್ತಿದ್ದುವು. ಆದರೆ ಈಗ ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಧರ್ಮನೀತಿಗಳನ್ನು ಅನುವರ್ತಿಸುದುದಕ್ಕಾಗಿ (1) ಭೇರೀ ಧ್ವನಿಯು ಕೇಳಬರುವುದು ಮತ್ತು ಧರ್ಮ ವಾಣಿಯು ಘೋಷಿತವಾಗುವುದು ವಿಮಾನಹಸ್ತಿ, ಅಗ್ನಿಸ್ಕಂಧ ಮುಂತಾದ ಅನೇಕಾನೇಕ ಚಿತ್ರಗಳು ಪ್ರದರ್ಶಿಸಲ್ಪಡುವುವು. ಇವುಗಳನ್ನು ನೋಡಿದ ಕೂಡಲೇ ಪ್ರಜೆಗಳಲ್ಲಿ ಎಷ್ಟೋ ಕಾಲದಿಂದ ಇಲ್ಲದಿದ್ದ ಧರ್ಮಿಷ್ಠತೆಯು ಇಮ್ಮಡಿಯಾಗಿ ಪ್ರಕೃತ ಅವರಲ್ಲಿ ವೃದ್ಧಿ ಹೊಂದಿರುವುದು. ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನ ಧರ್ಮಾನುಶಾಸನಗಳಲ್ಲಿ ಪ್ರಾಣಿಹತ್ಯೆಯೂ ಜೀವಗಣದಲ್ಲಿ ನಿರ್ದಯೆಯೂ ತಡೆಯಲ್ಪಟ್ಟಿರುವುವು.

ಜ್ಞಾತಿ ಬ್ರಾಹ್ಮಣ ಶ್ರಮಣರಲ್ಲಿ ಸದ್ವ್ಯವಹಾರವನ್ನೂ, ಮಾತಾಪಿತೃಗಳಲ್ಲಿ ಶುಶ್ರೂಷೆಯನ್ನೂ, ವಯೋವೃದ್ಧರಲ್ಲಿ ಸೇವೆಯನ್ನೂ, ಇನ್ನೂ ನಾನಾ ತೆರನಾದ ಬಹುವಿಧ ಧರ್ಮಾಚರಣೆಗಳನ್ನೂ ಪ್ರಚಾರಕ್ಕೆ ತರುವಂತೆ ಲಿಖಿತವಾಗಿರುವುದು.

---

(1) ಅಶೋಕನು ಧರ್ಮಸಂಬಂಧಯಾತ್ರೆಯನ್ನು ಕೈಕೊಂಡು ದೇಶಾಟನ ಮಾಡುತ್ತಾ ಅನೇಕಾನೇಕವಾದ ಆಶ್ಚರ್ಯವಸ್ತುಗಳನ್ನು ಪ್ರಜೆಗಳಿಗೆ ತೋರುತ್ತಾ ಅವರನ್ನು ಧರ್ಮಾವಲಂಬಿಗಳನ್ನಾಗಿ ಮಾಡಲು ಹೊರಡುವನು. ಆಗ ಹೊಡೆಯುವ ಭೇರಿ ಇದು.

ಪಾಲಿ

ಚೋ ವಧಯಿಸಂತಿ ಇದಂ ಧಂಮಚರಣಂ ಆವ ಸಂವಟಕಪಾ ಧಮಮ್ಹಿ ಸೀಲಮ್ಹಿ ತಿಷ್ಟಂತೋ ಧಂಮಂ ಅನುಸಾಸಿಸಂತಿ। ಏಸ ಹಿ ಸೇಸ್ಟೇ ಕಂಮೇ ಯ ಧಂಮಾನುಸಾಸನ ಧಂಮಚರಣೇಪಿ ನ ಭವತಿ ಅಸೀಲಸ ತ ಇಮಮ್ಹಿ ಅಥಮ್ಹಿ ವಧೀಚ ಅಹೀನಿಚ। ಸಾಧು ಏತಾಯ ಅಥಾಯ ಇದಂ ಲೇಖಾಪಿತಂ। ಇಮಸ ಅಥಸ ವಧಿ ಯುಜಂತು ಹೀನಿ ಚ ಮಾ ಲೋಚೇತವ್ಯಾ ದ್ವಾದಸ ವಾಸಾಭಿಸಿತೇನ ದೇವಾನಂ ಪ್ರಿಯೇನ ಪ್ರಿಯದಸಿನಾ ರಾಜ್ಞಾ ಇದಂ ಲೇಖಾಪಿತಂ

ಕನ್ನಡ

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನ ಮಕ್ಕಳೂ, ಮೊಮ್ಮಕ್ಕಳೂ ಮರಿಮಕ್ಕಳೂ ಈ ಧರ್ಮಾಚರಣವನ್ನು ಕಲ್ಪಾಂತಪರ್ಯಂತವಾಗಿ ವೃದ್ಧಿಪಡಿಸುತ್ತಿರತಕ್ಕದು. ಅವರು ಧರ್ಮನಿಷ್ಠರಾಗಿಯೂ ಸತ್ಸ್ವಭಾವವುಳ್ಳವರೂ ಆಗಿ ಇವುಗಳನ್ನು ಪ್ರಚಾರಕ್ಕೆ ತರತಕ್ಕದು ಧರ್ಮಪ್ರಚಾರವು ಅತ್ಯಂತ ಶ್ರೇಷ್ಠವಾದ ಕರ್ಮವು ದುಶ್ಶೀಲರ ವಿಷಯದಲ್ಲಿ ಧರ್ಮದಾನವೂ ಧರ್ಮಾಚರಣವೂ ಮಾಡತಕ್ಕುವಲ್ಲ ಈ ವಿಷಯದಲ್ಲಿ (ಧರ್ಮಾಚರಣದಲ್ಲಿ) ಅಹೀನತೆಯೂ ವೃದ್ಧಿಯೂ ಪ್ರಾರ್ಥನೀಯಗಳು ಈ ಉದ್ದೇಶಕ್ಕೆ ಪ್ರಚಾರ ಬರಲಿ ಇವುಗಳ ಹೀನತೆಯು ವಿಶೇಷವಾಗಿ ಮನೋಯೋಗದಿಂದ ಆಲೋಚಿಸತಕ್ಕದು ರಾಜ್ಯಾಭಿಷೇಕದ ಒಳಿತ ಹನ್ನೆರಡನೆಯ ವರ್ಷದಲ್ಲಿ ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಈ ಧರ್ಮಲಿಪಿಯನ್ನು ಕೆತ್ತಿಸಿರುವನು

ಸಾಹಾಬಾಜ್ ಗಡಿಯ ಬೆಟ್ಟದಲ್ಲಿರುವ ಪಂಚಮ ಲಿಪಿ.

ಪಾಲಿ.

ದೇವನಂ ಪ್ರಿಯೋ ಪ್ರಿಯದ್ರಶಿ ರಯ ಏವಂ ಅಹ ತಿ ಕ (ಲಣಂ) (ದು) ಕರಂ ಯೋ ಆ.. (ದಿ) ಕ (ಲ)ಣಸ ಸೋ ದುಕರಂ ಕರೋತಿ। ಸೋ ಮಯ ಬಹುಕಲಂ ಕಿಟ್ರಮ। ತಂ ಮ (ಹ) ಪುತ್ರ ಚ ನತರೋ ಚ ಪರಂ ಚ ತ ...ಅ (ಯ) ಮೇ ಅಪಚ (ಅ) ಭಂತಿ ಅವಕಪಮ್ ತಥಂ

ಕನ್ನಡ.

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಹೀಗ ಹೇಳುತ್ತಾನೆ— ಕಲ್ಯಾಣವನ್ನು ಸಾಧಿಸುವುದು ದುರೂಹವಾದ ಕಾರ್ಯವು ಯಾರು ಕಲ್ಯಾಣಸಾಧನವನ್ನು ಮಾಡುವರೋ ಅವರು ದುರೂಹವಾದ ಕಾರ್ಯವನ್ನು ಮಾಡುವರು. ಈಗ ನಾನು ಅನೇಕ ಕಲ್ಯಾಣಗಳನ್ನು ಸಾಧಿಸಿರುವೆನು ನನ್ನ ಮಕ್ಕಳು, ಮೊಮ್ಮ

ಪಾಲಿ.

ಯೇ ಅಣ (....) ಪತಿಸಂತಿ ತೇ ಸುಕಿಟ್ರಮ ಕಷಂತಿ । ಯೋ ಚೂ । ಅತೋ (ಕಂಪಿಹ ಪೇಸತಿ) ಸೋದುಕಟಂ ಕಷತೀ ಸುಪಂ ಹಿ ಸುಕರಂ ಸೇ । ತಿಕ್ರಂತಂ ಅಂತರಂ ನ ಭೂತಪ್ರೂಬ ಧ್ರಮ ಮಹಮತ್ರ ನಮ । ಸೋ ತಿದಶ ವಷಭಿಸಿತೇನ ಮಯ ಧ್ರಮಮಹಮತ್ರ ಕ್ರಿಟ್ರ । ತೇ ಸಬ್ರಪ್ರಷಂಡೇಷು ವಪಟ ಧ್ರಮಧ ಥನಯೇ (ಚ) ಧ್ರಮಬಢಿಯೇ ಹಿದಸುಖಯೇ ಚ ಧ್ರಮಯುತಸ ಯೋನ ಕಂಭೊಯ ಗಂಧರನಂ ರಸ್ಟ್ರಿಕನಂ ಪಿತಿನಿಕನಂ ಯೇ ವ ಪಿ ಅಪರಂತ । ಭಟಮ । ಯೇ) ಷು ಬ್ರಮಣಿಭೇಷು ಅನಥೇಷು ವು ಧೇ ಷು ಹಿತಸುಖಯೇ (ಧ) ಮಯುತಸ ಅಪಲಿಬೊ (ಧೇ) ಬಪಟ (ತೆ) । ಬಂಧನ ವಧಸ ಪಟಿವಿಧನಯೇ ಅಪ (ಲಿ) ಬೋಧಯೇ ಮೋ (ಖಯೇ) ಇಯಂ ಅನುಬ (ಧಂ) ಪ್ರಜವ ಕಿಟಭಿಕರೇ । ವ ಮಹಲಕ ವ ವಿಯ ಪಟ್ರ ಇಹ ಬಹಿರೇಷು ಚ ನಗರೇಷು ಸಬ್ರೇಷು ಓರೋಧನೇಷು ಭ್ರತೂನಂ ಚ ಪೋ ಸ್ಪಸೂನಂ ಚ ಯೇ ನಪಿ ಅಂಞೆ ಞ ತಿಕ ಸಬತ್ರ ವಿಯಪ್ರಟ । ಯಂ ಇಯಂ ಧ್ರಮನಿ ಶ್ರಿತಂ ತಿ ವ ಧ್ರಮಧಿಥನೇ ತಿ ವ ದನಸಯುತೆ ತೀ ವ ಸವತ್ರ ವಿಜಿತೇ ಮ(ಮ) ಧ್ರಮಯುತಸಿ ವಿಯ ಪಟತೇ ಧ್ರಮಮಹಮತ್ರ ಏತಯೇ ಅಠಯೇ ಅಯ (ಂ) ಧ್ರಮದಿಪಿ ದಿಪಿಸ್ತ ಚಿರಂತಿ ಥಿತಿಕ ಭೋತು ತಥ ಚ ಮ ಪ್ರಜ ಅನುವತತು

ಕನ್ನಡ.

ಕ್ಕಳು ಮತ್ತು ಕಲ್ಪಾಂತಪರ್ಯಂತವಾಗಿ ಜನಿಸುವ ನಮ್ಮ ಎಲ್ಲಾ ವಂಶಧರರೂ ನನ್ನನ್ನೇ ಹೆಗ್ಗುರುತಾಗಿಟ್ಟುಕೊಂಡು ಕೆಲಸ ಮಾಡುವುದಾದರೆ ಸತ್ಕಾರ್ಯಗಳನ್ನು ಮಾಡುವರು ಯಾವೊಬ್ಬನಾದರೂ ಈ ಎಲ್ಲಾ ಕೆಲಸಗಳಲ್ಲಿ ಸ್ವಲ್ಪಮಾತ್ರ ಬಿಟ್ಟರೂ ಅಂತಹನು ಪಾಪವನ್ನೇ ಮಾಡುವನು. ಏಕೆಕ್ಕೆಂದರೆ ಪಾಪಮಾಡುವುದೆಂಬುದು ಅತ್ಯಂತ ಸಹಜವಾಗಿರುವುದು ಮತ್ತು ಕಳೆದ ಕಾಲದಲ್ಲಿ ಧರ್ಮಮಹಾಮಾತ್ರ ಎಂಬ ಹೆಸರಿನಿಂದ ಯಾವ ರಾಜಕರ್ಮಚಾರಿಯೂ ಇರಲಿಲ್ಲ —ನಾನು ನನ್ನ ಅಭಿಷೇಕವಾದ ಬಳಿಕ ಹದಿಮೂರನೆಯ ವರ್ಷದಲ್ಲಿ ಧರ್ಮಮಹಾ ಮಾತ್ರರನ್ನು ನೇಮಿಸಿಕೊಂಡೆನು ಇವರು ಎಲ್ಲಾ ಸಂಪ್ರದಾಯಗಳ ಮಧ್ಯದಲ್ಲಿಯೂ ಧರ್ಮಪಾಲನ, ಧರ್ಮೋನ್ನತಿ, ಧರ್ಮಯುತರ (ಕೆಳಗಣ ರಾಜಕರ್ಮಚಾರಿಗಳ)(ಧ್ರಮಯುತಸ) ಸುಖಸ್ವಾಚ್ಛಂದ್ಯ, ಧಾರ್ಮಿಕರ ಐಹಿಕಾವಸ್ಥೆ, ಮುಂತಾದುವುಗಳನ್ನು ನೋಡುವುದರಲ್ಲಿ ವ್ಯಾಪೃತರಾಗಿರತಕ್ಕರು ಇವರು ನಮ್ಮ ಪ್ರಜಾವರ್ಗ ಮತ್ತು ಯವನ, ಕಾಂಬೋಜ, ಗಾಂಧಾರ, ರಾಷ್ಟ್ರಿಕ, ಪಿಟನಿಕ ಮುಂತಾದ ನಮ್ಮ ರಾಜ್ಯದ ಸಮೀಪವರ್ತಿಯಾದ ಜಾತಿಯವರ ಸುಖ ಮತ್ತು ಸಂವರ್ಧನೆಗಳಲ್ಲಿಯೂ ವ್ಯಾಪೃತರಾಗಿರುವರು ಇವರು ಪ್ರಭು, ಭೃತ್ಯ, ಬ್ರಾಹ್ಮಣ, ಅನಾಥ, ವೃದ್ಧರುಗಳ ಹಿತ ಮತ್ತು ಸುಖಗಳಿಗಾಗಿ, ಅಲ್ಲದೆ, ನಮ್ಮ ಧಾರ್ಮಿಕರಾದ ಪ್ರಜೆಗಳ ವಿಷಯದಲ್ಲಿ ಸಂಭವಿಸಬಹುದಾ

ಕನ್ನಡ.

ದ ಅನ್ಯಾಯ, ಅನಧಿಕಾರಗಳನ್ನು ದೂರ ಮಾಡುವುದರಲ್ಲಿಯೂ, ನಿಯುಕ್ತರಾಗಿರುವರು ಇಷ್ಟು ಅಲ್ಲದೆ ಅವರು ಶಿಕ್ಷಿತರಾದವರಿಗೆ (ಎಂದರೆ ರಾಜಾಜ್ಞೆಯಿಂದ ದಂಡಿಸಲ್ಪಟ್ಟವರಿಗೆ) ಸಂತಾನ ಸಂತತಿ ಯಾವುದಾದರೂ ಉಂಟೇ ಇಲ್ಲವೇ, ದುಃಖದಿಂದ ಅವರು ಪ್ರಾಣವನ್ನು ಕಳೆದುಕೊಂಡಿರುವರೇ ಅಥವಾ ಇಲ್ಲವೇ, ಅಥವಾ ಅವರು ವೃದ್ಧರಾಗಿರುವರೇ ಇಲ್ಲವೇ, ಇವೆಲ್ಲವನ್ನೂ ಚೆನ್ನಾಗಿ ವಿವೇಚಿಸುವುದಲ್ಲದೆ ಅನ್ಯಾಯವಾಗಿ ಸೆರೆ ಹಿಡಿಯಲ್ಪಟ್ಟಿರುವವರ ವಿಷಯದಲ್ಲಿಯೂ, ಅನ್ಯಾಯವಾಗಿ ದೇಹದಂಡವನ್ನು ಅನುಭವಿಸುವವರ ವಿಷಯದಲ್ಲಿಯೂ, ಪ್ರತಿವಿಧಾನವನ್ನು ಮಾಡುವುದಕ್ಕಾಗಿಯೂ, ಬಿಡುಗಡೆಯನ್ನು ಮಾಡಿಸುವುದಕ್ಕಾಗಿಯೂ ವ್ಯಾಪೃತರಾಗಿರುವರು ಅವರು ನಮ್ಮ ರಾಜಧಾನಿಯಾದ ಪಾಟಲಿಪುತ್ರದಲ್ಲಿಯೂ ಇದೇ ರೀತಿ ಬೇರೆ ಬೇರೆ ನಗರಗಳಲ್ಲಿಯೂ ನಮ್ಮ ಭ್ರಾತೃ ಭಗಿನಿಯರ § ಅಂತಃಪುರಗಳಲ್ಲಿಯೂ ಇನ್ನೂ ಇತರ ಜ್ಞಾತಿ ವರ್ಗದ ಅಂತಃಪುರಗಳಲ್ಲಿಯೂ ನಿಯುಕ್ತರಾಗಿರುವರು ಈ ಧರ್ಮಮಹಾಮಾತ್ರಗಣವು ನಮ್ಮ ರಾಜ್ಯದಲ್ಲೆಲ್ಲಾ ಧರ್ಮಸಂಬಂಧವಾದ ಸಕಲ ವಿಷಯಗಳಲ್ಲಿಯೂ, ಧರ್ಮಸಂದರ್ಶನದಲ್ಲಿಯೂ, ಧರ್ಮದಾನದಲ್ಲಿಯೂ ವ್ಯಾಪೃತರಾಗಿರುವರು. ಈ ಧರ್ಮಲಿಪಿಯನ್ನು ಬರೆಯಲು ಉದ್ದೇಶವೇನೆಂದರೆ, ಇದು ಚಿರಸ್ಥಾಯಿಯಾಗಿರಲಿ, ಮತ್ತು ನಮ್ಮ ಪ್ರಜ

§ ಇಲ್ಲಿ ಪ್ರಾಯಶವಾಗಿ ಸ್ತ್ರೀಮಹಾಮಾತ್ರರನ್ನು ನಿಯಮಿಸಿರಬಹುದು.

ಕನ್ನಡ.

ಗಳು ಈ ರೀತಿ ಕೆಲಸವನ್ನು ಮಾಡುತ್ತಿರಲಿ ಎಂಬುದೇ ಆಗಿರುವುದು

ಗಿರ್ನಾರ್ ಬೆಟ್ಟದ ಷಷ್ಠ ಲಿಪಿ.

ಪಾಲಿ

ದೇವಾನಂ ಪ್ರಿ (ಯೋ ಪ್ರಿಯದ) ಸಿ ರಾಜಾ ಏವಂ ಆಹ ಅತಿಕ್ರಾಂತಂ ಅಂತರಂ ನ ಭೂತಪ್ರುವಂ ಸವ(ಂ ಕಾ)ಲಂ ಅಥ ಕಂಮೇ ವ ಪಟಿವೇದನಾ ವಾ । ತ ಮಯಾ ಏವಂ ಕತಂ ಸವೇ ಕಾಲೇ ಭುಂಜಮಾನಸ ಮೇ ಓರೋಧನಮ್ಹಿ ಗಭಾಗಾರಮ್ಹಿ ವಚಮ್ಹಿ ವ ವಿನೀತಮ್ಹಿ ಚ ಉಯಾನೇಸು ಚ ಸವತ್ರ ಪಟಿವೇದಕಾ ಸ್ಟಿತಾ ಅಥೇ ಮೇ ಜನಸ ಪಟಿವೇದೇಥ ಇತಿ ( ) ಸವತ್ರ ಚ ಜನಸ ಅಥೇ ಕರೋಮಿ । ಯ ಚ ಕಿಂಚಿ ಮುಖತೋ ಆಜ್ಞಪಯಾಮಿ ಸ್ವಯಂ ದಾಪಕಂ ವಾ ಸ್ರಾವಾಪಕಂ ವಾ ಯ ವಾ ಪುನ ಮಹಾಮಾತ್ರೇಸು ಆಚಾಯಿಕ ಅರೋಪಿತಂ ಭವತಿ ತಾಯ ಅಥಾಯ ವಿವಾದೇ ನಿಝತಿ ವ ಸಂತೋ ಪರಿಸಾಯಂ ಆನಂತರಂ ಪಟಿವೇದೇತವ್ಯಂ ಮೇ ಸವತ್ರ ಸವೇ ಕಾಲೇ ಏವಂ ಮಯಾ ಆಜ್ಞಪಿತಂ । ನಾಸ್ತಿ ಹಿ ಮೇ ತೋಸೋ ಉಸ್ಟಾನಮ್ಹಿ ಅಥ ಸಂತೀರಣಾಯ ವ । ಕತವ್ಯಮತೇ ಹಿ ಮೇ ಸರ್ವಲೋಕಹಿತಂ । ತಸ ಚ ಪುನ ಏಸ ಮೂಲೇ ಉಸ್ಟಾನಂ ಚ ಅಥ ಸಂತೀರಣಾ ಚ । ನಾಸ್ತಿ ಹಿ ಕಂಮತ

ಕನ್ನಡ.

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಈ ರೀತಿ ಹೇಳುತ್ತಾನೆ—

ಕಳೆದ ಒಬ್ಬುದಿನಗಳಿಂದಲೂ ಆಯಾ ಸಮಯಗಳಲ್ಲಿ ರಾಜಕಾರ್ಯದಲ್ಲಿ ಗಮನ ಕೊಡುವುದನ್ನಾಗಲಿ ಚಾರರಿಂದ ಗುಪ್ತ ಸಂವಾದ ಶ್ರವಣವನ್ನಾಗಲಿ ಮಾಡಿಲ್ಲ ಆದರೂ ಮುಖ್ಯವಾಗಿ ನಾನಿದನ್ನು (ನಿಯಮವನ್ನು) ಮಾಡಿರುವೆನು "ನಾನು ಭೋಜನದಲ್ಲಿ ವ್ಯಾಪೃತನಾಗಿದ್ದರೂ ಅಥವಾ ಅಂತಃಪುರದಲ್ಲಿದ್ದರೂ ಗುಪ್ತಕಕ್ಷ್ಯೆಯಲ್ಲಿದ್ದರೂ, ಸ್ನಾನಗೃಹದಲ್ಲಿದ್ದರೂ ಯಾನದಲ್ಲಿದ್ದರೂ ಪ್ರಮೋದೋದ್ಯಾನದಲ್ಲಿದ್ದರೂ ಆ ಎಲ್ಲಾ ಸಮಯಗಳಲ್ಲಿಯೂ ಆ ಎಲ್ಲೆಡೆಗಳಲ್ಲಿಯೂ ನನಗೆ ಸಮಸ್ತ ವೃತ್ತಾಂತವನ್ನೂ ತಿಳಿಸುವರು ಇದ್ದೇ ಇರುವರು ಅವರು ನನಗೆ ಪ್ರಜೆಗಳಿಗೆ ಬೇಕಾದ ವಿಷಯಗಳನ್ನು ತಿಳಿಸುತ್ತಿರುವರು. ಈರೀತಿ ನಾನು ಎಲ್ಲಾ ಕಡೆಗಳಲ್ಲಿಯೂ ಪ್ರಜೆಗಳ ಕೆಲಸಗಳನ್ನು ನೆರವೇರಿಸುತ್ತಿರುವೆನು, ಕೊಡತಕ್ಕ ವಿಷಯವೇ ಆಗಲಿ ಕಾಪಾಡತಕ್ಕ ವಿಷಯವೇ ಆಗಲಿ ಯಾವುದೊಂದನ್ನೇ ಆಗಲಿ ನಾನು ಮುಖತಃ (ಮುದ್ದು) ಆಜ್ಞೆಯನ್ನು ಕೊಟ್ಟಿದ್ದರೂ ಅಥವಾ ಯಾವುದೊಂದು ಕೆಲಸವನ್ನು

ಪಾಲಿ.

ತಂ ಸರ್ವಲೋಕಹಿತಪ್ತಾಯ ಚ
ಕಿಂಚಿ ಪರಾಕ್ರಮಾಮಿ ಅಹಂ (,)
ಕಿಂತಿ (!) ಭೂತಾನಂ ಆನಂಣಂ
ಗಚ್ಛೇಯಂ ಇಧ ಚ ನಾನಿ ಸುಖಾಪ
ಯಾಮಿ ಪರತ್ರಾ ಚ ಸ್ವಗಂ ಆರಾಧ
ಯಂತು ತ ಏತಾಯ ಅಥಾಯ ಅಯಂ
ಧಂಮಲಿಪೀ ಲೇಖಾಪಿತಾ ಕಿಂತಿ (')
ಚಿರಂ ತಿಸ್ಟೇಯ ಇತಿ (,) ತಥಾ ಚ
ಮೇ ಪುತ್ರಾ ಪೋತಾ ಚ ಪ್ರಪೋತಾ
ಚ ಅನುವತರಾಂ ಸವಲೋಕಹಿತಾ
ಯ ದುಕರಂ ತು ಇದಂ ಅಞತ್ರ ಅಗೇ
ನ ಪರಾಕ್ರಮೇನ

ಕನ್ನಡ.

ವಿಲಂಬಮಾಡದೇ ಮಾಡತಕ್ಕದೆಂದು ಕಾರ್ಯದ ಭಾರವನ್ನು ಮಂತ್ರಿಗಳಮೇಲೆ ಹಾಕಿದ್ದರೂ, ಈ ಎಲ್ಲಾ ವಿಷಯಗಳಲ್ಲಿಯೂ ಮತಭೇದ ಸಂಭವಿಸಿದ್ದರೂ ಅಥವಾ ಯಾವುದಾದರೂ ಒಂದು ವಿಶೇಷವಿಷಯದಲ್ಲಿ (*) ಜನ ಸಮಾಜದಲ್ಲಿ ಯಾವುದಾದರೂ ವಿವಾದವಾಗಲಿ, ವಂಚನೆಯಾಗಲಿ ಜನಿಸಿದ್ದರೂ ಆಗ ಯಾವ ಸ್ಥಲವಾದರೂ ಸರಿ, ಯಾವ ಸಮಯವಾದರೂ ಸರಿ, ಆಕ್ಷಣವೇ ಅಲ್ಲಿಗೆ ಬಂದು ನನಗೆ ತಿಳಿಸತಕ್ಕದು ,'' ನಾನು ಈ ರೀತಿ ಅಪ್ಪಣೆಯನ್ನು ಮಾಡಿರುವೆನು, ಇದಕ್ಕೆ ಕಾರಣವೇನೆಂದರೆ, ಪರಿಶ್ರಮ ಪಟ್ಟುದರಿಂದಲೂ ರಾಜಕಾರ್ಯಗಳನ್ನು ಹೆಚ್ಚಾಗಿ ಮಾಡಿದುದರಿಂದಲೂ ನಾನು ಹಿಂದಾದೆನೆಂಬುದನ್ನು ಮನಸ್ಸಿನಲ್ಲಿ ಮಾಡಿಕೊಂಡು ಸಂತುಷ್ಟನಾಗಿರಲಾರೆನು. ಎಂದರೆ, ಸಮಸ್ತ ಪ್ರಜೆಗಳ ಕಲ್ಯಾಣಸಾಧನೆಯೇ ನನ್ನ ಕರ್ತವ್ಯವೆಂದು ಮನಸ್ಸಿನಲ್ಲಿ ಮಾಡಿಕೊಂಡಿರುವೆನು ಅದರ ಮೂಲದಲ್ಲಿಯ ಅಧ್ಯವಸಾಯವು ಪ್ರಜೆಗಳಿಗೆ ಪ್ರಯೋಜನವನ್ನು ಸಂಪಾದಿಸುವುದು ಸಮಸ್ತಜನಗಳಿಗೂ ಹಿತವನ್ನು ಮಾಡುವುದಕ್ಕಿಂತಲೂ ಮಹತ್ತರವಾದ ಕಾರ್ಯವು ಮತ್ತೊಂದಿಲ್ಲ ಪರಿಶ್ರಮ ಪಟ್ಟು ನಾನು ಎಷ್ಟು ಸ್ವಲ್ಪವಾದ ಕೆಲಸವನ್ನು ಮಾಡಿದ್ದರೂ ಅದರ ಉದ್ದೇಶ್ಯವು— "ಯಾವುದರಿಂದ ನಾನು ಸರ್ವಪ್ರಾಣಿಗಳ ಸಮೀಪದಿಂದಲೂ ಆನೃಣ್ಯವನ್ನು ಪಡೆಯಲು ಸಮರ್ಥನಾಗುವೆನೋ'' ಅದೇ ಎಂಬುದು ವ್ಯಕ್ತವಾಗಿರುವುದು.

(*) ಇದಕ್ಕೆ ಸಂಘ ಮಧ್ಯದಲ್ಲಿ ಎಂಬರ್ಥವೂ ಉಂಟು.

ಕನ್ನಡ.

ಈ ಜಗತ್ತಿನಲ್ಲಿ ನಾನು ಇತರ ಸಕಲಪ್ರಾಣಿಗಳನ್ನೂ ಸುಖಿಗಳನ್ನಾಗಿ ಮಾಡಲು ಯತ್ನಿಸುವೆನು. ಅವರು ಸದ್ವರ್ತನೆಯಿಂದ ಪರಲೋಕದಲ್ಲಿಯೂ ಸ್ವರ್ಗಸುಖವನ್ನೂ ಹೊಂದಲಿ.

ಈ ಧರ್ಮಲಿಪಿಯು ಈ ಉದ್ದೇಶ್ಯದಿಂದಲೇ ಕೆತ್ತಿಸಲ್ಪಟ್ಟಿರುವುದು ಇದನ್ನು ಮುಂದೆ ಮುಂದೆ ನಡೆಯುವ ಕಾಲದಲ್ಲಿಯೂ ಸ್ಥಿರವಾಗಿ ಮಾಡಲಿ ನನ್ನ ಪುತ್ರಪೌತ್ರ ಪ್ರಪೌತ್ರರುಗಳು ಸರ್ವಜನ ಹಿತಸಾಧನೆಯಲ್ಲಿಯೇ ವ್ಯಾಪೃತರಾಗಿರಲಿ. ಉದ್ಯಮದ ಪರಾಕಾಷ್ಠೆಯನ್ನು ಹೊರತಾಗಿ ಇದನ್ನು ಸುಸಂಪನ್ನವನ್ನಾಗಿ ಮಾಡಲು ಕಠಿನವೇ ಸರಿ

ಗಿರ್ನಾರ್ ಬೆಟ್ಟದಲ್ಲಿರುವ ಸಪ್ತಮಗಿರಿ ಲಿಪಿ.

ಪಾಲಿ.

ದೇವಾನಂ ಪಿಯೋ ಪಿಯದಸಿ ರಾಜಾ ಸರ್ವತ ಇಚ್ಛತಿ ಸವೇ ಪಾಸಂಡಾ ವಸೇಯು । ಸವೇ ತೇ ಸಯಮಂ ಚ ಭಾವಸುಧಿಂ ಚ ಇಛತಿ । ಜನೋ ತು ಉಚಾವಚ ಛಂದೋ ಉಚಾವಚರಾಗೋ । ತೇ ಸರ್ವಂ ವ ಕಾಸಂತಿ ಏಕದೇಸಂ ವ ಕಸಂತಿ । ವಿಪುಲೇ ತು ಪಿ ದಾನೇ ಯಸ ನಾಸ್ತಿ ಸಯಮೋ ಭಾವಸುಧಿತಾ ವ ಕತಂಞತಾ ವ ದಢಭತಿತಾ ಚ ನಿಚಾ ಬಾಢಂ !

ಕನ್ನಡ

ದೇವ ಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಅಪೇಕ್ಷಿಸುವುದಾವುದೆಂದರೆ — ಎಲ್ಲೆಡೆಗಳಲ್ಲಿಯೂ ಎಲ್ಲರೂ ಧರ್ಮಾವಲಂಬಿಗಳಾಗಿ ವಾಸಮಾಡತಕ್ಕದು ಎಲ್ಲರೂ ಸಂಯಮ ಮತ್ತು ಚಿತ್ತಶುದ್ಧಿ ಇವುಗಳನ್ನು ಹೊಂದಲು ಪ್ರಯತ್ನಮಾಡತಕ್ಕದು. ಆದರೆ ಮಾನವರ ಇಚ್ಛೆ ಮತ್ತು ಅನುರಾಗ ಇವುಗಳು ನಾನಾವಿಧಗಳಾಗಿರುವುವು. ಅವರು ಎಲ್ಲವನ್ನೂ ಮಾಡುವರು. ಅಥವಾ ಒಂದು ಅಂಶವನ್ನಾದರೂ ಮಾಡುವರು, ದಾನ

ಕನ್ನಡ

ವು ಸರ್ವಶ್ರೇಷ್ಠವಾದುದು. ಯಾರು ಅದನ್ನು ಕಾಪಾಡಲು ಅಸಮರ್ಥರಾಗಿರುವರೋ ಅಂತಹರಿಗೆ ಸಂಯಮ, ಚಿತ್ತಶುದ್ಧಿ, ಕೃತಜ್ಞತೆ, ದೃಢಚಿತ್ತತೆ, ಇವುಗಳು ಸಂಪೂರ್ಣವಾಗಿ ಕೆಳಗೆ ಹೋಗುವುವು

ಗಿರ್ನಾರ್ ಬೆಟ್ಟದಲ್ಲಿರುವ ಅಷ್ಟಮಗಿರಿ ಲಿಪಿ

ಪಾಲಿ

ಅತಿಕಾತಂ ಅಂತರಂ ರಾಜಾನೋ ವಿಹಾರಯಾತಾಂ ಞ್ಞಯಾಸು । ಏತ ಮಗವ್ಯಾ ಅಞ್ಞಾನಿ ಚ ಏತಾರಿಸಾನಿ ಅಭೀರಮಕಾನಿ ಅಹುಂಸು । ಸೋ ದೇವಾನಂ ಪಿಯೋ ಪಿಯದಸಿ ರಾಜಾ ದಸವಸಾಭಿಸಿತೋ ಸಂತೋ ಅಯಾಯ ಸಂಬೋಧಿಂ ತೇನೇಸಾ ಧಂಮಯಾತಾ ಏತಯಂ ಹೋತಿ ಬಾಮ್ಹಣಸಮಣಾನಂ ದಸಣೇ ಚ ದಾನೇ ಚ ಥೈರಾನಂ ದಸಣೇ ಚ ಹಿರಂಣ ಪಟಿವಿಧಾನೋ ಚ ಜಾನಪದಸ ಚ ಜನಸ ದಸನಂ ಧಂಮಾನುಸಸ್ಟೀ ಚ ಧಮಪರಿಪ್ರುಛಾ ಚ ತದೋಪಯಾ ಏಸಾ ಭೂಯ ರತಿ ಭವತಿ ದೇವಾನಂ ಪಿಯಸ ಪಿಯದಸಿನೋ ರಾಞ್ಞೋ ಭಾಗೇ ಅಞ್ಞೇ

ಕನ್ನಡ

ಕಳೆದ ಬಹುದಿನಗಳಿಂದಲೂ ರಾಜರ ಸಮೂಹವು ಆಮೋದ ಪ್ರಮೋದಗಳ (ವಿಹಾರ-ಯಾತ್ರೆ)ಗಾಗಿ, ಸುತ್ತುತ್ತಿರುವರು. ಆಗಿನಕಾಲಕ್ಕೆ ಬೇಟೆಯೂ ಅದೇ ತೆರನಾದ ಬೇರೆ ಬೇರೆ ಆಮೋದ ಪ್ರಮೋದಗಳೂ ಸಂಭವಿಸುವುವು ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ತನಗೆ ರಾಜ್ಯಾಭಿಷೇಕವಾದ ಬಳಿಕ ಹತ್ತನೆಯ ವರ್ಷದಲ್ಲಿ † ಸಂಬೋಧಿ ದರ್ಶನಕ್ಕಾಗಿ ಪಯಣ ಮಾಡಿದನು ಅದು ಮೊದಲು ಈ ಧರ್ಮ ಯಾತ್ರೆಯು ಪ್ರಥೆಯಿರುವುದು. ಇದರಿಂದ ಬ್ರಾಹ್ಮಣ ಮತ್ತು ಶ್ರಮಣ ಇವರ ದರ್ಶನವೂ ದಾನವೂ ಸ್ಥವಿರರ ದರ್ಶನವೂ, ಹಿರಣ್ಯ ವಿತರಣವೂ, ದೇಶವಾಸಿಗಳಾದ ಜನಗಳ ಅಭ್ಯರ್ಥನೆಯೂ, ಧರ್ಮಪ್ರಚಾರ ಮತ್ತು ಧರ್ಮ ಜಿಜ್ಞಾಸೆ, ಇವುಗಳು ಸಂಭವಿಸುವುವು. ಇದರ ಮೇಲೆ ಬೇರೆ ಬೇರೆ ಆಮೋದಸ್ಥಾನದಲ್ಲಿ ದೇವಪ್ರಿ

† ಭಗವಂತನಾದ ಬುದ್ಧದೇವನು ಬುದ್ಧತ್ವವನ್ನು ಪಡೆದಸ್ಥಾನಕ್ಕೆ

ಕನ್ನಡ.

ಯನೂ ಪ್ರಿಯದರ್ಶಿಯೂ ಆದ ರಾಜನಿಗೆ ಬಾಹಿ ಬಾರಿಗೂ ಆನಂದಕ್ಕೆ ಕಾರಣವಾಗುವುದು.

ಗಿರ್ನಾರ್ ಬೆಟ್ಟದಲ್ಲಿರುವ ನವಮಗಿರಿ ಲಿಪಿ.

ಪಾಲಿ.

ದೇವಾನಂ ಪಿಯೋ ಪಿಯದಸಿ ರಾಜಾ ಏವಂ ಆಹ (೧) ಅಸ್ತಿ ಜನೋ ಉಚಾವಚಂ ಮಂಗಲಂ ಕರೋತೇ । ಆಬಾಧೇಸು ವಾ ಆವಾಹವಿವಾಹೇಸು ವಾ ಪುತ್ರಲಾಭೇಸು ವಾ ಪ್ರವಾಸಂಮ್ಹಿ ವಾ । ಏತಮ್ಹಿ ಚ ಅಞಮ್ಹಿ ಚ ಜನೋ ಉಚಾವಚಂ ಮಂಗಲಂ ಕರೋತೇ । ಏತ್ರ ತು ಮಹಿಡಾಯೋ ಬಹುಕಂ ಚ ಬಹುವಿಧಂ ಚ ಛುದಂ ಚ ನಿರಥಂ ಚ ಮಂಗಲಂ ಕರೋತೇ । ತ ಕತವ್ಯಮೇವ ತು ಮಂಗಲಂ । ಅಪಫಲಂ ತು ಖೋ ಏತರಿಸಂ ಮಂಗಲಂ । ಅಯಂ ತು ಮಹಾಫಲೇ ಮಂಗಲೇ ಯ ಧಂಮಮಂಗಲೇ । ತತ ದಾಸಭತಕಮ್ಹಿ ಸಮ್ಯಪ್ರತಿಪತೀ ಗುರೂನಾಂ ಅಪಚಿತಿ ಸಾಧೂ ಪಾಣೇಸು ಸಯಮೋ ಸಾಧೂ ಬಮ್ಹಣ ಸಮಣಾನಂ ಸಾಧು ದಾನಂ । ಏತ ಚ ಅಞಂ ಚ ಏತಾರಿಸಂ ಧಂಮಮಂಗಲಂ ನಾಮ । ತ ವತವ್ಯಂ ಪಿತಾ ವ ಪುತೇನ ವಾ ಭ್ರಾತ್ರಾ ವಾ ಸ್ವಾಮಿಕೇನ ವಾ

ಕನ್ನಡ

ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ಈ ರೀತಿ ತಿಳಿಸುತ್ತಾನೆ — ಲೋಕದಲ್ಲಿ ವಿಪತ್ಕಾಲದಲ್ಲಿಯೂ, ಆದಾನಪ್ರದಾನಕಾಲಗಳಲ್ಲಿಯೂ, ಪುತ್ರಲಾಭಕಾಲದಲ್ಲಿಯೂ, ಪ್ರವಾಸಕಾಲದಲ್ಲಿಯೂ, ಈ ತೆರನಾದ ಇತರವಾದ ಬೇರೆ ಬೇರೆ ಕಾರ್ಯಗಳಲ್ಲಿಯೂ ನಾನಾ ವಿಧವಾದ ಮಂಗಲಾನುಷ್ಠಾನ ವ್ಯಾಪಾರವು ನಡೆಯುವುದು ಹೆಂಗಸರೂ ಬಹಳವಾಗಿ ನಾನಾ ವಿಧವಾದ ಸಾಮಾನ್ಯವೂ ನಿರರ್ಥಕವೂ ಆದ ಮಂಗಲಕಾರ್ಯಗಳನ್ನು ಮಾಡುವರು ಮಂಗಲಾನುಷ್ಠಾನವು ಮಾಡತಕ್ಕದೇ ಸರಿ, ಆದರೂ ಈತೆರನಾದ ಮಂಗಲಾನುಷ್ಠಾನವು ಪ್ರಾಯಶಃ ನಿಷ್ಫಲವೇ ಸರಿ ಧರ್ಮಮಂಗಲವೇ ಮಹಾ ಫಲವನ್ನು ಕೊಡತಕ್ಕಂತಹುದಾಗಿರುವುದು ಕ್ರೀತದಾಸನಲ್ಲಿಯೂ, ಸಾಮಾನ್ಯಸೇವಕನಲ್ಲಿಯೂ ದಯೆಯನ್ನೂ, ಗುರುಗಳಲ್ಲಿ ಪೂಜೆಯನ್ನೂ, ಪ್ರಾಣಿಗಳಲ್ಲಿ ಅಹಿಂಸೆಯನ್ನೂ, ಬ್ರಾಹ್ಮಣ ಶ್ರಮಣರಲ್ಲಿ ದಾನ ಮುಂತಾದುವನ್ನೂ, ಮಾಡತಕ್ಕುದು ಒಳ್ಳೆಯ ಕೆಲಸವು ಈ ತೆರನಾದ ಬೇರೆ ಬೇರೆ

(ಸಶೇಷ)

ಸಂಧಿಕಾರ್ಯದ ವಿಚಾರ

ಕೇಶಿರಾಜನು ಶಬ್ದಮಣಿದರ್ಪಣದ ೪೯ ನೆಯ ಸೂತ್ರದಲ್ಲಿ

ಎರಡುಂ ಪಲವುಂ ವರ್ಣಂ ।
ಪರಸ್ಪರಂ ಕೂಡುವಂದವುದು ಸಂಧಿ ವಲಂ ॥
ಸ್ವರರಹಿತ ವ್ಯಂಜನವುವು ।
ಪರವರ್ಣಮನ್ನೈದುತಿರ್ಪುದವಾ ಸಂಹಿತೆಯೊಳ್ ॥

ಎಂದು ಬರೆದಿರುತ್ತಾನೆ "ಸ್ವರರಹಿತ ವ್ಯಂಜನವುವು" ಎಂದು ಹೇಳಿರುವುದನ್ನು ನೋಡಿದರೆ ಸ್ವರಸಹಾಯವಿಲ್ಲದೆಯೇ ವ್ಯಂಜನೋಚ್ಚಾರಣೆಯಾಗಲಾರದೆಂಬ ಭಾವವು ತೋರುವುದು ಇಮ್ಮಡಿ ನಾಗವರ್ಮನು ಕಾವ್ಯಾವಲೋಕನದ ಮೊದಲನೆಯ ಸೂತ್ರದಲ್ಲಿ

ಸ್ವರಮೆಂದುಂ ವ್ಯಂಜನ ಮೆಂ ।
ದೆರಡಕ್ಕುಂ ವರ್ಣಭೇದಮಾದ್ಯಕ್ಷರದಿಂ ॥
ಬರೆ ಪದಿನಾಲ್ಕುಂ ಸ್ವರಮುಂ ।
ಪರಿಶೇಷಂ ವ್ಯಂಜನಂಗಳರೆ ಮಾತ್ರಿಕೆಗಳ್ ॥

ಎಂದು ಬರೆದಿರುತ್ತಾನೆ ಮಾತ್ರಾಗಣನವು ಸ್ವರಕ್ಕಲ್ಲದೆ ವ್ಯಂಜನಕ್ಕಿಲ್ಲವಾದುದರಿಂದ ಸ್ವರರಹಿತವ್ಯಂಜನೋಚ್ಚಾರಣೆಯೇ ಇಲ್ಲವೆಂದು ಹೇಳಬೇಕಾಗಿದೆ ವ್ಯಂಜನ ಶಬ್ದದ ವ್ಯುತ್ಪತ್ತಿಯನ್ನು ನೋಡಿದರೂ ಹಾಗೆಯೇ ತೋರಬರುವುದು "ವ್ಯಂಜನಗಳೆಂದರೆ—ವ್ಯಂಜಂತಿ, ಪ್ರಕಾಶಂತೇ ಸ್ವರಸಹಾಯೇನ, ಇತಿ ವ್ಯಂಜನಾನಿ," ಎಂಬ ವ್ಯುತ್ಪತ್ತಿಯಿಂದ ಸ್ವರಸಹಾಯವಿಲ್ಲದೆ ವ್ಯಂಜನಗಳು ಉಚ್ಚಾರಣಕ್ಕೆ ಬಾರವು ಎಂದು ತೋರಬರುವುದು ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಅರ್ಧಮಾತ್ರೆಯ ವಿಚಾರವನ್ನು ಎಲ್ಲಿಯೂ ಎತ್ತಿರುವಂತೆ ನನಗೆ ಕಾಣಬಂದಿಲ್ಲ ೪೮ ನೆಯ ಸೂತ್ರದಲ್ಲಿಯೂ ಕೇಶಿರಾಜನು

ಯ ರ ಲ ಣ ನ ಳ ಳ ಱ ವರ್ಣೋ
ತ್ಕರಮೆ ವಲಂ ಪದದ ಕಡೆಯೊಳಸ್ವರಪರಿಧಿಯುಂ ॥
ಪಿರಿದುಂ ತಾಳ್ದುಗುಮರಸ
ವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್ ॥

ಎಂದು ಹೇಳುತ್ತಾನೆ "ವ್ಯಂಜನಂಗಳರೆಮಾತ್ರಿಕೆಗಳ್" ಎಂದು ಹೇಳಿರುವ ಇಮ್ಮಡಿ ನಾಗವರ್ಮನು ಕೂಡ ೭ನೆಯ ಸೂತ್ರದಲ್ಲಿ

ನಿರತಂ ಪ್ರಕೃತಿ ಪ್ರತ್ಯಯ

ಮೆರಡು ಮೊಡಂಬಟ್ಟು ತೋಱಿ ಪದಮೆನೆ ಪಡೆಗುಂ ||
ಪರವರ್ಣದೊಳೆಳಸಿಕ್ಕುರ್ಗಂ
ಸ್ವರರಹಿತವ್ಯಂಜನಂಗಳಾ ಸಂಹಿತೆಯೊಳ್ ||

ಎಂದು ಬರೆದಿರುತ್ತಾನೆ ನಾಗವರ್ಮ ಕೇಶಿರಾಜರ ಪ್ರಯೋಗಗಳನ್ನು ನೋಡಿದರೆ "ಸ್ವರರಹಿತವ್ಯಂಜನಂಗಳ್," ಎಂದು ಹೇಳುವಾಗ "ಪೂರ್ಣಮಾತ್ರಾಸ್ವರರಹಿತ ವ್ಯಂಜನಂಗಳ್" ಎಂದು ಅರ್ಥಮಾಡಿಕೊಳ್ಳಬೇಕಾಗಿದೆ

ತಮಿಳಲ್ಲಿ ಅರ್ಧಮಾತ್ರೆಯ ಉಕಾರೋಚ್ಚಾರಣೆಯು ಬಹುಬಹು ವಾಡಿಕೆಯಾಗಿದೆ "ಇರುಕ್ಕಿರದು" ಎಂಬ ಮಾತಿನ ಕೊನೆಯ ಉಕಾರವು ಅರ್ಧಮಾತ್ರೆಯಾಗಿಯೇ ಉಚ್ಚರಿಸಲ್ಪಡುವುದು ವ್ಯಂಜನಾಂತ ಶಬ್ದಗಳಲ್ಲಿ ವ್ಯಂಜನವು ಕೇಳಬರುವುದಕ್ಕಾಗಿ ಅದಕ್ಕೆ ಅರ್ಧಮಾತ್ರೆಯ ಸ್ವರವನ್ನು ಸೇರಿಸಲೇಬೇಕು ಸಂಯುಕ್ತಾಕ್ಷರಗಳ ಉಚ್ಚಾರಣೆಯಲ್ಲಿಯೂ ಪ್ರತಿವ್ಯಂಜನದ ಕೊನೆಯಲ್ಲಿಯೂ ಅರ್ಧಮಾತ್ರೆಯ ಸ್ವರವನ್ನು ಸೇರಿಸಲೇಬೇಕಾಗಿದೆ ಈ ಅರ್ಥವನ್ನು ಇಟ್ಟುಕೊಂಡೇ ನಾಗವರ್ಮನು "ವ್ಯಂಜನಂಗಳರೆ ಮಾತ್ರಿಕೆಗಳ್" ಎಂದು ಬರೆದಿರುತ್ತಾನೆ

2. ಸಂಧಿಕಾರ್ಯ—"ಎರಡುಂ ಪಲವುಂ ವರ್ಣಂ ಪರಸ್ಪರಂ ಕೂಡುವಂದಮದು ಸಂಧಿ" ಎಂದು ಹೇಳಿದ ಮಾತ್ರಕ್ಕೆ ಸಂಧಿಯ ಸ್ವಭಾವವು ಚೆನ್ನಾಗಿ ಗೊತ್ತಾಗುವುದಿಲ್ಲ, ಆದುದರಿಂದ ಸಂಧಿಯೆಂಬ ಶಬ್ದದ ವ್ಯುತ್ಪತ್ತಿ ಮುಂತಾದ ವಿಷಯಗಳನ್ನು ವಿವರವಾಗಿ ವಿಚಾರಮಾಡುವುದು ಆವಶ್ಯಕವೆಂದು ತೋರುತ್ತದೆ "ಸಂಧಿಶಬ್ದವು ಗುಣಪ್ರತೀಕ ಪರ್ವ ಮುಂತಾದ ಅನೇಕಾರ್ಥವುಳ್ಳುದಾಗಿದ್ದರೂ ಪ್ರಕೃತದಲ್ಲಿ ಉತ್ಕೃಷ್ಟವಾದ ಸನ್ನಿಕರ್ಷಾರ್ಥಕವೆಂದು ತಿಳಿಯಬೇಕು ಇಲ್ಲಿ ಉತ್ಕರ್ಷವೆಂದರೆ ಪೂರ್ವೋತ್ತರವರ್ಣಗಳಿಗೆ ವಿರಾಮವಿಲ್ಲದೆ ಉಚ್ಚರಿಸುವುದು ಇದನ್ನೇ ಕೆಲವರು ಸಂಹಿತೆಯೆಂದೂ ಹೇಳುತ್ತಾರೆ ಸಮ್ ಎಂಬ ಉಪಸರ್ಗಪೂರ್ವಕವಾದ ಧಾ ಎಂಬ ಧಾತುವಿನ ಮೇಲೆ ಇ ಎಂಬ ಪ್ರತ್ಯಯವನ್ನು ಇಟ್ಟರೆ ಸಂಧಿ ಶಬ್ದವು, ತ ಪ್ರತ್ಯಯವನ್ನು ಇಟ್ಟರೆ ಸಂಹಿತಾ ಶಬ್ದವು ನಿಷ್ಪನ್ನವಾಗುವುದು ಇವೆರಡೂ ಒಂದೇ ಧಾತುವಿನಿಂದ ಹುಟ್ಟಿರುವುದರಿಂದ ಇವು ಪರ್ಯಾಯ ಶಬ್ದಗಳೆಂದು ತಿಳಿಯಬೇಕು ಪಾಣಿನಿ ವ್ಯಾಕರಣದಲ್ಲಿ ಹೇಳಿರುವ "ಪರಸ್ಸನ್ನಿಕರ್ಷಸ್ಸಂಹಿತಾ" ಎಂಬ ಸೂತ್ರಕ್ಕೆ ಒಂದು ವರ್ಣವನ್ನುಚ್ಚಾರಣೆ ಮಾಡಿ ಮತ್ತೊಂದು ವರ್ಣವನ್ನುಚ್ಚರಿಸುವುದಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಅರ್ಧಮಾತ್ರಾಕಾಲಾತಿರಿಕ್ತ ಕಾಲಾವ್ಯವಹಿತವಾಗಿ ಉಚ್ಚರಿಸುವುದೇ ಸಂಹಿತೆ (ಸಂಧಿ) ಎಂದು ಪತಂಜಲಿಗಳು ವ್ಯಾಖ್ಯಾನಮಾಡಿರುವರು ಇಂತಹ ಸಂಹಿತಾ ವಿಷಯದಲ್ಲಿ ವಿಧಿಸುವ ಲೋಪಾಗಮಾದೇಶಗಳನ್ನೇ ಸಂಧಿಕಾರ್ಯವೆಂದು ವ್ಯವಹರಿಸಿರುವರು" ಎಂಬು ವು|| ಕುಂಡಲಗಿರಿ ಆಚಾರ್ಯರವರು ತಮ್ಮ ಕರ್ನಾಟಕ ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ (ಪುಟ ೧೦೮) ಹೇಳಿರುತ್ತಾರೆ ಎರಡು ಮಾತ್ರೆಯಷ್ಟು ಕಾಲವನ್ನು. ಮೀರುವುದಾದರೆ ಸಂಧಿಯೇ ಇಲ್ಲವೆಂಬಂಶವನ್ನು ಜ್ಞಾಪಕದಲ್ಲಿಡಬೇಕು

೩. **ಸಂಧಿಕಾರ್ಯದ ಉದ್ದೇಶಗಳು**—ನಮ್ಮ ಮನಸ್ಸಿನಲ್ಲಿರುವ ಭಾವಗಳನ್ನು ಹೊರಪಡಿಸುವುದಕ್ಕಾಗಿ ನಾವು ಮಾತನಾಡುತ್ತೇವೆ ಅಥವಾ ಬರೆಯುತ್ತೇವೆ ನಮ್ಮ ಅರ್ಥವು ಸ್ಪಷ್ಟವಾಗಿ ತಿಳಿಯುವುದಲ್ಲದೆ, ನಮ್ಮ ವಾಕ್ಯಗಳಲ್ಲಿ ಉಚ್ಚಾರಣಾ ಸೌಲಭ್ಯವೂ ಸುಶ್ರಾವ್ಯತೆಯೂ ಇರಬೇಕು ತಕ್ಕಷ್ಟು ವಿರಾಮವಿಲ್ಲದೆ ಮಾತನಾಡಿಕೊಂಡು ಹೋಗುವುದು ಬಹು ಕಷ್ಟವಾದುದರಿಂದ ನಾವು ಎಲ್ಲೆಡೆಗಳಲ್ಲಿಯೂ ಸಂಧಿಮಾಡಿಕೊಂಡು ಹೋಗಬೇಕಾಗಿಲ್ಲ ಸಂಧಿಯಿಲ್ಲದ ಸ್ಥಳಗಳನ್ನೂ, ವಿಕಲ್ಪಸಂಧಿಯ ಸ್ಥಳಗಳನ್ನೂ, ನಿತ್ಯಸಂಧಿಯ ಸ್ಥಳಗಳನ್ನೂ, ನಾವು ತಿಳಿದಿರಬೇಕು. "ಸಂಹಿತೆಯಾದರೊ ವಕ್ತೃತಾತ್ಪರ್ಯವಿದ್ದಂತೆ ಲಕ್ಷ್ಯಗಳಲ್ಲಿರುವುದರಿಂದ ಮುಂದೆ ವಿವರಿಸುವ ಸಂಧಿಕಾರ್ಯಗಳು ಕೆಲವೆಡೆಗಳಲ್ಲಿ ನಿತ್ಯವಾಗಿಯೂ ಕೆಲವೆಡೆಗಳಲ್ಲಿ ವಿಕಲ್ಪವಾಗಿಯೂ ಕೆಲವೆಡೆಗಳಲ್ಲಿ ಬಾರದೆಯೂ ಇರಬೇಕಾಗುವುದು' ಎಂದು ಮ|| ಕುಂಡಲಗಿರಿಯಾಚಾರ್ಯವರು ಕರ್ಣಾಟಕ ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ ಹೇಳಿರುತ್ತಾರೆ. ಭಟ್ಟಾಕಳಂಕನು ೩೪ ನೆಯ ಸೂತ್ರದ ವೃತ್ತಿಯಲ್ಲಿ

> **ಪದೇಷು ಸಂಹಿತಾ ನಿತ್ಯಾ ನಿತ್ಯಾಧಾತೂಪಸರ್ಗಯೋಃ |**
> **ನಿತ್ಯಾ ಸಮಾಸೇ ವಾಕ್ಯೇಷು ಸಾವಿವಕ್ಷಾ ಮಪೇಕ್ಷತೇ ||**

ಎಂದು ಬರೆದಿರುತ್ತಾನೆ "ಈ ಶ್ಲೋಕದಲ್ಲಿ 'ಪದೇ' ಎಂದರೆ ಪ್ರಕೃತಿಪ್ರತ್ಯಯ ಸಮುದಾಯ ರೂಪವಾದ ಅಖಂಡ ಪದದಲ್ಲ ಎಂದು ತಾತ್ಪರ್ಯವು, ಕರ್ಣಾಟ ಭಾಷೆಯಲ್ಲಿ ಉಪಸರ್ಗಗಳಿಲ್ಲವಾದುದರಿಂದ ಸಂಸ್ಕೃತಾಭಿಪ್ರಾಯದಿಂದ "ಧಾತೂಪಸರ್ಗಯೋಃ" ಎಂದು ಹೇಳಲ್ಪಟ್ಟಿದೆ, ಅಥವಾ ಕರ್ಣಾಟಭಾಷೆಯಲ್ಲಿ ಕೆಲವು ಧಾತುಗಳಿಗೆ ಕೆಲವು ಅವ್ಯಯಗಳನ್ನು ಅನುಪ್ರಯೋಗಮಾಡುವುದರಿಂದ ಉಪಲಕ್ಷಣದಿಂದ ಉಪಸರ್ಗಪದದಿಂದ ಅವುಗಳನ್ನು ಗ್ರಹಿಸಿ, ಅಲ್ಲಿ ಸಂಹಿತೆಯು ನಿತ್ಯವೆಂದು ಹೇಳಬಹುದು, ಸಮಾಸಃ ಎಂಬುದು ಪದಗಳ ಸಮುದಾಯರೂಪವಾದ ಒಂದು ಪದವಾಗಿದ್ದರೂ ಗೋಬಲೀವರ್ದನ್ಯಾಯದಿಂದ ಹೇಳಲ್ಪಟ್ಟಿದೆಯೆಂದು ತಿಳಿಯಬೇಕು ಇದರಿಂದ ಉಕ್ತವಾದ ತ್ರಿವಿಧಲಕ್ಷ್ಯಗಳಲ್ಲಿಯೂ ಸಂಹಿತೆ ನಿತ್ಯವಾಗಿರುವುದು * * (ಗದ್ಯಗ್ರಂಥಗಳ) ವಾಕ್ಯಗಳಲ್ಲಿಯಾದರೋ, ಸಂಹಿತೆಯನ್ನು ವಕ್ತೃತಾತ್ಪರ್ಯಾನುಗುಣವಾಗಿ ಅಂಗೀಕರಿಸುವುದರಿಂದ ಸೂತ್ರಕಾರರು ನಿತ್ಯವೆಂದು ಹೇಳಿರುವ ವಿಧಿಗಳೂ ಪ್ರವೃತ್ತ್ಯಪ್ರವೃತ್ತಿಗಳಿಂದ ವಿಕಲ್ಪವಿಧಿಗಳಂತೆ ರೂಪದ್ವಯಕ್ಕೆ ಸಾಧಕಗಳಾಗುವುವು" ಎಂದು ಕುಂಡಲಗಿರಿಯಾಚಾರ್ಯರವರು ಮೇಲಣ ಶ್ಲೋಕಕ್ಕೆ ತಮ್ಮ ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ ವ್ಯಾಖ್ಯಾನವನ್ನು ಮಾಡಿರುತ್ತಾರೆ (ಪುಟ ೧೧೦-೧೧೧) ಸಮಾಸಪದಗಳಲ್ಲಿಯೂ ನಾಮಪದ ಕ್ರಿಯಾಪದಾದಿಗಳಲ್ಲಿಯೂ, ಉಪಸರ್ಗಯುಕ್ತಧಾತುಗಳಲ್ಲಿಯೂ ಸಂಧಿಕಾರ್ಯವು ನಿತ್ಯವೆಂದು ಹೇಳಿದಂತಾಯಿತು ಸಂಧಿಕಾರ್ಯವನ್ನು ನಿಷೇಧಿಸಿರುವ ಸ್ಥಳಗಳನ್ನು ವಿಚಾರಮಾಡುವುದರಿಂದ ಸಂಧಿಕಾರ್ಯದ ಲಕ್ಷಣವು ಹೊರ

ಪಡುವುದಾದಕಾರಣ ಆ ವಿಷಯವನ್ನು ಮೊದಲು ವಿಚಾರಮಾಡುವುದು ಉಚಿತವೆಂದು ತೋರುತ್ತದೆ.

4. ಸಂಧಿಯಿಲ್ಲದ ಸ್ಥಳಗಳು—ಸಾಮಾನ್ಯವಾಗಿ ಎಲ್ಲಿ ಹೆಚ್ಚು ವಿರಾಮವನ್ನು ತೆಗೆದುಕೊಳ್ಳುವುದು ಅವಶ್ಯಕವೋ, ಎಲ್ಲಿ ದುಃಪ್ರತೀತಿ ಹುಟ್ಟುವುದೋ, ಎಲ್ಲಿ ಶ್ರುತಿ ಕಷ್ಟವಾಗುವುದೋ ಅಲ್ಲಿ ಸಂಧಿಯಿಲ್ಲವೆಂದು ಹೇಳಬಹುದು. ಹೇಗೆಂದರೆ—

(೧) ಪ್ಲುತ ಸಂಜ್ಞಕವಾದ ಸ್ವರಗಳಿಗೆ ಸ್ವರಪರವಾಗಲು ಸಂಧಿಯಿಲ್ಲ. ಉದಾಹರಣೆ—ಕು ಕೂ ಕೂ ಎಂದು ಕೋಗಿಲೆ ಕೂಗಿತಾಗಳ್, ಹಾ! ರಾಮಾ ಎಂದು ಸೀತೆ ಬಾಯಿಬಿಟ್ಟಳ್, ಅಣ್ಣಾ, ಇಲ್ಲಿ ಬಾ.

(೨) ಅಕಾರಾದಿಸ್ವರಗಳಿಗೆ ಋ ೠ ವರ್ಣಗಳು ಪರವಾದಾಗ ಸಂಧಿಯಿಲ್ಲ. ಉದಾಹರಣೆ—ಅಮಸದ ಋತು, ಆ ಋಕಾರಂ, ಮುನಿಋದ್ಧಿಪ್ರಾಪ್ತಂ. ಸ್ತ್ರೀ ಋತುಮತಿ, ಕ್ರತು ಋತ್ವಿಜರ್, ಭೂ ಋಜುವಲ್ಲು, ಪಿತೃಋಣಿ, ಋಷಿಗ ಋದ್ಧಿ, ಗೋಋಷಿಗ, ಗ್ಲೌ ಋಕ್ಷಪತಿ ಎನ್ನ ೠಕಾರಂ-ಇತ್ಯಾದಿಗಳು

(೩) ಅಕಾರಕ್ಕೆ ಅವರ್ಣವು ಏ ಔ ಕಾರಂಗಳು ಪರವಾಗಲು ಸಂಧಿಯಿಲ್ಲ. ಉದಾಹರಣೆಗಳು ಆ ಅರಸಂ, ಆ ಅಂಬ, ಮೃಡನಾ ಅರ್ಧೇಂದು, ಆ ಆಜ್ಞೆ, ಆ ಆಸ, ಆ ಆಳು, ಆ ಐಶ್ವರ್ಯಂ, ಆ ಔನ್ನತ್ಯಂ, ಆ ಏದೆ— ಇತ್ಯಾದಿಗಳು

(೪) ಸ್ವರಾಂತಗಳಾದ ನಿಪಾತಗಳಿಗೆ ಸ್ವರಪರವಾಗಲು ಸಂಧಿಯಿಲ್ಲ. ಭಟ್ಟಾಕಳಂಕನು "ಏವಾದಯೋ ನಿಪಾತಾಶ್ಚ" ಎಂದು ಹೇಳಿ, ಆಕೃತಿಗಣವೊಂದನ್ನು ಕೊಟ್ಟಿದ್ದಾನೆ ಅವುದೆಂದರೆ—ಎಮ, ನಾಡೆ, ಎಷ, ನೆಱೆ, ಮಿಗೆ, ಕಡು, ಅಃ, ಆಃ, ಅ, ಆ, ಉಃ, ಊಃ, ಉ, ಊ, ಎ, ಏ, ಹೋ, ಅಹೋ, ಓಹೋ, ಹೋಹೋ, ಅಯೊ, ಅಯ್ಯೋ, ಎಲ, ಎಲೇ, ಎಲಮು, ಎಲಮೇ, ಅರೆ, ಅರಮೆ, ಅರವೃಳ್, ಅಲ್ತೆ, ಅಲ್ತೇ, ಛೀ, ಛೀ, ನಿನ್ನೆ, ಮೊನ್ನೆ, ಗಡಾ, ಗಡ, ಗಳಾ, ಅಕ್ಕಟ, ಅಕ್ಕಟಾ

ಉದಾಹರಣೆ—

ಅರಮೆ! ಅರಲ್ದತಾವರೆ?

ಅರೆ ಎಡೆ ಹಸ್ತಿ ಶಿಕ್ಷಣ ವಿಚಕ್ಷಣರಿಂ | ಎಲ! ಇದಲ್ತೆತುಹಿನಶೈಲೇಂದ್ರ
ದುತ್ತುಂಗಸಾನುಗಳ್!

ಅಯ್ಯೋ! ಇದೇಕಿಂತಾದುದು?

ರಮ್ಯಮಾವುದೋ ಅದರಿಂ,

ಅಹೋ! ಇರಲಿಂ ಪೋಲ್ವರ್ ಮಾಹಾತ್ಮ್ಯಂ!
ಅಯ್ಯೋ! ಇಂದ್ರಂಗೆ ಕೇಡಾಯ್ತು!
ಹೋಹೋ! ಎಮಗಿಂತಾಯ್ತು!
ಆಃ! ಎಂತೆಂತೊ! ಕಪ್ಪನೊಳ್ಕಿತ್ತಯ್ತು!
ಏನೇನೋ! ಓದಿನಪರಿ ಲೇಸು ಲೇಸು!
ಎಡರಿದನೊ? ಅವನ ನೊಸಲಕ್ಕರಂ ತೊಡೆದುದು!
ಮುತ್ತಿದನೊ? ಇಂದುಕೋಟಿ ಧೂಳೀಪಟ್ಟಂ!
ನಿನಗಕ್ಕುಮ! ಅಬ್ಜಗರ್ಭನಾಯುಂ ಶ್ರೀಯುಂ!
ಸಿಂಗಮುಕ್ಕೆಮ! ಅಂಜಂ!
ಆನಾ? ಇಮ್ಮಡಿಯಾ? ಎರಳ್ಕುದುರೆಯಾ? ದರ್ವಿಗರಳ್ಕುದುವಾ?
ಹಾಲಾ! ಅಮೃತಾ! ಇನ್ನೇಂ?
ಆನೆಯೋ! ಅದ್ರಿಯೋ?
ನಿಜಮನಃಪ್ರಿಯನಪ್ಪದನೊ? ಅಗ್ಗಳೋ
ಆತನೇ ಇಂದ್ರಂ!
ಆತನೇ ಈತಂ!
ಇನಿಯನೆ? ಬೆಳ್ಳಿದಿಂದಸಿಯನಿಪನ? ಆ! ಪಿರಿದಪನಿತ್ತುದಂನೆನೆಪನ? ಛೀ!
ಆದಂಸನಯಂ!
ಸುಡಿಪನ? ಕಾವುದನ! ಪೇ
ಗೆಡದಿರು! ಜಪನಿಟ್ಟುದಕ್ಕೆ ಸಿಸಗೇವುದನೇಂ
ಸುಡದನ? ಅದುಕಬ್ಬದು! ಸುಃ!
ಣ್ಣುಡಿದುದು ತಪ್ಪುಗುಸು ಗಂಗಹೂವಾಮಣಿಯಾ?

(೫) ಅವರ್ಣಕ್ಕೆ ಸ್ವರಾದಿನಿಪಾತಗಳು ಪರವಾಗಿರಲು ಸಂಧಿಯಿಲ್ಲ
ಉದಾಹರಣೆ—ಕಂತುವ ಆ! ಕಪ್ಪು ಎಲ್ಲ ನೇತ್ರಂ ಮುಖದಂ!
ಸತಿಯಾ ಆ! ಕಣ್ಣು ಮಗು ಬೆಳಗಿದುದಿಳೆಯುಂ!
ಎನ್ನ ಊ! ಪಾಪಫಲಂ! ಇತ್ಯಾದಿಗಳು

(೬) ಅಕಾರಾಂತಗಳಾದ ಪೊಸತ್ತಾದಿ ಗಣಪಠಿತಗಳಾದ ಶಬ್ದಗಳಿಗೆ ಸ್ವರವು ಪರವಾಗಿರಲು ಸಂಧಿಯಿಲ್ಲ ಪೊಸತ್ತಾದಿಗಣದಲ್ಲಿ ಪೊಸತು, ಪೊರಗು, ಒಳಗು, ಪಳದು, ಎಳದು ಎಂಬ ಶಬ್ದಗಳು ಸೇರಿವೆ
ಉದಾಹರಣೆ ಪೊಸ ಅಲಿಕೆ, ಎಳ ಅಂಚೆ, ಪೊರ ಅಡಿ, ಪಳ ಅಲಗು, ಇತ್ಯಾದಿ

(೭) ಏಕ್ಕೃತಿಯಿಂದ ಅಕಾರಾಂತವಾದ ಅನುಕರಣವು ಸ್ವರಪರಕವಾಗಿರಲು ನಿತ್ಯವಾಗಿ ಪ್ರಕೃತಿಭಾವವನ್ನು ಹೊಂದುವುದು ಉದಾಹರಣೆ—

ದಂಭೈರ್ನಾಯುಃ ಕ್ರಿಯತೇ ಸಧರ್ಮ ಎಂ |
ದಂಭೋಜಗರ್ಭಂ ನುಡಿದಂ ಸುಮಾರ್ಗಮಂ ||
ಮೂಲಸ್ಯ ನಾಶೋ ಬಲವದ್ವಿರೋಧ ಎಂ |
ದೀ ಲೋಕದೊಳ್ ಪೇಳ್ವುದೇನನರ್ಥಮೋ ||

ಇಲ್ಲಿಯವರೆಗೂ ಸ್ವರಸಂಧಿ ನಿಷೇಧದ ವಿಷಯವನ್ನು ಹೇಳಿಕೊಂಡು ಬಂದುದಾಯಿತು. ಇನ್ನು ವ್ಯಂಜನ ಸಂಧಿಯ ವಿಷಯವನ್ನು ವಿಚಾರಮಾಡಿ ನೋಡೋಣ.

(೮) ಸಮಾಸ ವಿಷಯದಲ್ಲಿ ಪರಪದದಾದಿಯ ಚ ಟ ಕಾರಗಳಿಗೆ ತೃತೀಯತ್ವವಿಲ್ಲ ಉದಾಹರಣೆ—ಕಡುಚಾಗಿ, ಕಣ್ಚಲ್ಲಂ, ಕಡುಟಕ್ಕು, ಕಳ್ಟಪ್ಪಣಂ

(೯) ಆದೇಶವಾಗಿ ಬಂದ ರೇಫ ಳ ಕಾರಗಳ ಮುಂದಿನ ಉತ್ತರಪದಾದಿಯ ಕ ತ ಪ ಗಳಿಗೆ ಗ ದ ಬ ಗಳಿಲ್ಲ ಉದಾಹರಣೆ—ಮಾರ್ಕೋಲ್, ಬೇರ್ತಡೆ, ಬೇರ್ಪಟ್ಟಂ, ಕಾಳ್ಕಿಚ್ಚು, ಕೀಳ್ಪೊಟ್ಟೆ, ನಾಳ್ತೊಲೆ.

(೧೦) ದುಃಪ್ರತೀತಿಯಾಗಲಿ ಅಸಹ್ಯೋಕ್ತಿಯಾಗಲಿ ಕಾಣಬರುವಂತೆ ಅಕ್ಷರಗಳನ್ನು ಸೇರಿಸಿ ಬರೆಯಕೂಡದು ಉದಾಹರಣೆ——ಆಸೆ ಗಣಿತಾ ಎಂಬುದನ್ನು ಆಸೆಗಣಿತಾ ಎಂದು ಬರೆದರೆ ಆ ಸೆಗಣಿ ತಾ ಎಂಬ ದುಃಪ್ರತೀತಿ ಹುಟ್ಟಬಹುದು, ಹೇ ಲತಾಕೋಮಲಾಂಗಿ ಎಂಬುದನ್ನು ಹೇಲತಾಕೋಮಲಾಂಗಿ ಎಂದು ಬರೆದರೆ ಹೇಲ ತಾ ಕೋಮಲಾಂಗಿ ಎಂಬ ಅಸಹ್ಯೋಕ್ತಿಗೆ ಅವಕಾಶವುಂಟಾಗುತ್ತದೆ.

(೧೧) ಶ್ರುತಿ ಕಷ್ಟವಾಗುವಂತೆ ಸಂಧಿಯನ್ನು ಮಾಡಬಾರದು—

ಎರಡುಂ ರೇಫೆಗಳಂ ತಂ |
ದುರವಣೆಯಿಂ ಕೂಡಿದಂತೆವೋಲ್ ಶ್ರುತಿಕಷ್ಟಂ ||
ಬರೆ ಸಂಧಿಮಾಡಲಾಗದು |
ಕರಡೆಯ ಗಿರ್ಗಟದ ದನಿವೋಲಮರವವೆಂದುಂ ||೬೩||

ಎಂದು ಕೇಶಿರಾಜನು ಹೇಳುತ್ತಾನೆ ಕರಡೆಯ ಮತ್ತು ಗಿರ್ಗಟದ ಧ್ವನಿಗಳು ಶ್ರುತಿಕಷ್ಟವಾಗಿ ಹೇಗಿರುವುವೋ ಹಾಗೆಯೇ ಇವೂ ಶ್ರುತಿಕಷ್ಟವಾಗಿರುವುವು. ದೇವರ್ ರಕ್ಷಿಸುಗೆ ಎಂಬುದನ್ನು ದೇವರ್ರಕ್ಷಿಸುಗೆಯೆಂದು ಬರೆಯಕೂಡದು.

(೩) ಅಕ್ಷರ ದ್ವಿತ್ವದಿಂದ ಉಚ್ಚಾರಣೆಯ ಸೌಲಭ್ಯವೂ ಸುಶ್ರಾವ್ಯತೆಯೂ ಕೆಲವೆಡೆಗಳಲ್ಲಿ ಕೆಡುವುದರಿಂದ ಅದು ಅಂತಹಯೆಡೆಗಳಲ್ಲಿ ಕೂಡದು. ನಸಮಾಸೇ (೬೦), ಅಳ್ಕುಳಃ (೬೧), ಕೃತಿ (೬೨), ಇನುಪಿ (೬೩)'' ಎಂಬ ಭಟ್ಟಾಕಳಂಕನ ಸೂತ್ರಗಳನ್ನು ಜ್ಞಾಪಕದಲ್ಲಿಡಬಹುದು. ತುಶಬ್ದಾಂತ ನಪುಂಸಕಲಿಂಗ ಸಂಬಂಧಿಯಾದ ತಕಾರಕ್ಕೆ ದ್ವಿತ್ವವು, ಅಳ್ ಕಳ್ ಉಳ್ ಎಂಬ ಧಾತುಗಳ

ಳಕಾರಕ್ಕೆ ಸ್ವರವು ಪರವಾದಾಗ ದ್ವಿತ್ವವು, ನ ಣ ಲ ಯ ಳ ತ ಟ ಕಾರಾಂತ ಧಾತುಗಳಿಗೆ ಸ್ವರಾದಿ ಕೃತ್ಪ್ರತ್ಯಯವಾಗಲಿ ಇಸು ಪ್ರತ್ಯಯವಾಗಲಿ ಪರವಾದಾಗ ದ್ವಿತ್ವವು ಬರುವುದಿಲ್ಲ

ಉದಾಹರಣೆಗಳು—

ಮೆಲ್ಲಿತು + ಅದಿ = ಮೆಲ್ಲದಿ, ಮೆಲ್ಲಿತ್ತದಿ ಎಂದಾಗುವುದಿಲ್ಲ, ಅಳ್ + ಅರ್ = ಅಳರ್, ಕಳ್ + ಅರ್ = ಕಳರ್, ಉಳ್ + ಅಂ = ಉಳಂ; ತಿನ್ + ಉತ್ತುಂ = ತಿನುತ್ತುಂ, ಉಣ್ + ಉತಂ = ಉಣುತಂ, ಮೆಲ್ + ಉತ್ತುಂ = ಮೆಲುತ್ತುಂ, ಪೊಯ್ + ಉತ್ತೆ = ಪೊಯುತ್ತೆ, ತಿನ್ + ಇಸು = ತಿನಿಸು, ಉಣ್ + ಇಸು = ಉಣಿಸು ಕೊಲ್ + ಇಸು = ಕೊಲಿಸು, ಬಯ್ + ಇಸು = ಬಯಿಸು, ಉಳ್ + ಇಸು = ಉಳಿಸು, ನುತ್ + ಇಸು = ನುತಿಸು, ನಡು + ಇಸು = ನಡಿಸು

(h) ತ್ರಿಪ್ರಭೃತಿ ವ್ಯಂಜನಗಳಿದ್ದರೂ ದ್ವಿತ್ವವಿಲ್ಲ "ಮಹಾಭಾಷ್ಯಾದಿಕಾರರೂ ದ್ವಿತ್ವಾನವಸ್ಥೆಯನ್ನು ಶಂಕಿಸಿ, ಸ್ವರಾವ್ಯವಹಿತವಾಗಿ ಮೂರು ವ್ಯಂಜನಕ್ಕಿಂತಲೂ ಹೆಚ್ಚು ವ್ಯಂಜನೋಚ್ಚಾರಣದಲ್ಲಿ ಪ್ರಯೋಜನವಿಲ್ಲವೆಂದು ತ್ರಿಪ್ರಭೃತಿವ್ಯಂಜನಗಳಿದ್ದರೆ ದ್ವಿತ್ವವು ಬರುವುದಿಲ್ಲವೆಂದು ಸಮಾಧಾನವನ್ನು ಹೇಳಿರುವರು" ಎಂದು ಮ|| ಕುಂಡಲಗಿರಿಯಾಚಾರ್ಯರವರು ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ (ಪುಟ. ೧೬೯) ಹೇಳಿರುತ್ತಾರೆ. "ಇವರ್ ಭ್ರಷ್ಟರ್" ಎಂಬುದನ್ನು ಇವರ್ಭ್ರಷ್ಟರ್ ಎಂದು ಬರೆಯಕೂಡದು

(c) "ನಲಘ್ವಾದಿ ಲಘೂಪಾಂತ್ಯಾದಲೋಗದವಜೋ ವೃತ್ತೌ (೭೩) ಎಂಬ ಭಟ್ಟಾಕಳಂಕನ ಸೂತ್ರವನ್ನು ಜ್ಞಾಪಕದಲ್ಲಿಡಬಹುದು ಲಘ್ವಕ್ಷರಾದಿಯಾಗಿಯೂ ಲಘ್ವಕ್ಷರೋಪಾಂತ್ಯವಾಗಿಯೂ ಇರುವ ಅನೇಕ ಸ್ವರವುಳ್ಳ ಲಕಾರಾಂತವಲ್ಲದ ಶಬ್ದದ ಮುಂದಿನ ಗ ದ ವ ಜ ಕಾರಗಳಿಗೆ ಕೃತ್ತದ್ಧಿತ ಸಮಾಸಾದಿ ವೃತ್ತಿವಿಷಯದಲ್ಲಿ ದ್ವಿತ್ವವು ಬರುವುದಿಲ್ಲ

ಉದಾಹರಣೆಗಳು—

ಉಸಿರ್ + ದಂ = ಉಸಿರ್ದಂ, ಹೀಗೆಯೇ ಉಸಿರ್ದನಂ, ಉಸಿರ್ವಂ, ಉಸಿರ್ವನಂ, ಪೊಗಳ್ದಂ, ಪೊಗಳ್ದನಂ, ಜಗುಳ್ದಂ, ಜಗುಳ್ದೊಡೆ ಮೊದಲಾದುವು ಕೃದ್ವೃತ್ತಿಗೆ, ಬೆಮರ್ವಂ, ಸೆಗಳ್ಗಂ, ಮುಗುಳ್ವೊಲ್, ಕದಿರ್ವಳಂ ಮುಂತಾದುವು ತದ್ಧಿತವೃತ್ತಿಗೆ, ತಳಿರ್ಗಂಪು, ಮುಗುಳ್ಗಾಯ್, ಬೆಮರ್ವನಿ ಮುಂತಾದುವು ಸಮಾಸವೃತ್ತಿಗೆ ಉದಾಹರಣೆಗಳಾಗಿವೆ

5. ನಿತ್ಯಸಂಧಿಯ ಸ್ಥಳಗಳು—ಹಿಂದೆ ಹೇಳಿರುವ ಸಂಧಿನಿಷೇಧ ಸ್ಥಳಗಳನ್ನು ಪರ್ಯಾಲೋಚಿಸಿ ನೋಡುವಲ್ಲಿ ಸಂಧಿಕಾರ್ಯದ ಉದ್ದೇಶಗಳು ತಕ್ಕಮಟ್ಟಿಗೆ ಸ್ಪಷ್ಟಪಡುವುವು. ಉಚ್ಚಾರಣೆಯ ಸೌಲಭ್ಯಕ್ಕಾಗಿಯೂ ಸುಶ್ರಾವ್ಯತೆಗಾಗಿಯೂ ಕೆಲ

ವೆಡೆಗಳಲ್ಲಿ ಸಂಧಿಕಾರ್ಯವು ಅವಶ್ಯಕ. ತಿಙ್ಸುಬಂತ ಪದಗಳಲ್ಲಿಯೂ ಉಪಸರ್ಗಯುಕ್ತ ಧಾತುಗಳಲ್ಲಿಯೂ ಸಮಾಸಪದಗಳಲ್ಲಿಯೂ ಸಂಧಿಕಾರ್ಯವು ನಿತ್ಯ.

ಸಂಧಿವಿಷಯವನ್ನು ಸ್ವರಸ್ವರಸಂಧಿ, ಸ್ವರ ವ್ಯಂಜನಸಂಧಿ, ವ್ಯಂಜನ ಸ್ವರಸಂಧಿ, ವ್ಯಂಜನ ವ್ಯಂಜನ ಸಂಧಿ ಎಂದು ನಾಲ್ಕುಭಾಗವಾಗಿ ವಿಂಗಡಿಸಬಹುದು. ಆದರೆ ಮೊದಲನೆಯದಾದ ಸ್ವರಸ್ವರ ಸಂಧಿಯನ್ನು ಸ್ವರಸಂಧಿಯೆಂದು, ಉಳಿದ ಮೂರನ್ನೂ ವ್ಯಂಜನಸಂಧಿ ಯೆಂದು ಭಾವಿಸುವುದು ವಾಡಿಕೆಯಾಗಿದೆ.

ಸ್ವರಸಂಧಿಯ ತತ್ತ್ವ.

ನಾಮರೂಢಿಯುಳಿಯದ ಪಕ್ಷದಲ್ಲಿ ಪೂರ್ವಸ್ವರಕ್ಕೆ ಲೋಪಬರುವುದು. ನಾಮರೂಢಿಯುಳಿಯುವ ಎಡೆಗಳಲ್ಲಿ ವಕಾರಾಗಮವೋ ಯಕಾರಾಗಮವೋ ಆಗುವುದು. ಉಚ್ಚಾರಣಾಸೌಲಭ್ಯಕ್ಕೂ ಸಂಪ್ರದಾಯಕ್ಕೂ ಎಲ್ಲಿ ವಕಾರಾಗಮವು ಉಚಿತವೋ, ಎಲ್ಲಿ ಯಕಾರಾಗಮವು ಉಚಿತವೋ ಅದನ್ನು ನಿರ್ಧರಿಸುವುದೇ ಸ್ವರಸಂಧಿಯ ಮುಖ್ಯವಾದ ಕೆಲಸ.

A. ಲೋಪಸಂಧಿ—'ಅನಾಮಹಾನೌ' ಎಂಬ ಭಟ್ಟಾಕಳಂಕನ ಸೂತ್ರವನ್ನು ಜ್ಞಾಪಕದಲ್ಲಿಡಬಹುದು, ಸ್ವರಕ್ಕೆ ಸ್ವರವು ಪರವಾಗಲು, ನಾಮಹಾನಿಯಾಗದಿದ್ದರೆ, ಪೂರ್ವಸ್ವರಕ್ಕೆ ಲೋಪವು ಬರುವುದು ಎಂಬುದೇ ಇದರ ಅರ್ಥ. ಪತಿ+ಈತಂ ಎಂಬುದನ್ನು ಪತೀತಂ ಎಂದು ಸಂಧಿಮಾಡಿದರೆ ಪತಿ ಎಂಬ ರೂಪವು ಹಾನಿಯಾಗುವುದು. ಎನ್ನ+ಅರಸ ಎಂಬುದನ್ನು ಎನ್ನರಸ ಎಂದು ಸಂಧಿಮಾಡಿದರೆ ಎನ್ನ ಎಂಬ ರೂಪವು ಪೂರ್ವದಲ್ಲಿದ್ದಂತೆಯೇ ಇರುವುದು. ಎನ್ನರಸ, ತನ್ನಾಳ್, ಗುಣಾಭರಣ, ಸುರ್ಯೊಡೆಯಂ, ಮನೆಯಲ್ಲಿರ್ದಂ, ಕೂಡುಂಡಂ, ಕಂಡುಂಡಂ, ಕೂಡಿದಳ್, ಕ್ರಮದಾಯತ್ತ, ಮುಂತಾದುವು ಲೋಪಸಂಧಿಗುದಾಹರಣೆಗಳು. ಈ ಲೋಪಸಂಧಿಯ ಪ್ರಭಾವವೇ ಕನ್ನಡದಲ್ಲಿ ಹೆಚ್ಚಾಗಿದೆ. ಪೂರ್ವಕವಿಗಳ ಗ್ರಂಥಗಳಲ್ಲಿ ಲೋಪಸಂಧಿಯು ಹೇರಳವಾಗಿ ಸಿಕ್ಕುವುದು

ಎನ್ನಯ್ಯಂಗಳ್ಕೆ ಮುನ್ನಂ ನಡಸಿದತಿರಥಂಗಳ್ಕೆ ಮುನ್ನಿನೆಗಳ್ಕಂ |
ಮುನ್ನಾವೊಂಗಂಡ ನಿಂತನ್ನೊಡನೆಸಿತು ಭರಂಗೆಯ್ದು ನಿಂತೊಳ್ಳಿತೆಚ್ಚಂ ||
ತನ್ನೊಂದಾಯಕ್ಕೆ ಮಕ್ಕಳ್ಗೆಸಿದ ಮುನಿದಸಂದೆಲ್ಲಮಂ ಸುಟ್ಟಿ ಸುತ್ತಂ |
ತನ್ನಂಪಾಯ್ವಂಬಿನಂಬಿಂ ಕಡಿದನೊಡನೆ ಪಾರ್ಕೊಂಡು ಗಾಂಡೀವಧನ್ವಂ ||

ಎಂಬ ಒಂದು ಪದ್ಯದಲ್ಲಿ ೧೫ ಲೋಪಸಂಧಿಗಳಿರುವುವು

B. ವತ್ವಸಂಧಿ – 'ದಾನ್ತೋವರ್ಕಾ' 'ಅತಪಿಷ್ಟ್ವೇ', ಎಂಬ ಭಟ್ಟಾಕಳಂಕನ ೩೭, ೩೮ ನೆಯ ಸೂತ್ರಗಳನ್ನು ಜ್ಞಾಪಕದಲ್ಲಿಡಬಹುದು. ಉ, ಊ, ಋ, ೠ, ಌ, ೡ, ಔ ಕಾರಗಳಿಗೆ ಸ್ವರವು ಪರವಾಗಲು, ಅಕಾರಕ್ಕೆ ಉ, ಊ, ಒ, ಓ, ಗಳು ಪರವಾಗಲು ವಕಾರಾಗಮವು ಆಗುವುದು ಎಂದು ಈ ಸೂತ್ರಗಳ ಅರ್ಥ

ಉದಾಹರಣೆಗಳು —

ಮಾತೃ + ಇಂದಂ = ಮಾತೃವಿಂದಂ, ಪೂ + ಒಳ್ತು = ಪೂವೊಳ್ತು,
ಗೋ + ಇಂ = ಗೋವಿಂ, ಅ + ಉದಕಂ = ಅವುದಕಂ;
ೠ + ಎಂದಂ = ೠವೆಂದಂ, ಅ + ಉದ್ಯಾನಂ = ಅವುದ್ಯಾನಂ;
ೡ + ಎಂದಂ = ೡವೆಂದಂ, ಅ + ಊರು = ಅವೂರು,
ನೌ + ಇದು = ನೌವಿದು, ಅ + ಒಳೆ = ಅವೊಳೆ,
ವಧು + ಇವಳ್ = ವಧುವಿವಳ್, ಅ + ಓಲೆ = ಅವೋಲೆ

C. **ಯತ್ವಸಂಧಿ**— ಅ, ಇ, ಈ, ಎ, ಏ, ಐಕಾರಗಳಿಗೆ ಸ್ವರಂ ಪರವಾಗಲು ಯಕಾರಾಗಮವು ಆಗುವುದು, ಮತ್ತು ಸಂಸ್ಕೃತ ಶಬ್ದಗಳ ಅಕಾರಾಂತ ಪ್ರಕೃತಿಗಳಿಗೆ ಇಸು ಪ್ರತ್ಯಯವು ಪರವಾಗಲು ಅದಂ ಮತ್ತು ಅನುಕೃತಿ ಪದಕ್ಕೆ ಅನುಕೃತಿಸ್ವರಂ ಪರವಾಗಲು ಯಕಾರಾಗಮವು ಆಗುವುದು

ಉದಾಹರಣೆಗಳು

ಅ + ಇದರ್ = ಅಯಿದರ್, ನಿಷ್ಕ್ಯಾವಿ + ಅವಳ್ = ನಿಷ್ಕ್ಯಾವಿಯಾವಳ್,
ಶ್ರೀ + ಅಂ = ಶ್ರೀಯಂ, ಈ + ಅರ್ = ಈಯರ್,
ಸತೆ + ಎಂದು = ಸತೆಯೆಂದು, ಉಷೇ + ಎಂದು = ಉಷೇಯೆಂದು,
ಭೈಭೈ + ಎಂಬಿನಂ = ಭೈಭೈಯೆಂಬಿನಂ, ಶುದ್ಧ + ಇಸು = ಶುದ್ಧಯಿಸು,
ಬರ + ಇಸು = ಬರಯಿಸು, ಗಳಗಳ + ಎನುತಂ = ಗಳಗಳಯೆನುತಂ

D **ಯಕಾರ ವಕಾರಗಳ ವಿಕಲ್ಪ**— ಸ್ವರಗಳ ಮುಂದೆ ಉ ಊ ಒ ಓ ಕಾರಗಳು ಪರವಾಗಲು ವಿಕಲ್ಪವಾಗಿ ವಕಾರಾಗಮವೂ ಯಕಾರಾಗಮವೂ ಆಗುವುವು. ಬಹುಶಃ ದೇಶಭೇದದಿಂದ ಹೀಗಾಗಿದ್ದರೂ ಇರಬಹುದು

ಉದಾಹರಣೆಗಳು.

ಈ + ಉದ್ಯಾನ = ಈವುದ್ಯಾನ, ಈ + ಉದ್ಯಾನ = ಈಯುದ್ಯಾನ
ಅ + ಊರು = ಅವೂರು, ಅ + ಊರು = ಅಯೂರು
ಅ + ಒಕ್ಕಲ್ = ಅವೊಕ್ಕಲ್, ಅ + ಒಕ್ಕಲ್ = ಅಯೊಕ್ಕಲ್
ಅ + ಓದು = ಅವೋದು, ಅ + ಓದು = ಅಯೋದು

E. **ರೇಫಾದೇಶ**— ಅವ್ಯಯಗಳಾದ ಪದಗಳಾದ ಅದು, ಇದು, ಉದು, ಎಲ್ಲ ಎಂಬ ಶಬ್ದಗಳಿಗೆ ಪರವಾಗಿ ಬರುವ ಮಕಾರಸ್ಥಾನದಲ್ಲಿ ರು ಎಂಬಾದೇಶವು ಆಗುವುದು.

ಉದಾಹರಣೆಗಳು —

ಅ + ಮಿತು = ಅದಿತು, ಈ + ಮಿತಿ = ಈದಿತಿ, ಊ + ಮಿತಿ = ಊದಿತಿ;
ಎಲ್ಲ + ಮಿತುಗಳು = ಎಲ್ಲರಿತುಗಳು.

ವ್ಯಂಜನ ಸಂಧಿ.

ಸ್ವರಸಂಧಿಯಲ್ಲಿ ಆಗಮವು ಹೇರಳ, ವ್ಯಂಜನ ಸಂಧಿಯಲ್ಲಿ ಆದೇಶವು ಹೇರಳವಾಗಿರುವುದು. ಆಗಮಾಕ್ಷರವು ಮೊದಲೇ ಇರುವ ಅಕ್ಷರಗಳ ಜತೆಗೆ ಮಿತ್ರನಂತೆ ಬಂದು ನಿಲ್ಲುವುದು, ಆದೇಶಾಕ್ಷರವು ಇರುವ ಅಕ್ಷರದಲ್ಲೊಂದನ್ನೋಡಿಸಿ ಶತ್ರುವಿನಂತೆ ಅದರ ಸ್ಥಳವನ್ನಾಕ್ರಮಿಸಿಕೊಳ್ಳುವುದು. ಈ ಭೇದವನ್ನು ಜ್ಞಾಪಕದಲ್ಲಿಡಬೇಕು.

A ಮಕಾರಕ್ಕಾದೇಶವಾಗುವ ವರ್ಣಗಳು— ಮೋನಸ್ವರೇ (೭೭), ನಪಿವಾ (೭೮), ನಶ್ಚಬಿಂದುರನ್ಯತ್ರ (೭೯), ತದಂತ್ಯೋವಾ ವರ್ಗೇ (೮೦), ಎಂಬ ಭಟ್ಟಾಕಳಂಕನ ಸೂತ್ರಗಳನ್ನು ಈ ಸಂದರ್ಭದಲ್ಲಿ ಜ್ಞಾಪಕದಲ್ಲಿಡುವುದು ಉತ್ತಮವಾಗಿದೆ. ಪದಾಂತ ಮಕಾರಕ್ಕೆ ಸ್ವರಪರವಾದಾಗ (೧) ಪುಲ್ಲಿಂಗದಲ್ಲಿ ನಿತ್ಯವಾಗಿ ನಕಾರಾದೇಶವು ಆಗುವುದು, (೨) ನಪುಂಸಕಲಿಂಗದಲ್ಲಿ ನಕಾರಾದೇಶವು ವಿಕಲ್ಪವಾಗಿ ಆಗುವುದು, (೩) ಪದಾಂತಮನಕಾರಗಳಿಗೆ ಬಿಂದುವಿನಾದೇಶವು ಆಗುವುದು, (೪) ಇವುಗಳಿಗೆ ವರ್ಗೀಯಾಕ್ಷರಗಳು ಪರವಾದರೆ ಆಯಾವರ್ಗದ ಪಂಚಮಾಕ್ಷರಗಳು ಆದೇಶವಾಗುವುವು

ಉದಾಹರಣೆಗಳು—

(೧) ರಾಮಮ್ + ಈತಂ = ರಾಮನೀತಂ

(೨) ಮರಮ್ + ಇದು = ಮರನಿದು, ಮರಮಿದು

(೩) ತಾಮ್ + ಯಜಮಾನರ್ = ತಾಂ ಯಜಮಾನರ್

ನೀನ್ + ಷಣ್ಮುಖಂ = ನೀಂಷಣ್ಮುಖಂ.

ಬಂದರ್ + ನೀಮ್ = ಬಂದನ್ನೀಂ

ಇಕ್ಕಿದಯ್ + ನೀನ್ = ಇಕ್ಕಿದಯ್ನೀಂ

(೪) ಬಿಂಕಂ ಬೆತ್ತಸೆವಂಜೆಯ |
ಸಂಕುಳ ಮುಂ ತೊಂಡುಗೆಡೆವ ಸುಕಸಾರಿಕೆಯುಂ ||
ಸೊಂಕೆ ಬಲವಂದು ತೀಡುವ |
ತೆಂಕಣಗಾಳಿಯುಂ ಮದೇಂ ಮನಂಗೊಳಿಸಿದುವೋ ||

ಅಥವಾ—ಬಿಙ್ಕಮ್ ಬೆತ್ತಸೆವಞ್ಜೆಯ |
ಸಙ್ಕುಳಮುನ್ತೊಣ್ಡುಗೆಡೆವ ಸುಕಸಾರಿಕೆಯುಂ ||
ಸೊಙ್ಕೆ ಬಲವನ್ದು ತೀಡುವ |
ತೆಙ್ಕಣಗಾಳಿಯುಂ ಮದೇಂ ಮನಙ್ಗೊಳಿಸಿದುವೋ ||

B. ಕತಪಗಳ ವಿಷಯ—ಕತಪಸ್ತೃತೀಯ ಉತ್ತರಪದಾದೇಃ (೮೯) ಎಂಬ ಭಟ್ಟಾಕಳಂಕನ ಸೂತ್ರವನ್ನು ಜ್ಞಾಪಕದಲ್ಲಿಡುವುದು. ಸಮಾಸದಲ್ಲಿ ಉತ್ತರಪದದ ಆದಿಭೂತಗಳಾದ ಕಕಾರ ತಕಾರ ಪಕಾರಗಳಿಗೆ ಆಯಾವರ್ಗದ ತೃತೀಯ ವರ್ಣಾದೇಶವು ಆಗುವುದು.

ಉದಾಹರಣೆಗಳು.—

ಪಳದು+ಕನ್ನಡಂ=ಪಳಗನ್ನಡಂ ; ತಣ್ಣಿತು+ಕದಿರ್=ತಣ್ಗದಿರ್.
ಬಾಯ್+ಕರೆ=ಬಾಯ್ಗರೆ, ಮೆಯ್+ಕೂವಲ್=ಮೆಯ್ಗೂವಲ್.
ಕಣ್+ಪೊಲಂ=ಕಣ್ಬೊಲಂ, ನುಣ್ಣಿತು+ಪೊಗರ್=ನುಣ್ಬೊಗರ್.

C ಪವರ್ಗದ ಅಕ್ಷರಗಳಿಗೆ ವಕಾರಾದೇಶ—ಸ್ವರಾದ್ವಾ ಪವರ್ಗಸ್ಯ (೯೧), ವ್ಯಂಜನಾದ್ವಾನಾದೇಶಾತ್ (೯೨) ಎಂಬ ಭಟ್ಟಾಕಳಂಕನ ಸೂತ್ರಗಳನ್ನು ಜ್ಞಾಪಕದಲ್ಲಿಡಬಹುದು ಸ್ವರದ ಮುಂದಿರುವ ಮತ್ತು ಆದಿಷ್ಟವಲ್ಲದ ವ್ಯಂಜನದ ಮುಂದಿರುವ ಉತ್ತರಪದಾದಿಯ ಪವರ್ಗದ ವರ್ಣಗಳಿಗೆ ವಿಕಲ್ಪವಾಗಿ ವಕಾರಾದೇಶವಾಗುವುದು

ಉದಾಹರಣೆಗಳು —

ಎಳದು+ಪೆಱೆ=ಎಳವೆಱೆ, ಮೂಱು+ಬಣ್ಣಂ=ಮೂವಣ್ಣಂ.
ಪಳದು+ಮಾನಿಸಂ=ಪಳವಾನಿಸಂ ; ಕಯ್+ಪೆಯ್ದಂ=ಕಯ್ವೆಯ್ದಂ
ಮೆಲ್ಲಿತ್ತು+ಮಾತು=ಮೆಲ್ವಾತು, ಮೇಲ್+ಬಣ್ಣಂ=ಮೇಲ್ವಣ್ಣಂ.

D ಸಕಾರಕ್ಕೆ ಚಕಾರಾದೇಶ—

ಇರೆಯಲರಹಿತ ವ್ಯಂಜನ
ಪರಮಾಗಿ ಸಕಾರಮಲ್ಲಿ ಬಹುಳಂ ಚತ್ವಂ ||
ಅರೆಯೆಡೆಯೊಳ್ಜತ್ವಂ ಮೇ
ಣಾರೆಯೆಡೆಯೊಳ್ ಸಂಖ್ಯೆಯಾಗೆ ಛತ್ವಂ ||೭೮||

ಎಂಬ ಕೇಶಿರಾಜನ ಸೂತ್ರವನ್ನು ಜ್ಞಾಪಕದಲ್ಲಿಡಬಹುದು

ಉದಾಹರಣೆಗಳು—

ನುಣ್+ಸರದ=ನುಣ್ಚರದ, ಮುಂದು+ಸೆಱಗು=ಮುಂಜೆರಗು
ಎರಡು+ಸಾಸಿರಂ=ಇರ್ಛಾಸಿರಂ

ಯ ಲ ರಹಿತಕ್ಕೆ ಉದಾಹರಣೆ—ಮೆಯ್ಸೊಬಗು, ಬಲ್ಸೋನೆ
ಬಹುಳಂ ಎಂದು ಹೇಳಿರುವುದರಿಂದ ಸ್ವರಂಗಳ ಪರದಲ್ಲಿರ್ದ ಸಕಾರಕ್ಕಂ ಕೆಲವೆಡೆಗಳಲ್ಲಿ ಚಕಾರ ಜಕಾರಗಳು ಬರುವುವು ಉದಾಹರಣೆ—

ಮೂರು+ಸಾಲ್=ಮುಚ್ಚಾಲ್, ತುಡು+ಸೊಡರ್=ತುಡುಜೊಡರ್

ಇರ್ಛಾಸಿರಂ, ಎಣ್ಛಾಸಿರಂ, ನೂರ್ಛಾಸಿರಂ ಮುಂತಾದ ಸಂಖ್ಯಾವಾಚಕಗಳಲ್ಲಿ ಬರುವ ಮಹಾಪ್ರಾಣಾಕ್ಷರವಾದ ಛಕಾರವು ದ್ರಾವಿಡ ಭಾಷಾವರ್ಗದ ಸ್ವಭಾವಕ್ಕೆ ವಿರುದ್ಧವಾಗಿದೆ ಈ ವಿಷಯವನ್ನು ಈ ಪರಿಷತ್ಪತ್ರಿಕೆಯ ಮೂರನೆಯ ಸಂಚಿಕೆಯಲ್ಲಿ ಕರ್ಣಾಟಕ ವರ್ಣಮಾಲೆಯ ಚಾರಿತ್ರ್ಯ ವಿಚಾರ ಎಂಬ ಲೇಖನದಲ್ಲಿ ಚರ್ಚಿಸಿರುತ್ತೇವೆ. ಮಹಾಪ್ರಾಣಾಕ್ಷರ ಪ್ರಯೋಗವನ್ನು ಮಹಾರಾಷ್ಟ್ರ ಪ್ರಾಕೃತದಿಂದ ತೆಗೆದುಕೊಂಡಿರುವಂತೆ ತೋರುತ್ತದೆ. ಕೇಶಿರಾಜನು ೨೪೯ ನೆಯ ಸೂತ್ರದಲ್ಲಿ "ಮಹಾ

ರಾಂತ ಧಾತುವಿನ ಕಡೆಯ ಸಕಾರಕ್ಕೆ ವ್ಯಂಜನ ಜಕಾರಮಕ್ಕುಂ'' ಎಂದೂ, ಧಾತು ಪಾಠದಲ್ಲಿ ಜಕಾರಾಂತಧಾತುಗಳನ್ನು ಕೊಡುವಾಗ "ಧಾತೋರಿಸುಪ್ರತ್ಯಯಸ್ಯ ಚಾದೇಶೋ ಪುನರ್ಧಾತುತ್ವಂ'' ಎಂದು ಹೇಳುತ್ತಾನೆ ತಮಿಳಿನಲ್ಲಿಯೇ ಆಗಲಿ ತೆಲುಗಿನಲ್ಲಿಯೇ ಆಗಲಿ ದೇಶೀಯಪದಗಳಲ್ಲಿ ಛಕಾರವು ಬರುವುದೇ ಇಲ್ಲ ಹೀಗಿರುವಲ್ಲಿ ಕನ್ನಡದ ಸಂಧಿಗಳನ್ನು ಹೇಳುವಲ್ಲಿ "ಸಂಖ್ಯಾಯಾಂ ಛತ್ವಂ'' (ಸಕಾರಕ್ಕಾದೇಶವಾಗಿ ಛಕಾರವು ಬರುವುದು) ಎಂದು ಹೇಳುವುದು ಕರ್ನಾಟ ಭಾಷಾಸ್ವಭಾವಕ್ಕೆ ವಿರುದ್ಧವಾಗಿದೆಯೆಂದೇ ಹೇಳಬೇಕಾಗಿದೆ. ಇರ್ಛಾಸಿರಂ, ಎಛ್ಛಾಸಿರಂ, ನೂರ್ಛಾಸಿರಂ ಎಂದು ಹೇಳುವುದೇ ಭಾಷಾಸ್ವಭಾವಕ್ಕೆ ಅನುಕೂಲವಾಗಿರುವುದು

E **ನಕಾರಕ್ಕೆ ಣಕಾರಾದೇಶ**—ಣೋಣೋಃ(೯೫)ಎಂಬ ಭಟ್ಟಾಕಳಂಕನ ಸೂತ್ರವನ್ನು ಜ್ಞಾಪಕದಲ್ಲಿಡಬಹುದು ಣಕಾರಕ್ಕೆ ಪರವಾಗಿರುವ ಉತ್ತರ ಪದಾದಿಯ ನಕಾರಕ್ಕೆ ಬಹುಳವಾಗಿ ಣಕಾರಾದೇಶವು ಆಗುವುದು. ಕೇಶಿರಾಜನು ೧೫೮ ನೆಯ ಸೂತ್ರದಲ್ಲಿ

ಅಸಮಾಸದೊಳಂ ದೊರೆವೆ ||
ತ್ತ ಸಮಾಸದೊಳಂ ಣಕಾರದಿಂ ಪರದೊಳ್ಸಂ ||
ಧಿಸಿದ ನಕಾರಂ ಣತ್ವಂ |
ಪ್ರಸಿದ್ಧ ಮುಚ್ಚರಿಸುವರ್ಗೆ ದುಷ್ಕರಮುದುವುಂ ||

ಎಂದು ಹೇಳುತಲ್ತಾನೆ.

ಉದಾಹರಣೆ —

ತಣ್ಣ್ + ನೀರ್ = ತಣ್ಣೀರ್, ಕಣ್ + ನೀರ್ = ಕಣ್ಣೀರ್.
ಕಣ್ + ನೊಂದುದು = ಕಣ್ಣೊಂದುದು, ಜಾಣ್ + ನೆರೆದುದು = ಜಾಣ್ಣೆರೆದುದು.

ಉಚ್ಚರಿಸುವುದಕ್ಕೆ ಕಷ್ಟವಾಗುವ ಎಡೆಗಳಲ್ಲಿ ಸಂಧಿಮಾಡದಿರುವುದೇ ಉತ್ತಮ ಜಾಣ್ + ನಿನ್ನ = ಜಾಣ್ಣಿನ್ನ ಎನ್ನುವುದು ಬಹು ಕಷ್ಟವಾಗುವುದರಿಂದ ಜಾಣ್ ನಿನ್ನ ಎಂದು ಹೇಳುವುದೇ ಉತ್ತಮ.

F. **ವಕಾರಕ್ಕೆ ಬಕಾರಾದೇಶ**—ಕೇಶಿರಾಜನು

ಪವಣೊಳಮಾ ಸಂಖ್ಯೆಯೊಳಂ
ವ್ಯವಹರಿಕುಂ ವತ್ವಮಲ್ಲಿ ಬಶ್ರುತಿಯುಂ ಸಂ||
ಭವಿಕುಮದಂತಂ ನಿಲೆ ಬಿಂ
ದು ವಿಕಲ್ಪಂ ಬತ್ವಮೊರ್ಮೆ ಲೋಪಮುನಾಳ್ಗುಂ ||೯೯||

ಎಂಬ ಸೂತ್ರಕ್ಕೆ

ಆ ಪುಂಸ್ತ್ರೀಲಿಂಗವಿಷಯಮಾದ ಪವಣೊಳಂ ಸಂಖ್ಯೆಯೊಳಂ ವತ್ವಮಕ್ಕುಂ ಅವತ್ವಕ್ಕೊರ್ಮೆ ಒಕಾರಮಕ್ಕುಂ, ಅಕಾರಾಂತಮಾದಡೆಯೆಳ್ ಬಿಂದು ವಿಕಲ್ಪದಿಂದಕ್ಕುಂ ; ಒಕಾರಕ್ಕೊರ್ಮೆ ಲೋಪಮಕ್ಕುಂ ; ಎಂಬ ವೃತ್ತಿಯನ್ನು

ಬರೆದು ಪ್ರಯೋಗಗಳನ್ನು ತೋರಿಸುತ್ತಾನೆ.

ಸರ್ವನಾಮದೊಳ್ ವಕಾರಕ್ಕೆ — ಎಲ್ಲ + ಅರ್ = ಎಲ್ಲವರ್.

ಸಂಖ್ಯೆಗೆ — ಮೂವತ್ತುಮೂ + ಅರ್ = ಮೂವತ್ತುಮೂವರ್.

ಹೀಗೆಯೇ ಈರ್ವರ್ + ನೂರ್ವರ್.

ಬಕಾರಕ್ಕೆ — ಅನಿತು + ಅರ್ = ಅನಿಬರ್, ಹೀಗೆಯೇ ಇನಿಬರ್, ಎನಿಬರ್, ಒರ್ಬರ್, ಇರ್ಬರ್, ಸೆರೆದರಸುಗಳನಿಬರುಮಂ ಕಾದಿಗೆಲ್ದಂ ಒರ್ಬನೆ ಪಾರ್ಥಂ.

ಅಕಾರಾಂತ ಬಿಂದುವಿಗೆ — ಪಲವು + ಅರ್ = ಪಲಂಬರ್, ಪಲಬರ್, ಪಲವರ್.

ಬಕಾರ (ವಕಾರ) ಲೋಪಕ್ಕೆ — ಪಲರ್, ಕೆಲರ್

G **ದ್ವಿತ್ವದ ವಿಷಯ** — ವ್ಯಂಜನಾಂತ ಶಬ್ದಗಳಿಗೆ ಸ್ವರಾದಿಪ್ರತ್ಯಯಗಳೂ ಪದಗಳೂ ಪರವಾದಾಗ ಶಬ್ದಾಂತದ ಅಕ್ಷರಗಳಿಗೆ ಕೆಲವೆಡೆಗಳಲ್ಲಿ ದ್ವಿತ್ವವು ಬರುವುದುಂಟು.

ಹೇಗೆಂದರೆ (a) ಹ್ರಸ್ವಾನ್ನಣಲಯಳತಟೋನವ್ಯಯಸ್ಯ ಲಿಂಗಾಂತಸ್ಯ ದ್ವಿಸ್ಸ್ವರಾಣಾಮಾದೇಃ । ನೆಯ್ಯುಯ್ಸುಯ್ಬಯಃ । ಕಮ್ಮ್ಯಪಿ ॥ ಎಂಬ ಭಟ್ಟಾಕಳಂಕನ ೫೩, ೫೪, ೫೫ ನೆಯ ಸೂತ್ರಗಳನ್ನು ಜ್ಞಾಪಕದಲ್ಲಿಡಬಹುದು ಶಬ್ದಗಳಲ್ಲಿ ಎರಡೇ ವರ್ಣವಿದ್ದು ಹ್ರಸ್ವಸ್ವರ ಯುಕ್ತವಾದ ಪೂರ್ವಾಕ್ಷರದ ಮುಂದಿರುವ ಅವ್ಯಯಗಳಲ್ಲದ ಮತ್ತು ಲಿಂಗಾಂತ್ಯಗಳಾದ ಣನಲಯಳ ತಟಕಾರಗಳಿಗೆ ಸ್ವರವು ಪರವಾಗಲು ದ್ವಿರುಚ್ಚಾರಣೆಯಾಗುವುದು, ನೆಯ್, ಉಯ್, ಸುಯ್, ಬಯ್, ಧಾತುಗಳಲ್ಲಿಯೂ ಯಕಾರಕ್ಕೆ ಸ್ವರಪರವಾದಾಗ ದ್ವಿತ್ವವುಂಟು, ನಣಳಕಾರಾಂತಗಳಾದ ಪದಗಳಲ್ಲಿ ಸಮಾಸ ವಿಷಯದಲ್ಲಿ ಅಂ ಉಂ ಎಂಬಾಗಮಗಳು ಆದಾಗಲೂ ನಣಳಕಾರಗಳಿಗೆ ದ್ವಿತ್ವವು ಬರುವುದು, ಲಯತಟಕಾರಾಂತ ಪದಗಳಿಗೆ ಅಂ ಉಂ ಎಂಬಾಗಮಗಳು ಬರುವುದೇ ಇಲ್ಲ.

ಉದಾಹರಣೆಗಳು —

ಬೆನ್ + ಅಂ = ಬೆನ್ನಂ, ಮಣ್ + ಇದು = ಮಣ್ಣಿದು ;

ಪುಲ್ + ಒಳ್ = ಪುಲ್ಲೊಳ್, ಮೆಯ್ + ಅಂ = ಮೆಯ್ಯಂ,

ಕಳ್ + ಉಣಿ = ಕಳ್ಳುಣಿ, ಕಿಱು + ಅಡಿ = ಕಿತ್ತಡಿ,

ನಡುವು + ಅಡವಿ = ನಟ್ಟಡವಿ, ನೆಯ್ + ಅಲ್ = ನೆಯ್ಯಲ್,

ಉಯ್ + ಅಲ್ = ಉಯ್ಯಲ್ ; ಸುಯ್ + ಅಲ್ = ಸುಯ್ಯಲ್ ;

ಬಯ್ + ಅಲ್ = ಬಯ್ಯಲ್, ಪೊನ್ + ಕಲ್ = ಪೊನ್ನಂಗಲ್,

ಬೆಳ್ + ಒಟ್ಟೆ = ಬೆಳ್ಳಂಬಟ್ಟೆ ; ಕೆಳ್ಳು — ಒಸುಟು = ಕೆಳ್ಳಂಬಸುಟು ;

b. ರೋದ್ವಿರ್ವ್ಯಂಜನಸ್ಯಾಹಾದೇಃ ॥೬೫॥ ಎಂಬ ಭಟ್ಟಾಕಳಂಕನ ಸೂತ್ರವನ್ನು ಜ್ಞಾಪಕದಲ್ಲಿಡಬಹುದು. ರೇಫದ ಮುಂದಿರುವ ಹಕಾರಗಳನ್ನು ಬಿಟ್ಟು ಇದ ವ್ಯಂಜನಕ್ಕೆ ದ್ವಿತ್ವವು ಬರುವುದು.

ಉದಾಹರಣೆ—

ಇರ್ + ಕುಂ = ಇರ್ಕ್ಕುಂ; ಇವರ್ + ಖಂಡಿಸಿದರ್ = ಇವರ್ಖ್ಖಂಡಿಸಿದರ್;

ಊರ್ + ಗಳ್ = ಊರ್ಗ್ಗಳ್, ಸುರರ್ + ಘನಮಹಿಮರ್ = ಸುರರ್ಘ್ಘನಮಹಿಮರ್;

ಜಿನರ್ + ಜವನಪಂಡಿತರ್ = ಜಿನರ್ಜ್ಜವನ ಪಂಡಿತರ್,

ಬುಧರ್ + ಚದುರರ್ = ಬುಧರ್ಚ್ಚದುರರ್,

ಇವರ್ + ಛಾತ್ರರ್ = ಇವರ್ಛ್ಛಾತ್ರರ್, ಸುರರ್ + ಜಯಿಸಿದರ್ = ಸುರರ್ಜ್ಜಯಿಸಿದರ್,

ಅಲರ್ + ಝಷಕೇತನಂಗೆ = ಅಲರ್ಝ್ಝಷಕೇತನಂಗೆ;

ಅವರ್ + ಞಕಾರಮನುಚ್ಚರಿಸಿದರ್ = ಅವರ್ಞ್ಞಕಾರಮನುಚ್ಚರಿಸಿದರ್,

ಬುಧರ್ + ಟೀಕಿಸಿದರ್ = ಬುಧರ್ಟ್ಟೀಕಿಸಿದರ್;

ಭಟರ್ + ಠಾಣದೊಳ್ = ಭಟರ್ಠ್ಠಾಣದೊಳ್;

ಬಡಗರ್ + ಡೊಂಬರ್ = ಬಡಗರ್ಡ್ಡೊಂಬರ್;

ನುಡಿವರ್ + ಢಾಳಕರ್ = ನುಡಿವರ್ಢ್ಢಾಳಕರ್,

ಅವರ್ + ಣಕಾರಂಬರೆದರ್ = ಅವರ್ಣ್ಣಕಾರಂಬರೆದರ್;

ಸೂತರ್ + ತಂದರ್ = ಸೂತರ್ತ್ತಂದರ್;

ಪರರ್ + ಥಟ್ಟುಕಾರಾದರ್ = ಪರರ್ಥ್ಥಟ್ಟುಕಾರಾದರ್;

ನೃಪರ್ + ದಾನಶೂರರ್ = ನೃಪರ್ದ್ದಾನಶೂರರ್;

ವಂಶಜರ್ + ಧನವಂತರ್ = ವಂಶಜರ್ಧ್ಧನವಂತರ್,

ಪಂಡಿತರ್ + ನೀತಿವಂತರ್ = ಪಂಡಿತರ್ನ್ನೀತಿವಂತರ್;

ಇವರ್ + ಪಂಡಿತರ್ = ಇವರ್ಪ್ಪಂಡಿತರ್;

ಅಲರ್ + ಫಲವಾದುದು = ಅಲರ್ಫ್ಫಲವಾದುದು

ಬಂದರ್ + ಬಟ್ಟಿಗರ್ = ಬಂದರ್ಬ್ಬಟ್ಟಿಗರ್,

ಸತಿಯರ್ + ಭೀರುಗಳ್ = ಸತಿಯರ್ಭ್ಭೀರುಗಳ್;

ಚಪಲೆಯರ್ + ಮಾನಿನಿಯರ್ = ಚಪಲೆಯರ್ಮ್ಮಾನಿನಿಯರ್;

ಪಾರ್ವರ್ + ಯಾಜಕರ್ = ಪಾರ್ವರ್ಯ್ಯಾಜಕರ್,

ವಿದ್ವಾಂಸರ್ + ಲಾಕ್ಷಣಿಕರ್ = ವಿದ್ವಾಂಸರ್ಲ್ಲಾಕ್ಷಣಿಕರ್

ಗಾಯಕರ್ + ವಾದಕರ್ = ಗಾಯಕರ್ವ್ವಾದಕರ್;

ಕ್ಷತ್ರಿಯರ್ + ಶೂರರ್ = ಕ್ಷತ್ರಿಯರ್ಶ್ಶೂರರ್;

ನಪುಂಸಕರ್ + ಷಂಡರ್ = ನಪುಂಸಕರ್ಷ್ಷಂಡರ್;

ಋಷಿಯರ್ + ಸಾಧುಗಳ್ = ಋಷಿಯರ್ಸ್ಸಾಧುಗಳ್;— ಇತ್ಯಾದಿಗಳು.

ಮೇಲೆ ಮಹಾಪ್ರಾಣಾಕ್ಷರಗಳಿಗೂ ಉದಾಹರಣೆಗಳನ್ನು ಕೊಟ್ಟಿದೇವೆ.

ಆದರೆ ಮಹಾಪ್ರಾಣಗಳಿಗೆ ದ್ವಿತ್ವವು ಬರಲು, ಎರಡು ಮಹಾಪ್ರಾಣಗಳನ್ನು ಉಚ್ಚರಿಸಬೇಕಾಗುವುದು. ಇದು ಶ್ರುತಿ ಕಷ್ಟವಾಗಿ ತೋರುವುದು. ಇಂತಹ ಸಂದರ್ಭದಲ್ಲಿ ಸಂಸ್ಕೃತ ವ್ಯಾಕರಣಕಾರರು ಒಂದಕ್ಕೆ ಅಲ್ಪಪ್ರಾಣಾದೇಶವು ಬರುವಂತೆ ಖರಿಚ || ಝಲಾಂಜಶೋಽನ್ತೇ || ಝಲಾಂಜಶ್ ಝಶಿ || ಮೊದಲಾದ ಸೂತ್ರಗಳನ್ನು ಕಲ್ಪಿಸಿಕೊಂಡಿರುವರು. ಈ ಭಾಷಾವ್ಯಾಕರಣದಲ್ಲಿ ಅಂತಹ ಕಲ್ಪನೆಗಳಾವುವೂ ಇಲ್ಲದಿದ್ದರೂ ಉಚ್ಚಾರಣಾ ಸೌಕರ್ಯಕ್ಕಾಗಿ ದ್ವಿರುಕ್ತವಾದುದರಲ್ಲಿ ಒಂದನ್ನು ಅಲ್ಪಪ್ರಾಣವನ್ನಾಗಿ ಉಚ್ಚರಿಸಬೇಕೆಂದು ತಿಳಿಯುವುದು. ಅಥವಾ ಶಾಸನಕಾರನು ತದ್ಭವ ಪ್ರಕರಣಸ್ಥ "ಭವೇತ್" ||೨೪೪|| ಎಂಬ ಸೂತ್ರವ್ಯಾಖ್ಯಾನದಲ್ಲಿ ಪ್ರಯೋಗಾನುಸಾರವಾಗಿ ಕರ್ಣಾಟಕ ಶಬ್ದಗಳಾದ ಮಕಾರಕ್ಕೂ ವಕಾರಾದೇಶವನ್ನಂಗೀಕರಿಸಬೇಕೆಂದು ಹೇಳಿರುವುದರಿಂದ, ಅದರಂತೆ "ದ್ವಿತೀಯಸ್ಯ ಪ್ರಥಮೋವರ್ಗಾಣಾಂ ||೨೪೫|| ತೃತೀಯಃ ಪ್ರಥಮಚತುರ್ಥಯೋಃ ||೧೪೩|| ಮೊದಲಾದ ಸೂತ್ರಗಳಿಗೂ ಭಾಷಾಶಬ್ದಗತವರ್ಣವಿಷಯತ್ವವನ್ನು ಕಲ್ಪಿಸಿ ಬಹುಳಗ್ರಹಣದಿಂದ ವ್ಯವಸ್ಥೆ ಮಾಡಿಕೊಳ್ಳಬೇಕು" ಎಂದು ಮ|| ಕುಂಡಲಗಿರಿಯಾಚಾರ್ಯರವರು ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ (ಪುಟ ೧೭೦) ಹೇಳುತ್ತಾರೆ. ಉಚ್ಚಾರಣಾ ಸೌಕರ್ಯವೇ ಕಾರಣವಾಗಿರುವುದೆಂದು ಹೇಳಿದರೆ ಸಾಕಾಗಿರುತ್ತದೆ. ಎಂತಿದ್ದರೂ ಮಹಾಪ್ರಾಣಾಕ್ಷರಕ್ಕೆ ಮಹಾಪ್ರಾಣದೊತ್ತು ಇಲ್ಲ.

(c) ಲಳೋಽನನ್ತಸ್ಥಾಯಾಶ್ಚ ||೬೭|| ಎಂದು ಭಟ್ಟಾಕಳಂಕನು ಹೇಳುತ್ತಾನೆ. ಲಕಾರ ಳಕಾರಗಳ ಮುಂದಿರುವ ಯರಲವಗಳನ್ನೂ ಹಳಗಳನ್ನೂ ಬಿಟ್ಟು ಉಳಿದ ವ್ಯಂಜನಕ್ಕೆ ದ್ವಿತ್ವ ಬರುವುದು.

ಉದಾಹರಣೆ —

ಕಲ್ + ಕಡಿಯಾದುದು = ಕಲ್ಕ್ ಕಡಿಯಾದುದು ; ಹೀಗೆಯೇ ಕಲ್ತ್ತಂ ; ನಿಲ್ತ್ತಂ, ಬಲ್ಪ್ಪಾಹಸ, ಮುಳ್ದ್ದೊಂಗಲ್, ಅಳ್ತ್ತನಂ, ಕಳ್ಗ್ಗಡಿದಂ

(d) ಸ್ವರಾದರೋ ವ್ಯಂಜನೇ ||೬೭|| ಎಂದು ಭಟ್ಟಾಕಳಂಕನು ಹೇಳುತ್ತಾನೆ. ಸ್ವರದ ಮುಂದಿರುವ ರೇಫವರ್ಜಿತ ವ್ಯಂಜನಕ್ಕೆ ವ್ಯಂಜನವು ಪರವಾಗಲು ದ್ವಿತ್ವವು ಬರುವುದು.

ಉದಾಹರಣೆಗಳು. —

ಬರಿಸಿ + ಪ್ರಧಾನರಂ = ಬರಿಸಿಪ್ಪ್ರಧಾನರಂ ; ಹೀಗೆಯೇ ಕಂಡುಕ್ಕ್ಷತ್ರಿಯರಂ, ಇದುಸ್ಸ್ತ್ರದು , ಅದುವ್ವ್ಯವಸಾಯಂ

"ಪ್ರಯೋಗಶರಣಾಃ ವೈಯಾಕರಣಾಃ, ಲಕ್ಷ್ಯಾನುಸಾರಿತ್ವಾಲ್ಲಕ್ಷಣೋಪದೇಶಸ್ಯ (ವ್ಯಾಕರಣವನ್ನು ಬರೆಯುವವರು ಪ್ರಯೋಗಶರಣರಾಗಿರುವರು ; ಲಕ್ಷ್ಯಕ್ಕನುಸಾರವಾಗಿಯೇ ಲಕ್ಷಣಗಳನ್ನು ಉಪದೇಶಿಸಬೇಕು) ಎಂದು ಪ್ರಾಚೀನರು ಹೇಳಿರುವುದರಿಂದ, ಹೇಗೆ ಸಂಸ್ಕೃತದಲ್ಲಿ ಕುಂಥಕಾರ ಎಂಬುದನ್ನು ಸಾಧಿಸುವಂತೆ ಗ್ರಾಮ ಗ್ರಾಮ ಎಂಬುದನ್ನು ಸಾಧಿಸುವುದಿಲ್ಲವೋ ಹಾಗೆಯೇ ಲಕ್ಷ್ಯಾನು

ಸಾಂವಾಗಿಯೇ ಲಕ್ಷಣಗಳಿಗೆ ಪ್ರವೃತ್ತಿಯನ್ನು ಹೇಳಬೇಕೆಂದು ಭಾಷಾವ್ಯಾಕರಣದಲ್ಲಿಯೂ ಅಂಗೀಕರಿಸಬೇಕು. ಸಾಧಕ ಬಾಧಕಗಳು ಒಂದೇ ಬಾರಿ ಪ್ರಸಕ್ತಗಳಾಗುವುವೆಂಬುದು

ಸಾಧನಂ ಬಾಧನಂ ವಾಪಿ ಸಕೃದೇವ ಹಿ ಸಾ ಸಕೃತ್ |
ಕೃತಸ್ಯ ಕರಣಾ ಭಾವಾನ್ಮೃತಸ್ಯ ಮರಣಂ ಯಥಾ ||

ಎಂಬುದರಿಂದ ಸೂಚಿತವಾಗಿದೆ''ಯೆಂದು ಕುಂಡಲಗಿರಿಯಾಚಾರ್ಯರು ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ (ಪುಟ ೧೭೭) ಹೇಳಿರುತ್ತಾರೆ

ಮೇಲಿನ ಸೂತ್ರದಲ್ಲಿ ಸ್ವರಾತ್ ಎಂದು ಹೇಳಿ ಸ್ವರದ ಮುಂದಿನ ವ್ಯಂಜನಕ್ಕೆ ದ್ವಿತ್ವವನ್ನು ವಿಧಿಸಿರುವುದರಿಂದ, ಕ್ಷತ್ರಿಯರ್, ಪ್ರಧಾನರ್ ಮೊದಲಾದ ಪ್ರಯೋಗಗಳಲ್ಲಿ ಮೊದಲಿನ ಕಕಾರ ಪಕಾರಗಳಿಗೆ ದ್ವಿತ್ವವಿಲ್ಲ. ಅರ: ಎಂದು ಹೇಳಿರುವುದರಿಂದ, ಇವಕ್ಕುಳಲಿಯರ್, ಅಪಸ್ಸರ್ತಿಯರ್ ಮೊದಲಾದುವುಗಳಲ್ಲಿ ರೇಫಕ್ಕೆ ದ್ವಿತ್ವವು ಬರುವುದಿಲ್ಲ. ವ್ಯಂಜನೇ ಎಂದುಹೇಳಿರುವುದರಿಂದ ಪ್ರದಾನಂ, ಪ್ರಧಾನಂ ಎಂಬ ಪ್ರಯೋಗಗಳಲ್ಲಿ ಸ್ವರದ ಮುಂದಿನ ದ ಧಗಳಿಗೆ ಸ್ವರವು ಪರವಾಗಿರುವುದರಿಂದ ದ್ವಿತ್ವವಿಲ್ಲ.

ಕೇಶಿರಾಜನು ಶಬ್ದಮಣಿದರ್ಪಣದಲ್ಲಿ

ಪರಪದ ಪೂರ್ವಂ ದ್ವಿತ್ವಾ |
ಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾ ||
ಕ್ಷರವಾಗೆ ಸಂಧಿದೋಷಂ |
ಸರೇಫಮುದಿರಾಗೆ ಶಿಥಿಲ ಮೆಂದನುಸರಿಪರ್ ||೫೯||
ಬಗೆಯದೆ ಸತೃಣಾಭ್ಯವಹಾ |
ರಗಳುಸಿವ ಗದ್ಯಕಾವ್ಯದೊಳ್ ನಿರ್ಬಂಧಂ ||
ಪುಗವೆಂದರೋಚಿಗಳರಂ |
ತೆಗಟಿಂವಾ ಗದ್ಯಪದ್ಯಕಾವ್ಯದೊಳಕ್ಕರ್ ||೬೦||

ಎಂದು ಹೇಳಿ——

ಒರಿಸಿಪ್ರಧಾನರಂ ಕು |
ಳ್ಳಿರಿಸಿ ಪ್ರಿಯಕುಶಲ ವಾರ್ತೆಯಂ ನೆಱೆಕೇಳ್ದು ||
ಸ್ಥಿರವುದ್ದ ಪ್ರಭುಸುಡಿಯು |
ಪ್ರರೂಢ ಮುದನಾದ ನಾತನೆಂಬುದ ಮಾರ್ಗಂ ||

ಎಂದು ಹೇಳಿರುತ್ತಾನೆ.

ಶಬ್ದಾನು ಶಾಸನಕಾರನು ಶೈಥಿಲ್ಯವೆಂಬುದನ್ನೇ ಹೇಳಿಲ್ಲ. ಆದರೂ ಶಬ್ದಸಾಧುತ್ವಾರ್ಥವಾಗಿ ದ್ವಿತ್ವವನ್ನು ಹೇಳಿದ್ದರೂ, ಅಲಂಕಾರಿಕರ ಸಮಯದಿಂದ ಶೈಥಿಲ್ಯವನ್ನೂ ಊಹಿಸಿಕೊಳ್ಳುವುದು. ಇದು ದರ್ಪಣಕಾರನು ಉದಾಹರಿಸಿರುವ ಪದ್ಯಸ್ಥ

ವಾದ "ಅಮಾರ್ಗಂ" ಎಂಬ ಪದದಿಂದ ಸೂಚಿತವಾಗುವುದು. ಶಾಸನಕಾರನು ವ್ಯಂಜನದ್ವಯ ವಿಷಯದಲ್ಲಿ ಎಲ್ಲಿ ದ್ವಿತ್ವನಿಷೇಧವನ್ನು ಅಂಗೀಕರಿಸುವನೋ ಅಲ್ಲಿ ದರ್ಪಣಕಾರನ ಮತದಲ್ಲಿ ಶೈಥಿಲ್ಯವನ್ನು ಅಂಗೀಕರಿಸಬೇಕೆಂದು ತಾತ್ಪರ್ಯವನ್ನು ಕಲ್ಪಿಸಬೇಕು. ಇಲ್ಲಿ ಮತಭೇದವಿರುವುದರಿಂದ ಜೈಮಿನ್ಯಾದಿ ಷಟ್ಪದಿ ಗ್ರಂಥಗಳಲ್ಲಿ ಯಥೇಷ್ಟವಾಗಿ ಶೈಥಿಲ್ಯವನ್ನು ಅಂಗೀಕರಿಸಿರುವರು." ಎಂದು ಮ|| ಕುಂಡಲಗಿರಿಯಾಚಾರ್ಯರವರು ಶಬ್ದಾನುಶಾಸನ ಪ್ರಕಾಶಿಕೆಯಲ್ಲಿ (ಪುಟ ೧೬೫) ಹೇಳುತ್ತಾರೆ. ಇಲ್ಲಿ ಆಚಾರ್ಯರವರು ಸ್ವಲ್ಪ ಮುಗ್ಗರಿಸಿರುವರೆಂದು ಹೇಳಬೇಕಾಗಿದೆ. ನಸಮಾಸೇ (೬೦) ಅಳ್ಕುಳಃ (೬೧), ಕೃತಿ (೬೨), ಇಸುಪಿ (೬೩), ಎಂಬ ಸೂತ್ರಗಳಲ್ಲಿ ಶೈಥಿಲ್ಯದ ವಿಚಾರವೇ ಇಲ್ಲವಾಗಿದೆ. ಅಳರ್, ತಿವಿಸು, ಉಣುತಂ ಮುಂತಾದ ಉದಾಹರಣೆಗಳಲ್ಲಿ ಶೈಥಿಲ್ಯದ ಸೊಲ್ಲೇ ಇಲ್ಲ. ಸಲಘ್ವಾದಿ ಲಘೂಪಾಂತ್ಯಾದಲೋಗದವಜೋವೃತ್ತೌ (೬೪), ಬರ್ದಿಲಾದಯಃ ಎಂಬ ಸೂತ್ರಗಳು ಮಾತ್ರ ಆಚಾರ್ಯರವರ ಹೇಳಿಕೆಗೆ ಅನುಕೂಲವಾಗಿವೆ. ರೇಫ ಕುಳ ಱಳಗಳನ್ನುಳ್ಳ ಸಂಯುಕ್ತಾಕ್ಷರಗಳು ಬಂದಾಗ ಶೈಥಿಲ್ಯದ ವಿಚಾರವು ಬರುವುದು. ಬೇರೆ ಸಂಯುಕ್ತಾಕ್ಷರಗಳಲ್ಲಿ ಶೈಥಿಲ್ಯವಿರುವುದಿಲ್ಲವೆಂದು ಹೇಳಬಹುದಾಗಿದೆ.

ಮಿ|| ಕಿಟ್ಟಲ್ ಸಾಹೇಬರವರು ೫೯ನೆಯ ಸೂತ್ರದಲ್ಲಿ ಹೇಳಿರುವ ಸರೇಫಾಕ್ಷರದ ಶಿಥಿಲವೃತ್ತಿಗೆ ಉದಾಹರಣೆಯನ್ನು ಕೊಡುವುದರಲ್ಲಿ—" (ಗದ್ಯಕಾವ್ಯದೊಳ್) ಸರೇಫಾಕ್ಷರಕ್ಕೆ (ಕೆಲಂಬರ್ ಶಿಥಿಲಂಬಡಿಸಿದುದರ್ಕೆ)—

" ವಿಱುಗುತ್ತಿರ್ಪ ತ್ರಿಶೂಲದೆ ಪ್ರಣಯದೆ ತ್ರಿಪಥೆಗೆ ನಡೆದಂ ತ್ರಿಣೇತ್ರನೊಲವೆಂದೆ ತಾಳ್ದಿದಂ ಮಸ್ತಕದೊಳ್ " ಎಂದು ಮುದ್ರಿಸಿರುವರು." ಪುಟದ ಅಡಿಯಲ್ಲಿ 'ಗದ್ಯಕಾವ್ಯವೆಂಬ ಚಂಪೂ ಗದ್ಯಪದ್ಯವೆಂಬುದೇ, ಇಲ್ಲಿ ಕೊಟ್ಟುದಾಹರಣೆಯಲ್ಲಿ ಗಣಕ್ಕೆ ನಾಲ್ಕುನಾಲ್ಕು ಮಾತ್ರೆ, *i. e.* ◡ ◡ ◡ ◡ ಇರ್ಕುಮೆಂಬರ್'' ಎಂದೂ ಮುದ್ರಿಸಿರುವರು. ಇಲ್ಲಿ "(ಗದ್ಯಕಾವ್ಯದೊಳ್)" ಎಂಬುದೂ ತಪ್ಪು; ಗದ್ಯಕಾವ್ಯಕ್ಕೆ ಇವರು ಬರೆದಿರುವ ಅರ್ಥವೂ ತಪ್ಪು; ಉದಾಹರಣೆಯನ್ನು ಮುದ್ರಿಸಿರುವ ರೀತಿಯೂ ತಪ್ಪು. ಹೇಗಿರಬೇಕೆಂದರೆ—ಸರೇಫಾಕ್ಷರದ ಶಿಥಿಲವೃತ್ತಿಗೆ—

(೧) ವಿಱುಗುತ್ತಿರ್ಪ ತ್ರಿಶೂಲದೆ | (ಕಂದದ ಪಾದ)
(೨) ಪ್ರಣಯದೆ ತ್ರಿಪಥೆಗೆ ನಡೆದಂ |
ತ್ರಿಣೇತ್ರನೊಲವೆಂದೆ ತಾಳ್ದಿದಂ ಮಸ್ತಕದೊಳ್ || (ಕಂದಾರ್ಧಂ)

ಹಿಂದೆ ಅಮಾರ್ಗಕ್ಕೆಂದು ಕೊಟ್ಟಿರುವ ಪದ್ಯವನ್ನು ಮಾರ್ಗಕ್ಕೆ ತರಬಹುದು; ಎಂತೆಂದರೆ—

ಕರೆಯಿಸಿ ಪ್ರಧಾನರಂ ಕು |
ಳ್ಳಿರಿಸುತೆ ಪ್ರಿಯಕುಶಲವಾರ್ತೆಯಂ ನೆಱೆ ಕೇಳಲ್ |
ಸ್ಥಿರಮಿರ್ದ ಪ್ರಭುವಂದುನುಡಿಯೆ |
ಪ್ರರೂಢ ಮುದನಾದನಾತನೆಂಬುದು ಮಾರ್ಗಂ ||

(e) ಮೋಃ (೭೮), ಉಕಿ (೭೯), ಲೋನ್ತ್ಯಸ್ಥಾಯಾಂ (೭೦), ಳಃ (೭೧), ಎಂಬ ಭಟ್ಟಾಕಳಂಕನ ಸೂತ್ರಗಳನ್ನು ಜ್ಞಾಪಕದಲ್ಲಿಡಬಹುದು. ಮೂರು ಎಂಬುದಕ್ಕೆ ಆದೇಶವಾದ ಮು ಶಬ್ದದ ಮುಂದಿನ ವ್ಯಂಜನಕ್ಕೂ, ಪದಾಂತ್ಯದ ಉಗಾಗಮ ಪರಕವಾದ ವ್ಯಂಜನಕ್ಕೂ, ಅಂತಸ್ಥಗಳಾದ ಯ ರ ಲ ವ ಪರಕವಾದ ಲಕಾರಕ್ಕೂ, ಳಕಾರಕ್ಕೂ ದ್ವಿರ್ಭಾವವು ಬರುವುದು

ಉದಾಹರಣೆಗಳು—

ಮು+ಕೊಡೆ=ಮುಕ್ಕೊಡೆ, ಹೀಗೆಯೇ ಮುಗ್ಗುಡ್ಡೆ, ಮುಜ್ಜವಡಿ, ಮುಚ್ಚೋಟು,

ಮನಸ್ + ಉ=ಮನಸ್ಸು, ಹೀಗೆಯೇ ವಯಸ್ಸು, ಯಶಸ್ಸು, ನಭಸ್ಸು

ಬಲ್ + ಯತನಂ=ಬಲ್ಲ್ಯತನಂ, ಹೀಗೆಯೇ ಮೆಲ್ಲ್ರನ್ನಂ, ಬಲ್ಲಂಡಂ, ಕಲ್ಲ್ವಳೆ

ಒಳ್+ಯತನಂ=ಒಳ್ಳ್ಯತನಂ, ಹೀಗೆಯೇ ಒಳ್ಳ್ರನ್ನಂ, ಒಳ್ಳ್ವಣಿಗೆ

ಸಂಧಿಕಾರ್ಯದ ವಿಧಿನಿಷೇಧಗಳನ್ನು ತಿಳಿಸಿದುದಾಯ್ತು. ಆದರೆ ಪ್ರತಿಷೇಧವಿಲ್ಲದ ಸಂಧಿಯು ವಿಧಿಯೇ ಇಲ್ಲವೆನ್ನಬಹುದು "ಲುಙನಾಮಹಾನೌ (೩೬) ಎಂದು ಹೇಳಿದ್ದರೂ ಮಾಡಿಸು, ನೋಡಿಸು, ಎಂಬೆಡೆಗಳಲ್ಲಿ ಮಾಡು, ನೋಡು ಎಂಬ ರೂಪಗಳು ಹಾಳಾಗಿಯೇ ಹೋಗುತ್ತವೆ ಸಂಧಿಕಾರ್ಯದ ವಿಧಿಗಳು ಪ್ರಾಯೇಣ ಬಾಹುಳಕವೆಂಬುದನ್ನು ಜ್ಞಾಪಕದಲ್ಲಿಡಬೇಕಾಗಿದೆ ಈ ಸಂದರ್ಭದಲ್ಲಿ ಮುಂದೆ ಕೊಡುವ ಶ್ಲೋಕವು ಪ್ರಯೋಜನಕಾರಿಯಾಗಿರುವುದು. ಅದೆಂದರೆ—

ಕ್ವಚಿತ್ಪ್ರವೃತ್ತಿಃ ಕ್ವಚಿದಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯದೇವ |
ವಿಧೇರ್ವಿಧಾನಂ ಬಹುಧಾಸಮೀಕ್ಷ್ಯ ಚಾತುರ್ವಿಧಂ ಬಾಹುಳಕಂ ವದಂತಿ ||

೬. ಸಂಧಿವೈಕಲ್ಪ್ಯ.

ಅನೇಕೆಡೆಗಳಲ್ಲಿ ಸಂಧಿಕಾರ್ಯವು ಐಚ್ಛಿಕವಾಗಿರುವುದು, ಎಂದರೆ ಬೇಕಾದರೆ ಮಾಡಬಹುದು, ಬೇಡವಾದರೆ ಬಿಡಬಹುದು

A. ಸ್ವರಸಂಧಿಯಲ್ಲಿ ವಿಕಲ್ಪಸಂಧಿಯ ಸ್ಥಾನಗಳು ಐದಾಗಿರುವುವು.

ಯಾವುವೆಂದರೆ—ಮೇರದೇ (೪೭), ಕರೆದಲಿ (೪೮), ಗಡಾದಿಃ (೪೯), ಶ್ಲೋಕಾರ್ಧೇ (೫೦), ಅನುಕರಣಾಂ (೫೧). (a) ಅಕಾರಾಂತವಾದ ಇರ್ ಧಾತುವಿಗೆ ಅದೆ ಎಂಬುದು ಪರವಾಗಿರಲು, (b) ಕರೆ ಎಂಬ ಧಾತುವಿಗೆ ಅಲ್ ಪರವಾಗಿರಲು, (c) ಗಡಾದಿ ಗಣಪಠಿತಗಳಾದ ಅವ್ಯಯಗಳಿಗೆ ಸ್ವರ ಪರವಾಗಿರಲು, (d) ಪದ್ಯದ ಸಮಾರ್ಧವಾಗಿದ್ದು ಉತ್ತರಾರ್ಧವು ಸ್ವರದಿಂದ ಪ್ರಾರಂಭವಾಗಿರಲು, (e) ಸ್ವರಾಂತವಾದ ಅನುಕರಣ ಶಬ್ದಸ್ವರೂಪವು ಸ್ವರಪರಕವಾಗಿರಲು, ಸಂಧಿಕಾರ್ಯವು ಐಚ್ಛಿಕವೆಂದು ತಿಳಿಯಬೇಕು. ಉದಾಹರಣೆಗಳು—

(a) ಇರ್ ಧಾತುವಿಗೆ—ಇರ ಅದೆ, ಇರದೆ.

(b) ಕರೆಧಾತುವಿಗೆ—ಕರೆಅಲ್, ಕರೆಯಲ್, ಕರೆಅಲಿಂ, ಕರೆಯಲಿಂ, ಕರೆ ಅಲೊಡಂ, ಕರೆಯಲೊಡಂ, ಕರೆ ಅಲೊಡನೆ, ಕರೆಯಲೊಡನೆ;

(c) ಅವ್ಯಯದ ಮುಂದಣ ವಿಸಂಧಿಗೆ—ನೀನಲ್ಲದೆ ಆವನಧಿಕನಿಳೆಯೊಳ್ ಜಿನವಾ ?, ತಾಂಗಡ ಅಂಗಜಂಗಡ ಅಶೋಕಶರಂಗಡ ಅಂಜೆಯುಂಗಡ.

ಅವ್ಯಯದ ಮುಂದಣ ಸಂಧಿಗೆ—ನೀನಲ್ಲದಾವನಧಿಕನಿಳೆಯೊಳ್ ಜಿನವಾ || ತಾಂಗಡಂಗಜಂಗಡಶೋಕಶರಂಗಡಂಜೆಯುಂಗಡ

ಗಡಾದಿ ಪಠಿತಗಣದಲ್ಲಿ ಗಡ, ಗಳ, ಅಲ್ತು, ಅಲ್ಲಿ, ಇಲ್ಲ, ಇಲ್ಲದೆ, ಅಲ್ಲದೆ, ಆಗಡ, ಈಗಡ, ಪೊಳ್ತಡ, ತಡಂಡ, ಅಕ್ಕಟ, ಅಕಟ, ಅಹಹ, ಬಳಿಕ್ಕೆ, ಬಳಿಕೆ, ಭೋಂಕನೆ, ಚಕ್ಕನೆ, ಭೋರನ, ಪಯ್ಕನೆ, ಬಯ್ಕನೆ, ಪಾವನೆ, ಪಾವಗೆ, ನೆಟ್ಟನೆ, ನೆಟ್ಟಗೆ, ತೊಟ್ಟನೆ, ತೊಟ್ಟಗೆ, ಅಯ್ಕನೆ, ಅಯ್ಕಗೆ, ಗಿಱನೆ, ಗಿಱ್ರಗೆ, ತಿಱ್ರನೆ, ತಿಱ್ರಗೆ, ತಿಟ್ಟನ, ತಿಟ್ಟಗ, ಸುಮ್ಮನೆ, ಸುಮ್ಮಗ, ಬಿಮ್ಮನೆ, ಬಿಮ್ಮಗೆ, ಮೆಲ್ಲನೆ, ಮಲ್ಲಗೆ, ಕಮ್ಮನೆ, ಕಮ್ಮಗೆ, ತಣ್ಣನೆ, ತಣ್ಣಗೆ, ನುಣ್ಣನೆ, ನುಣ್ಣಗ, ಪೊಕ್ಕನೆ, ಪೊಕ್ಕಗ, ಪಕ್ಕನೆ, ಪಕ್ಕಗ ಮುಂತಾದ ಪದಗಳು ಸೇರು ವುವು ಇದು ಆಕೃತಿಗಣ

(d) ಶ್ಲೋಕಾರ್ಧದ ವಿಸಂಧಿಗೆ—

ಅಲ್ಲಿ ಇದುಂಟೆಂಬರ್ಧದೊ |
ಳೆಲ್ಲಿಯು ಮುಳಿಳ್ಪುಡೆಯುವಂತೆ ಶಬ್ದಮುಮಕ್ಕುಂ ||
ಎಲ್ಲಂದದೊಳಂ ಪೋಲಿಸು |
ವಲ್ಲಿ ಗುಣಾಧಿಕದೊಳಂತೆ ಪೋಲೆನಲಕ್ಕುಂ ||

ಶ್ಲೋಕಾರ್ಧದ ಸಂಧಿಗೆ—

ದೇವಾ ಕೇಳ್ ಬಿನ್ನಪಮಂ |
ಶ್ರೀವೀರಜಿನೇಂದ್ರ ಸಮವಸರಣಂ ಬಂದೀ ||
ಯಾವಾಸದ ಪಿತ್ತಿಲ ವನ |
ದೋವರಿಯೊಳ್ ನೆಲಸಿತಖಿಳ ಸುರಗಣಸಹಿತಂ ||

(e) ವಾಕ್ಯವೇಷ್ಟನ ವಿಸಂಧಿಗೆ—

ಕಃ ಕೇನಾರ್ಥೀಕೋ ದರಿದ್ರೋ ವಿನಿತಸಿತಮಂ ಧರ್ಮಜಂ ಸೂಱೆಗೊಟ್ಟಂ

ವಾಕ್ಯವೇಷ್ಟನ ಸಂಧಿಗೆ—

ನದೇವಚರಿತಂ ಚರನೆನಿಸಿದಯ್ ತ್ರಿಲೋಕೇಶ್ವರಾ ।

ಅನುಕರಣ ವಿಸಂಧಿಗೆ—

ಕವಕ್ಕವ ಎಲೆಎಲೆ ಬಬ ಪುಗಲ್ಪುಗಲೆಂದೊಜ್ಜತ ಊರ್ಧ್ವಕೋಗಿಲೆಯುಂ.

ಅನುಕರಣಸಂಧಿಗೆ—ಭಮೆಂಬ, ಭಟಭಟೆಂಬ.

“ಅನುಕರಣಂ” ಎಂಬ ಭಟ್ಟಾಕಳಂಕನ ಸೂತ್ರದಲ್ಲಿ ಅನುಕರಣ ಶಬ್ದಕ್ಕೆ

ಅನ್ಯತ್ರ ಎದ್ದಂತೆಯೇ ವ್ಯತ್ಯಾಸಮಾಡದೆ ಉಚ್ಚರಿಸಿದ ವರ್ಣಾತ್ಮಕ ಶಬ್ದವೆಂದು ಅರ್ಥಮಾಡಬೇಕು. "ಇದು ಕೆಲವೆಡೆಗಳಲ್ಲಿ ಸಂಸ್ಕೃತ ಪ್ರಾಕೃತಾದಿಗತ ಶಬ್ದವಾಕ್ಯಾಂತರ ರೂಪವಾಗಿರುವುದು ಕೆಲವೆಡೆಗಳಲ್ಲಿ ಧ್ವನ್ಯಾತ್ಮಕವಾಗಿರುವುದು ಇಂತಹ ಅನುಕರಣವು ಸ್ವೋಕ್ತ ಪರೋಕ್ತ ಸಾಧಾರಣವೆಂದು ತಿಳಿಯಬೇಕು ಇಂತಹ ಅನುಕರಣಗಳ ಮಧ್ಯದಲ್ಲಿ ಏಕಾರದಿಂದ ಅಕಾರಾಂತವಾಗಿರುವುದು ಮುಂದಿನ ಸೂತ್ರಕ್ಕೆ ವಿಷಯವೆಂದು ಅಂತಹ ಅನುಕರಣವನ್ನು ಬಿಟ್ಟು ಪ್ರಕೃತಿ ವಿಕೃತಿ ಸಾಧಾರಣ ಸ್ವರಾಂತಾನುಕರಣಗಳೇ ಇಲ್ಲಿ ಸಂಗ್ರಹಿಸಲ್ಪಟ್ಟಿವೆ" ಎಂದು ಕುಂಡಲಗಿರಿ ಆಚಾರ್ಯರವರು ಶಬ್ದಾನುಶಾಸನ ಪ್ರಕಾಶಿಕೆಯ ೧೪೩ ನೆಯ ಪುಟದಲ್ಲಿ ಹೇಳಿರುತ್ತಾರೆ.

B- ವ್ಯಂಜನಸಂಧಿಯ ವಿಕಲ್ಪದ ವಿಷಯ

(a) ಇತಃಪೋಚಿ (೫೭), ಕೋದಪಶ್ಚತಿಬ್ (೫೮) ತೋರ್ನಪಃ (೫೯) ಎಂಬ ಭಟ್ಟಾಕಳಂಕನ ಸೂತ್ರಗಳು ಮುಖ್ಯವಾಗಿವೆ. ಇಕಾರಕ್ಕೆ ಪರವಾದ ಪಕಾರಕ್ಕೆ, ಇಕಾರಾತ್ಪರವಾದ ಕಕಾರಕ್ಕೂ ದಪದ ಪಕಾರಕ್ಕೂ, ಅಚ್ ಪ್ರತ್ಯಯವು ಪರವಾಗಿರಲು, ದ್ವಿತ್ವವು ವಿಕಲ್ಪವಾಗಿ ಬರುವುದು, ತು ಶಬ್ದಾಂತ ನಪುಂಸಕಲಿಂಗದ ಇಕಾರಾತ್ಪರ ತಕಾರಕ್ಕೆ ಸ್ವರವು ಪರವಾಗಲು ವಿಕಲ್ಪವಾಗಿ ದ್ವಿತ್ವವು ಬರುವುದು ಉದಾಹರಣೆಗಳು—

ದ್ವಿತ್ವಕ್ಕೆ		ಅದ್ವಿತ್ವಕ್ಕೆ
ತರಿಪ್ಪಂ		ತರಿಪಂ
ಬರಿಪ್ಪಂ		ಬರಿಪಂ
ಮಾಡಿಪ್ಪಂ		ಮಾಡಿಪಂ
ಮಾಡಿಕ್ಕುಂ		ಮಾಡಿಕುಂ
ಮಾಡಿಕ್ಕೆ		ಮಾಡಿಕೆ
ಮಾಡಿದಪ್ಪಂ		ಮಾಡಿದಪಂ
ತರಪ್ಪಯ್		ತರಪಯ್
ತಂದಪ್ಪಯ್	...	ತಂದಪಯ್
ಒಳ್ಳಿತ್ತು	...	ಒಳ್ಳಿತು
ಮೆಲ್ಲಿತ್ತು	...	ಮೆಲ್ಲಿತು

ದ್ವಿತ್ವವನ್ನು ಹೊಂದಿರುವ ವರ್ಣವೆಲ್ಲವೂ ವರ್ಗಪ್ರಥಮಾಕ್ಷರವಾಗಿರುವುದೊಂದು ಮುಖ್ಯ ವಿಷಯವಾಗಿದೆ ಪದಮಧ್ಯದಲ್ಲಿ ವರ್ಗಪ್ರಥಮಗಳ ಅದ್ವಿತ್ವೋಚ್ಚಾರಣೆಯಿಲ್ಲದಿರುವುದು ತಮಿಳೊಂದರಲ್ಲಿಯೇ ಎಂಬುವನ್ನು ಆಲೋಚಿಸುವಲ್ಲಿ ದಕ್ಷಿಣಮಾರ್ಗದ ಕನ್ನಡಕ್ಕಿರುವ ತಮಿಳ ಸಂಪರ್ಕವು ಸ್ಪಷ್ಟಪಡುವುದು. ಕನ್ನಡದಲ್ಲಿ ಪದ

ಮಧ್ಯದಲ್ಲಿ ವರ್ಗಪ್ರಥಮಗಳಿಗೆ ದ್ವಿತ್ವಾದ್ವಿತ್ವಗಳೆರಡೂ ಇರುವುದರಿಂದ ಕನ್ನಡವು ಪ್ರವರ್ಧಮಾನದಶೆಗೆ ಬಂದ ದೇಶವನ್ನು ಸುಲಭವಾಗಿ ನಿಶ್ಚಯಿಸಬಹುದು. ತಮಿಳಿನ ದೃಢಸಂಪರ್ಕವಿಲ್ಲದ ಪ್ರದೇಶದಲ್ಲಿ ಕನ್ನಡವು ಬೆಳೆಯಿತೆಂಬುದು ಪದಮಧ್ಯದಲ್ಲಿರುವ ವರ್ಗಪ್ರಥಮದ ಅದ್ವಿತ್ವೋಚ್ಚಾರಣೆಯಿಂದ ಹೊರಪಡುವುದು.

(b) ವೈಕಲ್ಪಿಕ ವ್ಯಂಜನ ಸಂಧಿಯ ವಿಷಯದಲ್ಲಿ "ವಾಗೆಗಳ್ದದ ಪವಗುಮ (೭೬), ಕಾದಲರಃ (೭೫), ಎಂಬ ಭಟ್ಟಾಕಳಂಕನ ಸೂತ್ರಗಳು ಮುಖ್ಯಗಳಾಗಿವೆ. ಲಘ್ವಕ್ಷರಾದಿಯೂ ಲಘ್ವಕ್ಷರೋಪಾಂತ್ಯವಾಗಿಯೂ ಅಲಕಾರಾಂತವಾಗಿಯೂ, ಅನೇಕಸ್ವರವುಳ್ಳುದಾಗಿಯೂ ಇರುವ ಶಬ್ದದ ಮುಂದಿನ ಗೆ, ಗಳ್, ದ, ದಪ, ವ, ಗುಂ ಎಂಬ ಪ್ರತ್ಯಯಗಳ ಅವಯವಗಳಾದ ಗ, ದ, ವ ಗಳಿಗೆ ವಿಕಲ್ಪವಾಗಿ ದ್ವಿತ್ವವು ಬರುವುದು. ಮತ್ತು ಕಾದಲರ್ ಎಂಬ ಶಬ್ದದ ಮುಂದಿನ ಗೆ, ಗಳ್ ಎಂಬ ಪ್ರತ್ಯಯಗಳ ಗಕಾರವೂ ವಿಕಲ್ಪವಾಗಿ ದ್ವಿರುಚ್ಚಾರಿತವಾಗುವುದು. ಉದಾಹರಣೆಗಳು—

ದ್ವಿತ್ವಕ್ಕೆ		ಅದ್ವಿತ್ವಕ್ಕೆ
ಕೊನರ್ಗ್ಗೆ	..	ಕೊನರ್ಗೆ
ಅದಿರ್ಗ್ಗೆ	...	ಅದಿರ್ಗೆ
ಎಸಳ್ಗ್ಗೆ	...	ಎಸಳ್ಗೆ
ಪೊಗಳ್ಗ್ಗೆ	.	ಪೊಗಳ್ಗೆ
ಸುರರ್ಗ್ಗಳ್		ಸುರರ್ಗಳ್
ಎಸಳ್ಗ್ಗಳ್	.	ಎಸಳ್ಗಳ್
ಉಸಿರ್ದ್ದರ್	.	ಉಸಿರ್ದರ್
ಅಗುಳ್ದ್ದಯ್	..	ಅಗುಳ್ದಯ್
ಉಸಿರ್ದ್ದಪೆಂ	...	ಉಸಿರ್ದಪೆಂ
ಪೊಗಳ್ದ್ದಪೆಂ	..	ಪೊಗಳ್ದಪೆಂ
ಕಿಸುರ್ವ್ವಯ್	..	ಕಿಸುರ್ವಯ್
ತೆಗಳ್ವ್ವೆಂ	..	ತೆಗಳ್ವೆಂ
ಒಸರ್ಗ್ಗುಂ	..	ಒಸರ್ಗುಂ
ಮುಗುಳ್ಗ್ಗುಂ	...	ಮುಗುಳ್ಗುಂ

ಮೇಲಣ ಉದಾಹರಣೆಗಳಲ್ಲಿ ಗಕಾರ ದಕಾರ ವಕಾರಗಳಿಗೆ ದ್ವಿತ್ವವಿಲ್ಲದೆ ಶಿಥಿಲವಾಗಿರುವುದಕ್ಕೆ ಕಾರಣವೂ ಉಂಟು. ತಮಿಳಲ್ಲಿ ಗಕಾರ ದಕಾರಗಳಿಗೆ ಬಹು ಒಕು ಮೃದುವಾದ ಉಚ್ಚಾರಣೆಯಿರುವುದು. ಅವರ್ಗಳ್ ಎಂಬುದನ್ನು ಸ್ವಲ್ಪ ಹೆಚ್ಚು ಕಡಿಮೆಯಾಗಿ ಅವರ್ಹಳ್ ಎಂದು ಉಚ್ಚರಿಸುತ್ತಾರೆ. ಹೊಸಗನ್ನಡದ, ಎಂದರೆ ಉತ್ತರ ಮಾರ್ಗದ ಕನ್ನಡದ ಕತ್ತೆ ಎಂಬ ಮಾತು ಹಳಗನ್ನಡದಲ್ಲಿ ಕಟ್ತೆ ಎಂಬ ರೂಪದಲ್ಲಿದೆ.

ಈ ಕಟ್ಟಿತ್ತು ಎಂಬುದು ತಮಿಳಲ್ಲಿ ಕಟ್ಟಿದೆ ಎಂಬುದಾಗಿ ಉಚ್ಚರಿಸಲ್ಪಡುವುದು, ಆದರೆ ದಕಾರೋಚ್ಚಾರಣೆಯು ಬಹು ಬಹು ಮೃದುವಾಗಿರುತ್ತದೆ. ರೇಫ ಳಕಾರ ಱಕಾರಗಳ ಪರದಲ್ಲಿ ಬರುವ ವಕಾರಕ್ಕೂ ಬಹು ಬಹು ಮೃದೂಚ್ಚಾರಣೆಯು ತಮಿಳಲ್ಲಿರುವುದು. ತಮಿಳಲ್ಲಿ ಗದಕಾರಗಳಿಗೆ ದ್ವಿತ್ವವೇ ಇಲ್ಲ ಮಗುಳ್ಗಂ, ಉಸಿರ್ದರ್ ಎಂಬ ರೂಪಗಳು ತಮಿಳ ಭಾಷೆಯಲ್ಲಿಯೇ ಇಲ್ಲ ಈ ಸಂದರ್ಭಗಳನ್ನು ಪರಿಶೀಲಿಸುವಲ್ಲಿ ದಕ್ಷಿಣಮಾರ್ಗದ ಕನ್ನಡದ ಬಳಿವಳಿಗೆ ಇದ್ದ ತಮಿಳ ಭಾಷೆಯ ಪ್ರಭಾವವು ಹೊರ ಪಡುವುದು ತಮಿಳ ಪ್ರಭಾವವು ಅತಿಶಯವಾಗಿದ್ದ ತಳಕಾಡು ಮುಂತಾದ ಪ್ರಾಂತಗಳ ಸಮೀಪದಲ್ಲಿಯೂ ತಮಿಳುದೇಶಗಳಿಗೆ ದೂರವಾಗಿದ್ದ ಧಾರವಾಡ ಮುಂತಾದ ಪ್ರದೇಶಗಳಲ್ಲಿಯೂ ದಕ್ಷಿಣಮಾರ್ಗದ ಕನ್ನಡವು ಬಳೆಯಿತೆನ್ನುವುದಕ್ಕೆ ಮೇಲ್ಕಂಡ ಸಂಧಿ ವಿಕಲ್ಪಗಳು ನಿದರ್ಶನಗಳಾಗಿವೆ.

(c). ವಾರಯ್ಗೆ ಯಃ (೫೬), ಯೋವಾಲಿ (೬೪) ಎಂಬ ಭಟ್ಟಾಕಳಂಕನ ಸೂತ್ರಗಳನ್ನೂ ಈ ವಿಕಲ್ಪಸಂಧಿಯ ವಿಷಯದಲ್ಲಿ ಜ್ಞಾಪಕವಿಡಬೇಕು ಅರಯ್ ಗೆಯ್, ಎಂಬ ಧಾತುಗಳಿಗೆ ಸ್ವರಪರವಾದಾಗಲೂ, ಯಕಾರಾಂತ ಧಾತುವಿಗೆ ಅಲ್ ಪರವಾದಾಗಲೂ, ಯಕಾರಕ್ಕೆ ವಿಕಲ್ಪವಾಗಿ ದ್ವಿತ್ವವು ಒರುವುದು.

ಉದಾಹರಣೆಗಳು—

ಅರಯ್+ಅಲ್=ಅರಯ್ಯಲ್, ಅರಯಲ್, ಹೀಗೆಯೇ ಅರಯ್ಯೆ, ಅರಯೆ, ಅರಯ್ಯಿಂ, ಅರಯಿಂ, ಗೆಯ್ಯಲ್, ಗೆಯಲ್, ಗೆಯ್ಯುತ್ತುಂ, ಗೆಯುತುಂ, ಗೆಯ್ಯಿಂ, ಗೆಯಿಂ, ಪೊಯ್ಯಲೊಡಂ, ಪೊಯಲೊಡಂ. ಬಯ್ಯಲೊಡಂ, ಬಯಲೊಡಂ

೭. ಉತ್ತರಮಾರ್ಗದ ಸಂಧಿಯ ವಿಚಾರ.

ಕ್ರಿ ಶ ಒಂಬತ್ತನೆಯ ಶತಮಾನದಲ್ಲಿ ಬಾಳಿದ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ಕರ್ಣಾಟ ವ್ಯಾಕರಣಕ್ಕೆ ಸಂಬಂಧಪಡುವ ಕೆಲಕೆಲವಂಶಗಳನ್ನು ಅಲ್ಲಲ್ಲಿ ಹೇಳಿದ್ದಾನೆ. ಸಂಧಿಯ ವಿಚಾರವನ್ನು ಅವನು ಮಾಡಿಲ್ಲ ಕವಿರಾಜಮಾರ್ಗವನ್ನು ನೋಡುವಲ್ಲಿ ನೃಪತುಂಗನು ದಕ್ಷಿಣಮಾರ್ಗ ಪಕ್ಷಪಾತಿಯೆಂಬುದು ಸ್ಪಷ್ಟಪಡುತ್ತದೆ. ಕ್ರಿ. ಶ. ೧೨ ನೆಯ ಶತಮಾನದ ಮಧ್ಯದಲ್ಲಿ ಬಾಳಿದ ಇಮ್ಮಡಿ ನಾಗವರ್ಮನು ದಕ್ಷಿಣಮಾರ್ಗ ಪಕ್ಷಪಾತಿಯೆಂದೇ ಹೇಳಬೇಕಾಗಿದೆ. ಅವನು ತಾನು ಲಕ್ಷ್ಯವಾಗಿಟ್ಟುಕೊಂಡಿದ್ದ ಗ್ರಂಥಗಳನ್ನು ಸ್ಪಷ್ಟವಾಗಿ ಹೇಳಿಲ್ಲ. ನಯಸೇನ, ಹರಿಪಾಲ ಗುಣವರ್ಮರ ಪ್ರಯೋಗಗಳನ್ನು ಕೆಲವೆಡೆಗಳಲ್ಲಿ ಕೊಟ್ಟಿರುತ್ತಾನೆ. ಅವನ ಭಾಷಾಭೂಷಣದ ಸೂತ್ರಗಳನ್ನು ನೋಡುವಲ್ಲಿ ಅವನೂ ದಕ್ಷಿಣಮಾರ್ಗ ಪಕ್ಷಪಾತಿಯೆಂಬುದು ಸ್ಪಷ್ಟಪಡುತ್ತದೆ. ಕ್ರಿ. ಶ. ೧೨ ನೆಯ ಶತಮಾನದ ಉತ್ತರಾರ್ಧದಲ್ಲಿ ವೀರಶೈವ ಕವಿಗಳನೇಕರು ಗ್ರಂಥಗಳನ್ನು ಬರೆದಿದ್ದರು. ಉಭಯಕವಿ ಶರಭ ಭೇರುಂಡ

ಉಭಯಕವಿ ಕವಿ-ಶಾರದಿಕ್ಕ ಎಂಬ ಬಿರುದನ್ನು ಪಡೆದಿದ್ದ ರಾಘವಾಂಕನು ಬಹು ಪ್ರಸಿದ್ಧನಾಗಿದ್ದನು ಕ್ರಿ ಶ ೧೩ ನೆಯ ಶತಮಾನದ ಮಧ್ಯಭಾಗದಲ್ಲಿ ಬಾಳಿದ ಕೇಶಿರಾಜನು ತನ್ನ ಶಬ್ದಮಣಿದರ್ಪಣಕ್ಕೆ ರಾಘವಾಂಕನ ಉತ್ತರಮಾರ್ಗದ ಪ್ರಯೋಗಗಳನ್ನು ಲಕ್ಷ್ಯವಾಗಿಟ್ಟುಕೊಳ್ಳಲಿಲ್ಲ.

ಗಜಗನ ಗುಣನಂದಿಯ ಮನ |
ಸಿಜನಸಗನ ಚಂದ್ರಭಟ್ಟಗುಣವರ್ಮ ಶ್ರೀ ||
ವಿಜಯರ ಹೊನ್ನನ ಹಂಪನ |
ಸುಜನೋತ್ತಂಸನ ಸುಮಾರ್ಗವಿದರೊಳ್ ಲಕ್ಷ್ಯಂ || ೫ ||

ಎಂದು ಹೇಳಿಕೊಂಡಿರುವನು ಮೇಲೆ ಕೊಟ್ಟಿರುವ ಕವಿಗಳಾರೂ ಉತ್ತರ ಮಾರ್ಗದ ಕವಿಗಳಾಗಿಲ್ಲ ಕ್ರಿ ಶ ೧೭ ನೆಯ ಶತಮಾನದ ಆದಿಯಲ್ಲಿ ಬಾಳಿದ ಭಟ್ಟಾಕಳಂಕನು ಪೂರ್ವದ ಕರ್ಣಾಟಕ ವೈಯಾಕರಣರನ್ನು ದಕ್ಷಿಣಮಾರ್ಗ ಪಕ್ಷಪಾತಿಗಳೆಂದು ಕರೆಯುತ್ತಾನೆ ಹೀಗಿದ್ದರೂ ಭಟ್ಟಾಕಳಂಕನೂ ಕುಮಾರವ್ಯಾಸ ಮುಂತಾದವರ ಉತ್ತರಮಾರ್ಗದ ಪ್ರಯೋಗಗಳನ್ನು ಬಹಳವಾಗಿ ಬಿಟ್ಟಿರುತ್ತಾನೆ. ಹೀಗಿರುವುದರಿಂದ ಸಂಧಿಕಾರ್ಯದ ವಿಷಯದಲ್ಲಿ ದಕ್ಷಿಣಮಾರ್ಗಕ್ಕೂ ಉತ್ತರ ಮಾರ್ಗಕ್ಕೂ ಇರುವ ಮುಖ್ಯ ಮುಖ್ಯ ಭೇದಗಳನ್ನು ವಿಚಾರಮಾಡುವುದು ಆವಶ್ಯಕವಾಗಿ ತೋರುತ್ತದೆ

(೧) ದಕ್ಷಿಣಮಾರ್ಗದ ವ್ಯಂಜನಾಂತ ಪದಗಳ ವಿಷಯ.

ಯ ರ ಲ ಣ ನ ಳ ೞ ಱ ವರ್ಣೋ |
ತ್ಕರಮೆ ವಲಂ ಪದದ ಕಡೆಯೊಳಸ್ವರ ವಿಧಿಯಂ ||
ಪಿರಿದುಂ ತಾಳ್ದುಗುಮವನಱ ||
ವರೆ ಕನ್ನಡ ಗಬ್ಬದೊಳ್ತೊಡಂಕದೆ ಸಲ್ವರ್ ||೪೮||

ಎಂದು ಕೇಶಿರಾಜನು ಹೇಳಿ

ಸ್ವರರಹಿತ ವ್ಯಂಜನಮುವು |
ಪರವರ್ಣಮನೈದುತಿರ್ಪುವಾ ಸಂಹಿತೆಯೊಳ್ ||೯||

ಎಂದು ವಿಧಿಸಿರುವನು

ಉತ್ತರಮಾರ್ಗದಲ್ಲಿ ಈ ವ್ಯಂಜನಾಂತ ಶಬ್ದಗಳು ಸ್ವರಾಂತಗಳಾಗಿ ಸಂಧಿಕಾರ್ಯವು ಬೇರೆ ವಿಧದಲ್ಲಿ ನಡೆವುದು. ಉದಾಹರಣೆಗಳು —

ದಕ್ಷಿಣಮಾರ್ಗ		ಉತ್ತರಮಾರ್ಗ
ತಾಯ್ತಂದೆಗಳ್	...	ತಾಯಿತಂದೆಗಳು
ಪಾಲ್ಮೊಸರ್ಗಳ್	...	ಹಾಲು ಮೊಸರುಗಳು

(೨) ದಕ್ಷಿಣಮಾರ್ಗದ ಸಂಯುಕ್ತಾಕ್ಷರಗಳು ಉತ್ತರಮಾರ್ಗದಲ್ಲಿ ಕೆಲವೆಡೆಗಳಲ್ಲಿ ವಿರಳ ಮಾಡಲ್ಪಡುವುವು.

ರೇಫ ಳ (ಱ ೞ) ಕಾರಗಳ ಆದೇಶವನ್ನು ಕುರಿತು ಭಟ್ಟಾಕಳಂಕನು ಉಡೋ ದೀರ್ಘಾದ್ರಳಂ ವ್ಯಂಜನೇ (೮೨), ಬಹುಸ್ವರಸ್ಯ (೮೩), ಪ್ರತ್ಯಯೇ (೮೪), ವಾಗಿ (೮೫) ಎಂದು ಹೇಳಿರುವನು. ದು ಸಂಜ್ಞಿಕಗಳಾದ ಱು ೞು ಎಂಬುವುಗಳಿಗೆ, ಬಹುಸ್ವರವುಳ್ಳ ದು ಸಂಜ್ಞಿಕ ಱು ೞುಗಳಿಗೆ ವ್ಯಂಜನವೋ ವ್ಯಂಜನಾದಿ ಪ್ರತ್ಯಯಗಳೋ ಪರವಾಗಲು, ರೇಫ ಳ (ಱ ೞ) ಕಾರಗಳು ಆದೇಶವಾಗಿ ಬರುವುವು ಎಂದು ತೋರಿಸಿರುವನು. ಈ ಸಂಯುಕ್ತಾಕ್ಷರಗಳು ಉತ್ತರ ಮಾರ್ಗದಲ್ಲಿ ವಿರಳವಾಗುವುವು. ವಿರಳವಾಗುವ ತೆರವನ್ನು ಜ್ಞಾಪಕದಲ್ಲಿಡುವುದಕ್ಕೆ ಅಗಿಗುಗ್ವ್ಯಂಜನೇ ವ್ಯಂಜನಸ್ಯ (೧೪೭) ಎಂಬ ಸೂತ್ರವನ್ನು ಜ್ಞಾಪಕದಲ್ಲಿಡಬಹುದು ವ್ಯಂಜನಕ್ಕೆ ವ್ಯಂಜನವು ಪರವಾಗಿರುವಾಗ ಲಕ್ಷ್ಯಾನುಸಾರವಾಗಿ ಅಗಾಗಮ, ಇಗಾಗಮ ಉಗಾಗಮಗಳು ಬರುವುವು ಈ ಸಂದರ್ಭದಲ್ಲಿ ಸುಶ್ರಾವ್ಯಸ್ವರವಿಧಿಯನ್ನೂ ಜ್ಞಾಪಕದಲ್ಲಿಡಬೇಕು ಉದಾಹರಣೆಗಳು.—

ಬೇಸರ್ನುಡಿ	....	ಬೇಸಱುನುಡಿ, ಬೇಸಱನುಡಿ
ನೂರ್ಸಾಸಿರಂ	....	ನೂಱು ಸಾಸಿರಂ
ಕಾಳ್ಗಿಚ್ಚು	....	ಕಾೞುಗಿಚ್ಚು, ಕಾೞಗಿಚ್ಚು
ಕೋಳ್ಮೊನೆ	....	ಕೋೞುಮೊನೆ, ಕೋೞಮೊನೆ
ಬೀಳ್ತಾಣಂ	....	ಬೀೞುತಾಣಂ, ಬೀೞುದಾಣ
ಬಿದರ್ಗಂಟಿ	....	ಬಿದಱುಗಂಟಿ, ಬಿದಱಗಂಟಿ
ಕೆದರ್ತಲೆ	...	ಕೆದಱುದಲೆ
ಮುದುಳ್ಗಂಟು	...	ಮುದುೞುಗಂಟು
ಕವಳ್ಗೊಲೆ	..	ಕವೞುಗೊಲೆ
ತೋರ್ಕೆ	...	ತೋಱುಕೆ, ತೋಱಕೆ
ತೋರ್ಕುಂ	....	ತೋಱುಗುಂ
ಮಾಳ್ಕುಂ	....	ಮಾೞುಗುಂ
ತೇರ್ಗಳ್	....	ತೇಱುಗಳು
ಮೂಳ್ಗುಂ	....	ಮೂೞುಗುಂ

(೩) ಇಸು ಪ್ರತ್ಯಯದ ಸು ಎಂಬುದಕ್ಕೆ ಚು ಎಂಬ ಆದೇಶವು ದಕ್ಷಿಣ ಮಾರ್ಗದಲ್ಲಿ ಬರುವುದುಂಟು, ಉತ್ತರಮಾರ್ಗದಲ್ಲಿಲ್ಲ.

ಉದಾಹರಣೆಗಳು

ದಕ್ಷಿಣಮಾರ್ಗ		ಉತ್ತರಮಾರ್ಗ
ಉದಿರ್ಚು		ಉದಿರಿಸು
ಒಡರ್ಚು	....	ಒಡರಿಸು
ಅಮರ್ಚು	....	ಅಮರಿಸು

(೪) ದಕ್ಷಿಣಮಾರ್ಗದ ಪದಗಳಲ್ಲಿ ಕಾಣಬರುವ ರೇಫ ಳಕಾರ ಱಕಾರ ಲಕಾರಗಳನ್ನುಳ್ಳ ಸಂಯುಕ್ತಾಕ್ಷರಗಳಲ್ಲಿ ಉತ್ತರಮಾರ್ಗದಲ್ಲಿ ಪೂರ್ವ ವರ್ಣಕ್ಕೆ ಪರಸವರ್ಣಾದೇಶವಾಗುವುದು.

ಉದಾಹರಣೆಗಳು.

ದಕ್ಷಿಣಮಾರ್ಗ	ಉತ್ತರಮಾರ್ಗ
ಇರ್ಮ್ಮಡಿ	ಇಮ್ಮಡಿ
ಬಿಳ್ದ	ಬಿದ್ದ
ಕಱ್ತೆ	ಕತ್ತೆ
ಗೆಲ್ದ	ಗೆದ್ದ
ಎೞ್ಚರ	ಎಚ್ಚರ

(೫) ದಕ್ಷಿಣಮಾರ್ಗದ ಪದಗಳಲ್ಲಿ ರೇಫಯುಕ್ತವಾಗಿಯೋ ಱಕಾರಯುಕ್ತವಾಗಿಯೋ ಬರುವ ಸಂಯುಕ್ತಾಕ್ಷರಗಳಲ್ಲಿ ಉತ್ತರ ಮಾರ್ಗದಲ್ಲಿ ಬಹುಳವಾಗಿ ಪೂರ್ವವರ್ಣವು ಲೋಪವಾಗುವುದುಂಟು.

ಉದಾಹರಣೆಗಳು.

ದಕ್ಷಿಣಮಾರ್ಗ	ಉತ್ತರಮಾರ್ಗ
ಕರ್ದುಕು, ಕರ್ದುಂಕು	ಕದುಕು
ಬರ್ದುಕು, ಬರ್ದುಂಕು	ಬದುಕು
ಬಾರ್ಚು	ಬಾಚು
ನಾೞ್ಚು	ನಾಚು

(೬) ದಕ್ಷಿಣಮಾರ್ಗದ ರೂಪದಲ್ಲಿರುವ ಪಕಾರಕ್ಕೆ ಉತ್ತರಮಾರ್ಗದಲ್ಲಿ ಹಕಾರವು ಬಹುಳವಾಗಿ ಬರುವುದು.

ಉದಾಹರಣೆಗಳು

ದಕ್ಷಿಣಮಾರ್ಗ	ಉತ್ತರಮಾರ್ಗ
ತರ್ಪ್ಪು, ತಪ್ಪು	ತಹ
ಬರ್ಪ್ಪು, ಬಪ್ಪು	ಬಹ
ಇಂತಪ್ಪ	ಇಂತಹ
ಎಂತಪ್ಪ	ಎಂತಹ
ನೀರ್ವಾವು, ನೀರ್ಪ್ಪಾವು	ನೀರಹಾವು ಇತ್ಯಾದಿ.

(೭) ದಕ್ಷಿಣಮಾರ್ಗದಲ್ಲಿ ಕಾಣಬರುವ ವ್ಯಂಜನದ್ವಿತ್ವವು ಉತ್ತರಮಾರ್ಗದಲ್ಲಿ ಬಹುಳವಾಗಿ ಕಾಣಬರುವುದಿಲ್ಲ.

ಉದಾಹರಣೆಗಳು.

ದಕ್ಷಿಣಮಾರ್ಗ	ಉತ್ತರಮಾರ್ಗ
ಚಿಕ್ಕದೇವರಾಜ	ಚಿಕದೇವರಾಜ

ದೊಡ್ಡದೇವರಾಜ	...	ದೊಡದೇವರಾಜ
ತರಿಪ್ಪಂ	...	ತರಿಪಂ
ಮಾಡಿಕ್ಕುಂ	...	ಮಾಡಿಕುಂ
ತಂದಪ್ಪೆಂ	...	ತಂದಹೆಂ
ಹಲ್ಲು	...	ಹಲು
ಪೆಣೆಗಣ್ಣಾಂ	...	ಹಣೆಗಣಾನು, ಹಣೆಗಣಾ
ಮುತ್ತಯ್ಯ	..	ಮುತ್ತಯ ಇತ್ಯಾದಿ

ಹೊಸಗನ್ನಡದ ಗ್ರಂಥಗಳಲ್ಲಿ ಎಂದರೆ ಉತ್ತರಮಾರ್ಗದ ಗ್ರಂಥಗಳಲ್ಲಿ ಮೇಲಣ ವಿಧಿಗಳಿಗೆ ಲಕ್ಷ್ಯಗಳು ಬೇಕಾದಷ್ಟು ದೊರೆಯುವುವು. ಕೆಲವನ್ನು ಈ ಕೆಳಗೆ ತೋರಿಸುತ್ತೇವೆ.

ಮೈಸೂರು ಸರ್ಕಾರದ ಪದ್ಯಸಂಗ್ರಹದಿಂದ.

ಬಂಧುಗಳಿಲ್ಲದ ಬದುಕುಂ (1)
ತಂದುದ ತಾನೊಬ್ಬಳುಂ (2) ಡು ಮುಗಿಸುವ ಬದುಕುಂ ||
ಹಿಂದನು ಮುಂದನು ತಿಳಿಯದೆ |
ನಿಂದೆಗೆ ಗುರಿಯಾಗುತಿರ್ಪ ಬದುಕುಂ ವ್ಯರ್ಥಂ ||೨೧||

ಇಲಿಹೆಗ್ಗಣ (3) ಹೆಚ್ಚಿದ (4) ಮನೆ
ಹಲವರು (5) ನೆರೆದುಂಡು ತಿಂದು ತೇಗುವ ಮನೆಯುಂ ||
ಕಲಹಂ ಹೆಚ್ಚಿದ ಮನೆಯುಂ
ಬಲುಬೇಗಂ ಕೆಟ್ಟುಪೋಪುದೆಂಬುದು ಸಹಜಂ ||೨೩||

ಏರುವರೆ (6) ಸಿಂಹಾಸನಕೆ ನೀ |
ನಾರು ಹೋಗೆಲೆ (7) ಹಾಹೆ (8) ತನ್ನಕು |
ಮಾರಕಂಠೀರವನ ವೊಲು ಸೌಭಾಗ್ಯನೇ ನೀನು ||
ಅರಿಗಳುವೆ ವೃಥಾ ಮನೋವ್ಯಥೆ |
ಯಾರು ನೀನೆಂದರಿಯೆ ಹೆತ್ತವ |
ಳಾರು ಹೇಳಾನಲ್ಲಲೇ ನಿನಗೆಂದಳಾ ಸುರುಚಿ ||೩೭||

ನಾಚುವನು (9) ನಿಮ್ಮಯ್ಯನೆನ್ನನು |
ನೀಚೆಯನು ತನ್ನರಸಿಯೆಂ ಬೊಡೆ |
ವಾಚಕಕೆ ಸಹಿಸಧಿಕಪಾಪಿಯ ಜಠರದಲಿ ಜನಿಸಿ ||

---

(1) ದ.ಮಾರ್ಗ-ಬರ್ದುಕು, (2) ಬರ್ಪ್ಪಳ್, (3) ಪೆಗ್ಗಣ, (4) ಪೆರ್ಚಿದ, (5) ಪಲಂಬರ್, ಪಲರ್, (6) ಏರುವೊಡೆ. (7) ಪೋಗೆಲೆ, (8) ಪಾಪೆ, ಕಣ್ಣಗೊಂಬೆ, (9) ನಾಚ್ಚು.

ಗೋಚರಕೆ ನೀ ಪೋದೊಡುಚಿತವ |
ನಾಚರಿಸುವನದೆಂತು ಮಮತೆಗೆ |
ಯಾಚಕನು ನೀನಾದೆಯೆಂದಳಳಿದಳು (10) ಲಲಿತಾಂಗಿ ||೪೬||

ಏಕೆ ತಾನೆಲೆ ಮಗನೆ ಧರಣಿಪ |
ನೇಕೆ ನೀನೆನ್ನು ದರದಲಿ ಬರ |
ಲೇಕೆ ಭಂಗಿಸಲೇಕೆ ಸವತಿ ಸರೋಷಗರ್ವದಲಿ ||
ಏಕೆ ವಿಧಿ ತನ್ನನು ನಿರಂತರ |
ಶೋಕಮಯಸಾಗರದ ಲದ್ದಲ (11) |
ದೇಕೆನುತ ತಕ್ಕೈಸಿ (12) ಮಗನನು ಹಲುಬಿದಳು (13) ತರಳೆ ||೪೭||

ತೋಡಿಯಿಲ್ಲದೆ ಸುರುಚಿಯೆಂದುದ |
ಮಾಡು ಹೋಗೆಲೆ ಮಗನೆ ಪರರಿಗೆ |
ಕೇಡ ಚಿಂತಿಸಬೇಡ ಭಜಿಸು ಮುರಾಂತಕನ ಪದವ ||
ಕಾಡೊಳಗೆ ನಾನತ್ತೊಡೆ (14) ನ್ನನು |
ಬೇಡಮಾಣೆಂಬವರ ಕಾಣೆನು |
ಬೇಡಿದಿಷ್ಟವ ನೀವನಚ್ಯುತನೆಂದಳಬುಜಾಕ್ಷಿ (15) ||೪೮||

ಅಳಲಿ (16) ಫಲವೇನವ್ವ ಕೊಲುವೊಡೆ (17) |
ಸಲಹುವೊಡೆ ಮುರವೈರಿಯಲ್ಲದೆ |
ಕೊಲುವ (18) ಕಾವ ಸಮರ್ಥರಾರೆಲೆ ತಾಯೆ ಜಠರದಲಿ ||
ಸಲಹಿದವರಾರಾತನೇ ನೆರೆ |
ಸಲಹುವನು ನೀನಂಜದಿರು ತಾ |
ಕೆಲವು ದಿನದೊಳಗೃತಹೆನು ನೋಡೆನುತ ಹೊರವಂಟ ||೪೯||

ಹಾಲ ಹಸುಳೆಯನಿಂತು ಭಂಗಿಸಿ |
ಬೀಳ ಜಡಿದಡವಿಯನು ಹೊಗಿಸುವ (19) |
ಕಾಳುಮುಂಡೆಯ (20) ನೇನನೆಂಬೆನು ಸುರುಚಿಯೆಂಬವಳ ||
ಹೇಳಲೇಕಿನ್ನವನಿಪನ ದು |
ಶ್ಶೀಲವನು ನಿಮ್ಮವ್ವೆ ನಿನ್ನನು |
ಬೀಳು ಕೊಟ್ಟಳೆ (21) ಬಹುಳ ಕಾನನಕೆಂದು ಬಿಸುಸುಯ್ದು ||೫೦||

10. ಅಬ್ಬರ್-11 ಅಬ್ಬಲ್ 12 ತಬ್ಬಿ 13 ಹಲುಂಬಿದಳ್-14 ಅಟ್ಟೊಡ 15. ಅಬ್ಜಾಕ್ಷಿ.
16. ದಕ್ಷಿಣಮಾರ್ಗ-ಅಳಲು. 17 ಕೊಲ್ವೊಡೆ- 18 ಕೊಲ್ಲ 19 ಹೊಗಿಸು 20 ಕಾಳ್ಮುಂಡೆಯ
21 ಬೀಳ್ಕೊಟ್ಟಳೆ.

ಸಿದ್ಧಿಸಲಿ ನಿನಗಿಷ್ಟಫಲ ಸ |
ಶ್ರದ್ಧೆಯಲಿ ನೆರೆಭಜಿಸು ಹೋಗೆಲೆ |
ಬುದ್ಧಿವಂತನೆ ಕಾಣಬಹು (22) ದಂಜದಿರು ಮುರಹರನ ||
ಶ್ರದ್ಧೆಯುಳ್ಳಂಗ ಖಿಲ ಸೌಖ್ಯಸ |
ಮೃದ್ಧಿಗಳು ಸೇರುವುವು ವಿಗತ |
ಶ್ರದ್ಧನಾದಂಗಿಹ ಪರದ ಸುಖವಿಲ್ಲ ಕೇಳೆಂದ ||೭೫||

ಬಿಸಿಲ ಬೇಗೆಯ ಬೇಸರನು ಸೈ |
ರಿಸುವನೆಂತರ್ಭಕನು ವನದಲಿ |
ಹಸಿವು ತೃಷೆಯಲಿ ಬಳಲಿ (23) ನಿದ್ದಯ (24) ಭರದಲಿ ವನದಾ ||
ಹಸಿದ ಹುಲಿಗರಡಿಗಳು ತಿನ್ನವೆ |
ಸಿಸುವನಾನಿನ್ನೆಂದು ಕಂಡಪೆ |
ನುಸಿರ ಪೆಣನನು ಮಾತನಾಡಿಸಬೇಡಿ ನೀವೆಂದ ||೮೩||

ಆರೆನೆನಬೇಡವನಿಗಿಪ್ಪ |
ತ್ತಾರು ಸಾಸಿರ (26) ವರುಷ ಪ್ರಭುವಾ |
ಗೇರಿ ಸಿಂಹಾಸನವನಾಳು ಸಮಸ್ತ ರಾಜ್ಯವನು ||
ಜಾರಸ್ಥೆ ಕರ್ಮವನು ಮನವನು |
ಬೇರಿರಿಸಿ ತನ್ನೊಳಗೆ ಮತಿಯೊಡೆ |
ಯಾರದಂತೆನ್ನ ಮಳಿಜಾತವ ಕೇಳುತಿಹುದೆಂದ (27) ||೯೫||

ಇಳೆಯುಮರನನು ಕರೆದು ಕಾರ್ಯವ |
ತಿಳುಹಿ (28) ಪಯಣವ ಮಾಡಿ ಕಳುಹಲು |
ಕೊಳಲ ಕೊರವಂಟನು ಸುದೇವನು ಹಲವು ಯೋಜನವ ||
ಕಳದು ಬರುತಿರೆ ಮುಂದೆ ಕಂಡನು |
ಲಲಿತ ರತ್ನಪ್ರಭೆಯ ಗೇಹದ |
ಕೊಳೆವಯೋಧ್ಯಾಪುರವನೀಕ್ಷಿಸಿ ಹೊಕ್ಕ (29) ನರಮನೆಯ ||೧೪೪||

ಭಟ್ಟಾಕಳಂಕನು ೫೦ ನೆಯ ಸೂತ್ರಕ್ಕೆ ಕೊಟ್ಟಿರುವ ಪದ್ಯ:—

ಕಬ್ಬಿನ (30) ಬಿಲ್ಲಲರ್ವಕ್ಕಿಯ |
ತಿಬ್ಬಂ (31) ಬಲಿದತನು ಪೂಸರಂಗಳನಿಸಲಾ ||

---

22 ಕಾಣಬಪ್ಪುದು. 23. ಕಾಣೆವಪ್ಪುದು. ದಕ್ಷಿಣವಾರ್ಗ-ಬಳಲ್ದು. 24 ನಿದ್ರೆ, 26 ಇಪ್ಪ ತ್ತಾರ್ಸಿರ. 27 ಕೇಳುತ್ತಿರ್ಪುದು 28 ತಿಳಿಪಿ 29 ಪೊಕ್ಕಂ. 30. ದಕ್ಷಿಣವಾರ್ಗ. ಕಬ್ಬಿನ, 31 ತಿಬ್ಬಂ.

ಉಬ್ಬೆಗೆ (32) ಕೊಬ್ಬಿದ (33) ಪೆಣ್ಣಿಂ |
ತಬ್ಬಿ (34) ದೊಡದಱುಬ್ಬು (35) ನಿಲ್ವುಮಿಂತಿದು ಸುಖಮೇ ||

ಸದಾನಂದಯೋಗೀಂದ್ರನ ಪೌಲೋಮ ಪರ್ವದಿಂದ:—

ಸೃಷ್ಟಿಯನು ಮಾಡುವನು ಕಮಲಜ |
ನಷ್ಟದಿಕ್ಪಾಲಕರು ಕಾಯ್ವರು |
ದುಷ್ಟನಿಗ್ರಹ ಮುಖದಲಿ ತ್ರೈಲೋಕ್ಯ ಸಂಸ್ಥಿತಿಯ ||
ಅಷ್ಟಮೂರುತಿ ಕಡೆಗೆ ಹಣೆಗಣ (36)
ದೃಷ್ಟಿಯಲಿ ಹೋಮಿಸುವನಿದನು
ತ್ರ್ಯಷ್ಟವುತಿವಿಶಾರುವನದಾವನು ತಂದೆಗಳಿರೆಂದ || XI ೨೦ ||

32 ಉರ್ಚೆಗೆ, 33 ಕೊಬ್ಬೇದ 34 ತಬ್ಬಿದೊಡೆ, 35 ಉಬ್ಬೆ

36 ಹಣ್ಣೆಗಣ್ಣು. ಮೈಸೂರು ಓರಿಯಂಟಲ್ ಲೈಬ್ರರಿಯ ಪಂಡಿತರು ಉತ್ತರವಾರ್ಗದ "ಹಣೆಗಣ ಎಂಬ ರೂಪವನ್ನು ತಿಳಿಯದೆ—"ಹಣೆಗಣ ಎಂಬ ಪದವು ದೃಷ್ಟಿಗೆ ವಿಶೇಷಣವಾಗಿ ಪ್ರಯೋಗಿಸಲ್ಪಟ್ಟಿರುವಂತೆ ಕಾಣುತ್ತದೆ. ಇದನ್ನು ವಿಶೇಷಣವಾಗಿ ನಿಷ್ಪಾದನ ಮಾಡಬೇಕಾದರೆ ಸಪ್ತಮೀ ಸಮರ್ಥವಾದ ಹಣೆಯೆಂಬ ಶಬ್ದದಮೇಲೆ ದಿಕ್ಛಬ್ದಾದಣಃ ಎಂಬ (ಪುಟ ೨೦೧, ಸೂತ್ರ ೧೨೧) ಶಬ್ದಾನುಶಾಸನ ಪ್ರಕಾರ ಅಣ ಪ್ರತ್ಯಯವನ್ನು ಮಾಡಬೇಕಷ್ಟೆ? ಹಾಗೆ ಮಾಡುವುದಕ್ಕೆ ಎರಡು ಅನುಪಪತ್ತಿಗಳಿವೆ. ಒಂದನೆಯದು—ಹಣೆ ಎಂಬ ಶಬ್ದವು ಮೂಡ, ತೆಂಕ, ಇವೇ ಮೊದಲಾದ ಶಬ್ದಗಳಂತೆ ದಿಗ್ವಾಚಕವಲ್ಲದೆ ಇರುವುದು ೨ ನೆಯದು—ಸಪ್ತಮೀ ಸಮರ್ಥವಾದ ಹಣೆ ಶಬ್ದದ ಮೇಲೆ ಅಣ ಪ್ರತ್ಯಯವನ್ನು ಮಾಡಿದರೆ "ಹಣೆಯಣ" ಎಂತಲೇ ರೂಪವು ಸಿದ್ಧಿಸಬೇಕೆಂಬುದು. ಇದರಲ್ಲಿ ೧ ನೆಯ ಅನುಪಪತ್ತಿಯನ್ನು ಹಣೆಯ ಪ್ರದೇಶವೂ ನೇತ್ರದ ನಿಜಸ್ಥಳದಕ್ಕಿಂತಲೂ ಊರ್ಧ್ವ ಪ್ರದೇಶವಾದ ಕಾರಣ ವೈವಕ್ಷಿಕ ದಿಕ್ಛಬ್ದತ್ವವನ್ನು ಸಂಪಾದಿಸಿಕೊಂಡು ಏನೋ ಒಂದು ಬಗೆಯಿಂದ ಸಮಾಧಾನಮಾಡಬಹುದು. ಈ ಸಮಾಧಾನಗಳನ್ನು ವ್ಯಾಖ್ಯಾನಕಾರರು ಒಪ್ಪಿರುವುದಿಲ್ಲ ನ್ಯಾಯ ಸಾಮ್ಯದಿಂದ ಮಾತ್ರ ಹೇಳಬೇಕಾಗಿರುವುದು ೨ ನೆಯ ಅನುಪಪತ್ತಿಗೆ ಹಣೆಯಣ ಎಂದೇ ಆಗಲಿ ಹಣೆಗಣ ಎಂದೇ ಆಗಲಿ ಪಾಠ ಶೋಧನ ಮಾಡುವುದು ಪರಿಹಾರವು. ಹಣೆಗಣ ಎಂದು ಶೋಧನಮಾಡುವ ಪಕ್ಷದಲ್ಲಿ ಫಣಿಕಾ ಎಂಬ ಸಂಸ್ಕೃತ ಶಬ್ದದಿಂದ ಹಣಿಗೆ ಎಂಬ ಅಪಭ್ರಂಶವು ಸಿದ್ಧಿಸುವುದರಿಂದ ಸಪ್ತಮೀ ಸಮರ್ಥವಾದ ಆ ಶಬ್ದದ ಮೇಲೆ ಅಣ ಪ್ರತ್ಯಯಮಾಡಿದರೆ ಈ ರೂಪವು ಸಿದ್ಧವಾಗುತ್ತದೆ" ಎಂದು ಪೀಠಿಕೆಯಲ್ಲಿ ಬರೆದಿರುತ್ತಾರೆ. ವಿದ್ಯಾರ್ಥಿಗಳು ಕೂಡ ಹಣೆಗಣ ಎಂಬುದು ಹಣೆಗಣ್ಣು ಎಂಬುದರ ರೂಪಾಂತರವೆಂದು ಹೇಳುತ್ತಿರುವಲ್ಲಿ, ಈ ಪಂಡಿತರು ಫಣಿಕಾ ಶಬ್ದಕ್ಕೆ ಅಪಭ್ರಂಶವನ್ನು ಮಾಡಿ "ಹಣಿಗೆ" ಎಂಬ ಶಬ್ದವನ್ನು ಹೊಂದಿ, ಆ ಶಬ್ದಕ್ಕೆ ಪ್ರಸಿದ್ಧವಾಗಿರುವ ಬಾಚಣಿಗೆ ಎಂಬ ಅರ್ಥವನ್ನು ಮೂಲೆಗೊತ್ತರಿಸಿ, ಅದಕ್ಕೆ ಅಣಪ್ರತ್ಯಯವನ್ನು ಸೇರಿಸಿ, ಅರ್ಥವನ್ನು ಹಾಳುಮಾಡುವ ಹಣಿಗಣ ಎಂಬ ರೂಪವನ್ನು ಸಾಧಿಸುವುದಕ್ಕೆ ಸಾಹಸಪಟ್ಟಿರುವುದನ್ನು ನೋಡಿದರೆ, ವಿಸ್ಮಯವುಂಟಾಗುವುದಿಲ್ಲವೆ? ಈ ಪಂಡಿತರು "ಕಾಯ್ವರು" ಎಂಬ ಶಬ್ದವನ್ನು ಇಲ್ಲಿ ಸಾಧುವೆಂದು ಕೊಟ್ಟಿರುವರು. "ಕಾಯ್" ಫಲೋತ್ಪತ್ತೌ, ಕೋಪೇಚ" ಎಂಬ ಧಾತು ಪಾಠದ ಅರ್ಥವು ಇವರಿಗೆ ತಿಳಿದಿರಲಿಲ್ಲವೆಂಬುದು ಸ್ಪಷ್ಟಪಡುತ್ತದೆ "ಕಾ ರಕ್ಷಣೆ" ಎಂಬುದನ್ನು ನೋಡಿ ಕಾವರು ಎಂದು ಪ್ರಯೋಗಿಸುವುದಕ್ಕೆ ಕಾಯ್ವರು ಎಂದು ಪ್ರಯೋಗಿಸಿರುವುದನ್ನು ನೋಡಿದ ಮೇಲೆ ನಮ್ಮ ಆಶ್ಚರ್ಯವು ಮತ್ತಷ್ಟು ಹೆಚ್ಚುವುದಿಲ್ಲವೆ?

ಕರ್ಣಾಟಕ ಶಾಸನಗಳು:—ಸಂಪುಟ *III* ಪುಟ ೫೬.

ಗಂಡರ ಗಂಡನುಕ್ಕುರ್ವರ ಮಕ್ಕಳ ಗಂಡನಿದಿರ್ಚಿ ಕೈದು ಕೈ |
ಕೊಂಡರ ಗಂಡನಾಡಿ ನುಡಿ ತಪ್ಪುವರಾಯರ ಗಂಡನಾಹವ್ರೋ ||
ದ್ದಂಡರಗಂಡನೆಂಬ ಪಲವುಂ ಬಿರುದುಂ ಚಿಕ (37) ದೇವರಾಯನೊ |
ಳ್ಮಂಡಿತಮಲ್ತೆ ಮೊತ್ತಮೊದಲೊಂದಿದ ಸತ್ಯಪರಾಕ್ರಮಾಂಕದಿಂ ||

ಕುಮಾರವ್ಯಾಸನ ಮಹಾಭಾರತ–ವಿರಾಟಪರ್ವ:—

ಎಲೆ ಕುಮಾರಕ ಮೊದಲಚುಂಬನ
ದೊಳಗೆ ಹಲು (38) ಬಿದ್ದಂತೆ ಕಾಳಗ
ಬೆಳಿಸಲರಿಯದ ಮುನ್ನ ಹಿಡಿದೈಸಮರ ಭೀತಿಯನು ||
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ
ಗಲುಪಿನಲಿ ಕಾದೆನುತ ರಥವನು ಬೇಗ ಹರಿಸಿದನು ||

ಓರಿಯಂಟಲ್ ಲೈಬ್ರರಿಯ ಮಹಾಭಾರತ–ಆದಿಪರ್ವ ಸಂಧಿ ೩ ಪದ್ಯ೧

ಪಿತನು ಸ್ವರ್ಗ್ಗಕ್ಕೈದಲಿತ್ತಲು |
ಕ್ಷಿತಿಯ ಪಾಲಿಸುತಿರಲು ಭೂಪನು |
ಪಿತಪಿತಾಮಹರವರ ಮುತ್ತಯ (39) ಬದರಿಕಾಶ್ರಮದಿ ||

ದಕ್ಷಿಣೋತ್ತರ ಮಾರ್ಗಗಳು ವಿಶೇಷವಾಗಿ ಮಿಶ್ರವಾಗಿರುವ ಕೆಲವು ಉದಾಹರಣೆಗಳನ್ನೂ ಕೊಡುವುದುತ್ತಮವೆಂದು ತೋರುತ್ತದೆ ಮಿಶ್ರಮಾರ್ಗವನ್ನು ತಿರಸ್ಕರಿಸಲಾಗದು

ಜೈಮಿನಿಭಾರತದಿಂದ.

ಹಾರ್ದಿಕ್ಯನೆಸುಗೆಯಿಂದುರೆನೊಂದು ಕೋಪದಿಂ |
ದಾರಾರ್ ಸುಧನ್ವ ನಿಪ್ಪತ್ತು (40) ನಾಲ್ಕಂಬಿನಿಂ |
ತೇರ್ದೆಗೆವ ಕುರುಕೆಗಳಕಾಲ್ಗಳಂ ಗಾಲಿಗಳ ಕೀಲ್ಗಳಂ ಮೂಡಿಗೆಯನು ||
ಮಿರ್ದೆಸೆವ ಚಾಪಮಂ ಸಾರಥಿಯ ಕರಮಂಕ್ಷ |
ಣಾರ್ಧದೊಳ್ಕಡಿಯ ಕೃತವರ್ಮನಳವಳಿದು ಕಲ |
ಸಾರ್ದೊಡಾಪಥದೊಳನುಸಾಲ್ವನಿದಿರಾದ ನತಿವೇಗದಿಂದವನ ರಥಕೆ ||
(XII 53)

(37) ದ-ಮಾರ್ಗ-ಚಿಕ್ಕದೇವರಾಯನೊಳ್ (38) ದ-ಮಾರ್ಗ-ಪಲ್ಲು (39) ದ-ಮಾರ್ಗ-ಮುತ್ತಯ್ಯ 40 ಇರ್ಪತ್ತು—

ಇಚ್ಚಾಱಿ (41) ಗೊಂಡು ನರನೆಚ್ಚ ಕೆಂಗರಿಗೋಲ |
ಬಚ್ಚಳೆಯ ಹೊಸಮಸೆಯ ನಿಚ್ಚಳದ ನಿಡುಸರ |
ಪೆಚ್ಚಿದುವು (42) ನಿಮಿಷದೊಳ್ಮುಚ್ಚಿದುವು ಗಗನಮಂ ಕೊಚ್ಚಿದುವು
ಪರಬಲವನು ||

ಬಿಚ್ಚಿದುವು (43) ಕವಚಮಂ ಕಚ್ಚಿದವು (44) ಖಂಡಮಂ |
ಚುಚ್ಚಿದುವು (45) ಕೂಡೆ ಘಟ್ಟಿಚ್ಚಿದುವು (46) ಸೀಳಾಗಿ |
ಹಚ್ಚಿದುವು ಮೈಯೊಳಗೆ ಹೂಚ್ಚಿದುವು ಹೊಗರಲಗನು ಮುಚ್ಚಿದುವು ನೆಣವ
ಸೆಯನು || (XIII 18)

ಪರ್ದ್ದಿರ(47)ಗಿರುವು ಭಟರ ಮುಂಡೆಗಳ ಮೇಲುಡಿದು |
ಬಿದ್ದುವು (48) ಜಲದ್ಧ್ವಜಪತಾಕೆಗಳ್ಕೂಡೆ ಧೂ |
ಳೆದ್ದು (49) ಬಿರುಗಾಳಿ ಬೀಸಿದುದು ಕಂಬನಿಗರೆದು ಮಂದಾನೆಕುದುರೆಗಳ್ಗೆ ||
ಪೊರ್ದ್ದಿ (50) ತುತ್ಪಾತ ಭಯಕಾಬಲಂ ಗಜಬಜಿಸು |
ತಿರ್ದ್ದದೀಜೆಯೊಳೀಕುಶಂ ಪೋಗಿದರಿನಲ್ಲಿ |
ಕರ್ದ್ದು (51) ಯ್ವರೀ ತುರಗ ಸಹಿತವನ ಬಿಟ್ಟು ನಡೆಯರ್ನ್ನೀವನುತ್ತೆಚ್ಚನು ||
(XX. 24)

ಎರ್ದ್ದು ನಭದೊಳ್ ಪೊಳಂಚುವರೊಮ್ಮೆ ಭೂತಳದೊ |
ಳಿರ್ದ್ದು (52) ಹಣಗುವರೊಮ್ಮೆ (53) ಬಳಸಿ ಮಂಡಲದಿಂದ |
ಹೂದ್ದಿ (54) ಸೂರುವರೊಮ್ಮೆ ತಗಳುಮುಗುಳಾಗಿ ತಾಗುವರೊಮ್ಮೆ
ಸರಿಬರಿಯನು ||

ತಿರ್ದ್ದಿ (55) ತುಡುಕುವರೊಮ್ಮೆ ಬಾಣಾಂಬುಧಿಯ ತೆರೆಯೊ |
ಳರ್ದ್ದು (56) ಪೂಣಾರುವರೊಮ್ಮೆ ಮೂರ್ಛೆಯಿಂ ಮೈಮರೆದು |
ಬಿದ್ದು ಚೇತರಿಸಿ ಕಾದುವರೊಮ್ಮೆ ಕಷ್ಣಪಾರ್ಥ ರತನಯ ರಾಹವದೊಳು ||
(XX22. II)

ಹೊತ್ತು (57) ಕೊತ್ತಿಗೆ ಮತ್ತೆ ಒಲ್ವತ್ತರದೊ |
ಳೊತ್ತಿಡಿದು ಸುತ್ತಲೆತ್ತತ್ತಲುಂ ಕೆತ್ತವೋ |
ಲ್ಮುತ್ತಿ ಮುಸುಕಿತ್ತು ಕಗ್ಗತ್ತಲೆ (58)ಧರಿತ್ರಿಯಂ ಮುಳ್ಳಮೊನೆ ಕೊಳ್ಳದಂತೆ||
ಚಿತ್ತಜಂ ಕತ್ತಿಯಂ ಕಿತ್ತು ಕೊಂಡೆತ್ತಿಹೊ |
ಯ್ಯುತ್ತ (59) ಬರಲುತ್ತುಂಗ ವೃತ್ತಕುಚೆಯರ್ತಮಗೆ |

41 ಇರ್ಚಾಱಿಗೊಂಡು 42 ಪೆರ್ಚಿದುವು. 43 ಬಿರ್ಚಿದುವು. 44 ಕರ್ಚಿಗುವು. 45 ಚಿರ್ಚಿದುವು. 46 ಘಟ್ಟಿರ್ಚಿದುವು. ದಕ್ಷಿಣಮಾರ್ಗ-47 ಪರ್ದು 48 ಬೀೞ್ದುವು 49 ಎೞ್ದು. 50 ಪೊರ್ದು, 51 ಕೆೞ್ದು, 52 ಇರ್ದು, 53 ಒರ್ಮೆ, 54 ಪೊರ್ದಿ, 55 ತಿರ್ದಿ, 56 ಅೞ್ದು 57 ಪೊೞ್ತು 58 ಕರ್ಗಲ್ತಲೆ 59 ಪೊಯ್ಯುತ್ತಂ.

ತೆತ್ತಿರ್ದ ತೆತ್ತಿಗರನೊತ್ತಿಗರ ಸುತ್ತಿರ್ದರಾಗಲನುರಾಗದಿಂದ || XXVI 6

೮. ಚಟವರ್ಗಗಳ ಸಂಧಿಯಲ್ಲಿ ವರ್ಗತೃತೀಯಾದೇಶವೇಕಿಲ್ಲ ?

ಇದರ ಕಾರಣಗಳನ್ನು ಊಹಿಸಿ ತಿಳಿದುಕೊಳ್ಳಬೇಕಾಗಿದೆ. ಕರ್ಣಾಟಕ ವ್ಯಾಕರಣಗಳಾವುದರಲ್ಲಿಯೂ ಇದಕ್ಕೆ ಕಾರಣಗಳಾವುದನ್ನೂ ಕೊಟ್ಟಿಲ್ಲ. ತಮಿಳಲ್ಲಿ ಚಕಾರವನ್ನು ಶಕಾರಕ್ಕೂ ಸಕಾರಕ್ಕೂ ಮಧ್ಯಸ್ಥವಾಗಿ ಉಚ್ಚರಿಸುವರು. ತೆಲುಗಿನಲ್ಲಿ ಹಿಂದೆ ಕರ್ಣಾಟಕ ವರ್ಣಮಾಲೆಯ ಚಾರಿತ್ರಾದಿ ವಿಚಾರವೆಂಬ ಉಪನ್ಯಾಸದಲ್ಲಿ ನಾವು ಹೇಳಿರುವಂತೆ, ಚಕಾರವು ಕೆಲವು ಸಂದರ್ಭಗಳಲ್ಲಿ ತ್ಸಕಾರದಂತೆ ಉಚ್ಚರಿಸಲ್ಪಡುವುದು (Vol I, 272 ನೆಯ ಪುಟವನ್ನು ನೋಡಿ). ಕನ್ನಡದಲ್ಲಿ ಚಕಾರಾದಿಯಾಗಿ ಬರುವಮಾತುಗಳು ಅನುಕರಣಾಪದಗಳನ್ನು ಬಿಟ್ಟಲ್ಲಿ, ಅತಿವಿರಳವಾಗಿರುವುವು. ಇದೂ ಅಲ್ಲದೆ ಸಕಾರಕ್ಕೆ ಆದೇಶವಾಗಿ ಚಕಾರ ಜಕಾರಗಳು ಬರುತ್ತವೆ. ಹೇಗೆಂದರೆ, ಇನಿದು+ಸರ= ಇಂಚರ, ಪೊನ್+ಸರಗು= ಪೊಂಜೆರಗು. ಈ ಕಾರಣಗಳಿಂದ ಸಮಾಸಪದಗಳಲ್ಲಿ ಉತ್ತರ ಪದಾದಿಯ ಚಕಾರಕ್ಕೆ ಜಕಾರಾದೇಶವು ವಾಡಿಕೆಯಾಗಲಿಲ್ಲ. ಟವರ್ಗದ ವಿಷಯದಲ್ಲಿ ಟಾದಿಯಾದ ಪದಗಳು ಅನುಕರಣ ಪದಗಳನ್ನು ಬಿಟ್ಟರೆ, ಅತಿವಿರಳವಾಗಿರುವುವು. ಪರುಷಸರಳೋಚ್ಚಾರಣ ವಿಧಿಯು ವರ್ಗ ತೃತೀಯಾದೇಶಕ್ಕೆ ಆಧಾರವಾಗಿರುತ್ತದೆ (Vol I, 270 ನೆಯ ಪುಟವನ್ನು ನೋಡಿ)

೯. ಸಂಧಿಕಾರ್ಯದಲ್ಲಿ ಕನ್ನಡಕ್ಕೂ ತಮಿಳಿಗೂ ಇರುವ ತಾರತಮ್ಯ.

ಕರ್ಣಾಟಕ ವರ್ಣಮಾಲೆಯ ಚಾರಿತ್ರಾದಿ ವಿಚಾರವೆಂಬ ಉಪನ್ಯಾಸದಲ್ಲಿ ಪರುಷಸರಳೋಚ್ಚಾರಣ ವಿಧಿಯನ್ನು ಕುರಿತು ನಾವು ಒರೆದಿರುವುದನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕು. ತಮಿಳಲ್ಲಿ ವರ್ಗಪ್ರಥಮಕ್ಕೆ ಪದಮಧ್ಯದಲ್ಲಿಯೂ ಪದಾಂತ್ಯದಲ್ಲಿಯೂ ಅದ್ವಿತ್ವೋಚ್ಚಾರಣೆಯಿಲ್ಲದಿರುವುದರಿಂದಲೂ, ವರ್ಗ ತೃತೀಯಕ್ಕೆ ದ್ವಿತ್ವೋಚ್ಚಾರಣೆ ಎಲ್ಲಿಯೂ ಇಲ್ಲದಿರುವುದರಿಂದಲೂ, ಬಿಂದುವಿನ ಪರದಲ್ಲಿ ವರ್ಗ ಪ್ರಥಮೋಚ್ಚಾರಣೆಯಿಲ್ಲದಿರುವುದರಿಂದಲೂ ಕನ್ನಡದ ಸಂಧಿಕಾರ್ಯಕ್ಕೂ ತಮಿಳಿನ ಸಂಧಿಕಾರ್ಯಕ್ಕೂ ಬಹು ಬಹು ವ್ಯತ್ಯಾಸಗಳು ಕಾಣಬರುವುವು

೧೦. ಸಂಧಿಕಾರ್ಯದಲ್ಲಿ ಕನ್ನಡಕ್ಕೂ ತೆಲುಗಿಗೂ ಇರುವ ಮುಖ್ಯತಾರತಮ್ಯ.

ಸಂಧಿಕಾರ್ಯದ ರೀತಿಯು ಎರಡು ಭಾಷೆಗಳಲ್ಲಿಯೂ ಪ್ರಾಯಿಕವಾಗಿ ಒಂದೇ ಆಗಿದೆ. ಸ್ವರಸಂಧಿಯಲ್ಲಿ ಕನ್ನಡದಲ್ಲಿರುವಂತೆ ಲೋಪಾಗಮಗಳಿರುವುವು. ವ್ಯಂಜನ ಸಂಧಿಯಲ್ಲಿ ಕನ್ನಡಕ್ಕೂ ತೆಲುಗಿಗೂ ಭೇದವು ಹೆಚ್ಚಾಗಿದೆ. ಕ ತ ಪ ಗಳಿಗೆ ಗ ದ ಬ ಗಳು ಆದೇಶವಾಗುವುವು ಎಂದು ಕನ್ನಡದಲ್ಲಿರೆ, ತೆಲುಗಿನಲ್ಲಿ ದ್ವಂದ್ವದಲ್ಲಿ ಪರುಷಗಳಿಗೆ (ಕ ಚ ಟ ತ ಪ ಗಳಿಗೆ) ಗ ಸ ಡ ದ ವ ಗಳು ಆದೇಶವಾಗುವುವೆಂದಿದೆ

ಉದಾಹರಣೆಗಳು

ಕೂರ + ಕಾಯ = ಕೂರಗಾಯಲು

ಕಾಲು + ಚೇಯಿ = ಕಾಲುಸೇತುಲು

ಟಕ್ಕು + ಟಕ್ಕು = ಟಕ್ಕುಡೆಕ್ಕುಲು

ತಲ್ಲಿ + ತಂಡ್ರಿ = ತಲ್ಲಿದಂಡ್ರುಲು

ಊರು + ಪಲ್ಲೆ = ಊರುವಲ್ಲೆಲು

ಪ್ರಥಮಾವಿಭಕ್ತಿಗೆ ಪರವಾಗಿ ಬರುವ ಪರುಷಗಳಿಗೆ ಗ ಸ ಡ ದ ವಗಳು ಬಹುಳವಾಗಿ ಆದೇಶಗಳಾಗುವುವು ಉದಾಹರಣೆಗಳು

ವಾಡು + ಕೊಟ್ಟೆ = ವಾಡುಗೊಟ್ಟೆ

ವಾಡುಕೊಟ್ಟೆ

ಅಪುಡು + ಚನಿಯು = ಅಪುಡುಸನಿಯು

ಅಪುಡುಚನಿಯು

ನೀವು + ಟಕ್ಕರಿ = ನೀವುಡಕ್ಕರಿವಿ

ನೀವುಟಕ್ಕರಿವಿ

ವಿಾರು + ತಲಡು = ವಿಾರುದಲಡು

ವಿಾರುತಲಡು

ವಾರು + ಪೋರು = ವಾರುವೋರು

ವಾರುಪೋರು

ದ್ರುತಪ್ರಕೃತಿಕಗಳಿಗೆ (ನಕಾರಾಂತ ಪದಗಳಿಗೆ) ಪರವಾಗಿ ಬರುವ ಪರುಷಗಳಿಗೆ ಸರಳಗಳು ಆದೇಶವಾಗುವುವು ಉದಾಹರಣೆಗಳು —

ಪೂಚೆನು + ಕಲುವಲು = ಪೂಚೆನುಗಲುವಲು

ತೋಚೆನು + ಚುಕ್ಕಲು = ತೋಚೆನುಜುಕ್ಕಲು

ಚೇಸನು + ಟಕ್ಕುಲು = ಚೇಸನುಡಕ್ಕುಲು

ನೆಗಡೆನು + ತಮ್ಮುಲು = ನೆಗಡೆನುದಮ್ಮುಲು

ಮೊಗಿಡೆನು + ಪದ್ಮಮು = ಮೊಗಿಡೆನುಬದ್ಮಮು

ಮೇಲಣ ಸೂತ್ರೋದಾಹರಣೆಗಳಿಂದ ಕನ್ನಡಕ್ಕೂ ತೆಲುಗಿಗೂ ಇರುವ ಸಂಧಿಕಾರ್ಯದ ತಾರತಮ್ಯವನ್ನು ಸ್ಥೂಲವಾಗಿ ತಿಳಿಯಬಹುದು. ಕನ್ನಡದಲ್ಲಿ ತಾಯಿತಂದೆಗಳೆನ್ನುವುದಕ್ಕೆ ತಾಯಿದಂದೆಗಳೆಂದು, ಪೂತುವು ಕನ್ನೈದಿಲೆಗಳು ಎನ್ನುವುದಕ್ಕೆ ಪೂತುವು ಗನ್ನೈದಿಲೆಗಳೆಂದು, ತೋಚಿದುವು ಚುಕ್ಕಿಗಳು ಎನ್ನುವುದಕ್ಕೆ ತೋಚಿದುವು ಜುಕ್ಕಿಗಳೆಂದು, ಮಾಡಿದನು ಟಕ್ಕುಗಳನು ಎನ್ನುವುದಕ್ಕೆ ಮಾಡಿದನು ಡಕ್ಕುಗಳನೆಂದು, ಸರೆದುವು ತಮಗಳು ಎನ್ನುವುದಕ್ಕೆ ನೆರೆದುವು ದಮಗಳೆಂದು, ಮುಗುಳ್ತುದು ಪದ್ಮವು ಎನ್ನುವುದಕ್ಕೆ ಮುಗುಳ್ತುದು ಬದ್ಮವು ಎಂದು ಹೇಳುವುದಿಲ್ಲ.

ಪದೇತು ಸಂಹಿತಾನಿತ್ಯಾ ನಿತ್ಯಾ ಧಾತೂಪಸರ್ಗಯೋಃ |
ನಿತ್ಯಾಸಮಾಸೇ ವಾಕ್ಯೇತು ಸಾವಿವಕ್ಷಾ ಮಪೇಕ್ಷತೇ ||

ಎಂಬ ಶ್ಲೋಕದಲ್ಲಿ ''ವಾಕ್ಯೇತು ಸಾವಿವಕ್ಷಾ ಮಪೇಕ್ಷತೇ'' ಎಂಬ ಭಾಗವನ್ನು ತೆಲುಗರು ಪ್ರಾಯಿಕವಾಗಿ ಅನುಸರಿಸುವುದಿಲ್ಲವೆನ್ನಬಹುದಾಗಿದೆ ಕೆಲವು ಉದಾಹರಣೆಗಳನ್ನು ಕೊಡುವುದು ಉತ್ತಮವೆಂದು ತೋರುತ್ತದೆ

(a) ''ಸಮಾಸಂಬುಲ ನುದಂತಂಬುಲಗು ಸ್ತ್ರೀ ಸಮಂಬುಲಕುನ್ (1) ಬುಂಪು ಲಕುನ್ ಬರುಷ (2) ಸರಳಂಬುಲು ಪರಂಬುಲಗುನಪುಡು ನುಗಾಗಮಂಬಗು''

(b) ಈ ''ಪೈಪದ್ಯಮುವಲನ ಗೃಷ್ಣದೇವರಾಯಲ (3)ಕವಿತ್ವಮು ಸಾಧಾರಣಮುಗ ರಸಾಲಂಕಾರ ವಿಲಸಿತಮ್ಮೈ ರಾಜಿಲ್ಲು ಚುನ್ನದಿ ಯನಿ ಸ್ಪಷ್ಟಮುಗ ದೆಲಿಯು (4) ಚುನ್ನಯದಿ. ಮರಿಯು ಗವಿಕೃತ (5)ಮುಲಗು ಗ್ರಂಥಮುಲ ನಾತನಿ ಯುಭಯಭಾಷಾಪಾಂಡಿತಿಯುನಾ ಮುಕ್ತಮಾಲ್ಯದ ರಚನಯುಂದು ದನಕು (6) ಗಲಿಗಿನ(7)ಬುಧಜನ ಪ್ರೋತ್ಸಾಹಮುಸೀ ಪದ್ಯಮುವಲನೆ ವಿಶದಮಗುಚುನ್ನವಿ ಕೃಷ್ಣದೇವರಾಯ ಲಸಾಧಾರಣಪಾಂಡಿತ್ಯಮು ಕಲವಾಡನಿ ತತ್ಕೃತ ಗ್ರಂಥರಾಜಮಂದು ನಲರಾರುನಲಂಕಾರ ಸಮೃದ್ಧಿಯೇ ತೆಲುಪುಚುನ್ನದಿ ಉತ್ಪ್ರೇಕ್ಷ, ಅರ್ಥಾಂತರನ್ಯಾಸಮು, ಹೇತ್ವಪಹ್ನುತಿ ಮುನ್ನಗುನನೇಕಮುಲೈನ ಯಲಂಕಾರಮುಲು ಗ್ರಂಥಮಂದು ಗನಬಡು (8) ಚುನ್ನನು ಗವಿಪಕ್ಷಪಾತ (9) ಮುತ್ಪ್ರೇಕ್ಷಾಸ್ವಭಾವೋಕ್ತ್ಯಲಂಕಾರಮುಲಂದುನ್ನಟುಲು ತದುಭಯಾಲಂಕಾರ ಗರ್ಭಿತಮುಲೈ ಗ್ರಂಥಮಂದೆಲ್ಲಡ ವಿಲಸಿಲ್ಲು ಪದ್ಯರಾಜಮುಲೇ ವಿಶದೀಕರಿಂಚುಚುನ್ನವಿ. ಈ ಮುಕ್ತಮಾಲ್ಯದ ಯಂದಲಿ ಯಲಂಕಾರ ಸಮೃದ್ಧಿಂಜೂಪುಟಕು(10) ನಾಲ್ಗವಯಾಶ್ವಾಸಮುನಂದುರಾಜಿಲ್ಲು ದಶಾವತಾರಪದ್ಯಂಬುಲೇ ಚಾಲು''

ಮೇಲಣವಾಕ್ಯಸಮೂಹವನ್ನು ಪರೀಕ್ಷಿಸುವಲ್ಲಿ ಸಂಧಿಯ ಬಾಹುಳ್ಯವೂ ತೊಡಕೂ ಕನ್ನಡದಲ್ಲಿರುವುದಕ್ಕಿಂತ ತೆಲುಗಿನಲ್ಲಿ ಹೇರಳವಾಗಿವೆ ಎಂಬ ಅಂಶವು ಹೊರಪಡುವುದು.

೧೧. **ಸಂಸ್ಕೃತಪದಗಳ ಸಂಧಿ**—ಕನ್ನಡಗ್ರಂಥಗಳಲ್ಲಿ ಸಂಸ್ಕೃತದ ಸಮಾಸಪದಗಳು ವಿಶೇಷವಾಗಿ ಬರುವುದರಿಂದ ಸಂಸ್ಕೃತ ಸಂಧಿಯ ಕ್ರಮವನ್ನೂ ಕೊಂಚ ಮಟ್ಟಿಗೆ ತಿಳಿದಿರುವುದು ಉತ್ತಮ. ಕನ್ನಡಗ್ರಂಥಗಳಲ್ಲಿ ವಾಡಿಕೆಯಾಗಿ ಕಾಣಬರುವ ಸಂಧಿಗಳನ್ನು ಕೆಳಗೆ ಉದಾಹರಣೆಗಳೊಡನೆ ಕೊಡುತ್ತೇವೆ

A. ಸಂಸ್ಕೃತ ಸ್ವರಸಂಧಿ—ಇದರಲ್ಲಿ ಸವರ್ಣದೀರ್ಘ, ಯಣ್, ಗುಣ, ವೃದ್ಧಿ ಯೆಂಬ ನಾಲ್ಕು ಭೇದಗಳಿವೆ.

(a) ಸವರ್ಣದೀರ್ಘಸಂಧಿ—ಅ ಇ ಉ ಋ ವರ್ಣಗಳಿಗೆ ಅ ಇ ಉ ಋ ವರ್ಣಗಳು ಕ್ರಮವಾಗಿ ಪರವಾದರೆ ಪೂರ್ವ ಪರಸ್ವರಗಳೆರಡಕ್ಕೂ ಒಂದೇ ದೀರ್ಘಸ್ವರವು ಆದೇಶವಾಗುತ್ತದೆ

(1) ಪುಂಪುಲಕುನ್. (2) ಪರುಷ. (3) ಕೃಷ್ಣದೇವ. (4) ತೆಲಿ (5) ಕವಿಕೃತ. (6) ತನಕು (7) ಕಲಿಗಿನ. (8) ಕನಪಡು (9) ಕವಿಪಕ್ಷಪಾತ (10) ಚೂಪುಟಕು.

(b) ಯಣ್ಸಂಧಿ— ಇ ಉ ಋ ವರ್ಣಗಳಿಗೆ ಅಸವರ್ಣಸ್ವರಗಳು ಪರವಾದಾಗ, ಇ ವರ್ಣಕ್ಕೆ ಯಕಾರವು, ಉ ವರ್ಣಕ್ಕೆ ವಕಾರವು ಋ ವರ್ಣಕ್ಕೆ ರೇಫವು ಆದೇಶವಾಗುವುದು

(c) ಗುಣಸಂಧಿ— ಅ ವರ್ಣಕ್ಕೆ ಇ ವರ್ಣಪರವಾದಾಗ ಏಕಾರವು, ಉ ವರ್ಣಪರವಾದಾಗ ಓಕಾರವು, ಋ ವರ್ಣ ಪರವಾದಾಗ ಅರ್ಕಾರವು ಪೂರ್ವಪರಸ್ವರಗಳೆರಡಕ್ಕೂ ಆದೇಶವಾಗುವುದು

(d) ವೃದ್ಧಿಸಂಧಿ— ಅ ವರ್ಣಕ್ಕೆ ಏ ಐಕಾರಗಳು ಪರವಾದಾಗ ಐಕಾರವು, ಓ ಔಕಾರಗಳು ಪರವಾದಾಗ ಔ ಕಾರವು ಪೂರ್ವಪರಸ್ವರಗಳೆರಡಕ್ಕೂ ಆದೇಶವಾಗುವುದು ಉದಾಹರಣೆಗಳು —

(a) ಸವರ್ಣದೀರ್ಘಕ್ಕೆ —

ದೈತ್ಯ+ಅರಿ=ದೈತ್ಯಾರಿ, ದೇವ+ಆಲಯ=ದೇವಾಲಯ

ವಿದ್ಯಾ+ಅಭ್ಯಾಸ=ವಿದ್ಯಾಭ್ಯಾಸ , ವಿದ್ಯಾ+ಆಲಯ=ವಿದ್ಯಾಲಯ

ಕವಿ+ಇಂದ್ರ=ಕವೀಂದ್ರ , ಮುನಿ+ಈಶ್ವರ=ಮುನೀಶ್ವರ

ನದೀ + ಇನ=ನದೀನ , ಮಹೀ + ಈಶ=ಮಹೀಶ

ಮೃದು+ಉಕ್ತಿ=ಮೃದೂಕ್ತಿ , ಸಿಂಧು + ಊರ್ಮಿ=ಸಿಂಧೂರ್ಮಿ

ಭೂ + ಉತ್ತಮ=ಭೂತ್ತಮ , ಭೂ + ಊರ್ಧ್ವ=ಭೂರ್ಧ್ವ

ಪಿತೃ + ಋಣ=ಪಿತೄಣ, ಇತ್ಯಾದಿ.

(b) ಯಣ್ಸಂಧಿಗೆ—

ಅತಿ+ಅಲ್ಪ=ಅತ್ಯಲ್ಪ , ಅತಿ+ಆಶೆ=ಅತ್ಯಾಶೆ

ಅತಿ+ಉತ್ತಮ=ಅತ್ಯುತ್ತಮ , ಅತಿ+ಊರ್ಧ್ವ=ಅತ್ಯೂರ್ಧ್ವ

ಪ್ರತಿ+ಏಕ=ಪ್ರತ್ಯೇಕ , ಶಾಲಿ+ಓದನ=ಶಾಲ್ಯೋದನ

ಮಂತ್ರಿ+ಔದಾರ್ಯ=ಮಂತ್ರ್ಯೌದಾರ್ಯ , ಗುರು+ಅಕ್ಷರ=ಗುರ್ವಕ್ಷರ

ಮಧು + ಆಸವ=ಮಧ್ವಾಸವ , ಮಧು+ಇವ=ಮಧ್ವಿವ

ಗುರು + ಐಶ್ವರ್ಯ=ಗುರ್ವೈಶ್ವರ್ಯ , ಪಿತೃ+ಅರ್ಜಿತ=ಪಿತ್ರರ್ಜಿತ

ಮಾತೃ+ಆದರ=ಮಾತ್ರಾದರ, ಇತ್ಯಾದಿ

(d) ಗುಣಸಂಧಿಗೆ—

ಕಾಮ್ಯ+ಇಷ್ಟಿ=ಕಾಮ್ಯೇಷ್ಟಿ , ಗಣ+ಈಶ=ಗಣೇಶ

ಮಹಾ+ಇಂದ್ರ=ಮಹೇಂದ್ರ , ಇಲಾ + ಈಶ=ಇಲೇಶ

ಸೂರ್ಯ+ಉದಯ=ಸೂರ್ಯೋದಯ , ಗುಣ+ಊರ್ಜಿತ=ಗುಣೋರ್ಜಿತ

ಮಹಾ+ಉತ್ಪಲ=ಮಹೋತ್ಪಲ , ಮಹಾ + ಊರು=ಮಹೋರು

ದೇವ+ಋಷಿ=ದೇವರ್ಷಿ , ಮಹಾ+ಋಷಿ=ಮಹರ್ಷಿ

(d) ವೃದ್ಧಿ ಸಂಧಿಗೆ—

ಪುಣ್ಯ + ಏಕಕರ್ಮ=ಪುಣ್ಯೈಕಕರ್ಮ , ರಾಮ+ಐಶ್ವರ್ಯ=ರಾಮೈಶ್ವರ್ಯ
ಪ್ರಥಮಾ + ಏಕ =ಪ್ರಥಮೈಕ , ಮಹಾ+ಐಶ್ವರ್ಯ =ಮಹೈಶ್ವರ್ಯ
ಸರ್ವ + ಓಘ =ಸರ್ವೌಘ , ದಿವ್ಯ+ಔಷಧ=ದಿವ್ಯೌಷಧ
ಮಹಾ+ಓಜಸ್ =ಮಹೌಜಸ್ , ಮಹಾ+ಔನ್ನತ್ಯ =ಮಹೌನ್ನತ್ಯ

B ಸಂಸ್ಕೃತ ವ್ಯಂಜನ ಸಂಧಿ —ಇದರಲ್ಲಿ ಕಕಾರ, ಛಕಾರ, ಟಕಾರ, ತಕಾರ, ದಕಾರ, ಪಕಾರ, ಸಕಾರದ ಬದಲಾವಣೆಗಳು ಮುಖ್ಯಗಳಾಗಿವೆ.

(a) ಕಕಾರದ ಬದಲಾವಣೆಗಳು

(೧) ಸ್ವರದ ಹಿಂದಣ ಕಕಾರವು ಗಕಾರವಾಗುವುದು, ಉದಾಹರಣೆ

ತಿರ್ಯಕ್ + ಈಕ್ಷ=ತಿರ್ಯಗೀಕ್ಷ , ತ್ವಕ್ + ಅಂಕುರ =ತ್ವಗಂಕುರ ,
ವಾಕ್+ಈಶ=ವಾಗೀಶ , ದಿಕ್+ಇಭ=ದಿಗಿಭ

(೨) ಗ ಜ ದ ಧ ಬ ಭ ಯ ರ ಲ ವ ಎಂಬಕ್ಷರಗಳ ಹಿಂದಣ ಕಕಾರವು ಗಕಾರವಾಗುವುದು ಉದಾಹರಣೆಗಳು

ದಿಕ್+ಗಜ=ದಿಗ್ಗಜ , ದಿಕ್+ಜಯ =ದಿಗ್ಜಯ ,
ದಿಕ್+ದಂತಿ =ದಿಗ್ದಂತಿ , ತಿರ್ಯಕ್ + ಧಾರ=ತಿರ್ಯಗ್ಧಾರ
ದಿಕ್+ಬಲಿ= ದಿಗ್ಬಲಿ, ದಿಕ್ +ಭ್ರಮಣ=ದಿಗ್ಭ್ರಮಣ ,
ಋಕ್+ಯಜುಸ್ =ಋಗ್ಯಜುಸ್ , ವಾಕ್+ರೋಧ=ವಾಗ್ರೋಧ,
ದಿಕ್+ಲಾಭ= ದಿಗ್ಲಾಭ , ವಾಕ್+ವಿಭವ =ವಾಗ್ವಿಭವ

(೩) ನಕಾರ ಮಕಾರಗಳ ಹಿಂದಣ ಕಕಾರವು ಙಕಾರವಾಗುವುದು

ತಿರ್ಯಕ್+ನಾಸ=ತಿರ್ಯಙ್ನಾಸ , ದಿಕ್+ಮಂಡಲ =ದಿಙ್ಮಂಡಲ
ವಾಕ್ + ಮಯ= ವಾಙ್ಮಯ

(b) ಚಕಾರದ ಬದಲಾವಣೆಗಳು- ಸಮಾಸಗಳಲ್ಲಿ ಸ್ವರದ ಮತ್ತು ವ್ಯಂಜನದ ಹಿಂದಣ ಚಕಾರವು ಜಕಾರವಾಗುವುದು. ಉದಾಹರಣೆಗಳು

ಅಚ್ + ಅಂತ=ಅಜಂತ , ಅಚ್ +ವರ್ಣ= ಅಜ್ವರ್ಣ

(c) ಛಕಾರದ ದ್ವಿತ್ವ ಅ, ಇ, ಉ ಎಂಬ ಹ್ರಸ್ವಸ್ವರಗಳ ಮುಂದಣ ಛಕಾರಕ್ಕೆ ದ್ವಿತ್ವವು ಬರುವುದು

ಅಕ್ಷರ+ಛಂದಸ್= ಅಕ್ಷರಚ್ಛಂದಸ್ , ಪ್ರತಿ+ಛನ್ನ =ಪ್ರತಿಚ್ಛನ್ನ
ಅನು+ಛದ =ಅನುಚ್ಛದ , ಮಧು + ಛಂದಸ್= ಮಧುಚ್ಛಂದಸ್

(d) ಟಕಾರದ ಬದಲಾವಣೆಗಳು —

(೧) ಸ್ವರದ ಹಿಂದಣ ಟಕಾರವು ಡಕಾರವಾಗುವುದು

ಷಟ್ + ಅಂಗ= ಷಡಂಗ , ಷಟ್ + ಋತು =ಷಡೃತು

(೨) ಗ, ಜ,ದ, ಧ, ಭ, ರ, ವ ಗಳ ಹಿಂದಣ ಟಕಾರವು ಡಕಾರವಾಗುವುದು.

ಷಟ್ + ಗುಣ = ಷಡ್ಗುಣ ; ಷಟ್ + ಜ = ಷಡ್ಜ

ಷಟ್ + ದರ್ಶನ = ಷಡ್ದರ್ಶನ , ಷಟ್ + ಧಾ = ಷಡ್ಧಾ

ಷಟ್ + ಭಾಗ = ಷಡ್ಭಾಗ , ಷಟ್ + ರಸ = ಷಡ್ರಸ

ಷಟ್ + ವರ್ಗ = ಷಡ್ವರ್ಗ , ಷಟ್ + ವಿಧ = ಷಡ್ವಿಧ

(೩) ನಕಾರ ಮಕಾರಗಳ ಹಿಂದಣ ಟಕಾರವು ಣಕಾರವಾಗುವುದು

ಷಟ್ + ನವತಿ = ಷಣ್ಣವತಿ (ಇಲ್ಲಿ ನಕಾರವೂ ಣಕಾರವಾಯಿತು)

ಷಟ್ + ಮುಖ = ಷಣ್ಮುಖ

(e) ತಕಾರದ ಬದಲಾವಣೆಗಳು ---

(೧) ಸ್ವರಗಳ ಹಿಂದಣ ತಕಾರವು ದಕಾರವಾಗುವುದು

ಬೃಹತ್ + ಆರಣ್ಯಕ = ಬೃಹದಾರಣ್ಯಕ , ಜಗತ್ + ಈಶ = ಜಗದೀಶ

(೨) ಗ, ದ, ಧ, ಬ, ಭ, ಯ, ರ, ವ, ಗಳ ಹಿಂದಣ ತಕಾರವು ದಕಾರವಾಗುವುದು

ಜಗತ್ + ಗುರು = ಜಗದ್ಗುರು, ಜಗತ್ + ದರ್ಪಣ = ಜಗದ್ದರ್ಪಣ,

ಜಗತ್ + ಧಾತ್ರಿ = ಜಗದ್ಧಾತ್ರಿ , ಜಗತ್ + ಬಲ = ಜಗದ್ಬಲ ,

ಜಗತ್ + ಭಾರ = ಜಗದ್ಭಾರ , ಜಗತ್ + ಯೋನಿ = ಜಗದ್ಯೋನಿ ,

ಬೃಹತ್ + ರಥ = ಬೃಹದ್ರಥ , ಲಸತ್ + ವಚನ = ಲಸದ್ವಚನ

(೩) ಚ, ಜ, ಡ, ಲ ಗಳ ಹಿಂದಣ ತಕಾರವು ಪರಸವರ್ಣಾದೇಶವನ್ನು ಹೊಂದುವುದು

ಜಗತ್ + ಚಕ್ಷುಸ್ = ಜಗಚ್ಚಕ್ಷುಸ್ ಸತ್ + ಚರಿತ = ಸಚ್ಚರಿತ ,

ಜಗತ್ + ಜೀವ = ಜಗಜ್ಜೀವ , ಸರಿತ್ + ಜಲ = ಸರಿಜ್ಜಲ ,

ರಟತ್ + ಡಮರು = ರಟಡ್ಡಮರು, ಬೃಹತ್ + ಲಲಾಟ = ಬೃಹಲ್ಲಲಾಟ

(೪) ನಕಾರ ಮಕಾರಗಳ ಹಿಂದಣ ತಕಾರವು ನಕಾರವಾಗುವುದು.

ಜಗತ್ + ನಾಥ = ಜಗನ್ನಾಥ ; ಸತ್ + ಮಾರ್ಗ = ಸನ್ಮಾರ್ಗ ,

ಭವತ್ + ಮತ = ಭವನ್ಮತ , ಝಣತ್ + ನೂಪುರ = ಝಣನ್ನೂಪುರ

(೫) ಶಕಾರದ ಹಿಂದಣ ತಕಾರವು ಚಕಾರವಾಗುತ್ತದೆ

ಚಿತ್ + ಶಕ್ತಿ = ಚಿಚ್ಛಕ್ತಿ (ಶಕಾರವು ಛಕಾರವಾಗುವುದು).

ಸತ್ + ಶೀಲ = ಸಚ್ಛೀಲ.

(f) ದಕಾರದ ಬದಲಾವಣೆಗಳು.

(೧) ಕ, ತ, ಪ, ಫ, ಸ ಗಳ ಹಿಂದಣ ದಕಾರವು ತಕಾರವಾಗುವುದು

ತದ್ + ಕಾಲ = ತತ್ಕಾಲ , ತದ್ + ತೀರ್ಥ = ತತ್ತೀರ್ಥ,

ತದ್ + ಪರ = ತತ್ಪರ , ತದ್ + ಫಲ = ತತ್ಫಲ ;

ತದ್ + ಸಮ = ತತ್ಸಮ ; ಏತದ್ + ಸಾಗರ = ಏತತ್ಸಾಗರ.

(೨) ಚ, ಜ, ಟ ಗಳ ಹಿಂದಣ ದಕಾರವು ಪರಸವರ್ಣಾದೇಶವನ್ನು ಹೊಂದುವುದು

ತದ್ + ಚಾತುರ್ಯ = ತಚ್ಚಾತುರ್ಯ , ತದ್ + ಜಯ = ತಜ್ಜಯ ,
ತದ್ + ಟೀಕೆ = ತಟ್ಟೀಕೆ

(೩) ನಕಾರ ಮಕಾರಗಳ ಹಿಂದಣ ದಕಾರವು ನಕಾರವಾಗುವುದು

ತದ್ + ನಾಶ = ತನ್ನಾಶ , ತದ್ + ಮಾತ್ರ = ತನ್ಮಾತ್ರ

(೪) ಶಕಾರದ ಹಿಂದಣ ದಕಾರವು ಚಕಾರವಾಗುವುದು

ತದ್ + ಶೀಲ = ತಚ್ಛೀಲ (ಇಲ್ಲಿ ಶಕಾರವು ಛಕಾರವಾಗಿದೆ)

(g) ಪಕಾರದ ಬದಲಾವಣೆಗಳು—ಸಮಾಸದಲ್ಲಿ ಸ್ವರಗಳ ಮತ್ತು ವ್ಯಂಜನಗಳ ಹಿಂದಣ ಪಕಾರವು ಬಕಾರವಾಗುವುದು

ಸುಪ್ + ಅಂತ = ಸುಬಂತ ; ಅಪ್ + ಜಾತ = ಅಬ್ಜಾತ

(h) ಪದಾಂತವಾದ ರೇಫಕ್ಕೆ ಕ ಖ ಪ ಫ ವರ್ಣಗಳು ಪರವಾದಾಗ, ಆ ರೇಫಕ್ಕೆ ವಿಸರ್ಗವು ಆದೇಶವಾಗಿ ಬರುವುದು

ಪ್ರಾತರ್ + ಕಾಲ = ಪ್ರಾತಃಕಾಲ , ಪುನರ್ + ಖನನ = ಪುನಃಖನನ,
ಪುನರ್ + ಪುನಃ = ಪುನಃ ಪುನಃ, ಪುನರ್ + ಫಲ = ಪುನಃ ಫಲ.

(i) ಸಕಾರದ ಬದಲಾವಣೆಗಳು—ಸಮಾಸ ಮಾಡುವುದರಲ್ಲಿ ಸಕಾರವು ಓಕಾರವಾಗಿಯೂ, ವಿಸರ್ಗವಾಗಿಯೂ ರೇಫವಾಗಿಯೂ ಶಕಾರವಾಗಿಯೂ, ಷಕಾರವಾಗಿಯೂ ಆಗುವುದು

(೧) ಸಮಾಸದಲ್ಲಿ ಅಕಾರದ ಹಿಂದಣ ಅಕಾರಯುಕ್ತ ಸಕಾರವು ಓಕಾರವಾಗುವುದು

ಮನಸ್ + ಅಪಹಾರಿ = ಮನೋಽಪಹಾರಿ ,
ಮನಸ್ + ಅಂಬುಜ = ಮನೋಽಂಬುಜ , ಶಿರಸ್ + ಅಸ್ಥಿ = ಶಿರೋಽಸ್ಥಿ

(೨) ಗ ಜ ದ ಧ ನ ಬ ಭ ಮ ಯ ರ ಲ ವ ಹ ಗಳ ಹಿಂದಣ ಅಕಾರಯುಕ್ತ ಸಕಾರವು ಓಕಾರವಾಗುವುದು

ತಮಸ್ + ಗುಣ = ತಮೋಗುಣ   ಮನಸ್ + ಜ = ಮನೋಜ,
ಮನಸ್ + ದಂಡ = ಮನೋದಂಡ   ತಪಸ್ + ಧನ = ತಪೋಧನ,
ಮನಸ್ + ನಿಗ್ರಹ = ಮನೋನಿಗ್ರಹ, ತಪಸ್ + ಬಲ = ತಪೋಬಲ,
ಮನಸ್ + ಭವ = ಮನೋಭವ, ಶಿರಸ್ + ಮಣಿ = ಶಿರೋಮಣಿ,
ಮನಸ್ + ಯೋಗ = ಮನೋಯೋಗ, ಮನಸ್ + ರಥ = ಮನೋರಥ,
ಮನಸ್ + ಲಯ = ಮನೋಲಯ   ಮನಸ್ + ವಿಕಾರ = ಮನೋವಿಕಾರ ,
ಮನಸ್ + ಹರ = ಮನೋಹರ , ಇತ್ಯಾದಿ

(೩) ಕ,ಖ,ಪ,ಫ,ಶ, ಸ ಗಳ ಹಿಂದಣ ಸಕಾರವು ವಿಸರ್ಗವಾಗುವುದು—

ತಪಸ್ + ಕ್ಲೇಶ = ತಪಃಕ್ಲೇಶ , ಧನುಸ್ + ಖಂಡ = ಧನುಃ ಖಂಡ ;

ಚಕ್ಷುಸ್ + ಪಥ = ಚಕ್ಷುಃಪಥ, ತಪಸ್ + ಫಲ = ತಪಃ ಫಲ,

ತಪಸ್ + ಶೀಲ = ತಪಃ ಶೀಲ, ತಪಸ್ + ಸಾಧ್ಯ = ತಪಃ ಸಾಧ್ಯ

(೪) ಇಕಾರ ಉಕಾರಗಳಿಗೆ ಪರವಾಗಿರುವ ಸಕಾರವು ಸಮಾಸವಾಗುವುದರಲ್ಲಿ ಸ್ವರಗಳ ಹಿಂದೆ ರೇಫವಾಗುವುದು

ಬಹಿಸ್ + ಅಂಗ = ಬಹಿರಂಗ, ಹವಿಸ್ + ಅಶನ = ಹವಿರಶನ

ಜ್ಯೋತಿಸ್ + ಲಿಂಗ = ಜ್ಯೋತಿರ್ಲಿಂಗ, ಧನುಸ್ + ಆಕಾರ = ಧನುರಾಕಾರ

(೫) ಇ, ಉ ಓ ಕಾರಗಳಿಗೆ ಪರವಾಗಿರುವ ಸಕಾರವು ಗ, ಜ, ದ ಧ ನ, ಬ ಭ ಮ ಯ, ಲ, ವ ಹ ಗಳ ಹಿಂದೆ ರೇಫವಾಗುತ್ತದೆ

ಧನುಸ್ + ಗುಣ = ಧನುರ್ಗುಣ ಧನುಸ್ + ಜ್ಯಾ = ಧನುರ್ಜ್ಯಾ,

ಧನುಸ್ + ದಂಡ = ಧನುರ್ದಂಡ, ಧನುಸ್ + ಧರ = ಧನುರ್ಧರ

ಬಹಿಸ್ + ನಿರ್ಗಮನ = ಬಹಿರ್ನಿರ್ಗಮನ, ಧನುಸ್ + ಬಲ = ಧನುರ್ಬಲ

ಬಹಿಸ್ + ಭಾಗ = ಬಹಿರ್ಭಾಗ, ಧನುಸ್ + ಮಧ್ಯ = ಧನುರ್ಮಧ್ಯ,

ಧನುಸ್ + ಯಾನ = ಧನುರ್ಯಾನ, ಯಜುಸ್ + ಲಕ್ಷ್ಮೀ = ಯಜುರ್ಲಕ್ಷ್ಮೀ

ಆಯುಸ್ + ವೇದ = ಆಯುರ್ವೇದ ದೋಸ್ + ಬಲ = ದೋರ್ಬಲ

(೬) ಇಕಾರ ಉಕಾರಗಳ ಹಿಂದಣ ಸಕಾರವು ಶಕಾರವಾಗುವುದು

ತಪಸ್ + ಚರಣ = ತಪಶ್ಚರಣ ಪಯಸ್ + ಚಯ = ಪಯಶ್ಚಯ

ಉರಸ್ + ಛದ = ಉರಶ್ಛದ, ಶಿರಸ್ + ಛೇದ = ಶಿರಶ್ಛೇದ

(೭) ಇಕಾರ ಉಕಾರಗಳ ಮುಂದಣ ಸಕಾರವು ಕ ಪ, ಮ ಗಳ ಹಿಂದುಗಡೆಯಲ್ಲಿ ಷಕಾರವಾಗುವುದು

ಬಹಿಸ್ + ಕೃತ = ಬಹಿಷ್ಕೃತ ಆಯುಸ್ + ಕಾಮ = ಆಯುಷ್ಕಾಮ

ಧನುಸ್ + ಪಟ = ಧನುಷ್ಪಟ, ಚಕ್ಷುಸ್ + ಪತಿ = ಚಕ್ಷುಷ್ಪತಿ

ಸರ್ಪಿಸ್ + ಮಾತ್ = ಸರ್ಪಿಷ್ಮಾತ್ ಧನುಸ್ + ಮಾತ್ = ಧನುಷ್ಮಾತ್

ಸಂಸ್ಕೃತವ್ಯಂಜನ ಸಂಧಿಯಲ್ಲಿ ರಕಾರ ಸಕಾರಗಳಿಗೆ ಆಗುವ ಆದೇಶಗಳನ್ನೂ ಸ್ವರಸಂಧಿಯಲ್ಲಿ ಲೋಪ ಸಂಧಿಯಿಲ್ಲದಿರುವುದನ್ನೂ ಪರಿಶೀಲಿಸುವಲ್ಲಿ ಕರ್ನಾಟಕ ಸಂಧಿಕಾರ್ಯಕ್ರಮವು ಸಂಸ್ಕೃತ ಸಂಧಿಕಾರ್ಯ ಕ್ರಮವನ್ನು ಹೋಲುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ

೧೨. ಉಪಸಂಹಾರ.

ಕರ್ನಾಟಕ ಸಂಧಿಪ್ರಕರಣವನ್ನು ದಕ್ಷಿಣೋತ್ತರ ಭಾಷೆಗಳ ಹೋಲಿಕೆಯೊಡನೆಯೂ, ಸಂಸ್ಕೃತದ ಸಂಧಿಕಾರ್ಯದ ತಾರತಮ್ಯದೊಡನೆಯೂ ಇದುವರೆಗೂ ಯಾವ ವಿದ್ವಾಂಸರೂ ಬರೆಯುವುದಕ್ಕೆ ಪ್ರಯತ್ನಿಸಲಿಲ್ಲವೆಂದು ಸಂದೇಹಿಸಿ ಕರ್ನಾಟಕ ಭಾಷೆಯ ಏಳಿಗೆಗಾಗಿ ನಾನು ಮಾಡಿರುವ ಈ ನನ್ನ ಪ್ರಥಮ ಪ್ರಯತ್ನವನ್ನು ವಿದ್ವನ್ಮಂಡಲಿಯು ಸಾವಧಾನದಿಂದ ಪರಿಶೀಲಿಸಬೇಕೆಂದು ಹಾರಯಿಸುತ್ತೇನೆ

——— 0· —— ——

ಅಜ್ಞಾತ ತದ್ಭವಗಳು.

ಕಿಟ್ಟೆಲವರು ತಮ್ಮ ನಿಘಂಟಿನಲ್ಲಿ ತದ್ಭವ ಮತ್ತು ಅಚ್ಚಗನ್ನಡ ಮಾತುಗಳ ವ್ಯುತ್ಪತ್ತಿಯನ್ನು ತೋರಿಸಲು ಯತ್ನಿಸಿರುವುದು ಶ್ಲಾಘ್ಯವೇ ಸರಿ. ಆದರೆ ಅನೇಕ ತದ್ಭವಗಳ ಸಂಸ್ಕೃತ ರೂಪಗಳನ್ನು ಅವರು ತಿಳಿಯದೆ ಬಿಟ್ಟಿರುವರು, ಮತ್ತು ನಿಜವಾಗಿ ಸಂಸ್ಕೃತದಿಂದ ಹುಟ್ಟಿದ ಪದಗಳನ್ನು ಅಚ್ಚಗನ್ನಡದಲ್ಲಿ ಸೇರಿಸಿರುವರು. ಸಂಸ್ಕೃತ, ಮರಾಠಿ, ತಮಿಳು, ತೆಲುಗು, ಮಲೆಯಾಳಿ ನಿಘಂಟುಗಳನ್ನು ಅವರು ನೋಡಿದರು. ಆದರೆ ಪ್ರಾಕೃತವ್ಯಾಕರಣಗಳನ್ನಾಗಲಿ ನಿಘಂಟುಗಳನ್ನಾಗಲಿ ಪರೀಕ್ಷಿಸಿದರೆಂದು ಕಾಣುವುದಿಲ್ಲ. ಹೀಗಾಗಿ ಅಚ್ಚಗನ್ನಡದ ವೇಷವನ್ನು ಧರಿಸಿದ ಕಳ್ಳನುಡಿಗಳು ಅವರನ್ನು ಮೋಸಗೊಳಿಸಿದುವು. 'ಒಡ್ಡು' ಎಂಬ ಮಾತು ಸಂಸ್ಕೃತದಿಂದ ಹುಟ್ಟಿರಬಹುದೆಂದು ಯಾರು ತಾನೇ ಊಹಿಸುವರು? ಆದರೆ ಚಿಲ್ಡರ್ಸ್‌ನ ಪಾಲಿನಿಘಂಟಿನಲ್ಲಿ ಇದು 'ಅವಧಾ' ಎಂಬುದರ ಅಪಭ್ರಂಶವೆಂದು ಹೇಳಿ, 'ಜಾಲಂಒಡ್ಡೇತಿ = ಬಲೆಯೊಡ್ಡು', 'ಸೋತಂಒಡ್ಡೇತಿ = ಕಿವಿಯೊಡ್ಡು' ಈ ಉದಾಹರಣೆಗಳನ್ನು ಕೊಟ್ಟಿರುವರು. ಮಗಧರಾಷ್ಟ್ರದಲ್ಲಿ ಆಡುತಿದ್ದ ಪ್ರಾಕೃತದಲ್ಲಿ ದ್ರಾವಿಡವಾಚಕವು ಪ್ರವೇಶಿಸುವುದು ಸಾಧ್ಯವೇ? ಬೌದ್ಧರೂ, ಜೈನರೂ, ಇತರ ಪ್ರಾಕೃತಭಾಷೆಯ ಜನರೂ ದ್ರಾವಿಡರ ಮಧ್ಯದಲ್ಲಿ ಬಂದು ನಿವಾಸಿಸಿದ್ದು ಇತಿಹಾಸದ ಸಂಗತಿ. 'ಒಪ್ಪು' ಅಂದರೆ ತಾನೇ ಅಂಗೀಕರಿಸುವುದು. 'ಒಪ್ಪಿಸು', ಮತ್ತು ಮರಾಠಿಯ 'ಓಪಣೆ', ಇವುಗಳಿಗೆ ಬೇರೆಯವರ ವಶಕ್ಕೆ ಕೊಡುವುದು ಎಂಬ ಅರ್ಥವು ಹೇಗೆ ಬಂತು? ಈ ಅನುಮಾನವು ಕಿಟ್ಟೆಲವರಿಗೆ ತೋರಿರಬಹುದು. ಆದರೆ ಅದರ ಪರಿಹಾರಕ್ಕೆ ಅವರು ನೋಡಿದ ನಿಘಂಟುಗಳಲ್ಲಿ ಸಾಧನಗಳಿರಲಿಲ್ಲ. ಸಂಸ್ಕೃತ 'ಅರ್ಪಣಂ' ಪ್ರಾಕೃತದಲ್ಲಿ 'ಒಪ್ಪಣಂ' ಆಗುವುದೆಂದು ಪ್ರಾಕೃತ ವ್ಯಾಕರಣಗಳಿಂದ ತಿಳಿಯಬೇಕು. ಇಂತಹ ಅಜ್ಞಾತತದ್ಭವಗಳಿಗೆ ವಾಚಕರ ಕಣ್ಣುಗಳನ್ನು ತೆರೆಯುವುದಕ್ಕಾಗಿ ಈ ನಿಬಂಧದಲ್ಲಿ ಕೆಲವು ದೃಷ್ಟಾಂತಗಳನ್ನು ಪ್ರದರ್ಶಿಸುವೆನು. ಇವುಗಳಲ್ಲಿ ಕೆಲವು ವರರುಚಿ, ಹೇಮಚಂದ್ರ, ಇವರ ವ್ಯಾಕರಣಗಳಲ್ಲಿಯೂ, ಇನ್ನೂ ಕೆಲವು ಪಾಲಿ—ಇಂಗ್ಲಿಷ್ ನಿಘಂಟಿನಲ್ಲಿಯೂ ದೊರಕಿದುವು. ಮತ್ತೂ ಕೆಲವು ನನ್ನ ಸ್ವಾನುಮಾನಕ್ಕೆ ಸಿಕ್ಕಿದುವೆಂದು ತಿಳಿಯತಕ್ಕದ್ದು.

ಮರಾಠಿಯಲ್ಲಿ ಹಲವು ದ್ರಾವಿಡಶಬ್ದಗಳು ನುಗ್ಗಿರುವುವೆಂದು ವಿದ್ವಾಂಸರಮತ. ಆದರೆ ಒಂದುಮಾತು ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಕಂಡುಬಂದರೆ, ಅದರ ಮೂಲವನ್ನು ಮೊತ್ತಮೊದಲು ಸಂಸ್ಕೃತದಲ್ಲಿ ಹುಡುಕುವುದು ಸಮಂಜಸವೆಂದು ನನ್ನ ಅಭಿಪ್ರಾಯ. ಸಂಸ್ಕೃತವಾಚಕಗಳಿಗೂ ದ್ರಾವಿಡನುಡಿಗಳಿಗೂ ಆಕಸ್ಮಾತ್ತಾಗಿ ಸಾರೂಪ್ಯವಿದ್ದು, ಅವುಗಳಿಗೆ ಮಾತಾಪುತ್ರೀ ಸಂಬಂಧವಿದೆಯೆಂದು ಭ್ರಮಿಸುವುದು ಅಸಾಧ್ಯವಲ್ಲ. 'ಅಂಕೆಯಿಲ್ಲದವಂಗ', ಇಲ್ಲಿ ಸಂಸ್ಕೃತ 'ಅಂಕ' ಶಬ್ದಕ್ಕೆ

ಸಂಯುವಾರ್ಥವನ್ನು ಕಲ್ಪಿಸ ಬೇಕೆಂದರೆ ಸಾಹಸಮಾತ್ರವೇ ಆಗಬಹುದು "ಅಂಚ್" ಧಾತುವಿಗೆ ಈ ಅರ್ಥವಿರುವುದರಿಂದ, ಅದರಿಂದ ಹುಟ್ಟಿದ ಒಂದು ಶಬ್ದದ ತದ್ಭವವು ಅಂಕೆಯಾಗಿರಬಹುದೆಂದು ಸೂಚಿಸಬಹುದು 'ಅಂಡೆಯುಬಾಯಿ ಕಟ್ಟಬಹುದು' ಎಂಬಲ್ಲಿ ಬಿದುರಿನ ನಳಿಗೆಯ ಬಾಯಿಯನ್ನು ಕಟ್ಟುವುದು ಕಷ್ಟವಲ್ಲದಿರುವುದರಿಂದಲೂ ಪ್ರಾಕೃತಜನ್ಯಭಾಷೆಗಳಲ್ಲಿ ಈ ಗಾದೆಯಿರುವಲ್ಲಿ 'ಹಂಡಾ' ಎಂಬ ಸಂಸ್ಕೃತವಾಚಕವನ್ನು ಉಪಯೋಗಿಸುವುದರಿಂದಲೂ, ಇವರ ತದ್ಭವ ಅಂಡೆಯಾಗಿರಬೇಕೆಂದು ಅನುಮಾನಿಸಬಹುದು ದೃಢವಾಗಿ ಸಾಧಿಸುವುದಕ್ಕೆ ಮನುಷ್ಯನು ಸರ್ವಜ್ಞನಲ್ಲವಷ್ಟೆ ಇಷ್ಟು ಪೂರ್ವಾನುಬೋಧವನ್ನು ನೆನಪಿನಲ್ಲಿಟ್ಟುಕೊಂಡು ವಾಚಕರು ಕೆಳಗಿನ ದೃಷ್ಟಾಂತಗಳನ್ನು ಪರಾಂಬರಿಸಬಹುದು ಅವುಗಳೆಲ್ಲವೂ ಅಜ್ಞಗನ್ನಡವೆಂದು ಕಿಟ್ಟೆಲವರ ಮತ

೧ ಅಕ್ಕುಡಿಸು, ಮ–ಆಖುಡಣೆ (ಕಿಟ್ಟೆಲರು ಕೊಟ್ಟಿಲ್ಲ), ಸಂ–ಆಕೂರ್ಣ, ಅಥವಾ ಆಕುಂಚ್

೨ ಅಗಳಾಡು, ಮ ಅಘಳಣೆ, ಸಂ–ಆಕಲ್

೩ ಅಡ ಮ–ಆಡ ಪ್ರಾ–ಅಡ್ಡ, ಸಂ ಅರ್ಧ, ಅರ್ಧ್ಯ ಕನ್ನಡದಲ್ಲಿಯೂ ಮರಾಠಿಯಲ್ಲಿಯೂ ಇದಕ್ಕೆ ಸಂಸ್ಕೃತದಲ್ಲಿಲ್ಲದ ಅರ್ಥಗಳು ಬಂದಿವೆ ಅಡ್ಡ = ಅಪೂರ್ಣ, ಅಪ್ರಧಾನ, ಮಾರ್ಗದ ಅರ್ಧದಲ್ಲಿ ಬರುವ ಅಂತರಾಯ, ಸರಳಗತಿಗೆ ಅರ್ಧದಲ್ಲಿ ಅಂತರಾಯ ಒಂದು ಪರಿಣಮಿಸುವ ತಿರ್ಯಗ್ವರ್ತನ

೪ ಅಪ್ಪಳಿಸು, ಮ–ಆಪಟಣೆ (ಕಿಟ್ಟೆಲರು ಕೊಟ್ಟಿಲ್ಲ), ಸಂ–ಆಸ್ಫಲ್.

೫ ಅಂಬಿಗ, ಮ–ಅಂಬೇ, ಸಂ–ಅಂಬುಗ, ಅಥವಾ ಔಡುಪಿಕ

೬ ಅರಿಬು, ಅರ್ಬಟು, ಮ ಆರೋಳಿ, ಸಂ–ಆರು, ಆರವ

೭ ಅಲ್ಲಾಡು, ಮ ಹಾಲಣೆ, ಸಂ–ಆಲುಡ್

೮ ಆವು, ಮ–ಆವಾ, ಸಂ–ಆಪಾಕ

೯ ಉಕ್ಕು ಮ ಉಕಳಣೆ, ಸಂ–ಉತ್ಕ್ರುಧ್, ಉತ್ಕ್ರಮ್.

೧೦ ಉಗ್ಗಡಣೆ, ಸಂ ಉದ್ಘುಷ್ಟ

೧೧ ಉಗ್ರಾಣ, ಸಂ–ಉದ್ಗ್ರಹಸ್ಥಾನ

೧೨ ಉಬ್ಬಸ, ಸಂ–ಊರ್ಧ್ವ (ಪ್ರಾ–ಉಬ್ಭ) ಶ್ವಾಸ

೧೩ ಉಬ್ಬಳಿಕೆ, ಸಂ–ಉದ್ವಮನ

೧೪ ಉಬ್ಬು, ಸಂ–ಉದ್ವೃಹ್

೧೫ ಉಬ್ಬೆ, ಸಂ–ಉಷ್ಮ

೧೬. ಉರುಳ, ಸಂ–ಉದ್ವೃತ್

೧೭. ಉಲಿ, ಸಂ–ಉಲ್ಲಪ್.

೧೮. ಉಸಿರ್, ಪ್ರಾ ಊಸಸಿರೋ, ಸಂ–ಉಚ್ಛ್ವಾಸ

೧೯ ಒದರು , ಸಂ–ಉದೀರ್.

೨೦. ಒದ್ದೆ, ಸಂ–ಆರ್ದ್ರ

೨೧ ಒರೆ , ಪ್ರಾ–ಏರೇತಿ , ಸಂ–ಈರ್

೨೨ ಒಸರ್, ಸಂ–ಅವಸ್ರು

೨೩. ಓಕರಿಸು, ಸಂ–ಉದ್ಗ್ರಾ

೨೪. ಓಟೆ , ಸಂ–ಅವಟ

೨೫. ಓಸರಿಸು, ಸಂ–ಅಪಸೃ.

೨೬. ಓಳಿ, ಸಂ–ಆಲಿ, ಆವಲಿ

೨೭ ಕನ್ನ, ಸಂ–ಖನಕ

೨೮ ಕಲಿ, ಮ–ಕಳಣೆ, ಸಂ–ಕಲ್

೨೯ ಕಲಸು , ಮ–ಕಾಲವಿಣೆ , ಸಂ–ಕಲ್

೩೦. ಕಸರು, ಸಂ–ಕಷಾಯ

೩೧. ಕಾವಿ , ಸಂ–ಕಾಷಾಯ

೩೨. ಕುಣ್ಟೆ , ಸಂ–ಕುಣ್ಠ

೩೩ ಕೆರೆ , ಮ–ಖರಪಣೆ, ಸಂ–ಖುರ್

೩೪ ಕೋಣೆ , ಮ–ಖೋಲಿ , ಸಂ–ಕೋಷ್ಠ

೩೫ ಗಟ್ಟಿ, ಮ–ಘಟ್ಟ, ಸಂ–ಘಟ್ಟಿತ,ಗಾಢ

೩೬ ಗಂಡ–ಇದು ಸಮರ್ಥನೆಂಬ ಅರ್ಥದಲ್ಲಿ ಅಚ್ಚಗನ್ನಡ, ವೀರ, ಮತ್ತು ಅಪಾಯ, ಇನ್ನು ಕೆಲವು ಅರ್ಥಗಳಲ್ಲಿ ಕೂಡ ಸಂಸ್ಕೃತವೆಂದು ಕಿಟ್ಟೆಲರ ಅಭಿಪ್ರಾಯ ಸಮರ್ಥನಿಗೂ ವೀರನಿಗೂ ಎಷ್ಟು ತಾರತಮ್ಯವೋ ಗೊತ್ತಿಲ್ಲ ಮರಾಠಿಯಲ್ಲಿ ‘ಬ್ರಾಹ್ಮಣಗಂಡ’ ನೆಂದರೆ ಅಪಾಯಕರ ಬ್ರಾಹ್ಮಣನೆಂಬ ಅರ್ಥ ಇಲ್ಲಿ ಗಂಡಶಬ್ದಕ್ಕೆ ವೀರನೆಂಬ ಅರ್ಥವೆಂದೂ, ಆದರೆ ವಿಪರೀತ ಲಕ್ಷಣೆಯಿಂದ ಅಧಮನೆಂಬ ಅರ್ಥ ಬಂತೆಂದೂ, ಫರ್ಗುಜನ್ ‘ವಿದ್ಯಾಮಂದಿರದ ಪ್ರವಕ್ತೃ’ ರಾಜವಾಡೆಯವರು ಹೇಳಿರುವರು ಅದು ಹೇಗಿದ್ದರೂ ಇದು ತದ್ಭವವೆನ್ನ ಕೂಡದು

೩೭ ಗವಸಣೆ, ಇದು ಸಂ–ಗವಾಕ್ಷನ ಎಂಬುದರ ತದ್ಭವವೆಂದು ರಾಜವಾಡೆಯವರ ಅಭಿಪ್ರಾಯ

೩೮. ಗಾಯ, ಸಂ–ಘಾತ

೩೯ ಗಾಳಿ, ದೆವ್ವ ಎಂಬ ಅರ್ಥದಲ್ಲಿ, ಸಂ–ಗ್ರಾಹಿ

೪೦. ಗಿಡಗ, ಸಂ–ಗೃಧ್ರ.

೪೧ ಗಿಡ್ಡ, ಸಂ–ಕ್ಷುದ್ರ.

೪೨ ಗೊಂಚಲು , ಸಂ–ಗುಚ್ಛಕ

೪೩. ಗೊಂದಳ, ಮ–ಗೋಂಧಳ ಇವು ಒಂದೇ ಶಬ್ದವಲ್ಲವೆಂದು ಕಿಟ್ಟೆಲರು ಅಕ್ಷರ ಭೇದದಿಂದ ತಿಳಿಸಿರುವರು ಯಾರು ಬಲ್ಲರು? ಮರಾಠಿ ಶಬ್ದವು ಸಂ–ಗುದ್, ಗೋ ದತೆ=ಆಡು ಇದರಿಂದ ಬಂತೆಂದು ರಾಜವಾಡೆಯವರ ಮತ.

೪೪. ಟಗರ, ಸಂ–ಛಗಲ

೪೫. ಡೊಂಬಿ, ಸಂ–ಡಿಂಬ

೪೬ ತೀರ್, ಈ ದ್ರಾವಿಡ ಧಾತು ಸಂಸ್ಕೃತದಲ್ಲಿ ಸೇರಿದೆ ಎಂದು ಕಿಟ್ಟೆಲರ ವಾದ. ಇದನ್ನು ತೀರಿಸುವರಾರು? ಪ್ರಾಕೃತದಲ್ಲಿ 'ಅಟ್ಟಂತೀರೇತಿ' ಅಂದರೆ ವಿವಾದವನ್ನು ತೀರಿಸುವುದೆಂಬ ಅರ್ಥವಂತೆ

೪೭ ತೀವು, ಸಂ–ತೀವ ಇದು ಕಿಟ್ಟೆಲರ ಕಣ್ಣಿಗೆ ಬೀಳಲಿಲ್ಲವೋ ಏನೋ

೪೮ ತೋರ, ಸಂ–ಸ್ಥೂಲ

೪೯ ದಟ್ಟ, ಸಂ–ದೃಢ

೫೦ ದಡ್ಡ, ಪ್ರಾ–ದಡ್ಡ, ಇದು ಸಂ–ದಸ್ರ=ಕತ್ತೆ, ಎಂಬುದರ ತದ್ಭವವೆಂದು ವೈಯಾಕರಣಿಗಳ ಮತ

೫೧. ನರ, ಪ್ರಾ–ನಹಾರು, ಇದು ಸಂ–ಸ್ನಾಯು, ಎಂಬುದರ ಅಪಭ್ರಂಶವಂತೆ

೫೨ ನೇವಳ, ಸಂ–ನೈಪಥ್ಯ

೫೩ ಪಳ್ಳ, ಸಂ–ಪಲ್ವಲ ಪ್ರಾಕೃತಜನ್ಯ ಕೊಂಕಣಿಯಲ್ಲಿ 'ಫೊಂಡ'=ಕನ್ನಡ 'ತೊಂಡ' ಈ ಮಾತುಗಳೆಲ್ಲ ಒಂದೇ ಮೂಲದಿಂದ ಹುಟ್ಟಿರಬಹುದು

೫೪ ಪಾಡಿ, ಸಂ ಪಾಟಕ, ಪದ್ರ

೫೫ ಪುಡಿ, ಮ ಪೂಡ, ಸಂ–ಧಾತು ಪುಂಡ್'

೫೬ ಪೆಗ್ಗು, ಸಂ–ಫಲ್ಗು

೫೭ ಪೆಟ್ಟು, ಸಂ–ಪ್ರಹೃತ.

೫೮ ಪೊಟ್ಟೆ, ಹೊಟ್ಟೆ, ಮ–ಪೋಟ, ಪ್ರಾ–ಪಒಟ್ಟ, ಸಂ–ಪ್ರಕೋಷ್ಠ ಇದರ ತದ್ಭವವೆಂದು ವೈಯಾಕರಣಿಗಳ ಮತ ಕೋಷ್ಠ ಶಬ್ದಕ್ಕೆ ಈ ಅರ್ಥವನ್ನು ಕೊಟ್ಟು, ಪ್ರಕೋಷ್ಠಕ್ಕೆ ಕೆಲವು ನಿಘಂಟುಗಳಲ್ಲಿ ಕೊಡದೆ ಹೋಗಿರುವುದರ ಕಾರಣವೇನೋ ಗೊತ್ತಿಲ್ಲ

೫೯ ಪೊರೆ, ಹೊದೆ, ಸಂ–ಪರಿಧಾ

೬೦ ಬಳೆ, ಸಂ–ಬಲ್. ಕಿಟ್ಟೆಲರ ಮತ ಹೇಗಿದ್ದರೂ ಹಳಗನ್ನಡದಲ್ಲಿ ಒಳೆ ಮತ್ತು ಬೆಳೆ–ಇವುಗಳಿಗೆ ಭೇದವಿರುವುದಕ್ಕೆ ಅವು ಬೇರೆ ಬೇರೆ ಮೂಲಗಳಿಂದ ಹುಟ್ಟಿದ್ದೇ ಕಾರಣವಿರಬಹುದು ನಿಶ್ಚಯವಿಲ್ಲ

೬೧ ಬೊಬ್ಬೆ, ಸಂ–ಭಂಭಾ

೬೨ ಮುಕ್ಕಳಿಸು; ಸಂ–ಮುಖಕ್ಷಾಲನ,

೬೩. ಮೂಳ, ಸಂ-ಮೂಢ.

೬೪ ಮೊದ್ದು, ಸಂ-ಮುಗ್ಧ

೬೫ ಮೊಳೆ, ಪ್ರಾ-ಮುಹಳೊ, ಸಂ-ಮಯೂಖ

೬೬ ರೊಂಕೆ, ಸಂ-ರೇಷಣ

೬೭ ಸಲೆ, ಸಂ ಸ್ಥ

೬೮ ಸಲಿಗೆ, ಪ್ರಾ-ಸಲಗ, ಸಂ ಸಂಲಗ್ನ

೬೯ ಸಾರಣೆ, ಸಂ-ಸಂಮಾರ್ಜನ

೭೦ ಸಿಂಬಳ ಸಂ-ಶ್ಲೇಷ್ಮ ಜಲ

೭೧ ಸೆಂದು, ಸಂ ಸ್ಪೃಧ್.

೭೨ ಹಗುರ, ಸಂ-ಅಗುರು

೭೩ ಹೊರೆ, ಪೊರ, ಸಂ-ಭಾರ

೭೪ ಹೊಳೆ, ಪ್ರಾ-ಪಹಾಳ ಸಂ ಪಹಾ,

೭೫ ಸೆಯ ಶಬ್ದವು 'ಕನ್ನಡ' ವಾಗಲಿ, ಇಲ್ಲ ಮುಗಿಸಬೇಕು

ಇದರ ವ್ಯುತ್ಪತ್ತಿಯ ವಿಷಯದಲ್ಲಿ ಹಲವು ಮತಗಳಿರುವುದು ವಾಚಕರಿಗೆ ವೇದ್ಯವಿದಷ್ಟೆ. ಮನುಸ್ಮೃತಿಯಲ್ಲಿ 'ನಟಶ್ಚ ಕರಣಶ್ಚೈವ ಖಸೋದ್ರಾವಿಡ ಏವಚ' ಎಂದು ಕೆಲವು ಮಿಶ್ರಜಾತಿಗಳ ಹೆಸರುಗಳು ಹೇಳಿವೆ. ದ್ರಾವಿಡರೆಂದರೆ ತಮುಳು-ಪ್ರಾಕೃತ, ದ್ರಮಿಲ್ಲ ಜನರೆಂತಲೂ ಇವರ ನಾಡಿನ ಉತ್ತರಕ್ಕೆ ಕರಣರೆಂಬುವರು ನಿವಾಸಿಸಿದ್ದರು, ಅವರ ನಾಡಿಗೆ ಕರಣರಾಷ್ಟ್ರ ಎಂಬ ಹೆಸರು ಬಂತೆಂತಲೂ, ಮಹಾರಾಷ್ಟ್ರಕ್ಕೆ ಮರಾಠದೇಶ ಎಂದು ಹೇಳುವಂತೆ ಕರಣರಾಷ್ಟ್ರವು ಕರಣಾಟ, ಆಯಿತೆಂದು ಒಂದು ಮತವಿದೆ. ಆದರೆ ಮನುಸ್ಮೃತಿಯ ಕರಣ ಶಬ್ದಕ್ಕೆ ಬೇರೆ ಅರ್ಥವನ್ನು ಹಚ್ಚಿರುವುದರಿಂದಲೂ, ಕರಣರೆಂಬವರು ಕೃಷ್ಣಾ ತುಂಗಭದ್ರಾ ನದಿಗಳ ಪ್ರದೇಶದಲ್ಲಿದ್ದರೆಂಬುದಕ್ಕೆ ಬೇರೆ ಪ್ರಮಾಣವೇನೂ ಸಿಕ್ಕದಿರುವುದರಿಂದಲೂ, ಈ ಮತವನ್ನು ಸ್ವೀಕರಿಸಲಿಕ್ಕೆ ನನಗೆ ಧೈರ್ಯ ಸಾಲದು. ಕರಹಾಟ ಎಂಬ ಹೆಸರು ಹೇಗೆ ಬಂತೋ ಗೊತ್ತಿಲ್ಲ. ಆದರೆ ಮಹಾರಾಷ್ಟ್ರನಿವಾಸಿಗಳಿಗೂ ಕುಂತಳ ನಿವಾಸಿಗಳಿಗೂ ಅನ್ಯೋನ್ಯ ಸಂಪರ್ಕವಿದ್ದು ಪ್ರಾಕೃತದಿಂದಲೂ ಸಂಸ್ಕೃತದಿಂದಲೂ ಈ ಪ್ರದೇಶದ ದ್ರಾವಿಡ ಭಾಷೆಯವರು ಅನೇಕ ಮಾತುಗಳನ್ನು ಅಂಗೀಕರಿಸಿದ್ದರಿಂದ ಮಹಾರಾಷ್ಟ್ರವೆಂಬುದಕ್ಕೆ ಸಮಾನಾರ್ಥವುಳ್ಳ "ಕರುನಾಡು" ಎಂಬ ಹೆಸರನ್ನು ಕಲ್ಪಿಸಿಕೊಂಡರೋ ಎಂಬ ಅನುಮಾನವು ನನ್ನಲ್ಲಿ ಹುಟ್ಟಿ ಚಿರಕಾಲವಾಯಿತು. ತಥ್ಯವೇನಿದೆಯೋ ಯಾರು ಬಲ್ಲರು?

ಹ. ನಾರಾಯಣರಾವ್

ಪರಿಶಿಷ್ಟ — ಈ ನಿಬಂಧದ ಉದ್ದೇಶವು ತದ್ಭವ ವಿಚಾರದಲ್ಲಿ ಕುತೂಹಲವನ್ನು ಹುಟ್ಟಿಸುವುದೇ, ಅಲ್ಲದೆ ಆವುದೊಂದು ವಿಷಯದಲ್ಲಿಯೂ ಸ್ವಮತವನ್ನು ಪ್ರತಿಪಾದಿಸುವುದಲ್ಲ. ಹೀಗಿದ್ದು ನನಗೆ ತೋರಿದ ವ್ಯಾಖ್ಯೆಗಳ ಪೂರ್ವಪರ ಪಕ್ಷಗಳನ್ನು ಚರ್ಚಿ

ಸದೆ, ಕೆಲವು ಸೂಚನೆಗಳನ್ನು ಮಾತ್ರ ವಾಚಕರ ಮುಂದಿಟ್ಟಿರುವೆನು ಹೇಗೆಂದರೆ-- ಅಟ್ಟ, ಇದರ ರೂಪಾಂತರವಾದ ಮರಾಠಿ 'ಅಟ' ಶಬ್ದವು ಗುಜರಾಥಿಯಲ್ಲಿಯೂ ಇರುವುದು ಇದು ಸಂಸ್ಕೃತ 'ಅಟ್' ಧಾತುವಿನಿಂದ ಬಂದಿರಬೇಕೆಂದು ವ್ಯುತ್ಪತ್ತಿ ಪ್ರಕಾಶವೆಂಬ ಚಿಕ್ಕ ಪುಸ್ತಕದಲ್ಲಿ ಹೇಳಿದೆ 'ಅಟ್', ಅಭಿಯೋಗೇ -- ಶಬ್ದಕಲ್ಪ ದ್ರುಮ, ಅಟ್ಟ, ಅಡಕು, ಅಡಕಾವ, ಅಡಹಣೆ, ಮುಂತಾಗಿ ಮರಾಠಿಯಲ್ಲಿಯೂ ಗುಜ ರಾಥಿಯಲ್ಲಿಯೂ ಸ್ವಲ್ಪ ಸ್ವಲ್ಪ ಅಕ್ಷರಭೇದವಿರುವ ಹಲವು ಮಾತುಗಳು ಈ ಧಾತು ವಿನಿಂದ ಹುಟ್ಟಿರಬಹುದು ಇನ್ನೊಂದು ದೃಷ್ಟಾಂತ -ನೇವಳ ದೇಶೀರತ್ನಾವಳಿಯಲ್ಲಿ "ಣೆ ಉರಮ್ಮಿಣೆ ಅಲಂ ಎಂದಿದ್ದು, ಇದರ ಅರ್ಥವು 'ಣೆ ಅಲಂನೂಪುರಂ' ಎಂದು ವೃತ್ತಿಯಲ್ಲಿ ಹೇಳಿದೆ ಣೆ ಉರವು ನೇವುರವಾಯಿತು ಣೆ ಅರವು ನೇವಳ ವಾಗಿ, ಅದರ ಅರ್ಥವು ಕಾಲಕ್ರಮೇಣ ದೇಶಾಂತರದಲ್ಲಿ ಬದಲಾಗಿರಬಹುದು ಇಲ್ಲ ದಿದ್ದರೆ, ನಿಷೀತಮಾಲಾ, ನಿಷೀವಿಯ ಇಂತಹ ನಾಮಗಳಿಂದ ನೇವಳವು ಹುಟ್ಟಿರಲೂ ಬಹುದು ಪಂಡಿತರು ನಿರ್ಣಯಿಸಲಿ

ಮ ನಾ ರಾ

ಜಗದ್ವಿಖ್ಯಾತರಾದ ಮೂವರು ಕವಿಗಳು.

ಈ ಕವಿಗಳ ಉಲ್ಲೇಖವ, ಕಾವ್ಯದ ರೀತಿಯನ್ನನುಸರಿಸಿರುವುದು "ಕಾವ್ಯಂ ರಸಾತ್ಮಕಂ ವಾಕ್ಯಂ' ಎಂದು ಹೇಳಿದ ರಸಗರ್ಭಿತವಾದ ವಾಕ್ಯವೇ ಕಾವ್ಯವೆ ನಿಸುವುದು ಸುಪ್ರಸಿದ್ಧ ಗ್ರಂಥಕಾರನೊಬ್ಬನು ಈ ಕೆಳಗೆ ಬರೆದಿರುವಂತೆ ಇದರ ಪ್ರಭಾವದ ಪ್ರಶಂಸೆಯನ್ನು ವರ್ಣಿಸಿರುವನು 'ಕಾವ್ಯವು, ಮನುಷ್ಯನ ಅಂತಃಕರ ಣದ ಸೂಕ್ಷ್ಮತಮ ತಂತುಗಳನ್ನೂ ಅಲ್ಲಾಡಿಸಿ ಬಿಡುವುದು, ಮತ್ತು ಹೃದಯದ ರಂಧ್ರಗಳಲ್ಲಿ ಪ್ರವೇಶಿಸಿ ಆನಂದದ ಬಂದು ಸ್ಥಿರತರವಾದ ಚಮತ್ಕಾರವನ್ನು ಉಂಟುಮಾಡುವುದು ಎಷ್ಟೆಷ್ಟು ಉತ್ಕೃಷ್ಟತಮ ಭಾವಗಳು ಶ್ರೇಷ್ಠವಾದ ಆತ್ಮ ಗಳಲ್ಲಿ ಸಂಸಾರ ಕ್ರೀಡಾವಲೋಕನದಿಂದ ಬಿಂಬಿತವಾಗುವುವೋ ಅವುಗಳೆಲ್ಲಾ ಸರಸ ವಾದ ಮಧುರವಾದ ಮತ್ತು ಚಿತ್ತಾಕರ್ಷಕವಾದ ಭಾಷೆಯಿಂದಲೇ ಪ್ರಕಟ ವಾಗುವುವು'

ಕಾವ್ಯದಲ್ಲಿ ಮುಖ್ಯವಾಗಿ ಮೂರು ಭೇದಗಳಿರುವುವು-- ೧ ಮಹಾಕಾವ್ಯ, ೨ ಖಂಡಕಾವ್ಯ, ೩ ನಾಟಕ ಮಹಾಭಾರತ ರಾಮಾಯಣ ಮುಂತಾದ ಮಹತ್ವಪೂ ರ್ಣವಾದ ಕಾವ್ಯಗಳೇ "ಮಹಾಕಾವ್ಯ ಗಳು ಮೇಘದೂತಾದಿ ಕಾವ್ಯಗಳೇ "ಖಂಡ ಕಾವ್ಯ"ಗಳು ಶಾಕುಂತಲ ಮತ್ತು ಉತ್ತರ ರಾಮಚರಿತವೇ ಮೊದಲಾದುವು "ನಾಟ ಕ"ಗಳು. ಭಾರತವರ್ಷವು ಕಾವ್ಯದ ಭಾಂಡಾಗಾರವಾಗಿದೆ ಇಲ್ಲಿ ಅನೇಕ ಕವಿ ಗಳು ಅತ್ಯಂತ ಗೌರವಶಾಲಿಗಳೂ ಕವಿತಾಕುಶಲರೂ ಆಗಿರುವರು ಇವರುಗಳಿಗೆ

ಪೃಥ್ವೀಮಂಡಲದ ಕವಿಗಳಲ್ಲಿ ಉಚ್ಚಸ್ಥಾನವು ದೊರೆತಿರುವುದು. ಅನ್ಯದೇಶಗಳಲ್ಲಿ ಇಂತಹ ಕವಿಗಳು ಇರಲಿಲ್ಲವೆಂದರೆ ಸತ್ಯವನ್ನು ವ್ಯಥಾ ಅಪಲಾಪಮಾಡಿದಂತಾಗುತ್ತದೆ. ಈ ದೇಶದಲ್ಲಿ ಹತ್ತು ಮಂದಿ ಕವಿಗಳಿದ್ದರಾದರೆ ಅನ್ಯದೇಶಗಳಲ್ಲಿ ಒಬ್ಬನೋ ಇಬ್ಬರೋ ಇರಬಹುದು. ಸರ್ವಥಾ ಇಲ್ಲವೆಂದೇ ಹೇಳುವುದಾದರ ಸತ್ಯವನ್ನು ನಾಶನಮಾಡಿದಂತಾಗುವುದು. ಈ ದೇಶದ ಕವಿಗಳು ತಮ್ಮ ಕಾವ್ಯ ಕುಶಲತೆಯಿಂದ ಅಧ್ಯಾತ್ಮವಿಷಯಗಳನ್ನು ಎಷ್ಟು ಸ್ಪಷ್ಟವಾಗಿ ವರ್ಣನೆಮಾಡಿರುವರೋ ಹಾಗೆ ಅನ್ಯದೇಶದ ಕವಿಗಳು ಮಾಡಿರುವುದಿಲ್ಲ. ಆದರೆ ಈ ವಿಷಯವನ್ನು ಮಾತ್ರ ಬಿಟ್ಟರೆ ಉಳಿದ ಎಲ್ಲಾ ವಿಷಯಗಳಲ್ಲಿಯೂ ಭಾರತವರ್ಷದ ಕವಿಗಳ ಸ್ಥಿತಿಯು ಹೇಗಿರುವುದೋ ಹಾಗೆಯೇ ಅನ್ಯದೇಶೀಯ ಕವಿಗಳ ಸ್ಥಿತಿಯೂ ಇರುವುದು.

ತಮ್ಮ ತಮ್ಮ ಭಾಷೆಗಳಲ್ಲಿ ಅದ್ವಿತೀಯರೂ ಅನುಪಮೇಯರೂ ಆದ ಮೂವರು ಕವಿಗಳನ್ನು ಕುರಿತು ಸ್ವಲ್ಪ ಮಟ್ಟಿಗೆ ಈ ಲೇಖದಲ್ಲಿ ಬರೆಯುವೆವು. ಇವರುಗಳಲ್ಲಿ ಮೊದಲನೆಯವನು ಸಂಸ್ಕೃತ ಕವಿಯಾದ "ಕಾಳಿದಾಸನು", ಎರಡನೆಯವನು ಹಿಂದೀ ಭಾಷೆಯ ಕವಿಯಾದ "ತುಳಸೀದಾಸನು", ಮೂರನೆಯವನು ಇಂಗ್ಲಿಷ್ ಭಾಷೆಯ ಕವಿಯಾದ "ಷೇಕ್ಸ್‌ಪಿಯರು" ಈ ಮೂವರೂ ಮೂರುಭಾಷೆಗಳಲ್ಲಿ ಅದ್ವಿತೀಯರಾದ ಕವಿಗಳಾಗಿರುವುದರಿಂದಲೇ ಇಲ್ಲಿ ಮೂವರನ್ನೂ ವರ್ಣಿಸಿದೆ. ಈ ಮೂವರೂ ಸಮಾನ ಸುಪ್ರಸಿದ್ಧರು, ಈ ಮೂವರ ಕವಿತೆಗಳ ಭಾವವೂ ಉಚ್ಚತಮ ಶ್ರೇಣಿಗೆ ಸೇರಿರುವುದು. ಈ ಮೂವರ ಕಾವ್ಯರಚನೆಯಲ್ಲಿ ಸರಳತೆಯೂ, ಸರಸತೆಯೂ, ಮಾಧುರತೆಯೂ ಮನೋಹರತೆಯೂ ಒಂದೇ ತೆರನಾಗಿರುವುವು. ಈ ಮೂವರೂ ಅತ್ಯಂತ ಗಂಭೀರವಾದ ವಿಷಯಗಳನ್ನು ಕೂಡ ಸಾರಗರ್ಭಿತಗಳಾದ ಸಣ್ಣ ಸಣ್ಣ ವಾಕ್ಯಗಳಲ್ಲಿ ವ್ಯಕ್ತಪಡಿಸಿರುವರು. ಈ ಮೂವರಲ್ಲಿಯೂ ಕಾವ್ಯರಚನೆಯ ವಿಷಯದಲ್ಲಿ ವಿಚಾರ ಪ್ರಚುರತೆಯು ಅಧಿಕವಾಗಿರುವುದು. ಈ ಮೂವರಲ್ಲಿ ವಾಕ್ಯಸ್ವಾತಂತ್ರ್ಯತೆಯೂ, ಭಾವಗಂಭೀರತೆಯೂ ವ್ಯಂಗ್ಯಾರ್ಥಶೋಭೆಯೂ, ಪದಲಾಲಿತ್ಯವೂ, ವ್ಯಾಪಕಸತ್ಯತೆಯೂ, ಸಾರ್ವಭೌಮಿಕ ವಿಚಾರಶೀಲತೆಯೂ ಬಹಳ ಮಟ್ಟಿಗೆ ಒಂದೇ ತೆರನಾಗಿರುವುವು. ಇವುಗಳೂ ಅಲ್ಲದೆ ಇನ್ನೂ ಕೆಲವು ಭಾವಗಳು ಗ್ರಂಥಾವಲೋಕನದಿಂದಲ್ಲದೆ ಬೇರೆ ವಿಧದಲ್ಲಿ ಯಾರಿಗೂ ತಿಳಿಯಬರಲಾರವು. ಕೋಟ್ಯಂತರ ಮಂದಿ ಈ ಮೂವರ ಗ್ರಂಥಗಳನ್ನು ಓದಿ ಅವುಗಳನ್ನು ತಮ್ಮ ಜೀವನದ ಮಾರ್ಗದರ್ಶಕಗಳನ್ನಾಗಿ ಮಾಡಿಕೊಂಡಿರುವರು. ಇವರುಗಳ ಗ್ರಂಥಗಳ ವಾಕ್ಯಗಳು ಎಲ್ಲಾ ಭಾಷೆಗಳ ಸಾಹಿತ್ಯ ಗ್ರಂಥಗಳಲ್ಲಿಯೂ ಪ್ರಮಾಣರೂಪವಾಗಿ ಅಂಗೀಕರಿಸಲ್ಪಡುತ್ತಿರುವುವು. ಮತ್ತು ಇವರುಗಳಿಗಿರುವ ಆದರವೂ, ಸನ್ಮಾನವೂ, ಗೌರವವೂ ಛತ್ರಪತಿಯಾದ ಯಾವ ಸಾರ್ವಭೌಮನಿಗೂ ಬಂದಿಲ್ಲ.

ಕಾಳಿದಾಸ.

ಕಾಳಿದಾಸನ ಜೀವನ ಸಮಯದ ವಿಷಯದಲ್ಲಿ ವಿದ್ವಾಂಸರು ಭಿನ್ನಾಭಿಪ್ರಾಯಗಳುಳ್ಳವರಾಗಿರುವರು. ಈ ವಿಷಯದಲ್ಲಿ ಅನೇಕ ಸಮ್ಮತಿಗಳು ಪ್ರಕಟಿಸಲ್ಪಟ್ಟಿವೆ

ಆರನೆಯ ಶತಮಾನದ ಪೂರ್ವಭಾಗದಲ್ಲಿ ಉಜ್ಜಯಿನಿಯ ಅಧಿಪತಿಯಾದ ವಿಕ್ರಮಾದಿತ್ಯನು ರಾಜ್ಯವಾಳುತ್ತಿದ್ದಾಗ ಕಾಳಿದಾಸನು ಬಾಳಿದನೆಂಬುದನ್ನು ಅನೇಕ ವಿದ್ವಾಂಸರು ಒಪ್ಪಿಕೊಂಡಿರುವರು. ಆ ಸಮಯದಲ್ಲಿ ಸಂಸ್ಕೃತಕವಿತೆಯು ಬಹಳ ಉನ್ನತಸ್ಥಿತಿಯಲ್ಲಿತ್ತು. ಕಾಳಿದಾಸನಿಂದ ರಚಿತವಾದ ಅನೇಕ ಕಾವ್ಯಗಳೂ, ನಾಟಕಗಳೂ ಮತ್ತು ಸ್ತೋತ್ರಗಳೂ ಇವೆ. ಇದುವರೆಗೂ ಸಿಕ್ಕಿರುವ ಗ್ರಂಥಗಳು ಯಾವುವೆಂದರೆ —

ಮಹಾಕಾವ್ಯಗಳು

೧ ರಘುವಂಶ (೧೯ ಸರ್ಗಗಳು)
೨ ಕುಮಾರ ಸಂಭವ (೧೭ ಸರ್ಗಗಳು)

ನಾಟಕಗಳು

೩ ವಿಕ್ರಮೋರ್ವಶೀಯ
೪ ಮಾಲವಿಕಾಗ್ನಿಮಿತ್ರ
೫ ಶಾಕುಂತಲ

ಖಂಡಕಾವ್ಯಗಳು

೬ ಮೇಘದೂತ
* ೭ ಶ್ಯಾಮಲಾದಂಡಕ
* ೮ ಶೃಂಗಾರತಿಲಕ
* ೯ ರಾಕ್ಷಸಕಾವ್ಯ
* ೧೦ ಪುಷ್ಪಭವವಿಲಾಸ
೧೧ ಋತುಸಂಹಾರ
* ೧೨ ನಳೋದಯ

ರಘುವಂಶವು ಮಹಾಕಾವ್ಯ. ಇದರಲ್ಲಿ ರಾಮಚಂದ್ರನ, ಆತನ ಪೂರ್ವಜರ ಮತ್ತು ಉತ್ತರಾಧಿಕಾರಿಗಳ ವೃತ್ತಾಂತವಿರುವುದು. ಈ ಕಾವ್ಯವು ೧೯ ಸರ್ಗಗಳನ್ನೊಳಕೊಂಡಿದೆ. ಇದರಲ್ಲಿ ಇನ್ನೂ ಕೆಲವು ಸರ್ಗಗಳಿತ್ತೆಂದು ಊಹಿಸಲ್ಪಟ್ಟಿದೆ. ಏಕೆಂದರೆ ೧೯ನೆಯ ಸರ್ಗದಲ್ಲಿ ಕಥೆಯು ಪೂರ್ಣರೀತಿಯಾಗಿ ಕೊನೆಗೊಂಡಿಲ್ಲ. ಕಾಳಿದಾಸನು ಈ ಕಾವ್ಯವನ್ನು ತಾನು ಪೂರ್ತಿಮಾಡಲಿಲ್ಲ ಅಥವಾ ಉಳಿದ ಸರ್ಗಗಳು ಲೋಪವಾಗಿರುವುವು ಎಂದು ಕಥೆಯ ತ್ರುಟಿಯಿಂದ ಅನುಮಾನವು ಹುಟ್ಟುವುದು. ‡ ಕುಮಾರ ಸಂಭವಕಾವ್ಯದಲ್ಲಿ ೧೭ ಸರ್ಗಗಳಿರುವುವು. ಇದರಲ್ಲಿ ಕುಮಾರನ ಉತ್ಪತ್ತಿ,

* ಇವು ಕಾಳಿದಾಸ ಕೃತಗಳೆಂಬುದನ್ನು ಅನೇಕರು ಒಪ್ಪುವುದಿಲ್ಲ.

‡ ಈ ಕಾವ್ಯದಲ್ಲಿ ೮ ಸರ್ಗಗಳು ಮಾತ್ರವೆ ಕಾಳಿದಾಸನಿಂದ ರಚಿತವಾಗಿರುವುವೆಂದು ಅನೇಕ ವಿಮರ್ಶಕರ ಅಭಿಪ್ರಾಯವಿರುವುದು.

ಶಿವ ಮತ್ತು ಉಮೆಯ ಪ್ರೇಮ-ವಿವಾಹ ಮತ್ತು ಕುಮಾರನಿಂದ ಆದ ತಾರಕಾಸುರನ ವಧೆ, ಇವು ವರ್ಣಿತವಾಗಿರುವುವು. ಈ ಎರಡು ಕಾವ್ಯಗಳೂ ಕಾವ್ಯಕಲೆಯ ಕೊನೆಯ ಎಲ್ಲೆಯನ್ನು ಪ್ರಕಾಶ ಪಡಿಸುತ್ತವೆ.

ಇವುಗಳಲ್ಲಿ ಸುಂದರವೂ ಮನೋಹರವೂ ಮತ್ತು ಅದ್ಭುತವೂ ಆದ ಪದರಚನೆಯೂ ಇರುವುದು. ಅನುತ್ತರವೂ ಮತ್ತು ಮಹತ್ವಪೂರ್ಣವೂ ಆದ ಉಪಮಾನಗಳಿವೆ. ರೂಪಕ ಮತ್ತು ಇತರ ಅಲಂಕಾರಗಳು ಇವೆ. ಕಾಳಿದಾಸನ ನಾಟಕಗಳಲ್ಲೆಲ್ಲಾ ಶಾಕುಂತಲ ನಾಟಕವೇ ಸುಪ್ರಸಿದ್ಧವಾಗಿಯೂ ಮನೋಹರವಾಗಿಯೂ ಇದೆ. ಶಕುಂತಲೆ ಮತ್ತು ದುಷ್ಯಂತನ ಪ್ರೇಮ, ಮತ್ತು ಅಂತ್ಯದಲ್ಲಿ ಒಬ್ಬರನ್ನೊಬ್ಬರು ಸೇರುವುದು ಇವು ಅತ್ಯಂತ ಸುಂದರವಾಗಿರುವ ಸಂಬಂಧದ ವಿಷಯವಾಗಿದೆ. ಈ ನಾಟಕದ ಪ್ರಶಂಸೆಯನ್ನು ಜಗತ್ಪ್ರಸಿದ್ಧನಾದ ಗೇಥೆ ಕವಿಯು — "ನವವರುಷದ ನವವಿಕಸಿತವಾದ ಮೊಗ್ಗುಗಳು, ವರ್ಷಾಕಾಲದಲ್ಲಿ ವಿಕಸಿತವಾದ ಮೊಗ್ಗುಗಳು, ಸಕಾಲದ ಮಳೆಯಿಂದ ಪರಿಪಕ್ವವಾದ ಫಲಗಳು ಇವು ಮಾತ್ರ ಈ ನಾಟಕದಂತೆ ಆತ್ಮನನ್ನು ಸಂತುಷ್ಟಗೊಳಿಸಬಲ್ಲವು, ಮೋಹಗೊಳಿಸಬಲ್ಲವು, ಆನಂದಪಡಿಸಬಲ್ಲವು. ಪೃಥ್ವಿಯಲ್ಲಿರುವ ಮತ್ತು ಆಕಾಶದಲ್ಲಿರುವ ಎಲ್ಲಾ ಮನೋಹರ ವಸ್ತುಗಳ ಪುಂಜವನ್ನು ಏಕತ್ರಮಾಡಿ ವರ್ಣನೆ ಮಾಡಿದರೆ ಶಾಕುಂತಲ ನಾಟಕದ ಹೆಸರು ಮಾತ್ರ ಮನಸ್ಸಿಗೆ ಸ್ಫುರಿಸುವುದು" ಎಂದು ಬರೆದಿರುತ್ತಾನೆ. ಶಾಕುಂತಲವು ಕಾಳಿದಾಸನ ಇತರ ನಾಟಕಗಳಿಗಿಂತ ಶ್ರೇಷ್ಠವಾಗಿದೆ. ಅದರಲ್ಲಿರುವ ಏಳು ಅಂಕಗಳಲ್ಲಿ ನಾಲ್ಕನೆಯ ಅಂಕವು ಶ್ರೇಷ್ಠತಮವಾಗಿರುವುದು. ನಾಲ್ಕನೆಯ ಅಂಕದಲ್ಲಿಯೂ ನಾಲ್ಕು ಶ್ಲೋಕಗಳು ಉತ್ತಮೋತ್ತಮವಾಗಿರುತ್ತವೆ. ಅವುಗಳಲ್ಲಿಯೂ ನಾಲ್ಕನೆಯ ಶ್ಲೋಕವು ಅತ್ಯುತ್ತಮವಾಗಿರುವುದು. ಅದರಲ್ಲಿಯೂ ನಾಲ್ಕನೆಯ ಪಾದವು ಉತ್ಕೃಷ್ಟೋತ್ಕೃಷ್ಟವೆನಿಸಿಕೊಂಡಿದೆ. ಪದರಚನೆಯ ಶ್ರೇಷ್ಠತೆಯೂ ಮಧುರತೆಯೂ, ಪ್ರಾಕೃತಿಕವರ್ಣನೆಗಳ ಉತ್ಕೃಷ್ಟತೆಯೂ ಹೃದಯಾಂತರ್ಗತವಾದ ಭಾವಗಳನ್ನು ವ್ಯಕ್ತಪಡಿಸಿರುವುವು ಮತ್ತು ಕರುಣಾರಸವರ್ಣನೆಯ ಕುಶಲತೆಯು ಶಾಕುಂತಲ ನಾಟಕವನ್ನು ಎಲ್ಲಾ ನಾಟಕಗಳಿಗಿಂತಲೂ ಉಚ್ಚಪದವಿಗೆ ಅಧಿಕಾರಿಯನ್ನಾಗಿ ಮಾಡಿರುವುದು. ಈ ನಾಟಕದ ಭಾಷಾಂತರವು ಯೂರೋಪಿಗೆ ಸೇರಿದಾಗ ಅನೇಕ ಪಾಶ್ಚಾತ್ಯವಿದ್ವಾಂಸರು ಇದನ್ನು ತಿಳಿದು ಸಂಸ್ಕೃತವನ್ನಭ್ಯಸಿಸಲು ಪ್ರಯತ್ನಮಾಡಿದರು. ಆದರೆ ಭಾರತವರ್ಷದಲ್ಲಿ ಮಾತ್ರ ಸಾವಿರಾರು ಮಂದಿ ಇದನ್ನು ಇನ್ನೂ ನೋಡಿ ಇರಲಾರರು. ಓದುವ ಮಾತಿನ್ನೇಕೆ?"

ಕಾಳಿದಾಸನ ಇನ್ನೊಂದು ನಾಟಕವು ವಿಕ್ರಮೋರ್ವಶೀಯ. ಇದರಲ್ಲಿ ಐದು ಅಂಕಗಳಿವೆ. ಈ ನಾಟಕದ ವಿಷಯವು ಪುರೂರವರಾಜನ ಮತ್ತು ಅಪ್ಸರಸ್ಸಾದ ಊರ್ವಶಿಯ ಪ್ರೇಮವನ್ನು ಕುರಿತಿದೆ. ಇದರ ಎಲ್ಲಾ ಘಟನೆಗಳಲ್ಲಿಯೂ ಪ್ರಾರಬ್ಧವೇ ಪ್ರಧಾನವೆಂದು ತಿಳಿಯ ಬರುತ್ತದೆ. ಪ್ರಾರಬ್ಧವೆಂಬ ಸಂಕೋಲೆಗಳಿಂದ ರಾಜನೂ ಅಪ್ಸರಸ್ಸೂ ದೇವತೆಗಳ ಅಧಿಪತಿಯಾದ ಇಂದ್ರನೂ ಕಟ್ಟಲ್ಪಟ್ಟಿರುತ್ತಾರೆ.

ಮೂರನೆಯ ನಾಟಕವು ಮಾಲವಿಕಾಗ್ನಿಮಿತ್ರ. ಪ್ರತಿನಿತ್ಯವೂ ರಾಜ ಮಹಾರಾಜರುಗಳ ಮಹಲುಗಳಲ್ಲಿ ನಡೆಯುವ ಘಟನಾವಳಿಗಳ ದೃಶ್ಯಗಳು ಇದರಲ್ಲಿ ವಿವೃತವಾಗಿವೆ. ಇದರಿಂದ ಆ ಸಮಯದ ಸಾಮಾಜಿಕ ದಸೆಯ ಪೂರ್ಣವಿಷಯಗಳು ತಿಳಿಯುವುವು. ರಾಜನಾದ ಅಗ್ನಿಮಿತ್ರನು ತನ್ನ ರಾಣಿಯ ದಾಸಿಯಾದ ಮಾಲವಿಕೆಯಲ್ಲಿ ಮೋಹಿತನಾಗುವುದು, ರಾಣಿಯು ತನ್ನ ದಾಸಿಯನ್ನು ರಾಜನ ದೃಷ್ಟಿಯಿಂದ ಮರೆಯಿಸಲು ಪ್ರಯಾಸಪಡುವುದು, ರಾಜನು ಆ ದಾಸಿಯೊಡನೆ ಗುಪ್ತ ರೀತಿಯಿಂದ ಸೇರುವುದು, ಅತ್ಯಂತದಲ್ಲಿ ರಾಜನ ವಿವಾಹವಾಗುವುದು—ಇವೇ ಈ ನಾಟಕದ ಮುಖ್ಯ ವಿಷಯಗಳಾಗಿರುತ್ತವೆ. ಈ ನಾಟಕದ ಪದರಚನೆಯು ಕಾಳಿದಾಸನ ಅನ್ಯನಾಟಕಗಳಂತಿಲ್ಲವಾದುದರಿಂದ ಈ ನಾಟಕವನ್ನು ಕಾಳಿದಾಸನು ರಚಿಸಿರುವನೆ? ಎಂಬ ವಿಷಯವನ್ನು ಕುರಿತು ಕೆಲವರು ವಿದ್ವಾಂಸರು ಸಂಶಯಪಡುವರು. ಈ ಸಂಶಯವು ನಿರರ್ಥಕ. ಕಾಳಿದಾಸನ ಇತರ ಎಲ್ಲಾ ಗ್ರಂಥಗಳನ್ನೂ ಈ ಗ್ರಂಥವನ್ನೂ ಏಕಾಗ್ರಚಿತ್ತದಿಂದ ಓದಿದರೆ ಈ ಸಂಶಯವು ತನ್ನಷ್ಟಕ್ಕೆ ತಾನೇ ಪರಿಹಾರವಾಗುವುದು.

ಖಂಡಕಾವ್ಯಗಳಲ್ಲಿ ಮೇಘದೂತವು ಸರ್ವೋತ್ತಮ. ಇದರ ಪ್ರಶಂಸೆಯನ್ನು ಎಲ್ಲರೂ ಮುಕ್ತಕಂಠದಿಂದ ಸಾರಿರುವರು. ಒಬ್ಬ ಯಕ್ಷನು ತನ್ನ ಪತ್ನಿಯಿಂದ ಅಗಲಿ ಬೇರೊಂದು ಕಡೆ ಬಂದಿಯಾಗಿಡಲ್ಪಟ್ಟಿದ್ದನು. ಪತ್ನೀವಿಯೋಗದಿಂದ ಅತ್ಯಂತ ದುಃಖಿತನಾಗಿ ಆತನು ಒಂದು ಮೇಘವನ್ನು ದೂತನನ್ನಾಗಿ ಮಾಡಿಕೊಂಡು ತನ್ನ ಪತ್ನಿಗೆ ಸಂದೇಶ ಕಳುಹಿಸಿದನು. ಇದೇ ಈ ಕಾವ್ಯದ ವಿಷಯವು. ಯಕ್ಷನ ಸ್ಥಾನವು ಅಲಕಾಪುರಿ. ಆ ಊರಿಗೆ ಹೋಗುವ ಮಾರ್ಗದಲ್ಲಿ ಸಿಕ್ಕುವ ಸ್ಥಳಗಳನ್ನೆಲ್ಲಾ ವರ್ಣಿಸಿರುವನು. ಈ ಭಾಗವನ್ನು ಐತಿಹಾಸಿಕದೃಷ್ಟಿಯಿಂದ ನೋಡಿದರೆ ಬಹುಪ್ರಯೋಜನಕಾರಿಗಳಾದ ಸಂಗತಿಗಳು ತಿಳಿಯ ಬರುವುವು. ಸಾಹಿತ್ಯ ಶಾಸ್ತ್ರದಲ್ಲಿ ವಿವರಿಸಿರುವ ವಿಪ್ರಲಂಭ ಶೃಂಗಾರದ ಎಲ್ಲೆಯನ್ನು ಮೀರಿ ಪತ್ನೀವಿಯೋಗ ದುಃಖವು ವರ್ಣಿಸಲ್ಪಟ್ಟಿದೆ. ಇದು ಕವಿತಾಕಲೆಯಲ್ಲಿ ಒಂದು ಅಪೂರ್ವವಾದ ರತ್ನದಂತಿರುವುದು. ಇದರ ಆಧಾರದ ಮೇಲೆ ಎಷ್ಟೋ ಕಾವ್ಯಗಳು ಹುಟ್ಟಿವೆ, ಆದರೆ ಇದರ ಪ್ರಾಶಸ್ತ್ಯವು ಯಾವುದಕ್ಕೂ ಇಲ್ಲ. ಕಾಳಿದಾಸನ ಇತರ ಖಂಡಕಾವ್ಯಗಳೂ ಮಾಹಾತ್ಮ್ಯ ಭೂಷಿತಗಳಾಗಿವೆ. ಈ ಚಿಕ್ಕ ಲೇಖನದಲ್ಲಿ ಅವೆಲ್ಲವನ್ನೂ ಸವಿಸ್ತಾರವಾಗಿ ವರ್ಣಿಸಲಾಗುವುದಿಲ್ಲ. ಆದುದರಿಂದ ವಾಚಕರ ಕ್ಷಮೆಯನ್ನು ಪ್ರಾರ್ಥಿಸುವೆವು.

ಗೋಸ್ವಾಮಿ ತುಳಸೀದಾಸ

ಯಾವ ಪದವಿಯು ಸಂಸ್ಕೃತಕವಿತೆಯಲ್ಲಿ ಕಾಳಿದಾಸನಿಗೆ ದೊರೆತಿರುವುದೋ, ಅದಕ್ಕಿಂತಲೂ ಎಷ್ಟೋ ಉಚ್ಚಪದವಿಯು ಹಿಂದೀಭಾಷೆಯ ಕವಿತೆಯಲ್ಲಿ ತುಳಸೀದಾಸನಿಗೆ ದೊರೆತಿರುವುದು. ಕಾಳಿದಾಸನ ಗ್ರಂಥಗಳನ್ನು ಸಾವಿರಾರುಮಂದಿ ಓದಿದರೆ ತುಳಸೀದಾಸನ ರಾಮಾಯಣವನ್ನು ಲಕ್ಷಾಂತರ, ಏಕೆ? ಕೋಟ್ಯಂತರ ಜನರು ಓದುತ್ತಿರುವರು. ಈ ಪುಸ್ತಕವು ಆಧುನಿಕ ಹಿಂದೂಗಳ ಧರ್ಮಶಾಸ್ತ್ರದ ಪುಸ್ತಕವಾಗಿಯೂ

ಇರುವುದು. ಭಾರತವರ್ಷದ ಸುಮಾರು ೨೦ ಕೋಟಿ ಹಿಂದೂಗಳಲ್ಲಿ ತುಳಸೀದಾಸನ ಹೆಸರನ್ನು ತಿಳಿಯದವನೇ ಅಪೂರ್ವ. ಈತನು ೧೫೪೪ ರಲ್ಲಿ ಜನ್ಮವೆತ್ತಿದನು. ಮತ್ತು ಈತನ ಪರಲೋಕ ಗಮನಕಾಲವು ೧೬೨೪ ಎಂದು ಊಹಿಸಿರುತ್ತಾರೆ. ಈತನು ಸರಯೂಪಾರಿ ಬ್ರಾಹ್ಮಣನಾಗಿದ್ದನು. ಅಲಹಾಬಾದು ದಿಕ್ಕಿನ ರಾಜಾಪುರವೆಂಬ ಊರು ಈತನ ನಿವಾಸಗ್ರಾಮವಾಗಿತ್ತು. ಈತನು ಬಹು ತೀರ್ಥಯಾತ್ರೆಗಳನ್ನು ಮಾಡಿರುವನು. ಈತನು ಬರೆದಿರುವ ಗ್ರಂಥಗಳು ಯಾವುವೆಂದರೆ

೧ ರಾಮಾಯಣ
೨ ಕವಿತ್ತ ರಾಮಾಯಣ
೩ ಗೀತಾವಲಿ ರಾಮಾಯಣ
೪ ಧನ್ಹಾವಲಿ ರಾಮಾಯಣ
೫ ಬರವಾ ರಾಮಾಯಣ
೬ ದೋಹಾವಲಿ ರಾಮಾಯಣ
೭ ಕುಂಡಲಿಯಾ ರಾಮಾಯಣ
೮ ಸತಸಯೀ
೯ ರಾಮ ಸಲಾಕಾ
೧೦ ಸಂಕಟ ವಿಮೋಚನ
೧೧ ಹನುಮದ್ಬಾಹುಕ
೧೨ ಕೃಷ್ಣ ಗೀತಾವಳಿ
೧೩ ಜಾನಕೀ ಮಂಗಳ
೧೪ ಪಾರ್ವತೀ ಮಂಗಳ
೧೫ ಕರಕಾ ಛಂದ
೧೬ ರೋಲಾ ಛಂದ
೧೭ ಝೂಲನಾ ಛಂದ
೧೮ ವಿನಯ ಪತ್ರಿಕೆ

ತುಳಸೀದಾಸನ ರಾಮಾಯಣವನ್ನು ಎಷ್ಟು ಪ್ರಶಂಸೆಮಾಡಿದರೂ ಸ್ವಲ್ಪವೆ. ಹಿಂದೀ ಸಾಹಿತ್ಯದಲ್ಲಿಂತೂ ಇಂತಹ ಬೇರೆ ಗ್ರಂಥವು ಇಲ್ಲವೇ ಇಲ್ಲ.

ಇದರ ಭಾಷೆಯು ಬಹಳ ಮನೋಹಾರಿಣಿಯಾಗಿಯೂ, ಸರಸ ಸಾರಗರ್ಭಿತವಾಗಿಯೂ ಇದೆ. ತುಳಸೀದಾಸನ ವಿನಯಪತ್ರಿಕೆಯು ಭಕ್ತಿಯ ಅದೊಂದು ಅವತಾರವೆನಿಸಿಕೊಂಡಿದೆ. ಇದರ ಆನಂದವನ್ನು ಓದುವವರು ಮಾತ್ರವೇ ತಿಳಿಯಬಲ್ಲರು. ಒಂದುವೇಳೆ ತುಳಸೀದಾಸನು ಮತ್ತಾವ ಗ್ರಂಥವನ್ನೂ ಬರೆಯದೆ ಇದೊಂದು ಗ್ರಂಥವನ್ನೇ ಬರೆದಿದ್ದರೂ ಆತನ ಕೀರ್ತಿಯು ಭೂಮಂಡಲದಲ್ಲಿ ಉಜ್ವಲವಾಗಿಯೂ ಅಮರವಾಗಿಯೂ ಇರುತ್ತಿತ್ತು. ರಾಮಾಯಣವೂ ವಿನಯಪತ್ರಿಕೆಯೂ ಹಿಂದೀ

ಸಾಹಿತ್ಯದಲ್ಲಿ ಎರಡು ಅಮೂಲ್ಯಗ್ರಂಥಗಳಾಗಿ ಶೋಭಿಸುತ್ತಿವೆ ಹಿಂದೀ ಪ್ರೇಮಿಯಾದ ಅವನು ಈ ಎರಡು ಪುಸ್ತಕಗಳನ್ನು ಓದಿಲ್ಲವೊ ಅವನು ಹಿಂದೀ ಸಾಹಿತ್ಯವನ್ನು ಅರಿಯದವನೆಂದೇ ಹೇಳಬಹುದು ತುಳಸೀದಾಸನನ್ನು ಪಾಶ್ಚಾತ್ಯ ಪಂಡಿತರೂ ಬಹಳವಾಗಿ ಪ್ರಶಂಸಿಸುತ್ತಿರುವರು ಗ್ರಿಯರ್ಸನ್ ಸಾಹೇಬನಂತೂ ಅದರಲ್ಲಿ ಮಗ್ನನಾಗಿರುವನು. ತುಳಸೀದಾಸನಿಗಿಂತ ಹೆಚ್ಚಿದ ಕವಿಯು ಹಿಂದೀ ಭಾಷಾ ಪ್ರಪಂಚದಲ್ಲಿ ಯಾರೂ ಹುಟ್ಟಿಯೇ ಇಲ್ಲವೆಂಬುದು ಆತನ ಅಭಿಪ್ರಾಯವಾಗಿದೆ

ಷೇಕ್ಸ್ಪಿಯರ್.

ಕವಿಮಂಡಲಿಯಲ್ಲಿ ಕಾಳಿದಾಸನಿಗೂ ತುಳಸೀದಾಸನಿಗೂ ಯಾವ ಸ್ಥಾನವಿರುವುದೋ ಅದೇ ವಿಲಿಯಮ್ ಷೇಕ್ಸ್ಪಿಯರಿಗೂ ಇರುವುದು ಈತನು ಇಂಗ್ಲೀಷ್ ಭಾಷೆಯಲ್ಲಿ ಆದರ್ಶ ಕವಿಯು ಈತನ ಕವಿತೆಗಳು ಅತುಲನೀಯ, ಸರಸ ಮತ್ತು ಮನೋಹರವಾಗಿವೆ ಇಂಗ್ಲೀಷ್ ಜನರೆಲ್ಲರೂ ಈತನ ಕವಿತೆಗಳಲ್ಲಿ ಮುಗ್ಧರಾಗಿರುವರು. ಎಲ್ಲೆಲ್ಲಿ ಇಂಗ್ಲೀಷ್ ಭಾಷೆಯ ಅಧಿಕಾರವಿದೆಯೋ ಅಲ್ಲೆಲ್ಲಾ ಷೇಕ್ಸ್ಪಿಯರಿನ ಪ್ರಭಾವವು ಪ್ರಸರಿಸಿದೆ ಇಂಗ್ಲೆಂಡಿನ ಒಬ್ಬ ದುರಂಧರ ಪಂಡಿತನು (ಕಾರ್ಲಯಿಲ್) ಒಬ್ಬನು "ಇಂಗ್ಲೆಂಡಿನ ವಾಸಿಗಳಲ್ಲಾವನನ್ನಾದರೂ ಹಿಂದೂಸ್ತಾನದ ಸಾಮ್ರಾಜ್ಯವು ನಿನಗೆ ಬೇಕೊ, ಷೇಕ್ಸ್ಪಿಯರ್ ಬೇಕೊ ಎಂದು ಕೇಳಿದರೆ, ಹಿಂದೂ ಸಾಮ್ರಾಜ್ಯವು ನನಗಿಲ್ಲದಿದ್ದರೂ ಚಿಂತೆಯಿಲ್ಲ, ಷೇಕ್ಸ್ಪಿಯರ್ ಇದ್ದೇ ಇರಬೇಕೆಂಬುವನು" ಎಂದು ಬರೆದಿರುವನು ತಮ್ಮ ಕವಿಗಳಿಗೆ ಇಂತಹ ಸನ್ಮಾನಮಾಡುವ ಜಾತಿಯವರೆ ಧನ್ಯರಲ್ಲವೆ? ಷೇಕ್ಸ್ಪಿಯರ್ ೧೫೬೪ ರಲ್ಲಿ ಸ್ಟ್ರಾಟ್‌ಫರ್ಡ್ ಆನ್ ಏವನ್ ಎಂಬ ಗ್ರಾಮದಲ್ಲಿ ಜನ್ಮಿಸಿದನು ಈತನ ತಂದೆಯು ಕಟುಕರ ಕೆಲಸಮಾಡುತ್ತಿದ್ದನು ಆತನಿಗೆ ಷೇಕ್ಸ್ಪಿಯರ್ ಅಲ್ಲದೆ ಮೂವರು ಗಂಡುಮಕ್ಕಳೂ ಇಬ್ಬರು ಹೆಣ್ಣು ಮಕ್ಕಳೂ ಇದ್ದರು. ೧೫೮೨ ರಲ್ಲಿ ಷೇಕ್ಸ್ಪಿಯರಿನ ವಿವಾಹವು ತನಗೆ ಹತ್ತೆಂಟು ಸ್ತ್ರೀಯೊಡನೆ ಬಳೆಯಿತು ಗ್ರಾಮದ ಒಬ್ಬ ಅಮೀರನ ಬೇಟೆಯ ಉದ್ಯಾನದಲ್ಲಿ ಜಿಂಕೆಯನ್ನು ಕದ್ದನೆಂಬ ಅಭಿಯೋಗದಲ್ಲಿ ಈತನಿಗೆ ಶಿಕ್ಷೆಯಾಗಿತ್ತು ಅಂದಿನಿಂದೀತನು ಆ ಗ್ರಾಮವನ್ನು ಬಿಟ್ಟು ಲಂಡನ್ ನಗರದಲ್ಲಿ ವಾಸಿಸುತ್ತಿದ್ದನು ನಾಟಕಗಳನ್ನು ನೋಡಲು ಹೋಗುವವರ ಕುದುರೆಗಳನ್ನು ಕಾಯುವ ಕೆಲಸವಿದ್ದುದರಿಂದ ಪ್ರಾರಂಭದಲ್ಲಿ ಈ ಕವಿಗೆ ನಾಟಕಗಳ ಸಂಬಂಧವು ಉಂಟಾಗಲು ಕಾರಣವಾಯಿತು ಹಾಗೆಯೇ ಕ್ರಮಶಃ ಈತನು ನಾಟಕಗಳನ್ನು ಬರೆಯಲು ಪ್ರಾರಂಭಮಾಡಿದನು ಆತನು ಬರೆದ ನಾಟಕಗಳು ಆತನ ಜೀವಮಾನದಲ್ಲಿ ಅಷ್ಟು ಪ್ರಶಂಸೆಗೆ ಬರಲಿಲ್ಲ ಲೋಕದಲ್ಲಿ ಯಾವನಿಗೂ ಲಕ್ಷ್ಮೀ ಮತ್ತು ಸರಸ್ವತಿ ಇವರಿಬ್ಬರೂ ಒಂದೇ ಸಲ ಒಲಿಯುವುದಿಲ್ಲವೆಂಬ ಮಾತು ಸಿದ್ಧವು! ಯಾವ ಷೇಕ್ಸ್ಪಿಯರು ತನ್ನ ಜೀವಮಾನಕಾಲದಲ್ಲಿ ಅನ್ನೋದಕಗಳಿಗೂ ಅನುಕೂಲ್ಯವಿಲ್ಲದಿದ್ದನೋ, ಯಾವನು ನಾಟಕಶಾಲೆಯುಗಳ ಮುಂದೆ ಕುದುರೆಗಳನ್ನು ಕಾಯುವ ಕೆಲಸಕ್ಕೆ ಅರ್ಹನಾಗಿದ್ದನೋ, ಆ ಷೇಕ್ಸ್ಪಿಯರೇ ಈಗ ಪೃಥ್ವಿಯ ಎಲ್ಲಾ ಛತ್ರಪತ್ರಿಗ

ಳಿಗಿಂತಲೂ ಉಚ್ಚತರವಾದ ಪದವಿಯನ್ನು ಹೊಂದಿರುವನಲ್ಲವೆ ! ಈತನ ಕವಿತೆಯೂ ಹಾಗೆಯೆ ಲೋಕಮಾನ್ಯವಾಗಿರುವುದು, ಮತ್ತು ಅದ್ವಿತೀಯವಾಗಿಯುವುದು ಯಾರು ಇದನ್ನು ಓದಿರುವರೋ ಅವರೇ ಅದರ ಸ್ವಾರಸ್ಯವನ್ನು ಬಲ್ಲರು ಕಾಳಿದಾಸನು ಕವಿಶ್ರೇಷ್ಠನೆ ಹೌದು ತುಳಸೀದಾಸನು ಹಿಂದೀ ಭಾಷೆಯಲ್ಲಿ ಅದ್ವಿತೀಯ ಪ್ರಭಾವಶಾಲಿಯೂ ಹೌದು, ಆದರೂ ಇವರಿಬ್ಬರಲ್ಲಿ ಯಾರೊಬ್ಬರಿಗಾದರೂ ಷೇಕ್ಸ್‌ಪಿಯರ್ ಕಡಿಮೆಯಾಗಿದ್ದನೆಂದರೆ ಕೇವಲ ಪಕ್ಷಪಾತವೇ ಸರಿ ಷೇಕ್ಸ್‌ಪಿಯರನ ಕವಿತೆಯು ಪ್ರಪಂಚದ ಯಾವ ಕವಿಸಿಂಹನ ಕವಿತೆಗೂ ಕಡಿಮೆಯಾಗಿಲ್ಲ ಸ್ವಾಭಿಮಾನವುಳ್ಳ ಕೆಲವು ಭಾರತವಾಸಿಗಳು ಷೇಕ್ಸ್‌ಪಿಯರು ಕಾಳಿದಾಸ ಮತ್ತು ತುಳಸೀದಾಸರಿಗಿಂತಲೂ ಕೆಲವು ವಿಷಯಗಳಲ್ಲಿ ಕಡಿಮೆಯಾಗಿದ್ದನೆಂದು ಹೇಳುವರು ಆದರೆ ಹೀಗೆ ಹೇಳುವುದು ಸ್ವಾಭಿಮಾನದಿಂದ ಸತ್ಯವನ್ನು ಮರೆಮಾಡಿದಂತಾಗುವುದು ೧೬೧೬ ರಲ್ಲಿ ಷೇಕ್ಸ್‌ಪಿಯರನ ದೇಹಾಂತವಾಯಿತು ಈತನು ೩೭ ನಾಟಕಗಳನ್ನೂ ಕೆಲವು ಕಾವ್ಯಗಳನ್ನೂ ಬರೆದಿರುವನು ಇವುಗಳಲ್ಲಿ ಕೆಲವು ಐತಿಹಾಸಿಕಗಳೂ ಕೆಲವು ಸಂಯೋಗಾಂತ್ಯಗಳೂ ಮತ್ತೆ ಕೆಲವು ವಿಯೋಗಾಂತ್ಯ ದೃಶ್ಯಗಳೂ ಆಗಿರುತ್ತವೆ ಪ್ರಸಿದ್ಧ ನಾಟಕಗಳು ಯಾವುವೆಂದರೆ.—

1. Love's Labour Lost (ಲವ್ಸ್ ಲೇಬರ್ ಲಾಸ್ಟ್)
2. Comedy Of Errors (ಕಾಮೆಡಿ ಆಫ್ ಎರರ್ಸ್)
3. Mid Summer Nights Dream (ಮಿಡ್ ಸಮ್ಮರ್ ನೈಟ್ಸ್ ಡ್ರೀಮ್)
4. Romeo and Juliet (ರೋಮಿಯೊ ಅಂಡ್ ಜೂಲಿಯೆಟ್)
5. Much Ado About Nothing (ಮಚ್ ಎಡೊ ಎಬೌಟ್ ನಥಿಂಗ್)
6. As You Like It (ಎಜ್ ಯು ಲೈಕ್ ಇಟ್)
7. Twelfth Night (ಟ್ವೆಲ್ಫ್ತ್ ನೈಟ್)
8. Julius Caesar (ಜೂಲಿಯಸ್ ಸೀಸರ್)
9. Hamlet (ಹ್ಯಾಮ್ಲೆಟ್)
10. Othello (ಒಥೆಲೊ)
11. King Lear (ಕಿಂಗ್ ಲಿಯರ್)
12. Macbeth (ಮ್ಯಾಕ್ ಬೆತ್)
13. Antony and Cleopatra (ಆಂಟೊನಿ ಕ್ಲಿಯೋಪಾತ್ರ)
14. Timon of Athens (ಟಿಮನ್)
15. Cymbeline (ಸಿಂಬೆಲಿನ್)
16. The Winter's Tale (ದಿ ವಿಂಟರ್ಸ್ ಟೇಲ್)
17 The Tempest (ದಿ ಟೆಂಪೆಸ್ಟ್)
18. King Richard (ರಿಚರ್ಡ್)
19. King John (ಕಿಂಗ್ ಜಾನ್)
20. Henry IV (ಹೆನ್ರಿ ಫೋರ್ತ್)
21. Henry V (ಹೆನ್ರಿ ಫಿಫ್ತ್)

22. Merry Wives of Windsor (ಮೆರ್ರಿ ವೈವ್ಸ್ ಆಫ್ ವಿಂಡ್ಸರ್)
23 Merchant of Venice (ಮರ್ಚೆಂಟ್ ಆಫ್ ವೆನಿಸ್)

ಇವುಗಳಲ್ಲಿಯೂ ೩ ೪-೬ ೮-೯ ೧೦-೧೧-೧೨-೧೩ ೧೬-೧೭-೧೮-೧೯ ಮತ್ತು ೨೩ ಎಂದು ಅಂಕಿಸಿರುವ ನಾಟಕಗಳು ಪ್ರಖ್ಯಾತಗಳಾಗಿಯೂ ಮಹತ್ವಪೂರ್ಣವಾಗಿಯೂ ಇವೆ ಇವುಗಳಲ್ಲಿ ಕೆಲವಕ್ಕೆ ಕನ್ನಡ ಪರಿವರ್ತನವೂ ಆಗಿದೆ ಆದರೆ ಕವಿಯ ಗೌರವವು ಮೂಲಗ್ರಂಥವನ್ನು ಓದುವುದರಿಂದ ಮಾತ್ರ ತಿಳಿಯುವುದು ಹೇಗೆಂದರೆ, ಕಾಳಿದಾಸನ ಶಾಕುಂತಲ ನಾಟಕವನ್ನಾಗಲಿ ತುಳಸೀದಾಸನ ರಾಮಾಯಣವನ್ನಾಗಲಿ ಪರಿವರ್ತಿಸಿ ಮೂಲಭಾವವನ್ನೂ ಕಾವ್ಯರಚನೆಯನ್ನೂ ಹೇಗೆ ಪ್ರಕಟಪಡಿಸಲಾಗುವುದಿಲ್ಲವೋ ಹಾಗೆಯೆ ಷೇಕ್ಸ್‌ಪಿಯರನ ನಾಟಕಗಳ ಅನುವಾದವು ಆತನ ಗೌರವವನ್ನು ಪೂರ್ಣರೀತಿಯಲ್ಲಿ ತೋರಿಸಲಾರವು ಅಲ್ಲದೆ ಇನ್ನೂ ಒಂದು ವಿಷಯವಿದೆ. ಕಾಳಿದಾಸ ಮತ್ತು ತುಳಸೀದಾಸರ ಗ್ರಂಥಗಳ ಅನುವಾದವು ಇಂಗ್ಲೀಷಿನಲ್ಲೂ ಮತ್ತು ಇತರ ಭಾಷೆಗಳಲ್ಲೂ ಉಚ್ಚಶ್ರೇಣಿಯ ಗದ್ಯ ಮತ್ತು ಪದ್ಯಗಳಾಗಿ ಸಿಕ್ಕುವುವು. ಇವು ದೊಡ್ಡ ದೊಡ್ಡ ಪಂಡಿತರುಗಳ ಕೆಲಸಗಳು ಆದರೆ ಷೇಕ್ಸ್‌ಪಿಯರನ ನಾಟಕಗಳ ಅನುವಾದವು ಹಾಗಿಲ್ಲ ಆದುದರಿಂದ ನಮ್ಮ ಕವಿಗಳ ಗೌರವವು ಪಾಶ್ಚಾತ್ಯ ದೇಶಗಳವರಿಗೆ ತಿಳಿದಿರುವಷ್ಟು ಷೇಕ್ಸ್‌ಪಿಯರನ ಕವಿತೆಯ ಮಹತ್ವವು ನಮ್ಮವರಿಗೆ ತಿಳಿಯಬಂದಿಲ್ಲ ಉತ್ಕೃಷ್ಟವಾದ ಕವಿತೆಗಳಲ್ಲಿ ಪ್ರೇಮವಿರುವವರೆಲ್ಲರೂ ಎಂದರೆ ಕವಿತಾರಸಿಕರೆಲ್ಲರೂ ಈ ಮೂವರು ಕವಿಗಳ ಗ್ರಂಥಗಳನ್ನೂ ಏಕಾಗ್ರತೆಯ ಮೂಲಕ ಓದಲೆಂಬುದೇ ನಮ್ಮ ಪ್ರಾರ್ಥನೆ ಇವರುಗಳ ಗ್ರಂಥಗಳನ್ನೋದುವುದರಿಂದ ಪ್ರಪಂಚದ ಸರ್ವೋತ್ತಮ ಕವಿಗಳ ಪರಿಚಯವಾಗುವುದು

— ॥ —

ಮಹಾರಾಷ್ಟ್ರೀಯ ಪ್ರಾಚೀನ ಸಾಹಿತ್ಯ

ಮ॥ ಶೇಷ ಭಿ ಪಾಂಶವಾಡಕರವರಿಂದ.

ಪ್ರಪಂಚವನ್ನು ನೆಟ್ಟಗೆ ಮಾಡಿದಮೇಲೆ ಪರಮಾರ್ಥವು ಒಳ್ಳೆಯದು—

ಸಮರ್ಥಕೃತದಾಸಬೋಧ.

ಜಗನ್ನಿಯಂತನ ಸ್ವರೂಪವನ್ನು ತಿಳಿಯಪಡಿಸುವ ಸದ್ಗುರುವಿಗೆ ಶರಣು

ಮರಾಠಿಗರ ತೇಜಸ್ಸು ನಮ್ಮಲ್ಲಿ ಬರಲೆಂದು ಶಿರೋಲೇಖದಲ್ಲಿಯೇ ಹಾರಯಿಸುವೆವು

ದೇಶಭಾಷೆಯಲ್ಲಿ ಗ್ರಂಥರಚನಮಾಡುವ ಉತ್ಕೃಷ್ಟವಾದ ಪದ್ಧತಿಯನ್ನು ಬೌದ್ಧರೂ ಜೈನರೂ ಭರತಖಂಡದಲ್ಲಿ ಪ್ರಚುರಪಡಿಸಿದರೆಂಬುದು ವಿದ್ಯಾವಂತರೆಲ್ಲರಿಗೂ ತಿಳಿದೇ ಇದೆ. ಧರ್ಮಪ್ರಸಾರಾರ್ಥವಾಗಿ ಈ ಪದ್ಧತಿಯು ಹುಟ್ಟಿತೆಂಬುದು ನಿಜ. ಬೌದ್ಧರೂ ಜೈನರೂ ಹಾಕಿದ ಈ ಮೇಲುಪಜ್ಞೆಯನ್ನು ಕಾಲಕ್ರಮದಲ್ಲಿ ಬ್ರಾಹ್ಮಣರೂ

ಅನುಸರಿಸಬೇಕಾಯಿತು ಈಗಿರುವ ಮರಾಠಿ ಭಾಷೆಯ ಕಾವ್ಯಗಳು ಸುಮಾರು ಕ್ರಿ ಶ ೧೩ನೆಯ ಶತಮಾನದಿಂದೀಚೆಗೆ ಹುಟ್ಟಿ ಪ್ರಸಿದ್ಧವಾಗಿರುವುವು ಆ ಕಾಲದವರೆಗೂ ಮರಾಠಿಯವರು ದೇಶಭಾಷೆಯಲ್ಲಿ ಗ್ರಂಥರಚನೆಮಾಡಲು ಹಿಂದೆಗೆಯುತ್ತಿದ್ದರು ಪಂಪನ ಕಾಲವು (೯೪೧) ಕನ್ನಡದ ಮಧ್ಯಕಾಲವು ಮೊದಲು ಕನ್ನಡಿಗರೂ ಹೀಗೆಯೇ ಸಂಸ್ಕೃತಕ್ಕೆ ಬೆದರುತ್ತಿರಬಹುದು ಈ ಪ್ರವೃತ್ತಿಯಿಂದ ಎಷ್ಟು ಉನ್ನತಿಯು ನಿಂತಿತೋ ತಿಳಿಯದು

ದೇಶಭಾಷೆಗಳಲ್ಲಿ ಮೊದಲು ಕಾವ್ಯಗಳನ್ನು ಬರೆಯುವುದಕ್ಕೆ ಪ್ರಾರಂಭಿಸಿದವರನ್ನು ಸಂಸ್ಕೃತ ವಿದ್ವಾಂಸರು ತಿರಸ್ಕಾರಭಾವದಿಂದ ಕಂಡರು ಆದರೂ ಆ ಧೀರರು ಲೋಕಸೇವೆಯ ಮತ್ತು ಮಾತೃಭಾಷಾಸೇವೆಯ ದೃಢವ್ರತವನ್ನು ಬಿಡಲಿಲ್ಲ ಇವರ ಧೈರ್ಯವು ಆದರಣೀಯವಾಗಿಯೂ ಸ್ಮರಣೀಯವಾಗಿಯೂ ಇರುವುದು ಇವರ ಬರೆವಣಿಗೆಗಳಿಂದ ದೇಶದ ಜನರಲ್ಲಿ ಲೋಕವ್ಯವಹಾರಜ್ಞಾನವು, ಶಾಸ್ತ್ರಜ್ಞಾನವು, ವೇದಾಂತವಿಜ್ಞಾನವು ಪ್ರಸರಿಸಿರುತ್ತವೆ ಮರಾಠಿಯ ಕವಿಸಾಧುಸಂತರ ಯೋಗ್ಯತೆಯನ್ನು ತಿಳಿಯಬೇಕಾದರೆ ಅವರು ಬರೆದಿರುವ ಉದ್ಗ್ರಂಥಗಳನ್ನು ಪಠಿಸಬೇಕು ಈ ಮಹಾರಾಷ್ಟ್ರ ಕವಿಗಳ ತೇಜಸ್ಸೂ ಗಂಭೀರವಾದ ವಾಣಿಯೂ ಅಸಾಧಾರಣಗಳೆನಿಸಿಕೊಂಡಿರುತ್ತವೆ ಇವರ ಅದ್ವಿತೀಯ ಸ್ವಾರ್ಥತ್ಯಾಗವು, ಲೋಕಹಿತಾಚರಣೆಯು, ಪಾರಮಾರ್ಥಿಕ ವಿಚಾರಪದ್ಧತಿಯೂ ವಾಚಕರ ಹೃದಯಕ್ಕೆ ಪರಮಾನಂದವನ್ನುಂಟುಮಾಡುತ್ತಿವೆ ಸಾಧುವರ್ಯರಾದ ಶ್ರೀ ತುಕಾರಾಮರವರ (೧೬೦೮–೧೬೪೯) ಕೀರ್ತಿಯು ಶ್ರೀ ಶಿವಾಜಿಯವರ (೧೬೨೭–೧೬೮೦) ಕಿವಿಗೂ ಬೀಳಲು ಆ ಮಹಾರಾಜರವರು ತುಕಾರಾಮ ಸಾಧುಗಳವರ ಹತ್ತಿರಕ್ಕೆ ಪಲ್ಲಕ್ಕಿಯನ್ನೂ ಛತ್ರಚಾಮರಾದಿ ಬಿರುದುಗಳನ್ನೂ ತಮ್ಮ ಹರಕಾರರ ಜತೆಯಲ್ಲಿ ಕಳುಹಿಸಿ ತಮ್ಮ ದರ್ಬಾರಿಗೆ ಅವರನ್ನು ಬರಬೇಕೆಂದು ಪ್ರಾರ್ಥಿಸಲು, ಆ ಮಹನೀಯರಾದ ಸಾಧುಶಿರೋಮಣಿಗಳು ಕೊಟ್ಟ ಉತ್ತರವನ್ನು ಲೋಕವೆಲ್ಲಾ ಕೊಂಡಾಡುವುದು "ಹಾಸಿಕೊಳ್ಳಲು ಇರುವ ನೆಲವು, ಹೊದ್ದುಕೊಳ್ಳಲು ಇರುವ ಆಕಾಶವು ನಮಗೆ ಸಾಕಾಗಿರುತ್ತವೆ ರಾಜಾಸ್ಥಾನಗಳಲ್ಲಿ ಹೊಟ್ಟೆಗೆ ಕೂಳೂ ಮೈಗೆ ಅರಿವೆಯೂ ಇಲ್ಲದ್ದರಿಂದ ಸೊರಗಿದವರೂ ಅಮಂಗಲಸ್ವರೂಪಿಗಳೂ ಆದ ನಮ್ಮಿಂದ ಏನು ತಾನೆ ಪ್ರಯೋಜನವಾದೀತು ಮನ್ನಣೆಯ ಆಶೆಯೆಲ್ಲವನ್ನೂ ತೊರೆದಿರುವೆವು ತಾವು ರಾಮದಾಸಸ್ವಾಮಿಗಳ ಬಳಿಗೆ ತೆರಳಿ ಅವರನುಗ್ರಹವನ್ನು ಸಂಪಾದಿಸುವುದರಿಂದ ನಿಮಗೆ ಶ್ರೇಯೋಭಿವೃದ್ಧಿಯಾಗುವುದು" ಎಂಬುದೇ ಅವರ ಉತ್ತರವು ಈ ರಾಮದಾಸಸ್ವಾಮಿಗಳವರು (ಕ್ರಿ ಶ ೧೬೦೮–೧೬೮೧) ಲೋಕಹಿತಾಚರಣೆಯನ್ನೆಸಗುತ್ತಿದ್ದರು ಶ್ರೀ ಶಿವಾಜಿಯವರು ಅವರನ್ನು ತಮ್ಮ ಗುರುಗಳಾಗಿ ಭಾವಿಸಿದರು. ಒಂದಾನೊಂದು ಕಾಲದಲ್ಲಿ ರಾಮದಾಸರು ಶಿವಾಜಿಯವರಲ್ಲಿ ಭಿಕ್ಷೆಗೆ ಬರಲು, ಆಗ ಶಿವಾಜಿಯವರು ತಮಗಿದ್ದ ರಾಜ್ಯಗಳನ್ನೆಲ್ಲಾ ಒಂದು ದಾನಪತ್ರದಲ್ಲಿ ಕಾಣಿಸಿ ಆ ದಾನಪತ್ರವನ್ನು ಶ್ರೀರಾಮದಾಸ ಸ್ವಾಮಿಗಳವರ ಜೋ

ಳಿಗೆಯಲ್ಲಿ ಹಾಕಿಬಿಟ್ಟರು. ಶ್ರೀರಾಮದಾಸಸ್ವಾಮಿಗಳು ಮಂದಸ್ಮಿತರಾಗಿ ದಾನವನ್ನು ಸ್ವೀಕರಿಸಿ ತಮ್ಮ ಶಿಷ್ಯರಾದ ಶ್ರೀ ಶಿವಾಜಿಯವರಿಗೆ ದಾನವನ್ನೆಲ್ಲ ತಿರುಗಿ ಕೊಟ್ಟು, "ನೀನು ನಮ್ಮ ಪರವಾಗಿ ಧರ್ಮದಿಂದ ಇವುಗಳನ್ನು ಆಳುತ್ತ ಅಧರ್ಮಗಳನ್ನಡಗಿಸುತ್ತ ಬರುವನಾಗು. ಈ ನಮ್ಮ ರಾಜ್ಯದ ಪತಾಕೆಗೆ ಕಾವಿಯ ಬಣ್ಣದ ಬಟ್ಟೆಯನ್ನು ಉಪಯೋಗಿಸುವನಾಗು. ಜನರು ಪರಸ್ಪರ ವಂದನೆಗಳನ್ನು ಮಾಡುವಾಗ "ಸಲಾಂ' ಎನ್ನುವುದನ್ನು ಬಿಟ್ಟು "ರಾಮರಾಮ" ಎನ್ನಲಿ" ಎಂದು ಆಜ್ಞಾಪಿಸಿದರಂತೆ. ಅಂದಿನಿಂದ 'ಭಗವಾಝೇಂಡಾ' ಎಂದರೆ ಮರಾಠೀ ಶೂರರ ಕಾವಿಯ ನಿಶಾನೆಯು ಪ್ರಸಿದ್ಧಿಗೆ ಬಂದಿತು. ಶ್ರೀ ತುಕಾರಾಮರವರ ಮತ್ತು ಶ್ರೀರಾಮದಾಸಸ್ವಾಮಿಗಳವರ ಯಶಸ್ಸುಗಳು ಮಹಾರಾಷ್ಟ್ರದೇಶದಲ್ಲಿ ಚಿರಸ್ಥಾಯಿಗಳಾಗಿರುವುವು. ಮಾತೃಶ್ರೀಯರುಗಳ ಮಹಿಮೆಯು ಅತರ್ಕ್ಯವೇ ಸರಿ.

ಪ್ರಾಚೀನ ಮಹಾರಾಷ್ಟ್ರ ಸಾಹಿತ್ಯವೆಲ್ಲವೂ ಪದ್ಯರೂಪದಲ್ಲಿಯೇ ಇದೆ. ಗದ್ಯ ಪದ್ಯ ಮಿಶ್ರವಾದ ಚಂಪೂ ಕಾವ್ಯಗಳನ್ನು ಬರೆಯುವ ಪದ್ಧತಿಯು ಮರಾಠಿಗರಲ್ಲಿ ಮೊದಲಿರಲಿಲ್ಲ. ಗದ್ಯವೆಂದರೂ ಒಪ್ಪುವ ಎಷ್ಟೋ ಪದ್ಯಗ್ರಂಥಗಳೂ ಇರುವುವು.

ದಕ್ಷಿಣದೇಶದ ಇತರ ಭಾಗಗಳಲ್ಲಿದ್ದಂತೆ, ಲಿಂಗಾಯಿತರ ಪ್ರಾಬಲ್ಯವು ಮಹಾರಾಷ್ಟ್ರದೇಶದಲ್ಲಿರಲಿಲ್ಲ. ಮರಾಠಿಯ ತಾಯಿಯಾದ ಮಹಾರಾಷ್ಟ್ರಿ ಎಂಬ ಭಾಷೆಯಲ್ಲಿ ಜೈನರ ಗ್ರಂಥಗಳಿವೆಯೆಂದು ತಿಳಿಯಬರುತ್ತದೆ. ಈಗ ಪ್ರಚುರವಾಗಿರುವ ಮರಾಠಿಯಲ್ಲಿ ಜೈನರಾರೂ ಗ್ರಂಥಗಳನ್ನು ಬರೆದಂತೆ ತಿಳಿಯಬಂದಿಲ್ಲ. ಮರಾಠಿಕವಿಗಳು ವಿಶೇಷವಾಗಿ ವೇದಾಂತವಿಚಾರವನ್ನೇ ಮಾಡಿರುವರು. ಮರಾಠಿಯಲ್ಲಿ ಹೊರಗಿನ ಜಗಳಗಳೂ ಬಹಳವಾಗಿರಲಿಲ್ಲ. ಶೇಕ್ ಮಹಮ್ಮದ್ ಬಾವಾ ಎಂಬ ಮುಸಲ್ಮಾನ ಸಾಧುವು ಪಂಢರಪುರದ ವಿಠ್ಠಲನ ಭಕ್ತನಾಗಿ ಮರಾಠಿಕಾವ್ಯ ಪ್ರಣೇತನಾಗಿದ್ದಂತೆ ತಿಳಿಯಬರುತ್ತದೆ. ಸುಮಾರು ಕ್ರಿ. ಶ. ೧೫ ಮತ್ತು ೧೬ ನೆಯ ಶತಮಾನಗಳಲ್ಲಿ ಮಹಾರಾಷ್ಟ್ರದಲ್ಲಿ ಸುಧಾರಣಾಯುಗವು ಘಟಿಸಿದೆ. ಸನ್ಯಾಸಿಯಾಗಿದ್ದವನೊಬ್ಬನು ಗುರ್ವಾಜ್ಞೆಯಿಂದ ಪುನಃ ಗೃಹಸ್ಥಾಶ್ರಮಿಯಾಗಲು ಅವನ ಹೊಟ್ಟೆಯಲ್ಲಿ ಮಹಾಕವಿಯಾದ ಜ್ಞಾನೇಶ್ವರನು ಹುಟ್ಟಿ (೧೨೯೦) ಬಾಳುತ್ತಿರಲು, ಆಗಿನ ಬ್ರಾಹ್ಮಣರು ಅವನಿಗೆ ಬಹಿಷ್ಕಾರವನ್ನು ಹಾಕಿದರು. ಮುಂದೆ ಏಕನಾಥನೆಂಬ ಸಾಧುವು (೧೬೦೯ ರಲ್ಲಿ ಮರಣ) ಹೊಲೆಯರು ಮುಂತಾದವರ ವಿಷಯದಲ್ಲಿ ಕನಿಕರವನ್ನು ತೋರಿಸುದದಕ್ಕೆ ಕರ್ಮಠರಾದ ಬ್ರಾಹ್ಮಣರಿಗೆ ಎಷ್ಟು ಸಿಟ್ಟು ಬಂದಿತೋ! ಹಾಗೆಯೇ ಶೂದ್ರನಾದ ತುಕಾರಾಮನು ಎಲ್ಲರಿಗೂ ತಿಳಿಯುವಂತೆ ವೇದಾರ್ಥಗಳನ್ನು ದೇಶಭಾಷೆಯಲ್ಲಿ ಹೇಳುತ್ತಾನೆಂದು ಆಗಳಿನ ಸಂಕುಚಿತ ವಿಚಾರದ ವೈದಿಕ ಶಿಖಾಮಣಿಗಳು ಮಾಡಿದ ಹಿಂಸೆಯನ್ನು ಈಗ ಕೇಳಿದರೂ ಮನಸ್ಸು ತಲ್ಲಣಿಸುವುದು! ೧೭೨೯ ರಿಂದ ೧೭೯೪ ರವರೆಗೆ ಬಾಳಿದ ಮೋರೋಪಂತನ ಕಾವ್ಯಗಳನ್ನು ಕೂಡ ಆಗಿನ ಜನರು ದೇವವಾಣಿಯ

ಲ್ಲದ ಮರಾಠಿಯೆಂದು ವಿಶೇಷವಾಗಿ ಮನ್ನಿಸಲಿಲ್ಲ. ಮೇಲ್ಕಂಡ ಸಾಧುಗಳೇ ಹರಿಕಥೆಯ ಅಸ್ತಿಭಾರವನ್ನು ಹಾಕುವರಾದರು.

ಈ ಮಹನೀಯರು ಮಾಡಿದ ಪೂರ್ವನಿರ್ದಿಷ್ಟವಾದ ಹರಿಕಥೆಯೆಂಬ ಕವಿತಾವಿಧಾನವನ್ನು ಕುರಿತು ಒಂದೆರಡು ಮಾತನ್ನು ಹೇಳಬೇಕಾಗಿದೆ. ಹಿಂದಿನ ವಿಚಾರಕ್ಷೇತ್ರವು ಈಗಳಿನ ವಿಚಾರಕ್ಷೇತ್ರದಂತಿರಲಿಲ್ಲ. ಹಿಂದಕ್ಕೆ ಮುಸಲ್ಮಾನರ ಪ್ರಾಬಲ್ಯವಿದ್ದಾಗ, ತಮ್ಮ ಧರ್ಮವನ್ನು ಬೆಳೆಯಿಸುವ ವಿಷಯದಲ್ಲಿ ಅವರ ಆವೇಶವೆಂತಿತ್ತು! ಅಂತಹ ವಿಷಮಕಾಲದಲ್ಲಿ ದೀನರಂತೆ ಕಾಣುವ ಮರಾಠಿಯ ಸಾಧುವರ್ಗವು ತಲೆಯನ್ನೆತ್ತಿತು. ಮೈಸೂರ ಪ್ರಾಂತದಲ್ಲಿ ಆಗ ಮುಸಲ್ಮಾನರ ಹಾವಳಿಯು ವಿಶೇಷವಾಗಿರಲಿಲ್ಲ. ೧೩ನೆಯ ಶತಮಾನದಿಂದ ಮಹಾರಾಷ್ಟ್ರದ ಮನೋಭೂಮಿಕೆಯ ಸಾಗುವಳಿಯು ಈ ಸಾಧುಗಳಿಂದ ಪ್ರಾರಂಭಿಸಲ್ಪಟ್ಟಿತು. ೧೭ನೆಯ ಶತಮಾನದಲ್ಲಿ ಶ್ರೀರಾಮದಾಸ ಸ್ವಾಮಿಗಳವರು ಆ ಭೂಮಿಯಲ್ಲಿ ಸದ್ಧರ್ಮದ ಬೀಜಾರೋಪಣವನ್ನು ಮಾಡಿದರೆಂಬ ವಿಚಾರವು ಎಲ್ಲರಿಗೂ ಮಾನ್ಯವಾಗಿದೆ. ಮೊದಲಿನ ಸಾಧುಗಳೆಲ್ಲರೂ ಪಂಗುಗಳಂತೆ ಕಾಣಬರುವುದೂ ಇದೇ ಕಾರಣದಿಂದ. ಏಕನಾಥ ಮಹಾರಾಜರು ನದೀಸ್ನಾನಮಾಡಿ ಬಂದ ಮೇಲೆ ಒಬ್ಬ ಉನ್ಮತ್ತನಾದ ಮುಸಲ್ಮಾನನು ಅವರ ಮೇಲೆ ಉಗುಳುತ್ತ ಬಂದನೆಂತಲೂ, ಅವರು ಮತ್ತೆ ಮತ್ತೆ ಸ್ನಾನಮಾಡಿ ಬರುತ್ತಿದ್ದರೆಂತಲೂ, ಹೀಗೆ ಸಂಜೆಯವರೆಗೂ ನಡೆಯಿತೆಂದೂ, ಉನ್ಮತ್ತತೆಯು ಇಳಿಯಲು ಮುಸಲ್ಮಾನನು ಅವರಿಗೆ ನಮಸ್ಕಾರ ಮಾಡಿದನೆಂತಲೂ, ಆಗ ಆ ಸಾಧುಶಿರೋಮಣಿಗಳು "ಇದೇನು? ತಾವು ನನಗೆ ನಮಸ್ಕಾರಮಾಡುತ್ತೀರಲ್ಲ? ತಮ್ಮ ಕೃಪಾದೃಷ್ಟಿಯಿಂದಲ್ಲವೆ ಪಾವನತರವಾದ ನದೀಸ್ನಾನಗಳು ಘಟಿಸಿದುವು" ಎಂದು ಹೇಳಿದರೆಂದೂ ಒಂದು ಕಥೆಯು ಈಗಲೂ ತಿಳಿಸುತ್ತಿರುವುದು! ಈ ಏಕನಾಥ ಮಹಾರಾಜರೂ ತುಕಾರಾಮ ಸಾಧುಗಳೂ ಈ ಹರಿಕಥಾ ವಿಧಾನದ ಆದ್ಯಪುರಸ್ಕರ್ತೃಗಳೆಂದೂ, ತುಕಾರಾಮ ಮಹಾರಾಜರ ಕೀರ್ತನೆಗಳನ್ನು ಶಿವಾಜಿಯವರು ಆಗಾಗ ಹಾಡಿಸಿ ಲಾಲಿಸುತ್ತಿದ್ದರೆಂದೂ, ಅದರಿಂದ ಮುಂದಕ್ಕೆ ಮೋರೋಪಂತರವರ ಆರ್ಯೆಗಳು ಹರಿದಾಸರುಗಳಲ್ಲಿ ಮಾನ್ಯವಾದುವೆಂತಲೂ ತಿಳಿಯಬರುತ್ತದೆ. ತುಕಾರಾಮರವರ "ಅಭಂಗಗಳು" ಅವರು ಹರಿಕಥೆಗೆ ನಿಂತಕೂಡಲೆ ಅವರ ಬಾಯಿಂದ ಛಂದೋಬದ್ಧವಾಗಿ ಪೂರ್ವಪ್ರಯುಕ್ತವಾವುದೂ ಇಲ್ಲದೆ ಹೊರಡುತ್ತಿದ್ದುವೆಂದೂ ಅವುಗಳನ್ನು ಅವರ ಭಕ್ತರು ಆಗಾಗಲೇ ಬರೆದಿಟ್ಟುಕೊಳ್ಳುತ್ತಿದ್ದರೆಂದೂ ಹೇಳುತ್ತಾರೆ. ತುಕಾರಾಮಸಾಧುಗಳ ನಿವೃತ್ತಿಮಾರ್ಗದ ಉಪದೇಶದಿಂದ ಶ್ರೀ ಶಿವಾಜಿಯವರಿಗೆ ಒಂದು ವೇಳೆಯಲ್ಲಿ ವೈರಾಗ್ಯವು ಹುಟ್ಟಲು, ಅವರು ತಾವೂ ಸಾಧುಗಳಾಗಬೇಕೆಂದು ನಿಶ್ಚಯಿಸಿದರೆಂತಲೂ, ಅವರ ಪೂಜ್ಯರಾದ ಮಾತುಶ್ರೀಯವರಾದ ಜೀಜಾಬಾಯಿಯವರು ತುಕಾರಾಮ ಸಾಧುವನ್ನು ಶ್ರೀ ಶಿವಾಜಿಯವರಿಗೆ ಪ್ರವೃತ್ತಿಮಾರ್ಗೋಪದೇಶವನ್ನು ಲೋಕಹಿತಾರ್ಥವಾಗಿ ಮತ್ತೊಮ್ಮೆ ಮಾಡಬೇಕೆಂದು ಕೇಳಿಕೊಳ್ಳಬೇಕಾಯಿತೆಂತಲೂ ಅನೇಕರು ಹೇಳುತ್ತಾರೆ. ಹೇಗೆ ಹೇಗೆ ನೋಡಿದರೂ ಮರಾಠಿಯ ಸಾಧು

ಗಳ ಪ್ರಾಸಾದಿಕವಾಣಿಯ ಪ್ರಭಾವವು ಅತಿಶಯವಾಗಿಯೇ ಇರುವುದು । ಹರಿಕಥೆಯೆಂದರೆ ಯಾವುದಾದರೊಂದು ಕಥಾಭಾಗವನ್ನು ತೆಗೆದುಕೊಂಡು ಸಂಸ್ಕೃತದಲ್ಲಿಲ್ಲದ ಸುಂದರವಾದ ಹಾಡುಗಳನ್ನು ಸೇರಿಸಿ ತಂಬೂರಿ ಪಿಟೀಲು ಮೃದಂಗ ಮುಂತಾದ ವಾದ್ಯ ಪರಿಕರಣಗಳೊಡನೆ ಆ ಕಥೆಯನ್ನು ಗಾನಾಭಿನಯ ಪೂರ್ವಕವಾಗಿ ಮನೋರಂಜಕವಾಗುವಂತೆ ಉಪದೇಶಮಾಡುವ ಪದ್ಧತಿಯು ಮರಾಠಿ ಜನರಲ್ಲಿಯೇ ಮೊದಲು ಪ್ರಚಾರವಾದಂತೆ ಕಾಣಬರುತ್ತದೆ. ನಮ್ಮ ಕನಕದಾಸಾದಿಗಳ 'ದೇವರನಾಮ' ಮುಂತಾದುವುಗಳು ಆ ಪ್ರಸಂಗದಲ್ಲಿಯೇ ಕೇಳಬರುವುವು. ಹಿಂದಿನ ಕಾಲದಲ್ಲಿ ಹರಿಕಥೆಯ ಪ್ರಯೋಜನವು ಅತಿಶಯವಾಗಿತ್ತು. ಆಗ ವೃತ್ತಾಂತ ಪತ್ರಿಕೆಗಳೇ ಮುಂತಾದುವು ಇರಲಿಲ್ಲ. ತುಕಾರಾಮ ಸಾಧು ಮುಂತಾದವರ ರಸವತ್ತಾದ ಗದ್ಯಪದ್ಯಗಳು ಸರ್ವಕಾಲದಲ್ಲಿಯೂ ಸುಂದರವಾಗಿಯೇ ಇರುತ್ತವೆ. ಜನರಲ್ಲಿ ತಿಳಿವಳಿಕೆಯನ್ನು ಹೆಚ್ಚಿಸುವುದರಲ್ಲಿ ಹರಿಕಥೆಯು ಬಹು ಸಹಕಾರಿಯಾಗಿತ್ತು.

ಕನ್ನಡ ದೇಶಗಳಲ್ಲಿ ಪೂರ್ವದಲ್ಲಿ ದೊಡ್ಡ ದೊಡ್ಡ ರಾಜ್ಯಗಳಿದ್ದುವು. ಮಹಾರಾಷ್ಟ್ರದಲ್ಲಿ ಶ್ರೀ ಶಿವಾಜಿಯವರ ಕಾಲಕ್ಕೆ ಮುಂಚೆ ಕವಿಗಳಿಗೆ ರಾಜಾಶ್ರಯವು ಇರಲೇ ಇಲ್ಲ. ಕನ್ನಡ ಜೈನ ಕವಿಗಳಿಗಿದ್ದಂತೆ ಮಹಾರಾಷ್ಟ್ರ ಕವಿಗಳಿಗೆ ಬಿರುದಾವಳಿಗಳೂ, ರಾಜಮನ್ನಣೆಯೂ, ಊರುಗಳನ್ನು ಜಾಹಗೀರು ಹಾಕಿ ಕೊಡುವದೂ ಇರಲಿಲ್ಲ. ಭವಭೂತಿಯಂತಹ ಉಜ್ವಲ ಪ್ರತಿಭಾಶಾಲಿಗಳಾದ ಕವಿಗಳಿಗೆ ಯಾವ ಆಶ್ರಯದ ಆವಶ್ಯಕತೆಯೂ ಬೇಕಾಗಿಲ್ಲ, ಆದರೆ ಪಂಡಿತರಿಗೂ ಕವಿಗಳಿಗೂ ಅಂತಹ ಯಾವುದಾದರೊಂದು ಆಶ್ರಯವು ಬೇಕು. ರಾಮಾಯಣದಲ್ಲಿ ಶ್ರೀರಾಮಚಂದ್ರನು ವನವಾಸ ಗಮನ ಕಾಲದಲ್ಲಿ ಹೇಳಿದಂತೆ, ಬ್ರಾಹ್ಮಣರಿಗೂ, ವಿದ್ವಜ್ಜನರಿಗೂ, ಉಪದೇಶಕರಿಗೂ, ಮುಖ್ಯವಾಗಿ ಐಹಿಕವ್ಯವಹಾರಗಳಲ್ಲಿ ಮನಸ್ಸನ್ನಿಡದೆ ಲೋಕೋಪಕಾರದಲ್ಲಿಯೂ ದೇವರ ಧ್ಯಾನದಲ್ಲಿಯೂ ಕಾಲವನ್ನು ಕಳೆಯುವ ಸಾಧುಜನಗಳಿಗೆ ದ್ರವ್ಯಸಹಾಯವನ್ನು ಮಾಡುವುದು ಶ್ರೀಮಂತರ ಕರ್ತವ್ಯವಾಗಿದೆ. ಈ ಆಶ್ರಯಬಲದಿಂದ ದಾರಿದ್ರ್ಯಪಂಕದಲ್ಲಿ ನರಳುತ್ತಿದ್ದ ಎಷ್ಟೆಷ್ಟೋ ವಿದ್ಯಾರತ್ನಗಳು ಬೈಲಿಗೆ ಬಂದು ದೇಶೋನ್ನತಿಗೆ ಕಾರಣಭೂತಗಳಾಗುವುವು.

ಕನ್ನಡದಲ್ಲಿರುವಂತೆಯೇ ಮರಾಠಿಯಲ್ಲಿಯೂ ಕೆಲವರು ಸ್ತ್ರೀಕವಯಿತ್ರಿಯರೂ ಗ್ರಂಥಕರ್ತ್ರಿಯರೂ ಅಲ್ಲಲ್ಲಿ ಶೋಭಿಸುತ್ತಿರುವರು. ಆದೆಷ್ಟೋ ಪಾಪ ! ನಮ್ಮ ಹೆಣ್ಣು ಮಕ್ಕಳಿಗೆ ಅನೇಕ ಶತಮಾನಗಳಿಂದ ಸಾಹಿತ್ಯವೆಂಬ ಅತುಲ ಭಂಡಾರದ ಕೀಲಿಯಕೈಯಂತಿರುವ ಓದು ಬರೆಹಗಳನ್ನು ಕಲಿಸದೆ, ನಿಷ್ಠುರರೂ ಸ್ವಾರ್ಥಪರರೂ ಆದ ಪುರುಷರು ಅವರನ್ನು ತಿರಸ್ಕರಿಸುತ್ತ ಬಂದರು. ಎಷ್ಟೋ ಕೆಲಸಗಳು ಹೆಂಗಸರಿಗೆ ಸಹಜವಾಗಿಯೂ ಸುಲಭವಾಗಿಯೂ ಇವೆ. ಗಂಡಸರೆಷ್ಟು ಶ್ರಮಪಟ್ಟರೂ ಕೈಗೂಡದ ಎಷ್ಟೋ ಕೆಲಸಗಳು ಹೆಂಗಸರಿಂದ ಶೀಘ್ರದಲ್ಲಿ ಸಿದ್ಧಿಸುವ ವಿಷಯವು ಅನುಭವಕ್ಕೂ ಬಂದಿದೆ. ಸುಶಿಕ್ಷಿತ ಮಾತೆಯ ಉಪದೇಶವು ಆರಿಂದ ಅಗ್ರಾಹ್ಯ ?

ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಗಂಡು ಮಕ್ಕಳಿಗೆ ನೀಡುತ್ತಿದ್ದಂತೆ ನೀಡಿದ್ದರೆ ಸ್ತ್ರೀಕವಯಿತ್ರಿಯರ ಮತ್ತು ಶೋಧಕಪಂಡಿತೆಯರ ಸಂಖ್ಯೆಯು ಎಷ್ಟೆಷ್ಟೋ ಹೆಚ್ಚಾಗುತ್ತಿತ್ತು. ಹದಿನೇಳು ಹದಿನೆಂಟನೆಯ ಶತಮಾನಗಳಲ್ಲಿ ಹರಿಕಥೆಯ ಪ್ರಾಬಲ್ಯವು ವಿಶೇಷವಾಗಿ ಪ್ರಸರಿಸಿತು. ೧೬೦೮ ರಿಂದ ೧೬೮೧ ರವರೆಗೂ ಬಾಳಿದ ಶ್ರೀ ಸಮರ್ಥರಾಮದಾಸ ಸ್ವಾಮಿಗಳವರು ದಾಸಬೋಧ ಮುಂತಾದ ಉದ್ಗ್ರಂಥಗಳನ್ನು ರಚಿಸಿದರು. ಇವರ ಗ್ರಂಥದ ಮಹಿಮೆಯು ಅತಿಶಯವಾಗಿರುವುದೇನೂ ಆಶ್ಚರ್ಯಕರವಲ್ಲ. ಲೋಕಕಲ್ಯಾಣಕ್ಕಾಗಿ ಯಾವ ಮಹನೀಯರು ಎಂಟೊಂಬತ್ತು ವರ್ಷ ವಯಸ್ಸಿನಲ್ಲಿ ಲಗ್ನಕಾಲದಲ್ಲಿ ಹಾರುವರು ಸಾವಧಾನವೆಂದ ಕೂಡಲೆ ಪ್ರಪಂಚವನ್ನು ತೊರೆದು ಜ್ಞಾನಾರ್ಜನೆಯನ್ನು ಮಾಡಿ ಸಾಧುಗಳಾಗಿ ೧೦–೧೨ ವರ್ಷಗಳ ವರೆಗೆ ದೇಶಪರ್ಯಟನ ಮಾಡುತ್ತಾ ಜನರಿಗೆ ಉಪದೇಶಗಳನ್ನು ಕೊಡುತ್ತಾ ನಡೆದರೋ, ಯಾರ ವಿಷಯವಾಗಿ ಅನೇಕರು ಭಕ್ತಿಪುರಸ್ಸರವಾಗಿ ಮನ್ನಣೆಯನ್ನು ಮಾಡುವರೋ ಅವರ ವಿಷಯವಾಗಿ ಈ ಪುಟ್ಟಲೇಖದಲ್ಲಿ ಹೆಚ್ಚಾಗಿ ಹೇಳಲು ಅವಕಾಶವಿಲ್ಲ ! ಆ ಮೇಲೆ ಭಗವದ್ಗೀತೆಯಮೇಲಣ ಜ್ಞಾನೇಶ್ವರ, ವಾಮನ ಪಂಡಿತ ಮುಂತಾದವರ ಟೀಕಾಗ್ರಂಥಗಳು ಸರ್ವರಿಗೂ ಮಾನ್ಯವಾಗಿರುವುವು. ಮೊದಲನೆಯ ಗ್ರಂಥವು ಪುರಾತನ ಭಾಷಾಪದ್ಧತಿಯನ್ನುಳ್ಳದಾಗಿದ್ದರೂ ಅಪೂರ್ವವಾದ ಪ್ರಾಸಾದಿಕವಾಣಿಯುಳ್ಳದಾಗಿದೆ. ಎರಡನೆಯ ಗ್ರಂಥವು ಸ್ವತಂತ್ರಪದ್ಧತಿಯ ಗ್ರಂಥವಾಗಿದೆ "ನಮಗೆ ದೊಡ್ಡವರು ಹೇಳಿದ ಮಾತು ಸೇರುವುದಿಲ್ಲ ಭಗವಂತನೇ ನಾನೇನು ಮಾಡಲಿ" ಎಂದು ಗ್ರಂಥಕರ್ತನು ಹೇಳಿಕೊಂಡಿದ್ದಾನೆ. ಪಂಚಮವೇದವೆನ್ನಿಸಿಕೊಂಡಿರುವ ಮಹಾಭಾರತವನ್ನೂ ಅಲೌಕಿಕಕಾವ್ಯವಾದ ರಾಮಾಯಣವನ್ನೂ ಅನೇಕ ಕವಿಗಳು ದೇಶಭಾಷೆಗೆ ಪರಿವರ್ತಿಸಿರುತ್ತಾರೆ. "ವ್ಯಾಸೋಚ್ಛಿಷ್ಟಂಜಗತ್ಸರ್ವಂ" ಎಂಬ ವಚನವು ಅಕ್ಷರಶಃ ಸತ್ಯವಾಗಿರುವಂತೆ ತೋರುತ್ತದೆ. ಈ ಮಹಾಭಾರತದ ರೂಪಾಂತರಗಳಲ್ಲಿ ಮೋರೋಪಂತರ ಪರಿವರ್ತನವು ಅಲ್ಲಲ್ಲಿ ಸುಂದರವಾಗಿಯೂ ಬಾಯಿಪಾಠಮಾಡುವುದಕ್ಕೆ ಅನುಕೂಲವಾದ ಗೀತೆಗಳಿಂದ ಕೂಡಿಯೂ ಇವೆ. ಶ್ರೀಧರನ ಸಂಕ್ಷಿಪ್ತವಾದ ಪಾಂಡವ ಪ್ರತಾಪವು ಎಲ್ಲರಿಗೂ ತಿಳಿಯುವಂತೆ ಸುಲಭಶೈಲಿಯಲ್ಲಿದೆ. ಸಾಧು ಶಿರೋಮಣಿಗಳಾದ ಏಕನಾಥ ಮಹಾರಾಜರ ಮಗಳ ಮಗನಾದ ಮಹಾಕವಿ ಮುಕ್ತೇಶ್ವರನು (೧೬೦೯)[1] ಬರೆದ ಮಹಾಭಾರತವು ಮರಾಠಿಯ ಉದ್ಗ್ರಂಥಗಳಲ್ಲೆಲ್ಲ ಶ್ರೇಷ್ಠವೆನಿಸಿಕೊಂಡಿದೆ. ಆದಿಪರ್ವದಲ್ಲಿ ಈ ಕವಿಯು ಮೂಲಗ್ರಂಥಕರ್ತರಾದ ವ್ಯಾಸರಮೇಲೆಯೂ ಕೈಮಾಡಿದನೆಂದು ಕೆಲವರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಮಹಾ ಭಾರತದಲ್ಲಿ ಐದು ಪರ್ವಗಳು ಮಾತ್ರವೇ ದೊರೆತಿರುತ್ತವೆ. ಉಳಿದುವು ಉಪಲಬ್ಧವಾಗಿಲ್ಲ. ಉಪಲಬ್ಧವಾದ ನಾಲ್ಕು ಪರ್ವಗಳು ಗಂಭೀರರಚನೆಗಳಿಂದಲೂ ಉದಾತ್ತವಿಚಾರಗಳಿಂದಲೂ ನವರಸಾಲಂಕಾರದಿಂದಲೂ ಕೂಡಿ ರಾಷ್ಟ್ರೀಯ ವಿಚಾರಗಳಿಂದ ಅಲಂಕೃತವಾಗಿ ಸುಗಮವಾಗಿ ಇವೆ. ಇಷ್ಟು

ಪ್ರಸನ್ನವಾದ ವಾಗ್ವಿಲಾಸವು ಮಹಾರಾಷ್ಟ್ರಸಾಹಿತ್ಯದ ಇತರ ಗ್ರಂಥಗಳಲ್ಲಿ ಕಾಣಬರುವುದಿಲ್ಲ. ನಮ್ಮ ಆದಿಪಂಪನು ಕೆಲವೆಡೆಗಳಲ್ಲಿ ಸಂಸ್ಕೃತದ ಸಮಪಾದ ವೃತ್ತಗಳಿಗೆ ಆಯಾವೃತ್ತಗಳಲ್ಲಿಯೇ ಭಾಷಾಂತರಮಾಡಿದ್ದಾನೆ. ಅವನಂತೆಯೇ ವಾಮನ ಪಂಡಿತನು ಎಷ್ಟೋ ಸಂಸ್ಕೃತ ಪ್ರಕರಣಗಳನ್ನು ಮರಾಠಿಯಲ್ಲಿ ಮೂಲದಲ್ಲಿದ್ದ ವೃತ್ತದಲ್ಲಿಯೇ ಭಾಷಾಂತರ ಮಾಡಿರುವನು. ಜ್ಞಾನೇಶ್ವರನ ಸುಂದರತರಗಳಾದ ಉಪಮಾನಗಳು, ಮುಕ್ತೇಶ್ವರನ ವಾಕ್ ಗಭೀರತೆ, ವಾಮನ ಪಂಡಿತನ ಭಕ್ತಿರಸವು, ಯಮಕಪ್ರಾಬಲ್ಯವು, ಮೋರೋಪಂತರ ವ್ಯಾಕರಣ ಬದ್ಧವಾದವಾಕ್ಸರಣಿಯು, ತುಕಾರಾಮ ಸಾಧುಗಳ ಹೃದಯಂಗಮವಾದ ಸ್ವಾಭಾವಿಕ ಶೈಲಿಯು, "ವಾಚಮರ್ಥೋನುಧಾವತಿ" ಎಂಬುದಕ್ಕೆ ದೃಷ್ಟಾಂತವಾಗಿರುವ ಶ್ರೀ ಸದ್ಗುರು ಸಮರ್ಥ ರಾಮದಾಸ ಸ್ವಾಮಿಗಳವರ ವಾಗ್ಧೋರಣೆ—ಇವುಗಳಿಂದ ಮಹಾರಾಷ್ಟ್ರಸಾಹಿತ್ಯವೆಂಬ ಸುಂದರಿಯು ಅಲಂಕೃತಳಾಗಿ ಐಶ್ವರ್ಯದಿಂದ ಕೂಡಿ ಪ್ರಭಾವಶಾಲಿನಿ ಎನಿಸಿಕೊಂಡಿರುವಳು! ಇವಳ ತೇಜಸ್ಸು ಆಧುನಿಕ ಮರಾಠಿಯ ಗದ್ಯವಾಙ್ಮಯದಲ್ಲಿಯೂ ಹಿಂದಕ್ಕೆ ಹರಿಕಥೆಗಳಲ್ಲಿ ಮಾಡಿದಂತೆ ವಿಶೇಷವಾಗಿ ಪ್ರಗತಿಯನ್ನುಂಟುಮಾಡುತ್ತಿದೆ. ಈ ಕಾರಣಗಳಿಂದ ಮರಾಠಿಯ ಹರಿಕಥಾ ಪದ್ಧತಿಯು ಕನ್ನಡಿಗರ, ತಮಿಳರ, ತೆಲುಗರ ದೇಶಗಳಲ್ಲಿಯೂ ಮೇಲುಪಙ್ಕ್ತಿಯಾಗಿ ಶೋಭಿಸುತ್ತಿದೆ. ಲಿಂಗಾಯಿತರೂ ಕೂಡ ಹರಿಕಥಾ ಮಾರ್ಗವನ್ನನುಸರಿಸಿ ಶಿವಕಥೆಗಳನ್ನು ಮಾಡತೊಡಗಿರುವರು.

ಇನ್ನು, ಕನ್ನಡ-ಮರಾಠಿಗಳ ವಿಶಿಷ್ಟ ಅಭಿಮಾನದ ಸಂಕುಚಿತ ವಿಚಾರವನ್ನು ಬದಿಗಿಟ್ಟು ವಿಚಾರಮಾಡಲಾಗಿ, ನಮ್ಮ "ಕವಿತಾಗುಣಾರ್ಣವ"ನಾದ ಪಂಪನ "ಕ್ಷಿತಿಗೆ ಸಮಸ್ತಭಾರತಮುಮಾದಿಪುರಾಣಮುಮಾಗಳೊಂದಳಂ | ಕೃತಿಯವೊಲ್" ಆದ ದುಂದುಭಿಗಭೀರ ನಿನದವು ಮರಾಠಿಯ ಅನ್ಯಾದೃಶವಾದ ಮುಕ್ತೇಶ್ವರ ಜ್ಞಾನೇಶ್ವರರಿಗಿಂತಲೂ ಪ್ರಸಾದ ಗುಣ, ಉದಾತ್ತ ವೇದಾಂತ ವಿಚಾರ ಈ ದೃಷ್ಟಿಗಳಿಂದಲೂ, ಮರಾಠಿಯಲ್ಲಿಲ್ಲದ ಅಸ್ಖಲಿತ ಶೈಲಿಯಿಂದಲೂ ವಿಪುಳವಾಗಿ ಮೇಲಾಗಿದೆಯೆಂದು ನಾವು ಮರಾಠಿ ಕಲಿತು ಕನ್ನಡವನ್ನು ಹೀಯಾಳಿಸುವ ಬೆಳಗಾವಿಯ ನಾಡಿನ ಕನ್ನಡಿಗರಿಗೆ ಆಹ್ವಾನ ಪೂರ್ವಕವಾಗಿ ಹೇಳದೆ ಇರಲಾರೆವು! ಪೂರ್ವಕಾಲದ ಕರ್ಣಾಟಕದ ವೈಭವದ್ಯೋತಕಗಳಾದ ಶಾಂತಿಪುರಾಣ, ಸುಪ್ರಖ್ಯಾತವಾದ ಆದಿಪುರಾಣ, ಜೈನಪರಂಪರೆಯನ್ನು ಹೇಳುವ ರಾಜಾವಳೀಕಥೆ ಇವುಗಳೊಳಗಿನ ಹೇರಳವಾದ ಅವತರಣಗಳುಳ್ಳದೊಂದು ಪ್ರೌಢವಾದ ಪದ್ಯಸಾರವು ನಮಗೆ ಬೇಕಾಗಿದೆ.

ಸದ್ಯಕ್ಕೆ ಇಷ್ಟೇ ಹೇಳಿ, ವಿಶೇಷವಾಗಿ ಬೋಧಪ್ರದವಾದ ಅರ್ವಾಚೀನ-ಆಧುನಿಕ-ಮರಾಠಿಯ ವಿಷಯವಾಗಿ ನಮ್ಮ ಪ್ರಿಯ ಕರ್ಣಾಟಕ ಬಂಧುಭಗಿನಿಯರ ಆಹ್ಲಾದದಾಯಕವಾದ ಇನ್ನೊಂದು ಭೇಟಿಯಲ್ಲಿ ಉಪಕ್ರಮಿಸುವದನ್ನು ಕೇಳಿಕೊಂಡು ನಿಲ್ಲುತ್ತೇವೆ.

— 0 —

ಕನ್ನಡ ಮರಾಠಿಗಳೆಲ್ಲಿರುವ ಗಾರ್ಫೀಲ್ಡ್ ಚರಿತೆಗಳು

ಮ|| ಶೇಷ ಭ. ಪಾಂಶಿವಾಡ್ ಇವರಿಂದ

ಹಿಂದೂ ದೇಶದ ಪಶ್ಚಿಮತೀರದ ಪೋರ್ತುಗೀಸ್ ಆಧಿಪತ್ಯದ ಹಳೆಯ ಗೋವೆ (ಜುನೇ ಗೋವೇ) ಎಂಬ ಪಟ್ಟಣದ ಕ್ರೈಸ್ತ ಪ್ರಾರ್ಥನಾ ಮಂದಿರದ ಬಾಗಿಲಲ್ಲಿ ನಿಂತು ಉನ್ನತವಾಗಿರುವ ಅದರ ಗೋಪುರದ ತುದಿಯನ್ನು ನೋಡಹತ್ತಿದರೆ, ತಲೆಯನ್ನು ಮೇಲನೋಕ್ಕೆ ಮಾಡುತ್ತಾ ಒಂದು ಕೊನೆಗೆ ತಲೆಯ ಮೇಲಿರುವ ರುಮಾಲು ಕೆಳಕ್ಕೆ ಬೀಳುವ ಪ್ರಸಂಗವೂ ಬರಬಹುದಾಗಿದೆಯಷ್ಟೆ ? ಹಾಗೆಯೇ ಪೂಜ್ಯವಾದ ನಮ್ಮ ತಾಯ್ನುಡಿಯ ಪೂರ್ವ ವೃತ್ತದ ಕಡೆಗೆ ಸಿಂಹಾವಲೋಕದ ಕ್ರಮದಿಂದ ಹಿಂದಕ್ಕೆ ಹೊರಳಿ ನೋಡುವಾಗ, ಮುಂದೆ ಕಾಲುಗಳು ಸಾಗದೆ ನಿಂತುಕೊಳ್ಳಬೇಕಾಗಿ ಒಂದು ಮುಂದೆ ಯಾವ ಒಂದರೂ ತಿಳಿಯದಾಗದಂತಾಗುವುದು. ಶ್ರೀ ಶಿವಾಜಿಯೇ ಮೊದಲಾದವರಂತೆ ಕರ್ನಾಟಕರಾಷ್ಟ್ರ ಪ್ರಭುವಾದ ಪುಲಿಕೇಶಿ ಮುಂತಾದ ಅನೇಕ ಮಹನೀಯರು ಕನ್ನಡದ ಪೂರ್ವೇತಿಹಾಸದಲ್ಲಿ ಕಾಣಬರುವರು. ಮಹಾರಾಷ್ಟ್ರದ ಶೂರರು ತಮ್ಮ ಕುದುರೆಗಳಿಗೆ ಭರತಖಂಡದ ಕಡೆಯ ಸೀಮೆಯಾದ ಅಟಕ (Attock) ಪಟ್ಟಣದ ಅಟೆ ನೀರನ್ನು ಕುಡಿಸಿದಂತೆ ಪಂಪನಸ್ವಾಮಿಯಾದ ಅರಿಕೇಸರಿಯ ತಂದೆಯು ನರಸಿಂಹನೆಂಬ ಮಹಾಶೂರನು-ತನ್ನ ತುರಗವನ್ನು ಗಂಗಾವಾರಿಧಿಯಲ್ಲಿ ಈಜಾಡಿಸಿ ಜಯಶಾಲಿಯಾದನು. ಮರಾಠಿಯು ಮೊನ್ನೆ ಮೊನ್ನೆಯವರೆಗೂ ಸಂಸ್ಕೃತಕ್ಕೆ ಎನು ಅಂಜಿಕೊಳ್ಳುತ್ತಿತ್ತು! ಕ್ರಿ. ಶ. ೯೪೧ ರಲ್ಲಿ ಬಾಳಿದ ಆದಿಪಂಪನ ಕಾಲಕ್ಕೆ ಮೊದಲೇ ಕನ್ನಡವು ಸಂಸ್ಕೃತಕ್ಕಿದಿರಾಗಿ ನಿಂತು ವಿರಾಜಮಾನವಾಗಿತ್ತು. ಸಂಸ್ಕೃತದ ಮುಂದೆ ನಮ್ಮದು ಏನು ? ಎಂಬ ಪ್ರಶ್ನೆಯು ಕನ್ನಡದಲ್ಲಿ ಉತ್ಪನ್ನವಾಗಲಿಲ್ಲ. ಈಗ ಹಳೆಯ ಭಾಷೆಯೆಂದೆನಿಸಿಕೊಂಡಿರುವ ದುರ್ಬೋಧವಾದ ಮರಾಠಿಯ ಜ್ಞಾನೇಶ್ವರಿ (ಭಗವದ್ಗೀತೆಯ ಮೇಲಿನಟೀಕೆ)ಯ ಕಾಲಕ್ಕೆ (೧೨೯೦) ಪೂರ್ವದಲ್ಲಿಯೇ ಕರ್ನಾಟಕ ಕೃತಿಗೆ ಸೀಮಾಪುರುಷನಾದ ಜನ್ನನ (೧೨೦೯) ನಿರರ್ಗಳವಾದ ವಾಕ್ಸರಣಿಯು ಕನ್ನಡದಲ್ಲಿ ಶೋಭಿಸುತ್ತಿತ್ತು. ಸರಸ್ವತೀಮಣಿಹಾರನೆಂದು ಖ್ಯಾತಿಗೊಂಡಿರುವ ಪಂಪನ ಗಂಭೀರವಾದ ಆಹ್ಲಾದದಾಯಕವಾದ ಹೃದಯಂಗಮವಾದ ಅಸ್ಖಲಿತವಾಗ್ಧೋರಣೆಯು ಮರಾಠಿಯಲ್ಲಿ ಕಾಣುವುದು ದುರ್ಲಭವೆಂದೇ ಹೇಳಬೇಕಾಗಿದೆ. ಅಲ್ಲಿಂದೀಚೆಗೆ ಬ್ರಾಹ್ಮಣ ಜೈನರುಗಳ ಮತವೈಷಮ್ಯದಿಂದಲೋ ದೈವದುರ್ವಿಪಾಕದಿಂದಲೋ ಕನ್ನಡವು ಮೂಲೆಗೆ ಬೀಳುತ್ತಾ ಬರಲು ಮರಾಠಿಯು ಅತ್ಯುನ್ನತ ವೈಭವಸ್ಥಿತಿಗೆ ಏರಹತ್ತಿತು. ಕಾವೇರಿಯಿಂದ ಗೋದಾವರಿಯವರೆಗೂ ಇದ್ದ ಕನ್ನಡ ನಾಡುಗಳಲ್ಲಿ ಅನೇಕ ಭಾಗಗಳನ್ನು ಮರಾಠಿಯವರು ಕನ್ನಡಿಗರಿಂದ ಗೆದ್ದುಕೊಂಡಿದ್ದಾರೆ. ಆ ನಾಡುಗಳ ಕೆಳಭಾಗವು ಈಗ ದಕ್ಷಿಣ ಮಹಾರಾಷ್ಟ್ರವೆಂದು ಕರೆಯಲ್ಪಡುತ್ತಿದೆ. ಮೇಲ್ಭಾಗವು ಶುದ್ಧವಾದ

ಅದೇನಾದೀ ಆಗಿದೆ ಮರಾಠಿಭಾಷೆಯ ಆಧುನಿಕ ಉತ್ಕರ್ಷದ ವಿಷಯದಲ್ಲಿ ಬೇರೆಯಾಗಿ ಒಂದು ಲೇಖನವನ್ನು ಬರೆಯಬೇಕೆಂಬ ಉದ್ದೇಶವು ನಮಗಿರುವುದು.

ಹಿಂದಕ್ಕೆ ಕೊಲ್ಹಾಪುರದಲ್ಲಿ ಹೊರಡುತ್ತಿದ್ದ ಗ್ರಂಥಮಾಲೆ ಎಂಬ ಮಾಸಪತ್ರಿಕೆಯಲ್ಲಿ ೧೯೦೨ ರಲ್ಲಿ ಪ್ರಸಿದ್ಧವಾದ ಮರಾಠೀಯ ಗಾರ್‌ಫೀಲ್ಡ್ ಚರಿತೆಯನ್ನು ನಾವು ಓದಿದ್ದೆವು. ಅದರಂತೆ ಗಾರ್‌ಫೀಲ್ಡ್ ಚರಿತೆಯು ಕನ್ನಡದಲ್ಲಿಯೂ ಇರುದನ್ನು ಕೇಳಿ ನಮಗೆ ಪರಮ ಸಂತೋಷವಾಯಿತು. ಕರ್ಣಾಟಕ ಸಾಹಿತ್ಯ ಪರಿಷತ್ತಿನ ಗೌ|| ಕಾರ್ಯದರ್ಶಿಗಳ ಅನುಗ್ರಹದಿಂದ ಮರಾಠಿಯ ಮತ್ತು ಕನ್ನಡದ ಗಾರ್‌ಫೀಲ್ಡ್ ಚರಿತೆಗಳು ಓದಲಿಕ್ಕೆ ನಮಗೆ ದೊರೆಯಲು ನಮ್ಮ ಲೇಖಣಿಯಿಂದ ಉಪರಿನಿರ್ದಿಷ್ಟವಾದ ಉದ್ಗಾರಗಳು ಹೊರಟಿರುವವು!

ಪ್ರಕೃತ ಕನ್ನಡ ಗ್ರಂಥವು ಎಲ್ಲರಿಗೂ ಮಾರ್ಗದರ್ಶಕವಾಗಿದೆ. ಈಗ ಲೇಖಕನ ಅನುಭವವನ್ನು ಇಲ್ಲಿ ಬರೆಯುವುದು ಅಪ್ರಾಸಂಗಿಕವಾಗಲಿಕ್ಕಿಲ್ಲವೆಂದು ತೋರುತ್ತದೆ. ಗ್ರಂಥದ ಆರಂಭದಲ್ಲಿಯೇ ಚರಿತ್ರನಾಯಕನ ಅಣ್ಣನಾದ ಥಾಮಸ್ ಎಂಬುವನು ತನ್ನ ತಾಯಿಗೆ ಜೆಮ್ಸನು ಇನ್ನು ಶಾಲೆಗೆ ಹೋಗಬೇಕೆಂದು ಹೇಳುವುದು, ತಾಯಿಯಾದ ಆ ವಿಧವಾಮಣಿಯು ಆದುದು, ಥಾಮಸ್, ನೀನೂ ಹೋಗಬೇಕಲ್ಲವೆ! ಎಂದು ಉತ್ತರ ಕೊಟ್ಟುದಕ್ಕೆ, ಆ ಥಾಮಸ್ಸನು "ನಾನು ಹೊಲವನ್ನು ಮಾಡಿ, ಕೂಲಿಯನ್ನು ಮಾಡಿ ಮನೆಯ ಸಂಸಾರವನ್ನು ನಡೆಯಿಸುವೆನು, ಜೆಮ್ಸನೂ ತಂಗಿಯೂ ಶಾಲೆಗೆ ಹೋಗಲಿ!" ಎಂದು ಉತ್ತರ ಕೊಡುವುದು, ಚರಿತ್ರನಾಯಕನ ಅಕ್ಕನು ಮಗುವಾದ ತನ್ನ ತಮ್ಮನನ್ನು ಶಾಲೆಗೆ ಎತ್ತಿಕೊಂಡು ಹೋಗುವುದಕ್ಕೆ ಮುಂದರಿಯುವುದು-ಇವೆಲ್ಲ ನಿಷ್ಕಾಮ ನಿರ್ವ್ಯಾಜ ಬಂಧು ಭಗಿನೀ ಪ್ರೇಮವನ್ನು ಇನ್ನೊಮ್ಮೆ ಈ ಹೊತ್ತಿಗೆ ಈ ಎರಡೂ ಪುಸ್ತಕಗಳನ್ನೋದುವಾಗ ನಮ್ಮ ಮನಸ್ಥಿತಿಯು ವ್ಯತ್ಯಾಸವಾದುದನ್ನು ಹೇಳುವದೇ ಅಶಕ್ಯವಾಗಿದೆ! ನಮ್ಮ ಕಣ್ಣುಗಳು ಆವೇಗದಿಂದ ದ್ರವಪೂರಿತವಾಗಿ ಗಂಟಲಿನ ಸ್ನಾಯುಗಳು ಉದ್ವೇಗದಿಂದ ಬಿಗಿಯುತ್ತ ಬಂದುವು! ಇಲ್ಲಿ ತಾಯಿ, ಅಣ್ಣ, ತಮ್ಮ, ತಂಗಿ, ಇವರಲ್ಲಿ ಹೆಚ್ಚಾಗಿ ಯಾರನ್ನು ಸ್ತುತಿಸಬೇಕೋ ನಮಗೆ ತಿಳಿಯದು. ಇದರಿಂದ ಪರಕೀಯರಲ್ಲಿಯೂ ಇಂತಹ ನರರತ್ನಗಳಿರುವುವೆಂದು ಇಂಗ್ಲೀಷನ್ನು ಓದದಿರುವ ನಮ್ಮ ಜನರಿಗೆ ತಿಳಿಯಬರುವುದು. ಯಾವನ ಸ್ವಾರ್ಥತ್ಯಾಗ ಪೂರ್ವಕವಾದ ಪ್ರಯತ್ನಗಳಿಂದ ಜೆಮ್ಸಿಯಂತಹ ತ್ರಿಲೋಕಾಲಂಕಾರವಾದ ಪುರುಷರತ್ನವು ದಾರಿದ್ರ್ಯಸಂಕಟದೊಳಗಿಂದ ಮುಂದೆ ಬಂದಿತೋ ಆ ಥಾಮಸ್ಸನ ಚರಿತೆಯು ಇಲ್ಲಿ ನಮಗೆ ಅತ್ಯಂತ ಹೃದಯಂಗಮವಾಗಿ ತೋರುತ್ತದೆ. ಇಂತಹ ಅನೇಕ ಪ್ರಸಂಗಗಳು ಪ್ರಸ್ತುತ ಗ್ರಂಥದಲ್ಲಿವೆ. ದಿಗ್ದರ್ಶನಾರ್ಥವಾಗಿ ಒಂದು ಮಾತನ್ನು ಹೇಳದೆ ಸುಮ್ಮನಿರುವುದಕ್ಕೆ ನಮ್ಮ ಮನಸ್ಸೊಡಂಬಡಲಿಲ್ಲ.

ಇನ್ನು ಪ್ರಸ್ತುತ ಎರಡೂ ಗ್ರಂಥಗಳ ವಿಷಯವಾಗಿ ಒಂದೆರಡು ಮಾತನ್ನು ಹೇಳುವುದು ಉಚಿತವಾಗಿರುವುದು. ಮರಾಠಿಯ ಪುಸ್ತಕವು ನಮ್ಮ ಕಣ್ಣೆದುರಿಗೆ

ಅನೇಕ ದಿವಸಗಳಿಂದದ್ದು ಅದರ ಮಾತುಗಳು ನಮ್ಮ ಹೃತ್ಪಟಲದ ಮೇಲೆ ಬಹಳವಾಗಿ ಮೂಡಿರುವುದರಿಂದ ನಮ್ಮ ಅಭಿಪ್ರಾಯವು ಎಲ್ಲಿ ಏಕಪಕ್ಷೀಯವಾಗುವುದೋ ಎಂಬ ಅಂಜಿಕೆಯು ಇರುತ್ತಿರುವುದು. ಆದರೂ ಸಾಧ್ಯವಾದಷ್ಟು ಸಮಶೀಲವಾಗಿ ವಿಚಾರ ಮಾಡಿ ಗ್ರಂಥವಿಮರ್ಶೆಯನ್ನು ಮಾಡಬೇಕೆಂದು ಉದ್ದೇಶಿಸಿರುತ್ತೇವೆ. ನಮ್ಮ ಪ್ರಸ್ತಾವವೇ ಬೆಳೆದುದರಿಂದಲೂ ಕನ್ನಡಿಗರಿಗೆ ಅದು ಹೃದ್ಯವಾಗದಿರುವುದರಿಂದಲೂ ಸಣ್ಣಪುಟ್ಟಮಾತುಗಳನ್ನು ಇನ್ನು ಮುಂದೆ ಹೇಳುವುದಿಲ್ಲ.

ಕನ್ನಡ ಮರಾಠಿ ಪುಸ್ತಕಗಳ ಬಾಹ್ಯರೂಪಗಳನ್ನು ಹೋಲಿಸಿ ನೋಡುವಲ್ಲಿ ಮರಾಠಿಯ ಪುಸ್ತಕದ ಬಾಹ್ಯರೂಪಕ್ಕಿಂತಲೂ ಕನ್ನಡ ಪುಸ್ತಕದ ರೂಪವು ಸುಂದರವಾಗಿರುವುದೆಂದು ತೋರುವುದು. ಈ ವಿಷಯದಲ್ಲಿ ತಾಯ್ನುಡಿಯ ಏಕನಿಷ್ಠಸೇವಕರಾದ ಸಂಪಾದಕರು ಮಾಡಿರುವ ಪ್ರಯತ್ನಗಳನ್ನು ನೋಡಿದರೆ ಯಾರಿಗೂ ಸಹಾನುಭೂತಿಯುಂಟಾಗದಿರದು. ವ್ಯಾಕರಣದ ವಿಷಯದಲ್ಲಿ ಕನ್ನಡವು ಪೂರ್ವದಿಂದಲೂ ಸುಸಂಸ್ಕೃತವಾಗಿರುವುದರಿಂದ ಪುಸ್ತಕದ ಭಾಷೆಯು ಪರಿಷತ್ತಿನ ನಿಯತಕಾಲಿಕ ಪತ್ರಿಕೆಯ ಭಾಷೆಯಂತೆಯೇ ಶುದ್ಧವಾಗಿಯೂ ಉತ್ಕೃಷ್ಟವಾಗಿಯೂ ಇದೆ.

ಆಂತರ ವಿಷಯಗಳನ್ನು ಸಮದೃಷ್ಟಿಯಿಂದ ನೋಡುವಲ್ಲಿ ಕನ್ನಡ ಗ್ರಂಥವು ತನ್ನ ಅಣ್ಣನಾದ ಮರಾಠಿಯ ಗ್ರಂಥವನ್ನು ಬಹ್ವಂಶಗಳಲ್ಲಿ ಹೋಲುತ್ತಿದೆ. ಮರಾಠಿಯ ಪುಸ್ತಕವನ್ನು ಬರೆದ ಮ|| ರಾ|| ಪರಾಂಜಪೆ, ಮ|| ರಾ|| ರಾಮಚಂದ್ರರಾವ್, ಈ ಇಬ್ಬರು ಮಹನೀಯರ ಪರಿಚಯವು ನಮಗಿಲ್ಲ. ಮೊದಲನೆಯ ಗ್ರಂಥಕಾರರು "From the Log Cabin to the White House" ಎಂಬ ಪುಸ್ತಕವನ್ನೂ ಇನ್ನೂ ಇತರ ಗ್ರಂಥಗಳನ್ನೂ ಓದಿ ಗ್ರಂಥರಚನೆಯನ್ನು ಮಾಡಿದ ಹಾಗೆ ಹೇಳಿದಾರೆ. ಪ್ರಸ್ತಾವನೆಯಲ್ಲಿ 'ಮಹಾಪುರುಷರು ಮಹಾಪದವಿಗಳಿಗೆ ಹೇಗೆ ಏರಿಬಂದರೆಂಬುದೇ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಿರುವುದರಿಂದ ಅದನ್ನು ಸವಿಸ್ತಾರವಾಗಿ ಹೇಳಿದೇವೆ'' ಎಂದು ಬರೆದಿದ್ದಾರೆ. ಪರಾಂಜಪೆಯವರು ಅಲ್ಲಲ್ಲಿ ಸ್ವಭಾವ ಪರಿಪೋಷಕವಾದ ಮನೋಭಾವಗಳ ಶಬ್ದ ಚಿತ್ರಗಳನ್ನು (word pictures) ಆಖ್ಯಾಯಿಕೆಗಳೊಡನೆ ಬರೆದಿರುವುದು ಹೃದಯಂಗಮವಾಗಿದೆ. ಉದಾಹರಣೆಗಾಗಿ ಒಂದು ವಿಷಯವನ್ನು ಹೇಳಬಹುದಾಗಿದೆ. ಜೇಮ್ಸು ಕಸವನ್ನು ಗುಡಿಸಿ ವ್ಯಾಸಂಗ ಮಾಡುತ್ತಿದ್ದುದು ಎಲ್ಲರಿಗೂ ಮಾರ್ಗಪ್ರದರ್ಶಕವಾಯಿತೆಂದು ಕನ್ನಡ ಪುಸ್ತಕದಲ್ಲಿ ಒಂದೇ ವಾಕ್ಯದಲ್ಲಿ ಹೇಳಿರುತ್ತಾರೆ. ಆದರೆ ಮರಾಠಿಯಲ್ಲಿ ಅದೇ ಮಾತು ಸಂವಾದ ರೂಪದಲ್ಲಿ ಮನೋಹರವಾಗಿ ಬಂದಿದೆ. ಕನ್ನಡದಲ್ಲಿ ಸಂಯುಕ್ತ ವೃದ್ಧಸಭೆ ಎಂಬ ಶಬ್ದವು ಕರ್ಣಕಟುವಾಗಿ ತೋರುತ್ತದೆ. ಸಂಯುಕ್ತ ಮಹಾಸಭೆಯೆಂದಿದ್ದರೆ ಚೆನ್ನಾಗಿರುತ್ತಿತ್ತು. ಮರಾಠಿಯಲ್ಲಿ ಹನ್ನೊಂದು ಅಧ್ಯಾಯಗಳಿರುವುವು. ಕನ್ನಡದಲ್ಲಿ ಇಪ್ಪತ್ತು ನಾಲ್ಕಿರುವುವು. ಮರಾಠಿ ಪುಸ್ತಕದ ಪುಟಸಂಖ್ಯೆ ೧೧೫, ಕನ್ನಡ ಪುಸ್ತಕದ ಪುಟಸಂಖ್ಯೆ ೧೭೫ ಆಗಿದೆ. ಕನ್ನಡ ಪುಸ್ತಕದಲ್ಲಿ ಒಂದೆಡೆಯಲ್ಲಿ ೮ ಆಣೆ ಸುಮಾರು ಬಾಳುವ

ನಾಟ್ಯವೆಂಬ ಭಾವವು ಮರಾಠಿಯಲ್ಲಿ ೯ ಆಣೆಗಳು ಎಂಬಲ್ಲಿ ಬಂದಿದೆ. ಕನ್ನಡದ ಮುದ್ರಣದಲ್ಲಿ ಕ್ರಿಸ್ತ ಧರ್ಮದ ಮಾತುಗಳು ಬಂದಿರುವುದು ಒಳ್ಳೆಯದಾಗಿದೆ. ಮರಾಠಿಯ ಮುದ್ರಣದಲ್ಲಿ ಅದು ಇಲ್ಲದೆಯಿರುವುದು ನ್ಯೂನತೆಯೆನ್ನಬೇಕಾಗಿದೆ. ಕನ್ನಡದ ಮುದ್ರಣದಲ್ಲಿ ಓಹಿಯೋದೇಶದ ವರ್ಣನೆಯು ಇದೆ. ಮರಾಠಿಯ ಮುದ್ರಣದಲ್ಲಿಲ್ಲ. ಅಭಿನವ ಪಂಪನ ನೆನಪನ್ನು ತರುವ ರಮಣೀಯವಾದ ಪದ್ಯಗಳು ಕನ್ನಡದ ಮುದ್ರಣದಲ್ಲಿ ಅಲ್ಲಲ್ಲಿರುವುವು. ಮರಾಠಿಯಲ್ಲಿ ಇಂತಹ ಪ್ರಸಂಗವಾವುದೂ ಇಲ್ಲ. ಒಟ್ಟು ನೋಡುವಲ್ಲಿ ಈ ಎರಡೂ ಪುಸ್ತಕಗಳೂ ನಮಗೆ 'ನಾನೇ ಹೆಚ್ಚು, ನೋಡು ಈ ಮಾತುಗಳಿಂದ ನಾನೇ ಹೆಚ್ಚಿಸಿಕೊಂಡಿದೇನೆ' ಎಂದು ಸ್ಪರ್ಧೆಯಿಂದ ಹೇಳಿಕೊಳ್ಳುವಂತೆ ಕಾಣುತ್ತಿವೆ. "ನೀವಿಬ್ಬರೂ ಸಮಾನರು, ಹೊಡೆದಾಟವೇಕೆ" ಎಂದು ನಾವು ಅಣ್ಣ ತಮ್ಮಂದಿರಿಬ್ಬರಿಗೂ ಸಮಾಧಾನವನ್ನು ಹೇಳುತ್ತೇವೆ. ಮರಾಠಿ ಪುಸ್ತಕದ ಭಾಷೆಯು ಒಬ್ಬರೇ ಬರೆದುದರಿಂದ ಸುಂದರವಾಗಿದೆ. ಗ್ರಂಥಮಾಲೆಯೆಂಬ ಮರಾಠಿಯ ಪತ್ರಿಕೆಯು ೧೮೯೪ ರಿಂದ ಹದಿಮೂರು ಹದಿನಾಲ್ಕು ವರ್ಷಗಳವರೆಗೆ ಬದುಕಿತ್ತು. ತಿಂಗಳು ಒಂದಕ್ಕೆ ನೂರಾರು ಪುಟಗಳುಳ್ಳ ಈ ಮಾಸಪತ್ರಿಕೆಯಲ್ಲಿ ಅನೇಕ ಗ್ರಂಥಗಳು ಹೊರಪಟ್ಟುವು. ಅವುಗಳಲ್ಲಿ ಕ್ಲಿಷ್ಟಭಾಷೆಯ ಅನೇಕ ಗ್ರಂಥಗಳೂ ಹೊರಟುವು. ಅಲ್ಲಿಹೊರಟ ಉತ್ತಮಗ್ರಂಥಗಳಲ್ಲಿ ಗಾರ್ಫೀಲ್ಡ್ ಚರಿತೆಯೂ ಒಂದಾಗಿದೆ. ಕನ್ನಡದಲ್ಲಿ ಹುಟ್ಟಿರುವ ಗಾರ್ಫೀಲ್ಡ್ ಗ್ರಂಥದ ಭಾಷೆಯನ್ನು ನೋಡಲಾಗಿ ಮೇಲೆ ಹೇಳಿದ ಪ್ರಸಿದ್ಧವಾದ ಗ್ರಂಥಮಾಲೆಯ ಸಂಪಾದಕರಿಗೆ ಬಹಳವಾಗಿ ಶ್ರಮವನ್ನು ಕೊಟ್ಟ ಗಂಭೀರವಾದ ಸ್ವರೂಪವು ಮೂರ್ತಿವೆತ್ತು ನಮ್ಮ ಕಣ್ಣೆದುರಿಗೆ ಬಂದು ನಿಂತು ಉಜ್ವಲವಾದ ತಮ್ಮ ಪ್ರಕಾಶದ ಪ್ರಭಾವದಿಂದ ನಮ್ಮ ಕಣ್ಣನ್ನು ತೆಗೆಯದಂತೆ ಮಾಡುತ್ತಿದೆ. ಗಾರ್ಫೀಲ್ಡ್ ಚರಿತೆಯು ಪರಿಷತ್ತಿನ ಸಂಪಾದಕ ಮಂಡಲಿಯ ಪ್ರಥಮ ಪ್ರಯತ್ನವಾಗಿರುವುದನ್ನು ನೋಡುವುದರಲ್ಲಿ ಮುಂದಕ್ಕೂ ಹೀಗೆಯೇ ಉತ್ಕೃಷ್ಟ ಗ್ರಂಥಗಳು ಹೊರಡುವುವು ಎಂಬ ಶುಭಸೂಚನೆಯು ತೋರಬರುವುದು. ಭಾಷೆಯ ಪರಿಪಾಕವು ರುಚಿಕರವಾಗಿರುವುದಲ್ಲದೆ ನಡು ನಡುವೆ ಮನೋಹರವಾದ ಭಾವಗಳು ಪುಷ್ಕಳವಾಗಿವೆ. ಮತ್ತೊಂದು ವಿಶೇಷವೇನೆಂದರೆ, ಈ ಕನ್ನಡ ಗ್ರಂಥದ ಕಡೆಯ ಸ್ವಲ್ಪಭಾಗವು ಕರ್ನಾಟಭಾಷಾ ಪದ್ಧತಿಯ ಉತ್ಕೃಷ್ಟವಾದ ಮಾದರಿಯಾಗಿದೆ ಎಂದು ನಾವು ಭಾವಿಸುತ್ತೇವೆ. ಮರಾಠಿಯ ಪುಸ್ತಕದಲ್ಲಿ ಈ ಅಧಿಕಾರ ಸ್ವೀಕಾರ ಮಹೋತ್ಸವವು ಸಂಗ್ರಹವಾಗಿ ಹೇಳಲ್ಪಟ್ಟಿರುವುದು. ಚರಿತ್ರನಾಯಕನ ಶೋಚನೀಯವಾದ ಮರಣ ವೃತ್ತಾಂತವು ಮರಾಠಿಯಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿದೆ. ಕನ್ನಡ ಪುಸ್ತಕದಲ್ಲಿ ಅದನ್ನು ಲಂಬಿಸಿ ಹೇಳಿಲ್ಲ. ಗ್ರಂಥವು ಶೋಕಪರ್ಯವಸಾಯಿಯಾಗುವುದೆಂದು ಸಂಪಾದಕರು ಅಂಜಿದರೋ ತಿಳಿಯದು! ಅಧ್ಯಕ್ಷ ಪದಾರೋಹಣ ವೃತ್ತಾಂತವನ್ನು ಬರೆಯುವಾಗ ಲೇಖಕರ ಹೃದಯವು ಉತ್ಸಾಹ ಭರಿತವಾಗಿ ಉತ್ಕೃಷ್ಟವಾದ ಪ್ರತಿಭೆಯನ್ನು ಅವರು ಪ್ರದರ್ಶಿಸಿರುವರು. ಮರಾಠಿಯಲ್ಲಿಲ್ಲದ ಈ ಉತ್ಕೃಷ್ಟವಾದ ವರ್ಣ

ನೆಯು ಕನ್ನಡ ಪುಸ್ತಕದಲ್ಲಿರುವುದನ್ನು ನೋಡಿ, ನಾವೂ ಕನ್ನಡಿಗರಾದುದರಿಂದ ಉತ್ಸಾಹಭರಿತರಾಗಿರುತ್ತೇವೆ. ಪುಸ್ತಕವೆಲ್ಲವನ್ನೂ ಓದಲು ವಿರಾಮವಿಲ್ಲದವರು ಈ ಕೊನೆಯ ಭಾಗವಾದ ೮-೧೦ ಪುಟಗಳನ್ನಾದರೂ ಓದಿನೋಡಬೇಕೆಂದು ವಾಚಕರಿಗೆ ಸೂಚಿಸುತ್ತೇವೆ. ಆ ಸಂದರ್ಭದಲ್ಲಿ ಅಭಿನವ ಪಂಪನ ವಿಶಾಲವಾದ ನಾಲ್ಕು ಪಂಕ್ತಿಯ ಪದ್ಯಗಳಿಂದ ಒಂದನ್ನು ಸಮಯೋಚಿತವಾಗಿ ಉದ್ಧರಿಸಿದ್ದರೆ ಇನ್ನೂ ಚನ್ನಾಗಿರುತ್ತಿತ್ತು.

ಈ ಪ್ರಸಂಗದಲ್ಲಿ ಆದಿಪುರಾಣಗಳು ಹಳೆಯವಾದವು, ಮಧುರವಾಗಿ ಹೊಸ ಗ್ರಂಥವನ್ನು ತಾನು ಬರೆಯುವೆನೆಂದು ಹೇಳಿ, ಮಧುರ ಕವಿಯು ಪೂರ್ವ ಕನ್ನಡ ಕವಿಗಳನ್ನು ಮನೋಹರವಾದ ರೀತಿಯಲ್ಲಿ ಸ್ಮರಿಸುವಂತೆ, ಪೂರ್ವದ ಮರಾಠಿ ಕವಿಗಳನ್ನು ಸ್ತುತಿಸುವ ಮರಾಠಿ ಮೋರೋಪಂತನ ರಾಮಾಯಣದಲ್ಲಿ ಓದಿದ ಪದ್ಯಗಳು ಕೆಲವು ನಮ್ಮ ನೆನಪಿಗೆ ಬರುತ್ತಿವೆ. ಆದರೆ ಪ್ರಯೋಜನವೇನು ? ಮರಾಠಿಯ ಅರ್ಥವು ಕನ್ನಡದಲ್ಲಿ ಬರುವ ಬಗೆಯು ಹೇಗೆ ? ಆದುದರಿಂದ ಈ ಚಿಕ್ಕ ಪುಸ್ತಕದ ವಿಮರ್ಶವನ್ನು ಇಲ್ಲಿಗೆ ನಿಲ್ಲಿಸಿ ಕನ್ನಡವೂ ಮುಂದಕ್ಕೆ ಹೀಗೆಯೇ ಮರಾಠಿಬಂಗಾಳಿಗಳಿಗೆ ಸರಿಗಟ್ಟುತ್ತ ಬರಲೆಂದು ಹಾರೈಸುತ್ತ ನಮ್ಮ ಲೇಖಣಿಯನ್ನು ಕೆಳಗಿಡುವೆವು.

— — || — —

ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯ

(೧) ಉತ್ತಮ ಪ್ರಬಂಧದ ಬಹುಮಾನ

ನಳ ಸಂವತ್ಸರದ ಅಶ್ವಯುಜ ಮಾಸದ ಪರಿಷತ್ಪತ್ರಿಕೆಯ ೨೯೨ ಮತ್ತು ೨೯೩ ನೆಯ ಪುಟಗಳಲ್ಲಿ ಪ್ರಕಟಿಸಿರುವ ಉತ್ತಮಪ್ರಬಂಧ ಬಹುಮಾನದ ವಿಷಯದಲ್ಲಿ ಇದೇ ವರ್ಷದ ಫೆಬ್ರುವರಿ ೨೫ನೆಯ ತಾರೀಖಿನ ದಿನ ನಡೆದ ಕಾರ್ಯನಿರ್ವಾಹಕ ಮಂಡಲಿಯಲ್ಲಿ -

"೧೯೧೬ ನೆಯ ಇಸವಿ ಅಕ್ಟೋಬರು ೨೨ ನೆಯ ತಾರೀಖಿನಲ್ಲಿ ಪ್ರಚುರವಾದ ಉತ್ತಮ ಪ್ರಬಂಧ ಬಹುಮಾನದ ನೋಟೀಸಿನಲ್ಲಿ ಕಾಣಿಸಿರುವ "ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕರೂಪಗಳನ್ನು ಏಕರೂಪಕ್ಕೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು" ಎಂಬ ವಿಷಯವನ್ನು ಕುರಿತು ಬಂದ ಹತ್ತು ಲೇಖಗಳ ಪೈಕಿ ಇದೇ ಫೆಬ್ರುವರಿ ೨೧ನೆಯ ತಾರೀಖಿನಲ್ಲಿ ಬಂದ ಲೇಖನವು ನಿಯಮಿಸಲ್ಪಟ್ಟ ಕಾಲಾನಂತರ, ಎಂದರೆ ಇದೇ ಜನವರಿ ೩೧ ನೆಯ ತಾರೀಖಿನ ಅನಂತರ ಬಂದುದರಿಂದ ಅದನ್ನು ಲೇಖಕರಿಗೇನ ವಾಪಸ್ಸು ಕಳುಹಿಸಬೇಕೆಂದೂ, ಮಿಕ್ಕ ಒಂಬತ್ತು ಲೇಖನಗಳನ್ನು ಪರೀಕ್ಷಿಸಿ ಬಹುಮಾನವನ್ನು ನಿರ್ಧರಿಸುವುದಕ್ಕಾಗಿ

೧ ಮ|| ರಾ|| ರಾಜಮಂತ್ರ ಪ್ರವೀಣ ಎಚ್ ವಿ. ನಂಜುಂಡಯ್ಯನವರು, ಎಮ್ ಎ, ಎಮ್ ಎಲ್, ಸಿ. ಐ ಇ

೨ ,, ಬೆನಗಲ್ ರಾಮರಾಯರವರು, ಎಂ ಎ, ಎಲ್ ಎಲ್ ಬಿ

೩ ,, ವಿ ಬಿ ಆಲೂರ್‌ರವರು, ಬಿ ಎ., ಎಲ್ ಎಲ್ ಬಿ

೪ ,, ಬಿ ಎಮ್ ಶ್ರೀಕಂಠಯ್ಯನವರು, ಎಮ್ ಎ, ಬಿ ಎಲ್

ಇವರುಗಳನ್ನೊಳಗೊಂಡಿರುವ ಒಂದು ಉಪಸಮಿತಿಯನ್ನು ಏರ್ಪಾಟುಮಾಡುವುದೆಂದೂ, ಲೇಖನಗಳನ್ನು ಪರೀಕ್ಷಿಸಿ ಬಹುಮಾನವನ್ನು ನಿರ್ಧರಿಸಲು ಪ್ರತಿಯೊಬ್ಬ ಮೆಂಬರಿಗೂ ಐದು ದಿವಸಗಳ ವ್ಯವಧಾನವನ್ನು ಕೊಟ್ಟು, ೧೯೧೭ ನೆಯ ಇಸವಿ ಮಾರ್ಚಿ ೩೧ ನೆಯ ತಾರೀಖಿನ ಒಳಗಾಗಿ ಪರೀಕ್ಷೆಯ ಫಲಿತಾಂಶವನ್ನು ಕಳುಹಿಸಿಕೊಡುವಂತೆ ಅವರನ್ನು ಕೇಳಿಕೊಳ್ಳತಕ್ಕದೆಂದೂ, ಮೇಲೆ ಕಾಣಿಸಿರುವ ಕ್ರಮದಲ್ಲಿ ಉಪಸಮಿತಿಯವರು ಒಬ್ಬರು ಮತ್ತೊಬ್ಬರಿಗ ಲೇಖನಗಳನ್ನು ಕಳುಹಿಸತಕ್ಕದೆಂದೂ ನಿರ್ಣಯಿಸಲ್ಪಟ್ಟಿತು

(೨) ಗಾರ್‌ಫೀಲ್ಡ್ ಚರಿತೆ

ಪುಷ್ಯಮಾಸದ ನಮ್ಮ ಪತ್ರಿಕೆಯ ೨೯೨ ನೆಯ ಪುಟದಲ್ಲಿ ಸೂಚಿಸಿರುವ ಗಾರ್‌ಫೀಲ್ಡ್ ಚರಿತೆಯನ್ನು ಮುದ್ರಿಸುವ ವಿಷಯದಲ್ಲಿ —

'' ಮ|| ರಾ|| ವೈ ಕ ರಾಮಚಂದ್ರರಾಯರವರು ರಚಿಸಿರುವ ಗಾರ್‌ಫೀಲ್ಡ್ ಚರಿತೆಯನ್ನು ಸಂಪಾದಕ ಮಂಡಲಿಯವರು ಪರಿಷ್ಕರಿಸುವಂತೆ ಸದ್ಯಕ್ಕೆ ೧೦೦೦ ಪ್ರತಿಗಳನ್ನು ಮುದ್ರಿಸತಕ್ಕದು, ಮತ್ತು ಹಾಗ ಮುದ್ರಿಸುವುದಕ್ಕೆ ೩೦೦ ರೂಪಾಯಿಗಳು ಮುಂಜೂರುಮಾಡತಕ್ಕದು ಎಂದು ಇದೇ ಫೆಬ್ರವರಿ ೨೫ ನೆಯ ತಾರೀಖಿನಲ್ಲಿ ನಡೆದ ಕಾರ್ಯನಿರ್ವಾಹಕ ಮಂಡಲಿಯಲ್ಲಿ ನಿರ್ಣಯವಾಯಿತು

(೩) ಪಂಡಿತರಿಗೆ ಕೊಡುವ ಬಹುಮಾನ.

ಪರಿಷತ್ತಿಗೆ ಮ|| ರಾ|| ಸರಳಕವಿ ಸೂರಿ ಪಂಡಿತ ರಾಜಗೋಪಾಲ ಚಕ್ರವರ್ತಿಯವರು ಇದುವರೆಗೂ ಮಾಡಿರುವ ಸಹಾಯಕ್ಕಾಗಿ ಅವರಿಗೆ ಕೊಡತಕ್ಕ ಬಹುಮಾನ ರೂಪವಾದ ಮೌಲ್ಯವನ್ನು ನಿರ್ಧರಿಸುವ ವಿಷಯದಲ್ಲಿ -

'೧೯೧೭ ನೆಯ ಇಸವಿ ಮಾರ್ಚಿಗ ಅಂತ್ಯವಾಗುವ ಒಂದು ವರ್ಷಕ್ಕಾಗಿ ಮ|| ರಾ|| ಪಂಡಿತ ರಾಜಗೋಪಾಲ ಚಕ್ರವರ್ತಿಗಳವರಿಗೆ ಬಹುಮಾನರೂಪವಾಗಿ ೨೦೦ ರೂಪಾಯಿಗಳನ್ನು ಕೊಡತಕ್ಕದು'' ಎಂದು ೨೫-೨ ೧೭ ರಲ್ಲಿ ನಡೆದ ಮಂಡಲಿಯಲ್ಲಿ ನಿರ್ಣಯವಾಯಿತು

(೪) ಪರಿಷತ್ತಿನ ಪಂಡಿತರು.

೧೯೧೭ ನೆಯ ಜುಲೈ ೯ನೆಯ ತಾರೀಖಿನಲ್ಲಿ ನಡೆದ ಕಾರ್ಯ ನಿರ್ವಾಹಕ ಮಂಡಲಿಯಲ್ಲಿ ಆದ ೫ ನೆಯ ನಿರ್ಣಯಾನುಸಾರವಾಗಿ ಮ|| ಪಂಡಿತ ಎಂ ಕೃಷ್ಣಪ್ಪನವರಿಗೆ ೨೦ ರೂಪಾಯಿ ಮಾಸಾಶನವನ್ನು ಕೊಡುವ ವಿಷಯದಲ್ಲಿ —

"ಮ|| ರಾ|| ಪಂಡಿತ ಎಂ ಕೃಷ್ಣಪ್ಪನವರು ಪರಿಷತ್ತಿನ ಕೆಲಸಕ್ಕೆ ಸೇರಿದ ೧೯೧೭ ನೆಯ ಇಸವಿ ನವಂಬರು ೧೦ ನೆಯ ತಾರೀಖಿನ ಲಾಗಾಯಿತು ತಿಂಗಳು ೧ಕ್ಕೆ ೨೦ ರೂಪಾಯಿಗಳ ಪ್ರಕಾರ ಸಂಬಳವನ್ನು ಕೊಡತಕ್ಕದು" ಎಂದು ೨೫-೨ ೧೯೧೭ ರಲ್ಲಿ ನಡೆದ ಮಂಡಲಿಯಲ್ಲಿ ನಿರ್ಣಯವಾಯಿತು

(೫) ನೂತನ ಸದಸ್ಯರುಗಳ ಪಟ್ಟಿ.

ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಎರಡನೆಯ ವರ್ಷದ ಕೊನೆಯ ಮೂರು ತಿಂಗಳುಗಳಲ್ಲಿ ಎಂದರೆ ಜನವರಿಯಿಂದ ಮಾರ್ಚಿ ತಿಂಗಳಿನ ಅಂತ್ಯದವರೆಗೆ ಸೇರಿರುವ ಸದಸ್ಯರುಗಳ ಪಟ್ಟಿ

ಆಜೀವನ ಸದಸ್ಯರು

ಹೆಸರು ಮತ್ತು ವಿಳಾಸ	ಸೇರಿದ ತಾರೀಖು
೧ ಮ|| ರಾ|| ಪಿ ಬಿ ಧಾರವಾರಕರ ಬಿ ಎ ಉಪಾಧ್ಯಾಯರು, ವಿಕ್ಟೋರಿಯಾ ಹೈಸ್ಕೂಲು, ಧಾರವಾಡ	೨೫-೨-೧೯೧೭

ದ್ವಿತೀಯ ವರ್ಗದ ಸಾಧಾರಣ ಸದಸ್ಯರು

ಹೆಸರು ಮತ್ತು ವಿಳಾಸ	ಸೇರಿದ ತಾರೀಖು
೧ ಮ|| ರಾ|| ಸಿ ಆರ್. ಕೃಷ್ಣರಾಯರವರು, ಡಿಸ್ಟ್ರಿಕ್ಟ್ ಮುನ್ಸೀಫ್ ಪುತ್ತೂರು (ದ ಕನ್ನಡ)	೨೫-೨-೧೯೧೭
೨ ಮ|| ರಾ|| ಜಿ ಕೃಷ್ಣ ಶಾಸ್ತ್ರಿಗಳವರು ಸಹಾಯೋಪಾಧ್ಯಾಯರು ಟ್ರೈನಿಂಗ್ ಕಾಲೇಜು ಮೈಸೂರು	,,
೩ ಸಿ ಅನಂತ ಪಶುಪತ್ಯಾಚಾರ್ಯರವರು, ಕತ್ವಾಡಿಪುರಂ ಅಗ್ರಹಾರ, ಮೈಸೂರು	,,

೪ ಕೆ. ಜಿ. ವೆಂಕಟೇಶಯ್ಯನವರು, ಜಮೀನುದಾರರು ಮತ್ತು ಜೋಡಿದಾರರು, ಆರೂಢಿ, ದೊಡ್ಡ ಬಳ್ಳಾಪುರದ ತಾಲ್ಲೂಕು ೨೫-೨-೧೭

೫ ಶಿವಭಟ್ಟ ರಾಮಾಭಟ್ಟರವರು, ಸಂಸ್ಕೃತಶಾಲಾಧ್ಯಾಪಕರು, ಕೆಕ್ಕರ್, ಹೊನ್ನಾವರದ ತಾಲ್ಲೂಕು. ,,

೬ ಎಸ್. ರಾಘವೇಂದ್ರರಾವ್ ಅವರು, ವಿದ್ಯಾಭ್ಯಾಸದ ಇಲಾಖೆಯ ಇನಸ್ಪೆಕ್ಟರ್ ಜನರಲ್‌ರವರಿಗೆ ಟೆಕ್ನಿಕಲ್ ಅಸಿಸ್ಟೆಂಟರು, ಬೆಂಗಳೂರು ,,

(೬) ಪರಿಷತ್ತಿನ ಚಂದಾಹಣದ ಪಟ್ಟಿ

೧೯೧೭ ನೆಯ ಇಸವಿ ಜನವರಿ ೧ ನೆಯ ತಾರೀಖಿನಿಂದ ಮಾರ್ಚಿ ತಿಂಗಳ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾ ಹಣದ ಪಟ್ಟಿ

(ತಾರೀಖು)	ಕೊಟ್ಟವರ ಹೆಸರು	ಮೊಬಲಗು
೨-೧-೧೭	ಮ|| ರಾ|| ಜ ಕೃಷ್ಣಶಾಸ್ತ್ರಿಗಳವರು	೪—೦—೦
೪-೧-೧೭	,, ಸಿ ರಾಮರಾಯರವರು	೫—೦—೦
೫-೧-೧೭	,, ಎ ಬಿ ಧಾರವಾಡ್‌ಕರ್ ಬಿ ಎ ಯವರು	೩೮—೦—೦
೬-೧-೧೭	,, ವೈ ಕೆ ರಾಮಚಂದ್ರರಾಯರವರು ಬಿ. ಎ ಎಲ್ ಸಿ ಇ,	೫—೦—೦
,,	,, ಕೆ ಜಿ ವೆಂಕಟೇಶಯ್ಯನವರು	೧—೦—೦
೬-೧-೧೭	ಮ|| ರಾ|| ವೈ ನರಸಿಂಗರಾಯರು ಬಿ ಎ, ಬಿ ಎಲ್	೫—೦—೦
೩-೨-೧೭	,, ಶಿವಭಟ್ಟ ರಾಮಾಭಟ್ಟರವರು	೪—೦—೦
೮-೨-೧೭	,, ಸಿ ರಾಮರಾಯರವರು	೭—೦—೦
೧೩-೨-೧೭	,, ವೈ ಕೆ ರಾಮಚಂದ್ರರಾಯರವರು ಬಿ. ಎ, ಎಲ್ ಸಿ ಇ	೫—೦—೦
,,	,, ವೈ ನರಸಿಂಗರಾಯರು ಬಿ ಎ, ಬಿ ಎಲ್	೫—೦—೦
,,	,, ಹಳಕಟ್ಟೆ ವೆಂಕಟರಮಣಯ್ಯನವರು	೫—೦—೦
೨-೩-೧೭	,, ಸಿ ರಾಮರಾಯರವರು	೩—೦—೦

೨-೩-೧೭	,,	ಮೈ ಕೆ ರಾಮಚಂದ್ರರಾಯರವರು ಬಿ ಎ, ಎಲ್ ಸಿ ಇ	೫-೦-೦
,,	,,	ಮೈ ನರಸಿಂಗರಾಯರವರು ಬಿ ಎ ಬಿ. ಎಲ್	೫-೦-೦
೧೨-೩-೧೭	,,	ಆರ್ ರಘುನಾಥ ರಾಯರವರು ಬಿ ಎ	೨೫-೦-೦
೧೯-೩-೧೭	,,	ಎಮ್ ಎ ರಾಮಾನುಜಯ್ಯಂಗಾರ್	೧೦-೦-೦
೨೩-೩-೧೭	,,	ಎಮ್ ಗೋಪಾಲರಾಯರವರು	೪-೮-೦
೨೭-೩-೧೭	,,	ಚಿಂತಾಮಣಿ ಅವಧಾನಿಯವರು	೪-೦-೦
೨೯-೩-೧೭	,,	ಸಿ ಎಸ್ ಅಚ್ಯುತರಾಯರವರು ಎಲ್ ಎಮ್ ಎಸ್	೨೫-೦-೦
,,	,,	ಮೈ ಕೆ ರಾಮಚಂದ್ರರಾಯರವರು ಬಿ ಎ, ಎಲ್ ಸಿ ಇ	೫-೦-೦
,,	,,	ಮೈ ನರಸಿಂಗರಾಯರವರು ಬಿ ಎ ಬಿ ಎಲ್	೫-೮-೦
		ಒಟ್ಟು	೧೭೦-೦-೦
		ಹಿಂದೆ ವಸೂಲಾದ ಮೊತ್ತ	೧೪೭೬-೮-೦
			೧೬೪೬-೮-೦

(೭) ಪರಿಷತ್ಪತ್ರಿಕೆಗೆ ನಳಸಂವತ್ಸರಕ್ಕೆ ಚಂದಾದಾರರಾಗಿರುವವರ ವಿವರ

೧	೨೦-೧-೧೭	ಸೆಕ್ರೆಟರಿ ರೀಡಿಂಗ್ ರೂಂ ಚಿಕ್ಕನಾಯ್ಕನಹಳ್ಳಿ	೩-೦-೦
೨	೫-೨-೧೭	ರೀಡಿಂಗ್ ರೂಂ ಮತ್ತು ಲೈಬ್ರರಿ ಹೊಳೇನರಸೀಪುರ	೩-೦-೦
೩	೯-೨-೧೭	ಮ|| ರಾ|| ಸಿ ಆರ್ ರೆಡ್ಡಿಯವರು ಎಂ ಎ	೩-೦-೦

ಮೈಸೂರು

೪	೧೩-೩-೧೭	ಸಕ್ರೆಟರಿ, ಮೈಸೂರು ಸರ್ಕಾರದ ವಿದ್ಯಾಭ್ಯಾಸ ಮತ್ತು ವ್ಯವಸಾಯದ ಇಲಾಖಾ, ಬೆಂಗಳೂರು	೩-೦-೦
೫	೨೨-೩-೧೭	ಮ|| ರಾ|| ಕೆ ವೆಂಕಟಸ್ವಾಮಯ್ಯನವರು ಅಡ್ವೊಕೇಟ್, ನಂಜನಗೂಡು	೩-೦-೦
೬	೨೬-೩-೧೭	ಮ|| ರಾ|| ಬಿ. ಎಮ್ ಶ್ರೀಕಂಠಯ್ಯನವರು ಎಂ ಎ., ಮೈಸೂರು	೩-೦-೦

(೮) ಪರಿಷತ್ಪತ್ರಿಕೆಯನ್ನು ಕೊಂಡುಕೊಂಡವರಿಂದ ಬಂದ ಮೊಬಲಗು

೨೪-೨-೧೭ ಮ|| ರಾ|| ಎಸ್ ೬ ಪರಿವ್ರಾಜಕರವರು ೧—೨—೦

(೯) ಪರಿಷತ್ತಿನ ಪುಸ್ತಕ ಭಂಡಾರ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಉಚಿತವಾಗಿ ಕಳುಹಿಸಿರುವ ಗ್ರಂಥಗಳ ಮತ್ತು ದಾತೃಗಳ ಪಟ್ಟಿ

ಗ್ರಂಥಗಳ ಹೆಸರು	ಗ್ರಂಥಕರ್ತರ ಹೆಸರು	ದಾತೃಗಳ ಹೆಸರು
೧ ವಿದ್ವಜ್ಜನಕೋರ ಚಂದ್ರಿಕೆ	ಸುಬ್ಬಾಶಾಸ್ತ್ರಿಗಳವರು	ಮ|| ರಾ|| ಪಂಡಿತ ಎಂ ಕೃಷ್ಣಪ್ಪನವರು
೨ ಸ್ತುತಿತ್ರಯಮ್ (ಸಂಸ್ಕೃತ)	ಗುಂಡಶಾಸ್ತ್ರಿ	,,
೩ ಸುಶೀಲಾಪರಿಣಯವು	ಎಚ್ ಚಿದಂಬರಯ್ಯನವರು	,,
೪ ನೀತಿಸಾರ	,,	,,
೫ ಸೂಕ್ತಿತಾರಾವಳಿ	ಸೀತಾರಾಮಶಾಸ್ತ್ರಿಗಳವರು	,,
೬ ಮರುನ್ನಂದನ ಶತಕಂ	ಆರ್ ಟಾಟಾ, ಎಮ್ ಎ, ಎಲ್ ಟಿ	,,
೭ ವಾಗ್ಭೂಷಣದ ಒಂದು ಸಂಪುಟ (ಮಾಸಪತ್ರಿಕೆಯಿಂದ)		,,
ಜಿನದತ್ತರಾಯ ಚರಿತ್ರೆ	ಬ್ರಹ್ಮಪ್ಪ ಪದಮಪ್ಪ ಪಟೀಲ್	ಮ|| ರಾ|| ನಗರದ ಬ್ರಹ್ಮಯ್ಯನವರು ಹೊಳಲ್ಕೆರೆ
೯ ಬಿಜ್ಜಳರಾಯ ಪುರಾಣವೆಂಬ ಉತ್ತಮವಾದ ಶೃಂಗಾರ ಕಾವ್ಯ	ಚಂದ್ರಸಾಗರವರ್ಣಿಗಳು	,,

(೧೦) ವಿಮರ್ಶೆಗಾಗಿ ಕರ್ಣಾಟಕ ಸಾಹಿತ್ಯ ಪರಿಷತ್ತು ಕಾರ್ಯಾಲಯಕ್ಕೆ ಬಂದಿರುವ ಪುಸ್ತಕಗಳ ಪಟ್ಟಿ

ಪುಸ್ತಕದ ಹೆಸರು	ಗ್ರಂಥಕರ್ತರ ಹೆಸರು
೧ ಬುದ್ಧಿಯ ಮಾತು	ಎಂ ಎನ್ ಹರ್ಡೀಕರ್
೨ ಶಾಲೆಯಓದು	ರಾಮಬ್ರಹ್ಮ, ಬಿ ಎ, ಎಲ್, ಟಿ.

——o:——

ಗ್ರಂಥವಿಮರ್ಶೆ

ಸುಮುಖೀ ವಿಜಯಂ:— ಈ ಭಜನ ಗ್ರಂಥವು ಸ್ತ್ರೀಯರ ಉಪಯೋಗಕ್ಕಾಗಿ ರಚಿಸಲ್ಪಟ್ಟು ಕರ್ಣಾಟಕ ನಂದಿನಿಯ ಪ್ರಥಮ ಸನ್ಮಾನ ಪುಸ್ತಕವಾಗಿ ನಂಜನಗೂಡು ಸತೀಹಿತೈಷಿಣೀ ಮಾತೃಮಂದಿರದಲ್ಲಿ ಪ್ರಕಟಿತವಾಗಿದೆ. ಕುಂಜರತಿಯಾದ ಸುಮುಖಿಯೆಂಬವಳ ಪಾತಿವ್ರತ್ಯ ಮಹಿಮೆಯೂ ಸ್ತ್ರೀಧರ್ಮವೂ ಉಕ್ತವಾಗಿದೆ. ಭಜನೆಗೆ ಅನುಕೂಲವಾಗುವಂತೆ ಅಲ್ಲಲ್ಲಿ ಹಾಡುಗಳೂ ಇವೆ. ಶತ್ರುಕ್ಷವಶ, ಜಪತಪಾದಿ, ಮೊದಲಾದ ಕೆಲವು ಭಾಷಾದೋಷಗಳೂ ಅಲ್ಲಲ್ಲಿ ಛಂದೋದೋಷವೂ ಕಾಣಬರುವುವು. ಈ ನ್ಯೂನತೆಗಳು ದ್ವಿತೀಯ ಮುದ್ರಣದಲ್ಲಿ ಕ್ರಮಪಡುವುವೆಂದು ನಂಬಿರುವೆವು. ಇದರ ಬೆಲೆ ೭ ಆಣೆ.

ಸತೀಸ್ವರಕ್ಷಿಣಿ ಅಥವಾ ಸಭಾ ಭಾಗ I — ಇದು ನಂಜನಗೂಡಿನಲ್ಲಿ ಪ್ರಕಟವಾಗುವ ಸತೀಹಿತೈಷಿಣೀ ಗ್ರಂಥಮಾಲೆಯ ಎರಡನೆಯ ಪುಸ್ತಕ. ಇದರಲ್ಲಿ ಕಥೆಯ ಸ್ವಲ್ಪಭಾಗವು ಮಾತ್ರ ಉಕ್ತವಾಗಿದೆ. ಉಳಿದ ಕಥೆಯನ್ನು ''ಪರಾಗಿಣಿ' ಎಂಬ ಮತ್ತೊಂದು ಗ್ರಂಥದಲ್ಲಿ ಹೇಳಿರುವುದಾಗಿ ಈ ಗ್ರಂಥದಿಂದ ತಿಳಿಯಬರುತ್ತದೆ. ಈ ಗ್ರಂಥದ ಮೊದಲಲ್ಲಿರುವ ನಿವೇದನದಲ್ಲಿ ಗ್ರಂಥಕರ್ತ್ರಿಯರಾದ ಶ್ರೀಮತಿ ತಿರುಮಲಾಂಬೆಯವರು ''ಅನೇಕರು 'ಸ್ವಚರಿತೆ' ಯೆಂದು ಭ್ರಾಂತರಾಗಬಹುದು. ಆದರೆ ಈ ಸ್ತ್ರೀಯು ಸಭೆಯಷ್ಟು ಯೋಗ್ಯತೆಯುಳ್ಳವಳೆಂದು ಮಾತ್ರ ಹೇಳಲಾರ'' ಎಂದು ಹೇಳಿಕೊಂಡಿರುವರು. ಗ್ರಂಥದಲ್ಲಿ ಕಾಣಬರುವ ತಪ್ಪುಗಳನ್ನು ನೇರ್ಪು ಮಾಡುವ ಶುದ್ಧಪತ್ರವನ್ನು ಹಾಕದೆ ಅನೇಕಕಾರಣಗಳಿಂದ ಅಲ್ಲಲ್ಲಿ ಬಿದ್ದಿರುವ ಮುದ್ರಣಾದಿ ದೋಷಗಳನ್ನು ವಾಚಕರೇ ತಿದ್ದಿಕೊಳ್ಳಬೇಕೆಂಬ ಅಭಿಪ್ರಾಯವನ್ನು ಶ್ರೀಮತಿಯವರು ಪ್ರಕಟಿಸುವುದಕ್ಕಿಂತಲೂ ಶುದ್ಧಿಪತ್ರವನ್ನು ಕೊಟ್ಟರೆ ವಾಚಕರಲ್ಲಿ ಬಾಲರಿಗೂ ಬಾಲೆಯರಿಗೂ ಸಾಮಾನ್ಯರಿಗೂ ಬಹೂಪಕೃತಿಯಾದೀತು. ಪುಸ್ತಕದ ಬೆಲೆ ೦-೮-೦. ಗ್ರಂಥವು ನಂಜನಗೂಡಿನಲ್ಲಿ ಇರುವ ಸತೀ ಹಿತೈಷಿಣೀ ಗ್ರಂಥಮಾಲೆಯ ಆಫೀಸಿನಲ್ಲಿ ದೊರೆವುದು. ಬೇಕಾದವರು ಅಲ್ಲಿಂದ ಪುಸ್ತಕವನ್ನು ಪಡೆಯಬಹುದು.

ವಿಕ್ರಮ:— ಇದು ಸತೀಹಿತೈಷಿಣೀ ಗ್ರಂಥಮಾಲೆಯ ಎಂಟನೆಯ ಪುಸ್ತಕವು. ಇದನ್ನು ಗ್ರಂಥಕರ್ತ್ರಿಯರಾದ ಶ್ರೀಮತಿ ತಿರುಮಲಾಂಬೆಯವರು ತಮ್ಮ ತಂದೆಯವರಿಗೆ ಸಮರ್ಪಿಸಿದಾರೆ. ಗ್ರಂಥದ ಮೊದಲಲ್ಲಿ ಗ್ರಂಥಕರ್ತ್ರಿಯರ ತಂದೆಯವರ ಭಾವ ಚಿತ್ರವಿದೆ. ಮೂರು ಭಾಗಗಳನ್ನೊಳಕೊಂಡಿರುವ ಈ ಸತ್ಯೋದಾರಿಯ ಕಥೆಯು ನವರಸಭರಿತವಾಗಿಯೂ ನೀತಿ ವಿಷಯ ಗರ್ಭಿತವಾಗಿಯೂ ಇದೆ. ಸ್ತ್ರೀಯರಿಗೆ ಬೇಕಾದ ಸಂ

ಗತಿಗಳಿಂದ ಪೂರ್ಣವಾಗಿದೆ. ಬೇಸಿಗೆ, ಚಂದ್ರೋದಯ ಮೊದಲಾದ ಸಮಯೋಚಿತ ವರ್ಣನೆಗಳು ಉಚಿತವಾಗಿಯೂ ಸಕಲರ ಗ್ರಹಣೆಗೆ ಶಕ್ಯವಾಗಿಯೂ ಇವೆ. ಭಾಷೆಯು ಶುದ್ಧವಾಗಿಯೂ ಶೈಲಿಯು ಸರಳವಾಗಿಯೂ ಇರುವುದೆಂದು ಹೇಳಬಹುದು. ಇದರಲ್ಲಿರುವ ವಾಕ್ಯಗಳು ಚಿಕ್ಕವಾಗಿರುವುದರಿಂದ ಬಾಲಕರ ಮತ್ತು ಬಾಲೆಯರ ಪಠನೆಗೆ ಅನುಕೂಲಿಸುವುದು. ಮೈಸೂರ್ ಕ್ರಾಸ್ ಪ್ರೆಸ್ಸಿನಲ್ಲಿ ಉತ್ತಮ ಪತ್ರದ ಮೇಲೆ ಅಂದವಾಗಿ ಮುದ್ರಿತವಾಗಿರುವ ೨೪೨ ಪುಟಗಳನ್ನುಳ್ಳ ಈ ಪುಸ್ತಕದ ಬೆಲೆ ೧೨ ಆಣೆ ಮಾತ್ರ. ಸರ್ವರೂ ನಂಜನಗೂಡಿನಲ್ಲಿರುವ ಗ್ರಂಥಕರ್ತ್ರಿಯರಿಗೆ ಬರೆದುಕೊಂಡು ಪುಸ್ತಕವನ್ನು ಪಡೆದು ಗ್ರಂಥಕರ್ತ್ರಿಯವರ ಶ್ರಮವನ್ನು ಸಾರ್ಥಕಗೊಳಿಸಬಹುದು.

ಚಂದ್ರವದನಾ:— ಇದು ಸತೀಹಿತೈಷಿಣೀ ಗ್ರಂಥಮಾಲೆಯ ೯ನೆಯ ಪುಸ್ತಕವು. ಇದು ನಾಟಕರೂಪದಲ್ಲಿ ಬರೆಯಲ್ಪಟ್ಟಿದೆ. ಇದನ್ನು ಸಮೂಲಾಗ್ರವಾಗಿ ನೋಡುವಲ್ಲಿ ದೋಷಗಳೆಂದು ನಮಗೆ ಕಾಣಬಂದ ಕೆಲವನ್ನು ಸೂಚಿಸುತ್ತೇನೆ. ಬುದ್ಧೀಂದ್ರಿಯ ಸಹಾಯದಿಂದ (ಪು ೭) ಸ್ಥೈತಿಕ ಶಿಕ್ಷಣಾಕ್ಕೊಳಪಟ್ಟ (ಪು ೧೨) ಮತ್ತು, ನಾರಸಿಂಹ (ಪು ೧೧) ಬುದ್ಧೀಂದ್ರಿಯಕ್ಕೆ (ಪುಟ ೧೬) ಸ್ತ್ರೀವರ್ಗವು ತಮ್ಮ ಸತೀಧರ್ಮದಲ್ಲಿ ತಾವು ಕೃತಾರ್ಥರಾಗಲಾರರು (ಪು ೧೮) ಸಮಂತ್ರಣೋತ್ಸುಕಾ ವಿಪ್ರಾ (ಪು ೨೯) ಇಂತಹ ನ್ಯೂನತೆಗಳು ಪರಿಹಾರವಾದರೆ ವಾಚಕರ ಸಂತೋಷವು ದ್ವಿಗುಣಿಸುವುದರಲ್ಲಿ ಸಂಶಯವಿಲ್ಲ. ಐದಂಕಗಳಿಂದ ಕೂಡಿದ ಈ ನಾಟಕದ ಕಥಾಸಾರಾಂಶವು ಗ್ರಂಥದ ಮೊದಲು ಉಕ್ತವಾಗಿದೆ. ಗ್ರಂಥವು ನಂಜನಗೂಡಿನಲ್ಲಿರುವ ಸತೀಹಿತೈಷಿಣೀ ಗ್ರಂಥಮಾಲೆಯ ಆಫೀಸಿನಲ್ಲಿ ೧೦ ಆಣೆಯ ಬೆಲೆಗೆ ದೊರೆವುದು.

ಸಚಿತ್ರ ಸಾವಿತ್ರೀ ಸತ್ಯವಾನ:— ಧಾರವಾಡ ಟ್ರೈನಿಂಗ್ ಕಾಲೇಜ್ ಪ್ರಾಕ್ಟಿಸಿಂಗ್ ಸ್ಕೂಲಿನ ಹೆ. ಮಾ. ಶ್ರೀ|| ನಾರಾಯಣ ವೆಂಕಟೇಶ ಕುರಡಿಯವರು ಇದನ್ನು ಎರಡು ಮೂರು ಬಂಗಾಳಿಯ ಗ್ರಂಥಗಳ ಆಧಾರದ ಮೇಲೆ ಬರೆದಿರುವಂತೆ ತಿಳಿಯಬರುತ್ತದೆ. ಇದು ವಂಗೀಯ ಪ್ರಬಂಧದ ಶೈಲಿಯನ್ನು ಅನುಸರಿಸಿರುವುದು. ಇದರ ವಿಷಯದಲ್ಲಿ ಕೆಲವು ಮಂದಿ ಕರ್ಣಾಟಕಾಂಗ್ಲ ವಿದ್ವಾಂಸರು ತಮ್ಮ ತಮ್ಮ ಸದಭಿಪ್ರಾಯಗಳನ್ನು ಸೂಚಿಸಿರುವರು. ಗ್ರಂಥಕರ್ತರು ತಮ್ಮ ಬರೆವಣಿಗೆಯಲ್ಲಿ ಮರಾಟಿಯ ಮಾರ್ಗಗಳನ್ನು ಕೂಡಿದ ಮಟ್ಟಿಗೆ ಸರಿಸದೆ ಬರೆದಿರುವುದಕ್ಕೆ ಸಂತೋಷಪಡಬೇಕಾಗಿದೆ. ಇದುವರೆಗೆ ಪ್ರಚಾರದಲ್ಲಿ ಇರುವ ಪದ್ಯ ಸಾವಿತ್ರೀ ಚರಿತೆಯೋ ಪಂಡಿತ ಪಾಮರರೆಲ್ಲರಿಂದಲೂ ಪಾಠಕ್ಕೆ ಉಪಯೋಗಿಸಲ್ಪಡುತ್ತಿದ್ದುದು. ಇದು ಗದ್ಯಗ್ರಂಥವಾದುದರಿಂದ ಬಹುಜನದ ಉಪಯೋಗಕ್ಕೆ ಬರುವುದರಲ್ಲಿ ಸಂಶಯವು ಕಾಣುವುದಿಲ್ಲ. ಪಾರಾಯಣವನ್ನು ಮಾಡಿದರೆ ಮನುಷ್ಯನು ಕೃತಕೃತ್ಯನಾಗುವನೆಂಬ ಫಲಿತಾರ್ಥವುಳ್ಳ "ಸಾವಿತ್ರೀ ಸತ್ಯ

ಧ್ಯಾನ'' ಎಂಬೀಗ್ರಂಥದ ಕಥಾಸಾರಾಂಶವನ್ನು ತಿಳಿಯುದವರು ನಮ್ಮೀಭಾರತ ಭೂಮಿಯಲ್ಲಿ ವಿರಳವಾದುದರಿಂದ ಕಥೆಯ ವಿಚಾರವನ್ನು ನಾವು ಹೇಳಿ ತಿಳಿಸಬೇಕಾಗಿಲ್ಲ. ಗ್ರಂಥವು ಉತ್ತಮ ಪತ್ರದ ಮೇಲೆ ಸುಂದರಾಕ್ಷರಗಳಿಂದ ಮುದ್ರಿತವಾಗಿ ಕರ್ನಾಟಕ ಹಿತೈಷಿಣೀ ಗ್ರಂಥಮಾಲೆಯಲ್ಲಿ ಪ್ರಥಮ ಪುಷ್ಪವಾಗಿ ಗ್ರಥಿತವಾಗಿದೆ ಇದರ ಭಾಷೆಯು ಶುದ್ಧವಾಗಿರುವುದು ತಕ್ಕ ಚಿತ್ರಗಳು ಈ ಗ್ರಂಥದೊಳಗೆ ಅಲ್ಲಲ್ಲಿ ರಮಣೀಯವಾಗಿರುವುವು ಇದರ ಬೆಲೆ ೧೨ ಆಣೆ ಸರ್ವರೂ ಗ್ರಂಥಕರ್ತರಿಂದ ಪುಸ್ತಕವನ್ನು ಪಡೆದು ಗ್ರಂಥಕರ್ತರನ್ನು ಪ್ರೋತ್ಸಾಹಿಸಬಹುದು.

ಶಾಲೆಯ ತೋಟ:—ಈ ಗ್ರಂಥದ ಆದಿಯಲ್ಲಿ ಧಾರವಾಡ ಟ್ರೈನಿಂಗ್ ಕಾಲೇಜಿನ ಶಾಲೆಯ ತೋಟದ ಚಿತ್ರವು ಕೊಡಲ್ಪಟ್ಟಿರುವುದು ಗ್ರಂಥದ ಪ್ರಥಮಭಾಗದಲ್ಲಿ ಗ್ರಂಥಕರ್ತರು ಶಾಲೆಯತೋಟಕ್ಕೂ ಮಕ್ಕಳ ಶಿಕ್ಷಣಕ್ಕೂ ಇರುವ ಸಂಬಂಧವನ್ನು ವಿಚಾರಮಾಡಿರುತ್ತಾರೆ ಎರಡನೆಯ ಭಾಗದಲ್ಲಿ ತೋಟದ ಸಂಬಂಧವಾದ ಹಲವು ಸೂಚನೆಗಳು ಉಕ್ತವಾಗಿವೆ ಪಾಠಶಾಲೆಗಳ ಉಪಾಧ್ಯಾಯರಿಗೂ ನಾರ್ಮಲ್ ಸ್ಕೂಲಿನ ಮತ್ತು ಟ್ರೈನಿಂಗ್ ಕಾಲೇಜಿನ ವಿದ್ಯಾರ್ಥಿಗಳಿಗೂ ಬೇಕಾದ ಪುಸ್ತಕವು. ಉಪಾಧ್ಯಾಯರು ಶಾಲೆಯ ತೋಟದ ಕೆಲಸವನ್ನು ಮಾಡಿಸುವಲ್ಲಿ ಈ ಪುಸ್ತಕದ ಉಪಯೋಗವು ಅವರಿಗೆ ಹೆಚ್ಚು ಫಲದಾಯಕವಾಗದಿರದು ಇದರ ಬೆಲೆ ೧೧ ಆಣೆ ಧಾರವಾಡ ಟ್ರೈನಿಂಗ್ ಕಾಲೇಜಿನ ಪ್ರಕೃತಿ ವಿಮರ್ಶೆಯ ಅಧ್ಯಾಪಕರಾದ ಮ|| ರಾ|| ರಾಮಕೃಷ್ಣ, ಬಿ ಎ. ಎಲ್ ಟಿ ಯವರಲ್ಲಿ ಪುಸ್ತಕವು ದೊರೆಯುವುದು

ಬುದ್ಧಿಯ ಮಾತು:—ಮ|| ರಾ|| ಎಂ. ಎಂ ಹರ್ಡೀಕರ್, ದಾವಣಗೆರೆ ಇವರಿಂದ ಬರೆಯಲ್ಪಟ್ಟ ಈ ಪುಸ್ತಕವು ನಮ್ಮ ವಿಮರ್ಶೆಗಾಗಿ ಬಂದಿದೆ. ಇದರಲ್ಲಿ ಮನುಷ್ಯನು ತನ್ನ ಪ್ರಾಯದಲ್ಲಿ ಮಾಡಬೇಕಾದ ಮತ್ತು ಮಾಡದೆ ಬಿಡಬೇಕಾದ ೨೫ ವಿಷಯಗಳು ಗುರುವು ಶಿಷ್ಯನಿಗೆ ಸಂಬೋಧಿಸಿ ಹೇಳುವಂತೆ ವಿವೃತವಾಗಿವೆ, ಭಾಷೆಯ ಶೈಲಿ ಸರಳವಾಗಿರುವುದು ಸರ್ವರೂ ಓದಬೇಕಾದ ಪುಸ್ತಕ ಇದರ ಬೆಲೆ ೪ ಆಣೆ ಗ್ರಂಥಕರ್ತರಿಂದ ಪುಸ್ತಕವನ್ನು ಪಡೆಯಬಹುದು

— — ೦ — —

ವಿವಿಧ ವಿಷಯ ವಿಮರ್ಶೆ

ಈ ದ್ವಿತೀಯ ಸಂಪುಟದ ಪ್ರಥಮ ಸಂಚಿಕೆಯಲ್ಲಿ ಹೊಸ ವಿಷಯಗಳು ವಿಶೇಷವಾಗಿರುವುವು. ಅಶೋಕಮಹಾರಾಜನ ಶಾಸನಗಳು ಈಗ ಲೋಕವಿಖ್ಯಾತವಾಗಿರುತ್ತವೆ. ಈ ಶಾಸನಗಳನ್ನು ಕುರಿತು ಯಾವ ವಿದ್ವಾಂಸರೂ ಇಂದಿನವರೆಗೂ ಕನ್ನಡದಲ್ಲಿ ಬರೆಯದಿರುವುದು ಶೋಚನೀಯವೆಂದು ಭಾವಿಸಿ ನಮ್ಮ ಪಂಡಿತ ರಾಜಗೋಪಾಲ ಚಕ್ರವರ್ತಿಗಳು ಬಂಗಾಳಿಯ ಗ್ರಂಥಗಳಿಂದ ಮುಖ್ಯಾಂಶಗಳನ್ನು ಗ್ರಹಿಸಿ ನವೀನ ವಿಷಯ ಗರ್ಭಿತವಾದ ಉಪೋದ್ಘಾತದೊಡನೆಯೂ ಕ್ವಚಿದ್ವ್ಯಾಖ್ಯಾನಗಳೊಡನೆಯೂ ಈ ಶಾಸನಗಳನ್ನು ಕನ್ನಡಕ್ಕೆ ಪರಿವರ್ತಿಸಲು ಪ್ರಾರಂಭಿಸಿರುವರು. ದ್ವಿತೀಯ ಸಂಚಿಕೆಯಲ್ಲಿ ಈ ಶಾಸನಗಳ ವಿಷಯವನ್ನು ಪೂರಯಿಸಬೇಕೆಂದು ಉದ್ದೇಶಿಸಿದೆ. ಪಂಡಿತರವರ ಉಪೋದ್ಘಾತವನ್ನು ೧೨ನೆಯ ಪುಟದಲ್ಲಿ ಕೊಟ್ಟಿರುವ ಆರ್ಯಭಾಷಾ ವಂಶಾವಳಿಯ-ವೃಕ್ಷವನ್ನು ಸರ್ವರೂ ಸಾವಧಾನದಿಂದ ಪರಿಶೀಲಿಸುವರೆಂದು ನಂಬಿದೇವೆ.

* * *

ಕರ್ಣಾಟಕ ಸಂಧಿಕಾರ್ಯದ ವಿಚಾರದಲ್ಲಿ ಲೇಖಕರು ಕ್ಲಿಷ್ಟ ವಿಷಯ ಶೋಧನಾಚಾತುರ್ಯವನ್ನು ಪ್ರದರ್ಶಿಸಲು ಯತ್ನಿಸಿರುತ್ತಾರೆ. ಕರ್ಣಾಟಕ ವೈಯ್ಯಾಕರಣರು ಯಾರೂ ವಿಚಾರಮಾಡದೆ ಬಿಟ್ಟಿದ್ದ ಕೆಲವು ಅಂಶಗಳು ಈ ಲೇಖನದಲ್ಲಿ ವಿಶದೀಕೃತವಾಗಿವೆ. ಸಂಧಿವೈಕಲ್ಪ್ಯವೆಂಬ ಭಾಗದಲ್ಲಿ ಅಕ್ಷರ ದ್ವಿತ್ವದ ವಿಷಯವನ್ನು ವಿಚಾರಮಾಡುವಾಗ ಕರ್ಣಾಟ ಭಾಷಾಚರಿತ್ರೆಗೆ ಅನುಕೂಲವಾಗುವ ಕೆಲವು ಅಂಶಗಳನ್ನು ಲೇಖಕರು ವ್ಯಕ್ತಪಡಿಸಿರುವರು. ಸಂಧಿಕಾರ್ಯದ ವಿಧಿಗಳಿಗೆ ಇರುವ ಶಾಸ್ತ್ರೀಯಗಳಾದ ಕಾರಣಗಳನ್ನು ತಮಿಳು ತೆಲುಗು ಮಾರ್ಗಗಳ ವಿಮರ್ಶನದಿಂದ ಸ್ಪಷ್ಟಪಡಿಸುವ ಪ್ರಯತ್ನವನ್ನು ನಮಗೆ ತಿಳಿದಂತೆ ಹಿಂದೆ ಯಾರೂ ಮಾಡಿಲ್ಲ. ಲೇಖಕರು ಹೇಳಿರುವ ವಿಷಯಗಳನ್ನು ವಿದ್ವಾಂಸರೆಲ್ಲರೂ ವಿಚಾರ ಮಾಡುವುದು ಯುಕ್ತವಾಗಿದೆ.

* * *

ಅಜ್ಞಾತ ತದ್ಭವಗಳ ವಿಷಯವನ್ನು ವಿದ್ವಾಂಸರ ಪರಿಶೀಲನಕ್ಕೆ ಮ|| ರಾ|| ಎಚ್. ನಾರಾಯಣರಾಯರು ತಂದುದಕ್ಕಾಗಿ ಸಂತೋಷಪಡಬೇಕಾಗಿದೆ. ದೇಶೀಯಗಳೆಂದೇ ಈಗಿನವರೆಗೂ ಭಾವಿಸಿಕೊಂಡು ಬಂದಿದ್ದ ಕೆಲವು ಶಬ್ದಗಳು ದೇಶೀಯವಲ್ಲವೆಂದು ಇವರ ವಿಚಾರದಿಂದ ಕಾಣಬರುತ್ತದೆ. ಮಹಾರಾಷ್ಟ್ರೀ ಪ್ರಾಕೃತದ ನಿಘಂಟುಗಳನ್ನು ಪರಿಶೀಲಿಸುವುದರ ಆವಶ್ಯಕತೆಯನ್ನು ಮ|| ರಾ|| ನಾರಾಯಣರಾಯರವರು ಚೆನ್ನಾಗಿ ತೋರಿಸಿರುತ್ತಾರೆ. ಇವರು ತೋರಿಸಿರುವ ದಾರಿಯಲ್ಲಿ ವಿದ್ವಾಂಸರು ಶಬ್ದಗಳ ವ್ಯುತ್ಪತ್ತಿಯನ್ನು ಪರೀಕ್ಷಿಸುವುದು ಆವಶ್ಯಕವಾಗಿರುತ್ತದೆ.

ಮ|| ರಾ|| ಶೇಷ ಭಿ ಪಾರಿಶ್ವಾಡ ರವರು ಹಿಂದಿನ ಸಂಚಿಕೆಯಲ್ಲಿ ಮಹಾರಾಷ್ಟ್ರ ಸಾಹಿತ್ಯದ ವೈಲಕ್ಷಣ್ಯಗಳನ್ನು ಕುರಿತು ಬರೆದರಷ್ಟೆ. ಈಗ ಮಹಾರಾಷ್ಟ್ರೀಯ ಪ್ರಾಚೀನ ಸಾಹಿತ್ಯವನ್ನು ಕುರಿತು ಬರೆಯುವ ಸಂದರ್ಭದಲ್ಲಿ ಹರಿಕಥೆಯು ಮೊತ್ತಮೊದಲು ಮಹಾರಾಷ್ಟ್ರದಲ್ಲಿ ಪ್ರಚಾರಕ್ಕೆ ಬಂತೆಂದೂ, ಆ ಮೇಲುಪಜ್ಞೆಯನ್ನನುಸರಿಸಿ ಇತರ ಭಾಷೆಗಳವರು ತಮ್ಮ ತಮ್ಮ ಭಾಷೆಗಳಲ್ಲಿ ಹರಿಕಥೆಯನ್ನು ಮಾಡುವುದಕ್ಕಾರಂಭಿಸಿದರೆಂದೂ ಈ ಲೇಖಕರು ಸ್ಥಾಪಿಸುವುದಕ್ಕೆ ಯತ್ನಿಸಿರುತ್ತಾರೆ. ಈ ವಿಷಯವು ವಿಚಾರಾರ್ಹವಾಗಿದೆ

*　　*　　*

ಜಗದ್ವಿಖ್ಯಾತರಾದ ಮೂವರು ಕವಿಗಳು ಎಂಬ ಹೆಸರಿನ ಲೇಖನದ ಮುಖ್ಯಾಂಶಗಳನ್ನು ಹಿಂದೀಮಾಸಪತ್ರಿಕೆಯಾದ "ಜ್ಞಾನಶಕ್ತಿ" ಯಿಂದ ತೆಗೆದಿರುತ್ತದೆ ಹಿಂದೀ ಭಾಷೆಯ ಸುಪ್ರಸಿದ್ಧರಾದ ತುಲಸೀದಾಸಕವಿಗಳ ಪ್ರಶಂಸೆಯು ಈ ಲೇಖನದಲ್ಲಿ ವಿವರಿಸಲ್ಪಟ್ಟಿರುವುದು ಈ ಮಹಾ ಕವಿಗಳನ್ನು ರಾಮಚಂದ್ರ ಚಾರಿತ್ರಪ್ರಿಯರೆಂದು ಕರೆಯಬಹುದಾಗಿದೆ

*　　*　　*

ಮ|| ರಾ|| ಶೇಷ ಭಿ ಪಾರಿಶ್ವಾಡರವರು ಕರ್ಣಾಟಕ ಸಾಹಿತ್ಯ ಪರಿಷತ್ತಿನಿಂದ ಮುದ್ರಿತವಾದ ಗಾರ್‌ಫೀಲ್ಡ್ ಚರಿತೆಯನ್ನು ಕೆಲವು ವರ್ಷಗಳ ಹಿಂದೆ ಮುದ್ರಿತವಾದ ಮರಾಟಿಯ ಗಾರ್‌ಫೀಲ್ಡ್ ಚರಿತೆಯೊಡನೆ ಹೋಲಿಸಿ ಈ ಎರಡು ಚರಿತೆಗಳ ತಾರತಮ್ಯದ ವಿಷಯದಲ್ಲಿ ಬರೆದ ಲೇಖನವನ್ನು ಪರಿಷತ್ಪತ್ರಿಕೆಯಲ್ಲಿ ಮುದ್ರಿಸುವುದು ಉಚಿತವೋ ಅನುಚಿತವೋ ಎಂದು ಯೋಚನೆ ಮಾಡಬೇಕಾಯಿತು. ಮರಾಟಿ ಭಾಷೆಯಲ್ಲಿರುವ ಗ್ರಂಥದ ವಿಷಯವನ್ನು ನಮ್ಮ ವಾಚಕರು ತಿಳಿದಿರುವುದು ಉಚಿತವೆಂದು ಭಾವಿಸಿ ಈ ಲೇಖನವನ್ನು ಮುದ್ರಿಸಿರುತ್ತೇವೆ

———·0·———

ಶ್ರೀ

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ

ಸಂಪುಟ ೨]   ಪಿಂಗಳ ಸಂ|| ಆಷಾಢ— ಜುಲೈ ೧೯೧೭   [ಸಂಚಿಕೆ ೧

ಪರಿಷತ್ತಿನ ನಳಸಂವತ್ಸರದ ವರದಿ ೧೯೧೬—೧೭

ಭಾಷಾಸಾಹಿತ್ಯ ಪರಿಷತ್ತುಗಳ ಕಾರ್ಯನಿರ್ವಾಹವು ಇತರ ಪರಿಷತ್ತಿನ ಕಾರ್ಯಗಳಂತೆ ಸುಲಭವಾಗಿಯೂ ಶೀಘ್ರದಲ್ಲಿಯೂ ನೆರವೇರುವುದು ಕಷ್ಟವೆಂಬ ಅಂಶವು ಸರ್ವರಿಗೂ ವಿದಿತವಾಗಿಯೇ ಇರುತ್ತದೆ. ಈ ಪರಿಷತ್ತುಗಳ ಕಾರ್ಯಗಳು ನಿರ್ವಿಘ್ನವಾಗಿ ನಡೆಯುವುದಕ್ಕೆ ವಿಶೇಷ ದ್ರವ್ಯೋಪಪತ್ತಿಯು ಅವಶ್ಯಕವೆಂಬುದು ನಮ್ಮ ಭರತಖಂಡದ ಇತರ ಪರಿಷತ್ತುಗಳ ಚರಿತ್ರೆಯಿಂದ ಸ್ಪಷ್ಟಪಡುತ್ತದೆ. ದ್ರವ್ಯೋಪಪತ್ತಿಯಿರುವುದಾದರೂ ತಕ್ಕಷ್ಟು ಶೋಧನಾ ಸಾಮರ್ಥ್ಯವೂ ಶ್ರದ್ಧೆಯೂ ಇರುವ ವಿದ್ವಾಂಸರುಗಳು ದೊರೆತ ಹೊರತು ಪರಿಷತ್ತಿನ ಕಾರ್ಯಗಳು ಸಮರ್ಪಕವಾಗಿ ನಡೆಯಲೇ ಆರವು. ಈ ನಮ್ಮ ಕರ್ಣಾಟಕ ಸಾಹಿತ್ಯ ಪರಿಷತ್ತು ೧೯೧೫ನೆಯ ಇಸವಿ ಮೇ ಮಾಹೆಯಲ್ಲಿ ಹುಟ್ಟಿರುದರಿಂದ ಇನ್ನೂ ಶೈಶವಾವಸ್ಥೆಯಲ್ಲಿಯೇ ಇರುತ್ತದೆ. ಆದರೂ ಈ ದ್ವಿತೀಯ ವರ್ಷದಲ್ಲಿ ನಡೆದಿರುವ ಕೆಲಸದ ಮೊತ್ತವನ್ನೂ ರೀತಿಯನ್ನೂ ಗುಣವನ್ನೂ ಪರಿಶೀಲಿಸುವಲ್ಲಿ ಧೈರ್ಯಸ್ಥೈರ್ಯಾರೋಗ್ಯಾದಿಗುಣಗಳಿಂದ ಶೋಭಿಸುವ ಶಿಶುವಂತೆ ನಮ್ಮ ಪರಿಷತ್ತಿರುವುದಕ್ಕಾಗಿ ಸಂತೋಷಪಡಬೇಕಾಗಿದೆ. ಇಲ್ಲಿ ನೆರೆದಿರುವ ಕರ್ಣಾಟಕ ವಿದ್ವನ್ಮಂಡಲಿಯ ಸನ್ನಿಧಿಯಲ್ಲಿ ನಾವು ಒಪ್ಪಿಸುವ ದ್ವಿತೀಯ ವರ್ಷದ ವರದಿಯನ್ನು ಸಾವಧಾನದಿಂದ ಲಾಲಿಸಬೇಕೆಂದು ವಿನಯ ಪೂರ್ವಕವಾಗಿ ಬೇಡುತ್ತೇವೆ.

ಕಾರ್ಯನಿರ್ವಾಹಕರ ಬದಲಾವಣೆಗಳು.

ಏಪ್ರಿಲ್ ಗುರ್ರೆ ತಾರೀಖಿನಿಂದ ಪರಿಷತ್ತಿನ ವಾರ್ಷಿಕ ಸಭೆ ನಡೆಯುವವರೆಗೆ ಮ|| ರಾ|| ಬಿ ಕೃಷ್ಣಪ್ಪ, ಎಮ್ ಎ ಯವರು ತಾವು ಒಬ್ಬರೇ ಪರಿಷತ್ತಿನ ಕಾರ್ಯಗಳನ್ನು ನೋಡುತ್ತ ಬಂದರು. ಆ ಮೇಲೆ ಮ|| ರಾ|| ಬಿ ವೆಂಕಟನಾರಣಪ್ಪ, ಎಮ್. ಎ. ಯವರು ಜಂಟಿಗೌರವ ಕಾರ್ಯದರ್ಶಿಗಳಾಗಿ ಬಹುಶ್ರದ್ಧೆಯಿಂದ ಆಫೀಸು ಕೆಲಸದ ರೀತಿಯನ್ನು ಕ್ರಮಕ್ಕೆ ತಂದು ಸೆಪ್ಟಂಬರು ಮಾಹೆ ಆಖೈರುವರೆಗೆ

ಕಾರ್ಯನಿರ್ವಾಹವನ್ನು ಮಾಡಿದರು ತರನಂತರದಲ್ಲಿ ಮ|| ರಾ|| ಆರ್. ರಘುನಾಥರಾಯರವರು ಜಂಟಿಗೌರವ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟರು ನವಂಬರು ೨ನೆಯ ತಾರೀಖಿನಲ್ಲಿ ಮ|| ರಾ|| ಬಿ ಕೃಷ್ಣಪ್ಪ, ಎಮ್ ಎ ಯವರು ತಮಗಿರುವ ಅನಾನುಕೂಲ್ಯಗಳನ್ನು ತಿಳಿಸಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟರು ಅವರ ಸ್ಥಾನಕ್ಕೆ ರಿಟೈರ್ಡ್ ಸೀನಿಯರ್ ಸರ್ಜನ್ ಮ||ರಾ|| ಪಿ ಯಸ್ ಅಚ್ಯುತರಾವ್ ಎಲ್. ಎಮ್ ಮತ್ತು ಎಸ್ ಅವರು ಚುನಾಯಿಸಲ್ಪಟ್ಟರು

ಏಪ್ರಿಲ್ ಮಾಹೆ ಅಖೈರುವರೆಗೆ ಅರ್ಧಕಾಲದ ಗುಮಾಸ್ತರೊಬ್ಬರೇ ಇದ್ದರು ಮೇ ತಿಂಗಳ ಪ್ರಾರಂಭದಿಂದ ಅರ್ಧಕಾಲದ ಗುಮಾಸ್ತರು ಮತ್ತೊಬ್ಬರನ್ನು ನಿಯಮಿಸಿದುದಾಯಿತು ಸೆಪ್ಟಂಬರು ಆರಂಭದಲ್ಲಿ ಅರ್ಧಕಾಲದ ಗುಮಾಸ್ತರೊಬ್ಬರನ್ನು ವಜಾಮಾಡಿ ಪೂರ್ತಿಕಾಲದ ಗುಮಾಸ್ತರೊಬ್ಬರನ್ನು ೧೫ ರೂಪಾಯಿನ ಹಂಗಾಮಿ ತಲಬಿನ ಮೇಲೆ ನಿಯಮಿಸಿದುದಾಯಿತು ಗ್ರಂಥಶೋಧನಾದಿ ಕಾರ್ಯಗಳಿಗೆ ಪ್ರತಿದಿನವೂ ಕೆಲಸಮಾಡುವ ವಿದ್ವಾಂಸರು ಆವಶ್ಯಕವಾಗಿದ್ದುದರಿಂದ ಪಂಡಿತ ಎಮ್ ಕೃಷ್ಣಪ್ಪನವರನ್ನು ಅರ್ಧಕಾಲದ ಪರಿಷತ್ಪಂಡಿತರನ್ನಾಗಿ ನವಂಬರು ಮಾಹೆಯ ಆದಿಯಲ್ಲಿ ನಿಯಮಿಸಿದುದಾಯಿತು

ಕಾರ್ಯನಿರ್ವಾಹಕ ಮಂಡಲಿಯ ಸಭೆಗಳು.

೧೯೧೭ನೆಯ ಸಮ್ಮೇಳನದಿಂದ ೧೯೧೮ನೆಯ ಸಮ್ಮೇಳನದವರೆಗೆ ೮ ಸಾರಿ ಕಾರ್ಯನಿರ್ವಾಹಕಮಂಡಲಿಯ ಸಭೆಯು ಸೇರಿತ್ತು. ಕಾರ್ಯನಿರ್ವಾಹಕಮಂಡಲಿಯ ಸಭೆಗಳ ತಾರೀಖುಗಳು ಮತ್ತು ಕಾರ್ಯನಿರ್ವಾಹಕಮಂಡಲಿಯ ಸದಸ್ಯರುಗಳ ಹಾಜರಿಯ ತಪಶೀಲುಗಳು ಕೆಳಗಿನ ಪಟ್ಟಿಗಳಿಂದ ತಿಳಿಯಬರುವುವು

ಮೊದಲನೆಯ ಸಭೆ .	೧೪ನೆಯ ಮೇ ೧೯೧೭
ಎರಡನೆಯ ಸಭೆ	೯ನೆಯ ಜುಲೈ ೧೯೧೭
ಮೂರನೆಯ ಸಭೆ	೩ನೆಯ ಸೆಪ್ಟಂಬರು ೧೯೧೭
ನಾಲ್ಕನೆಯ ಸಭೆ	೨೯ನೆಯ ಸೆಪ್ಟಂಬರು ೧೯೧೭
ಐದನೆಯ ಸಭೆ	೨ನೆಯ ನವಂಬರು ೧೯೧೭
ಆರನೆಯ ಸಭೆ .	೨೫ನೆಯ ಫೆಬ್ರವರಿ ೧೯೧೮
ಏಳನೆಯ ಸಭೆ ...	೧೫ನೆಯ ಏಪ್ರಿಲ್ ೧೯೧೮
ಎಂಟನೆಯ ಸಭೆ	೧೩ನೆಯ ಮೇ ೧೯೧೮

ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳು ಮತ್ತು ಅವರು ಹಾಜರಿದ್ದ ಸಭೆಗಳ ಸಂಖ್ಯೆ.

ಮ|| ರಾ|| ರಾಜಮಂತ್ರ ಪ್ರವೀಣ, ಎಚ್. ವಿ. ನಂಜುಂಡಯ್ಯನವರು
ಎಂ, ಎ., ಎಮ್ ಎಲ್, ಸಿ. ಐ. ಇ. (ಅಧ್ಯಕ್ಷರು) ೬

ಮ|| ರಾ|| ರಾವ್ ಬಹದ್ದೂರ್ ಎಮ್. ಶಾಮರಾಯರವರು, ಎಮ್ ಎ.
(ಉಪಾಧ್ಯಕ್ಷರು) ೬

,, ಟಿ ಲಕ್ಷ್ಮೀನರಸಿಂಹರಾಯರು, ಬಿ ಎ, ಬಿ. ಎಲ್
(ಗೌರವ ಕೋಶಾಧ್ಯಕ್ಷರು) ೬

,, ಬಿ ಕೃಷ್ಣಪ್ಪನವರು, ಎಮ್ ಎ
(ನವಂಬರುವರೆಗೆ ಗೌರವಕಾರ್ಯದರ್ಶಿ) ೬

,, ಬಿ. ವೆಂಕಟನಾರಣಪ್ಪನವರು, ಎಮ್. ಎ
(ಅಕ್ಟೋಬರುವರೆಗೆ ಗೌರವಕಾರ್ಯದರ್ಶಿ) ೪

,, ಆರ್ ರಘುನಾಥರಾಯರು, ಬಿ ಎ
(ಅಕ್ಟೋಬರಿನಿಂದ ಗೌರವಕಾರ್ಯದರ್ಶಿ) ೮

,, ಡಾಕ್ಟರ್ ಪಿ ಯಸ್ ಅಚ್ಯುತರಾಯರು ಎಲ್ ಎಮ್ ಮತ್ತು ಎಸ್
ಗೌರವಕಾರ್ಯದರ್ಶಿ (ನವಂಬರಿನಿಂದ) ೩

ಮೈಸೂರು ಸೀಮೆಯ ಸದಸ್ಯರುಗಳು.

ಮ|| ರಾ|| ರಾಜಸೇವಾಧುರಂಧರ ಸರದಾರ್ ಎಂ ಕಾಂತರಾಜ ಅರಸಿನವರು
ಬಿ ಎ, ಸಿ ಎಸ್ ಐ ...

,, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು
ಬಿ ಎಸ್‌ಸಿ, ಎಲ್ ಸಿ ಇ ...

,, ರಾವ್ ಬಹದ್ದೂರ್ ಕೆ. ಕೃಷ್ಣಯ್ಯಂಗಾರ್ಯರು, ಬಿ ಎ, ಎಲ್ ಸಿ ಇ ೫

,, ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್ ಆರ್
ನರಸಿಂಹಾಚಾರ್ಯರು, ಎಮ್ ಎ ೨

,, ಸಿ ಕೃಷ್ಣರಾಯರು, ಬಿ ಎ ೫

,, ಎಮ್ ಕರಣಿಕ ಕೃಷ್ಣಮೂರ್ತಿಗಳು ೩

,, ಎಮ್ ವೆಂಕಟಕೃಷ್ಣಯ್ಯನವರು ೨

,, ಎಮ್ ಎಸ್ ಪುಟ್ಟಣ್ಣನವರು, ಬಿ ಎ ೬

,, ಬಾಪು ಸುಬ್ಬರಾಯರು, ಬಿ ಎ ೧

,, ಎಚ್ ಚನ್ನಕೇಶವಯ್ಯಂಗಾರ್ಯರು ೮

,, ಪಂಡಿತ ಕವಿತಿಲಕ ಸೋಸಲೆ ಅಯ್ಯಾ ಶಾಸ್ತ್ರಿಗಳು. ೩

ಮುಂಬಯಿ ಪ್ರಾಂತದ ಸದಸ್ಯರುಗಳು.

ಮ|| ರಾ|| ರಾವ್ ಬಹದ್ದೂರ್ ಎ ಪಿ ಜೋಷಿ ಬಿ ಎ. ...

,, ಆರ್ ಎಚ್ ದೇಶಪಾಂಡೆ, ಎಮ್ ಎ ೧

,, ಎಫ್ ಜೆ ಕರಗುದರಿ, ಬಿ ಎ., ಎಲ್‌ಎಲ್ ಬಿ ...

,, ಎ. ಬಿ. ಆಲೂರು, ಬಿ ಎ ....
,, ಎಸ್. ಎಸ್ ಸೆಟ್ಲೂರ್, ಬಿ ಎ , ಎಲ್ ಎಲ್. ಬಿ. ....
,, ಆರ್. ಎ ಜಹಗೀರ್‌ದಾರ್, ಎಮ್.ಎ , ಎಲ್ಎಲ್ ಬಿ ..
,, ಆರ್ ಬಿ ಪೋಲೀಸಪಾಟೀಲರು ...
,, ಪಿ ಜಿ ಹಳಕಟ್ಟಿಯವರು, ಬಿ ಎ , ಎಲ್ಎಲ್ ಬಿ ...

ಮದರಾಸ್ ಪ್ರಾಂತದ ಸದಸ್ಯರುಗಳು.

ಮ|| ರಾ|| ಬಿ ರಾಮರಾಯರು ಎಂ ಎ , ಎಲ್ಎಲ್ ಬಿ ...
,, ಆರ್ ತಾತ, ಎಮ್ ಎ , ಎಲ್ ಟಿ ೨
,, ಎನ್ ರಾಜ ಗೋಪಾಲಕೃಷ್ಣರಾಯರು . ೧
,, ಪಿ. ಮಂಗೇಶರಾಯರು, ಬಿ. ಎ , ಎಲ್. ಟಿ ...
,, ಎ ವೆಂಕಟರಾಯರು ಬಿ ಎ , ಎಲ್ ಟಿ ...

ದಕ್ಷಿಣ ಮಹಾರಾಷ್ಟ್ರ ದೇಶದವರು.

ಮ|| ರಾ|| ಟಿ ಎಸ್ ಚಿಕ್ಕೋಡಿಯವರು ..
,, ಆರ್ ಎಸ್ ಮಂಗಸೂಲಿಯವರು ...

ಹೈದರಾಬಾದ್ ಸೀಮೆಯವರು.

,, ಬಿ ಕೃಷ್ಣಯ್ಯಂಗಾರ್ಯರು .

ಕೊಡಗು ಸೀಮೆಯವರು.

ರಾಯಬಹದ್ದೂರ್ ರಾಜಕಾರ್ಯಪ್ರಸಕ್ತ
ಮ|| ರಾ|| ಎಮ್ ಮುತ್ತಣ್ಣನವರು ...

ಪಂಡಿತ ಸದಸ್ಯರುಗಳು.

ಪಂಡಿತ ಆರ್ ರಾಘವೇಂದ್ರಾಚಾರ್ಯರು ೩
ಸರಳಕವಿಸೂರಿ ಪಂಡಿತ ಕೆ ರಾಜಗೋಪಾಲ ಚಕ್ರವರ್ತಿಗಳು ೭
ಪಂಡಿತ ಜಿನದಾಸ ದೊರ್ಬಲಿ ಶಾಸ್ತ್ರಿಗಳು (ಶ್ರವಣಬೆಳಗೊಳ) ...

ನಿಘಂಟುಗಳ ಪರಿಷ್ಕರಣ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶಗಳು ನಾಲ್ಕಾಗಿರುತ್ತವೆ— ಕರ್ಣಾಟಕ ಭಾಷಾ ಸಂಸ್ಕರಣವೊಂದು, ನವೀನ ಮಾರ್ಗದ ಗ್ರಂಥ ರಚನವೊಂದು, ಪ್ರಸಿದ್ಧ ಪುರಾತನ ಗ್ರಂಥ ಪ್ರಚಾರವೊಂದು, ಕರ್ಣಾಟ ಭಾಷಾ ನಿಘಂಟಿನ ಸಂಸ್ಕರಣವೊಂದು ಮೇಲಿನ ಉದ್ದೇಶಗಳಲ್ಲಿ ಮೊದಲನೆಯ ಉದ್ದೇಶವನ್ನು ಕುರಿತು ಹೇಳಬೇಕಾದುದನ್ನು ಪರಿಷತ್ಪತ್ರಿಕೆಯ ಸಂದರ್ಭದಲ್ಲಿ ತಿಳಿಸುತ್ತೇವೆ ಎರಡನೆಯ ಮತ್ತು ಮೂರನೆಯ ಉದ್ದೇಶಗಳನ್ನು ಕುರಿತು ಮಾಡಿರುವ ಕಾರ್ಯನಿರ್ವಾಹವನ್ನು ಗ್ರಂಥ

ಪ್ರಚಾರ ಪ್ರಕರಣದಲ್ಲಿ ತಿಳಿಸುತ್ತೇವೆ ಹೀಗಿರುವುದರಿಂದ ನಾಲ್ಕನೆಯ ಉದ್ದೇಶದ ಎಂದರೆ ಕರ್ಣಾಟಕ ನಿಘಂಟುಗಳ ಪರಿಷ್ಕರಣದ ವಿಷಯದಲ್ಲಿ ಮಾಡಿರುವ ಏರ್ಪಾಡುಗಳನ್ನು ಇಲ್ಲಿ ತಿಳಿಸಬಹುದಾಗಿದೆ. ಕನ್ನಡ ನಿಘಂಟುವಿನ ಪರಿಷ್ಕರಣಕ್ಕಾಗಿ ಕೆಳಗೆ ವಿವರಿಸಿರುವಂತೆ ಪಂಡಿತರುಗಳಿಗೆ ಪುಸ್ತಕಗಳನ್ನು ಕೊಟ್ಟು ಅಸಾಧಾರಣ ಪದಗಳಿಗೆ ಅರ್ಥವನ್ನು ಬರೆಯುವಂತೆ ಏರ್ಪಾಡಾಗಿದೆ ಹೇಗೆಂದರೆ —

ಪಂಡಿತ ಅಯ್ಯಾಶಾಸ್ತ್ರಿಗಳು	ಜಗನ್ನಾಥವಿಜಯ, ಮಲ್ಲಿನಾಥಪುರಾಣ
,, ದೇವೋತ್ತಮಜೋಯಿಸರು	ಕಬ್ಬಿಗರಕಾವ, ಲೀಲಾವತಿ, ಗದಾಯುದ್ಧ
,, ಶ್ರೀನಿವಾಸರಾಘವಾಚಾರ್ಯರು	ಪಂಪಭಾರತ
,, ವಿ ರಾಮಾಚಾರ್ಯರು	ಅಜಿತಪುರಾಣತಿಲಕ, ಉದ್ಭಟಕಾವ್ಯ
,, ವರದಾಚಾರ್ಯರು	ವ್ಯಾಕರಣ ಪಾರಿಭಾಷಿಕ ಶಬ್ದಗಳಪಟ್ಟಿ
,, ತಿಮ್ಮಪ್ಪಯ್ಯಶಾಸ್ತ್ರಿಗಳು	ಛಂದೋಗ್ರಂಥಗಳು
,, ಸೀತಾರಾಮಶಾಸ್ತ್ರಿಗಳು	ಚಂದ್ರಪ್ರಭಪುರಾಣ, ರಾಜಶೇಖರವಿಲಾಸ

ಇಂಗ್ಲೀಷ್ ಕನ್ನಡ ನಿಘಂಟುವಿನ ಸಂಸ್ಕರಣಕ್ಕೆ ಮುಂದೆ ವಿವರಿಸುವ ಉಪ ಸಂಘಗಳನ್ನು ರಚಿಸಲಾಯಿತು ಹೇಗೆಂದರೆ —

A ಇತಿಹಾಸ (History), ರಾಜ್ಯಶಾಸನವಿದ್ಯೆ (Politics), ವಿಧಿನಿಷೇಧ ನಿಯಮ (Law), ಸಮಾಜಶಾಸ್ತ್ರ (Sociology), ಧನವೃದ್ಧಿಶಾಸ್ತ್ರ (Political Economy) ಮುಂತಾದುವುಗಳಿಗೆ

ರಾವ್ ಬಹದ್ದೂರ್ ಮ|| ರಾ|| ಎಂ ಶಾಮರಾಯರು ಎಂ ಎ

ಮ|| ರಾ|| ಬಿ ಎಮ್ ಶ್ರೀಕಂಠಯ್ಯನವರು ಎಂ ಎ, ಬಿ ಎಲ್.

,, ಎಂ ಎಸ್ ಪುಟ್ಟಣ್ಣನವರು ಬಿ ಎ

,, ಆರ್ ರಘುನಾಥರಾವ್ ಬಿ ಎ (ಕರ್ ಪೀನರ್)

,, ಆರ್ ಎಚ್ ದೇಶಪಾಂಡೆ ಎಂ ಎ

,, ಬಿ ರಾಮರಾಯರು, ಎಂ ಎ, ಎಲ್ ಎಲ್ ಬಿ

ಪ್ರಾಕ್ತನ ವಿಮರ್ಶವಿಚಕ್ಷಣ ರಾವ್ ಬಹದ್ದೂರ್

ಮ|| ರಾ|| ಆರ್ ನರಸಿಂಹಾಚಾರ್ ಎಂ ಎ

ಮ|| ರಾ|| ಬಿ. ರಾಮಕೃಷ್ಣರಾಯರು

,, ಎಂ. ಗುಂಡುರಾಯರು

B. ಪ್ರಾಣಿಶಾಸ್ತ್ರ (Zoology), ಶಾರೀರಕಶಾಸ್ತ್ರ (Physiology), ಜೀವಶಾಸ್ತ್ರ (Biology) ಮುಂತಾದುವುಗಳಿಗೆ

ಡಾಕ್ಟರ್ ಎಂ ಶ್ರೀನಿವಾಸರಾಯರು ಎಂ. ಎ, ಎಮ್ ಡಿ.

ಮ|| ರಾ|| ಸಿ ಆರ್. ನಾರಾಯಣರಾಯರು. ಎಂ ಎ., ಎಲ್. ಟಿ.

ಡಾಕ್ಟರ್ ವೆಂಕೋಬರಾಯರು, ಬಿ. ಎ

,, ಪಿ ಎಸ್. ಅಚ್ಯುತರಾಯರು ಎಲ್, ಎಮ್. ಎಸ್,

(ಕನ್ವೀನರ್)

ಮ|| ರಾ|| ಕೆ. ಕರುಣಾಕರನ್ ನಾಯರ್, ಎಂ. ಎ.

C ಉದ್ಭಿಜ್ಜ ಶಾಸ್ತ್ರ (Botany), ವೈದ್ಯಶಾಸ್ತ್ರ (Medicine) ಮುಂತಾದುವುಗಳಿಗ

ಮ|| ರಾ|| ಸಿ ಆರ್ ನಾರಾಯಣರಾಯರವರು, ಎಂ. ಎ., ಎಲ್. ಟಿ

ಡಾಕ್ಟರ್ ಆರ್. ಸುಬ್ಬರಾವ್, ಬಿ ಎ., ಎಂ ಬಿ. ಸಿ ಎಮ್.

ಡಾಕ್ಟರ್ ಪಿ ಎಸ್ ಅಚ್ಯುತರಾಯರು ಎಲ್ ಎಮ್. ಎಸ್.

(ಕನ್ವೀನರ್)

D· ಕೃಷಿವಿದ್ಯೆ (Agriculture), ಭೂಗರ್ಭಶಾಸ್ತ್ರ (Geology), ಭೂಗೋಳಶಾಸ್ತ್ರ (Geography) ಮುಂತಾದುವುಗಳಿಗೆ—

ಮ|| ರಾ|| ಯಜ್ಞನಾರಣಯ್ಯರ್, ಎಂ ಎ

ಮ|| ರಾ|| ಪಿ. ಸಂಪತ್ತಯ್ಯಂಗಾರ್, ಎಂ ಎ

,, ಸಾಂಬಶಿವಯ್ಯರ್, ಬಿ ಎಸ್‌ಸಿ.

,, ಸಿ ಕೃಷ್ಣರಾವ್, ಬಿ ಎ (ಕನ್ವೀನರ್)

E ಭೌತಿಕಶಾಸ್ತ್ರ (Physics), ಪದಾರ್ಥ ಮೂಲತತ್ವಶಾಸ್ತ್ರ (Chemistry), ಯಂತ್ರವಿದ್ಯೆ (Mechanics) ಮುಂತಾದುವುಗಳಿಗೆ—

ಮ|| ರಾ|| ವೆಂಕಟನಾರಣಪ್ಪನವರು, ಎಂ ಎ

,, ಬಿ. ವೆಂಕಟೇಶಾಚಾರ್ ಎಂ, ಎ

,, ಟಿ ಲಕ್ಷ್ಮೀನರಸಿಂಹರಾಯರು ಬಿ. ಎ., ಬಿ. ಎಲ್

(ಕನ್ವೀನರ್)

,, ಎ ನರಹರಿರಾಯರು, ಬಿ ಎ., ಹೈಸ್ಕೂಲು, ಬೆಂಗಳೂರು

,, ವಿಜಯ ರಾಘವಾಚಾರ್ಯರವರು ಬಿ. ಎ., ಸರ್ಕಲ್ ಇನ್ಸ್ಪೆಕ್ಟರ್, ಮೈಸೂರು

,, ಎಚ್ ವಿ ಕೃಷ್ಣಯ್ಯನವರು ಬಿ. ಎ

,, ಶಂಕರರಾವ್ ಬಾದಾಮಿಯವರು, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್

,, ಬಿ ಎಸ್ ರಾಘವೇಂದ್ರರಾಯರು ಬಿ ಎ. ಹೈಸ್ಕೂಲು, ಮೈಸೂರು.

, ಎನ್. ವಂಕಟೇಶಯ್ಯಂಗಾರ್ಯರವರು ಬಿ ಎ.

F. ಜ್ಯೋತಿಷ (Astronomy), ಗಣಿತಶಾಸ್ತ್ರ (Mathematics) ಮುಂತಾದುವುಗಳಿಗೆ—

ಮ|| ರಾ|| ಎಂ. ಟಿ ನಾರಾಯಣಯ್ಯಂಗಾರ್ ಎಂ. ಎ.

,, ಎಚ್ ಆರ್ ಕೃಷ್ಣಮೂರ್ತಿರಾವ್ ಬಿ. ಎ

,, ಬಿ ಸೂರ್ಯನಾರಾಯಣರಾಯರು. ಬಿ. ಎ.

,, ಎಚ್ ಚನ್ನಕೇಶವಯ್ಯಂಗಾರ್ಯರು (ಕನ್ವೀನರ್)

,, ಗಣಿತಶಾಸ್ತ್ರಬೋಧಕರು ಹೈಸ್ಕೂಲ್ ಬೆಂಗಳೂರು

,, ಲಕ್ಷ್ಮೀಪತಯ್ಯನವರು ಬಿ ಎ

G ಚಿತ್ಶಕ್ತಿಶಾಸ್ತ್ರ (Mental Science), ಕರ್ತವ್ಯಾಕರ್ತವ್ಯ ವಿಜ್ಞಾನ (Moral Science) ಮುಂತಾದುವುಗಳಿಗೆ—

ಮ|| ರಾ|| ಕರ್ಪೂರ ಶ್ರೀನಿವಾಸರಾಯರು, ಬಿ ಎಸ್‌ಸಿ.

ಡಾಕ್ಟರ್ ಎಂ. ಶ್ರೀನಿವಾಸರಾಯರು ಎಂ. ಎ., ಎಂ. ಡಿ.

ಮ|| ರಾ|| ಕೆ ಎ ಕೃಷ್ಣಸ್ವಾಮಯ್ಯರವರು ಬಿ. ಎ

ಮ|| ರಾ|| ಲಕ್ಷ್ಮೀಪತಯ್ಯನವರು ಬಿ ಎ

,, ಎಂ. ಶಾಮರಾಯರು ಎಂ. ಎ. (ಕನ್ವೀನರ್)

ಆವಶ್ಯಕತೆ ತೋರಿದಾಗ ಇತರ ಸದಸ್ಯರುಗಳನ್ನು ತಮ್ಮ ತಮ್ಮ ಉಪಸಂಘಗಳಿಗೆ ಸೇರಿಸಿಕೊಳ್ಳುವುದಕ್ಕೆ ಮೇಲಣ ಉಪಸಂಘಗಳಿಗೆ ಅಧಿಕಾರ ಇರಬೇಕೆಂದೂ, ತಂತಮ್ಮ ಉಪಸಂಘಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನು ಸೇರಿಸಿಕೊಳ್ಳಬಹುದೆಂದೂ ಪ್ರತಿಯೊಂದು ಉಪಸಂಘಕ್ಕೂ ಒಬ್ಬೊಬ್ಬರು ಸಂಸ್ಕೃತ ಅಥವಾ ಕರ್ಣಾಟಕ ಪಂಡಿತರನ್ನು ಸೇರಿಸಿಕೊಳ್ಳಬಹುದೆಂದೂ ನಿಶ್ಚಯಿಸಲ್ಪಟ್ಟಿತು.

ಕನ್ನಡ ಇಂಗ್ಲೀಷು ನಿಘಂಟುವಿನ ಪರಿಷ್ಕರಣದ ವಿಷಯದಲ್ಲಿ ಮೇಲ್ಕಂಡ ಉಪಸಂಘದವರ ಪಟ್ಟಿಗಳು ಬಂದ ಮೇಲೆ ಮುಂದಿನ ಕೆಲಸವನ್ನು ನಡೆಯಿಸಬೇಕೆಂದು ಉದ್ದೇಶಿಸಿರುತ್ತದೆ.

ಪರಿಷತ್ತಿನ ಸದಸ್ಯರುಗಳ ವಿಷಯ.

ನಳಸಂವತ್ಸರದ ಅಂತ್ಯದಲ್ಲಿದ್ದ ಸದಸ್ಯರುಗಳ ಪಟ್ಟಿ

ಹೆಸರು	ರಾಕ್ಷಸ ಸಂ|| ದಲ್ಲಿದ್ದವರ ಸಂಖ್ಯೆ	ನಳ ಸಂ|| ದಲ್ಲಿ ಸೇರಿದವರ ಸಂಖ್ಯೆ	ಒಟ್ಟು
ಪ್ರದಾತೃಗಳು	೧	...	೧
ಆಜೀವ ಸದಸ್ಯರು	೪೦	೨೧	೬೧
ಮೊದಲನೆಯ ತರಗತಿಯ ಸದಸ್ಯರು	೪೨	೫	೪೭
ದ್ವಿತೀಯವರ್ಗದ ಸದಸ್ಯರು	೩೧	೫೬	೮೭
ಒಟ್ಟು	೧೧೪	೮೨	೧೯೬

ಪರಿಷತ್ತಿನ ಸದಸ್ಯರುಗಳಲ್ಲಿ ಮ|| ರಾ|| ಎಚ್. ಆದಿಮೂರ್ತಯ್ಯನವರು, ಮ|| ರಾ|| ಎಸ್. ಜಿ ಹೊಂಗಲ್‌ಕರರವರು ಗತಿಸಿದ ಸಂಗತಿಯನ್ನು ತಿಳಿಸಲು ವಿಷಾದಿಸುತ್ತೇವೆ ಸದಸ್ಯರುಗಳ ಪೈಕಿ ೪ ಮಂದಿ ತಮ್ಮ ಅನಾನುಕೂಲ್ಯದಿಂದ ಪರಿಷತ್ತಿನ ಸದಸ್ಯತೆಯನ್ನು ಕಳೆದುಕೊಂಡಿರುವರು

ಮೇಲ್ಕಂಡ ಸದಸ್ಯರುಗಳಿಂದ ತರಗತಿವಾರಾಗಿ ಬಂದಿರುವ ಮೊಬಲಗನ್ನು ಕೆಳಗಿನ ಪಟ್ಟಿಯಿಂದ ತಿಳಿಯಬಹುದು

	ರೂ	ಆ	ಪೈ.
ಅಜೀವ ಸದಸ್ಯರುಗಳಿಂದ	೬೯೭	೧೪	೭
ಮೊದಲನೆಯ ತರಗತಿಯವರಿಂದ	೧೪೫	೦	೦
ಎರಡನೆಯ ತರಗತಿಯವರಿಂದ	೧೩೯	೦	೦
ಒಟ್ಟು	೯೮೧	೧೪	೭

ಸದಸ್ಯರುಗಳಿಂದ ಬರಬೇಕಾಗಿರುವ ಬಾಕಿ ಮೊಬಲಗನ್ನು

ಕೆಳಗಿನ ಪಟ್ಟಿಯಿಂದ ತಿಳಿಯಬಹುದು

ಆಶ್ರಯದಾತರು	೫೦೦	೦	೦
ಅಜೀವ ಸದಸ್ಯರು	೨೪೦೧	೦	೦
ಮೊದಲನೆಯ ತರಗತಿಯವರು	೬೮೫	೦	೦
ಎರಡನೆಯ ತರಗತಿಯವರು	೨೩೪	೦	೦
ಒಟ್ಟು	೩೮೨೦	೦	೦

ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆ ಸಂಬಂಧಪಟ್ಟ ಸದಸ್ಯರುಗಳು ಇಬ್ಬರೇ ಇರುವರು. ಇವರಲ್ಲೊಬ್ಬರು ಚಂದಾ ಹಣವನ್ನು ಇನ್ನೂ ಕೊಟ್ಟಿಲ್ಲ. ಹೈದರಾಬಾದಿನ ಕರ್ಣಾಟಕ ಪ್ರಾಂತಕ್ಕೆ ಸಂಬಂಧಪಟ್ಟ ಪರಿಷತ್ತಿನ ಸದಸ್ಯರು ಒಬ್ಬರೇ ಇರುವರು. ಮದರಾಸಾಧಿಪತ್ಯಕ್ಕೆ ಸಂಬಂಧ ಪಟ್ಟ ೧೯ ಸದಸ್ಯರುಗಳಪೈಕಿ ಚಂದಾಹಣವನ್ನು ಕೊಟ್ಟಿರುವರು ೧೧ ಮಂದಿ, ಕೊಂಚವಾಗಿ ಕೊಟ್ಟಿರುವವರು ೩ಮಂದಿ ಉಳಿದ ೫ ಮಂದಿ ಏನನ್ನೂ ಕೊಟ್ಟಿಲ್ಲ ಮುಂಬಯಿ ಆಧಿಪತ್ಯಕ್ಕೆ ಸಂಬಂಧಪಟ್ಟ ಸದಸ್ಯರುಗಳು ೨೯. ಇವರ ಪೈಕಿ ೧೧ ಮಂದಿ ಪೂರ್ತಿಯಾಗಿಯೂ ೭ ಮಂದಿ ಕೊಂಚವಾಗಿಯೂ ಚಂದಾಹಣವನ್ನು ಕೊಟ್ಟಿರುತ್ತಾರೆ. ಬಾಕಿ ೧೧ ಮಂದಿ ಏನನ್ನೂ

ಕೊಟ್ಟಿಲ್ಲ. ಈ ಸಂದರ್ಭದಲ್ಲಿ ಪರಿಷತ್ತಿನ ಕಾರ್ಯನಿರ್ವಾಹಕಮಂಡಲಿಯಲ್ಲಿ ದಕ್ಷಿಣ ಮಹಾರಾಷ್ಟ್ರಗಳಪರವಾಗಿ ಇಬ್ಬರು, ಹೈದರಾಬಾದಿನ ಕರ್ನಾಟಕ ಪ್ರಾಂತಕ್ಕೆ ಒಬ್ಬರು, ಮದ್ರಾಸ ಕನ್ನಡ ನಾಡುಗಳಿಗಾಗಿ ಐವರು, ಮುಂಬಯಿ ಕನ್ನಡ ನಾಡುಗಳಿಗಾಗಿ ಎಣ್ಬರು ಸದಸ್ಯರು ಇರುವುದರಿಂದ ಮೇಲ್ಕಂಡ ಪ್ರಾಂತಗಳಲ್ಲಿ ಸದಸ್ಯರುಗಳ ಅಲ್ಪ ಸಂಖ್ಯೆಯನ್ನು ತಕ್ಕಷ್ಟು ಹೆಚ್ಚಿಸುವುದಕ್ಕೆ ಉಚಿತವಾದ ಸ್ಥಿರಪ್ರಯತ್ನವನ್ನು ಶೀಘ್ರದಲ್ಲಿಯೇ ಮಾಡಬೇಕಾಗಿದೆ

ಸರ್ಕಾರದ ಸಹಾಯದ್ರವ್ಯದ ಖರ್ಚಿನ ವಿವರ.

ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದಿಂದ, ಆಫೀಸು ಫರ್ನಿಚರ್ ಮುಂತಾದುದಕ್ಕೆ ಮೊತ್ತವಾಗಿ ಕೊಡಲ್ಪಟ್ಟ ೧೦೦೦ ರೂಪಾಯಿಗಳಿಂದಲೂ ತಿಂಗಳು ತಿಂಗಳಿಗೂ ಕೊಡಲ್ಪಡುವ ೧೫೦ ರೂಪಾಯಿಗಳ ಸಹಾಯದ್ರವ್ಯದಿಂದಲೂ ಪರಿಷತ್ತಿಗೆ ಮಹೋಪಕಾರವಾಗಿರುವುದು. ಮೊತ್ತವಾದ ೧೦೦೦ ರೂ ಮೊಬಲಗಿನಲ್ಲಿ ೬೫೮—೧೦—೦ ಮೊಬಲಗನ್ನು (Furniture) ಕುರ್ಚಿ ಮುಂತಾದ ಸಾಮಾನುಗಳಿಗಾಗಿಯೂ, ೧೧೯—೪—೯ ಗಳನ್ನು (Dead stock) ಸ್ಥಿರಸಾಮಗ್ರಿಗಳಿಗೂ, ಪರಿಷತ್ತಿನ ಉಪಯೋಗಕ್ಕಾಗಿ ೨೨೨-೧—೫ ಗಳನ್ನು ಪ್ರಮಾಣ ಪುಸ್ತಕ (Reference Books) ಗಳಿಗಾಗಿಯೂ ಖರ್ಚುಮಾಡಿರುತ್ತದೆ ತಿಂಗಳು ತಿಂಗಳಿಗೆ ೧೫೦ ರೂಪಾಯಿಗಳ ಪ್ರಕಾರ ಬಂದ ಗತವರ್ಷದ ೧೫೬೦ ರೂಪಾಯಿಗಳಲ್ಲಿ ೬೦೭—೦—೮ ಗಳನ್ನು ಆಫೀಸು ಸಿಬ್ಬಂದಿಗಾಗಿಯೂ ೪೨೦ ರೂ ಮನೆ ಬಾಡಿಗೆಗಾಗಿಯೂ ೧೬೬—೧೫—೬ಗಳನ್ನು ಸಾದಿಲ್ವಾರಿಗಾಗಿಯೂ ಖರ್ಚುಮಾಡಿರುತ್ತದೆ ಈಗ ಪರಿಷತ್ತಿನಲ್ಲಿ ಕೆಲಸಮಾಡುತ್ತಿರುವ ಅರ್ಧಕಾಲದ ಪಂಡಿತರುಗಳ ಜತೆಗೆ ಮತ್ತೊಬ್ಬರನ್ನು ನಿಯಮಿಸುವುದು ಅತ್ಯಾವಶ್ಯಕವಾಗಿರುವುದರಿಂದ ಸರ್ಕಾರದಿಂದ ಬರುತ್ತಿರುವ ಮೊಬಲಗಿನ ಜತೆಗೆ ಪರಿಷತ್ತಿನ ಹಣವನ್ನೂ ಹಾಕಬೇಕಾಗಿದೆ

ಧರ್ಮಾರ್ಥವಾಗಿಟ್ಟಿರುವ ವಾಚಕ ಮಂದಿರ.

ಈ ವಾಚಕ ಮಂದಿರಕ್ಕೆ ಪರಿಷತ್ಪತ್ರಿಕೆಗೆ ವಿನಿಮಯವಾಗಿ ತ್ರೈಮಾಸಿಕ ಪತ್ರಿಕೆ ೧, ಮಾಸಪತ್ರಿಕೆಗಳು ೨೪, ವಾರಪತ್ರಿಕೆಗಳು ೧೦, ದೈನಂದಿನ ಪತ್ರಿಕೆ ೧ ಬರುತ್ತಿರುವುವು ಇದರ ಜತೆಗೆ ಪರಿಷತ್ತಿನ ಹಣದಿಂದ ವಂಗಭಾಷೆಯ ತ್ರೈಮಾಸಿಕ ಪತ್ರಿಕೆ ೧, ವಂಗ ಭಾಷೆಯ ಮಾಸಪತ್ರಿಕೆ ೨, ಇಂಗ್ಲೀಷು ಭಾಷೆಯಮಾಸಪತ್ರಿಕೆ ೨, ಮರಾಠಿಯ ಮಾಸಪತ್ರಿಕೆ ೧, ತೆಲುಗು ಮಾಸಪತ್ರಿಕೆ ೧, ಹಿಂದಿ ಭಾಷೆಯ ಮಾಸಪತ್ರಿಕೆ ೧, ಇಂಗ್ಲೀಷು ಮತ್ತು ಕನ್ನಡ ಮೈಸೂರು ಗೆಜೆಟ್ಟು—೧—ಇಷ್ಟನ್ನೂ ತರಿಸುತ್ತಿದೆ ಪ್ರತಿದಿನವೂ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಅನೇಕ ಮಂದಿ ವಾಚಕರು ನಮ್ಮ ವಾಚಕ ಶಾಲೆಯಿಂದ ಪ್ರಯೋಜನವನ್ನು ಹೊಂದುತ್ತಿರುವರು. ಇಂಗ್ಲೀಷಿನಲ್ಲಿ ಪ್ರಸಿದ್ಧವಾಗಿರುವ ರಾಯಲ್

ಏಷ್ಯಾಟಿಕ್ ಸೊಸೈಟಿ ಜರ್ನಲ್ ಮುಂತಾದುವುಗಳನ್ನೂ ತಮಿಳು ಮಲೆಯಾಳ ಮುಂತಾದ ದೇಶಭಾಷೆಗಳಲ್ಲಿರುವ ಪ್ರಸಿದ್ಧ ಮಾಸಪತ್ರಿಕೆಗಳನ್ನೂ ದ್ರವ್ಯೋಪಪತ್ತಿ ಹೆಚ್ಚಿದಾಗ ತರಿಸಬೇಕೆಂದು ಆಲೋಚಿಸಿದೆ ಸಂದಿಗ್ಧ ವಿಷಯ ವಿಚಾರಕ್ಕೆ ಇಂಗ್ಲೀಷು ಮುಂತಾದ ಮಾಸಪತ್ರಿಕೆಗಳ ಸಹಾಯವು ಬೇಕಾಗಿರುವುದು.

ಪುಸ್ತಕ ಭಾಂಡಾಗಾರ.

ಕಳೆದ ಪರಿಷತ್ತಿನ ವರ್ಷದ ಅಂತ್ಯದಲ್ಲಿ ೯ ಕನ್ನಡ ಗ್ರಂಥಗಳೂ ೩೭ ಸಣ್ಣವಹಿಗಳೂ [Pamphlets] ಇದ್ದುವು ೧೯೧೭ನೆಯ ಇಸವಿ ಮೇತಿಂಗಳಲ್ಲಿ ಬೆಂಗಳೂರು ಗೌರ್ನಮೆಂಟು ಸೆಂಟ್ರಲ್ ಬುಕ್ಕು ಡಿಪೋವಿನಿಂದ ೩೧, ಮೈಸೂರು ಓರಿಯಂಟಲ್ ಲೈಬ್ರರಿಯಿಂದ ೪೮, ಬೆಂಗಳೂರು ಶಾಸನದ ಇಲಾಖೆಯಿಂದ ೩೮, ಗ್ರಂಥಕರ್ತೃಗಳಿಂದ ೧೧೨ ಉದ್ಗ್ರಂಥಗಳೂ ಸಣ್ಣವಹಿಗಳೂ ಉಚಿತವಾಗಿ ಪರಿಷತ್ತಿಗೆ ಕೊಡಲ್ಪಟ್ಟುವು ಇದಕ್ಕಾಗಿ ಪರಿಷತ್ತಿನವರು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿರುತ್ತಾರೆ ಅತ್ಯಾವಶ್ಯಕಗಳಾದ ೧೧೬ ಪುಸ್ತಕಗಳನ್ನು ಪರಿಷತ್ತಿನವರು ಕ್ರಯವನ್ನು ಕೊಟ್ಟು ತೆಗೆದಿರುತ್ತಾರೆ. ದೊಡ್ಡ ಗ್ರಂಥಗಳೂ ಸಣ್ಣಗ್ರಂಥಗಳೂ ಒಟ್ಟು ೩೭೬ ಇದ್ದರೂ ಪುಸ್ತಕ ಭಾಂಡಾಗಾರದ ಅಂಕುರಾರ್ಪಣ ಮಾತ್ರವಾಗಿದೆಯೆಂದು ಭಾವಿಸಬೇಕಾಗಿದೆ

ಗ್ರಂಥಕರ್ತೃಗಳು ಪರಿಷತ್ತಿನಲ್ಲಿ ವಿಶ್ವಾಸವಿಟ್ಟು ಮುದ್ರಿತವಾದ ಗ್ರಂಥಗಳನ್ನು ಉಚಿತವಾಗಿ ಪರಿಷತ್ತಿಗೆ ಕೊಡುವುದಲ್ಲದೆ, ಕೈಬರಹದ ಗ್ರಂಥಗಳನ್ನು ಪರಿಷತ್ತಿನವರು ಪರಿಶೋಧಿಸಿ ಮುದ್ರಿಸಲೆಂದು ಕಳುಹಿಸುತ್ತಿರುವರು ಚಿತ್ರದುರ್ಗದ ಡಿಸ್ಟ್ರಿಕ್ಟು ದಾವಣಗೆರೆ ಗರ್ಲ್ ಸ್ಕೂಲ್ ಅಸಿಸ್ಟೆಂಟು ಮಾಸ್ಟರು ಮ|| ರಾ|| ಶ್ರೀ ಬಿ ನರಸಿಂಹಯ್ಯನವರು ೧೮ನೆಯ ಶತಮಾನದಲ್ಲಿ ಬೊಬ್ಬೂರ ರಂಗಕವಿಯಿಂದ ರಚಿತವಾದ ಪರಶುರಾಮರಾಮಾಯಣವನ್ನು ಪರಿಷತ್ತಿಗೆ ಕಳುಹಿಸಿಕೊಟ್ಟಿರುವರು ಈ ಗ್ರಂಥವು ವಾರ್ಧಿಕಷಟ್ಪದಿಯಲ್ಲಿ ನವರಸಭರಿತವಾಗಿ ಬರೆಯಲ್ಪಟ್ಟಿರುವಂತೆ ತೋರುತ್ತದೆ ಈ ಗ್ರಂಥವು ೪೩ ಸಂಧಿಗಳಿಂದಲೂ ೧೭೫೪ ಪದ್ಯಗಳಿಂದಲೂ ಕೂಡಿರುತ್ತದೆ ಪಂಡಿತ ನಂಜುಂಡಶಾಸ್ತ್ರಿಗಳವರು ಈ ಗ್ರಂಥವನ್ನು ಅವಲೋಕಿಸುತ್ತಿದ್ದಾರೆ

ಹೆಬ್ಬಾಳು ಕೃಷಿಯಪಾಠಶಾಲೆಯಲ್ಲಿ ಹಾಲಿಯಿರುವ ಮ|| ಎಸ್. ಗುರುಮೂರ್ತಿರಾಯರು ಆಂಧ್ರಕವಿಶ್ರೇಷ್ಠರಾದ ರಾಘವಚಂದ್ರಯ್ಯ ಚೌಧುರಿಯವರು ರಚಿಸಿದ ವಿಜಯನಗರದ ಸಾಮ್ರಾಜ್ಯವೆಂಬ ಚಾರಿತ್ರಕ ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಿ ಪರಿಷತ್ತಿನ ಪರಿಷ್ಕರಣಕ್ಕಾಗಿ ಕೊಟ್ಟಿರುತ್ತಾರೆ ಕಥಾವಿಷಯವು ಚರಿತ್ರೆಗೆ ಸಂಬಂಧಪಟ್ಟುದಾಗಿರುವುದರಿಂದ ಇದರ ಪರಿಷ್ಕರಣ ಕಾರ್ಯವನ್ನು ಸಾಧ್ಯವಾದಷ್ಟು ಶೀಘ್ರದಲ್ಲಿಯೇ ಕೈಕೊಳ್ಳಬೇಕೆಂಬ ಆಲೋಚನೆ ಇದೆ.

ಪರಿಷತ್ಪತ್ರಿಕೆ.

ಪರಿಷತ್ಪತ್ರಿಕೆಯ ಮೊದಲನೆಯ ಸಂಪುಟದಲ್ಲಿ ಶೋಧನಾಚಾತುರ್ಯವನ್ನೂ ಪಾಂಡಿತ್ಯವನ್ನೂ ತೋರಿಸುವ ಲೇಖನಗಳು ೧೮ ಇವೆ. ಈ ೧೮ ರಲ್ಲಿ "ಕರ್ಣಾಟಕ ವಿದ್ವನ್ಮಂಡಲಿಗಳ ಸ್ನೇಹಾಭಿವೃದ್ಧಿ, ಗ್ರಾಂಥಿಕ ಪ್ರಯೋಗಗಳ ಏಕೀಕರಣ, ಸದ್ವಿದ್ವೇಶಪಂಚಕ, ಕನ್ನಡ ನುಡಿಯ ಬೆಳವಣಿಗೆಗಿರುವ ತೊಂದರೆಗಳ ನಿವಾರಣೆ" ಎಂಬುವು ಬೇರೆ ಬೇರೆ ಕನ್ನಡ ನಾಡುಗಳಲ್ಲಿರುವ ಭಾಷಾಪ್ರಯೋಗ ಮಾರ್ಗಗಳನ್ನು ತೋರಿಸುತ್ತವೆ ಮೊದಲನೆಯದು, ಮುಂಬಯಿಯ ಕಡೆಯ ಪ್ರಯೋಗಗಳನ್ನು, ಎರಡನೆಯದು ಮೈಸೂರು ಕಡೆಯ ಪ್ರಯೋಗಗಳನ್ನು, ಮೂರನೆಯದು ತೆಲುಗುಮಾರ್ಗದ ಪ್ರಯೋಗಗಳನ್ನು ನಾಲ್ಕನೆಯದು ಧಾರಾಪುರದಕಡೆಯ ಪ್ರಯೋಗಗಳನ್ನು, ತೋರಿಸುವುದು ಧಾರ್ವಾಡದ ಉಪಸಂಘದವರದಿ, ಮೈಸೂರು ಉಪಸಂಘದ ವರದಿ ಎಂಬ ಲೇಖನಗಳು ಗ್ರಾಂಥಿಕ ಪ್ರಯೋಗಗಳ ಏಕೀಕರಣ ವಿಷಯದಲ್ಲಿ ಬಹು ಮುಖ್ಯಗಳಾಗಿವೆ ಇಂತಹ ಪ್ರಯತ್ನವನ್ನು ಹಿಂದೆ ಯಾವ ಸಭೆಯೂ ಮಾಡಿಲ್ಲ ದಂಡಿಯಕಾಲ, ಕರ್ಣಾಟಕ ವರ್ಣಮಾಲೆಯ ಚಾರಿತ್ರ್ಯದ ವಿಚಾರ, ಕರ್ಣಾಟಕ ಧಾತುಗಳು, ಬೌದ್ಧಸಾಹಿತ್ಯ, ಕನ್ನಡದ ದಕ್ಷಿಣೋತ್ತರ ಮಾರ್ಗಗಳ ವಿಚಾರ, ಆಂದ್ರಾರ್ಧಾನುಸ್ವಾರತತ್ತ್ವ ಎಂಬ ಆರುಲೇಖನಗಳು ಅಪೂರ್ವಶೋಧನಾಚಾತುರ್ಯವನ್ನು ಪ್ರದರ್ಶಿಸುವುವು ಈ ಆರರಲ್ಲಿ 'ಕರ್ಣಾಟಕ ವರ್ಣಮಾಲೆಯ ಚಾರಿತ್ರ್ಯದ ವಿಚಾರ, ಕನ್ನಡದ ದಕ್ಷಿಣೋತ್ತರಮಾರ್ಗಗಳು' ಎಂಬುವು ಕನ್ನಡ ಭಾಷೆಯ ಚರಿತ್ರೆಯನ್ನು ಬರೆಯುವುದಕ್ಕೆ ಅತ್ಯಾವಶ್ಯಕಗಳಾಗಿರುತ್ತವೆ ಮೈಸೂರಿನಲ್ಲಿರುವ ಪಂಡಿತರು "ಕರ್ಣಾಟಕ" ಪತ್ರಿಕೆಯೂ ದಕ್ಷಿಣೋತ್ತರಮಾರ್ಗಗಳ ವಿಚಾರ ಎಂಬ ಲೇಖನವನ್ನು ಶ್ಲಾಘಿಸುತ್ತಿರುವುವು ಈ ಲೇಖನವು ಹಳೆಗನ್ನಡ ಹೊಸಗನ್ನಡಗಳ ನಿಜವಾದ ಅರ್ಥವನ್ನು ವ್ಯವಸ್ಥೆ ಮಾಡಿದೆ ಯೆಂದು ಹೇಳಬಹುದಾಗಿದೆ ಪರಿಷತ್ಪತ್ರಿಕೆಯನ್ನು ಉನ್ನತ ಪದವಿಯ ತ್ರೈಮಾಸಿಕ ಪತ್ರಿಕೆಗಳ ವರ್ಗದಲ್ಲಿಯೇ ಇಟ್ಟುಕೊಂಡು ಬರುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಿದೆ ಸಾಧ್ಯವಾದಷ್ಟು ಶೀಘ್ರದಲ್ಲಿ ನಮ್ಮ ಈ ಪತ್ರಿಕೆಯನ್ನು ಮಾಸಪತ್ರಿಕೆಯಾಗಿ ಮಾಡಬೇಕೆಂಬ ಕುತೂಹಲವಿದೆ ಭರತ ಖಂಡದಲ್ಲಿರುವ ಬೇರೆ ಬೇರೆ ಸಾಹಿತ್ಯ ಪರಿಷತ್ಪತ್ರಿಕೆಗಳಿಗೆ ನಮ್ಮ ಪರಿಷತ್ಪತ್ರಿಕೆಯು ಸಮಾನವಾಗಿಲ್ಲವೆಂದು ಯಾರೂ ಹೇಳುವುದಕ್ಕಾಗುವುದಿಲ್ಲ.

ಆದರೆ ಪರಿಷತ್ಪತ್ರಿಕೆಯ ಪ್ರಥಮ ಸಂಪುಟವನ್ನು ಮುದ್ರಿಸುವುದಕ್ಕೆ ಕಾಗದಕ್ಕಾಗಿ ಸುಮಾರು ೩೫೮ ರೂಪಾಯಿಗಳೂ ಮುದ್ರಣಕ್ಕಾಗಿ ಸಮಾರು ೩೯೧ ರೂಪಾಯಿಗಳೂ ಒಟ್ಟು ೭೪೯ ರೂಪಾಯಿಗಳು ಕರ್ಚು ಆಗಿರುತ್ತವೆ ಪರಿಷತ್ಪತ್ರಿಕೆಗೆ ಚಂದಾದಾರರಿಂದ ಬಂದಿರುವ ಮೊಬಲಗು ೫೭ ರೂಪಾಯಿಗಳಾಗಿವೆ. ಪ್ರಥಮವರ್ಗದ ಸದಸ್ಯರುಗಳಿಂದ ೧೪೫ ರೂಪಾಯಿಗಳು, ದ್ವಿತೀಯ ವರ್ಗದ ಸದಸ್ಯರುಗಳಿಂದ

೧೩೯ ರೂಪಾಯಿಗಳು, ಒಟ್ಟು ೩೩೫ ರೂಪಾಯಿಗಳು ಮಾತ್ರ ಬಂದಿರುವುವು. ಉಳಿದ ೪೧೪ ರೂಪಾಯಿಗಳನ್ನು ಪರಿಷತ್ತಿನ ಬಂಡವಾಳದಿಂದ ಕರ್ಚು ಮಾಡಿರುವು ದಾಗಿದೆ ಹೀಗೆ ಮುಂದಕ್ಕೂ ಮಾಡುವುದಾದರೆ ಪರಿಷತ್ತಿಗೆ ತುಂಬಾ ಅನನುಕೂಲ ವುಂಟಾಗುವುದು. ಹೀಗಾಗದಿರುವುದಕ್ಕಾಗಿ ಯಾವ ಏರ್ಪಾಡುಗಳನ್ನು ಮಾಡಬೇಕೊ ಅವುಗಳನ್ನು ಪರಿಷತ್ತಿನ ಸದಸ್ಯರು ನಿಷ್ಕರ್ಷಿಸಬೇಕಾಗಿದೆ

ಪರಿಷತ್ತಿನಿಂದ ಮುದ್ರಿತವಾಗಿರುವ ಗ್ರಂಥಗಳು.

ಕನ್ನಡ ನಾಡುಗಳ ಜನಸಾಮಾನ್ಯದಲ್ಲ ಲೋಕವ್ಯವಹಾರ ಜ್ಞಾನವನ್ನು ಸುಲಭಶೈಲಿಯ ಭಾಷೆಯಲ್ಲಿ ಹರಡುವುದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡಬೇಕೆಂದು ಕರ್ಣಾಟಕ ವಿದ್ವನ್ಮಂಡಲಿಯ ಪ್ರಥಮ ಸಮ್ಮೇಳನದಲ್ಲಿ ನಿರ್ಧರವಾಯಿತು. ಈ ವುದ್ದೇಶವನ್ನು ನೆರವೇರಿಸುವುದಕ್ಕಾಗಿಯೂ ಬಾಲಕ ಬಾಲಿಕೆಯರ ಪಠನಕ್ಕೆ ಉಪಯೋಗವಾಗಿರುವುದಕ್ಕಾಗಿಯೂ ಪಶ್ಚಿಮಾರ್ಧ ಗೋಳದಲ್ಲಿ ಸುಪ್ರಖ್ಯಾತವಾಗಿರುವ ಸಂಯುಕ್ತ ಮಹಾ ಸಂಸ್ಥಾನದ ಕೆಲವು ವಿಷಯಗಳನ್ನು ತಿಳಿಸುವುದಕ್ಕಾಗಿಯೂ ಪ್ರೆಸಿಡೆಂಟ್ ಗಾರ್‌ಫೀಲ್ಡ್‌ರವರ ಚರಿತ್ರೆಯನ್ನು ಮುದ್ರಿಸಿರುತ್ತದೆ ವೃತ್ತಾಂತ ಪತ್ರಿಕೆಗಳು ಆಗಲೇ ಈ ಪುಸ್ತಕವನ್ನು ಹೊಗಳುತ್ತಿವೆ ಮತ್ತು ಶ್ರೀಮನ್ ಮಹಾರಾಜ ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯವರು ಈ ಪುಸ್ತಕವನ್ನು ವಿದ್ಯಾರ್ಥಿಗಳಿಗೆ ಕೊಡುವ ಬಹುಮಾನ ಪುಸ್ತಕದ ತರಗತಿಯಲ್ಲಿ ಸೇರಿಸಿರುವುದಲ್ಲದೆ ೧೯೧೯ನೆಯ ಲೋಯರ್ ಸೆಕೆಂಡರಿ ಪರೀಕ್ಷೆಗೆ ಗದ್ಯರೂಪವಾದ ಪಾಠದ ಪುಸ್ತಕವಾಗಿರುವಂತೆಯೂ ನಿರ್ಣಯಿಸಿರುತ್ತಾರೆ ಹೀಗೆ ಮಾಡುದುದಕ್ಕಾಗಿ ಪರಿಷತ್ತಿನ ಪರವಾಗಿ ಕಾರ್ಯ ನಿರ್ವಾಹಕ ಮಂಡಲಿಯವರು ಕೃತಜ್ಞತಾಪೂರ್ವಕವಾದ ವಂದನಗಳನ್ನು ಮೈಸೂರು ವಿದ್ಯಾಭ್ಯಾಸದ ಇಲಾಖೆಗೆ ಸಮರ್ಪಿಸುತ್ತಾರೆ

ಪೂರ್ವಕಾಲದ ಉದ್ಗ್ರಂಥಗಳನ್ನು ಪರಿಷ್ಕರಿಸಿ ಮುದ್ರಿಸುವುದೂ ಪರಿಷತ್ತಿನ ಕಾರ್ಯಗಳಲ್ಲಿ ಒಂದಾಗಿರುತ್ತದೆ ಕ್ರಿ ಶ ೧೦ ನೆಯ ಶತಮಾನದ ಉತ್ತರಾರ್ಧದಲ್ಲಿ ರಚಿತವಾದ ಚಾವುಂಡರಾಯ ಪುರಾಣವು ಈಗ ದೊರೆತಿರುವ ಕರ್ಣಾಟಕ ಗದ್ಯಗ್ರಂಥಗಳಲ್ಲಿ ಪುರಾತನತಮವಾಗಿರುವುದರಿಂದ ಉದ್ಗ್ರಂಥಾವಳಿಯ ಪ್ರಥಮ ಪುಸ್ತಕವಾಗಿ ಇದರ ಆದಿಪುರಾಣಭಾಗವನ್ನು ಪ್ರಕಟಿಸಲು ತಕ್ಕ ಏರ್ಪಾಡು ಮಾಡಲಾಗಿದೆ ಇದರಿಂದ ಜೈನರ ಗ್ರಂಥಗಳಿಗೂ ಬ್ರಾಹ್ಮಣ ಪುರಾಣಗಳಿಗೂ ಇರುವ ಸಂಬಂಧವು ಹೊರಪಡುವುದು ಈ ಗ್ರಂಥದ ಪರಿಷ್ಕರಣಕ್ಕಾಗಿ ಕೈ ಬರಹದ ಪ್ರತಿಗಳನ್ನು ಸೌಜನ್ಯದಿಂದ ಕಳುಹಿಸಿ, ಪರಿಷತ್ಕಾರ್ಯಕ್ಕೆ ನೆರವಾಗಿರುವ ಸಾಲಿಗ್ರಾಮದ ಮ|| ರಾ|| ನಾಗರಾಜಯ್ಯನವರು, ಮ||ರಾ|| ಪದ್ಮರಾಜಯ್ಯನವರು, ಹೊಳಲ್ಕೆರೆ ಮ|| ರಾ|| ಬ್ರಹ್ಮಯ್ಯನವರು, ಶ್ರವಣಬೆಳಗೊಳದ ಪಂಡಿತರು ಜಿನದಾಸ ದೊರ್ಬಲಿ ಶಾಸ್ತ್ರಿಗಳು, ಮೈಸೂರು ಓರಿಯಂಟಲ್ ಲೈಬ್ರರಿ ಮುಖ್ಯಾಧಿಕಾರಿಗಳು— ಇವರಿಗೆ ಕಾರ್ಯನಿರ್ವಾಹಕ ಮಂಡಲಿಯವರು ವಂದನೆಗಳನ್ನು ಸಮರ್ಪಿಸುತ್ತಾರೆ.

ಉತ್ತಮ ಪ್ರಬಂಧ ಬಹುಮಾನ.

ಮುಂಬಯಿ ಅಧಿಪತ್ಯದವರು ಉತ್ತರ ಕನ್ನಡ ಜಿಲ್ಲಾ ಮುಂತಾದ ಕನ್ನಡ ದೇಶಗಳಲ್ಲಿ ಕರ್ನಾಟಕ ಪಾಠಶಾಲೆಗಳನ್ನು ಸ್ಥಾಪಿಸಿದ ಕಾಲದಿಂದೀಚೆಗೆ ಆ ಪ್ರಾಂತದ ಗ್ರಾಂಥಿಕರೂಪಗಳು ಮರಾಠಿ ಮತ್ತು ಇಂಗ್ಲೀಷ್ ಭಾಷೆಗಳ ಸಂಘರ್ಷಣ ಪ್ರಭಾವ ದಿಂದ ಬೇರೆ ರೂಪಗಳನ್ನು ಹೊಂದುತ್ತ ಬಂದುವು. ಈಗ ಮೈಸೂರಿನ ಗ್ರಾಂಥಿಕ ರೂಪಗಳಿಗೂ ಮುಂಬಯಿ ಕನ್ನಡ ಪ್ರಾಂತಗಳ ಗ್ರಾಂಥಿಕ ರೂಪಗಳಿಗೂ ಬಹು ವ್ಯತ್ಯಾಸಗಳು ತೋರ ಬರುವುವು ಈ ವ್ಯತ್ಯಾಸಗಳನ್ನು ಹೋಗಲಾಡಿಸುವ ಉಪಾಯ ಗಳನ್ನು ನಿಷ್ಕರ್ಷಿಸುವುದಕ್ಕಾಗಿ ಉತ್ತಮ ಪ್ರಬಂಧ ಬಹುಮಾನವೊಂದನ್ನು ಪರಿಷತ್ತು ಪ್ರಕಟಿಸಿತು. ಒಂಬತ್ತು ಮಂದಿ ವಿದ್ಯಾವಂತರು ಪ್ರಬಂಧಗಳನ್ನು ರಚಿಸಿ ನಿಯಮಿತ ಕಾಲಕ್ಕೆ ಒಪ್ಪಿಸಿದರು. ಇವುಗಳಲ್ಲಿ ಉತ್ತಮವಾದುದನ್ನು ನಿರ್ಣಯಿಸುವುದಕ್ಕಾಗಿ ರಾಜ ಮಂತ್ರ ಪ್ರವೀಣ ಮ|| ರಾ|| ಎಚ್ ವಿ ನಂಜುಂಡಯ್ಯ, ಎಂ. ಎ, ಎಮ್ ಎಲ್, ಸಿ. ಐ. ಇ. ಯವರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರ ಜತೆಗೆ ಮದ್ರಾಸಿನಲ್ಲಿರುವ ಮ||ರಾ|| ಬೆನಗಲ್ ರಾಮರಾವ್. ಎಮ್.ಎ, ಎಲ್ಎಲ್ ಬಿ, ಧಾರ್ವಾಡದಲ್ಲಿರುವ ಮ|| ರಾ|| ವಿ. ಬಿ ಆಲೂರ್ ಬಿ ಎ, ಎಲ್ಎಲ್ ಬಿ, ಮೈಸೂರಿನಲ್ಲಿರುವ ಮ|| ರಾ|| ಬಿ ಎಂ ಶ್ರೀ ಕಂಠಯ್ಯ, ಎಂ ಎ., ಬಿ ಎಲ್ ಅವರನ್ನು ಸೇರಿಸಿ ಉಪಸಂಘವನ್ನು ನಿರ್ಮಿಸಿದುದಾ ಯಿತು. ಈ ಉಪಸಂಘದವರು ಪ್ರಬಂಧಗಳನ್ನು ಪರಿಶೀಲಿಸಿ ಪರಿಷತ್ತಿನ ಬಹುಮಾನವನ್ನು ಹಾಲಿ ಅಲಹಾಬಾದಿನಲ್ಲಿ ಕರ್ನಲ್‌ಗಂಜಿನಲ್ಲಿರುವ ಮ||ರಾ|| ನರಹರಯ್ಯ., ಬಿ ಎ, ಎಲ್ ಎಲ್ ಬಿ ಯವರಿಗೆ ಕೊಟ್ಟಿರುವರು. ಇವರ ಉಪನ್ಯಾಸವು ಇವರಿಗಿರುವ ಸಂಸ್ಕೃತದ ಪರಿಚಯವನ್ನೂ ಪ್ರಾಕೃತದ ಪರಿಚಯವನ್ನೂ, ಹಿಂದಿ, ಮರಾಠಿ, ತೆಲುಗು ಮೊದ ಲಾದ ದೇಶಭಾಷೆಗಳಲ್ಲಿರುವ ಪರಿಚಯವನ್ನೂ ಪ್ರದರ್ಶಿಸುವುದು ಶಿವಮೊಗ್ಗಾ ಡಿಸ್ಟ್ರಿಕ್ಟು ನೆಗವಾಡಿಯಲ್ಲಿರುವ ಮ|| ರಾ|| ನಾರಾಯಣ ಶ್ರೀನಿವಾಸ ರಾಜಪುರೋ ಹಿತರವರ ಉಪನ್ಯಾಸವು ಎರಡನೆಯದಾಗಿದ್ದರೂ ಸನ್ಮಾನಾರ್ಹವಾಗಿದೆಯೆಂದು ಪರಿ ಷತ್ತಿನವರು ಈ ಉಪನ್ಯಾಸಕ್ಕೆ ೨೫ ರೂ ಗಳ ಬಹುಮಾನವನ್ನು ಕೊಡುವುದುಚಿತ ವೆಂದು ಕಾರ್ಯನಿರ್ವಾಹಕ ಮಂಡಲಿಯಲ್ಲಿ ನಿಶ್ಚಿತವಾಯಿತು. ಈ ಮೊಬಲಗನ್ನು ಪರಿಷತ್ತಿನ ಪರವಾಗಿ ರಾಜಮಂತ್ರಪ್ರವೀಣ ಮ|| ರಾ|| ಎಚ್ ವಿ ನಂಜುಂಡಯ್ಯ ಎಂ. ಎ., ಎಮ್ ಎಲ್, ಸಿ ಐ ಇ ಯವರು ಕೊಡುವುದಕ್ಕೆ ಮುಂಬರಿದುದಕ್ಕಾಗಿ ಪರಿಷತ್ತಿನವರು ಬಹು ಸಂತೋಷಪಡುತ್ತಾರೆ

ಪ್ರಾರ್ಥನೆ.

ಅನುಬಂಧದಲ್ಲಿ ಕೊಟ್ಟಿರುವ ಆಯವ್ಯಯದ ಪಟ್ಟಿಯಲ್ಲಿ ಕಾಣಬರುವಂತೆ ನಳ ಸಂವತ್ಸರದಲ್ಲಿ ವಸೂಲಾಗಿರುವ ೪೫೨೭-೧೧-೦ಯಲ್ಲಿ ಖರ್ಚು ಸುಮಾರು ೪೦೫೧ ರೂ ಚಿಲ್ಲರೆ ಖಾತಾ ಬಾಕಿ ೪೭೫ ರೂ. ಚಿಲ್ಲರೆ ಉಳಿದಿವೆ. ಚಾಲ್ತಿ ವರ್ಷದಲ್ಲಿ ಗಾರ್

ಫೀಲ್ಡ್ ಚರಿತೆಯು ೧೪೦೦೦ ಪ್ರತಿಗಳನ್ನು ಮುದ್ರಿಸುವುದಕ್ಕೆ ಸುಮಾರು ೩೪೦೦ ರೂ. ಗಳು ಪರಿಷತ್ಪತ್ರಿಕೆಯನ್ನು ಮುದ್ರಿಸುವುದಕ್ಕೆ ಸುಮಾರು ೮೦೦ ರೂ ಗಳು—ಕನಿಷ್ಠ ಪಕ್ಷ ಒಟ್ಟು ೪೨೦೦ ರೂ ಗಳು ಗ್ರಂಥ ಮುದ್ರಣಕ್ಕಾಗಿಯೇ ತುರ್ತಾಗಿ ಬೇಕಾಗಿರುತ್ತವೆ ಕರ್ಣಾಟಕ ಭಾಷೆಯ ಉದ್ಗ್ರಂಥಗಳಲ್ಲಿ ಸುಪ್ರಸಿದ್ಧಗಳಾಗಿರುವ ಪಂಪನ ಭಾರತವನ್ನೂ ಅಭಿನವ ಪಂಪನ ರಾಮಾಯಣವನ್ನೂ ಪರಿಶೋಧಿಸಿ ಶುದ್ಧಪ್ರತಿಗಳನ್ನು ಉಚಿತವಾದ ಉಪೋದ್ಘಾತ ಮುಂತಾದುವುಗಳೊಡನೆ ಮುದ್ರಿಸಿ ಕೊಡಬೇಕೆಂದು ಮೈಸೂರು ಸರ್ಕಾರದವರು ಪರಿಷತ್ತನ್ನು ಕೇಳಿರುವರು ಈ ಸತ್ಕಾರ್ಯವನ್ನು ಒಪ್ಪಿಕೊಂಡು ಅದಕ್ಕಾಗುವ ಕರ್ಚಿನ ಅಂದಾಜ ಪಟ್ಟಿಯನ್ನು ಸರ್ಕಾರಕ್ಕೆ ಒಪ್ಪಿಸಿರುತ್ತದೆ ಪರಿಷತ್ತಿನ ಕಾರ್ಯಗಳ ಜತೆಯಲ್ಲಿ ಈ ಕಾರ್ಯವನ್ನೂ ನಿರ್ವಹಿಸುವುದಕ್ಕಾಗಿ ಇನ್ನೂ ಇಬ್ಬರು ಮೂವರು ಪಂಡಿತರುಗಳನ್ನು ನಿಯಮಿಸಬೇಕಾಗಿ ಬರುವುದು ಎಂತೂ ಪರಿಷತ್ತಿಗೆ ಹೆಚ್ಚು ಬಂಡವಾಳವು ಅತ್ಯಾವಶ್ಯಕವಾಗಿರುವುದು ಪರಿಷತ್ತಿನಿಂದ ಭಾಷಾಪರಿಷ್ಕರಣ ಕಾರ್ಯಗಳೂ ದೇಶೋಪಯುಕ್ತ ಗ್ರಂಥ ರಚನೆಯೂ ಸಮರ್ಪಕವಾಗಿ ನಡೆವುದೆಂದು ಮೊದಲು ತೋರಿಸಿ ಆಮೇಲೆ ಶ್ರೀಮಂತರುಗಳ, ಜಹಗೀರುದಾರರುಗಳ, ಕನ್ನಡ ನಾಡುಗಳ ಮಹಾಜನಗಳ ದ್ರವ್ಯ ಸಹಾಯವನ್ನು ಪ್ರಾರ್ಥಿಸುವುದುಚಿತವೆಂದು ಕಾರ್ಯನಿರ್ವಾಹಕ ಮಂಡಲಿಯವರು ಈಗಿನವರಗೂ ಕಾಲನಿರೀಕ್ಷಣೆಯನ್ನು ಮಾಡುತ್ತಾ ಬಂದಿರುವರು. ಪರಿಷತ್ತಿನ ಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೆ ಬೇಕಾಗಿರುವ ದ್ರವ್ಯ ಸಂಪತ್ತಿಯನ್ನು ಸರ್ವರೂ ಒದಗಿಸಿಕೊಟ್ಟು ಪರಿಷತ್ತಿನ ಕಾರ್ಯಗಳು ನೆರವೇರುವಂತೆ ಮಾಡಿ ಕೀರ್ತಿಯನ್ನು ಪಡೆಯಬೇಕೆಂದು ಕಾರ್ಯ ನಿರ್ವಾಹಕ ಮಂಡಲಿಯವರು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತಾರೆ

ಕರ್ಣಾಟಕ ಸಾಹಿತ್ಯಪರಿಷತ್ತು,	}	ಪಿ ಎಸ್ ಅಚ್ಯುತರಾಯ
ಬೆಂಗಳೂರು.		ಆರ್ ರಘುನಾಥರಾಯ
೧೩ ೫—೧೯೧೭		ಜಂಟಿ ಗೌರವಕಾರ್ಯದರ್ಶಿಗಳು

ಕರ್ಣಾಟಕ ಸಾಹಿತ್ಯ ಪರಿಷತ್ತಿನ ನಳಸಂವತ್ಸರದ ಆಯವ್ಯಯಗಳ ಮೊತ್ತದ ಪಟ್ಟಿ (೧೯೧೬—೧೯೧೭)

ಆಯ.	ಮೊಬಲಗು			ಷರಾ	ವ್ಯಯ.	ಮೊಬಲಗು			ಷರಾ
೧ ಹಿಂದಿನ ಸಿಲ್ಕು	೫೫೬	೧೩	೯		೧ ಆಫೀಸು ಸಿಬ್ಬಂದಿಗೆ	೪೦೭	೧	೮	
೨ ಆಶ್ರಯದಾತರು ಮುಂತಾದವರಿಂದ ಬಂದ ಚಂದಾ ಮೊಬಲಗು	೯೮೧	೧೪	೭		೨ ಮನೆಯ ಬಾಡಿಗೆ	೬೨೦	೦	೦	
					೩ ದೀಪದ ಕರ್ಚು	೩೬	೪	೧೦	
೩ ಪರಿಷತ್ಪತ್ರಿಕೆಗೆ ಬಂದ ಚಂದಾ ಮೊಬಲಗು, ಮಾರಾಟದಿಂದ ಬಂದ ಮೊಬಲಗು ಸಹಿತ	೫೧	೨	೦		೪ ಕಾಗದ ಮುಂತಾದುವುಗಳಿಗೆ	೧೧೭	೮	೦	
					೫ ಅಚ್ಚಿನ ಕಾಗದ	೬೩೧	೫	೨	
೪ ಸರ್ಕಾರದಿಂದ ಬಂದ ತಿಂಗಳಗಟ್ಟಲೆ ಸಹಾಯದ್ರವ್ಯ	೮೯೧	೪	೮		೬ ಕಂಟಿಂಜೆನ್ಸಿ ಟಪಾಲ್ ಛಾರ್ಜು ಸಹಿತ	೧೩೦	೮	೨	
೫ ಸರ್ಕಾರದಿಂದ ಮೊತ್ತವಾಗಿ ಬಂದದ್ರವ್ಯ	೧೦೦೦	೦	೦		೭ ಮುದ್ರಣದ ಮತ್ತು ಬೈಂಡಿಂಗಿನ ಕರ್ಚು	೧೨೦	೭	೯	
೬ ಡಿಪಾಜಿಟ್ಟುಗಳ ಮೇಲಿನ ಬಡ್ಡಿ	೧೧	೮	೦		೮ ಮಾಸಪತ್ರಿಕೆ ಮುಂತಾದುವುಗಳಿಗೆ ಚಂದಾಹಣ	೭೧	೩	೦	
೭ ಮುಂಗಡವಾಗಿ ಕೊಟ್ಟ ಮೊಬಲಗು ವಾಪಸುಬಂದುದು	೩೨	೦	೦		೯ ಭಾಂಡಾಗಾರಕ್ಕೆ ಸೇರಿಸಿದ ಪುಸ್ತಕಗಳಿಗಾಗಿ	೨೯೧	೧೪	೬	
					೧೦ ಫರ್ನಿಚರಿಗಾಗಿ	೬೫೮	೧	೦	
					೧೧ ಡೆಡ್‌ಸ್ಟಾಕ್	೧೧೯	೪	೯	
					೧೨ ಮುಂಗಡದ ಮೊಬಲಗು	೧೬೪	೦	೦	
					೧೩ ಪಂಡಿತ ಬಹುಮಾನಕ್ಕೆ	೨೦೦	೦	೦	
					೧೪ ಇತರ ಬಾಬುಗಳಿಗೆ	೧೮೩	೩	೫	
					೧೫ ಈಗಿನ ಸಿಲ್ಕು	೪೭೫	೧೦	೯	
ಜುಮ್ಲಾ	೪೫೨೭	೧೧	೦		ಜುಮ್ಲಾ	೪೫೨೭	೧೧	೦	

ಬೆಂಗಳೂರು ಸಿಟಿ ಕೋ ಆಪರೇಟಿವ್ ಸೊಸೈಟಿಯಲ್ಲಿ	೪೩೫—೦—೨
ಮೈಸೂರು ಬ್ಯಾಂಕು	೧೬—೯—೩
ಕಾರ್ಯದರ್ಶಿಯವರ ಕೈಯಲ್ಲಿ	೨೪—೧—೬
ಜುಮ್ಲಾ	೪೭೫—೧೦—೯

ಪರೀಕ್ಷಿಸಿದೆನು ಸರಿಯಾಗಿದೆ

ಕೃಷ್ಣಮೂರ್ತಿರಾವ್ ಬಿ. ಎ.
ಆಯವ್ಯಯ ಶೋಧಕ

ಆರ್. ರಘುನಾಥರಾವ್,
ಜಂಟಿ ಗೌರವ ಕಾರ್ಯದರ್ಶಿ.

ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನ

ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನವು ಜೂನ್ ಮಾಹೆ ೮ ನೆಯ ತಾರೀಖು ಶುಕ್ರವಾರ ಪ್ರಾತಃಕಾಲ ೮ ಗಂಟೆಗೆ ಸರಿಯಾಗಿ ಮೈಸೂರಲ್ಲಿರುವ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ನಡೆಯಿತು ವಿಶಾಲವಾದ ಮತ್ತು ಸುಂದರವಾದ ಈ ಕಟ್ಟಡವನ್ನು ರಮಣೀಯವಾಗಿ ಅಲಂಕರಿಸಿದ್ದರು ೭|| ಗಂಟೆಗೆ ಮುಂಚಿತವಾಗಿಯೇ ಬಹುಮಂದಿ ದೊಡ್ಡಮನುಷ್ಯರು ನೆರೆದಿದ್ದರು. ಮೈಸೂರು ಸಂಸ್ಥಾನದ ಮುಖ್ಯ ಮುಖ್ಯ ಅಧಿಕಾರಿಗಳೂ ಕರ್ಣಾಟಕಸಾಹಿತ್ಯ ಪರಿಷತ್ತಿನ ಅಧಿಕಾರಿಗಳೂ ಮೆಮೋರಿಯಲ್ ಹಾಲಿನ ದಕ್ಷಿಣಭಾಗದ ಜಗುಲಿಯಲ್ಲಿ ಶ್ರೀಮದ್ಯುವರಾಜರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಜಿ. ಸಿ. ಐ ಇ ಯವರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದು ೮ ಗಂಟೆಗೆ ಸರಿಯಾಗಿ ದಯಮಾಡಿಸಿದ ಶ್ರೀಮದ್ಯುವರಾಜರವರನ್ನು ಇದಿರ್ಗೊಂಡು ಒಳಕ್ಕೆ ಕರೆದುಕೊಂಡು ಬಂದರು ಶ್ರೀಮದ್ಯುವರಾಜರವರು ಸಮ್ಮೇಳನದ ಪ್ರಾರಂಭೋತ್ಸವದ ಅಗ್ರಾಸನವನ್ನು ಕೃಪಾಪರಿಪೂರ್ಣತೆಯಿಂದ ಮೊದಲೇ ಒಪ್ಪಿದ್ದಂತೆ ಅಲಂಕರಿಸಿದರು ಈ ಸಮ್ಮೇಳನಕ್ಕೆ ಮದರಾಸ್ ಮುಂತಾದ ಪರಸ್ಥಳಗಳಿಂದಲೂ ಅನೇಕ ದೊಡ್ಡಮನುಷ್ಯರು ದಯಮಾಡಿಸಿದ್ದರು. ಸಮ್ಮೇಳನಕ್ಕೆ ದಯಮಾಡಿಸಿದ್ದ ಪ್ರಮುಖರುಗಳಲ್ಲಿ

ಸರದಾರ್ ಎಂ ಕಾಂತರಾಜ ಅರಸಿನವರು ಸಿ ಯುಸ್ ಐ.

ಮ|| ರಾ|| ಎಂ ಎ ಬಾಲರಾಜ ಅರಸಿನವರು

,, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರವರು ಬಿ. ಎಸ್. ಸಿ, ಎಲ್ ಸಿ. ಇ.

,, ರಾಜಮಂತ್ರಪ್ರವೀಣ ಎಚ್. ವಿ ನಂಜುಂಡಯ್ಯನವರು ಎಂ ಎ, ಸಿ ಐ ಇ.

,, ರಾಜಮಂತ್ರಪ್ರವೀಣ, ದಿವಾನ್‌ಬಹದ್ದೂರ್ ಜಿ ಎಸ್ ಚಕ್ರವರ್ತಿಯವರು ಎಂ. ಎ, ಎಫ್ ಆರ್. ಎ ಎಸ್.

,, ವಿ ಎ ನಾರಾಯಣರಾಯರವರು

,, ದಿವಾನ್‌ಬಹದ್ದೂರ್, ರಾಜಸಭಾಭೂಷಣ, ಕೆ. ಪಿ. ಪುಟ್ಟಣ್ಣಸೆಟ್ಟರವರು ಸಿ. ಐ. ಇ

,, ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಎಂ. ಎ

,, ಪಿ ರಾಘವೇಂದ್ರರಾಯರವರು ಬಿ. ಎ, ಬಿ ಎಲ್

,, ಬಿ ರಾಮಕೃಷ್ಣರಾಯರವರು

,, ಎಂ ರಾಮರಾಯರವರು

,, ರಾವ್‌ಬಹದ್ದೂರ್ ಎಂ. ಶಾಮರಾಯರವರು ಎಮ್. ಎ.

,, ಡಾಕ್ಟರ್ ಎಮ್. ಶ್ರೀನಿವಾಸರಾಯರವರು

,, ಬಾಲಸುಂದರಂ ಅಯ್ಯರವರು ಬಿ. ಎ.

,, ಸಿ. ವೆಂಕಟರಾಯರವರು

ಮ|| ರಾ|| ಎಮ್. ಎ. ನಾರಾಯಣಯ್ಯಂಗಾರ್ಯರವರು ಬಿ. ಎ., ಬಿ ಎಲ್.

,, ಎಚ್. ಲಿಂಗರಾಜಅರಸಿನವರು

,, ಪ್ರಾಕ್ತನವಿಮರ್ಶವಿಚಕ್ಷಣ, ರಾವ್‌ಬಹದ್ದೂರ್ ಆರ್ ನರಸಿಂಹಾಚಾರ್ಯ
ರವರು ಎಮ್. ಎ.

,, ರೆವರೆಂಡ್ ಗಲಿಫರ್ಡ್ ಸಾಹೇಬರವರು

,, ಜೆಹರುದ್ದೀನ್ ಮೆಕ್ಕಿ ಸಾಹೇಬರವರು ಬಿ ಎ

,, ಮೀರ್ ಹಮ್ಜಾ ಹುಸೇನ್ ಸಾಹೇಬರವರು ಬಿ. ಎ., ಬಿ. ಎಲ್

,, ಬಿ ದಾಸಪ್ಪನವರು, ಬಿ. ಎ

,, ಬಿ ರಾಮರಾಯರವರು ಎಮ್. ಎ., ಎಲ್‌ಎಲ್. ಬಿ

,, ಆರ್. ತಾತಾಚಾರ್ಯರವರು ಎಂ ಎ , ಎಲ್ ಟಿ.

,, ಎಚ್. ನಾರಾಯಣರಾಯರವರು, ಎಂ. ಎ

,, ಸಾಹುಕಾರ್ ಎಮ್. ಎಲ್. ವರ್ಧಮಾನಯ್ಯನವರು

,, ಟಿ. ಜಿ. ಲಕ್ಷ್ಮಣರಾಯರವರು ಎಲ್ ಸಿ. ಇ.

,, ರಾಜಗೋಪಾಲಕೃಷ್ಣರಾಯರವರು (ಉಡಿಪಿ)

,, ಎಮ್. ಶ್ರೀನಿವಾಸರಾಯರವರು, ಬಿ. ಎ.

,, ಮುನಿಸಿಪಲ್ ವೈಸ್‌ಪ್ರೆಸಿಡೆಂಟ್ ನಾರಾಯಣರಾಯರವರು

,, ಅಂಬೈ ಅಣ್ಣಯ್ಯಪಂಡಿತರವರು

,, ಎಸ್. ರಾಘವೇಂದ್ರರಾಯರವರು ಬಿ. ಎ.

,, ಎಂ. ಸಿ. ರಂಗಯ್ಯಂಗಾರ್ಯರವರು ಬಿ. ಎ.

,, ಬಾಪು ಸುಬ್ಬರಾಯರವರು ಬಿ. ಎ

,, ಡಿ. ವೆಂಕಟರಾಮಯ್ಯನವರು ಬಿ. ಎ. ಎಲ್ ಟಿ

,, ಎಂ. ವೆಂಕಟಕೃಷ್ಣಯ್ಯನವರು

,, ಎ ಎನ್. ನರಸಿಂಹಯ್ಯಂಗಾರ್ಯರವರು

,, ಎಚ್. ನರಸಿಂಗರಾಯರವರು

,, ಎಮ್. ಹಿರಿಯಣ್ಣಯ್ಯನವರು ಎಂ. ಎ., ಎಲ್. ಟಿ.

,, ಮಿಲರ್. ಎನ್. ಲಕ್ಷ್ಮೀನಾರಣಪ್ಪನವರು ಬಿ. ಎ., ಎಲ್. ಎಲ್. ಬಿ.

,, ಪಂ|| ಬಿ. ಚನ್ನಕೇಶವಯ್ಯನವರು

,, ಎಚ್ ಚನ್ನಕೇಶವಯ್ಯಂಗಾರ್ಯರವರು

,, ಅರಮನೆ ಧರ್ಮಾಧಿಕಾರಿ ರಾಘವೇಂದ್ರಾಚಾರ್ಯರವರು

,, ಕವಿತಿಲಕ ಪಂಡಿತ ಅಯ್ಯಾಶಾಸ್ತ್ರಿಗಳವರು

,, ಪಂಡಿತ ಜಿನರಾಜದಾಸ ದೋರ್ಬಲಿಶಾಸ್ತ್ರಿಗಳು

,, ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳವರು

ಮ|| ರಾ|| ಸರಳಕವಿಸೂರಿ ಪಂಡಿತ ರಾಜಗೋಪಾಲಚಕ್ರವರ್ತಿಗಳು
,, ಪಂಡಿತ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರವರು
,, ,, ಎ. ಶಾಮಾಚಾರ್ಯರವರು
,, ,, ಟಿ ಶ್ರೀನಿವಾಸರಾಘವಾಚಾರ್ಯರವರು
,, ,, ಸುಬ್ಬರಾಯಶಾಸ್ತ್ರಿಗಳವರು
,, ,, ವೆಂಕಟರಾಮಶಾಸ್ತ್ರಿಗಳವರು
ಇನ್ನೂ ಇತರರೂ ಇದ್ದರು.

ದಿವಾನ್ ಸಾಹೇಬರವರಾದ ಸರ್ ಎಮ್. ವಿಶ್ವೇಶ್ವರಯ್ಯ ಕೆ. ಸಿ. ಐ. ಇ. ಯವರು ರಾಜ್ಯಕಾರ್ಯಗೌರವದಿಂದ ಸಭೆಗೆ ಬರಲು ತಮಗೆ ಅನುಕೂಲಿಸಲಿಲ್ಲವೆಂದು ತಿಳಿಸಿ ಕರ್ನಾಟಕ ಸಾಹಿತ್ಯಪರಿಷತ್ತಿನ ಶ್ರೇಯೋಭಿವೃದ್ಧಿಯನ್ನು ಬಯಸುವ ಪತ್ರವನ್ನು ಕಳುಹಿಸಿದ್ದರು.

ಸಭಾಕಾರ್ಯದ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನಾರೂಪದ ಸಂಸ್ಕೃತ ಶ್ಲೋಕಗಳೂ ಕನ್ನಡ ಪದ್ಯಗಳೂ ಇಂಪಾದ ರಾಗದಿಂದ ಓದಲ್ಪಟ್ಟುವು ಅವು ಯಾವುವೆಂದರೆ —

ಪಂಡಿತ ವೆಂಕಟರಾಮಶಾಸ್ತ್ರಿಗಳವರ ಸಂಸ್ಕೃತ ಶ್ಲೋಕಗಳು.

ಶ್ರೀಮಾನ್ ಕೃಷ್ಣಮಹೀಪತಿರ್ವಿಜಯತಾಮಾಚಂದ್ರತಾರಂ ಭುವಿ |
ಶ್ರೀಕಂಠೀರವಪೂರ್ವಕೋ ನರಸರಾಟ್ಸಂವರ್ಧತಾಂ ಸರ್ವದಾ ||
ತತ್ಪೋಷ್ಯಾ ತದಧಿಷ್ಠಿತಾ ಚ ಸತತಂ ಜೀಯಾತ್ಸಮುಂತಾದಪಿ |
ಶ್ರೀಕರ್ಣಾಟಕ ಸಾಹಿತೀಪರಿಷದಪ್ಯೇಷಾ ಬುಧೈಸ್ಸಂಸ್ತುತಾ || ||೧||

ಶ್ರೀ ಕರ್ಣಾಟಕಭಾಷಾ |
ತತ್ತ್ವಜ್ಞಸಭ್ಯೈಕಯಷ್ಟಿಕಾ ಭಾತಿ ||
ನಾಯಕರತ್ನಂ ಯಸ್ಯಾಃ |
ಕಂಠೀರವ ನರಸರಾಜ ಯುವರಾಜಃ || ||೨||

ಮಾತುಸ್ಸಕಾಶಾದಿವ ಯತ್ಸಕಾಶಾತ್ |
ಅಗ್ರೇ ಪರಾಜಾಯತ ಸಂವಿದೇಕಾ ||
ತಾಂ ದೇಶಭಾಷಾಂ ವಿಕೃತಾಮವೇಕ್ಷ್ಯ |
ಸವಿಾಕೃತಾ ಯತ್ನವತೀ ಸಭ್ಯೈಷಾ || ||೩||

ಅಧ್ಯೇತವ್ಯಾ ರಾಜಕೀಯೇತಿ ಭಾಷಾ |
ಸಂಚಿಂತ್ಯೇಕೇ ಧೀಯತೇ ಚಾಂಗ್ಲಭಾಷಾಮ್ ||
ದ್ವೈವಿಂ ಭಾಷಾಂ ಚಾಪರೇ ಧೀಯತೇ ತ್ರ |
ಕಾರ್ಣಾಟೀಂ ತಾಂ ನ್ವೈವ ಲೋಕಾಃ ಪಠಂತಿ || ||೪||

ಏತಾಂ ದಶಾಮುಪನಿನೀಷುರವಾಪ್ತಜನ್ಮಾ |
ಸೇಯಂ ಸಭಾ ಸವಿನಯಂ ಭವತಾಂ ಪುರಸ್ತಾತ್ ||
ಚಾಕಾಂಕ್ಷ್ಯತೇ ಚ ಸುಧಿಯಾಂ ಸಹಕಾರಿತಾಂ ವಃ |
ರಾಜ್ಞಾಂ ತಥಾಖಿಲಜಗತ್ರಯನಾಯಕಸ್ಯ || ||೫||

ತತ್ಕರ್ಣಾಟಕಸಾಹಿತೀಪರಿಷದಃ ಸರ್ವೇವಯಂ ಸಾದರಾಃ |
ಕಾಂಕ್ಷಾಮಃ ಪರಮೇಶ್ವರಸ್ಸಮುದಿತಸ್ಸರ್ವಜ್ಞತಾಭಾಜನಮ್ ||
ಅವ್ಯಾದಿಷ್ಟಸಮಸ್ತಬಂಧುಸಹಿತಂ ಶ್ರೀಕೃಷ್ಣರಾಜಂ ತಥಾ |
ಶ್ರೀಮಂತಂ ಯುವರಾಜಮೇನಮಿತಿ ತಂಚಾಗ್ರಾಸನಾಧೀಶ್ವರಂ || ||೬||

ಪಂಡಿತ ಸುಬ್ಬರಾಯಶಾಸ್ತ್ರಿಗಳವರ ಕನ್ನಡ ಪದ್ಯಗಳು.

ಶ್ರೀಮತ್ಕರ್ಣಾಟದೇಶಂ ವಿತತವಸುಮತೀವಸ್ತುರತ್ನೈಕಕೋಶಂ |
ಶ್ರೀಮತ್ಸೋಮಾನ್ವವಾಯಪ್ರಥಿತಯದುಕುಲಾಬ್ಧೀಂದುರಾಜಾಪ್ತಪೋಷಂ ||
ಧೀಮತ್ಪ್ರೇಮಾತ್ತವಾಸಂ ಜನತತಿವಿಹಿತಾನ್ವರ್ಥನಾಮಾಪದೇಶಂ |
ಶ್ರೀಮಚ್ಚಾಮುಂಡಿಕಾಂಬಾವಿಹಿತಸುಜನತಾತೋಷಮೊಪ್ಪಿರ್ಪುದಾರ್ಷಂ ||೧||

ಅದರೊಳ್ ಶ್ರೀಕೃಷ್ಣಭೂಪಂ ಮಹಿಸುರಪುರದೊಳ್ ರಾಜ್ಯಮಂಪಾಲಿಸುತ್ತಂ |
ಮುದದಿಂ ಕರ್ಣಾಟಭಾಷಾಭ್ಯುದಯಮ ನಿಳೆಯೊಳ್ಬೇಗದಿಂದಾಗಿಸಲ್ಕಾಂ ||
ಪದೆಯಲ್ಕರ್ಣಾಟವಾಣೀಪರಿಣತಸುಮನಸ್ಸಂಘದಿಂ ಶೋಭಿಸುತ್ತುಂ |
ಪುದಿಯಲ್ತಕ್ಕುದ್ಯಮಂ ಕನ್ನಡದೊ ಳೊದವಿತೀಸಾಹಿತೀಗೋಷ್ಠಿ ಯಾಗಳ್||೨||

ಕೃಷ್ಣಾನದಿಯಿಂದಿತ್ತಲ್ |
ನಿಷ್ಣಾತಬುಧರ್ಕಳಿರ್ಪ ಕನ್ನಡನಾಡಿಂ ||
ತೃಷ್ಣೆಯಿನೈತರುತಂದೋ |
ಚಿಷ್ಣುಯಶರ್ಬುಧರಿದರ್ಕೆ ನೆರವಾಗಿರ್ಪರ್ ||೩||

ಇಂತಹಗೋಷ್ಠಿಯ ಪುಷ್ಟಿಯ |
ನೆಂತುಂ ನೆಗಳಲ್ಸಮಾಜದಗ್ರಾಸನದೊಳ್ ||
ನಿಂತೀಂ ವಿಜಯಿಪನೋಧೀ |
ಮಂತಂ ಕಂಠೀರವ ನರಸನೃಪತಿರತ್ನಂ || ||೪||

ಬಿಡದಾ ಕನ್ನಡಮಂ ರಸಾನ್ವಿತಮುಮಂ ಸನ್ಮಾರ್ದವೋಪೇತಮಂ |
ನುಡಿವಾನಾಡುಗಳತ್ತಣಿಂ ವಿಬುಧಸಂದೋಹಂಸಭಾಸ್ಥಾನದೊಳ್ ||
ಎಡೆಗೊಂಡಾನುಡಿಗೇಳ್ಗೆಯುಪ್ಪತೆರನಂ ಪಾರುತ್ತಿತಾಮುಂ ನೆರಂ |
ಗುಡುತಿರ್ಪೀಕತದಿಂ ಸಮೃದ್ಧಮುದಮಾನುತ್ತಿರ್ಪೆ ವಾವೆಲ್ಲರುಂ ||೫||

ಇಂತೀಕನ್ನಡಮಂ ಸುವೃದ್ಧಿಗೊಳಿಪಾಸತ್ಕಾಂಕ್ಷೆಯಿಂ ಸೇರ್ದಿಳಾ |

ಕಾಂತಶ್ರೀಯುವರಾಜ ಮುಖ್ಯಸಭಿಕರ್ಗೀನಾಡುಗಂ ಸಂತತಂ ||
ಶಾಂತಸ್ವಾಂತದ ಸಾಹಿತೀಪರಿಷದಕ್ಕೀಭಾಷೆಗಂ ಶ್ರೀರಮಾ |
ಕಾಂತಂ ಕ್ಷೇಮಸುಕೀರ್ತಿ ಸಂಪದಮ ನೀಗಾಚಂದ್ರ ತಾರಂವರಂ ||೬||

ಶ್ರೀಯುಃಪ್ರಾರ್ಥನೆಯಾದಮೇಲೆ ಶ್ರೀಮಾನ್ ಎಚ್. ವಿ. ನಂಜುಂಡಯ್ಯನವರು ಕರ್ಣಾಟಕ ಸಾಹಿತ್ಯಸಮ್ಮೇಳನ ಕಾರ್ಯನಿರ್ವಾಹದಲ್ಲಿ ಕನ್ನಡವನ್ನೇ ಉಪಯೋಗಿಸ ಬೇಕೆಂಬ ನಿಯಮವನ್ನಿಟ್ಟುಕೊಂಡಿರುವುದರಿಂದ ಕನ್ನಡದಲ್ಲಿಯೇ ತಾವು ಮಾತನಾಡು ತ್ತೇವೆಂದು ಶ್ರೀಮದ್ಯುವರಾಜರವರಿಗೆ ಶ್ರುತಪಡಿಸಿ ಭಾಷಣವನ್ನು ಮಾಡಿದರು. ಅವರ ಭಾಷಣದ ಸಾರಾಂಶವೇನೆಂದರೆ—

"ಕನ್ನಡ ಭಾಷೆಯನ್ನೂ ಸಾಹಿತ್ಯವನ್ನೂ ಪುಷ್ಟಿಗೊಳಿಸಿ ಅಭಿವೃದ್ಧಿಗೆ ತಂದು ಕನ್ನಡ ನಾಡುಗಳ ಜನರೆಲ್ಲರನ್ನೂ ಒಟ್ಟುಗೂಡಿಸಿ ಅವರಲ್ಲಿ ಭಾಷಾ ವಿಷಯದಲ್ಲಿ ಪರಸ್ಪರ ಏಕಮತ್ಯವೂ ಸೌಹಾರ್ದವೂ ದಿನದಿನಕ್ಕೆ ಹೆಚ್ಚುವಂತೆ ಮಾಡುವುದೇ ಕರ್ಣಾ ಟಕ ಸಾಹಿತ್ಯ ಪರಿಷತ್ತಿನ ಮುಖ್ಯೋದ್ದೇಶವಾಗಿದೆ ಈ ಮಹಾಕಾರ್ಯಕ್ಕೆ ದೇಶಾ ಭಿವೃದ್ಧಿಯಲ್ಲಿ ಆಸಕ್ತರಾದ ಸರ್ವರೂ ಒಮ್ಮನದಿಂದ ಸಹಾಯ ಮಾಡಬೇಕು. ಮೈಸೂರು ದೇಶವು ಇತರ ವಿಷಯಗಳಲ್ಲಿ ಎಷ್ಟು ಮುಂಬರಿದಿದ್ದರೂ ಭಾಷಾವಿಷಯ ದಲ್ಲಿ ಮಾತ್ರ ಹಿಂದುಳಿದಿದೆ. ಇಲ್ಲಿ ಈಚೆಗೆ ನಡೆದಿರುವ ಭಾಷಾ ಸಾಹಿತ್ಯಗಳ ಪರಿ ಮಾಣವೂ ಆ ಕೆಲಸದ ಗುಣವೂ ಬಹಳ ಕಡಿಮೆಯಾಗಿರುವುದು ಶೋಚನೀಯವಾ ಗಿದೆ. ಜನರು ತಮ್ಮಲ್ಲಿರುವ ಶಕ್ತಿಯೆಲ್ಲವನ್ನೂ ಸದ್ಯಃ ಫಲಕ್ಕಾಗಿಯೋ, ಅಧಿಕ ದ್ರವ್ಯಾರ್ಜನೆಗಾಗಿಯೋ ವಿನಿಯೋಗಿಸುತ್ತಿರುವಂತೆ ಕಾಣಬರುತ್ತದೆ. ರೋಮ್ ಮಹಾ ಸಂಸ್ಥಾನದ ಅಗಸ್ಟಸ್ ಚಕ್ರವರ್ತಿಯ ಕಾಲದಲ್ಲಿ ಆ ಮಹಾ ಸಂಸ್ಥಾನದ ಲ್ಯಾಟಿನ್ ಭಾಷೆಯು ಯಾವ ಪ್ರಕಾರ ಅಭ್ಯುದಯ ಸ್ಥಿತಿಗೆ ಬಂತೋ ಅದೇ ಪ್ರಕಾರ ಚಿರಸ್ಮರಣೀಯರಾದ ಶ್ರೀಚಾಮರಾಜೇಂದ್ರ ಒಡೆಯರವರ ಆಳಿಕೆಯ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯವು ಅಂತಹ ಅಭ್ಯುದಯ ಸ್ಥಿತಿಯನ್ನು ಹೊಂದುವು ದಕ್ಕೆ ಪ್ರಾರಂಭಿಸುವಹಾಗೆ ಕಾಣುತ್ತಿತ್ತು. ಆದರೆ ಆಗಿನ ಪ್ರಯತ್ನಗಳು ಅತ್ಯ ಲ್ಪಕಾಲದವರೆಗೆ ಮಾತ್ರವೆ ನಡೆದುದರಿಂದ ಅತಿಶಯವಾದ ಫಲಗಳು ಗೋಚರಕ್ಕೆ ಬರಲಿಲ್ಲ.

"ಈಗ ನಮ್ಮ ಶ್ರೀಮನ್ ಮಹಾರಾಜರವರು ಭಾಷಾ ಪರಿಷ್ಕರಣ ವಿಷಯ ದಲ್ಲಿ, ಪೂರ್ವಕಾಲದ ರಾಜಾಧಿರಾಜರಂತೆ ತಮ್ಮ ವಂಶದವರಾದ ಚಿಕ್ಕ ದೇವರಾಜ ವೊಡೆಯರವರ ಕಾಲದಿಂದ ಪಾರಂಪರ್ಯವಾಗಿ ಬಂದ ಕ್ರಮವನ್ನು ಅನುಸರಿಸಿ, ಸಂಪದಭಿವೃದ್ಧಿ ವಿಷಯಗಳಿಗೆ ಪ್ರೋತ್ಸಾಹಗಳನ್ನುಂಟುಮಾಡುವಂತೆಯೇ, ವಿದ್ಯಾ ಭಿವೃದ್ಧಿಗೂ ಪ್ರೋತ್ಸಾಹವನ್ನು ಕೊಡಬೇಕೆಂಬ ಅಭಿಪ್ರಾಯವುಳ್ಳವರಾಗಿರುತ್ತಾರೆ. ಕನ್ನಡ ಮಾತನ್ನಾಡುವ ಜನರು ಈ ಮೈಸೂರು ರಾಜ್ಯದ ಹೊರಗಣ ಪ್ರಾಂತಗಳಲ್ಲಿ

ಅನೇಕ ಲಕ್ಷ ಮಂದಿ ಇರುವರು. ಇವರೊಡನೆ ನಮ್ಮ ಜನರೂ ಸೌಹಾರ್ದದಿಂದ ಸೇರಿ ಒಮ್ಮನದಿಂದ ಕಾರ್ಯ ನಿರ್ವಾಹ ಮಾಡುತ್ತಾ ಬರಬೇಕು. ಹೀಗಾಗುವ ಪಕ್ಷಕ್ಕೆ ಕನ್ನಡ ನಾಡುಗಳ ಜನರನ್ನೆಲ್ಲ ಜ್ಞಾನಾಭಿವೃದ್ಧಿಯ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದು ಇದಕ್ಕಾಗಿ ಸರ್ಕಾರದ ಮೇಲ್ವಿಚಾರಣೆಗೆ ಸೇರದ ಮತ್ತು ಯಾವ ವಿಧವಾದ ರಾಜಕೀಯ ಉದ್ದೇಶಗಳನ್ನೂ ಇಟ್ಟುಕೊಳ್ಳದ ಕರ್ಣಾಟಕ ಭಾಷಾಭಿಮಾನಿಗಳ ಒಂದು ಸಂಘವು ಏರ್ಪಾಡಾಗಬೇಕೆಂದು ಗೊತ್ತಾಯಿತು. ಈ ಪರಿಷತ್ತು ಶ್ರೀಮತ್ ಮಹಾರಾಜಾ ಸರ್ಕಾರದವರ ಉದಾರವಾದ ಸಹಾಯದಿಂದ ಸ್ಥಾಪಿತವಾಯಿತು

''ಕರ್ಣಾಟಕ ಸಾಹಿತ್ಯಾಭಿವೃದ್ಧಿಯ ವಿಷಯದಲ್ಲಿ ಮೊದಲೆರಡನೆಯ ಸಮ್ಮೇಳನಗಳು ಬೆಂಗಳೂರಲ್ಲಿ ನಡೆದುವು ಈ ಮೂರನೆಯ ಸಮ್ಮೇಳನವು, ಎಂದರೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಾದ ಮೇಲೆ ನಡೆಯುವ ಈ ಎರಡನೆಯ ಸಮ್ಮೇಳನವು, ನಮ್ಮ ಶ್ರೀಮತ್ ಮಹಾರಾಜರವರ 34 ನೆಯ ವರ್ಧಂತ್ಯುತ್ಸವದ ಶುಭ ಕಾಲದಲ್ಲಿ ಈ ಮೈಸೂರು ರಾಜಧಾನಿಯಲ್ಲಿ ಕೂಡಿದೆ. ಶ್ರೀಮದ್ಯುವರಾಜರಾದ ತಾವು ಇಲ್ಲಿಗೆ ದಯಮಾಡಿಸಿ ಈ ಸಮ್ಮೇಳನದ ಪ್ರಾರಂಭೋತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿ ಈ ಸಭೆಗೆ ಅಸಾಧಾರಣವಾದ ಗೌರವವನ್ನು ದಯಪಾಲಿಸಿರುದಕ್ಕಾಗಿ ನಾವೆಲ್ಲರೂ ಹರ್ಷಿಸುತ್ತಿರುವೆವು. ಮೊದಲು ಬೆಂಗಳೂರಿನಲ್ಲಿ ಸಮ್ಮೇಳನವು ನಡೆದಾಗ ಪರಿಷತ್ತಿನ ಉದ್ದೇಶಗಳೇನು ? ಯಾವ ಯಾವ ವಿಧವಾದ ಕೆಲಸಗಳು ನಡೆಯಬೇಕು ? ಯಾವ ಯಾವ ಮಾರ್ಗಗಳಿಂದ ಉದ್ದೇಶಗಳನ್ನು ಸಾಧಿಸಬೇಕು ? ಎಂಬ ವಿಷಯಗಳನ್ನು ಕುರಿತು ವಿವರವಾಗಿ ಭಾಷಣಮಾಡಿದೆನು. ಅವುಗಳನ್ನು ಇಲ್ಲಿ ಪುನಃ ಹೇಳುವ ಆವಶ್ಯಕತೆಯಿಲ್ಲ. ಈ ಪರಿಷತ್ತಿನ ಕೆಲಸವು ಕೊಂಚಮಟ್ಟಿಗಾದರೂ ಸಮರ್ಪಕವಾಗಿ ನಡೆಯಬೇಕಾದರೆ, ದ್ರವ್ಯ ಸಹಾಯವು ಒದಗಬೇಕಾದುದು ಮಾತ್ರವೇ ಅಲ್ಲದೆ, ಸಮರ್ಥರ ಮತ್ತು ಪಂಡಿತರ ಉದಾರಾಶ್ರಯವೂ ಅವಿಚ್ಛಿನ್ನವಾಗಿ ದೊರೆಯುತ್ತಿರಬೇಕು. ಸಭೆಗಳನ್ನೂ ಸಮ್ಮೇಳನಗಳನ್ನೂ ಏರ್ಪಾಡು ಮಾಡಿ ನಿಬಂಧನೆಗಳನ್ನು ಮಾಡುವುದು ತಿದ್ದುವುದು ಇವುಗಳಿಂದಲೇ ಸಂಪೂರ್ಣವಾದ ಫಲವು ಕೈಗೂಡುವುದಿಲ್ಲ. ಇನ್ನೂ ಇತರ ಅನೇಕ ಕಾರ್ಯಗಳು ನಡೆಯಬೇಕು. ಶ್ರೀಮದ್ಯುವರಾಜರಾದ ತಾವು ಇಲ್ಲಿಗೆ ಬಿಜಯಮಾಡಿ ತಮ್ಮ ಉದಾರಾಶ್ರಯವನ್ನಿತ್ತು, ಸಭಾ ಸಮಾರಂಭಕಾರ್ಯವನ್ನು ಹರ್ಷೋನ್ನತಿಯಿಂದ ನಡೆಯಿಸುವುದನ್ನು ನೋಡಿದರೆ, ಶಾಶ್ವತವಾಗಿ ನಿಲ್ಲುವ ಕೆಲಸಗಳನ್ನು ಮಾಡಲು ಸಮರ್ಥರಾದವರ ಸಹಾಯವನ್ನು ಸಂಪಾದಿಸುವುದಕ್ಕೂ ಶ್ರೀಮಂತರ ಉದಾರಾಶ್ರಯವನ್ನು ಸಂಪಾದಿಸುವುದಕ್ಕೂ ಬಹಳವಾಗಿ ಅನುಕೂಲವಾಗುವುದರಲ್ಲಿ ಸಂಶಯವಿಲ್ಲ. ಶ್ರೀಮದ್ಯುವರಾಜರವರ ಘನಸಾನ್ನಿಧ್ಯದಿಂದ ಪರಿಷತ್ತಿನ ಸದಸ್ಯರುಗಳಿಗೆ ವಿಶೇಷವಾದ ಪ್ರೋತ್ಸಾಹವಾಗಿರುವುದಲ್ಲದೆ ಅವರು ಮತ್ತಷ್ಟು ಶ್ರದ್ಧೆಯಿಂದ ಕೆಲಸವನ್ನು ಮಾಡಲು ಉತ್ಸಾಹ

ಭರಿತರಾಗಿರುವರು. ಸರ್ಕಾರದವರು ಮಾಡಿರುವ ಉದಾರವಾದ ಸಹಾಯವನ್ನು ನೋಡುವಲ್ಲಿ ಶ್ರೀಮನ್ಮಹಾರಾಜರವರಿಗೆ ಪರಿಷತ್ತಿನ ಶ್ರೆಯೋಭಿವೃದ್ಧಿಯಲ್ಲಿ ಎಷ್ಟರ ಮಟ್ಟಿಗೆ ಪ್ರೀತಿವಿಶ್ವಾಸಗಳಿರುವುವೋ ಅವು ನಿರ್ಧರವಾಗಿ ವ್ಯಕ್ತಪಡುತ್ತಿರುವುವು. ಸರ್ಕಾರದವರ ಸಹಾಯವು ಮುಂದಕ್ಕೂ ನಡೆಯುವುದಲ್ಲದೆ ಇನ್ನೂ ಹೆಚ್ಚುತ್ತ ಬರುವುದೆಂದು ನಂಬಿದೇವೆ ಶ್ರೀಮದ್ಯುವರಾಜರವರು ಈ ಸಭಾಸಮಾರಂಭದ ಅಧ್ಯಕ್ಷಸ್ಥಾನವನ್ನು ಕೃಪಾಪರಿಪೂರ್ಣತೆಯಿಂದ ಅಂಗೀಕರಿಸಿರುವುದನ್ನು ನೋಡಿದರೆ, ಪರಿಷತ್ತಿನ ಸದುದ್ದೇಶಗಳು ಶ್ರೀಮದ್ಯುವರಾಜರವರ ಮೆಚ್ಚಿಕೆಯನ್ನು ಪಡೆದಿರುವುವೆಂಬ ಸಂಗತಿಯೂ ಶ್ರೀಮನ್ಮಹಾರಾಜರವರಿಗೂ ವಿಶೇಷವಾದ ಆದರಾಸಕ್ತಿಗಳು ಉಂಟೆಂಬ ಸಂಗತಿಯೂ ಕನ್ನಡ ಭಾಷಾ ಸಾಹಿತ್ಯಗಳ ಏಳಿಗೆಗೆ ಬಲವಾದ ರಾಜಾಶ್ರಯವು ದೊರೆತಿರುವುದೆಂಬ ಸಂಗತಿಯೂ ದೃಢಪಡುತ್ತಿರುವುವು ಎಂದು ಸಂತುಷ್ಟರಾಗಿದೇವೆ, ಮಹಾಸ್ವಾಮಿ.''

ಪರಿಷತ್ತಿನ ಅಧ್ಯಕ್ಷರಾದ ಮ|| ರಾ|| ಎಚ್. ವಿ. ನಂಜುಂಡಯ್ಯನವರ ಭಾಷಣವು ಸಭೆಯವರೆಲ್ಲರಿಗೂ ಹರ್ಷವನ್ನುಂಟುಮಾಡಿತು ಅವರ ಭಾಷಣವು ಮುಗಿದ ಮೇಲೆ ಪರಿಷತ್ತಿನ ಗೌರವಕಾರ್ಯದರ್ಶಿಗಳಾದ ಡಾಕ್ಟರ್ ಪಿ. ಎಸ್. ಅಚ್ಯುತರಾಯರವರು ಸಭಾಧ್ಯಕ್ಷರ ಅಪ್ಪಣೆಯನ್ನು ಪಡೆದು ಪರಿಷತ್ತಿನ ದ್ವಿತೀಯ ವರ್ಷದ ವರದಿಯನ್ನು ಸ್ಫುಟವಾಗಿಯೂ ಸರ್ವರಿಗೂ ಕೇಳಬರುವಂತೆಯೂ ಓದಿದರು. *

ಇದಾದ ಮೇಲೆ ಶ್ರೀಮದ್ಯುವರಾಜರವರು ಹರ್ಷೋನ್ಮುಖರಾಗಿ ಮುಂದೆ ವಿವರಿಸುವಂತೆ ತಮ್ಮ ಉದಾರಭಾವ ಭರಿತವಾದ ಭಾಷಣವನ್ನು ಗಂಭೀರವಾದ ಧ್ವನಿಯಿಂದ ಸರ್ವರಿಗೂ ಕೇಳಬರುವಂತೆ ಓದಿದರು ಎಂತೆಂದರೆ—

"ಕನ್ನಡಭಾಷೆಯ ಅಭಿವೃದ್ಧಿಯಲ್ಲಿ ಉದ್ಯುಕ್ತರಾಗಿರುವ ನೀವುಗಳು ನಮ್ಮನ್ನು ಈ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸಭೆಯನ್ನು ಉಪಕ್ರಮಿಸಲು ಬರಮಾಡಿಕೊಂಡು ಸುಖಾಗಮನವನ್ನು ಬಯಸಿರುವುದಕ್ಕಾಗಿ ಬಹಳ ಸಂತೋಷಪಡುತ್ತೇವೆ.

"ಸಾಮಾನ್ಯವಾಗಿ ಭರತಖಂಡದಲ್ಲಿ ಆಯಾಕಾಲದಲ್ಲಿ ನಡೆದ ವಿದ್ಯಮಾನಗಳಿಂದಲೂ ಇಂಗ್ಲಿಷ್ ವಿದ್ಯಾಪ್ರಾಚುರ್ಯದಿಂದಲೂ ಪಶ್ಚಿಮದೇಶದ ಗ್ರಂಥಶಾಸ್ತ್ರಾದಿಗಳಲ್ಲಿ ಉಂಟಾದ ಉತ್ಸಾಹದಿಂದಲೂ ದೇಶಭಾಷೆಗಳ ವ್ಯಾಸಂಗವು ಮಲಿನವಾಗಿರುವುದು ಎಲ್ಲರಿಗೂ ತಿಳಿದೇ ಇದೆ ಪ್ರಕೃತದಲ್ಲಿ ತಕ್ಕಮಟ್ಟಿಗೆ ಇಂಗ್ಲಿಷ್ ವಿದ್ಯಾವ್ಯಾಸಂಗವು ಇಂಡಿಯಾದೇಶದ ಏಳಿಗೆಗೆ ಅತ್ಯಂತ ಆವಶ್ಯಕವಾಗಿರುವ ವಿಷಯದಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಪ್ರಜಾಸಾಮಾನ್ಯಕ್ಕೆ ಶೀಘ್ರವಾಗಿ ಜ್ಞಾನೋದಯವನ್ನುಂಟುಮಾಡಲು ಇಂಗ್ಲಿಷ್ ಭಾಷೆಯು ದೇಶಭಾಷೆಗಳಂತೆ ಉಪಯೋಗವಾಗುವುದಿಲ್ಲ. ಈಗಿನ ನವೀನ ಶಾಸ್ತ್ರಗಳ ಜ್ಞಾನವನ್ನು ಪ್ರಜಾಸಾಮಾನ್ಯಕ್ಕೆ ಉಂಟುಮಾಡಬೇಕಾದರೆ ದೇಶಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿ ಅವುಗಳಲ್ಲಿ ಆವ

* ಈ ವರದಿ ಈ ಸಂಚಿಕೆಯ 101_116 ಪುಟಗಳಲ್ಲಿ ಮುದ್ರಿತವಾಗಿದೆ

ರಿಗೆ ಅಭಿರುಚಿಯುಂಟಾಗುವಂತೆ ಮಾಡುವುದೇ ಸುಲಭೋಪಾಯವಾಗಿದೆ. ಈ ವಿಷಯವನ್ನು ತಿಳಿದು ನೀವು ಸಂಪದಭ್ಯುದಯ ಸಮಾಜದವರ ಇಷ್ಟಾನುಸಾರವಾಗಿ ಈ ಪರಿಷತ್ತನ್ನು ಏರ್ಪಾಡುಮಾಡಿ ನವೀನಗ್ರಂಥ ನಿಘಂಟುಗಳ ರಚನೆ ಮತ್ತು ಗ್ರಂಥಕರ್ತರಿಗೆ ಬಹುಮಾನ ಇವೇ ಮೊದಲಾದ ಭಾಷಾಪ್ರೋತ್ಸಾಹಕರವಾದ ಕಾರ್ಯಗಳಲ್ಲಿ ಉದ್ಯುಕ್ತರಾಗಿರುತ್ತೀರಿ. ಈ ಉದ್ದೇಶವನ್ನು ನೆರವೇರಿಸುವುದಕ್ಕಾಗಿಯೇ ಸರ್ಕಾರದವರೂ ಪಾಠಶಾಲೆಗಳಲ್ಲಿ ಪಾಠಕ್ರಮಗಳನ್ನು ತಿದ್ದುಪಾಟುಮಾಡಿ ಗ್ರಂಥಕರ್ತರಿಗೂ ಈ ಪರಿಷತ್ತಿಗೂ ಸಹಾಯಮಾಡಿರುತ್ತಾರೆ ಯಾವ ಸಮುದಾಯವೇ ಆಗಲಿ ಒಂದು ಜನಾಂಗದವರು ಎನ್ನಿಸಿಕೊಳ್ಳಬೇಕಾದರೆ ಅವರ ದೇಶಭಾಷೆಯೇ ಅದಕ್ಕೆ ಒಂದು ಮುಖ್ಯಕಾರಣವಾಗಿಯೂ ಚಿಹ್ನೆಯಾಗಿಯೂ ಇರುತ್ತದೆ. ಅದರಿಂದ ಪರಸ್ಪರ ಐಕಮತ್ಯವೂ ಸೌಭ್ರಾತೃತ್ವವೂ ಉಂಟಾಗುವುದು ಎಲ್ಲರಿಗೂ ತಿಳಿದೇ ಇದೆ.

"ನಮ್ಮ ಕನ್ನಡ ದೇಶದ ಚರಿತ್ರೆಯಲ್ಲಿಯೂ ಪರಂಪರಾಗತವಾದ ಅಭಿಪ್ರಾಯದಲ್ಲಿಯೂ ಸ್ವಾಭಾವಿಕ ಗುಣಗಳಲ್ಲಿಯೂ ಪ್ರೀತಿಯುಳ್ಳ ಯಾವ ಹಿತೈಷಿಯೂ ಮೇಲ್ಕಂಡ ಸಭೆಯು ಸಕಾಲದಲ್ಲಿ ಹುಟ್ಟಿತೆಂದು ಹೇಳದೆ ಇರಲಾರನು.

"ಇದುವರೆಗೂ ನೀವು ಮಾಡಿರುವ ಕಾರ್ಯವು ವಿಶೇಷವಾಗಿ ಇಲ್ಲದೆ ಇದ್ದರೂ ನೀವು ಉತ್ಸಾಹಭಗ್ನರಾಗಲು ಕಾರಣವಿಲ್ಲ ನೀವು ಹಿಡಿದಿರುವ ಕಾರ್ಯವು ಮಹತ್ತರವಾದುದು ಆದಕಾರಣ ಪ್ರಥಮತಃ ನೀವೆಲ್ಲರೂ ಏಕಮನಸ್ಕರಾಗಿ ಸುಲಭೋಪಾಯಗಳನ್ನು ಏರ್ಪಾಡು ಮಾಡಿಕೊಂಡು ಪ್ರಾರಂಭ ಮಾಡಬೇಕಾದರೆ ಸ್ವಲ್ಪಕಾಲವು ಸ್ವಾಭಾವಿಕವಾಗಿ ಬೇಕಾಗಿರುವುದೇನೂ ಆಶ್ಚರ್ಯವಲ್ಲ.

"ಸುಲಭವಾದ ಹೊಸ ಕನ್ನಡದ ಅಭಿವೃದ್ಧಿಗೆ ಕುಂದಕಬಾರದಂತೆ ಹಳಗನ್ನಡದ ರೂಪಗಳನ್ನು ಎಷ್ಟುಮಟ್ಟಿಗೆ ಪುನಃ ಉಪಯೋಗಕ್ಕೆ ತರಬಹುದು ; ಕನ್ನಡ ಭಾಷೆಯು ಉಪಯೋಗದಲ್ಲಿರುವ ಬೇರೆಬೇರೆ ಪ್ರಾಂತಗಳಲ್ಲಿ ಅಲ್ಲಲ್ಲಿ ಮಾತ್ರ ವಾಡಿಕೆಯಾಗಿರುವ ಮಾತುಗಳನ್ನು ಹೊಂದವಣೆ ಮಾಡಿ ಏಕರೀತಿಯಾಗುವುದಕ್ಕೋಸ್ಕರ ಏನು ಮಾಡಬೇಕು, ಹೇಗೆ ಗ್ರಂಥಗಳನ್ನು ಅಭಿವೃದ್ಧಿಪಡಿಸಬಹುದು; ನವೀನವಾದ ಅಭಿಪ್ರಾಯಗಳನ್ನು ತಿಳಿಯಪಡಿಸುವುದಕ್ಕೆ ಈಗ ತಕ್ಕ ಪುಸ್ತಕಗಳು ಇಲ್ಲದೆ ಇರುವ ಕೊರತೆಯನ್ನು ಹೇಗೆ ಹೋಗಲಾಡಿಸಬಹುದು, ಗ್ರಂಥಗಳನ್ನು ಓದುವುದರಲ್ಲಿಯೂ ಬರೆಯುವುದರಲ್ಲಿಯೂ ಜನಗಳಿಗೆ ಆಸಕ್ತಿಯನ್ನು ಹೇಗೆ ಹುಟ್ಟಿಸಿ ಅಭಿವೃದ್ಧಿಪಡಿಸಬೇಕು, ಬರೆದು ಪ್ರಕಟಿಸುವ ಪುಸ್ತಕಗಳಿಗೆ ಗಿರಾಕಿ ಉಂಟಾಗುವುದಕ್ಕೋಸ್ಕರ ಏನು ಪ್ರಯತ್ನಗಳನ್ನು ಮಾಡಬೇಕು , ಇವೇ ಮೊದಲಾದ ವಿಷಯಗಳಿಗೆ ಪರಿಷತ್ತಿನವರು ಮುಂದೆ ವಿಶೇಷ ಗಮನ ಕೊಡುವರೆಂದು ನಂಬುತ್ತೇವೆ.

"ಇತರ ಕರ್ನಾಟ ನಾಡುಗಳಿಂದ ಪ್ರತಿನಿಧಿಗಳು ಬಂದು ಈ ಸಭೆಯಲ್ಲಿ ಸೇರಿರುವುದು ಬಹಳ ಸಂತೋಷಪ್ರದವಾಗಿದೆ. ಈ ಪರಿಷತ್ತಿನ ಉದ್ದೇಶಗಳು ನೆರವೇರುವುದಕ್ಕೆ ಅವರುಗಳ ಸಹಾಯವು ಅಮೂಲ್ಯವು. ಮೈಸೂರು ದೇಶದವರು ಇತರ ಕನ್ನಡ

ನಾಡುಗಳ ಜನಗಳೊಡನೆ ಸೇರಿ ಪರಸ್ಪರ ಸಂಬಂಧವು ಹೆಚ್ಚುವುದಕ್ಕಾಗಿಯೂ ಆ ನಾಡುಗಳ ಜನಗಳ ಅನುಕೂಲ್ಯಕ್ಕಾಗಿಯೂ ಆ ನಾಡುಗಳಲ್ಲಿ ಯುಕ್ತವಾದ ಪ್ರದೇಶಗಳಲ್ಲಿ ಕೆಲವು ವರುಷಗಳು ಈ ಸಭೆಯನ್ನು ನಡಿಸಬಹುದೇ ಎಂಬುವ ಅಂಶವನ್ನು ನೀವು ಯೋಚಿಸಬಹುದು.

''ಆ ಸ್ಥಳಗಳ ಪ್ರತಿನಿಧಿಗಳ ಸಂಖ್ಯೆಯು ಕಡಿಮೆಯಾಗಿದೆ ಇದು ದಿನೇ ದಿನೇ ಹೆಚ್ಚಿ ಎಲ್ಲಾ ಕನ್ನಡ ಜನಗಳಿಗೂ ಉಪಯೋಗವಾಗಿರುವ ಈ ಕಾರ್ಯದಲ್ಲಿ ನಾನಾ ಕನ್ನಡ ಪ್ರಾಂತಗಳ ಪರಸ್ಪರ ಸಹಾಯವು ಇತಃಪರ ವಿಶೇಷವಾಗಿ ಉಂಟಾಗಬೇಕೆಂದು ನಾವು ಹಾರೈಸುತ್ತೇವೆ.

''ಈ ಸಭೆಯವರು ಕೈಕೊಂಡಿರುವ ಮಹಾಕಾರ್ಯವು ಸಾಂಗವಾಗಿ ನೆರವೇರುವುದಕ್ಕೆ ನೀವು ಹೇಳುವಂತೆ ವಿಶೇಷವಾದ ದ್ರವ್ಯಸಹಾಯವು ಬೇಕಾಗಿರುವುದಲ್ಲದೆ, ತಮ್ಮ ಕಾಲವನ್ನೆಲ್ಲ ಈ ಸಭಾ ಕಾರ್ಯಕ್ಕೆ ಮನಃಪೂರ್ವಕವಾಗಿ ಉಪಯೋಗಿಸಿ ಉತ್ಸಾಹದಿಂದ ಕೆಲಸಮಾಡುವವರೂ ಬೇಕಾಗಿದೆ. ವರ್ಷಕ್ಕೊಂದಾವೃತ್ತಿ ಸಭೆಯು ಸೇರಿ ಒಳ್ಳೇ ತೀರ್ಮಾನಗಳನ್ನು ಮಾತ್ರ ಮಾಡಿ ತದನಂತರ ಆ ವರ್ಷದಲ್ಲೆಲ್ಲಾ ನಿರಂತರವಾಗಿ ಕೆಲಸಮಾಡದೆ ಹೋದರೆ ವಿಶೇಷ ಪ್ರಯೋಜನ ಉಂಟಾಗಲಾರದು. ಕರ್ಣಾಟ ಜನಾಂಗದ ನಡೆನುಡಿಗಳ ವೃದ್ಧಿಸ್ಥಿತಿಯನ್ನು ತೋರ್ಪಡಿಸುವ ಸದ್ಗ್ರಂಥಗಳು ಕನ್ನಡ ಭಾಷೆಯಲ್ಲಿಯೇ ಇರುತ್ತವೆ. ದೇಶಾಭಿಮಾನಿಗಳಾಗಿಯೂ ವೃದ್ಧಾಚಾರಗಳಲ್ಲಿ ವಿಶ್ವಾಸವುಳ್ಳವರಾಗಿಯೂ ಇರುವ ಯಾರುತಾನೆ ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಉದಾಸೀನಮಾಡುತ್ತಾರೆ. ನೀವು ಕೈಕೊಂಡಿರುವ ಕಾರ್ಯವು ಶ್ಲಾಘ್ಯವಾದುದು. ಅದನ್ನು ನೆರವೇರಿಸುವ ವಿಷಯದಲ್ಲಿ ನಿಮಗೆ ಅನೇಕ ತೊಂದರೆಗಳು ಉಂಟಾಗಬಹುದು. ಆದರೂ ನೀವು ಅಧೈರ್ಯ ಪಡುವುದಕ್ಕೆ ಕಾರಣವಿಲ್ಲ ಬಂಗಾಳಿ ಮತ್ತು ಮಹಾರಾಷ್ಟ್ರ ಭಾಷೆಗಳು ಕಾಲಾನುಸಾರವಾಗಿ ಅಭಿವೃದ್ಧಿಪಡಿಸಲ್ಪಟ್ಟಿವೆ ಆಂಧ್ರರೂಕೂಡ ತಕ್ಕಮಟ್ಟಿಗೆ ತಮ್ಮ ಭಾಷೆಯನ್ನು ಅಭಿವೃದ್ಧಿಪಡಿಸಿರುತ್ತಾರೆ. ಹೀಗೆ ಇತರಪ್ರಾಂತಗಳ ಜನಗಳು ಇಷ್ಟು ಮಟ್ಟಿಗೆ ಕಾರ್ಯಸಾಧನೆಯನ್ನು ಮಾಡಿಕೊಂಡಿರುವಾಗ ನೀವು ಅವರಂತೆಯೇ ಕ್ರಮವಾದ ಏರ್ಪಾಡನ್ನು ಆಲೋಚಿಸಿಕೊಂಡು ಶ್ರದ್ಧೆಯಿಂದ ಕೆಲಸವನ್ನು ಮಾಡಿದರೆ ನಿಮ್ಮ ಉದ್ದೇಶವು ಸಿದ್ಧಿಸುವುದರಲ್ಲಿ ಯಾವ ಸಂದೇಹವೂ ಇಲ್ಲ ಮ|| ರಾ|| ಎಚ್. ವಿ ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನೀವು ಈಗ ಇರಬಹುದಾದ ನ್ಯೂನತೆಗಳಿಗೆ ಗಮನವನ್ನು ಕೊಟ್ಟು ಉತ್ತಮವಾದ ಏರ್ಪಾಡುಗಳನ್ನು ಮಾಡಿಕೊಂಡು ವಿಶೇಷ ದಕ್ಷತೆಯಿಂದ ಕಾರ್ಯಸಾಧನೆ ಮಾಡಲು ಶಕ್ತರಾಗಿ ಈಗಿನ ಮತ್ತು ಮುಂದಿನ ಕನ್ನಡಿಗರ ಶಾಶ್ವತವಾದ ಕೃತಜ್ಞತೆಗೆ ಪಾತ್ರರಾಗುವಿರೆಂಬ ಅಭಿಪ್ರಾಯದಿಂದ ನಾವು ಈ ಪರಿಷತ್ತಿನ ಪ್ರಾರಂಭ ಮಹೋತ್ಸವವನ್ನು ಬೆಳೆಸಿರುತ್ತೇವೆ.''

ಶ್ರೀಮದ್ಯುವರಾಜರವರ ಸಂಭಾಷಣವು ಮುಗಿದಮೇಲೆ ಸಭಾಧ್ಯಕ್ಷರಾದ ರಾಜಮಂತ್ರಪ್ರವೀಣ ಮ|| ರಾ|| ಎಚ್. ವಿ. ನಂಜುಂಡಯ್ಯನವರು ಸಮಯೋಚಿತವಾದ

ಮೃದುಮಧುರವಚನಗಳಿಂದ ಪರಿಷತ್ತಿನಪರವಾಗಿಯೂ ನೆರೆದಿದ್ದ ಮಹನೀಯರ ಪರವಾಗಿಯೂ ಶ್ರೀಮದ್ಯುವರಾಜರವರಿಗೆ ವಂದನೆಗಳನ್ನು ಸಮರ್ಪಿಸಿದರು ಮೈಸೂರು ಅರಮನೆ ಸಂಗೀತ ವಿದ್ವಾಂಸರಾದ ವಾಸುದೇವಾಚಾರ್ಯರವರು ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಶ್ರೇಯಃಪ್ರಾರ್ಥನಾರೂಪವಾದ ಸಂಸ್ಕೃತ ಶ್ಲೋಕಗಳನ್ನು ಗಾನಮಾಡಿದರು. ಅಗ್ರಾಸನಾಧಿಪತಿಗಳಾದ ಶ್ರೀಮದ್ಯುವರಾಜರವರಿಗೆ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ನಂಜುಂಡಯ್ಯನವರು ಖಾಸಾಹಾರವನ್ನೂ ಖಾಸಾ ತುರಾಯಿಯನ್ನೂ ಸಮರ್ಪಿಸಿದರು ವೇದಿಕೆಯಮೇಲೆ ನೆರೆದಿದ್ದ ಮಹನೀಯರುಗಳಿಗೆ ತುರಾಯಿಗಳು ಕೊಡಲ್ಪಟ್ಟುವು. ಶ್ರೀಮದ್ಯುವರಾಜರವರು ಸಭೆಯಿಂದ ಹೊರಡುವುದಕ್ಕುದ್ಯುಕ್ತರಾದಾಗ ಪರಿಷತ್ತಿನ ಉಪಾಧ್ಯಕ್ಷರಾದ ರಾವ್‌ಬಹದ್ದೂರ್ ಎಂ ಶಾಮರಾಯರವರು ಪರಿಷತ್ತಿನ ಗೌರವಕಾರ್ಯದರ್ಶಿಗಳಾದ ಮ|| ರಾ|| ರಘುನಾಥರಾಯರವರನ್ನು ಶ್ರೀಮದ್ಯುವರಾಜರವರ ಸನ್ನಿಧಿಗೆ ಕರೆದುಕೊಂಡುಹೋಗಿ ಜಂಟಿ ಗೌರವಕಾರ್ಯದರ್ಶಿಗಳಾದ ಇವರು ಪರಿಷತ್ತಿನ ಕಲಸಗಳನ್ನು ಶ್ರದ್ಧಾಭಕ್ತಿಗಳೊಡನೆ ನಡೆಯಿಸುತ್ತಿರುವರೆಂದು ಬಿನ್ನೈಸಿದರು. ಸರ್ದಾರ್ ಎಮ್ ಕಾಂತರಾಜ ಅರಸಿನವರೂ ಮ|| ರಾ|| ಡಾಕ್ಟರ್ ಅಚ್ಯುತರಾಯರವರೂ ರಾಜಮಂತ್ರಪ್ರವೀಣ ಮ|| ರಾ|| ಎಚ್ ವಿ ನಂಜುಂಡಯ್ಯನವರೂ ಮ|| ರಾ|| ರಘುನಾಥರಾಯರವರಿಗಿರುವ ಶ್ರದ್ಧಾಭಕ್ತಿಗಳನ್ನು ಶ್ಲಾಘಿಸಿದರು ಈ ಮಾತುಗಳನ್ನು ಕೇಳಿ ಶ್ರೀಮದ್ಯುವರಾಜರವರು ತುಂಬಾ ಸಂತೋಷಪಟ್ಟರು

ಶ್ರೀಮಾನ್ ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಆಯುರಾರೋಗ್ಯ ಶ್ರೇಯೋಭಿವೃದ್ಧಿಯನ್ನು ಬಯಸುವ ಸದಸ್ಯರುಗಳ ಕೋಲಾಹಲಧ್ವನಿಗಳ ಮಧ್ಯದಲ್ಲಿ ಶ್ರೀಮದ್ಯುವರಾಜರವರು ಸಭೆಯಿಂದ ತೆರಳುವರಾದರು.

ಇಲ್ಲಿಗೆ ಸಮ್ಮೇಳನದ ಮೊದಲನೆಯ ದಿವಸದ ಕಾರ್ಯವು ಸಂಪೂರ್ಣವಾಯಿತು

——— 0 ———

ಎರಡನೆಯ ದಿವಸದ ಸಮ್ಮೇಳನ.

೮ನೆಯ ತಾರೀಖಿನ ಅಪರಾಹ್ಣದಲ್ಲಿ ಸಂಪದಭ್ಯುದಯ ಸಮಾಜದ ಮೀಟಿಂಗು ಇದ್ದುದರಿಂದ ಸಮ್ಮೇಳನದ ಕಾರ್ಯವನ್ನು ನೆರವೇರಿಸುವುದಕ್ಕೆ ಅವಕಾಶವಾಗಲಿಲ್ಲ. ಆದುದರಿಂದ ಜೂನ್ ೯ನೆಯ ತಾರೀಖಿನ ಅಪರಾಹ್ಣ ಮೂರುವರೆಗಂಟೆಗೆ ಸರಿಯಾಗಿ ವಿದ್ವನ್ಮಂಡಲಿಯ ಸಮ್ಮೇಳನವು ಪುನಃ ಸೇರಿತು ಮಹಾರಾಣಿ ಕಾಲೇಜಿನ ಉಪನ್ಯಾಸಕರಾದ (Lecturer) ಮ|| ರಾ|| ಬಿ ವೆಂಕಟಾಚಾರ್ ಬಿ ಎ ಯವರು ಅಗ್ರಾಸನವನ್ನು ಸಭೆಯವರ ಪ್ರಾರ್ಥನಾನುಸಾರವಾಗಿ ಅಲಂಕರಿಸಿದರು ಪಂಡಿತ ತಿಮ್ಮಪ್ಪಯ್ಯಶಾಸ್ತ್ರಿಗಳವರು ಆದಿಪಂಪನ ಕಾಲವನ್ನೂ ಅವನ ಗ್ರಂಥಗಳನ್ನೂ ಕುರಿತು ಪ್ರೌಢವಾದ ಉಪನ್ಯಾಸವನ್ನು ಮಾಡಿದರು. ಕವಿಯ ಕಾಲವನ್ನೂ ಆತನು ಬಾಳಿದ ದೇಶದ ವಿಷ

ಯುಗವನ್ನೂ ತಿಳಿದ ಹೊರತು ಆ ಕವಿಯ ಗ್ರಂಥಗಳಲ್ಲಿರುವ ಕೆಲವು ಸ್ವಾರಸ್ಯಗಳನ್ನು ಸಂಪೂರ್ಣವಾಗಿ ಗ್ರಹಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲವೆಂಬಂಶವನ್ನು ಪಂಪನ ಪದ್ಯಗಳ ಮೂಲಕವಾಗಿ ಸ್ಪಷ್ಟಪಡಿಸಿದರು. ಒಬ್ಬ ಕವಿಯ ಕಾಲವನ್ನು ನಿರ್ಣಯಿಸುವುದಕ್ಕೆ ಅನೇಕ ಇತರ ವಿಷಯಗಳನ್ನು ತಿಳಿದಿರಬೇಕೆಂಬ ಅಂಶವನ್ನು ಸಮರ್ಥನ ಮಾಡಿದರು. ಆದಿಪಂಪನು ಕ್ರಿ ಶ ೧೦ ನೆಯ ಶತಮಾನದ ಮಧ್ಯಭಾಗದಲ್ಲಿ ಬಾಳಿದನೆಂಬ ವಿಷಯವನ್ನು ವಿಶದಪಡಿಸಿ ಆತನು ತನ್ನ ಗ್ರಂಥಗಳಲ್ಲಿ ಕಾವ್ಯಗುಣಗಳಿಗೂ ಉಪಮಾದಿಪ್ರಸಿದ್ಧಾಲಂಕಾರಗಳಿಗೂ ಉತ್ತಮವಾದ ಉದಾಹರಣೆಗಳು ಸಿಕ್ಕುವಂತೆ ಬರೆದಿರುವನೆಂಬಂಶವನ್ನು ತಿಳಿಸಿ ಆತನು ಮುಂದಿನ ಕವಿಗಳೆಲ್ಲರಿಗೂ ಆದರ್ಶಪ್ರಾಯನಾಗಿರುವನೆಂದು ತೋರಿಸಿದರು. ಕಾಳಿದಾಸ ಮುಂತಾದ ಮಹಾಕವಿಗಳ ಪ್ರಸಿದ್ಧ ಪದ್ಯಗಳನ್ನು ಕನ್ನಡಿಸುವಲ್ಲಿ ಅತಿಶಯವಾದ ಚಾತುರ್ಯವನ್ನು ಪ್ರದರ್ಶಿಸಿರುವನೆಂದು ವ್ಯಕ್ತಪಡಿಸಿದರು. ಕವಿ ಚಕ್ರವರ್ತಿಗಳೆಂಬ ಬಿರುದು ರನ್ನ ಮುಂತಾದವರಿಗೆ ಬಂದಿರುವುದಾದರೂ ಆದಿಪಂಪನಿಗೆ ಈ ಬಿರುದು ಸಲ್ಲುವಷ್ಟು ಚೆನ್ನಾಗಿ ಇತರರಿಗೆ ಸಲ್ಲುವುದಿಲ್ಲ; ಈತನನ್ನು ಕನ್ನಡದ ಕಾಳಿದಾಸನೆಂದರೂ ಅತಿಶಯೋಕ್ತಿಯಾಗುವುದಿಲ್ಲವೆಂದು ಅಭಿಪ್ರಾಯ ಪಟ್ಟು ತಮ್ಮ ಉಪನ್ಯಾಸವನ್ನು ಮುಗಿಸಿದರು. ಇವರ ಪ್ರೌಢಉಪನ್ಯಾಸವನ್ನು ಕೇಳಿ ಸಭೆಯವರೆಲ್ಲರೂ ಹರ್ಷಿತರಾದರು.

ಪಂಡಿತ ತಿಮ್ಮಪ್ಪಯ್ಯ ಶಾಸ್ತ್ರಿಗಳವರ ಉಪನ್ಯಾಸವು ಪೂರೈಸಿದಮೇಲೆ ಸಭಾಧ್ಯಕ್ಷರಾಗಿದ್ದ ಮ|| ರಾ|| ವೆಂಕಟಾಚಾರ್ಯರವರು ಹಿಂದಿನದಿವಸವೇ ಪ್ರಚುರಪಡಿಸಿದ್ದ ಪ್ರಕಟನೆಯ ಪ್ರಕಾರ ಮ|| ರಾ|| ಎಚ್. ಚನ್ನಕೇಶವಯ್ಯಂಗಾರ್ಯರವರನ್ನು "ಪ್ರಕಟನೆಯಲ್ಲಿರುವಂತೆ ನೀವು ಪೂರ್ವದ ಹಳಗನ್ನಡದ ವಿಷಯವನ್ನು ಕುರಿತು ಉಪನ್ಯಾಸಮಾಡಬೇಕು" ಎಂದು ಕೇಳಲು, "ನಮ್ಮ ಉಪನ್ಯಾಸವು ಇನ್ನೂ ಸಿದ್ಧವಾಗಿಲ್ಲ, ನಾಳೆಯ ದಿವಸ ಪ್ರಾತಃಕಾಲಕ್ಕೆ ಅದು ಸಿದ್ಧವಾಗುವುದು" ಎಂದು ಮ|| ರಾ|| ಎಚ್. ಚನ್ನಕೇಶವಯ್ಯಂಗಾರ್ಯರವರು ಹೇಳಿದರು. ಆಗ ಗೌರವ ಕಾರ್ಯದರ್ಶಿಗಳು "ನಾಳೆಯ ಪ್ರಾತಃಕಾಲಕ್ಕೆ ಮ|| ರಾ|| ರಘುನಾಥರಾಯರವರ ಮತ್ತು ಮ|| ರಾ|| ಎಂ ಎಸ್ ಪುಟ್ಟಣ್ಣನವರ ಉಪನ್ಯಾಸಗಳು ನಡೆಯುವಂತೆ ಪ್ರಕಟನೆಯ ಪತ್ರಿಕೆಯಲ್ಲಿ ಅಚ್ಚು ಹಾಕಿಸಿ ಮಹಾ ಜನರಿಗೆಲ್ಲಾ ಕೊಟ್ಟಿದೆ. ನಾಳೆಯ ದಿವಸ ನಿಮ್ಮ ಉಪನ್ಯಾಸವು ನಡೆಯುವುದಕ್ಕೆ ಅವಕಾಶವಿರುವಂತೆ ತೋರುವುದಿಲ್ಲ," ಎಂದು ಶ್ರುತಪಡಿಸಿದರು. ಆ ಮೇಲೆ ಪಂಡಿತ ಕೆ. ನಂಜುಂಡ ಶಾಸ್ತ್ರಿಗಳವರು ಪರಶುರಾಮ ರಾಮಾಯಣದ ಕಥೆಯ ಸಾರಾಂಶವನ್ನು ತಿಳಿಸಿ ಆ ಗ್ರಂಥದ ರೀತಿ ಶೈಲಿ ಮುಂತಾದುವನ್ನು ತೋರಿಸುವುದಕ್ಕಾಗಿ ಸುಮಾರು ಮೂವತ್ತು ಪದ್ಯಗಳನ್ನು ರಾಗದಿಂದ ಓದಿದರು. ಲಕ್ಷ್ಮೀಶನ ಜೈಮಿನಿ ಭಾರತದಂತೆಯೇ ಪರಶುರಾಮರಾಮಾಯಣವೂ ವಾರ್ಧಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ಕವಿತಾರೀತಿಯು ಸ್ವಲ್ಪಹೆಚ್ಚು ಕಡಿಮೆ ಜೈಮಿನಿ ಭಾರತದ ರೀತಿಯಂತೆಯೆ ಇದೆ. ಪರಶುರಾಮ ರಾಮಾಯ

ನಾದ ಪಠನವು ಮುಗಿದಮೇಲೆ ಅಗ್ರಾಸನಾಧಿಪತಿಗಳು ಉಪನ್ಯಾಸಗಳ ಮುಖ್ಯಾಂಶಗಳನ್ನು ಕುರಿತು ಸಮಯೋಚಿತವಾಗಿ ಸ್ವಲ್ಪಹೊತ್ತು ಮಾತನಾಡಿ ಸಭೆಯವರ ಪರವಾಗಿ ಉಪನ್ಯಾಸಕರಿಗೆ ವಂದನೆಗಳನ್ನು ಸಮರ್ಪಿಸಿ ಸಭೆಯನ್ನು ಬರಖಾಸ್ತು ಮಾಡಿದರು

—— 0 ——

ಮೂರನೆಯ ದಿನದ ಸಮ್ಮೇಳನ.

ಜೂನ್ ೧೦ ನೆಯ ತಾರೀಖಿನ ಪ್ರಾತಃಕಾಲಕ್ಕೆ ಮ|| ರಾ|| ರಘುನಾಥರಾಯರವರು "ಕರ್ನಾಟಕ ಭಾಷಾ ಚರಿತ್ರೆಯ ಹೆಗ್ಗುರುತುಗಳು" ಎಂಬುದನ್ನು ಕುರಿತು ಮಾಡುವ ಉಪನ್ಯಾಸವೂ ಮ|| ರಾ|| ಎಂ ಎಸ್ ಪುಟ್ಟಣ್ಣನವರು ಕನ್ನಡದ ಪ್ರಕೃತಸ್ಥಿತಿಯನ್ನು ಕುರಿತು ಮಾಡುವ ಉಪನ್ಯಾಸವೂ ಗೊತ್ತಾಗಿದ್ದುವು ಆದರೆ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯ ಕಾರ್ಯಗಳು ಉಳಿದಿದ್ದುದರಿಂದಲೂ ಅನೇಕ ಮಂದಿ ಸದಸ್ಯರುಗಳು ಆ ದಿವಸದ ಮೇಲ್ ಟ್ರೇನಿನಲ್ಲಿಯೇ ಪ್ರಯಾಣ ಮಾಡಬೇಕೆಂದು ನಿಶ್ಚಯಿಸಿದ್ದುದರಿಂದಲೂ, ಉಪನ್ಯಾಸಗಳು ಸಾಂಗವಾಗಿ ನಡೆಯುವುದಕ್ಕೆ ಕಾಲವು ತಕ್ಕಷ್ಟು ಇರಲಿಲ್ಲ ಅಗ್ರಾಸನವನ್ನು ಅಲಂಕರಿಸಿದ್ದ ಮ|| ರಾ|| ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರವರು ನೆರೆದಿದ್ದ ಸಭೆಗೆ "ಪರಿಷತ್ತಿನ ಕಾರ್ಯಗಳನ್ನೂ ಈ ಪ್ರಾತಃಕಾಲದಲ್ಲಿಯೇ ಮುಗಿಸಬೇಕಾಗಿರುವುದರಿಂದ ಉಪನ್ಯಾಸಗಳಿಗೆ ಅರ್ಧಗಂಟೆಗಿಂತ ಹೆಚ್ಚು ಕಾಲವನ್ನು ಕೊಡಲಾಗುವುದಿಲ್ಲ ಮ|| ರಾ|| ಎಂ ಎಸ್ ಪುಟ್ಟಣ್ಣನವರು ಹಾಜರಿಲ್ಲದಿರುವುದರಿಂದಲೂ ಅವರು ಉಪನ್ಯಾಸವನ್ನು ಕಳುಹಿಸದಿರುವುದರಿಂದಲೂ ಮ|| ರಾ|| ರಘುನಾಥರಾಯರವರು ತಮ್ಮ ಉಪನ್ಯಾಸದ ಸಾರಾಂಶವನ್ನು ಸುಮಾರು ೨೦ ನಿಮಿಷಗಳಲ್ಲಿ ತಿಳಿಸಿ ಮುಗಿಸಬೇಕಾಗಿದೆ" ಎಂದು ಅಪ್ಪಣೆ ಕೊಟ್ಟರು ಮ|| ರಾ|| ರಘುನಾಥರಾಯರವರು ಕರ್ಣಾಟಕ ಭಾಷಾ ಚರಿತ್ರೆಯ ಹೆಗ್ಗುರುತುಗಳನ್ನು ಸಂಕ್ಷೇಪವಾಗಿ ತಿಳಿಸಿ ಕನ್ನಡವು ಕೃಷ್ಣಾ ತುಂಗಭದ್ರಾ ನದಿಯ ಮಧ್ಯಪ್ರದೇಶದಲ್ಲಿಯೂ ತಲಕಾಡು ಹಳೇಬೀಡುಗಳ ಪ್ರಾಂತಗಳಲ್ಲಿಯೂ ಕೃಷ್ಣಾನದಿಗೆ ಉತ್ತರದಲ್ಲಿರುವ ಗುಲ್ಬರ್ಗ, ಬಿದರೆ, ಕಲ್ಯಾಣ ಮುಂತಾದ ಪ್ರಾಂತದಲ್ಲಿಯೂ ಪ್ರವರ್ಧಮಾನದಶೆಯನ್ನೈದಿತು. ತಮಿಳು ತೆಲುಗುಗಳಂತೆ ಒಂದೊಂದೇ ಎಡೆಯಲ್ಲಿ ಪ್ರವರ್ಧಮಾನದಶೆಗೆ ಬರಲಿಲ್ಲ ತೆಲುಗು ಮರ್ಯಾದೆಯನ್ನನುಸರಿಸುವ ಉತ್ತರಮಾರ್ಗದ ಕನ್ನಡವೂ ತಮಿಳುಮಾರ್ಗವನ್ನನುಸರಿಸುವ ದಕ್ಷಿಣಮಾರ್ಗದ ಕನ್ನಡವೂ ಸಮಕಾಲದಲ್ಲಿ ಗ್ರಂಥಸ್ಥವಾಗುತ್ತ ಬಂದುವು. ಉತ್ತರಮಾರ್ಗವು ಷಟ್ಪದಿಯ ಕಾವ್ಯಕ್ಕೆ ಅನುಕೂಲವಾಗಿದೆ. ದಕ್ಷಿಣಮಾರ್ಗವು ಸಮವಾದ ವೃತ್ತಕ್ಕನುಕೂಲವಾಗಿದೆ ಕಾಲಕ್ರಮದಲ್ಲಿ ಮಿಶ್ರಮಾರ್ಗದ ಕಾವ್ಯಗಳು ಪ್ರಚುರವಾಗುತ್ತ ಬಂದುವು. ದಕ್ಷಿಣಮಾರ್ಗವೇ ಪ್ರಚುರವಾಗಿದ್ದ ಮೈಸೂರಿಗೆ ಉತ್ತರಮಾರ್ಗದ ಕನ್ನಡವು ಲಿಂಗಾಯಿತರ ಗ್ರಂಥಗಳ ಮೂಲಕವಾಗಿಯೂ ವಿಜಯನಗರ ಮಹಾ ಸಂಸ್ಥಾನದ ಅರಸುಗಳ ಕಾಲದಲ್ಲಿ ಹುಟ್ಟಿದ ಕುಮಾರವ್ಯಾಸ ಮುಂತಾದವರ ಕಾವ್ಯಗಳಿಂದಲೂ ಶಾಸನಗಳಿಂದಲೂ

ಪ್ರಚುರವಾದಾಗ ಅದಕ್ಕೆ ಹೊಸಗನ್ನಡವೆಂದು ಹೆಸರು ಬಂದಿತು. ಹೊಸಗನ್ನಡವೆಂದರೆ ಹೊಸದಾಗಿ ಹುಟ್ಟಿದ ಕನ್ನಡವಲ್ಲ, ಮೈಸೂರು ದೇಶಕ್ಕೆ ಹೊಸದಾಗಿ ಬಂದ ಕನ್ನಡ ಎಂದೇ ಅರ್ಥಮಾಡಬೇಕೆಂದು ತಿಳಿಸಿ ಅವರಿಗೆ ಕೊಟ್ಟಿದ್ದ ಅರ್ಧಗಂಟೆಯೊಳಗೆ ಅವರ ಉಪನ್ಯಾಸವನ್ನು ಮುಗಿಸಿದರು. ಅಗ್ರಾಸನಾಧಿಪತಿಗಳು ಉಪನ್ಯಾಸಕರ ದಾರಿಯನ್ನೂ ಚಾತುರ್ಯವನ್ನೂ ಮೆಚ್ಚಿ ಮಾತನಾಡಿದರು. ಅಷ್ಟುಹೊತ್ತಿಗೆ ಹತ್ತು ಗಂಟೆಯಾಗಿತ್ತು. ಅಗ್ರಾಸನಾಧಿಪತಿಗಳಿಗೆ ವಂದನೆಗಳನ್ನು ಸಮರ್ಪಿಸಿದ ಕೂಡಲೆ ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನವನ್ನು ಬರಕಾಸ್ತು ಮಾಡಲಾಯಿತು

——— 0 ———

ಕರ್ಣಾಟಕ ಸಾಹಿತ್ಯ ಪರಿಷತ್ತಿನ ದ್ವಿತೀಯ ವಾರ್ಷಿಕ ಸಭೆಯ ಕಾರ್ಯವಿವರ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ದ್ವಿತೀಯ ವಾರ್ಷಿಕಸಭೆಯು ಮೈಸೂರಿನಲ್ಲಿರುವ ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ಜೂನ್ ಮಾಹೆ ೯ ಮತ್ತು ೧೦ನೆಯ ತಾರೀಖುಗಳ ಪ್ರಾತಃಕಾಲಗಳಲ್ಲಿ ನಡೆಯಿತು

ಸಭೆಗೆ ದಯಮಾಡಿಸಿದ್ದ ಮಂಡಲಿಗಳು ಯಾರೆಂದರೆ —

ಮ|| ರಾ|| ರಾಜಮಂತ್ರಪ್ರವೀಣ ಎಚ್ ವಿ ನಂಜುಂಡಯ್ಯನವರು ಎಂ ಎ, ಎಂ. ಎಲ್, ಸಿ ಐ. ಇ

,, ರಾವ್‌ಬಹದ್ದೂರ್ ಎಂ ಶಾಮರಾಯರವರು ಎಮ್. ಎ

,, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರವರು ಬಿ ಎಸ್. ಸಿ, ಎಲ್ ಸಿ. ಇ

,, ಎಚ್ ನಾರಾಯಣರಾಯರವರು, ಎಂ ಎ.

,, ಬಿ ರಾಮರಾಯರವರು ಎಮ್. ಎ., ಎಲ್‌ಎಲ್ ಬಿ

,, ಆರ್. ತಾತಾಚಾರ್ಯರವರು ಎಂ ಎ, ಎಲ್ ಟಿ

,, ಎನ್. ರಾಜಗೋಪಾಲಕೃಷ್ಣರಾಯರವರು

,, ಎಮ್. ಶ್ರೀನಿವಾಸರಾಯರವರು, ಬಿ. ಎ.

,, ಸಿ ಕೃಷ್ಣರಾಯರವರು ಬಿ ಎ.

,, ಎಂ. ವೆಂಕಟಕೃಷ್ಣಯ್ಯನವರು

,, ಬಾಪು ಸುಬ್ಬರಾಯರವರು ಬಿ. ಎ

,, ಪುಂಗನೂರು ರಾಘವೇಂದ್ರಾಚಾರ್ಯರವರು

,, ಸೋ. ಅಯ್ಯಾಶಾಸ್ತ್ರಿಗಳವರು (ಕವಿತಿಲಕ)

ಮ|| ರಾ|| ಕೆ. ಆರ್. ಚಕ್ರವರ್ತಿಗಳವರು (ಸರಳಕವಿಸೂರಿ)
,, ಪಂ|| ಎಮ್. ಕೃಷ್ಣಪ್ಪನವರು
,, ಪಂ|| ಕೆ. ನಂಜುಂಡಶಾಸ್ತ್ರಿಗಳವರು
,, ಪಂಡಿತ ಜಿನರಾಜದಾಸ ದೋರ್ಬಲಿಶಾಸ್ತ್ರಿಗಳವರು
,, ಎಚ್ ಚನ್ನಕೇಶವಯ್ಯಂಗಾರ್ಯರವರು
,, ಸಿ ವೆಂಕಟರಮಣಶಾಸ್ತ್ರಿಗಳವರು
,, ಬಿ. ವೆಂಕಟಾಚಾರ್ಯರವರು ಬಿ ಎ
,, ಬಿ. ಅಶ್ವತ್ಥನಾರಾಯಣಶಾಸ್ತ್ರಿಗಳವರು
,, ಎ ಎಸ್ ಸಂಜೀವರಾಯರವರು
,, ಹನುಮಾನರವರು
,, ಸಿ. ವೆಂಕಟರಮಣಯ್ಯನವರು
,, ಪಿ ಎನ್ ಅಚ್ಯುತರಾಯರವರು ಎಲ್. ಎಮ್. ಎಸ್.
,, ಆರ್. ರಘುನಾಥರಾಯರವರು ಬಿ. ಎ.
,, ವೀಣೆ ರಂಗಸ್ವಾಮಿ ಅಯ್ಯಂಗಾರ್ಯರವರು
,, ಸಿ. ಕಪ್ಪಣ್ಣನವರು
,, ಎಸ್. ರಾಘವೇಂದ್ರರಾಯರವರು ಬಿ. ಎ., ಬಿ. ಇ
,, ಎಚ್. ಲಿಂಗರಾಜಅರಸಿನವರು

ಪರಿಷತ್ತಿನ ಅಧ್ಯಕ್ಷರಾದ ರಾಜಮಂತ್ರಪ್ರವೀಣ ಮ|| ಎಚ್. ವಿ. ನಂಜುಂಡಯ್ಯನವರು ಅಗ್ರಾಸನವನ್ನು ಅಲಂಕರಿಸಿದರು.

ಪ್ರಕಟನೆಯಲ್ಲಿ ತಿಳಿಸಿದ್ದಂತೆ **ವಾರ್ಷಿಕವರದಿಯ ವಿಚಾರವು** ಮೊದಲು ನಡೆಯಿತು

1. ಮ|| ರಾ|| ಚನ್ನಕೇಶವಯ್ಯಂಗಾರ್ಯರವರು ವಾರ್ಷಿಕ ವರದಿಯ ೧೧ನೆಯ ಪುಟದಲ್ಲಿರುವ "ದಂಡಿಯಕಾಲ, ಕರ್ಣಾಟಕ ವರ್ಣಮಾಲೆಯ ಚಾರಿತ್ರಾದಿ ವಿಚಾರ, ಕರ್ಣಾಟಕ ಧಾತುಗಳು, ಬೌದ್ಧಸಾಹಿತ್ಯ, ಕನ್ನಡದ ದಕ್ಷಿಣೋತ್ತರ ಮಾರ್ಗಗಳ ವಿಚಾರ, ಅಂಧ್ರಾರ್ಧಾನುಸ್ವಾರ ತತ್ವ ಎಂಬ ಆರು ಲೇಖನಗಳು ಅಪೂರ್ವಶೋಧನ ಚಾತುರ್ಯವನ್ನು ಪ್ರದರ್ಶಿಸುವುವು ಈ ಆರರಲ್ಲಿ ಕರ್ಣಾಟವರ್ಣಮಾಲೆಯ ಚಾರಿತ್ರಾದಿ ವಿಚಾರ, ಕನ್ನಡದ ದಕ್ಷಿಣೋತ್ತರಮಾರ್ಗಗಳು ಎಂಬುವು ಕನ್ನಡಭಾಷೆಯ ಚರಿತ್ರೆಯನ್ನು ಬರೆಯುವುದಕ್ಕೆ ಅತ್ಯಾವಶ್ಯಕಗಳಾಗಿರುತ್ತವೆ. ಮೈಸೂರಲ್ಲಿರುವ ಪಂಡಿತರೂ, "ಕರ್ಣಾಟಕ" ಎಂಬ ಪತ್ರಿಕೆಯೂ, "ದಕ್ಷಿಣೋತ್ತರ ಮಾರ್ಗಗಳ ವಿಚಾರ" ಎಂಬ ಲೇಖನವನ್ನು ಶ್ಲಾಘಿಸುತ್ತಿರುವುವು. ಈ ಲೇಖನವು ಹಳಗನ್ನಡ ಹೊಸಗನ್ನಡಗಳ ನಿಜವಾದ ಅರ್ಥವನ್ನು ವ್ಯವಸ್ಥೆ ಮಾಡಿದೆ ಎಂದು ಹೇಳಬಹುದಾಗಿದೆ" ಎಂಬ ಭಾಗವನ್ನು ಕುರಿತು ಆಕ್ಷೇಪಿಸಿ ಅಂಧ್ರಾರ್ಧಾನುಸ್ವಾರ ತತ್ವ, ಕನ್ನಡದ ದಕ್ಷಿಣೋತ್ತರ

ಮಾರ್ಗಗಳ ವಿಚಾರ ಎಂಬ ಲೇಖನಗಳನ್ನು ಪರಿಷತ್ತಿನ ಸರ್ವರೂ ಒಪ್ಪಿಲ್ಲವಾದುದರಿಂದ ಮೇಲ್ಕಂಡ ಪಙ್ಕ್ತಿಗಳನ್ನು ವಾರ್ಷಿಕ ವರದಿಯಿಂದ ತೆಗೆದುಬಿಡುವುದು ಉತ್ತಮವೆಂದು ಸಲಹೆಯನ್ನು ಕೊಟ್ಟರು. ಮ|| ರಾ|| ಹನುಮಾಚಾರ್ಯರವರು ಮೇಲ್ಕಂಡ ಸಲಹೆಯನ್ನು ಅನುಮೋದಿಸಿದರು ವೋಟುಗಳನ್ನು ತೆಗೆದುಕೊಳ್ಳುವಲ್ಲಿ ಸಭೆಯಲ್ಲಿ ನೆರೆದಿದ್ದ ಬಹುಮಂದಿ ಸದಸ್ಯರು ಮ|| ರಾ|| ಚನ್ನಕೇಶವಯ್ಯಂಗಾರ್ಯರ ಸಲಹೆಯನ್ನು ತಿರಸ್ಕರಿಸಿದರು.

ಅಚ್ಚಾಗಿರುವಂತೆ ವಾರ್ಷಿಕ ವರದಿಯು ಅಂಗೀಕರಿಸಲ್ಪಡಬೇಕು ಎಂಬುದನ್ನು ಸರ್ವರೂ ಒಪ್ಪಿದರು.

೨ ಮುಂದಿನ ವರ್ಷದ ಆಯವ್ಯಯದ ವ್ಯವಸ್ಥೆ ಎಂಬುದನ್ನು ಮಾರಣೆಯ ದಿವಸದಲ್ಲಿ ವಿಚಾರಕ್ಕೆ ತರಬೇಕೆಂದು ವ್ಯವಸ್ಥೆಯಾಯಿತು.

ಸರಳಕವಿಸೂರಿ ಪಂಡಿತ ರಾಜಗೋಪಾಲ ಚಕ್ರವರ್ತಿಗಳ ಸೂಚನೆಗಳ ವಿಚಾರ:—

೩ ರಾಜಗೋಪಾಲ ಚಕ್ರವರ್ತಿಗಳವರ ಮೊದಲನೆಯ ಸೂಚನೆಯು ಎಂದರೆ " ನಾಲ್ಕನೆಯ ನಿಬಂಧನೆಯ ಐದನೆಯ ಪಙ್ಕ್ತಿಯಲ್ಲಿ [ಸಹಾಯಕರು] ಎಂಬುದನ್ನು ಬಿಟ್ಟು ಆಜೀವ ಸದಸ್ಯರು (Life members) ಎಂಬುದನ್ನು ಇಟ್ಟುಕೊಂಡು ಆಜೀವಸದಸ್ಯರು ಕೊಡಬೇಕಾದ ರೂಪಾಯಿ ೫೦ ನ್ನು ರೂ ನೂರಕ್ಕೆ ಹೆಚ್ಚಿಸಿ ಇದಕ್ಕನುಗುಣವಾಗಿ ಮುಂದೆ ಬರುವ ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಮಾಡತಕ್ಕುದು. '' ಎಂಬುದು ಚರ್ಚಿಸಲ್ಪಟ್ಟಿತು ಸದಸ್ಯರಲ್ಲಿ ಬಹುಮಂದಿ ಈ ಸೂಚನೆಯನ್ನು ಒಪ್ಪಲಿಲ್ಲ.

೪. ಪಂ|| ರಾಜಗೋಪಾಲ ಚಕ್ರವರ್ತಿಗಳ ಎರಡನೆಯ ಸೂಚನೆಯ, ಎಂದರೆ " ಎಂಟನೆಯ ನಿಬಂಧನೆಯಲ್ಲಿ ೭ ಮತ್ತು ೭ ನೆಯ ಪಙ್ಕ್ತಿಗಳನ್ನು ಬಿಟ್ಟು ಅವುಗಳಿಗೆ ಬದಲಾಗಿ 'ಈ ಮೇಲ್ಕಂಡವರೆಲ್ಲರೂ ಕಾರ್ಯನಿರ್ವಾಹಕ ಮಂಡಲಿಯವರಿಂದಲೇ ಚುನಾಯಿಸಲ್ಪಡಬೇಕು. ' ಎಂದು ಇರತಕ್ಕುದು'' ಎಂಬ ವಿಷಯದಲ್ಲಿ ಚರ್ಚೆಯು ನಡೆಯಿತು. ಮ|| ರಾ|| ಸಿ ಕೃಷ್ಣರಾಯರವರು 'ಪರಿಷತ್ತಿನ ಅಧಿಕಾರಿಗಳೆಲ್ಲರೂ ಕಾರ್ಯನಿರ್ವಾಹಕ ಮಂಡಲಿಯಿಂದಲೇ ಚುನಾಯಿಸಲ್ಪಡಬೇಕು ಎಂಬುದಕ್ಕೆ ಬದಲಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮಾತ್ರ ವಾರ್ಷಿಕ ಸಭೆಯಲ್ಲಿ ಚುನಾಯಿಸಲ್ಪಡಬೇಕು. ಗೌರವಕಾರ್ಯದರ್ಶಿಗಳೂ ಕೋಶಾಧ್ಯಕ್ಷರೂ ಕಾರ್ಯನಿರ್ವಾಹಕ ಮಂಡಲಿಯವರಿಂದ ನಿಯಮಿಸಲ್ಪಡಬೇಕು' ಎಂದಿರುವುದು ಉತ್ತಮವೆಂದು ವಾದಿಸಿದರು. ಕೊನೆಗೆ ಮ|| ರಾ|| ಸಿ. ಕೃಷ್ಣರಾಯರವರ ಸೂಚನೆಯು ಸಭೆಯವರಿಂದ ಅಂಗೀಕರಿಸಲ್ಪಟ್ಟಿತು. ಅಚ್ಚಾಗಿರುವ ಪ್ರತಿಯಲ್ಲಿರುವ ೮ ನೆಯ ನಿಬಂಧನೆಯು ಮುಂದೆ ತೋರಿಸುವಂತೆ ಎಂದರೆ

"ಕಾರ್ಯನಿರ್ವಾಹಕ ಮಂಡಲಿಯಲ್ಲಿ ಮೂವತ್ತು ಮಂದಿ ಮೆಂಬರುಗಳ ಜತೆಗೆ ಒಬ್ಬರು ಅಧ್ಯಕ್ಷರು (President), ಒಬ್ಬರು ಉಪಾಧ್ಯಕ್ಷರು (Vice President), ಇಬ್ಬರು ಜಂಟಿ ಗೌರವ ಕಾರ್ಯದರ್ಶಿಗಳು (2 Joint Honorary Secretaries) ಒಬ್ಬರು ಗೌರವ ಕೋಶಾಧ್ಯಕ್ಷರು (Honorary Treasurer) ಇರತಕ್ಕದು. ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಉಳಿದ ೩೩ಮಂದಿ ಕಾರ್ಯನಿರ್ವಾಹಕ ಸದಸ್ಯರುಗಳನ್ನೂ ವಾರ್ಷಿಕಸಭೆಯಲ್ಲಿಯೇ ಪರಿಷತ್ತಿನ ಸದಸ್ಯರುಗಳು ಬಾಲೆಟ್ ಮೂಲಕವಾಗಿ ಚುನಾಯಿಸಬೇಕು. ಮೇಲ್ಕಂಡ ೩೩ ಮಂದಿ ಕಾರ್ಯನಿರ್ವಾಹಕ ಸದಸ್ಯರುಗಳಲ್ಲಿ ೯ನೆಯ ನಿಬಂಧನೆಗೆ ಅನುಸಾರವಾಗಿ ಇಬ್ಬರು ಜಂಟಿ ಗೌ|| ಕಾರ್ಯದರ್ಶಿಗಳನ್ನು ಒಬ್ಬರು ಗೌ|| ಕೋಶಾಧ್ಯಕ್ಷರನ್ನು ಕಾರ್ಯನಿರ್ವಾಹಕ ಮಂಡಲಿಯವರೇ ನಿಯಮಿಸತಕ್ಕದು" ಎಂದು ಸದಸ್ಯರುಗಳಿಂದ ನಿರ್ಣಯಿಸಲ್ಪಟ್ಟಿತು.

5. ಪಂಡಿತ ರಾಜಗೋಪಾಲ ಚಕ್ರವರ್ತಿಗಳ ೩ ಮತ್ತು ೪ ನೆಯ ಸೂಚನೆಗಳು, ಎಂದರೆ —

"೯ ನೆಯ ನಿಬಂಧನೆಯಲ್ಲಿ ೯ ನೆಯ ಪಙ್ಕ್ತಿಯಲ್ಲಿ 'ಈ ಮೆಂಬರುಗಳು' ಎಂಬ ಮಾತಿನ ಪರದಲ್ಲಿ "ಸಭೆಗೆ ಬಂದಿರುವ" ಎಂಬ ಮಾತನ್ನು ಸೇರಿಸತಕ್ಕದು"

"೧೦ ನೆಯ ನಿಬಂಧನೆಯ ೧ ನೆಯ ಪಙ್ಕ್ತಿಯಲ್ಲಿ ಕಾಣಬರುವ "ವಿಷಯಗಳೆಲ್ಲವೂ" ಎಂಬ ಪದದ ಪರದಲ್ಲಿ "ಸಭೆಗೆ ಬಂದಿರುವ ಸದಸ್ಯರುಗಳ" ಎಂಬುದನ್ನು ಸೇರಿಸತಕ್ಕದು" ಎಂಬುವು ಚರ್ಚೆಗೆ ಬಂದು ಅಂಗೀಕೃತವಾದುವು.

6 ಪಂಡಿತ ರಾಜಗೋಪಾಲ ಚಕ್ರವರ್ತಿಗಳ ೫ ನೆಯ ಸೂಚನೆಯು ಎಂದರೆ.—

"೨೭ ನೆಯ ನಿಬಂಧನೆಯಲ್ಲಿ ೩ ತಿಂಗಳು ಎಂಬುದನ್ನು ೨ ತಿಂಗಳು ಎಂದು ಬದಲಾಯಿಸತಕ್ಕದು" ಎಂಬುದು ಚರ್ಚೆಗೆ ಬಂತು. ೨ ತಿಂಗಳು ಎಂಬುದನ್ನು ೧ ತಿಂಗಳು ಎಂದು ೨೭ ನೆಯ ನಿಬಂಧನೆಯು ಕೆಳಗೆ ಕಾಣಿಸುವಂತೆ ಇರಬೇಕೆಂದೂ, ಎಂದರೆ.—

"ಪರಿಷತ್ತಿನ ಸಾಮಾನ್ಯ ಸಭೆಗಳ ನೋಟೀಸುಗಳನ್ನು ಸದಸ್ಯರುಗಳಿಗೆ ಅಂತಹ ಸಭೆಗಳು ಕೂಡುವುದಕ್ಕೆ ೧ ತಿಂಗಳು ಮುಂಚಿತವಾಗಿ ಕಳುಹಿಸತಕ್ಕದು" ಎಂದು ನಿರ್ಣೀತವಾಯಿತು.

7. ಪಂಡಿತ ರಾಜಗೋಪಾಲ ಚಕ್ರವರ್ತಿಗಳ ೬ ನೆಯ ಸೂಚನೆಯು ಎಂದರೆ.—

" ೨೯ ನೆಯ ನಿಬಂಧನೆಯ C ಎಂಬ ಭಾಗದಲ್ಲಿ 'ಅಧಿಕಾರಿಗಳನ್ನೂ ಸದಸ್ಯರುಗಳನ್ನೂ' ಎಂಬುದಕ್ಕೆ ಬದಲಾಗಿ 'ಸದಸ್ಯರುಗಳನ್ನೂ' ಎಂದು ಮಾತ್ರ ಇಟ್ಟುಕೊಳ್ಳತಕ್ಕದು" ಎಂಬುದರ ವಿಷಯದಲ್ಲಿ ಚರ್ಚೆಯು ನಡೆಯಿತು. ಇದಕ್ಕೆ ಬದಲಾಗಿ

"೨೯ ನೆಯ ನಿಬಂಧನೆಯ C ಎಂಬ ಭಾಗದಲ್ಲಿ ಅಧಿಕಾರಿಗಳನ್ನೂ ಸದಸ್ಯರುಗಳನ್ನೂ ಎಂಬುದಕ್ಕೆ ಬದಲಾಗಿ "ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಉಳಿದ ೩೩ ಮಂದಿ ಸದಸ್ಯರುಗಳನ್ನೂ ಚುನಾಯಿಸುವುದು"ಎಂದಿರಬೇಕೆಂದು ನಿರ್ಣಯಿಸಲ್ಪಟ್ಟಿತು.

ಮೇಲ್ಕಂಡ ಕಾರ್ಯಗಳು ನಡೆದ ಹೊತ್ತಿಗೆ ಉಪಾಧ್ಯಕ್ಷರಾದ ಮ|| ರಾ|| ರಾವ್‌ಬಹದ್ದೂರ್ ಎಂ. ಶಾಮರಾಯರು ಸಭೆಗೆ ಬಂದರು. ಮ|| ರಾ|| ಎಚ್. ವಿ. ನಂಜುಂಡಯ್ಯನವರು ತಮಗೆ ತುರ್ತು ಕೆಲಸವಿದೆಯೆಂದು ಹೇಳಿ ಮ|| ರಾ|| ಶಾಮರಾಯರವರನ್ನು ಅಗ್ರಾಸನದಲ್ಲಿ ಕುಳ್ಳಿರಿಸಿ ತೆರಳಿದರು.

೮. ಕವಿತಿಲಕ ಪಂಡಿತ ಅಯ್ಯಾಶಾಸ್ತ್ರಿಗಳವರ ಸೂಚನೆಗಳು.

೧. ೧೭ ನೆಯ ನಿಬಂಧನೆಯನ್ನು ಕೆಳಗೆ ಕಾಣಿಸುವ ತೆರದಲ್ಲಿ ಬದಲಾಯಿಸಬೇಕು.—

"ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಲ್ಲಿ ಅರ್ಧಪಾಲಿಗೆ ಕಡಿಮೆಯಿಲ್ಲದಷ್ಟು ಮಂದಿ ಸದಸ್ಯರು ಯಾರಾದರೂ ಒಬ್ಬರನ್ನು ಅರ್ಹರಾದವರೆಂದು ಆರಿಸಿ ನಿರ್ದೇಶಿಸಿದಲ್ಲಿ ಅಂತಹವರಿಗೆ ಸಾಮಾನ್ಯಸಭೆಯಲ್ಲಿ ಗೌರವಸದಸ್ಯತ್ವವೇ ಆಗಲಿ ವಿಶಿಷ್ಟಸದಸ್ಯತ್ವವೇ ಆಗಲಿ ಒಪ್ಪತಕ್ಕದು"

೨. ೨೭ನೆಯ ನಿಬಂಧನೆಯಲ್ಲಿರುವ "ಆದರೆ" ಎಂಬ ಪದದ ಹಿಂದೆ "ಮೇಲ್ಕಂಡಂತೆ ನೌಕರರನ್ನು ಮತ್ತು ಸೇವಕರನ್ನು ನೇಮಿಸುವುದಕ್ಕೆ ಮುಂಚಿತವಾಗಿ ಕಾರ್ಯನಿರ್ವಾಹಕ ಮಂಡಲಿಯವರ ಸದಸ್ಯರೆಲ್ಲರಿಗೂ ಲಿಖಿತಮೂಲಕವಾಗಿ ಹಾಗೆ ನೇಮಿಸಬೇಕಾದ ಪ್ರಮೇಯದ ಆವಶ್ಯಕತೆಯನ್ನು ಮತ್ತು ಅವರಿಗೆ ಕೊಡಬೇಕಾದ ವೇತನ ಬಹುಮಾನಾದಿಗಳ ಪರಿಮಿತಿಯನ್ನು ತಿಳಿಯಪಡಿಸಿ ಅವರಿಂದ ಬರುವ ಲಿಖಿತಾಭಿಪ್ರಾಯಗಳನ್ನು ಸದಸ್ಯರ ಮುಖತಃ ಬರುವ ಅಭಿಪ್ರಾಯಗಳನ್ನು ಸೇರಿಸಿ ಒಂದು ನಿರ್ಣಯವಾದಮೇಲೆ ಆಪ್ರಕಾರ ಕಾರ್ಯವನ್ನು ನಡೆಸಬೇಕು" ಎಂಬುದನ್ನು ಸೇರಿಸುವುದು.

ಈ ಸೂಚನೆಗಳನ್ನು ಮ|| ರಾ|| ಕರ್ಪೂರ ಶ್ರೀನಿವಾಸರಾಯರವರು ಅನುಮೋದಿಸಿದರು

ಆದರೆ ಸಭೆಯವರಿಂದ ಅಂಗೀಕೃತವಾಗಲಿಲ್ಲ.

ಅರಮನೆಯ ಧರ್ಮಾಧಿಕಾರಿಗಳಾದ ಪಂಡಿತ ಆರ್. ರಾಘವೇಂದ್ರಾಚಾರ್ಯರವರ ಸೂಚನೆಗಳು.

೧. ೧೭ನೆಯ ನಿಬಂಧನೆಯನ್ನು ಕೆಳಗೆ ತೋರಿಸುವ ಪ್ರಕಾರ ಎಂದರೆ—

"ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಪೈಕಿ ಆಯಾದೇಶದ ಸದಸ್ಯರುಗಳಲ್ಲಿ ಅರ್ಧಸಂಖ್ಯೆಗೆ ಕಡಮೆಯಿಲ್ಲದ ಸದಸ್ಯರು ಒಪ್ಪಿ ಯಾರಾದರೊಬ್ಬ ಅರ್ಹರಾದವರನ್ನು ಚುನಾಯಿಸಿದ ಪಕ್ಷದಲ್ಲಿ ಅಂತಹರಿಗೆ ಸಾಮಾನ್ಯಸಭೆಯಲ್ಲಿ ಗೌರವಸದಸ್ಯತ್ವವೂ ಅಥವಾ ವಿಶಿಷ್ಟ ಸದಸ್ಯತ್ವವೂ ಅಂಗೀಕರಿಸಲ್ಪಡತಕ್ಕದು" ಎಂದು ಬದಲಾಯಿಸಬೇಕು.

೨. ೨೭ ನೆಯ ನಿಬಂಧನದಲ್ಲಿ ಕನ್ನಡ ನಿಬಂಧನ ಪುಸ್ತಕದ ೧೨ನೆಯ

ಪುಟದ ೪ನೆಯ ಪಙ್ತಿಯಲ್ಲಿ 'ಆದರೆ' ಎಂಬುದಕ್ಕೆ ಪೂರ್ವದಲ್ಲಿ ಈ ಕೆಳಗೆ ಬರೆಯಲ್ಪಡುವ ವಾಕ್ಯವು ಸೇರಿಸಲ್ಪಡಬೇಕು.

"ಮೇಲ್ಕಂಡಂತೆ ನೌಕರರನ್ನು ಮತ್ತು ಸೇವಕರನ್ನು ನೇಮಿಸುವುದಕ್ಕೆ ಮುಂಚಿತವಾಗಿ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರೆಲ್ಲರಿಗೂ ಲಿಖಿತಮೂಲಕವಾಗಿ ಹಾಗೆ ನೇಮಿಸಬೇಕಾದುದರ ಆವಶ್ಯಕತೆಯನ್ನು ಮತ್ತು ಅವರುಗಳಿಗೆ ಕೊಡಬೇಕಾಗಿ ಬರುವ ಸಂಬಳ ಬಹುಮಾನ ಅಥವಾ ಭತ್ಯ ಇವುಗಳ ಪರಿಮಿತಿಯನ್ನು ತಿಳಿಯಪಡಿಸಿ ಅವರುಗಳಿಂದ ಬರುವ ಲಿಖಿತಾಭಿಪ್ರಾಯಗಳನ್ನು ಮಂಡಲಿಯಲ್ಲಿ ಕಲೆತ ಸದಸ್ಯರುಗಳಿಂದ ಮುಖತಃ ಬರುವ ಅಭಿಪ್ರಾಯಗಳನ್ನು ಸೇರಿಸಿ ಒಂದು ವಿಧದ ನಿರ್ಣಯವನ್ನು ಪಡೆದಮೇಲೆಯೇ ಆ ಪ್ರಕಾರ ನೇಮಿಸಿಕೊಳ್ಳಬೇಕು."

ಈ ಸೂಚನೆಗಳನ್ನು ಮ|| ರಾ|| ಎಮ್ ಶ್ರೀನಿವಾಸರಾಯರವರು ಅನುಮೋದಿಸಿದರು

ಆದರೆ ಇವು ಸಭೆಯವರಿಂದ ಅಂಗೀಕರಿಸಲ್ಪಡಲಿಲ್ಲ.

ಮ|| ರಾ|| ಬೆನಗಲ್ ರಾಮರಾಯರ ಸೂಚನೆಗಳು.

10 (೩) ನೆಯ ನಿಬಂಧನೆಯ (೧) ಕ್ಲಾಜಿನಲ್ಲಿ ಇಂಗ್ಲಿಷ್ ಪ್ರತಿಯಲ್ಲಿ "Periodical meetings" ಎಂಬ ಶಬ್ದಗಳ ಬದಲಾಗಿ "Periodical conferences" ಎಂಬ ಶಬ್ದಗಳನ್ನು ಹಾಕತಕ್ಕದ್ದು.

ಈ ಸೂಚನೆಯು ಸಭೆಯವರಿಂದ ಅಂಗೀಕರಿಸಲ್ಪಟ್ಟಿತು.

11 ಈಗಳಿನ ೪ ನೆಯ ನಿಬಂಧನೆಯ ಪ್ರತಿಕಲಮನ್ನು ಅಥವಾ ಪಾರಾವನ್ನು ೪ (a), (b), (c), (d) ಮತ್ತು (e) ಕಲಮು ಎಂಬುದಾಗಿ ಇಟ್ಟುಕೊಂಡು ಅವುಗಳ ಜತೆಗೆ (f) ಮತ್ತು (g) ಎಂಬುವಾಗಿ ಮುಂದೆ ವಿವರಿಸುವುವನ್ನು ಇಟ್ಟುಕೊಳ್ಳತಕ್ಕದ್ದು ಯಾವುವೆಂದರೆ —

(f) ಸಾಧಾರಣವಾಗಿ ದೊಡ್ಡ ಮನುಷ್ಯರು ಯಾವ ಯಾವ ಕಟ್ಟಳೆಗಳಿಗೆ ಒಳಪಟ್ಟು ಪರಿಷತ್ತಿನ ಬೇರೆ ಬೇರೆ ತರಗತಿಗಳ ಸದಸ್ಯರಾಗುವುದಕ್ಕೆ ಅನುಕೂಲ್ಯಗಳಿರುವುವೋ ಆ ಎಲ್ಲಾ ತರಗತಿಗಳಿಗೂ ಈ ನಮ್ಮ ಪರಿಷತ್ತಿನ ಉದ್ದೇಶಗಳನ್ನು ಒಪ್ಪುವ ಸಮಸ್ತ ಪುಸ್ತಕ ಭಂಡಾರಗಳು, ವಾಚಕಾಲಯಗಳು, ಇತರ ಸಂಘಗಳು ತಮ್ಮ ತಮ್ಮ ಸಮುದಾಯಸ್ಥಿತಿಯಲ್ಲಿ (Corporate capacity) ಆಯಾ ತರಗತಿಯ ಕಟ್ಟಳೆಗಳಿಗೊಳಪಟ್ಟು ಪರಿಷತ್ತಿಗೆ ಮೆಂಬರಾಗಿ ಸೇರಬಹುದು, ಹೀಗೆ ಸೇರಿದ ಸಂಘಗಳಿಗೆ ಆಯಾತರಗತಿಯ ಸದಸ್ಯರುಗಳಿಗೆ ಇರುವ ಹಕ್ಕುಗಳೂ ಸ್ವಾತಂತ್ರ್ಯಗಳೂ ಇರತಕ್ಕದ್ದು.

(g) ದ್ವಿತೀಯವರ್ಗದ ಸಾಧಾರಣ ಸದಸ್ಯರು ಪ್ರತಿವರ್ಷವೂ ೫ ರೂಪಾಯಿಯಂತೆ ೧೨ ವರ್ಷಗಳವರೆಗೂ ಕೊಡುತ್ತ ಬಂದರೆ ಅದರಿಂದ ಮುಂದಕ್ಕೆ ಅವರು ಹಣವಾವುದನ್ನೂ ಕೊಡದೆ ಆಜೀವಸದಸ್ಯರಾಗಬಹುದು.

ಇವು ಸಕಲರಿಂದಲೂ ಅಂಗೀಕೃತವಾದುವು.

12. ಮ|| ರಾ|| ರಾಮರಾಯರವರ ೫ ನೆಯ ಸೂಚನೆಯು ಎಂದರೆ—

' ೫ ನೆಯ ನಿಬಂಧನೆಯ ಉಪನಿಯಮದ (Proviso) ಕೊನೆಯಲ್ಲಿ ಮುಂದೆ ಹೇಳುವುದನ್ನು ಸೇರಿಸತಕ್ಕದು. ಯಾವುದೆಂದರೆ—

" ಸದಸ್ಯರಾಗಿ ಸೇರಿದ ಸಂಘಗಳು ತಮ್ಮ ಪರವಾಗಿ ಅಭಿಮತಪ್ರದರ್ಶನಾಧಿಕಾರವನ್ನು (Voting) ಚಲಾಯಿಸುವುದಕ್ಕೆ ಒಬ್ಬ ಪ್ರತಿನಿಧಿಯನ್ನು ನಿಯಮಿಸಿ ಆತನ ಹೆಸರನ್ನು ಆವಶ್ಯಕತೆ ತೋರಿದಾಗ ಗೌ|| ಕಾರ್ಯದರ್ಶಿಯವರಿಗೆ ತಿಳಿಸಬಹುದು. ಇಂತಹ ಪ್ರತಿನಿಧಿಯು ತಾನು ಸ್ವತಃ ಪರಿಷತ್ತಿನ ಸದಸ್ಯನಾಗಿದ್ದರೆ ಆ ನೆಲೆಯಲ್ಲಿಯೂ ಆತನಿಗೆ ಅಭಿಮತಪ್ರದರ್ಶನಾಧಿಕಾರವಿರತಕ್ಕದು.

ಈ ಸಲಹೆಯು ಅಂಗೀಕೃತವಾಯಿತು.

13. ಮ|| ರಾ|| ರಾಮರಾಯರವರ ೭ ನೆಯ ಸೂಚನೆಯು, ಎಂದರೆ —

೧೦ ನೆಯ ನಿಬಂಧನೆಯಲ್ಲಿ 'ವಿಷಯಗಳೆಲ್ಲವೂ' ಎಂಬುದರ ಪರದಲ್ಲಿ

" ಕೇವಲ ಅಗತ್ಯವಾದ ಸಂದರ್ಭಗಳಲ್ಲಿ ವಿನಾ, ಆಯಾ ಸಭೆಯ ವಿಚಾರ ವಿಷಯದ ಪಟ್ಟಿಯಲ್ಲಿ ಮುಂದಾಗಿ ಸೇರಿಸಲ್ಪಟ್ಟಿರಬೇಕು ಮತ್ತು ಎಲ್ಲಾ ವಿಷಯಗಳೂ" ಎಂಬ ಮಾತುಗಳನ್ನು ಸೇರಿಸತಕ್ಕದು. " ಈ ಸೂಚನೆಯು ಅಂಗೀಕರಿಸಲ್ಪಟ್ಟಿತು

ಇಲ್ಲಿಗೆ ವಾರ್ಷಿಕಸಭೆಯ ಮೊದಲನೆಯ ದಿನದ ಕಾರ್ಯವು ಮುಗಿಯಿತು.

ಎರಡನೆಯ ದಿವಸದ ಕೆಲಸಗಳು.

೧೦ ನೆಯ ತಾರೀಖಿನ ಬೆಳಗಾಗ ಸಮ್ಮೇಳನವು ೯|| ಗಂಟೆಯವರೆಗೆ ನಡೆದ ಮೇಲೆ ಪರಿಷತ್ತಿನ ವಾರ್ಷಿಕ ಸಭೆಯ ಎರಡನೆಯ ದಿವಸದ ಕೆಲಸವು ಪ್ರಾರಂಭವಾಯಿತು ಉಪಾಧ್ಯಕ್ಷರಾದ ರಾವ್‌ಬಹದ್ದೂರ್ ಮ|| ರಾ|| ಎಂ. ಶಾಮರಾಯರವರು ಅಗ್ರಾಸನವನ್ನು ಅಲಂಕರಿಸಿದರು

14. ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳನ್ನು ಚುನಾಯಿಸುವ ಕೆಲಸವು ಮೊದಲು ನಡೆಯಿತು ಮ|| ರಾ|| ಎಚ್. ನಾರಾಯಣರಾಯರವರು ಮ|| ರಾ|| ಬಾಪು ಸುಬ್ಬರಾಯರವರು ಅಭಿಮತಪ್ರದರ್ಶನಪತ್ರಿಕೆಗಳ (Voting Papers) ಪರಿಗಣನೆಗೆ ನಿಯಮಿಸಲ್ಪಟ್ಟರು.

15. ಗೌರವ ಕಾರ್ಯದರ್ಶಿಗಳಾದ ಮ|| ರಾ|| ರಘುನಾಥರಾಯರವರು ಪಿಂಗಳ ಸಂವತ್ಸರದ ಆಯವ್ಯಯದ ಅಂದಾಜಿನ ಪಟ್ಟಿಯನ್ನು ಸಭೆಯ ಪರ್ಯಾಲೋಚನೆಗೆ ಸಮರ್ಪಿಸಿದರು. ಅದೆಂತೆಂದರೆ—

ಆಯ	ರೂ.	ಆ.	ಪೈ.
ಸರ್ಕಾರದಿಂದ ಬರುವ ಸಹಾಯದ್ರವ್ಯ	೧೫೬೦	೦	೦
ಮೆಂಬರುಗಳಿಂದ ವಸೂಲಾಗಬಹುದಾದ ಮೊಬಲಗು	೧೦೦೦	೦	೦
ಒಟ್ಟು	೨೫೬೦	೦	೦

ವ್ಯಯ	ರೂ. ಆ. ಪೈ.
ಆಫೀಸ್ ಬಾಡಿಗೆ ತಿಂ ೧ಕ್ಕೆ ೩೫ ರೂ. ಮೇರೆಗೆ ೧೨ ತಿಂಗಳಿಗೆ	೪೨೦—೦—೦
ಶಿಬ್ಬಂದಿ ತಿಂಗಳು ೧ಕ್ಕೆ ೮೦ ರೂ. ಮೇರೆಗೆ ೧೨ ತಿಂಗಳಿಗೆ	೯೬೦—೦—೦
ಸಾದಿಲ್ವಾರು ತಿಂ. ೧ಕ್ಕೆ ೧೨-೮-೦ ಮೇರೆಗೆ ೧೨ ತಿಂಗಳಿಗೆ	೧೫೦—೦—೦
ಟಪಾಲ್ ಖರ್ಚು ಸುಮಾರು	೧೫೦—೦—೦
ಪರಿಷತ್ಪತ್ರಿಕೆಗೆ ಸುಮಾರು	೮೦೦—೦—೦
ಒಟ್ಟು	೨೪೮೦—೦—೦

ಮೇಲಿನ ಆಯವ್ಯಯದ ಅಂದಾಜಿನ ಪಟ್ಟಿಯು ಅಂಗೀಕರಿಸಲ್ಪಟ್ಟಿತು.

16. "ಪರಿಷತ್ತಿನಲ್ಲಿ ಕಳೆದ ವರ್ಷದ ಸಿಲ್ಕು ಮೊಬಲಗು ೫೦೦ ರೂಪಾಯಿಗಿಂತ ಕಡಿಮೆಯಾಗಿರುವುದರಿಂದಲೂ ಪಿಂಗಳ ಸಂವತ್ಸರದ ವರಮಾನವು ಒಂದು ಸಾಸಿರ ರೂಪಾಯೆಂದು ಅಂದಾಜು ಮಾಡಲ್ಪಟ್ಟಿರುವುದರಿಂದಲೂ ಪರಿಷತ್ತಿನ ಬಂಡವಾಳವು ಬಹಳ ಕಡಿಮೆಯಾಗಿದೆ ಎಂಬುದು ಸ್ಪಷ್ಟಪಡುತ್ತದೆ ಉದಾರಹೃದಯರಾದ ಭಾಷಾಭಿಮಾನಿಗಳು ತಮ್ಮ ಒಂದೊಂದು ತಿಂಗಳ ಸಂಬಳವನ್ನಾಗಲಿ ವರಮಾನವನ್ನಾಗಲಿ ಪರಿಷತ್ತಿಗೆ ಕೊಟ್ಟ ಹೊರತು ಪರಿಷತ್ತಿನ ಬಂಡವಾಳವು ಹೆಚ್ಚುವುದಿಲ್ಲ" ಎಂದು ಮ|| ರಾ|| ಎಚ್. ಚನ್ನಕೇಶವಯ್ಯಂಗಾರ್ಯರು ವಾದಿಸಿದರು ಮ|| ರಾ|| ಬೆನಗಲ್ ರಾಮರಾಯರವರು ತಮ್ಮ ಒಂದು ತಿಂಗಳ ಸಂಬಳವನ್ನು ಪರಿಷತ್ತಿನ ಫಂಡಿಗಾಗಿ ಕೊಡುತ್ತೇವೆಂದು ವಾಗ್ದಾನ ಮಾಡಿದರು. ರಿಟೈರ್ಡ್ ಸರ್ಕಲ್ ಇನ್ಸ್ಪೆಕ್ಟರ್ ಮ|| ರಾ|| ಎಂ ಶ್ರೀನಿವಾಸರಾಯರವರು ತಮ್ಮ ಒಂದು ತಿಂಗಳ ಪೆನ್ಷನ್ನನ್ನು ಪರಿಷತ್ತಿನ ಫಂಡಿಗಾಗಿ ಕೊಡುತ್ತೇವೆಂದು ಶ್ರುತಪಡಿಸಿದರು ಮ|| ರಾ|| ಚನ್ನಕೇಶವಯ್ಯಂಗಾರ್ಯರವರೂ ತಮ್ಮ ಒಂದು ತಿಂಗಳ ಸಂಬಳವನ್ನು ಕೊಡುತ್ತೇವೆಂದು ವಾಗ್ದಾನಮಾಡಿದರು ಮ|| ರಾ|| ಎಂ ವೆಂಕಟಕೃಷ್ಣಯ್ಯನವರು ಪರಿಷತ್ತಿನ ಫಂಡ್ ಏರ್ಪಾಡಾಗುವುದು ಆವಶ್ಯಕವೆಂದು ತಿಳಿಸಿ ಮ|| ರಾ|| ಬೆನಗಲ್ ರಾಮರಾಯರು ಮುಂತಾದವರ ಔದಾರ್ಯವನ್ನು ಶ್ಲಾಘಿಸಿ ತಾವು ತಮ್ಮ ಒಂದು ತಿಂಗಳ ಸಂಬಳವನ್ನು ಕೊಡುವುದಾಗಿ ವಾಗ್ದಾನಮಾಡಿದರು ಮೇಲ್ಕಂಡ ದೊಡ್ಡ ಮನುಷ್ಯರುಗಳ ಔದಾರ್ಯದಿಂದ ಪರಿಷತ್ತಿನ ಫಂಡಿಗೆ ಸುಮಾರು ೧೨೦೦ ರೂಪಾಯಿ ಸೇರಿದಂತಾಯಿತು. ಇವರುಗಳ ಔದಾರ್ಯವನ್ನು ಸಭೆಯವರು ಕೊಂಡಾಡಿದರು. ಈ ಫಂಡಿನಿಂದ ಬರುವ ಬಡ್ಡಿಯನ್ನು ಮಾತ್ರ ಪರಿಷತ್ತಿನ ಕೆಲಸಗಳಿಗೆ ಖರ್ಚು ಮಾಡಬೇಕೆಂದು ನಿರ್ಧರಿಸಲ್ಪಟ್ಟಿತು

17. ಮೈಸೂರ್ ವಿಶ್ವವಿದ್ಯಾನಿಲಯದ ಸೆನೇಟಿನಲ್ಲಿ ಮದರಾಸ್ ಆಧಿಪತ್ಯದ ಕಡೆಯವರು ಒಬ್ಬರು, ಬೊಂಬಾಯಿ ಆಧಿಪತ್ಯದಕಡೆಯವರೊಬ್ಬರು ಆ ಆಧಿಪತ್ಯಗಳ ಕರ್ನಾಟಕ ಪ್ರಾಂತಗಳ ಪ್ರತಿನಿಧಿಗಳಾಗಿ ಇರುವುದುಚಿತವೆಂದೂ ಕರ್ನಾಟಕ ಸಾಹಿತ್ಯ

ಪರಿಷತ್ತು ಈ ವಿಷಯದಲ್ಲಿ ಮೈಸೂರ್ ಯೂನಿವರ್ಸಿಟಿಯ ಕೌನ್ಸಿಲ್ಲಿಗೆ ಶಿಫಾರಸ್ ಮಾಡಿ ಕಾಗದವನ್ನು ಬರೆಯಬೇಕೆಂದು ನಿರ್ಧರವಾಯಿತು.

18. ಮ|| ರಾ|| ಬೆನಗಲ್ ರಾಮರಾಯರವರು ತಮ್ಮ ೨೪ ನೆಯ ಸೂಚನೆಯನ್ನು ಸಭೆಯ ಪರ್ಯಾಲೋಚನೆಗೆ ತಂದರು ಅವುದೆಂದರೆ

"ಡಿಪ್ಯುಟಿಕಲೆಕ್ಟರಾಗಿಯೂ ಆಂಧ್ರಸಾಹಿತ್ಯಪರಿಷತ್ತಿನ ಸಭಾಪತಿಗಳಾಗಿಯೂ ಆಂಧ್ರಸಾಹಿತ್ಯದಲ್ಲಿ ಉತ್ತಮವಾದ ಪಾಂಡಿತ್ಯ ವುಳ್ಳವರಾಗಿಯೂ ದೇಶಭಾಷೆಗಳಲ್ಲಿ ವಿಶೇಷವಾದ ಅಭಿಮಾನವುಳ್ಳವರಾಗಿಯೂ ಇರುವ ಮ|| ರಾ|| ಜಯಂತಿ ರಾಮಯ್ಯ ಪಂತುಲು ಬಿ. ಎ., ಬಿ. ಎಲ್. ಎಂಬುವರು ಕನ್ನಡದಲ್ಲಿಯೂ ಒಳ್ಳೆಯ ಪರಿಶ್ರಮವುಳ್ಳವರಾಗಿ ಇರುವುದರಿಂದ ಇವರ ಸಂಬಂಧದಿಂದ ಈ ಪರಿಷತ್ತಿಗೆ ತುಂಬಾ ಸಹಾಯವು ದೊರೆಯಬಹುದಾಗಿರುವುದರಿಂದ ಇವರನ್ನು ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ವಿಶಿಷ್ಟ ಸದಸ್ಯರಾಗಿ ಇರುವಂತೆ ನೇಮಿಸುವುದು ಉಚಿತ"

ಮೇಲ್ಕಂಡ ಸೂಚನೆಯನ್ನು ಸದಸ್ಯರು ಸಂತೋಷದಿಂದ ಅಂಗೀಕರಿಸಿದರು

19. ಈ ಸಂದರ್ಭದಲ್ಲಿ ಮ||ರಾ||ರಾಘವೇಂದ್ರಾಚಾರ್ಯರವರು ಪಂಡಿತ ಶಾಮಾಚಾರ್ಯರವರನ್ನು ವಿಶಿಷ್ಟ ಸದಸ್ಯರಾಗಿರುವಂತೆ ನೇಮಿಸಬೇಕೆಂಬ ಸಲಹೆಯನ್ನು ಕೊಟ್ಟರು ಅದಕ್ಕೆ ಈ ವಿಷಯವು ಪರಿಷತ್ತಿನ ವಾರ್ಷಿಕ ಸಭೆಯ ವಿಚಾರ ವಿಷಯದ ಪಟ್ಟಿಯಲ್ಲಿ ಮೊದಲೇ ಸೇರಲಿಲ್ಲವಾದುದರಿಂದ ಈ ವಿಷಯುವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದು ಉಚಿತವಾಗಿ ಕಾಣುವುದಿಲ್ಲವೆಂದು ಗೌ|| ಕಾರ್ಯದರ್ಶಿಗಳು ಪಂಡಿತ ರಾಘವೇಂದ್ರಾಚಾರ್ಯರವರಿಗೆ ಶ್ರುತಪಡಿಸಿದರು. ಆಮೇಲೆ ಪಂ|| ರಾಘವೇಂದ್ರಾಚಾರ್ಯರವರು ತಮ್ಮ ಸಲಹೆಯನ್ನು ವಾಪಸು ತೆಗೆದುಕೊಂಡರು

20. ಅಭಿಮತ ಪ್ರದರ್ಶನ ಪತ್ರಿಕೆಗಳ ಪರಿಗಣನೆಯು ಇಷ್ಟುಹೊತ್ತಿಗೆ ಮುಗಿಯಿತು. ಅಗ್ರಾಸನಾಧಿಪತಿಗಳು ಕೆಳಗೆ ಕಾಣಿಸುವ ದೊಡ್ಡಮನುಷ್ಯರುಗಳ ಹೆಸರನ್ನು ಸಭೆಯವರಿಗೆ ಶ್ರುತಪಡಿಸಿದರು.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪಿಂಗಳ ಸಂವತ್ಸರದ (೧೯೧೭-೧೮) ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಮತ್ತು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರುಗಳ ಪಟ್ಟಿ

ರಾಜಮಂತ್ರ ಪ್ರವೀಣ ಮ|| ರಾ|| ಎಚ್. ವಿ. ನಂಜುಂಡಯ್ಯನವರು,
ಎಂ. ಎ., ಎಮ್. ಎಲ್., ಸಿ. ಐ, ಇ, (ಪರಿಷತ್ತಿನ ಅಧ್ಯಕ್ಷರು)

ರಾವ್ ಬಹದ್ದೂರ್ ಮ|| ರಾ|| ಎಮ್ ಶಾಮರಾಯರು ಎಂ. ಎ.
(ಪರಿಷತ್ತಿನ ಉಪಾಧ್ಯಕ್ಷರು)

ಮೈಸೂರು ದೇಶದ ಸದಸ್ಯರುಗಳು.

ಮ|| ರಾ|| ಟಿ. ಲಕ್ಷ್ಮೀನರಸಿಂಹರಾಯರು, ಬಿ. ಎ., ಬಿ. ಎಲ್.

ಮ|| ರಾ|| ಆರ್. ರಘುನಾಥರಾಯರು ಬಿ. ಎ.

ಡಾಕ್ಟರ್ ಪಿ. ಯಸ್. ಅಚ್ಯುತರಾಯರು ಎಲ್. ಎಮ್. & ಎಸ್.

ಮ|| ರಾ|| ರಾಜಸೇವಾಧುರಂಧರ ಸರದಾರ್ ಎಂ. ಕಾಂತರಾಜ ಅರಸಿನವರು, ಬಿ. ಎ., ಸಿ. ಎಸ್. ಐ.

,, ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು, ಬಿ. ಎಸ್. ಸಿ, ಎಲ್. ಸಿ. ಇ.

,, ಪ್ರಾಕ್ತನವಿಮರ್ಶ ವಿಚಕ್ಷಣ ರಾವ್‌ಬಹದ್ದೂರ್ ಆರ್ ನರಸಿಂಹಾಚಾರ್ಯರು, ಎಂ. ಎ.

,, ಎಚ್ ಲಿಂಗರಾಜಅರಸಿನವರು,

,, ಎಂ. ವೆಂಕಟಕೃಷ್ಣಯ್ಯನವರು,

,, ಸಿ ಕೃಷ್ಣರಾಯರು, ಬಿ ಎ.

,, ಎಂ ಎಸ್. ಪುಟ್ಟಣ್ಣನವರು, ಬಿ. ಎ.

,, ಸಾಹುಕಾರ್ ಎಂ. ಎಲ್ ವರ್ಧಮಾನಯ್ಯನವರು

,, ಬಾಪು ಸುಬ್ಬರಾಯರು, ಬಿ ಎ.

,, ಬಿ. ವೆಂಕಟನಾರಣಪ್ಪನವರು, ಎಂ ಎ.

,, ಬಿ. ಕೃಷ್ಣಪ್ಪನವರು, ಎಂ. ಎ

,, ಎಚ್. ಚನ್ನಕೇಶವಯ್ಯಂಗಾರ್ಯರು

ಮುಂಬಯಿ ಪ್ರಾಂತದ ಸದಸ್ಯರು

ಮ|| ರಾ|| ರಾವ್‌ಬಹದ್ದೂರ್ ಎ. ಬಿ. ಜೋಷಿ, ಬಿ. ಎ.

,, ಆರ್. ಎಚ್. ದೇಶಪಾಂಡೆಯವರು, ಬಿ. ಎ.

,, ಎಲ್. ಜಿ ಕರಗುದಿದರಿಯವರು, ಬಿ ಎ., ಎಲ್. ಎಲ್. ಬಿ.

,, ವಿ. ಬಿ ಆಲೂರವರು, ಬಿ ಎ.

,, ಎಸ್ ಎಸ್. ಸೆಟ್ಲೂರವರು, ಬಿ. ಎ., ಎಲ್‌ಎಲ್. ಬಿ.

,, ಆರ್ ಎ ಜಹಗೀರುದಾರ್, ಎಂ. ಎ ಎಲ್‌ಎಲ್. ಬಿ.

,, ಆರ್ ಬಿ ಪೋಟದಾರವರು.

,, ಪಿ ಜಿ ಹಳಕಟ್ಟಿಯವರು, ಬಿ ಎ, ಎಲ್ ಎಲ್ ಬಿ.

ಮದರಾಸು ಪ್ರಾಂತದ ಸದಸ್ಯರು

ಮ|| ರಾ|| ಬೆನಗಲ್ ರಾಮರಾಯರವರು, ಎಂ ಎ., ಎಲ್‌ಎಲ್. ಬಿ.

,, ಆರ್ ತಾತಾಚಾರ್ಯರವರು, ಎಂ. ಎ., ಎಲ್. ಟಿ.

ಮ|| ರಾ|| ಎಚ್. ರಾಜಗೋಪಾಲಕೃಷ್ಣರಾಯರು

,, ಪಿ. ಮಂಗೇಶರಾಯರು, ಬಿ. ಎ., ಎಲ್. ಟಿ.

,, ಎಚ್. ನಾರಾಯಣರಾಯರು, ಎಂ ಎ , ಎಫ್. ಆರ್. ಜಿ. ಎಸ್

ದಕ್ಷಿಣಮಹಾರಾಷ್ಟ್ರದ ಸದಸ್ಯರು

ಮ|| ರಾ|| ಟಿ. ಎಸ್. ಚಿಕ್ಕೋಡಿಯವರು

,, ಆರ್. ಎಸ್ ಮಂಗಸೂಲಿಯವರು,

ಹೈದರಾಬಾದಿನ ಕರ್ಣಾಟಕದ ಸದಸ್ಯರು

ಮ|| ರಾ|| ಬಿ ಕೃಷ್ಣಯ್ಯಂಗಾರ್ಯರವರು

ಕೊಡಗಿನ ಸದಸ್ಯರು

ಮ|| ರಾ|| ರಾಜಕಾರ್ಯಪ್ರಸಕ್ತ ರಾಯ್‌ಬಹದ್ದೂರ್ ಎಂ. ಮುತ್ತಣ್ಣನವರು

—— o ——

ಗ್ರಾಂಥಿಕರೂಪಗಳ ಏಕೀಕರಣ

† ಗಂಗಾಶರಣರವರಿಂದ

"ಕುರುಡಭಟ್ಟರೇ ! ನಮಸ್ಕಾರ' ಎಂದರೆ 'ಇದೀಗ ವ್ಯಾಖ್ಯಕ್ಕೆ ಬುಡ ''— ಎಂದು ಗಾದೆ. ಹಾಗೆಯೇ "ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರಬೇಕು'' ಎಂಬುದು ಎಂತಹ ಸದುದ್ದೇಶವಾದರೂ, ಎಲ್ಲಿಯವರೆಗೆ 'ನಮ್ಮದು ನೆಟ್ಟಗೆ ನಿಮ್ಮದು ಸೊಟ್ಟಗೆ' ಎಂಬ ಭಾವವು ಅರ್ಥದಿಂದಾಗಲೀ ಶಬ್ದದಿಂದಾಗಲೀ ಸೂಚಿಸಲ್ಪಡುವುದೋ ಅಲ್ಲಿಯವರೆಗೆ ಮಾಡುವ ಪ್ರಯತ್ನವೆಲ್ಲವೂ ವಾಗ್ಯುದ್ಧೈಕಪರ್ಯವಸಾಯಿಯಾಗುವುದು ಯಾರು ತಮ್ಮದೇ ನೆಟ್ಟಗಿರುವುದೆಂದೂ ಅದನ್ನೇ ಇತರರೆಲ್ಲರೂ ಅಂಗೀಕರಿಸಬೇಕೆಂದೂ ಹಠಹಿಡಿವರೋ ಅವರು ಮೇಲೆ ಬಿದ್ದುಹೋಗಿ ಗೆಲ್ಲುವ ಕ್ಷಾತ್ರಧರ್ಮವಿಶೇಷವನ್ನು ‡ ಅವಲಂಬಿಸ ಬೇಕಾಗುವುದು ಗ್ರಂಥರಚನೆಯಲ್ಲಿಯೂ ಅಂತಹ ಕ್ಷಾತ್ರಧರ್ಮವುಂಟೇ ? ಎಂದರೆ ಏಕಿಲ್ಲ ? ಮೊತ್ತ ಮೊದಲು ಯಾವ ಯಾವ ನಾಡುಗಳಲ್ಲಿ ಯಾವ ಯಾವ ಪಟ್ಟಣಗಳಲ್ಲಿ ಯಾವಯಾವ ಗ್ರಾಮಗಳಲ್ಲಿ ಜನಗಳ ಅಭಿರುಚಿಗಳು ಹೇಗೆ ಹೇಗಿರುವುವೋ ಎಂಬುದನ್ನು ಚೆನ್ನಾಗಿ ತಿಳಿದುಕೊಂಡು ತದನುಗುಣವಾಗಿರುವ ಗ್ರಂಥಗಳನ್ನು "ತಮ್ಮ ನೆಟ್ಟಗಿರುವ'' ಭಾಷೆಯಲ್ಲಿ ಅಚ್ಚುಹಾಕಿಸಿ ಓದು ಬರೆಹ ಬಂದವರಿರುವ ಮನೆ ಮನೆಗೂ ಗುಡಿಸಲು ಗುಡಿಸಲಿಗೂ ತೆಗೆದುಕೊಂಡು ಹೋಗಿ ಮಾರುವವರನ್ನು ನಿಯಮಿಸಿ, ಕೊಂಡುಕೊಳ್ಳುವರಿಗೆ ಕಾಸಿಗೊಂದು ಕೊಸರಿಗೊಂದು ಕೊಡುತ್ತಲೂ ಬಡವರಿಗೆ ಸುಮ್ಮನೆ ಕೊಡು

† ಈಗ ಅಲಹಾಬಾದಿನಲ್ಲಿರುವ ಮ||ಎಸ್. ಎನ್. ನರಹರಯ್ಯ ಬಿ. ಎ , ಎಲ್.ಎಲ್. ಬಿ ಯವರು ಈ ಪ್ರಬಂಧವನ್ನು ಬರೆವರು ಇದಕ್ಕೆ ಒಂದು ನೂರು ರೂಪಾಯಿನ ಉತ್ತಮಪ್ರಬಂಧ ಬಹುಮಾನವನ್ನು ಪರಿಷತ್ತವರು ಕೊಟ್ಟಿದ್ದಾರೆ.

‡ **Aggressiveness**

ತ್ತಲೂ ವಿದ್ಯಾರ್ಥಿಗಳಿಗೆ ಪಾರಿತೋಷಿಕವಾಗಿ ಕೊಡುತ್ತಲೂ ಮಾರುವುದರಿಂದ ಕೈಗೆ ಬಂದ ಹಣವು ಕಾರ್ಯನಿರ್ವಾಹಕ್ಕೆ ಸಾಲದಿದ್ದರೆ ಯಾರಾದರೂ ಪುಣ್ಯಾತ್ಮರನ್ನು ಪ್ರೇರಿಸಿ ತರುತ್ತಲೂ ಬದ್ಧಪರಿಕರರಾಗಿ ನಿಂತರೆ ಉದ್ದೇಶವು ಕೆಲವು ವರ್ಷಗಳಲ್ಲೇ ಕೈಗೂಡುವುದರಲ್ಲಿ ಸಂಶಯವಿಲ್ಲ. ಈಗಲೇನೋ ಕಾಗದವು ತಗ್ಗು, ಆದರೆ ಅದು ಸರಿಯಾದ ಧಾರಣೆಗೆ ಇಳಿದರೆ ಅಂತಹ ಪ್ರಯಾಸವೇನೂ ತೋರುವುದಿಲ್ಲ. 'ಲಂಡನ್ ಟೈಮ್ಸ್' ಎಂಬ ಸಮಾಚಾರ ಪತ್ರಿಕೆಯನ್ನು ಅನೇಕರು ನೋಡಿರಬಹುದು, ಅದೆಷ್ಟು ಹಾಳೆಗಳುಳ್ಳದೋ ತಿಳಿದಿರಬಹುದು, ಅದರ ಬೆಲೆಯಾದರೆ (ಸರಿಯಾದ ಕಾಲದಲ್ಲಿ) ಒಂದೇ ಒಂದು ಆಣೆ. 'ಅಷ್ಟು ಅಗ್ಗವಾಗಿ ಅಚ್ಚುಹಾಕುವುದು ಮಾರುವುದು ಇಂಗ್ಲೆಂಡಿನಲ್ಲಿ ಸಾಧ್ಯವಾದರೂ ಇಂಡಿಯದಲ್ಲಿ ನಡೆವುದಿಲ್ಲ' ಎಂದು ಕೆಲವರು ಪ್ರಾರಂಭದಲ್ಲಿಯೇ ಸಿದ್ಧಾಂತಮಾಡುವ ಯೋಗ್ಯತೆ ತಮಗುಂಟೆಂದು ಸ್ವಾಭಿಮಾನದಿಂದ ಹೇಳಬಹುದು. ಯಥಾರ್ಥ ವಿಷಯವಾದರೆ ಬೇರೆಯಾಗಿರುವುದು. ಇಂಗ್ಲೆಂಡಿನಲ್ಲಿ ಒಬ್ಬ 'ಕಂಪಾಸಿಟರ'ಗೇ ವಾರವೊಂದಕ್ಕೆ (ಭಾನುವಾರ ಬಿಟ್ಟು) ೪೫ ಷಿಲ್ಲಿಂಗ್ § ಕೊಡಬೇಕಂತೆ, ಕನ್ನಡನಾಡುಗಳಲ್ಲಿ ತಿಂಗಳಿಗೆ ೧೦ ರೂಪಾಯಿನಂತೆ ಕೆಲಸಮಾಡುವವರು ಸಿಕ್ಕುವರು. ಅಲ್ಲಿ ಪ್ರಕಟನೆ † ಗಳಿಂದ ಬೇಕಾದಷ್ಟು ದುಡ್ಡುಬಂದರೂ 'ಅಜ್ಜ ನೂತುದು ಮೊಮ್ಮಗನ ಉಡಿದಾರಕ್ಕೆ ಸರಿಹೋಯಿತು' ಎಂಬಂತೆ ಎಲ್ಲರಿಗೂ ಹೆಚ್ಚು ಹೆಚ್ಚು ಸಂಬಳಗಳನ್ನು ಕೊಡುವುದಕ್ಕಾಗುವುದು. ಅಲ್ಲಿ ಆಯವು ಹೆಚ್ಚಾದರೆ ವ್ಯಯವೂ ಹೆಚ್ಚು. ಅಲ್ಲಿ ಪ್ರಿಯವಾದುದು ಇಲ್ಲಿ ಅರ್ಘ್ಯ, ಇಲ್ಲಿ ಪ್ರಿಯವಾದುದು ಅಲ್ಲಿ ಅರ್ಘ್ಯ—ಎಂತೂ ಪರ್ಯಾವಸಾನದಲ್ಲಿ ಒಂದಕ್ಕೇ ಬರುವುದು. ಆದರೆ ಆ ಮಟ್ಟಕ್ಕೆ ಕೆಲಸಮಾಡಲು ಕನ್ನಡಿಗರು ಸಿದ್ಧರಾಗಿರುವರೇ ಎಂದರೆ ಏಕೋ ತಲೆ ಎಡಬಲಕ್ಕೆ ತೂಗುವುದು. ಆದುದರಿಂದ ಮೇಲೆಬಿದ್ದು ಹೋಗಿ ತಮ್ಮ ಹಠವನ್ನು ಸಾಧಿಸುವುದಕ್ಕೆ ಇದು ಸಮಯವಲ್ಲ. ಎಲ್ಲಿ ಹೋದರೂ ಸರ್ವಸಮ್ಮತವಾಗುವಂತಹ ಮಧ್ಯಮಾರ್ಗವನ್ನು ಹಿಡಿಯಬೇಕು. ಅಂತಹ ಮಾರ್ಗವಾವುದೆಂದರೆ—ಮೊದಲು ಕೊಂಚ ಮೂಲವನ್ನು ವಿಚಾರಿಸಬೇಕಾಗುವುದು.

ಅಗ್ನಿಯೇ ವಾಕ್ಕೆಂದು ಆರ್ಯರ ಮತವು * ಉಷ್ಣವಲಯದ ಭಾಷೆಗಳಲ್ಲಿಯೇ ವರ್ಣಸ್ವರಗಳು ಹೆಚ್ಚು, ಶೀತವಲಯದ ಕಡೆಗೆ ಹೋಗುತ್ತ ಹೋಗುತ್ತ ವರ್ಣಸ್ವರಗಳು ಕಡಿಮೆಯಾಗುವುವು. ಈ ವಿಷಯವನ್ನು ಚರ್ಚಿಸಿ ಸ್ಥಿರೀಕರಿಸುವುದಕ್ಕೆ ಇಲ್ಲಿ ಅವಕಾಶವಿಲ್ಲ, ಆದರೂ ಸಂಸ್ಕೃತವನ್ನು ದಕ್ಷಿಣದೇಶದವರು ಹೇಗೆ ಉಚ್ಚರಿಸುವರು—ಎಂಬುದನ್ನು ಇದಕ್ಕೆ ಉದಾಹರಣೆಯಾಗಿ ಸೂಚಿಸಬಹುದು. ಉತ್ತರದೇಶದಲ್ಲಿ ಯಕಾರ ಜಕಾರಗಳಿಗೂ ವಕಾರ ಬಕಾರಗಳಿಗೂ ವ್ಯತ್ಯಾಸವೇ ಕಾಣುವು

§ ೩೩ ರೂ ೧೨ ಆ.—ತಿಂಗಳಿಗೆಷ್ಟಾಯಿತೆಂದು ನೋಡಿಕೊಳ್ಳಬಹುದು

† Advertisement

* ಅಗ್ನಿರ್ವಾಗ್ಭೂತ್ವಾ ಮುಖಂ ಪ್ರಾವಿಶತ್ —ಐತರೇಯೋಪನಿಷತ್ತು

ದಿಲ್ಲ, (ಉದಾ.—ಯಾಜ್ಞವಲ್ಕ್ಯ-ಜಾಜ್ಞಬಲ್ಕ್ಯ), ಬಂಗಾಳಿಯವರು ಶ ಷ ಸಕಾರಗಳಿಗೆ ವ್ಯತ್ಯಾಸವನ್ನೇ ಮಾಡುವುದಿಲ್ಲ, ಅಕಾರವನ್ನು ಒ ಎಂದೇ ಉಚ್ಚರಿಸುವರು. (ಉದಾ.—ರಾಸವಿಹಾರಿ, ರಾಷ್‌ಬಿಹಾರಿ, ಅವಿನಾಶಚಂದ್ರ, ಒಬಿನಾಷ್‌ಚಂದರ್), ಕಾಶ್ಮೀರದ ಕಡೆಗೆ ಹೋದರೆ ಅಕಾರವನ್ನು ಎಕಾರದಂತೆ ಉಚ್ಚರಿಸುವುದು ತಿಳಿಯಬರುವುದು. 'ಕರ್ಮಭಿಃ' ಎನ್ನುವುದನ್ನು 'ಕರಮ್‌ಬೀ' ಎನ್ನುವರು, ಷಕಾರಕ್ಕೂ ಖಕಾರಕ್ಕೂ ವ್ಯತ್ಯಾಸವಿಲ್ಲ (ಉದಾ.—ಪುರುಷ-ಪುರುಖ), ಹೀಗೆ ಎಷ್ಟೋ ಉಂಟು. ಕನ್ನಡನಾಡುಗಳು ಉಷ್ಣವಲಯದಲ್ಲಿಯೇ ಇರುವುವಾದರೂ ಅಲ್ಲಿಯ ಭಾಷೆ ಸ್ಫುಟವಾಗಿಯೇ ಇರಬೇಕಾದುದು ಸಹಜವಾದರೂ ಅಲ್ಲಿಯೂ ಒಂದು ಉಪಾಧಿಯಿಂದ ಅವ್ಯಕ್ತ ಭಾಷಿತ್ವಕ್ಕೆ ಕಾರಣವುಂಟಾಗಿರುವುದು. ಇದನ್ನೇ ಶೂದ್ರಕಕವಿ "ಅರೇ ಕೋ ಅಪ್ಪಚ್ಚಓತುಕ| ವಯಂ ದಕ್ಖಿಣತ್ತಾ ಅವ್ವತ್ತಭಾಸಿಣೋ ಖಸ-ಖತ್ತಿ-ಖಡೋ-ಖಡಟ್ಟೋಬಿಲಯ-ಕಣ್ಣಾಟ-ಕಣ್ಣ-ಪ್ಪಾವರಣಅ-ದವಿಡ-ಚೋಳ-ಚೀಣ-ಬರ್ಬರ-ಖೇರ-ಖಾನ-ಮುಖ-ಮಧುಘಾದಪಹುದೀಣಾಂ ಮಿಳಚ್ಛಜಾದೀಣಾಂ ಅಣೇಅ ಭಾಸಾಭಿಣ್ಣಾ ಜಹೇಟ್ಠಂ ಮನ್ತ ಆಮುದಿಟ್ಟೋ ದಿಟ್ಟಾವಾ, ಅಜ್ಜೋ ಅಜ್ಜಆವಾ" § ಎಂದು ಹೇಳುವನು. ಇವುಗಳಲ್ಲಿ ಕೆಲವು ದಕ್ಷಿಣದೇಶದ ಭಾಷೆಗಳೇ ಆಹುದು, ಇನ್ನು ಕೆಲವು ಮ್ಲೇಚ್ಛ ಭಾಷೆಗಳೆಂದು ತಿಳಿಯಬರುವುದು, ಆದರೆ ಬಹುಕಾಲವಾದುದರಿಂದಲೂ ಗ್ರಂಥಸ್ಥವಾಗದ ಶಬ್ದಗಳೂ ಭಾಷೆಗಳೂ ನಿರಂತರ ವಿಕಾರವನ್ನು ಹೊಂದುತ್ತಲೇ ಬಂದು ಕೆಲವು ವರ್ಷಗಳಲ್ಲಿಯೇ ಗುರುತೇ ಸಿಕ್ಕದಂತಾಗುತ್ತ ಒರುವುದರಿಂದಲೂ * ಆ ಆ ಭಾಷೆಗಳು ಈಗಿನ ಯಾವಯಾವ ದೇಶಗಳ ಭಾಷೆಗಳೋ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಜನರು ಪೂರ್ವದಲ್ಲಿ ದೊಡ್ಡ ಸಮುದ್ರ ವ್ಯಾಪಾರಿಗಳಾದುದರಿಂದಲೂ †, ಅವರು ಅನೇಕ ದ್ವೀಪಾದಿಗಳಿಗೆ ಹೋಗಿಬರುತ್ತಿದ್ದುದರಿಂದಲೂ, ಅನ್ಯದೇಶದ ಸಾಮುದ್ರರೂ ‡ ಇಲ್ಲಿಗೆ ಬೇಕಾದಹಾಗೆ ಬಂದು ಹೋಗಿ ಮಾಡಿರಬಹುದಾದುದರಿಂದಲೂ ಸಮುದ್ರತೀರವೆಲ್ಲಾ ಪ್ರಾಯಕವಾಗಿ ದಕ್ಷಿಣದೇಶಕ್ಕೇ ಇರುವುದ

---

§ (ಛಾಯಾ)–ಅರೇ ಕೋ ಅಪ್ರತ್ಯಯಸ್ತವ | ವಯಂ ದಾಕ್ಷಿಣಾತ್ಯಾ ಅವ್ಯಕ್ತಭಾಷಿಣಃ- ಖಸ-ಖತ್ತ-ಕಡ-ಕಡತ್ಟೋಬಿಲ ಕರ್ಣಾಟ - ಕರ್ಣ - ಪ್ರಾವರಣ - ದ್ರಾವಿಡ - ಚೋಲ - ಚೀನ - ಬರ್ಬರ - ಖೇರ - ಖಾನ - ಮುಖ - ಮಧುಘಾತ ಪ್ರಭೃತೀನಾಂ ಮ್ಲೇಚ್ಛಜಾತೀನಾಮನೇಕದೇಶಭಾಷಾಭಿಜ್ಞಾ ಯಥೇಷ್ಟಂ ಮನ್ತ್ರಯಾಮಃ - ದೃಷ್ಟೋ ದೃಷ್ಟಾವಾ ಆರ್ಯ ಆರ್ಯಾವಾ - ಮೃಚ್ಛಕಟಿಕ ಅಂ. ೬. ಚಂದನಕನ ಮಾತು.

* ಬರೆಹವನ್ನರಿಯದ ಕೆಲವು ಸ್ಲವೋನಿಯನ್ ಭಾಷೆಗಳು ೩೦ ವರ್ಷಗಳಲ್ಲಿಯೇ ಸಂಪೂರ್ಣವಾಗಿ ಬೇರೆಯಾಗಿ ಹೋಗಿ ಒಂದು ಶಬ್ದವಾದರೂ ಸಂಬಂಧವೇ ಇಲ್ಲದಂತಾಗುವುವೆಂದು ಹೇಳುವರು.

† Consult Rajendralal Mitra's "Indian Shipping" in the matter of marching activity of the Indian people.

‡ ಸಮುದ್ರದ ಮೇಲೆ ವ್ಯಾಪಾರಕ್ಕಾಗಿ ಹೋಗಿ ಬರುವರು.

ರಿಂದಲೂ ದಕ್ಷಿಣದೇಶದಲ್ಲಿ ಅನೇಕ ಭಾಷೆಗಳ ಹೊಡೆತವು ಹೆಚ್ಚಿ ಅವ್ಯಕ್ತಭಾಷಿತ್ವವೆಂಬುದು ದಕ್ಷಿಣದೇಶಕ್ಕೇ ಒಂದಹಾಗೆ ತೋರುವುದು ‡ ಮಹಾರಾಷ್ಟ್ರಯೆಂಬ ಪ್ರಾಕೃತಭಾಷೆಯಲ್ಲಿಯೂ 'ಇವ' ಎಂಬುದು 'ಮ್ಮಿವ' 'ಮಿವ'' ಎಅ' ಎಂದು ಮೂರು ಬಗೆಯಾಗುವುದು † ಅಸ್ಮಚ್ಛಬ್ದದ ಪ್ರಥಮಾಂತವು 'ಹಂ' 'ಅಹಂ' 'ಅಹಅಂ' ಎಂದು ಮೂರು ಬಗೆಯಾಗುವುದು * ಯುಷ್ಮಚ್ಛಬ್ದದ ತೃತೀಯಾ ಬಹುವಚನವು 'ತುಜ್ಝೇಹಿಂ' 'ತುಮ್ಹೇಹಿಂ,' 'ತುಮ್ಮೇಹಿಂ' ಎಂದು ಮೂರುಬಗೆಯಾಗುವುದು §, ಕೆಲವು ಕಡೆ ದೀರ್ಘವು ವಿಕಲ್ಪವಾಗಿ ಬರುವುದು, ಸಂಬುದ್ಧಿಯಲ್ಲಿ ಬಿಂದು ವಿಕಲ್ಪವಾಗಿ ಬರುವುವು ||, ಕೆಲವು ಶಬ್ದಗಳು ಅನೇಕ ರೂಪಗಳನು, ಹೊಂದುವುವು ×,-ಹೀಗೆಲ್ಲ ಉಂಟು. ಈ ಅವ್ಯಕ್ತಭಾಷಿತ್ವದಿಂದಲೇ ಕನ್ನಡದಲ್ಲಿ ಒಂದೇ ಶಬ್ದವು ಅನೇಕರೂಪಗಳನ್ನು ತಾಳುವುದು, ಉದಾಹರಣೆಗಾಗಿ,—ಬಳಕಂ' ಬಳಿಕೆ, ಬಳಿಯಂ, ಬಳಿಕ್ಕಂ, ಬಳಿಕ್ಕೆ, ಬರುತುಂ, ಬರುತಂ, ಬರುತೆ, ಬರುತ್ತುಂ, ಬರುತ್ತಂ, ಬರುತ್ತೆ, ಮರದೆ, ಮರದಿಂ, ಮರದಿಂದಂ, ಮರಏಂದೆ ಓದಿ ಬರೆವುದರಲ್ಲಿಯೂ ಈ ಅವ್ಯಕ್ತಭಾಷಿತ್ವವು ಬಾಲಪಾಠ ಮೊದಲ್ಗೊಂಡು ಅಭ್ಯಸಿಸಲ್ಪಡುವುದು-ಉದಾ—"ಕ, ಇಳಿಯಾ [ಯುಂ-ಯಾಂ] ತೆಗದರೇ ಕಾ, ಇಳಿಯಾ ತೆಗೆದೋ [ದು, ದೊ, ದೂ, ದೋ]'', 'ಒಂದು ಒಂದು ಒಂದೋ (ದು, ದೊ, ದೂ, ದೋ)', ಇತ್ಯಾದಿ. ಈ ವಿಷಯವು ಉದಾಹರಣೆಗಳನ್ನು ಹೆಚ್ಚಿಸಿದಷ್ಟೂ ಸ್ಫುಟವಾಗುವುದಾದರೂ ಸ್ಥಳಸಂಕೋಚದಿಂದ ಮುಂದರಿವೆವು ಮುಖ್ಯವಾಗಿ ಕನ್ನಡದಲ್ಲಿ ಅವ್ಯಕ್ತಭಾಷಿತ್ವವೆಂಬುದು ಮೊದಲಿಂದಲೂ ಬಂದುದೆಂದು ನಾವು ಅಂಗೀಕರಿಸಿದರೆ 'ಇದು ಅಬದ್ಧ, ಇದು ಸುಬದ್ಧ' ವೆಂಬ ಹೊಡೆದಾಟವು ಅನೇಕ ವಿಷಯಗಳಲ್ಲಿ ಶಾಂತವಾಗುವಂತೆಮಾಡಲು ಸಾಧ್ಯವಾಗುವುದು

ಇನ್ನು ಹೇಗೆಪ್ರಕೃತಕಾರ್ಯವನ್ನು ಆರಂಭಿಸಬೇಕೆಂಬುದರಲ್ಲಿ ಎರಡು ಮತಗಳು ಹುಟ್ಟುವುವು ಕೆಲವರು ಒಂದು ಸರ್ವಸಮ್ಮತವಾದ ವ್ಯಾಕರಣವನ್ನೂ ಒಂದು ಸರ್ವಸಮ್ಮತವಾದ ನಿಘಂಟನ್ನೂ ಬರೆದಿಟ್ಟುಕೊಂಡು ತದನುಸಾರವಾಗಿ ಗ್ರಂಥನಿರ್ಮಾಣಕ್ಕೆ ಹೊರಟರೆ ಎಲ್ಲವೂ ಸುಲಭವೆಂದು ಹೇಳುವರು. ಇದೊಂದು ಯುಕ್ತಿಯಾ

‡ ಪ್ರಕೃತ,-ಪಅಡ, ಪಾಅಟ, ಪ್ರಸುಪ್ತ,-ಪಸುತ್ತಂ, ಪಾಸುತ್ತಂ-'ಆಸಮೃದ್ಧ್ಯಾದಿಷುವಾ" ವರರುಚಿ ೧-೨.

† ಮ್ಮಿವ ಮಿವ ವಿಅ ಇವಾರ್ಥೇ - ವರರುಚಿಸೂತ್ರ (ಪ್ರಾಕೃತ ಪ್ರಕಾಶ) ೯, ೧೬

* ಅಸ್ಮದೋಹ ಮಹಮಹ ಅಂಸೌ - ವರರುಚಿ, ೬-೪೪

§ ತುಜ್ಝೇಹಿಂ ತುಮ್ಹೇಹಿಂ ತುಮ್ಮೇಹಿಂಭಿಃ - ವರರುಚಿ ೬-೪೪. ಬರುತ ಬರುತ ಉಚ್ಚಾರಣಾಭೇದದ ಕಡೆಗೆ ತಿರುಗುವುದೆಂಬುದಕ್ಕೆ ಇದನ್ನು ಉದಾಹರಣೆಯಾಗಿ ಕೊಡಬಹುದು.

|| ಆಮನ್ತ್ರಣೇವಾಬಿನ್ದುಃ-ವರರುಚಿ ೫-೩೭ ಉದಾ. ರಾಅಂ, ರಾಅ (ರಾಜನ್), ಹಮಿಳನಲ್ಲಿ ಇದು ಹೆಚ್ಚು

× ಮಯೂರ,-ಮೋರೋ, ಮಊರೋ - ವರರುಚಿ ೧.-೮.

ದರೂ ಕುದುರೆಗೆ ಬಂಡಿ ಕಟ್ಟಿದ ಸಾಮತಿ † ಯಾಗುವುದು, ವ್ಯಾಕರಣವೂ ಪ್ರಯೋಗವನ್ನನುಸರಿಸಿ ಹುಟ್ಟಿತಲ್ಲದೆ ಪ್ರಯೋಗವೇ ವ್ಯಾಕರಣವನ್ನನುಸರಿಸಲಿಲ್ಲ ‡, ಆದರೂ ಗತ್ಯಂತರವಿಲ್ಲದುದರಿಂದ ಮಾಡಲೇಬೇಕೆಂದರೆ ಶಬ್ದರೂಪಾವಳಿಯನ್ನೂ ಅಮರಕೋಶವನ್ನೂ ಕಲ್ತು ಬಳಿಕ ಕಾವ್ಯಕ್ಕೆ ಕಯ್ಯಿಹಾಕುವ ಪದ್ಧತಿ ಸಂಸ್ಕೃತ ವಿಚಾರದಲ್ಲಿಯೇ ತೋರುತ್ತ ಬಂದಿರಲು ಇನ್ನು ಕನ್ನಡದಲ್ಲಿ ಅದು ಸಾಧ್ಯವೆನ್ನುವುದು ಹೇಗೆ? ಹಾಗೂ ಆಗಲಿ, ಅಮರಕೋಶದಂತಹ ಕರ್ಣಾಟ ಕೋಶವನ್ನು ರಚಿಸುವ ಭೂಪನು ಯಾರು ? ಪೂರ್ವದಲ್ಲಿದ್ದ ಎಷ್ಟು ವ್ಯಾಕರಣಗಳನ್ನು ಸಂಗ್ರಹಿಸಿ ಪಾಣಿನೀಯ ವ್ಯಾಕರಣವು ಹುಟ್ಟಿತು? * ಆದರೂ ಅದಕ್ಕೂ ವಾರ್ತಿಕವೂ ಭಾಷ್ಯವೂ ಬೇಕಾಗಲಿಲ್ಲವೇ ⸸? ಎಷ್ಟು ಪೂರ್ವಕೋಶಗಳನ್ನನುಸರಿಸಿ ಅಮರ ಕೋಶವು ಹುಟ್ಟಿತು ||, ಆದರೂ ಅದಕ್ಕೆ ತ್ರಿಕಾಂಡೀ ಶೇಷವು ಬೇಕಾಗಲಿಲ್ಲವೇ ? ಹೀಗಿರಲು ಇನ್ನು ಕನ್ನಡದಲ್ಲಿ ತೃಪ್ತಿಕರವಾದ ವ್ಯಾಕರಣವನ್ನೂ ನಿಘಂಟನ್ನೂ ರಚಿಸುವುದು ಬಾಯಮಾತೇ ? ಹಾಗೂ ಆಗಲಿ, ಮಾತಿನ ಹಾಸ್ಯ, ವಿನೋದ, ಕುಹಕ-ಇತ್ಯಾದಿಗಳು, ದೇಶಭಾಷಾನುಗುಣವಾಗಲ್ಲವೇ ಇರುವುವು ? ಧಾರವಾಡದವರ ಹಾಸ್ಯೋಕ್ತಿಗಳೂ ಮೈಸೂರಿನವರ ಹಾಸ್ಯೋಕ್ತಿಗಳೂ ಏಕರೂಪವಲ್ಲವೆಂದು ಯಾರು ಕಾಣರು ? ಅಂಬಾ ಎಂಬ ಶಬ್ದಕ್ಕೆ 'ಅವ್ವ' 'ಅಮ್ಮ' ಎಂಬ ಎರಡು ಅಪಭ್ರಂಶರೂಪಗಳಿದ್ದರೂ ಅವ್ವ ಎಂಬುದು ಗ್ರಾಮ್ಯವೆಂದು ತೆಗೆದುಹಾಕಿ ಧಾರವಾಡದ ಕಡೆಯ ಹೆಂಗಸರನ್ನು 'ಅಮ್ಮ'§ ಎಂದು ಸಂಬೋಧಿಸಿದರೆ ಅವರಿಗೆಷ್ಟು ರೇಗುವುದು ? ಹೀಗೆಲ್ಲವೂ ಮಹಾಪ್ರಯಾಸಗಳು ಬಂದು ಪ್ರಯತ್ನವೆಲ್ಲವೂ ನಿಷ್ಫಲಕ್ಕಿಂತಲೂ ದುಷ್ಫಲವಾಗುವುದು ಇನ್ನೊಂದು ಮತವಾದರೆ ಮೊದಲು ಗ್ರಂಥಗಳನ್ನು ರಚಿಸುತ್ತ ಬಂದು ವ್ಯಾಕರಣವನ್ನೂ ನಿಘಂಟನ್ನೂ ಕ್ರಮ ಕ್ರಮವಾಗಿ ತೆಗೆದುಕೊಳ್ಳಬೇಕೆಂಬುದು. ಇದೇ ಸೂಕ್ತವಾಗಿ ತೋರುವುದು ಹಾಗಾದರೆ ಎತ್ತಿಕೊಳ್ಳುತ್ತ ಹೇಗೆ ಬರೆಯಬೇಕೆನ್ನಬಹುದು ಹಳಗನ್ನಡವನ್ನು ತೆಗೆದುಕೊಂಡು ಲೋಪಾಗಮಾದೇಶಗಳಿಂದ ಹೇಗೆ ಧ್ವನಿ ಬೇರೆಯಾಗುವುದೋ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಸಿದ್ಧವಾಗುವ ರೂಪಗಳನ್ನೇ ಉಪಯೋಗಿಸುತ್ತ ಬರುವ! ಉದಾಹರಣೆಗಾಗಿ, ಇರವೇಳ್ಕುಂ, ಬೇಳ್ಪುದುಂ, ಕೊನೆಯ ಅನುಸ್ವಾರವನ್ನು ಬಿಟ್ಟು ಉಚ್ಚರಿಸುವುದು ಸಾಮಾನ್ಯವಷ್ಟೆ,-ಇರವೇಳ್ಕು, ಬೇಳ್ಪುದು, 'ಆಗಳ್'-ಆಗ, ಈಗಳ್'-ಈಗ' ಈ ರೀತಿಯಲ್ಲಿ ಳಕಾರಕ್ಕೂ ಲೋಪಬರುವುದಷ್ಟೆ-,

---

† To place the cart before the horse

‡ ಪ್ರಯೋಗ ಶರಣಾ ವೈಯಾಕರಣಾಃ |

* ಆಚಾರ್ಯ, ಗಾರ್ಗ್ಯ, ಶಾಕಟಾಯನ, ಸ್ಫೋಟಾಯನ,-ಇತ್ಯಾದಿ ವೈಯಾಕರಣರನ್ನು ಪಾಣಿನಿ ಋಷಿಗಳೇ ಉದಾಹರಿಸುವರು.

⸸ ಮುನೀನಾಂ ಯಥೋತ್ತರಂ ಪ್ರಮಾಣಂ ಎಂಬುದನ್ನು ಮರೆಯಕೂಡದು

|| ಸಮಾಹೃತ್ಯಾನ್ಯತಂತ್ರಾಣಿ ೧. ೧. ೨ (ಅಮರಕೋಶ)

§ ಧಾರವಾಡದಲ್ಲಿ "ಅಮ್ಮ" ಎಂದರೆ "ವಿಧವೆ" ಎಂದು ಸಂಕೇತವು.

ಇರವೇಕು, ಬೇವುದು, ವಕಾರಕ್ಕೆ ಬಕಾರವನ್ನು ತರುವುದೂ, ಪಕಾರಕ್ಕೆ ಹಕಾರವನ್ನು ತರುವುದೂ ನಮಗೆ ಸಾಮಾನ್ಯವಾಗಿರುವುದು,-ಇರಬೇಕು, ಬೇಹುದು, ಅಕಾರವು ಕಂಠ್ಯವೆನಿಸುವುದು, ಏಕಾರವು ಕಂಠತಾಲವ್ಯವೆನಿಸುವುದು, "ಸ್ಥಾನತ ಆಂತರ್ಯ" ದಿಂದ ಏಕಾರಕ್ಕೆ ಅಕಾರವನ್ನು ಹಾಕಬಹುದು,- ಬೇಹುದು, ಬಹುದು. ಸಂಸ್ಕೃತವ್ಯಾಕರಣವನ್ನೂ ಕರ್ಣಾಟಕ ಶಬ್ದಾನುಶಾಸನವನ್ನೂ ಪರಿಶೀಲಿಸಿದರೆ ಈ ಲೋಪಾಗಮಾದೇಶಗಳು ಹೇಗೆ ಹೇಗೆ ಬರುವುವು ಅವು ಹೇಗೆ ಹೇಗೆ ಬೇಕಾದರೆ ತಿರುಗಬಹುದು,-ಇವೆಲ್ಲವನ್ನೂ ಬೇಕಾದ ಹಾಗೆ ನಿರ್ಧರಿಸಬಹುದು, ಮಕ್ಕಳು ಹೊಸತಾಗಿ ಮಾತುಕಲಿಯುತ್ತಿರುವಾಗ ಹೇಗೆ ಹೇಗೆ ವರ್ಣಭೇದಗಳನ್ನು ಮಾಡುವುವೋ ಅದನ್ನು ಚೆನ್ನಾಗಿ ತಿಳಿದು ಪರಿಶೀಲಿಸುವುದೂ ಒಂದು ಉಪಾಯವೇ. ಈ ರೀತಿಯಲ್ಲಿ ಒಂದೇ ಶಬ್ದವು ಅನೇಕ ರೂಪಗಳನ್ನು ಹೊಂದುವುದಾದರೂ ಯಾವ ಶಬ್ದರೂಪವನ್ನು ಪ್ರಯೋಗಿಸಿದರೆ ಇದು ಹಳಗನ್ನಡವೆಂದು ಜನಗಳಿಗೆ ತಟ್ಟನೆ ಗೊತ್ತಾಗುವುದಿಲ್ಲವೇ? ಆದರೂ ಯಾವ ರೂಪಕ್ಕೂ ಹಳಗನ್ನಡದ ರೂಪಕ್ಕೂ ನಿಬಿಡವಾದ ಸಂಬಂಧವಿರುವುದೋ ಅಂತಹ ರೂಪವನ್ನೇ (ತುಲ್ಯಬಲವಾದ ಎರಡು ರೂಪಗಳಿದ್ದರೆ ಐಚ್ಛಿಕವಾಗಿ ಯಾವುದಾದರೂ ಒಂದನ್ನು) ಪ್ರಯೋಗಿಸುತ್ತ ಬರುವ! ಹೀಗೆ ಶಬ್ದರೂಪಗಳನ್ನು ಹುಡುಕಿಕೊಂಡು ಬರುವುದೆಂದರೆ ಸಾಧ್ಯವೇ ? ಸಾಧ್ಯವಾದರೂ ಕ್ಲಿಷ್ಟವಾಗುವುದಿಲ್ಲವೇ ? ಎಂದರೆ,-ಇಲ್ಲ, ಸ್ವಲ್ಪರೂಢಿ ಬಿದ್ದರೆ ಅದು ನಿರಾಯಾಸವಾಗಿ ನಡೆವುದು. ಹಳಗನ್ನಡವೆಂದರೆ ನಮ್ಮ ಎಲ್ಲರ ಭಾಷೆಗೂ ಮೂಲವಾದುದೆಂದು ಕನ್ನಡಿಗರಿಗೆ ಭಕ್ತಿಯುಂಟಷ್ಟೆ, ಅದರ ಆಧಾರದ ಮೇಲೆ ಹುಟ್ಟಿದ ಗ್ರಂಥ ಭಾಷೆ ಯಾರಿಗೆ ಆದೃತವಾಗುವುದಿಲ್ಲ. ಒಂದು ವೇಳೆ ಅದನ್ನು ಆದರಿಸದಿದ್ದವರೂ ಇದ್ದರೆ ಮೂಲಕ್ಕೆ ಸಂಬಂಧಪಟ್ಟುದನ್ನು ತಿರಸ್ಕರಿಸಿ ಯಾವುದೋ ಏಕದೇಶಸ್ಥವಾದುದನ್ನು ಪುರಸ್ಕರಿಸುವರನ್ನು ಕಂಡು ದೊಡ್ಡವರೇನೆನ್ನುವರು ? ಈ ವಿಷಯವನ್ನು ದಿಙ್ಮಾತ್ರವಾಗಿ ಉದಾಹರಿಸಿದರೆ ಅತಿಪ್ರಸಂಗವಾಗಲಾರದು

ಸಂಸ್ಕೃತದ ಅಕಾರಾಂತ ಪ್ರಕೃತಿಗೆ ಪ್ರಥಮಾ ವಿಭಕ್ತಿಯಲ್ಲಿ 'ಮ್" (ಎಂದರೆ, ಅನುಸ್ವಾರವನ್ನು) ಸೇರಿಸಿ 'ಕಾರಣಂ' ಎಂಬರೂಪವನ್ನು ಮಾಡುವುದುಂಟಷ್ಟೆ, ಇದು ಕಾರಣವು ಎಂದಾಗುವುದು ಯುಕ್ತವೇಸರಿ, ಆದರೂ 'ಕಾರಣ' ಎಂದೇ ಹೇಳಿದರೂ ನಾಮಹಾನಿಗೇನೂ ಕಾರಣವಿಲ್ಲದುದರಿಂದ ಹಾಗೆ ಯಾರಾದರೂ ಅಂದರೆ ದೋಷವಾಗಿ ಭಾವಿಸಕೂಡದು, ಎರಡು ರೂಪಗಳಾದರೂ ಬಾಧಕವೇನು ? ಹಳಗನ್ನಡದಲ್ಲಿ 'ಮರದಿಂ' ಎಂಬ ರೂಪವೇ ಸಾಕಾಗಿರಲು 'ಮರದಿಂದೆ' ಎಂಬ ರೂಪವೇಕೆ? 'ಮರದಿಂದೆ' ಎಂಬ ರೂಪವಿದ್ದರೂ 'ಅನೇಕ ರೂಪಗಳಿರುವುದು * ಭ್ರಾಂತಿಕಾರಣವಾದುದರಿಂದ ಯುಕ್ತವಲ್ಲ' ಎಂದು ಯಾರೂ ಆಕ್ಷೇಪಿಸಲಿಲ್ಲವಲ್ಲಾ. ಬಹುವಚನದಲ್ಲಿ 'ಕಾರಣಂಗಳು' ಎನ್ನುವುದಕ್ಕಿಂತಲೂ 'ಕಾರಣಗಳು' ಎಂಬುದೇ ಶ್ರಾವ್ಯ

* ಇದು ಸಂಸ್ಕೃತದಲ್ಲಿಯೂ ಉಂಟು, ಉದಾ-ದಿಕ್, ದಿಶಾ, ವಾಕ್, ವಾಚಾ

ವಾಗಿರುವುದು. ಇಕಾರಾಂತಾದಿ ಶಬ್ದಗಳನ್ನು 'ಕವಿ,' 'ಗುರು' ಎಂದು ನಿಲ್ಲಿಸುವುದೇ ಲೇಸು, 'ಕವಿಯು' 'ಗುರುವು' ಎಂದೇಕೆ ? ಕೆಲವರು 'ಅದರಿಂದ' ಎಂದರೆ ಸಾಕು, ಸಮುಚ್ಚಯದಲ್ಲಿ ಬೇಕಾದರೆ ಆಗಮವನ್ನು ಮಾಡಿ 'ಅದರಿಂದಲೂ' ಎಂದು ಮಾಡಬಹುದು. ಚತುರ್ಥಿಯಲ್ಲಿ 'ಗುರುವಿಗೆ' ಹಸುವಿಗೆ ಎನ್ನುವುದಕ್ಕಿಂತಲೂ 'ಗುರುಗೆ' 'ಹಸುಗೆ' ಎಂಬುದೇ ಚೆನ್ನಾಗಿರುವುದು. 'ಹಸುಗೆ ಹಾಕು' 'ಮಡುಗೆ ಬಿದ್ದನು' ಇತ್ಯಾದಿ ಪ್ರಯೋಗಗಳು ಪ್ರಸಿದ್ಧವಾಗಿರುವುವು, ಜನರ ಮಾತಿನಲ್ಲಿ ಪ್ರಕೃತಿಯ ಉಕಾರವು ದೀರ್ಘವಾದಂತೆ ಕೇಳಬಂದರೂ ಅವ್ಯಕ್ತಭಾಷಿತ್ವದ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡರೆ ಎಲ್ಲವೂ ಅನವದ್ಯವೆನಿಸುವುದು. ಪಂಚಮಿಯಲ್ಲಿ 'ದೆಸೆಯಿಂದ' ಎಂಬುದನ್ನು ಪ್ರತ್ಯಯವಾಗಿ ಭಾವಿಸುವುದುಂಟು. ಇದು 'ಅತ್ತಣಿಂ' ಎಂಬುದರ ಪರಿವರ್ತನೆಯೇನೋ ಆಹುದು. ಆದರೂ 'ಅತ್ತಣಿಂ' ಎಂಬುದೇ 'ಅತ್ತಣ'' (ಅಲ್ಲಿ) ಎಂಬುದರ ತೃತೀಯಾಂತ ರೂಪವೆನ್ನಬಹುದು. ಕೆಲವು ಪ್ರಾಂತದವರು 'ದೆಸೆಯಿಂದ' ('ಸಲುವಾಗಿ' ಉದಾ — 'ಮಗನದೆಸೆಯಿಂದ') ಎಂಬುದನ್ನು ಸಂಸ್ಕೃತದ ಅರ್ಥಂ' (ಉದಾ—'ಪುತ್ರಾರ್ಥಂ' ಮಗನಿಗಾಗಿ) ಎಂಬರ್ಥದಲ್ಲಿ ಪ್ರಯೋಗಿಸುವುದುಂಟು. 'ಅತ್ತಣಿಂ' ಎಂಬುದು ಭೀತ್ಯರ್ಥದಲ್ಲಿ ತಾನೇ ಬರುವುದು.* 'ಹುಲಿಯ ಭಯ' ವೆಂದರೆ ಸಾಕು. 'ಹುಲಿಯ ದೆಸೆಯಿಂದ ಭಯ' ವೆಂಬುದರ ಹೆಚ್ಚೇನು ? "ಇಲ್ಲಿ 'ಕಾಗೆಯ ಭಯ, 'ತಗಣೆಯ ಕಾಟ' " ಎಂದು ಮಾತನಾಡುವುದಿಲ್ಲವೇ, ಅದರಿಂದ ಸರಿಯಾದ ಅರ್ಥವಾಗುವುದಿಲ್ಲವೇ ? ಹಳಗನ್ನಡದಲ್ಲಿದ್ದರೂ ಹೊಸಗನ್ನಡದಲ್ಲಿ ಒಂದು ವಿಭಕ್ತಿರೂಪವನ್ನು ಬಿಟ್ಟರೆ ಬಾಧಕವೇನು ? ಸಂಸ್ಕೃತದಲ್ಲಿಯು 'ಲೇಟ್'' ಎಂಬ ಲಕಾರವನ್ನು ವೇದದಲ್ಲಿಯೇ ಎಂದು ಅಂಗೀಕರಿಸುವುದಿಲ್ಲವೇ? ಷಷ್ಠಿಯ 'ಗುರುವಿನ' ಎಂದೇಕೆ 'ಗುರುನ' ಎಂದೇ ಸಾಕು, 'ಗುರೂ ಹತ್ತಿರ ಓದಿದ' ಎಂದು ಜನರು ಹೇಳುವುದಿಲ್ಲವೇ ? ನಮ್ಮ ಅವ್ಯಕ್ತಭಾಷಿತ್ವವನ್ನು ಕೊಂಚ ಜ್ಞಾಪಿಸಿಕೊಂಡರೆ 'ರುವ' ಎಂಬುದಕ್ಕೂ 'ರೂ' ಎಂಬುದಕ್ಕೂ ಸಂಬಂಧ ತೋರುವುದು. ಸಪ್ತಮಿಯಲ್ಲೂ 'ಗುರುವಲ್ಲಿ' ಎಂದೇ ಸಾಕು. ಗುರುವಿನಲ್ಲಿ ಎಂದೇಕೆ ? ಸಂಬುದ್ಧಿಯಲ್ಲೇನೋ ಕೆಲವು ವಿಚ್ಛಿಕರೂಪಗಳನ್ನು ಅಂಗೀಕರಿಸಬೇಕಾಗುವುದು. ಸರ್ವನಾಮಗಳಲ್ಲಿ ತ್ಯದಾದಿಗಳನ್ನು ತೆಗೆದುಕೊಳ್ಳುವ ರೂಢಿಯಿಲ್ಲವಷ್ಟೆ? ಕೆಲವರೇನೋ 'ತಸ್ಮಾತ್'' ಏತೇನ' ಇತ್ಯಾದಿಗಳನ್ನು ಪ್ರಯೋಗಿಸುವರು, 'ಅದರಿಂದ' ಆದುದರಿಂದ' 'ಇದರಿಂದ' ಇವೇ ಸಾಕಾಗಿರಲು ಪೂರ್ವಪದ್ಧತಿಯನ್ನೇಕೆ ಮಾರುವುದು ? ಗುಣವಾಚಕಗಳಲ್ಲಿ 'ಎಂಥ' 'ಅಂಥ' ಇತ್ಯಾದಿಗಳಿಗಿಂತಲೂ 'ಎಂತಹ' 'ಅಂತಹ' ಎಂಬುವೇ 'ಎಂತಪ್ಪ' 'ಅಂತಪ್ಪ' ಎಂಬುವುಗಳಿಗೆ ಸಮೀಪವಾಗಿರುವುವು, ಮಹಾಪ್ರಾಣವೇ ಸಾಧುತ್ವಸೂಚಕವಲ್ಲವೆಂದೂ 'ತಹ' ಎಂಬುದು 'ಥ' ಎಂದಾಗುವುದಕ್ಕೆ ಅವ್ಯಕ್ತಭಾಷಿ

* ಭೀತ್ಯರ್ಥೇನಾತ್ತಣಂ (ಶಬ್ದಾನುಶಾಸನ)

ತ್ತವೇ ಕಾರಣವೆಂದೂ ತಿಳಿದರೆ ಇಲ್ಲಿ ವಿಶೇಷ ವಿವಾದವು ಹುಟ್ಟಲಾರದು. 'ಎಂತಪ್ಪುವು' 'ಅಂತಪ್ಪುವು' ಎಂಬಿವುಗಳನ್ನು 'ಎಂತಹುವು' 'ಅಂತಹುವು' ಎಂದು ಬರೆದರೆ ಚೆನ್ನಾಗಿರುವುದು, 'ಎಂತಹವು' 'ಅಂತಹವು' ಎಂದರ 'ಎಂತಹ ಅವು' 'ಅಂತಹ ಅವು' ಎಂದು ಎರಡು ಶಬ್ದಗಳು ಸೇರಿ ಅಕಾರಲೋಪವುಂಟಾಗಿ ಹುಟ್ಟುವ ಶಬ್ದಗಳಾಗುವುವು ಹೀಗೆಯೇ 'ಮಾಳ್ಪುದು' 'ಪೋಪುದು' ಎಂಬಿವುಗಳನ್ನು 'ಮಾಡುವುದು' (ಮಾಡುವುದನ್ನು ಇತ್ಯಾದಿ) 'ಹೋಗುವುದು' (ಹೋಗುವುದನ್ನು ಇತ್ಯಾದಿ) ಎಂದೇ ಮಾಡಿಕೊಂಡರೆ ಹಳಗನ್ನಡಕ್ಕೂ ಹೊಸಕನ್ನಡಕ್ಕೂ ದೃಶ್ಯಸಂಬಂಧವಿರುವುದು, ಸುಬೋಧೆಯೂ ಆಗುವುದು 'ಪೊಸತು' 'ಪಳದು' ಇತ್ಯಾದಿಗಳನ್ನು 'ಹೊಸತು' (ಹೊಸದು ಎಂದೇಕೆ) 'ಹಳದು' (ಹಳೇದು ಎಂದೇಕೆ) ಎಂದೇ ಮಾಡಿಕೊಂಡು ಸಮಾಸದಲ್ಲಿಯೂ 'ಹೊಸ' 'ಹಳ' ಎಂದೇ ಮಾಡಿಕೊಂಡರೆ ಚೆನ್ನಾಗಿರುವುದು.

ಕ್ರಿಯಾರೂಪಗಳಲ್ಲಿಯೂ ಹಳಗನ್ನಡಕ್ಕೂ ಹೊಸಕನ್ನಡಕ್ಕೂ ಸಂಬಂಧವನ್ನು ಉಳಿಸಿಕೊಂಡೆ ಹೋದರೆ ಚೆನ್ನಾಗಿಯೂ ಇರುವುದು, ವೈಷಮ್ಯ ಬರುವುದೂ ಕಡಿಮೆ. ವರ್ತಮಾನದಲ್ಲಿ 'ಬರುವನು' (ಬರ್ಪಂ) 'ಬರುವುದು' ಇತ್ಯಾದಿ ರೂಪಗಳೇ ಚೆನ್ನು. 'ಬರುತ್ತಾನೆ' 'ಬರುತ್ತದೆ' ಎಂಬವು ಹೇಗೆ ಬರುವುವೋ ಹೇಳುವುದಕ್ಕಾಗುವುದಿಲ್ಲ. ಮೈಸೂರಿನವರು 'ಬರುತ್ತದೆ' ಎಂಬುದು ಏಕೆ ಸಾಧುವಲ್ಲ ಎಂದು ಹೊರಟರೆ, ಧಾರವಾಡದವರು 'ಬರುತ್ತದ' ಎಂಬುದೇಕೆ ಸಾಧುವಲ್ಲ ಎನ್ನುವರು, 'ಬರುತುಂ' 'ಬರುತ್ತುಂ' ಎಂಬಿವು ಸಾಮ್ಯದಿಂದ ತಕಾರದ್ವಿತ್ವವು ವಿಚ್ಛಿಕವಾಗಬಹುದು, ಅಕಾರಕ್ಕೂ ಎಕಾರಕ್ಕೂ 'ಸ್ಥಾನತ ಆಂತರ್ಯ' ವಿರುವುದು ಎಂದರೆ ಎರಡು ನಿರ್ಮೂಲ ರೂಪಗಳು ಉಪಯೋಗವಿಲ್ಲದೆ ಬರುವುವು. ಇದನ್ನಂಗೀಕರಿಸಿದರೆ ಭವಿಷ್ಯತ್ತಿನ 'ಬರುವಂ' ಎಂಬುದೂ 'ಬರುವನು' ಎಂದೇ ಆಗುವುದಲ್ಲಾ, ವರ್ತಮಾನಕ್ಕೂ ಭವಿಷ್ಯತ್ತಿಗೂ ವ್ಯತ್ಯಾಸವೇ ಬೇಡವೇ—ಎಂದರೆ, ರೂಪದಲ್ಲಿಲ್ಲದಿದ್ದರೆ ಬಾಧಕವೇನು, ಅರ್ಥದಿಂದ ವ್ಯತ್ಯಾಸವು ಸ್ಫೂರ್ತಿಯಾಗಿಯೇ ಆಗುವುದು, 'ಇದೋ ಬಂದೆನು' ಎಂದು ಭೂತರೂಪವನ್ನು ಪ್ರಯೋಗಿಸಿದರೂ ವರ್ತಮಾನದ್ಯೋತಕವೇ ಅಲ್ಲವೋ ? ಇಂಗ್ಲೀಷಿನಲ್ಲಿ Indicative, Subjunctive ಎಂಬ ರೂಪಗಳಿಗೆ ಪೂರ್ವದಲ್ಲಿ ಮಹತ್ತರವಾದ ರೂಪವ್ಯತ್ಯಾಸವಿತ್ತು ಈಗ ಎಲ್ಲರೂ Indicative ರೂಪವನ್ನೇ ಪ್ರಯೋಗಮಾಡುವರಾದರೂ ಅರ್ಥವು ಪೂರ್ವದಂತೆಯೇ ದ್ಯೋತಿತವಾಗುವುದಿಲ್ಲವೇ ? 'ಬಂದೇನು' 'ಕೊಟ್ಟಾನೇ' ಇತ್ಯಾದಿಗಳನ್ನು ಸಂಶಯರೂಪಗಳೆಂದು ಕೆಲವರು ಕರೆವುದುಂಟು ಇವುಗಳ ವ್ಯುತ್ಪತ್ತಿ ಹೇಗೋ ನಿರ್ಣಯಿಸುವುದು ಸುಲಭವಲ್ಲ ನನ್ನ ಮನಸ್ಸು ನನ್ನ ಮಾತಿನಲ್ಲಿರುವುದು * ಎಂಬ ನ್ಯಾಯವುಂಟು, ಮನಸ್ಸಿನಲ್ಲಿ ಸಂಶಯವು ತೂಗಾಡುತ್ತಿರಲು ಮಾತನ್ನೂ ಎಳೆದು ಎಳೆದು ಹೇಳುವುದುಂಟು ಉದಾಹರಣೆಗಾಗಿ 'ಬರುವೆಯಾ ಎಂದು ಕೇಳಿದರೆ 'ಬಂದೆನು' ಎಂದು ತಟ್ಟನೆ ವರ್ತಮಾನ

* ಮನೋಮೇವಾಚಿ ಪ್ರತಿಷ್ಠಿತಂ (ಐತರೇಯೋಪನಿಷತ್)

ದ್ಯೋತಕವಾದ ಭೂತರೂಪವನ್ನು ಪ್ರಯೋಗಿಸುವುದಕ್ಕೆ ಹೋಗಿ ಅಷ್ಟರಲ್ಲಿಯೇ ಸಂಶಯದ್ಯೋತಕವಾಗುವಂತೆ ಸ್ವರವನ್ನು ದೀರ್ಘಿಸಿಬಿಡುವಂತೆ ತೋರುವುದು ಸಂಸ್ಕೃತದಲ್ಲಿಯೂ ಸಂಶಯ ಕಾಣುವಾಗ ದೀರ್ಘಕಾಣುವುದು ಉದಾ—ಭವೇತ್ ('ಆದೀತು'), ಜೀವೇಯಂ ('ಬದುಕೇನು'), ಮೋದೇತ ('ಸಂತೋಷಪಟ್ಟಾನು'). ಮರಾಠಿಯಲ್ಲಿಯೂ ಹೀಗೆಯೇ, ಉದಾ—ಹೋಈಲ್ ('ಆದೀತು') ವಾಟೇಲ್ ('ತೋರೀತು'), ಕರೇಲ್ (ಮಾಡೀತು'). ಹಿಂದೂಸ್ಥಾನಿಯಲ್ಲಿಯೂ ಹೀಗೆಯೇ, ಉದಾ—ಆವೇಗ ('ಬಂದಾನು'), ಕರೇಗ ('ಮಾಡಾನು') ತಮಿಳಿನಲ್ಲಿಯೂ ಉಂಟು, ಉದಾ ಉಡುವೇನಾ ('ಬಿಟ್ಟೇನೇ'), ಪೋರಾನಾ ('ಹೋದಾನೇ'). ಇದನ್ನೇ ಆಗಲೀ ಇಂತಹುದನ್ನೇ ಆಗಲೀ ಯಾವುದಾದರೂ ಒಂದು ಕಾರಣವನ್ನು ಕಲ್ಪಿಸಿಕೊಂಡರೆ ಅದು ಸರ್ವಜನಾದೃತವಾಗುವುದಾದರೆ ಈ ಸಂಶಯ ರೂಪಗಳೆಂಬುವನ್ನು ಅಂಗೀಕರಿಸಬಹುದು, ಆದರೆ ಈ ವಿಷಯವು ಸಿದ್ಧಾಂತವಾಗುವವರೆಗೂ ಆ ಅರ್ಥವನ್ನು ಇನ್ನು ಹೇಗಾದರೂ ಬರಮಾಡುತ್ತಿರುವುದು ಯುಕ್ತವು ಉದಾ.—ಬಂದರೂ ಬರುವೆನು, ಬಂದರೂ ಬಂದೆನು ಇತ್ಯಾದಿ ವಿಧಿರೂಪಕ್ಕೆ ಹೋದರೆ 'ಮಾಡುವ' (ಮಾಳ್ಪಂ,) 'ಹೋಗುವ' (ಪೋಪಂ) ಈ ರೂಪಗಳನ್ನೇ ಅಂಗೀಕರಿಸುವುದು ಚೆನ್ನಾಗಿರುವುದು 'ಮಾಡೋಣ' 'ಹೋಗೋಣ' ಇತ್ಯಾದಿ ರೂಪಗಳು ನಿರ್ಮೂಲವಾದುವು; ಇದರ ಮೇಲೆ ಇವನ್ನು ಅನೇಕರು 'ಮಾಡುವುದು' 'ಹೋಗುವುದು' ಎಂಬರ್ಥದಲ್ಲಿ ಉಪಯೋಗಿಸುವರು, ಉದಾ 'ಬೆಳಗಾಗ ಎದ್ದು ಮುಖ ತೊಳೆಯೋಣ, ಮುಸುರೆ ತೊಳೆಯೋಣ, ಮನೆ ಸಾರಿಸೋಣ, ಮಡಿಹಾಕೋಣ——ಇಷ್ಟೇ ನೀನು ಮಾಡಬೇಕಾದ ಕೆಲಸವು', 'ಕಷ್ಟಬಂದಾಗ ನೋಡೋಣ, ನೋಡುವುದು' ('ದೇಖಾಜಾಯಗಾ'), ನಮ್ಮ ದೋಷವನ್ನು ನಾವರಿಯದೆ 'ಮಾಡ' 'ಕೊಳ್ಳ' 'ಬಾರ' ಇತ್ಯಾದಿ ರೂಪಗಳನ್ನು ಗ್ರಾಮ್ಯವೆಂದೇಕೆ ಭಾವಿಸುವ? ಇನ್ನು 'ತೋರಿಬರುವುದು' 'ಕಂಡುಬರುವುದು'——ಇವಕ್ಕಿಂತಲೂ 'ತೋರಬರುವುದು,' 'ಕಾಣಬರುವುದು'—ಇವೇ ಸಾಧುವಾಗಿರುವುವು 'ತೂಗುತೊಟ್ಟಿಲು', 'ಜೇರುಬಲೆ'—ಇತ್ಯಾದಿ ರೂಪಗಳೂ ಚೆನ್ನಾಗಿರುವುವು ಎಲ್ಲಿ ಅವ್ಯಕ್ತಭಾಷಿತ್ವಕ್ಕೆ ಅವಕಾಶವಿರುವುದೋ, ಅರ್ಥವು ಸ್ಫೂರ್ತಿಯಾಗುವುದಿಲ್ಲವೋ ಅಲ್ಲಿ ಬೇಕಾದರೆ 'ತೂಗುವ' 'ಜೇರುವ', ಎಂಬ ರೂಪಗಳನ್ನು ಪ್ರಯೋಗಿಸಬಹುದು

ಅವ್ಯಯ ರೂಪಗಳನ್ನೂ ಮೇಲೆ ಹೇಳಿದ ಸಮೀಪ ಸಂಬಂಧ ನಿಯಮವನ್ನೇ ಅನುಸರಿಸಿ ಪ್ರಯೋಗಮಾಡುವುದು ಯುಕ್ತವು, ಉದಾ —ವರೆಗಂ'—ವರೆಗೂ ('ವರಿವಿಗೂ' ಎಂದೇಕೆ?). ಇಂಗ್ಲೀಷಿನ ಪ್ರಯೋಗವನ್ನು ನೋಡಿಕೊಂಡು ಮತ್ತು ಎಂಬ ಶಬ್ದವನ್ನು ಪ್ರಯೋಗ ಮಾಡುವುದು ಈಗಲೀಗ ಹರಿಯುತ್ತಿರುವುದು, ಕತ್ತಿನ ಮತ್ತು ಕಿವಿಯ ರೋಗಕ್ಕೆ, ಕುದುರೆಯ, ಎತ್ತಿನ ಮತ್ತು ಹಸುವಿನ ಕ್ರಯಕ್ಕೆ, ಇವೇನೋ ಕಿವಿಗೆ ಅಸಹ್ಯತೆಯನ್ನುಂಟುಮಾಡುವುವು, ನಾನಾದರೆ 'ಕತ್ತು, ಕಿವಿ-ಇವು

ಗಳ ರೋಗಗಳಿಗೆ', 'ಕುದುರೆ, ಎತ್ತು, ಹಸು,-ಇವುಗಳ ಕ್ರಯಕ್ಕೆ' ಎಂದು ಬರೆವೆನು. ಪ್ರಯೋಗ ಮಾಡಿದರೆ ಕನ್ನಡನಾಡಿನಲ್ಲಿ ಹುಟ್ಟಿ ಬಳೆದು, ಕನ್ನಡವೇ ಮಾತೃಭಾಷೆಯೂ ಆಗಿರಲು ಕನ್ನಡವನ್ನು ಚೆನ್ನಾಗಿ ಓದಿದವರ ಕಿವಿಗೆ ಶ್ರಾವ್ಯವಾಗಿರಬೇಕು † ಇದರ ಮೇಲೆ 'ಮತ್ತು' ಎಂಬುದು ಸಂಸ್ಕೃತದ 'ಅಥ' ಎಂಬುದಕ್ಕೆ ಸಮವಾಗಿರುವಂತೆ ತೋರುವುದು, ಉದಾ —'ಮತ್ತೇನು' ('ಅಥಕಿಂ'), 'ಅಪಿಚ' ಎಂಬುದಕ್ಕೆ ಸಮವಾದಂತೆ ತೋರುವುದಿಲ್ಲ ಸಂಸ್ಕೃತದ ಅವ್ಯಯಗಳನ್ನು ಉಪಯೋಗಿಸಕೂಡದೆಂದು ಕನ್ನಡದ ನಿಯಮವು* ಕೆಲವು ವೇಳೆಗಳಲ್ಲಿ 'ಯದ್ಯಪಿ', 'ಏವಂಚ' ಇತ್ಯಾದಿಗಳಿಂದ ಒಳ್ಳೆಯರ್ಥವನ್ನು ಸಂಗ್ರಹಿಸಬಹುದು. ಆದರೂ ಸಾಧ್ಯವಾದಷ್ಟು ಕನ್ನಡದ ನಿಯಮವನ್ನೇ ಅನುಸರಿಸುವುದು ಯುಕ್ತವು ನಾವು ನಿಯಮಗಳನ್ನು ಅನುಸರಿಸಿದರೆ ಎಲ್ಲಾ ಕನ್ನಡ ನಾಡಿನವರಿಗೂ 'ನಿಮ್ಮದೇನು ಹೆಚ್ಚು' ನಮ್ಮದೇನು ಕಡಿಮೆ'

---

† "Whoever in a state," wrote Milton, "knows how wisely to form the manners of men and to rule them at home and in war with excellent institutes, him in the first place, above others, I should esteem worthy of all honour But next to him the man who strives to establish in maxims and rules the method and habit of speaking and writing received from a good age of the nation, and as it were to fortify the same round with a kind of wall, the daring to overleap which let a law only short of that of Romulus be used to prevent The one, as I believe, supplies noble courage and counsels against an enemy invading the territory The other takes to himself the task of exterpating and defeating, by means of a learned detective police of ears, and a light band of good authors, that barbarism which makes large inroads upon the minds of men, and is a destructive enemy of Genius Nor is it to be considered of small consequence what language, pure or corrupt, a people has, or what is their customary degree of propriety in speaking it For let the words of a country be in part unhandsome and offensive in themselves, in part debased by war and wrongly uttered, and what do they declare, but by no light indication, that the inhabitants of the country are an indolent idly yawning race with their minds already long prepared for any amount of servility On the other hand we have never heard that any empire, any state, did not at least flourish in a middling degree as long as its own liking and care for its language lasted"—Letter to Bournatter from Florence, 1638

* ನಾವ್ಯಯಶತೃತ್ಯದಾದಿ-ಶಬ್ದಾನುಶಾಸನ

ಎಂಬ ಭಾವನೆ ಕಡಿಮೆಯಾಗಿ ನಮ್ಮ ಪೂರ್ವಿಕರ ಭಾಷೆಯನ್ನೇ ಮೂಲವಾಗಿಟ್ಟುಕೊಂಡು ನಾವು ವರ್ತಿಸುತ್ತಿರುವೆವೆಂದು, ಒಂದು ಬಗೆಯ ಭಕ್ತಿವಿಶಿಷ್ಟವಾದ ಆದರವೇ ಉಂಟಾಗಿ ಭಾಷೈಕರೂಪೀಕರಣಕಾರ್ಯವು ಸುಕರವಾಗುವುದು ಇದರ ಮೇಲೆ ಹೊಸಕನ್ನಡವೆಂದರೆ 'ಶಾಂತಂ ಪಾಪಂ!' ಎಂದು ಕಿವಿ ಮುಚ್ಚಿಕೊಳ್ಳುವ ಪಂಡಿತರುಗಳೂ ಪ್ರತಿಭಟಿಸಿ ನಮ್ಮ ಗುಂಪಿನಲ್ಲಿ ಅಂತಃಕಲಹವನ್ನು ತಂದು ಹಾಕುವ ಸಂಭವವೂ ಕಡಿಮೆಯಾಗುವುದು

ಪ್ರಸಂಗ ಸಂಗತಿಯಿಂದ ಇಲ್ಲೊಂದು ಮಾತು ಹೇಳಬೇಕಾಗಿರುವುದು. ಗ್ರಂಥಭಾಷೆ ಹೀಗಾಗಲು ಮೈಸೂರು, ಧಾರವಾಡ ಮೊದಲಾದ ಪ್ರಾಂತಗಳ ಭಾಷೆಗಳೆಲ್ಲಾ ಹೋಗಬೇಕೋ ? ಎಂದು ಕೇಳಬಹುದು ಏನೂ ಹೋಗಬೇಕಿಲ್ಲ; ಸಂಸ್ಕೃತವಿದ್ದರೂ ಪ್ರಾಕೃತಗಳು ಹೇಗೆ ಉಳಿದುವೋ ಹಾಗೆ ಅವೂ ಉಳಿಯಲಿ, ದೃಶ್ಯಕಾವ್ಯಗಳಲ್ಲಿ ಅವುಗಳಿಂದ ಎಷ್ಟೋ ಪ್ರಯೋಜನವುಂಟು, ಪ್ರಾಕೃತ ವ್ಯಾಕರಣದಂತೆ ಅವಕ್ಕೂ ಒಂದು ವ್ಯಾಕರಣವನ್ನು ಮಾಡಿಕೊಳ್ಳುವ. ಇಂಗ್ಲೀಷ್ ಭಾಷೆ ಇಷ್ಟು ಪ್ರಬಲವಾಗಿದ್ದರೂ ಸ್ಕಾಚ್, ವೆಲ್ಷ್ ಮೊದಲಾದುವು ಇನ್ನೂ ಹೋಗಿಲ್ಲವಷ್ಟೆ, ಹೋಗುವ ಹಾಗೂ ಇಲ್ಲವಷ್ಟೆ. ಗ್ರಂಥಭಾಷೆ ಒಂದೇ ಆದರೂ ಜನರು ಮನೆಯಲ್ಲಿ ಆಡುವುದನ್ನು ಬಿಡುವರೆಂಬುದು ಅಸಂಭವವು ಗ್ರಂಥಭಾಷೆಯಲ್ಲಿ ಗೋವಿನಕಥೆ ಮೊದಲಾದವುಗಳ ಮಟ್ಟನ್ನನುಸರಿಸಿ ಪದ್ಯಕಾವ್ಯಗಳನ್ನು ರಚಿಸುತ್ತ ಬರಬಹುದು. ಆದರೆ ಸಂಸ್ಕೃತದಿಂದ ತೆಗೆದುಕೊಂಡು ಪ್ರಸಿದ್ಧವಾಗಿರುವ ಛಂದಸ್ಸುಗಳಲ್ಲಿ ಮಗಣಾದಿಗಳು ಬರುವುದರಿಂದಲೂ ಯತಿಸ್ಥಾನಗಳಲ್ಲೆಲ್ಲಾ ಗುರುವರ್ಣವೇ ಪ್ರಾಯಕವಾಗಿರುವುದರಿಂದಲೂ ಗುರುವರ್ಣಗಳು ಕಡಿಮೆಯಾದ ಗ್ರಂಥಭಾಷೆ ಹೇಗೆ ಹೊಂದಿಕೊಳ್ಳುವುದೋ ನೋಡಿಕೊಂಡು ಆ ವೃತ್ತಗಳಲ್ಲಿಯೂ ಗ್ರಂಥಭಾಷೆಯನ್ನೇ ಪ್ರಯೋಗಿಸಬಹುದು

ಇನ್ನು ಶಬ್ದಗಳನ್ನು ಆರಿಸುವ ವಿಚಾರ ಮಾಡಬೇಕಾಗಿರುವುದು. ಹಳಗನ್ನಡದ ಮಾತುಗಳಾದರೂ ರೂಢಿಯಲ್ಲಿಲ್ಲದುವನ್ನು ಬಿಡುವುದೇ ಯುಕ್ತವು (ಉದಾ—ಪಳ್ಕ, ಗೆಂಟು ಇತ್ಯಾದಿ) ಸಂಸ್ಕೃತ ಶಬ್ದಗಳನ್ನು ಮರಾಠಿ ಮೊದಲಾದ ಭಾಷೆಗಳಲ್ಲಿ ಸ್ವಲ್ಪ ವ್ಯತ್ಯಸ್ತವಾದ ಅರ್ಥದಲ್ಲಿ ಪ್ರಯೋಗಿಸುವುದುಂಟು (ಉದಾ. ತ್ರಾಸ, ಸಂ—ಭಯ, ಮರಾಠಿ-ತೊಂದರೆ), ಇಂತಹವನ್ನು ಆರಿಸಿ ಆರಿಸಿ ತೆಗೆದುಹಾಕಿ ಸಂಸ್ಕೃತ ಶಬ್ದಗಳನ್ನು ತತ್ಸಮಾರ್ಥದಲ್ಲಿಯೇ ಪ್ರಯೋಗಿಸುತ್ತ ಬರಬೇಕು ಇನ್ನು ಕೆಲವರು ಸಂಸ್ಕೃತದಲ್ಲಿ ಒಂದು ಮುಖ್ಯಾರ್ಥವುಳ್ಳ ಶಬ್ದವನ್ನು ಸಾಮಾನ್ಯಾರ್ಥದಲ್ಲಿ ಪ್ರಯೋಗಿಸಹೋಗುವರು, ಉದಾ ನಿಮನ್ತ್ರಣ, ಸಂ.—ಶ್ರಾದ್ಧಭೋಜನಕ್ಕೆ ಕರೆವುದು, ಬಂಗಾಳಿ-ಬರಬೇಕೆಂದು ಆಹ್ವಾನಮಾಡುವುದು ಈ ವ್ಯತ್ಯಾಸವನ್ನು ಕಂಡುಹಿಡಿದು ಗಣನೆಗೆ ತಾರದೆ ಕೆಲವು ಪರಿವರ್ತಕರು ನಿಮನ್ತ್ರಣ ಶಬ್ದವನ್ನು ಬಂಗಾಳಿಯಲ್ಲಿ ಪ್ರಸಿದ್ಧವಾಗಿರುವ ಸಾಮಾನ್ಯಾರ್ಥದಲ್ಲಿ ಪ್ರಯೋಗಿಸಿ ಅಸಹ್ಯವಾಗುವಂತೆ ಮಾಡುವರು. 'ಮದುವೆಗೆ

ಬರಬೇಕೆಂದು ನಿಮನ್ತ್ರಣ ಕೊಟ್ಟಿರುವರು,' ಎಂದು ಕನ್ನಡದಲ್ಲಿ ಹೇಳಿದರೆ ಎಷ್ಟು ಆಭಾಸವಾಗುವುದೋ ಹೊಸದಾಗಿ ಹೇಳಬೇಕಾದುದಿಲ್ಲ ಇಂತಹ ದೋಷಗಳನ್ನು ಹೋಗಲಾಡಿಸಬೇಕಾದರೆ ಭಾಷೆಯನ್ನು ಚೆನ್ನಾಗಿ ತಿಳಿದಲ್ಲದೆ ಪರಿವರ್ತಿಸತೊಡಗಕೂಡದು, ಒಂದು ವೇಳೆ ಪರಿವರ್ತಿಸಿದರೂ ಆ ಭಾಷೆಯನ್ನು ತಿಳಿಯದ ವಿದ್ವಾಂಸರ ಕಯ್ಯಿಗೆ ಪರಿವರ್ತನೆಯನ್ನು ಕೊಟ್ಟು ಇಂತಹ ದೋಷಗಳೆಲ್ಲವನ್ನೂ ಹುಡುಕಿ ಕೊಡುವಂತೆ ಮಾಡಿ, ಬಳಿಕ ಪರಿವರ್ತಕರೇ ಸರಿಮಾಡುವುದು ಆವಶ್ಯಕವು ಅಪಭ್ರಂಶ ಶಬ್ದಗಳ ವಿಚಾರದಲ್ಲಿ ಪೂರ್ವದವರು ಅನುಸರಿಸಿರುವ ಪದ್ಧತಿಗಳನ್ನೇ ಅನುಸರಿಸುವುದು ಯುಕ್ತವು, ಉದಾ-ಉತ್ಪಾತಕಾ ಎಂಬುದನ್ನು 'ಉತ್ಪಾತಕೆ' ಎಂದು ಮಾಡುವುದೇ ಚೆನ್ನಾಗಿರುವುದು, 'ಉತ್ಪಾತಕಿ' ಎಂಬ ರೂಪಕ್ಕೆ ಆಕ್ಷೇಪ ಬಾಹುಳ್ಯವಿರುವುದು ಸಂಸ್ಕೃತ ಶಬ್ದಗಳನ್ನು ವಿಕಾರವಾಗದೆ ಪ್ರಯೋಗಿಸುವುದೇ ಚೆನ್ನಾಗಿದ್ದರೆ 'ಅದು ಕನ್ನಡಕ್ಕೆ ಹೇಗೆ ಒರುವುದು ?' ಎಂದು ಇಲ್ಲದ ಕ್ಲೇಶಕ್ಕೆ ಹೋಗಿ ಹೊಸತೊಂದು ದೋಷವನ್ನು ತರುವುದು ಯುಕ್ತವಲ್ಲ, ಉದಾ.-ಮೀಮಾಂಸಾಶಾಸ್ತ್ರ. 'ಮೀಮಾಂಸಾ' ಎಂಬುದು ಕನ್ನಡಕ್ಕೆ ಬರಬೇಕೋ ಇಲ್ಲವೋ ಎಂದು ಕಾರಣವನ್ನು ಹೇಳಿ 'ಮೀಮಾಂಸಶಾಸ್ತ್ರ' ಎಂದು ಪ್ರಯೋಗಮಾಡಿದರೆ ಅರಸಮಾಸದೋಷವು ಬಾರದೆ ಇರದು 'ಕಾರಣ' 'ನಿದಾನ' ಎಂಬ ಶಬ್ದಗಳು ಮರಾಠಿಯಲ್ಲಿ 'ಆದುದರಿಂದ' ಎಂಬರ್ಥದಲ್ಲಿ ಪ್ರಯೋಗಿಸಲ್ಪಡುವುವು, ಕೆಲವು ಪರಿವರ್ತಕರು 'ಕಾರಣ' ಇತ್ಯಾದಿ ಶಬ್ದಗಳನ್ನು ವಾಕ್ಯಾದಿಯಲ್ಲಿ 'ಆದುದರಿಂದ ಎಂಬರ್ಥದಲ್ಲಿ ಪ್ರಯೋಗಿಸ ಹೋಗುವರು ಇದು ಸರಿಯಲ್ಲ ಅನ್ಯದೇಶ್ಯ ಶಬ್ದಗಳನ್ನು ಉಪಯೋಗಿಸಲೇ ಬೇಕಾಗಿ ಬಂದರೆ ಅವನ್ನು " " ಈ ಚಿಹ್ನೆಗಳಿಂದ ಗುರುತುಮಾಡುವ ಪದ್ಧತಿಯಿಡಬೇಕು ಕಾಲಕ್ರಮದಿಂದ ಅವಕ್ಕೆ ಸರಿಯಾದ ತತ್ಸಮಾದಿ ಶಬ್ದಗಳು ದೊರೆತರೆ ಅವನ್ನು ಬಿಟ್ಟೇ ಬಿಟ್ಟು ಆ ತತ್ಸಮಾದಿ ಶಬ್ದಗಳನ್ನೇ ಪ್ರಯೋಗಿಸಬಹುದು 'ಹೊಗೆಬಂಡಿ' ಇತ್ಯಾದಿ ಶಬ್ದಗಳು ಕೆಲವು ಆಗಲೇ ರೂಢಿಗೆ ಬಂದಿರುವುವು ಅವನ್ನು ತಿದ್ದಿ 'ಹವೆಬಂಡಿ' ಇತ್ಯಾದಿಯಾಗಿ ಸರಿಮಾಡುವುದಕ್ಕಿಂತಲೂ ಹಾಗೇ ಬಿಡುವುದು ಲೇಸು ಉದಾಹರಣಾದಿ ಪ್ರಸಕ್ತಿಯಲ್ಲಿ A ಎಂಬುವನು B ಎಂಬುವನಿಗೆ ಇತ್ಯಾದಿಯಾಗಿ ಇಂಗ್ಲೀಷಿನಲ್ಲಿ ಹೇಳುವುದನ್ನು ಕೆಲವರು 'ಅ' ಎಂಬುವನು 'ಇ' ಎಂಬುವನಿಗೆ ಎಂದು ಹೇಳ ಹೋಗುವರು, ಇದಕ್ಕಿಂತಲೂ ಸಂಸ್ಕೃತದಲ್ಲಿ ರೂಢವಾಗಿರುವ ಪದ್ಧತಿಯನ್ನನುಸರಿಸಿ ''ದೇವದತ್ತನು ಯಜ್ಞದತ್ತನಿಗೆ ನೂರು ಹಣಗಳನ್ನು ಕೊಟ್ಟನು ಅದಕ್ಕೆ ವಿಷ್ಣುದತ್ತನೂ ರುದ್ರದತ್ತನೂ ಸಾಕ್ಷಿಗಳು.'' ಇತ್ಯಾದಿಯಾಗಿ ಹೇಳುವುದು ವಿಷ್ಟೋ ಚನ್ನಾಗಿರುವುದು. 'ಆಗ' 'ಈಗ' ಎಂಬ ಶಬ್ದಗಳೇ ಸಾಕಾಗಿರಲು 'ಆಗ್ಗೆ' 'ಆಗ್ಯೆ' 'ಈಗ್ಗೆ' 'ಈಗ್ಯೆ' 'ಇತ್ಯಾದಿ ನಿಮೂರ್ಲ ರೂಪಗಳನ್ನು ಪ್ರಯೋಗಿಸುವುದನ್ನು ಬಿಡಬೇಕು ಅವ್ಯಕ್ತಭಾಷಿತ್ವವನ್ನು ಮನಸ್ಸಿನಲ್ಲಿಟ್ಟುಕೊಂಡರೆ ಅನೇಕ ಶಬ್ದದೋಷಗಳನ್ನು ತಿದ್ದಿ ಸರಿಮಾಡಬಹುದು ಉದಾ. ಭ್ರಾಂತು, ಭ್ರಾಂತಿ, ಪೂರ್ವಿಕ, ಪೂರ್ವಕ ಇತ್ಯಾದಿ.

ಇನ್ನು ಪದಸಂಯೋಜನೆಯಲ್ಲಿ (Idiom) ಅನೇಕರು ತಪ್ಪುಮಾಡುವರು. ಅನ್ಯಭಾಷೆಗಳ ಸರಣಿಗಳನ್ನು ಅನುಕರಿಸುವುದೇ ಇದಕ್ಕೆ ಕಾರಣವು ಉದಾಹರಣೆಗಾಗಿ 'ಮೇಲಿಂದ ಮೇಲೆ ಪತ್ರ ಬರೆಯಿರಿ'—'ಮೇಲಿಂದ ಮೇಲೆ' ಎಂಬುದು ಮರಾಠಿಯ 'ವರ್‌ಚೇವರ'' ಎಂಬುದರ ಪರಿವರ್ತನವು 'ಪತ್ರ' ಎಂಬಶಬ್ದವನ್ನು ವೈಸೂರಿನ ಕಡೆಯಲ್ಲಿ 'ಹಣಕಾಸಿನ ವ್ಯವಹಾರದ ಪತ್ರ' ವೆಂಬರ್ಥದಲ್ಲಿ ಪ್ರಯೋಗಿಸುವರು, ಇಲ್ಲಿನ ಪತ್ರ (Letter) ಶಬ್ದದ ಅರ್ಥದಲ್ಲಿ ''ಪತ್ರಿಕೆ' ಎಂಬ ಶಬ್ದವನ್ನು ಪ್ರಯೋಗಿಸುವರು ಹಾಗೆಯೇ 'ಪೇಟೆಯಲ್ಲಿ ಹೋದರೆ' ಎಂಬುದು ಅನ್ಯಭಾಷೆಯ ಪರಿವರ್ತನೆ, (ಬಜಾರ್‌ಮೇಗಯೇತೋ). 'ಜ್ವರದ ಮೇಲೆ ರಾಮಬಾಣ ಔಷಧ' ಇದೂ ಮರಾಠಿಯ ಸರಣಿಯನ್ನನುಸರಿಸಿದುದು 'ಜ್ವರಕ್ಕೆ' ಔಷಧವೆಂದಾಗಲಿ ಜ್ವರದ ಔಷಧವೆಂದಾಗಲಿ ಹೇಳುವುದು ಕರ್ಣಾಟಸರಣಿ. 'ನನ್ನ ಬೆನ್ನಲ್ಲಿ ಬಿದ್ದಿದ್ದರು ಎಂಬುದೂ ಹಾಗೆಯೇ ('ಪೀಠ್‌ಲಗನಾ), 'ಬೆನ್ನಲ್ಲಿ ಬೀಳುವುದು' ಎಂದರೆ ತಮ್ಮನಾಗಿಯೋ ತಂಗಿಯಾಗಿಯೋ ಹುಟ್ಟುವುದೆಂದು ಕನ್ನಡದಲ್ಲಿ ಅರ್ಥವು 'ಅನುಸರಿಸಿನ್ನಿಂದಾಗಬೇಕು' ಎಂದು ಬೇರೆ ಅದಕ್ಕೆ ಅರ್ಥವಾಗುವುದಿಲ್ಲ 'ಅದರಮೇಲೆ ಅವಲಂಬಿಸಿರುವುದು' (It depends upon that) ಎಂಬುದು ಕನ್ನಡವಲ್ಲ' 'ಅವನ್ನು ಅವಲಂಬಿಸುವುದು' ಎಂದು ಹೇಳುವುದು ಹಾಗೆಯೇ 'ಕರ್ಣಾಟಭಾಷೆಯೂ ಅದರ ಪೂರ್ವೋತ್ತರಗಳು(Kanarese Language and its past and present) ಇದೂ ಇಂಗ್ಲೀಷಿನ ಪರಿವರ್ತನೆ 'ಪೂರ್ವೋತ್ತರ' ವೆಂದರೆ 'ನಿನ್ನ ಪೂರ್ವೋತ್ತರವನ್ನು ತಿಳಿಯಪಡಿಸುವೆನು' ಎಂಬ ಮಾತು ನೆನೆಪಿಗೆ ಬರುವುದು, ಎಂದರೆ ನೀನು ಮರೆಸಿ ಹೋಗಿ ನೀನು ಯಾರೆಂಬುದನ್ನು ಮರೆತಿರುವೆ, ಅದನ್ನು ಹೊರಗೆಡಹಿ ಇನ್ನು ಮುಂದೆ ಪಶ್ಚಾತ್ತಾಪಪಡುತ್ತಾ ಹೀನದಶೆಯನ್ನನುಭವಿಸುವಂತೆ ಮಾಡುವೆನು' ಎಂದರ್ಥವು ಹಾಗೆಯೇ 'ಮೊಸರು ಮಜ್ಜಿಗೆ ತಿನ್ನುವುದು' (ಮೊಸರು ಮಜ್ಜಿಗೆ ಹಾಕಿಕೊಳ್ಳುವುದು) (ದಹಿಖಾನಾ) ಇತ್ಯಾದಿಗಳನ್ನು ಬಿಡಬೇಕು ಈ ಅನ್ಯಭಾಷೆಗಳ ಸರಣಿಗಳು ಕರ್ಣಾಟಭಾಷೆಯ ನೈಸರ್ಗಿಕ ಕುಶಲತೆಯನ್ನು ಹಾಳುಮಾಡದ ಹಾಗೆ ನೋಡಿಕೊಳ್ಳುವುದು ಪ್ರಧಾನಕಾರ್ಯವು

ವಾಕ್ಯರಚನೆಯಲ್ಲಿ ಕರ್ತೃ, ಕರ್ಮ, ಕ್ರಿಯೆ,—ಎಂಬ ಕ್ರಮವನ್ನನುಸರಿಸಿ ಹೋಗಬೇಕಾದುದು ಕನ್ನಡದ ಪದ್ಧತಿ. ಇದನ್ನು ಪರಿವರ್ತಕರು ಚೆನ್ನಾಗಿ ಜ್ಞಾಪಕದಲ್ಲಿಡಬೇಕು ಮರಾಠಿ, ಹಿಂದಿ, ಬಂಗಾಳಿ ಭಾಷೆಗಳಲ್ಲಿ ಕ್ರಿಯಾಪದವನ್ನು ಮೊದಲು ಹಾಕಿ ಬರೆವ ಸಂಪ್ರದಾಯವಿರುವುದು ಇದನ್ನು ಕನ್ನಡಕ್ಕೆ ತಂದರೆ ಶ್ರಾವ್ಯವಾಗುವುದಿಲ್ಲ. ಉದಾಹರಣೆಗಾಗಿ,—'ಹೇಳಿಬಿಟ್ಟಳು—'ನೀನಿಲ್ಲಿಗೇಕೆ ಬಂದೆ ? ಇನ್ನೂ ''(ವಿಶ್ವಾಮಿತ್ರನು) ಅತ್ಯುಗ್ರಸಮಾಧಿಯಲ್ಲಿ ಸಂಪೂರ್ಣವಾಗಿ ಅಭಿನಿವಿಷ್ಟನಾದನು. ಶರೀರವು ಶೋಷಿಸಿತು. ಶೀತ—ಗ್ರೀಷ್ಮ—ವರ್ಷಾ—ವಸಂತಗಳ ಅತ್ಯುಪಹತಿಗೆ ಆತನ ಅಂಗಾಂಗಗಳು ಆಸ್ಪದಮಾಡಲ್ಪಟ್ಟುವು ಇದೆಲ್ಲಕಿಂತ ಈತನು ಸಂಜ್ಞಾಹೀನ, ಅಚೇತನ, ಸಂಪೂ

ಧ್ಯಾನನಿಮಗ್ನ, ಚಕ್ಷುಗಳು ಕೋಟರಗತ, ನಾಸಿಕಮಧ್ಯೇ ಅಸ್ಥಿಮಾತ್ರ, ಅದ್ಯಂತ ಶರೀರವೂ ಚರ್ಮಮಾತ್ರ ಅವಶೇಷಿತ'' (ಜಯವಾಲ್ಮೀಕಿ ಪು. ೩೫) ಇದು ಬಂಗಾಳಿಯ ಸರಣಿ, ಪರಿವರ್ತನೆ ಮಾಡುವ ಕಾಲದಲ್ಲಿ ಇಂತಹವನ್ನೆಲ್ಲಾ ಕನ್ನಡದ ಸರಣಿಗೆ ತಿರುಗಿಸಿಬಿಟ್ಟರೆ ಸರ್ವೋತ್ತಮವಾಗುವುದು ಪರಿವರ್ತಿಸುವ ಕಾಲದಲ್ಲಿ ಬೇಡವೆಂದರೂ ಮೂಲಗ್ರಂಥದ ಶೈಲಿಯನ್ನೇ ಅನುಕರಿಸುವಂತಾಗುವುದು ಸಹಜವು ಆದರೂ ಸ್ವಲ್ಪಕಾಲದ ಮೇಲೆ ಮೂಲವನ್ನು ನೋಡದ ಪರಿವರ್ತನೆಯನ್ನೇ ನೋಡಿದರೆ ನಿಜಸ್ಥಿತಿ ತೋರಬರುವುದು,–ಆಗ ಸರಿಮಾಡಿಬಿಡಬಹುದು. ಅದೇ ಗ್ರಂಥದ ಆದಿಯಲ್ಲಿ "ವರ್ಷಾನಿಶ್ಶೇಷಿತ, ಶರತ್‌ಉಪಸ್ಥಿತ–ಆಕಾಶವು ಪರಿಷ್ಕಾರ, ಮೋಡದ ಲೇಶಮಾತ್ರವೂ ಇಲ್ಲ, ಸರ್ವತ್ರನೀಲಪರ್ಣ –'' ಇತ್ಯಾದಿಯಾಗಿರುವುದು. ಇದನ್ನೇ 'ನಮ್ಮ ಕಥೆ ಆರಂಭವಾಗುವಾಗ ಸಮಯವು ಹೇಗಿತ್ತೆಂದರೆ, ವರ್ಷಾಕಾಲವು ನಿಶ್ಶೇಷವಾಗಿ ಕಳೆದುಹೋಗಿತ್ತು. ಶರತ್ಕಾಲವು ಉಪಸ್ಥಿತವಾಗಿತ್ತು - ಇತ್ಯಾದಿಯಾಗಿ ಬರೆದರೆ ಕನ್ನಡ ಸರಣಿಯಾಯ್ತು ಅರ್ಥಮಾಡಿಕೊಳ್ಳುವ ವಿಚಾರವಲ್ಲ. ಕನ್ನಡದ ಸರಣಿಯೆಂದು ಒಂದಿರುವಾಗ ಅದೇ ಇರಲಿ

ಇನ್ನು ಅಲಂಕಾರವಿಚಾರವಾಗಿ ಒಂದೊಂದು ಭಾಷೆಯ ಅಲಂಕಾರಗಳು ಅದರಕ್ಕೆ ಸರಿಯಾಗಿರುವುವು. ಇನ್ನೊಂದುಭಾಷೆಯ ಅಲಂಕಾರವನ್ನು ಪರಿವರ್ತಿಸಿ ತಂದರೆ ಅದು ಹೊಂದುವುದಿಲ್ಲ ಉದಾ. 'ಕವಿತೆಯೆಂದರೆ ಒಣಮಾತುಗಳ ಸರವೆಂದು ತಿಳಿದು ಓಣಿ ಓಣಿಯಲ್ಲಿ ಈಗೀಗ ಸ್ವಲ್ಪ ಕನ್ನಡವನ್ನು ಓರೆಗಣ್ಣಿಂದ ನೋಡಿದವನೂ ಕವಿತೆಯ ಹಡಪವನ್ನು ಹಿಡಿದು ಹೊರಡುವನು (ವಾಗ್ಭೂಷಣ, ನೊವೆಂಬರ್ ೧೯೧೬, ಪು, ೫). ಇದು ಇಂಗ್ಲೀಷಿನಲ್ಲಿ ಚೆನ್ನಾಗಿ ಹೊಂದುವುದು 'ಒಣಮಾತುಗಳ ಸರ'–(a string of dry words,) ಸ್ವಲ್ಪ ಕನ್ನಡವನ್ನು ಓರೆಗಣ್ಣಿನಿಂದ ನೋಡಿದವನೂ– (even he who has slightly glanced at Kanarese) ಇತ್ಯಾದಿ ಹಾಗೆಯೇ ಅದೇ ಪ್ರಬಂಧದಲ್ಲಿ 'ವ್ಯಕ್ತಿಯಭಾವದಲ್ಲಿ ಆಗಬೇಕಾಗುವ ವರ್ತನದ ಪರಿವರ್ತನವು ರಾಷ್ಟ್ರಭಾಷೆಯ ಸ್ವತಂತ್ರ ಕವಿತೆಯನ್ನವಲಂಬಿಸಿರುವುದು 'ಒಂದು ವ್ಯಕ್ತಿಯ ಮನಸ್ಸಿನಲ್ಲಿ ಒಂದು ಭಾಗವನ್ನು ಅಂಟಿಸಬೇಕಾದರೆ ನಾಲ್ಕಾರು ಜೀವಗ ಮಾತುಗಳ ಅವಶ್ಯಕತೆಯುಂಟು,' ಇತ್ಯಾದಿ ವಾಕ್ಯಗಳಿರುವುವು ಇಂಗ್ಲೀಷ್ ಭಾಷೆಯ ಧೋರಣೆಯನ್ನರಿಯದವನಿಗೆ ಇದರ ಅರ್ಥವು ಸ್ಫೂರ್ತಿಯಾಗುವುದೇ ಎಂಬಂಶವು ಚಿಂತ್ಯವಾಗಿರುವುದು ಇಂತಹ ಸ್ಥಳಗಳಲ್ಲಿ ನಮ್ಮ ಪದ್ಧತಿಯನ್ನೇ ಅನುಸರಿಸುವುದಕ್ಕಾದರೆ ಸರಿ, ಇಲ್ಲದಿದ್ದರೆ ಚೆನ್ನಾಗಿ ಅವರೂ ವಿವರಿಸಿ ಕನ್ನಡವನ್ನೊಂದನ್ನೇ ಅರಿತವನಿಗೆ ಅರ್ಥಸ್ಫೂರ್ತಿಯಾಗುವಂತಾದರೂ ಮಾಡಲೇಬೇಕು 'ವ್ಯಕ್ತಿ' (individual) ಎಂಬ ಮಾತೇಕೆ? 'ಮನುಷ್ಯ' ಅಂದರೆ ಆಗದೇ? 'ಮನುಷ್ಯ' ಎಂಬುದು ಪುಲ್ಲಿಂಗವಾದರೂ ಲಿಂಗ, ವಚನ, ದೇಶ, ಕಾಲ, ಕರ್ಮಫಲ–ಇವಯುಕ್ತ ಅನುಪಾದೇಯಗಳೆಂದು ನಮ್ಮ ಸಂಕೇತವಲ್ಲವೆ? 'ಹುಟ್ಟಿದವನು ಸಾಯುವನು' ಎಂದರೆ 'ಹುಟ್ಟಿದವಳು ಸಾವಳು'

ಎಂದು ಬೇರೆ ಹೇಳಬೇಕೇ ? 'ಜೀವದ ಮಾತುಗಳು (lively words) ಇದು ತಟ್ಟನೆ ಕನ್ನಡಿಗರಿಗೆ ಅರ್ಥವಾಗುವುದೇ ? ಈ ಭಾಗದಲ್ಲಿಯೂ ದೃಷ್ಟಿಯಿರಬೇಕು.

ಪಾರಿಭಾಷಿಕ ಶಬ್ದಗಳ (Technical terms) ವಿಚಾರವನ್ನು ಕೊಂಚ ಮಾಡಬೇಕಾಗಿರುವುದು. ಪಾರಿಭಾಷಿಕ ಶಬ್ದಗಳನ್ನು ಮೊದಲುಮಾಡಿಟ್ಟುಕೊಂಡು ಅವನ್ನು ಪ್ರಯೋಗಿಸುವುದಕ್ಕಿಂತಲೂ ಯಾವ ಯಾವ ಶಾಸ್ತ್ರಕಲಾದಿಗಳಲ್ಲಿ ಪಾರಿಭಾಷಿಕ ಶಬ್ದಗಳು ಬೇಕಾಗಿರುವುವೋ ಆ ಆ ಶಾಸ್ತ್ರಾದಿಗಳ ಮೇಲೆ ಗ್ರಂಥಗಳನ್ನೇ ಬರೆದು ಆ ಗ್ರಂಥಗಳಲ್ಲಿ ಪ್ರಯೋಗಿಸಿರುವ ಶಬ್ದಗಳು ಸಾಧುವಾಗಿ ಕಾಣಬಂದರೆ ಅವನ್ನು ಪಾರಿಭಾಷಿಕಗಳಾಗಿ ಇಟ್ಟುಕೊಳ್ಳುವುದು ಉತ್ತಮವು ಉದಾಹರಣೆಗಾಗಿ,-ಅಲಂಕಾರ, ವ್ಯವಹಾರ, ವೈದ್ಯ, ಗಣಿತ, ಭೌತಿಕಕಲಾ,—ಇತ್ಯಾದಿಗಳಲ್ಲಿ ಪಾರಿಭಾಷಿಕ ಶಬ್ದಗಳು ಅವಶ್ಯಕವಾಗಿರುವುವು ಯಾವ ಪಾರಿಭಾಷಿಕಶಬ್ದವಾದರೂ ಅದು ಕನ್ನಡಿಗರಿಗೆ ತಿಳಿಯಬೇಕಾದುದು ಅವಶ್ಯಕವಾದುದರಿಂದ ಅವನ್ನು ಸಂಸ್ಕೃತದಿಂದಲೇ ತೆಗೆದುಕೊಂಡರೆ ಉತ್ತಮವು ಎಂದರೆ ಮೊತ್ತಮೊದಲು ಸಂಸ್ಕೃತ ಗ್ರಂಥಗಳ ಆಧಾರದ ಮೇಲೆ ಆ ಆ ಗ್ರಂಥಗಳನ್ನು ರಚಿಸಬೇಕು ಇಲ್ಲಿ ಗ್ರಂಥರಚನೆಯೆಂದರೆ ಪರಿವರ್ತನೆಯೆಂದು ಭಾವಿಸಕೂಡದು ಸ್ವತಂತ್ರಗ್ರಂಥಗಳನ್ನು ರಚಿಸಬೇಕೆಂದು ಅಭಿಪ್ರಾಯವು

† ವಿಷಯವು ಸಂದೇಹವಿಲ್ಲದೆ ಚೆನ್ನಾಗಿ ಸ್ಫೂರ್ತಿಯಾಗುವಂತೆ ಮಾಡುತ್ತಾ ಪಾರಿಭಾಷಿಕ ಶಬ್ದಗಳನ್ನೆಲ್ಲಾ ಅವ್ಯಾಪ್ತಿಗೂ ಅತಿವ್ಯಾಪ್ತಿಗೂ ಅವಕಾಶವಿಲ್ಲದಂತೆ ವಿವರಿಸಿ ಅವುಗಳಿಗೆ, ಮನಸ್ಸಿಗೆ ಚೆನ್ನಾಗಿ ಹಿಡಿವುದಕ್ಕೆ ಸಾಕಾಗುವಷ್ಟು ಉದಾಹರಣೆಗಳನ್ನು ಕೊಡುತ್ತ ಹೋಗಬೇಕು ಹಾಗೆ ಗ್ರಂಥಗಳನ್ನು ರಚಿಸುವವರು ಸಂಸ್ಕೃತವನ್ನು ಚೆನ್ನಾಗಿ ತಿಳಿದವರಾಗಿ, ಕನ್ನಡವನ್ನೂ ಚೆನ್ನಾಗಿ ತಿಳಿದು, ಗ್ರಂಥರಚನಾಶಕ್ತಿಯನ್ನು ಪ್ರಕಾಶಪಡಿಸಿಕೊಂಡವರಾಗಿರಬೇಕು ಯಾವ ಯಾವ ಪಾರಿಭಾಷಿಕ ಶಬ್ದವು ಯಾವ ಯಾವ ಕೆಲಸಕ್ಕೆ ಬರುವುದೋ ಎಂದು ನಿರ್ಧರಿಸಿ ಅದಕ್ಕೆ ಸಮಾನಾರ್ಥಕವಾದ ಇಂಗ್ಲಿಷಿನ ಪಾರಿಭಾಷಿಕ ಶಬ್ದವನ್ನೂ ತಿಳಿಯಪಡಿಸುವುದು ಅವರ ಮುಖ್ಯಕರ್ತವ್ಯವಾದ ಕಾರಣ ಅವರು 'ಯೂನಿವರ್ಸಿಟಿಯ ಡಿಗ್ರಿ' ಯನ್ನು ಪಡೆದವರೇ ಆದರೆ ಸರ್ವೋತ್ತಮವಾಗುವುದು ಪಂಡಿತರೂ ಸಂಸ್ಕೃತವನ್ನರಿಯದ 'ಗ್ರಾಜ್ಯುಯೇಟ್' ರೂ ಸೇರಿ ಕಾರ್ಯನಿರ್ವಾಹಮಾಡುವುದು ಸಾಧ್ಯವಾದರೆ ಹಾಗೂ ಆಗಬಹುದು ಹಾಗೆ ಗ್ರಂಥವನ್ನು ರಚಿಸುವುದಕ್ಕೆ ಹೊರಡುವವರು ಶಬ್ದರೂಪಾದಿಗಳ ವಿಷಯಗಳಲ್ಲಿ ಮೇಲೆ ಹೇಳಿದ ನಿಯಮಗಳನ್ನು ಅನುಸರಿಸಬೇಕು ಮರಾಠಿ, ಹಿಂದಿ, ಮೊದಲಾದ ಭಾಷೆಗಳನ್ನರಿತವರಾಗಿ ಅನ್ಯಭಾಷೆಯ ಸರಣಿಗಳನ್ನು ಗೊತ್ತು ಮಾಡುವುದಕ್ಕೆ ಬಂದವರೂ ಆದರೆ ಸುವರ್ಣಕ್ಕೆ ಪರಿಮಳವಾಯಿತು ಅವರೇನಾದರೂ ಹೊಸತಾಗಿ ಪಾರಿಭಾಷಿಕ ಶಬ್ದ

† E I Sohm's "Institutes", better still, Savigny's "Modern Systems of Law"

ಗಳನ್ನು ಕಲ್ಪಿಸಿಕೊಂಡರೆ, ಅವು ಚೆನ್ನಾಗಿದ್ದ ಪಕ್ಷದಲ್ಲಿ ಅವಕ್ಕಿಂತಲೂ ಉತ್ತಮವಾದುವು ದೊರೆವವರೆಗೂ ಇಟ್ಟುಕೊಳ್ಳಬಹುದು. ಶಬ್ದಾರ್ಥಕ್ಕೂ ಪಾರಿಭಾಷಿಕಾರ್ಥಕ್ಕೂ ಚೆನ್ನಾಗಿ ವ್ಯತ್ಯಾಸವನ್ನು ಗೊತ್ತುಮಾಡುವುದು ಮೊದಲನೆಯ ಕೆಲಸವಾಗಬೇಕು. ಉದಾ—ಕ್ರಿಯಾನಿರ್ದೇಶ—ಈ ಶಬ್ದವನ್ನು ನೋಡಿದಕೂಡಲೇ ಏನೋ ಅರ್ಥವಾಗುವ ಹಾಗಿದ್ದರೂ, ಇದರ ಪಾರಿಭಾಷಿಕಾರ್ಥವು ಬೇರೆ. ಇಲ್ಲಿ ಕ್ರಿಯೆಯೆಂದರೆ ಪ್ರಮಾಣ (Evidence) ನಿರ್ದೇಶ (Production) ವೆಂದರೆ ತಂದು ಮುಂದಿಡುವುದು, ಎಂದರೆ ಅರ್ಥಿಯಾದವನು (The party claiming the judgment) ತನ್ನ ವಿವಾದವು ಯಥಾರ್ಥವಾದುದೆಂದೂ ತನ್ನ ಪರವಾಗಿ ನಿರ್ಣಯ (judgment) ವಾಗಬೇಕೆಂದೂ ಹೇಳಿ, ಅದಕ್ಕೆ ತಕ್ಕ ಸಾಕ್ಷ್ಯಾದಿ ಸಾಧನಗಳನ್ನು ಕೊಡುವುದು ಎಂದರ್ಥವು. ಹೀಗೆಯೇ ಎಷ್ಟೋ ಉಂಟು. ಇಂತಹ ಗ್ರಂಥಗಳು ಬರೆಯಲ್ಪಟ್ಟ ಮೇಲೆ ನಾಲ್ಕೈದು ವಹಿವಿದ್ವಾಂಸರು ಅದನ್ನು ಪರೀಕ್ಷಿಸಿ ಎಲ್ಲಾದರೂ ಸಂದಿಗ್ಧವಾಗಿರುವುದೇ, ಪಾರಿಭಾಷಿಕ ಶಬ್ದಗಳಿಗೆಲ್ಲಾ ಲಕ್ಷಣಗಳು ಸರಿಯಾಗಿರುವುವೇ, ಅವುಗಳಿಗೆ ಉದಾಹರಣೆ ಸಾಕೇ, ಇತ್ಯಾದಿ ವಿಷಯಗಳನ್ನೆಲ್ಲಾ ಗೊತ್ತುಮಾಡಿ ನ್ಯೂನಾತಿರಿಕ್ತತೆಗಳನ್ನೆಲ್ಲಾ ಗ್ರಂಥಕಾರನಿಂದಲೇ ಸರಿಮಾಡಿಸಿ ಪಾರಿಭಾಷಿಕ ಶಬ್ದಗಳಲ್ಲಿ ಅಕ್ಷರಸ್ಖಾಲಿತ್ಯಾದಿ ದೋಷಗಳು ಬೀಳದ ಹಾಗೆ ಗ್ರಂಥಕಾರನೇ 'ಪ್ರೂಫುಗಳನ್ನು' ನೋಡುವಂತೆ ಮಾಡಿ ಅನಂತರದಲ್ಲಿ ಪ್ರಕಟಿಸಬೇಕು.

ಇದರೊಡನೆಯೇ ಇನ್ನೊಂದೂ ಮಾಡಬೇಕಾಗುವುದು. ಶಾಸ್ತ್ರಕಲಾದಿ ವಿಚಾರಗಳಿಗಾಗಿಯೇ ತಕ್ಕುದಾದ ಒಂದು "ಜರ್ನಲ್" ಅನ್ನು ಪ್ರಕಟಿಸುವುದು ಉತ್ತಮವು. ಮೇಲೆ ಹೇಳಿದಂತಹ ಗ್ರಂಥಗಳು ಪ್ರಕಟಿತವಾದ ಕೂಡಲೇ ವಿದ್ವಾಂಸರಾದವರು ಅವುಗಳ ವಿಷಯವಾಗಿ ಸದಸದ್ವಿಚಾರವನ್ನು ಆ "ಜರ್ನಲ್" ನಲ್ಲಿ ಮಾಡಬಹುದು. ಇದರಿಂದ ಎಲ್ಲಾ ದೋಷಗಳೂ ನಿವೃತ್ತಿಯಾಗಿ ಸಿದ್ಧಾಂತವು ಚೆನ್ನಾಗುವುದು. ಅದೇ ಜರ್ನಲ್ಲಿನಲ್ಲಿಯೇ ಪಾರಿಭಾಷಿಕ ಶಬ್ದಗಳ ಆದ್ಯಂತ ವಿಚಾರವನ್ನು ಮಾಡಬಲ್ಲವರು ಮಾಡಬಹುದು. ಇದರಿಂದ ಎಷ್ಟೋ ಪ್ರಯೋಜನವಾಗುವುದು. ಅದು ಬಿಟ್ಟು ಇಂಗ್ಲಿಷಿನ ಪಾರಿಭಾಷಿಕ ಶಬ್ದಗಳನ್ನು ತೆಗೆದುಕೊಂಡು ಹೇಗೆ ಹೇಗೋ ಪಾರಿಭಾಷಿಕ ಶಬ್ದಗಳನ್ನು ಕಲ್ಪಿಸಿ ಬರೆದಿಟ್ಟುಕೊಂಡು ಬೇಕಾದಾಗ 'ಪಟ್ಟಿ' ಯನ್ನು ನೋಡಿ ಹಾಕುತ್ತಾ ಹೂರಟರೆ ಹೊಂದಿಕೊಳ್ಳುವುದು ಕಾಕತಾಳ ನ್ಯಾಯವಾಗುವುದು. ಒಂದು ವೇಳೆ "ರೇಷಿಮೆಯಿಂದ ಗಾಜಿನ ದೊಣ್ಣೆಯನ್ನು ರೇಗಿಸಿದರೆ ..." (If you excite a glass rod with silk ...) ಎಂಬಂತೆ ಆಭಾಸವಾದರೂ ಆಗಬಹುದು. ಗ್ರಂಥರಚನೆ ಮಾಡಿ ಪಾರಿಭಾಷಿಕ ಶಬ್ದಗಳು ಸ್ಥಿರವಾಗುವವರಗೂ ಹೇಗೆ ನಿರ್ವಹಿಸಬೇಕೆಂದರೆ ಮಾರಿ ಬಂದ ಸ್ಥಳಗಳಲ್ಲಿ ಇಂಗ್ಲಿಷ್ ಮೊದಲಾದ ಭಾಷೆಗಳ ಶಬ್ದಗಳನ್ನೇ ಇಟ್ಟುಕೊಂಡಿದ್ದು ಕ್ರಮಕ್ರಮವಾಗಿ ಅವನ್ನು ತೆಗೆದುಹಾಕಬಹುದು.

ಸಂಸ್ಕೃತದ ಆಧಾರದಮೇಲೆ ಬರೆಯಬೇಕಾದ ಗ್ರಂಥಗಳಲ್ಲಿ ಅಲಂಕಾರ ಗ್ರಂಥವೊಂದು. ಅಲಂಕಾರವೆಂದರೆ ಅರ್ಥಾಲಂಕಾರವೊಂದೇ ಅಲ್ಲ, ಅದರಲ್ಲಿ ನಾಯಕ, ಕಾವ್ಯ, ನಾಟಕ, ರಸ, ಗುಣ, ದೋಷ, ಚಿತ್ರಾಲಂಕಾರ, ಅರ್ಥಾಲಂಕಾರ, ಮಿಶ್ರಾಲಂಕಾರ, ಕವಿಸಮಯ—ಎಂಬ ಹತ್ತು ಪ್ರಕರಣಗಳಿರುವುವು. ಇವುಗಳಲ್ಲಿ ಧ್ವನಿ ರಸಾಲಂಕಾರ,-ಇತ್ಯಾದಿ ಅವಾಂತರ ಭೇದಗಳು ಬೇರೆ ಇರುವುವು. ಇವನ್ನು ಚನ್ನಾಗಿ ತಿಳಿದುಕೊಳ್ಳುವುದರಿಂದ ಕಾವ್ಯಕ್ಕೆ ಸಂಬಂಧಪಡುವ ಗುಣದೋಷಗಳ ಜ್ಞಾನವುಂಟಾಗುವುದು. ಎಷ್ಟೋ ಪಾರಿಭಾಷಿಕ ಶಬ್ದಗಳೂ ತಿಳಿಯಬರುವುವು. ಹೀಗೆ ಪೂರ್ವಪದ್ಧತಿಯನ್ನು ತಿಳಿದುಕೊಂಡು ಆಧುನಿಕಸಂಪ್ರದಾಯವನ್ನೂ ತಿಳಿದುಕೊಂಡರೆ, ಆಗ ಬರೆದ ಗ್ರಂಥಗಳೆಲ್ಲವೂ ಅತ್ಯುತ್ಕೃಷ್ಟವಾಗುವುವು.

ಪ್ರಶ್ನಾರ್ಥಕ ಸರ್ವನಾಮಗಳ ವಿಚಾರವಾದರೆ ಕೇವಲ ಸೂಕ್ಷ್ಮವಾಗಿರುವುದು. ಬರೆವಕಾಲದಲ್ಲಿ 'ಯಾಕೆ' ಎಂಬ ರೂಪವನ್ನು ಬಿಟ್ಟು 'ಏಕೆ' ಎಂಬ ರೂಪವನ್ನೇ ಅಂಗೀಕರಿಸಬೇಕೆಂದು ಬುದ್ಧಿ ಹೋಗುವುದು. ನಿರ್ನಿಮಿತ್ತವಾಗಿ ಯಕಾರ ವಕಾರಗಳನ್ನು ತಂದು 'ವ್ಯಾಳೆ' 'ಹ್ಯಾಗೆ' 'ಪ್ಯಾಟೆ' 'ನ್ಯಸ್ಸ' 'ಕ್ವತ್ತುಂಬರಿ' 'ಕ್ವಂಬರಿ' 'ಕ್ವಾಟೆ' 'ಕ್ವಟ್ಟಿಗೆ' ಇತ್ಯಾದಿ ರೂಪಗಳನ್ನು ಮಾಡಿದರೆ ಕಿವಿಯ ಹತ್ತಿರ ಒಡಕು ಜಾಗಟೆಯನ್ನು ಬಾರಿಸಿದಹಾಗಾಗುವುದು, ಹಾಗೆ ಮಾತನಾಡುವರು ಎಲ್ಲಿಯೋ ಗ್ರಾಮೀಣರೆಂದು ತೋರುವುದು. ಆದರೂ 'ಯಾವನು' 'ಯಾವಳು' 'ಯಾರು' 'ಯಾವುದು' ಎಂಬವುಗಳಲ್ಲಿ ಎಲ್ಲರೂ ಯಕಾರವನ್ನು ಸಾಮಾನ್ಯವಾಗಿ ತರುತ್ತಿರುವರು. ಕೆಲವರು ಧೈರ್ಯವನ್ನು ತಾಳಿ 'ಆರು' 'ಆವನು' ಇತ್ಯಾದಿ ರೂಪಗಳನ್ನೇ ಪ್ರಯೋಗಿಸುತ್ತಿರುವರು. 'ಏಕೆ' ಎನ್ನುವ ಸ್ಥಳದಲ್ಲಿ ಯಕಾರವನ್ನು ಬಿಡಬಹುದು, 'ಆವುದು' ಎನ್ನುವ ಸ್ಥಳದಲ್ಲಿ 'ಏಸು' ಬಂದಿರುವುದು—ಎಂದು ಅವರು ಹೇಳುವಕಾರಣವೂ ಯುಕ್ತವಾಗಿಯೇ ಇರುವುದು. ಯಕಾರವನ್ನು ಬಿಡಿರೆಂದರೆ ಎಲ್ಲಿ ಸ್ವಪ್ರಾಜ್ಞತಾವಿದ್ಯೋತನ ದೋಷವಾಗುವುದೋ ಎಂದು ಭಯವಾಗುವುದು. ಅಕಾರಕ್ಕೂ, ಯಕಾರಕ್ಕೂ 'ಸ್ಥಾನಸ್ವಾತಂತ್ರ್ಯ' ವಾದರೂ ಇರುವುದು. ಎಂದರೆ ಅಕಾರವು ಕಂಠದಲ್ಲಿ ಹುಟ್ಟುವುದು, ಯಕಾರವು ತಾಲುವಿನಲ್ಲಿ. ಈ ವಿಚಾರವು ಕನ್ನಡದಲ್ಲಿಯೇ ಅಲ್ಲ, ಇನ್ನೂ ಅನೇಕ ಭಾಷೆಗಳಲ್ಲಿಯೂ ಉಂಟು. ಪ್ರಾಕೃತದಲ್ಲಿ ದಕ್ಷಿಣದೇಶದವರು 'ಣಿಕ್ಕರುಣೋಮಯಣೋ' (ನಿಷ್ಕರುಣೋಮದನೋ) ಎಂದು ಹೇಳುವರು. ಇದನ್ನೇ ಇತರ ದೇಶಗಳಲ್ಲಿ 'ಣಿಕ್ಕರುಣೋಮಅಣೋ' ಎಂದು ಹೇಳುವರು. ಹಿಂದಿಯಲ್ಲಿಯೂ 'ಜಾಏಗಾ' ಇತ್ಯಾದಿಯಾಗಿ ಸ್ವರವನ್ನೇ ಉಪಯೋಗಿಸಬೇಕೆಂದು ಕೆಲವರೂ 'ಜಾಯೆಗಾ' ಎಂದು ವ್ಯಂಜನವನ್ನುಪಯೋಗಿಸಬೇಕೆಂದು ಕೆಲವರೂ ಹೋರಾಡುತ್ತಿರುವರು. ಕನ್ನಡಿಗರಿಗಾದರೆ ಪದಾದಿಯಲ್ಲಿ ಹೊರತು ಸ್ವರವು ಬರಬಹುದೆಂಬ ಭಾವನೆಯೇ ಇಲ್ಲ. ಮರಾಠಿ ಮೊದಲಾದ ಭಾಷೆಗಳಲ್ಲಿ ಇದೊಂದು ವಿಶೇಷವೇ ಅಲ್ಲ, ಉದಾ—'ರಾಊ' (Rau), ಮಊ, (ಮೃದು) 'ಸವಾಈ', ಆದುದರಿಂದ ಏ'

ಅಶೋ' ಎಂಬ ಸ್ಥಳದಲ್ಲಿ 'ಮಯಣೋ' ಎನ್ನುವರು 'ಇದಂಸರ್ವಂ' ಎನ್ನುವಾಗ
ಆಪಸ್ತಂಬರು ಸಕಾರದ ಹಿಂದಣ ಅನುಸ್ವಾರವನ್ನು ಸ್ವಲ್ಪ ಜ್‌ಕಾರದ ಹಾಗೆ ಉಚ್ಚ
ರಿಸುವುದುಂಟು, ಕೆಲವು ಪ್ರಾಂತಗಳಲ್ಲಿ ಅದರ ಉಚ್ಚಾರಣೆ 'ಲಜ್' ಎಂಬಹಾಗೆ
ಕೇಳಬರುವುದು ದಕ್ಷಿಣದೇಶದ ಆಪಸ್ತಂಬರಾದರೆ 'ಇದಗುಂಸರ್ವಂ' ಎಂದು
ಗಕಾರವನ್ನೇ ತರುವರು ಇದೆಲ್ಲಕ್ಕೂ ದಕ್ಷಿಣದೇಶದ ಅವ್ಯಕ್ತಭಾಷಿತ್ವವೇ ಕಾರ
ಣವು ಹಾಗೆಯೇ 'ಅವುದು' ಇತ್ಯಾದಿ ಸ್ಥಳಗಳಲ್ಲಿ ಅಕಾರವನ್ನು ಆಕಾರಕ್ಕೂ
ಯಕಾರಕ್ಕೂ ಮಧ್ಯಕವಾದ ಯಾವುದೋ ಒಂದು ಪ್ರಕಾರವಾಗಿ ಉಚ್ಚರಿಸುವುದು
ರೂಢಿಗೆ ಬಂದು ಆ ಅಸ್ಪಷ್ಟವರ್ಣವೇ ಬರೆವಣಿಗೆಯಲ್ಲಿ ಯಕಾರವಾಗಿರಬೇಕು ಈಗ
ಯಕಾರವನ್ನು ತೆಗೆದರೆ ಹಳಗನ್ನಡವನ್ನು ತಂದಹಾಗೆ ಕಾಣುವುದರಿಂದ ಅನೇಕರು
ಪ್ರತಿಭಟಿಸುವರು ಆದುದರಿಂದ ಈ ವಿಷಯವನ್ನು ಪ್ರಕೃತದಲ್ಲಿ ಐಚ್ಛಿಕವಾಗಿ
ಬಿಟ್ಟಿದ್ದು ಕಾಲಕ್ರಮದಿಂದ ಇತ್ಯರ್ಥಮಾಡಬಹುದು

ಈ ಪ್ರಕಾರವಾಗಿ ಕನ್ನಡ ನಾಡುಗಳ ಗ್ರಂಥಕಾರರೆಲ್ಲರೂ ಸಂಕೇತಮಾಡಿ
ಕೊಂಡು ಸಂದೇಹ ಬಂದೆಡೆಯಲ್ಲಿ ವಿಚಾರಮಾಡಿಕೊಂಡು ಪ್ರಯೋಗಿಸುತ್ತ ಹೋದರೆ
ಗ್ರಂಥಭಾಷೆ ಏಕರೂಪವಾಗುವುದರಲ್ಲಿ ಸಂದೇಹವಿಲ್ಲ ಎಷ್ಟು ಸಣ್ಣ ಕೆಲಸವಾದರೂ
ಕಾರ್ಯಕಾಲದಲ್ಲಿ ಆಲೋಚನಾದ್ಯವಶ್ಯಕತೆಯೇ ಇಲ್ಲದಷ್ಟು ಚೆನ್ನಾಗಿ ಆರಂಭಿಸುವು
ದಕ್ಕೆ ಮೊದಲೇ ಆಲೋಚನಾದಿಗಳನ್ನು ಮಾಡಿಕೊಳ್ಳುವುದೆಂದರೆ ಮನುಷ್ಯಮಾತ್ರರಿಗೆ
ಸುಲಭವಲ್ಲ, ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಸಾಧಿಸುವುದಕ್ಕಾಗಿ
ನಡುವೆ ನಡುವೆ ಬರುವ ಬಾಧಕಗಳನ್ನು ನಿವೃತ್ತಿಮಾಡಿಕೊಳ್ಳುತ್ತಲೂ ಸಂದರ್ಭಾನು
ಗುಣವಾಗಿ ಹೊಸ ಹೊಸದಾದ ಮಾರ್ಗಗಳನ್ನನುಸರಿಸುತ್ತಲೂ ಹಠಕ್ಕೆಹೋಗದೆ
ದೊಡ್ಡದನ್ನು ಗೆಲ್ಲುವುದಕ್ಕಾಗಿ ಸಣ್ಣದರಲ್ಲಿ ಸೋಲುತ್ತಲೂ ಹೋಗಬೇಕಾಗುವುದು
ಈಗ ಇಂಗ್ಲಿಷ್‌ಭಾಷೆ ಎಲ್ಲಾ ಪ್ರಾಂತದವರಿಗೂ ತಿಳಿಯುತ್ತ ಬರುತ್ತಿರುವುದರಿಂದ ಆಸರ
ಣೆಯನ್ನು ಯಾರಾದರೂ ಅನುಸರಿಸಿದರೆ ಅದನ್ನು, ಯಾವ ಪ್ರಾಂತದವರಾದರೂ ಸರಿ,
ಶಕ್ತರಾದವರು ತೋರಿಕೊಡಬಹುದು ಮರಾಠಿ ಭಾಷೆಯ ಪ್ರಾಬಲ್ಯವಿರುವ ಪ್ರಾಂ
ತದವರು ಮರಾಠಿಯನ್ನರಿತ ಕರ್ಣಾಟ ವಿದ್ವಾಂಸರ ಅಭಿಪ್ರಾಯವನ್ನು ತೆಗೆದುಕೊಳ್ಳು
ವುದೂ ಒಂದು ಉತ್ತಮವಾದ ಮಾರ್ಗವು. ಹೊಸತಾಗಿ ಬರೆಯತೊಡಗುವವರು
ಕನ್ನಡ, ಸಂಸ್ಕೃತ, ಇವೆರಡನ್ನೇ ಬಲ್ಲ ವಿದ್ವಾಂಸರ ಮುಂದೆ ತಮ್ಮ ಗ್ರಂಥಗಳ
ನ್ನಿಟ್ಟು ಶಬ್ದದೋಷಗಳೂ ಅರ್ಥದೋಷಗಳೂ ಏನಾದರೂ ಇದ್ದಿರುವುವೇ ?—ಎಂದು
ತಿಳಿದುಕೊಂಡು ಬಳಿಕ ಸರಿಮಾಡುವುದೂ ಒಂದು ಉಪಾಯವೇ ಸರಿ ಆಲಂಕಾರಿ
ಕರು ಶಾಸ್ತ್ರವನ್ನೆಲ್ಲಾ ಹೇಳಿ ನಿನ್ನ ಗ್ರಂಥವು ಸಹೃದಯ ಹೃದಯಾಹ್ಲಾದಕವಾಗು
ವುದೇ ಇಲ್ಲವೇ ನೋಡಿಕೋ—ಎಂದು ಹೇಳುವರು, ಇದಕ್ಕೆ ಉದಾಹರಣೆಯಾಗಿ
"ಮಗಳ ಪ್ರಾಗಲ್ಭ್ಯವನ್ನು ಅಳಿಯನು ಬಲ್ಲನು, ತಂದೆಯೇನು ಬಲ್ಲನು" * ಎಂದು

* ಪ್ರಾಗಲ್ಭ್ಯಂದುಹಿತುರ್ಲೋಕೇ ಜಾಮಾತಾವೇತ್ತಿ ನೋ ಪಿತಾ

ಹೇಳುವುದುಂಟು. ಇದೇ ಅರ್ಥವೇ "ಊಟ ತಾನು ಮೆಚ್ಚಬೇಕು, ಮಾತು ಹೆರರು ಮೆಚ್ಚಬೇಕು" ಎಂಬ ಗಾದೆಯಲ್ಲಿರುವುದು ಧರ್ಮಶಾಸ್ತ್ರಕಾರರೂ ಧರ್ಮವನ್ನೆಲ್ಲಾ ಹೇಳಿ ಸಂದೇಹಬಂದಾಗ ಪರಿಷತ್ತಿನ ಮೂಲಕವಾಗಿ ನಿರ್ಣಯಮಾಡಿಕೊ, ಎನ್ನುವರು. "ಹೆತ್ತವರಿಗೆ ಹೆಗ್ಗಣಮುದ್ದು" ಎಂಬಂತೆ ಗ್ರಂಥಕಾರರಿಗೆ ಸ್ವಗ್ರಂಥನಿರ್ದುಷ್ಟತೆಯಲ್ಲಿ ಸಂಪೂರ್ಣ ಪ್ರತ್ಯಯವಿರುವುದು ಸಹಜವು, ನಿಮ್ಮ ಗ್ರಂಥವು ಚೆನ್ನಾಗಿರುವುದೆಂದರೆ ಅಲ್ಲಿಯೇ ಉಬ್ಬಿಹೋಗುವರು † ನಿಮ್ಮ ಗ್ರಂಥವು ಚೆನ್ನಾಗಿಲ್ಲವೆಂದರೆ ಅವರಿಗೆ ಅಲ್ಲಿಯೇ ತಲೆಯೊಡೆದು ಬಿಡಬೇಕೆಂಬಷ್ಟು ಕೋಪ ಬರುವುದು ಆದುದರಿಂದ ಗ್ರಂಥಕಾರರೂ ತಮ್ಮ ಸ್ವಭಾವವನ್ನು ಅರಿತು ಕಾಳಿದಾಸನಂತೆ 'ವಿದ್ವಾಂಸರಿಗೆ ಪರಿತೋಷವಾಗುವವರೆಗೂ ಪ್ರಯೋಗವು ಸಾಧುವೆಂದು ತಿಳಿಯಲಾರೆನು' ‡ ಎಂದು ಭಾವಿಸುವುದು ಯುಕ್ತವು ಗ್ರಂಥಕಾರರು ಹಠೈಕವಾದಿಗಳಾದರೆ ಪ್ರಕೃತ-ಕಾರ್ಯವು ನಡೆವಹಾಗೆಯೇ ಇಲ್ಲ ಒಂದು ವಿಷಯವನ್ನು ಎಂದೂ ಮರೆಯಕೂಡದು,—ಏನೆಂದರೆ ನಮಗೆ ಸಹಜವಾಗಿ ಒಂದಿರುವ ಅವ್ಯಕ್ತಭಾಷಿತ್ವವೇ ಈ ರೂಪಭೇದಗಳಿಗೆಲ್ಲಾ ಕಾರಣವಾಗಿರುವುದು ಅವ್ಯಕ್ತಭಾಷಿತ್ವವೆಂದರೆ ಅತ್ಯುಕ್ತಿಯೆಂದು ಯಾರೂ ಭಾವಿಸಬೇಕಿಲ್ಲ ತಮಿಳಿನಲ್ಲಿ ನೋಡಿ, ಕ, ಖ, ಗ, ಘ,–ಇಷ್ಟಕ್ಕೂ ಒಂದೇ ಸಂಜ್ಞೆಯಲ್ಲವೇ ? ಚ, ಛ, ಜ, ಝ. ಗಳಿಗೆ ಒಂದೇ ಸಂಜ್ಞೆಯಲ್ಲವೇ ? ಹೀಗೆಯೇ ಎಲ್ಲಾ ವರ್ಗಗಳಲ್ಲಿಯೂ ಉಂಟಷ್ಟೆ ? ತೆಲುಗಿನಲ್ಲಿಯೂ 'ಇಚ್ಚಿನಾರು' 'ಇಚ್ಚಿಂನಾರು' ಇತ್ಯಾದಿಯಾಗಿ ಎರಡೆರಡು ರೂಪಗಳು ಬಂದುದಕ್ಕೆ ಬೇರೆ ಯೇನುಕಾರಣವಿರುವುದು ? ಕನ್ನಡದ ಮಾತೂ ಅಷ್ಟೆ. ಲಾಕ್ಷಣಿಕರ ಕಾಲಕ್ಕೆ ಎಷ್ಟೋ ಮೊದಲೇ ಕೆಲವು ಅವ್ಯಕ್ತ ವರ್ಣಗಳು ಒಂದೊಂದು ಬಗೆಯಾಗಿ ಬೇರೂರಿದ್ದುದರಿಂದ ಳ ೞ ಕಾರಗಳು ಬೇರೆ ಬೇರೆಯೆಂದೂ ರ ಱ ಕಾರಗಳು ಬೇರೆ ಬೇರೆ ಯೆಂದೂ ಇವಕ್ಕೆ ಪರಸ್ಪರ ಪ್ರಾಸವಿಲ್ಲವೆಂದೂ ಅವರು ಹೇಳುವರು ಆ ಅವ್ಯಕ್ತಭಾಷಿತ್ವವೆಂಬುದು ಇನ್ನೂ ಎಷ್ಟೋ ಸ್ವಶಕ್ತಿಯನ್ನು ತೋರಿಸುವುದು ಒಂದೊಂದು ಪ್ರಾಂತದಲ್ಲಿ ಒಂದೊಂದು ಬಗೆಯಾಗಿ ಪರಿಣಮಿಸುವಂತೆ ಮಾಡಿರುವುದು ಸಂಸ್ಕೃತಜ್ಞರೂ ಕೂಡ 'ಕ್ಷ್ಣಾತಿ (ಕ್ಷ್ಣಾತ್'), 'ಸ್ನಾತಿ' (ಸ್ನಾತ್') ಎಂದು ಕೆಲವರು ಉಚ್ಚರಿಸುವರು, ಇನ್ನು ಕೆಲವರು ಅವನ್ನೇ 'ಕ್ಷ್ಣಾತು' 'ಸ್ನಾತು' ಎಂದು ಮಾಡುವರು ಆದರೂ ಇಲ್ಲಿ ಇಕಾರವೂ ಇಲ್ಲ, ಉಕಾರವೂ ಇಲ್ಲ, 'ತ್" ಎಂಬುದು ಅರ್ಧಾಕ್ಷರವೆಂದು ಅವರೇ ಹೇಳುವರು, ಉಚ್ಚರಿಸುವುದರಲ್ಲಿ ಆ ಅವ್ಯಕ್ತತೆಯೇನೋ ಇದ್ದೇ ಇರುವುದು ಕನ್ನಡಿಗರು ಇದನ್ನು

† For ne'er
Was flattery lost on poet's ear,
A simple race! They waste their while
For the vain tribute of a smile
—SCOTT

‡ ಆಪರಿತೋಷಾದ್ವಿದುಷಾಂ ನಸಾಧುಮನ್ಯೇ ಪ್ರಯೋಗವಿಜ್ಞಾನಂ --ಶಾಕುಂತಳ

ಚೆನ್ನಾಗಿ ಗಮನಿಸಿದರೆ 'ನಿಮ್ಮದು ಹೆಚ್ಚು, ನಮ್ಮದು ಹೆಚ್ಚು' ಎಂಬ ವಿವಾದವು ಎಷ್ಟೋ ಶಮನವಾಗಿ ಎಲ್ಲವೂ ಏಕರೂಪತೆಗೆ ಬರುವ ಸಂಭವವು ಹೆಚ್ಚುತ್ತ ಬರುವುದು.

ಆರಂಭದಶೆಯಲ್ಲಿ ಕನ್ನಡಿಗರ ಸಮಯವು (Convention) ಹೇಗಿರಬೇಕೆಂದು ಈ ಪ್ರಕಾರವಾಗಿ ದಿಙ್ಮಾತ್ರವಾಗಿ ಹೇಳಿದುದಾಯಿತು ಆರಂಭವಾದಮೇಲೆ ಕಾರ್ಯವು ಕೆಟ್ಟುಹೋಗದ ಹಾಗೆ ಮಾಡಬೇಕಾದ ಕೆಲಸವೆಷ್ಟಿರುವುದು । ಭಾಷೆ ಏಕರೂಪವಾಗಿರುವುದಕ್ಕೆ ಬೇಕಾದುವು—ವ್ಯಾಕರಣ, ನಿಘಂಟು ಈ ಎರಡರಲ್ಲೂ ಕೊಂಚ ಕೈ ಹಾಕಬೇಕಾಗುವುದು

ಕನ್ನಡವು ಮೂರು ಭಾಗವಾಗುವುದು,—ಹಳಗನ್ನಡ (Old Kanarese) ನಡುಗನ್ನಡ (Mediaeval Kanarese) ಹೊಸಗನ್ನಡ (Modern Kanarese) ಎಂದು ಹಳಗನ್ನಡಕ್ಕೆ ಶಬ್ದಾನುಶಾಸನವು ಉತ್ಕೃಷ್ಟವಾದ ವ್ಯಾಕರಣವಾಗಿರುವುದಷ್ಟೆ. ಅಲ್ಲಿಂದ ಈಚೆಗೆ ಹುಟ್ಟಿದ ಅನೇಕ ಷಟ್ಪದಿ ಗ್ರಂಥಗಳೇ ಮೊದಲಾದುವನ್ನು ತೆಗೆದುಕೊಂಡು ಎಲ್ಲೆಲ್ಲಿ ರೂಪಗಳು ಭೇದಿಸುವುವೋ ಅಲ್ಲೆಲ್ಲಾ 'ನಡುಗನ್ನಡದಲ್ಲಿ ಹೀಗೆ' ಎಂದು ತೋರುವುದಕ್ಕೆ ಏನಾದರೂ ಒಂದು ಗುರುತುಮಾಡಿಕೊಂಡು, ಪಾಣಿನಿ ಸೂತ್ರಗಳಿಗೆ ವಾರ್ತಿಕಗಳನ್ನು ಕಲ್ಪಿಸಿದಂತೆ ಸೂತ್ರರಚನಾಕುಶಲತೆಯುಳ್ಳವರು ವಿಶೇಷ ವಿಧಿಗಳನ್ನು ಅದೇ ಪರಿಭಾಷೆಗಳನ್ನನುಸರಿಸಿ ಕಲ್ಪಿಸಬೇಕು ಈ ಕೆಲಸಕ್ಕೆ ಈಗಲೇ ಆರಂಭವಾಗಬಹುದು, ಏಕೆಂದರೆ ಗ್ರಂಥಗತವಾದ ರೂಪಗಳಿಲ್ಲದೆ ಇನ್ನು ಬೇರೆಯ ರೂಪಗಳಿಗೆ ವಿಶೇಷ ವಿಧಿಗಳನ್ನು ಕಲ್ಪಿಸುವ ಅವಶ್ಯಕತೆಯಿಲ್ಲ ಹೊಸಕನ್ನಡದ ಮಾತಾದರೆ ಕ್ರಮಕ್ರಮವಾಗಿ ಆಗಬೇಕಾಗಿರುವುದು ಆದರೂ ಎಷ್ಟೆಷ್ಟು ಎಲ್ಲಾ ಪ್ರಾಂತಗಳಲ್ಲಿಯೂ ಏಕರೂಪವಾಗುತ್ತ ಬರುವುದೋ ಅಷ್ಟಷ್ಟಕ್ಕೆ ಮೇಲೆ ಹೇಳಿದ ಪ್ರಕಾರವಾಗಿಯೇ 'ಹೊಸಕನ್ನಡದಲ್ಲಿ ಹೀಗೆ' ಎಂದು ತಿಳಿವ ಗೊತ್ತಾಗುವುದಕ್ಕೆ ಏನಾದರೂ ಸಂಜ್ಞೆಯನ್ನಿಟ್ಟುಕೊಂಡು ಇನ್ನೊಂದು ಬಗೆಯ ವಿಶೇಷವಿಧಿಗಳನ್ನು ಕಲ್ಪಿಸಬೇಕು ಹೀಗೆ ಮಾಡುವುದರಿಂದ ಕನ್ನಡಕ್ಕೆ ಆಮೂಲಾಗ್ರವಾದ ವ್ಯಾಕರಣವು ಹುಟ್ಟುವುದು ಸಂಸ್ಕೃತದ ಸೂತ್ರಗಳು ಸಂಸ್ಕೃತವನ್ನರಿಯದ ಕನ್ನಡಿಗರಿಗೆ ಕ್ಲಿಷ್ಟವಾಗುವುದೆಂದರೆ ಅವರಿಗೆ ಅದೇ ಆಧಾರದ ಮೇಲೆ ಗಹನವಲ್ಲದ ಗ್ರಂಥವನ್ನು ರಚಿಸುವುದು ಕಷ್ಟವಲ್ಲ ವ್ಯಾಕರಣವೆಂಬುದು ನಮ್ಮಲ್ಲಿ ವಿದ್ಯೆಯೆಂದು ಸಂಕೇತಿತವಾದ ಶಾಸ್ತ್ರವಾದುದರಿಂದ ಅದರ ವಾಸನೆ ಹೋಗದೆಯೂ ಇರಲೆಂದು ಹಾಗೆ ಹೇಳಿದುದು. ಹೊಸಕನ್ನಡದ ಭಾಗವನ್ನು ಬೇರೆ ಮಾಡಿದರೆ ಹೊಸಕನ್ನಡದ ವ್ಯಾಕರಣವಾಯಿತು ನಡುಗನ್ನಡದ ಭಾಗವನ್ನು ಬೇರೆ ಮಾಡಿದರೆ ಅದಕ್ಕೂ ಒಂದಾಯಿತು ಸಮರ್ಥರಾದವರು ಅದರ ಮೇಲೆ ಶಾಸ್ತ್ರಮರ್ಯಾದೆಯನ್ನನುಸರಿಸಿ ಬೇಕುಬೇಕಾದ ಹಾಗೆ ವ್ಯಾಖ್ಯಾನಗಳನ್ನು ರಚಿಸಬಹುದು. ಇಷ್ಟೆಲ್ಲಾ ಆಗುವವರೆಗೆ ಬಾಲಕರಿಗೆ ವ್ಯಾಕರಣವೋ ಎಂದರೆ ಕರ್ಣಾಟಗ್ರಂಥಕಾರರೆಲ್ಲರೂ ಯಾವ ಸಮಯವನ್ನನುಸರಿಸಬೇಕೆಂದು ಹೇಳುವೆವೋ ಅದನ್ನೇ ತಕ್ಕಷ್ಟು ಮಟ್ಟಕ್ಕೆ ವಿಸ್ತರಿಸಿ ಸಮರ್ಥರಾದವರು ಬರೆದರೆ ಬಾಲಕರಿಗೆ ವ್ಯಾಕ

ಣವೂ ಆಯಿತು, ಗ್ರಂಥಕಾರರಿಗೆ ಮಾರ್ಗದರ್ಶಿನಿಯೂ ಆಯಿತು. ಇದರ ಜತೆಗೆ ಪದಯೋಜನೆಯು ಸರಣಿಯನ್ನೂ (idiom) ಕಲಿಸಬಹುದು ಇದರಿಂದಾಗುವ ಉತ್ಕೃಷ್ಟಪ್ರಯೋಜನವನ್ನು ಹೊಸತಾಗಿ ಹೇಳಬೇಕಾಗಿಲ್ಲ

ನಿಘಂಟುಗಳನ್ನು ಶ್ಲೋಕರೂಪವಾಗಿ ಈಗ ಯಾರೂ ಬರೆಯುತೊಡಗುವುದಿಲ್ಲ ಎಲ್ಲಿಹೋದರೂ ಅಕಾರಾದಿಯಾಗಿ ಬರವ ಪದ್ಧತಿಯೇ ಒಂದಿರುವುದು, ಅದನ್ನೇ ಅನುಸರಿಸಿ ಹೋಗುತ್ತಿರಬೇಕಾಗುವುದು ಕೆಲವು ನಿಘಂಟುಗಳು ಆಗಲೇ ಸಿದ್ಧವಾಗಿರುವುವು ಸಮರ್ಥರಾದವರು ಅವನ್ನು ತೆಗೆದುಕೊಂಡು ಆದ್ಯಂತವಾಗಿ ಶೋಧಿಸುತ್ತ ಪ್ರತಿಯೊಂದು ಶಬ್ದಕ್ಕೂ ಏನಾದರೂ ಒಂದು ಪ್ರಯೋಗವನ್ನು ಉದಾಹರಿಸಿ ವ್ಯುತ್ಪತ್ತಿ ಮೊದಲಾದುವನ್ನು ವಿಶದಪಡಿಸಿ ಎಷ್ಟೆಷ್ಟು ಅರ್ಥಗಳಿದ್ದರೆ ಅಷ್ಟನ್ನೂ ಪ್ರಯೋಗಪೂರ್ವಕವಾಗಿ ತೋರುತ್ತ ಒಂದೊಂದು ಶಬ್ದಕ್ಕೆ ಒಂದೊಂದು ಪತ್ರವನ್ನು ಮಾಡಿಕೊಂಡು ಬೇರೆ ಬೇರೆ ಪತ್ರಗಳ ಮೇಲೆ ಬರೆದಿಡಬೇಕು ಪಾರಿಭಾಷಿಕ ಶಬ್ದಗಳನ್ನು ನಿರ್ಣಯಿಸುವುದಕ್ಕೆ ಮೊದಲು ಆ ಆ ಶಾಸ್ತ್ರಗಳ ಮೇಲೆ ತೃಪ್ತಿಕರವಾದ ಗ್ರಂಥಗಳು ಹುಟ್ಟಬೇಕೆಂದು ಹೇಳಿಯೇ ಇರುವೆವಷ್ಟೆ ? ಹಾಗೆ ಗ್ರಂಥಗಳು ಹುಟ್ಟುತ್ತ ಬಂದಹಾಗೆಲ್ಲಾ ಅವನ್ನೂ ತೆಗೆದು ಆ ಆ ಪರಿಭಾಷೆಗಳ ಅರ್ಥವನ್ನು ಮೇಲೆ ಹೇಳಿದಂತೆಯೇ ತಿಳಿಯಪಡಿಸಿ ಆ ಆ ಹೊಸ ಗ್ರಂಥಗಳ ಪ್ರಯೋಗಗಳನ್ನೇ ಉದಾಹರಣೆಗಾಗಿ ಕೊಡಬಹುದು ಈ ಕೆಲಸವನ್ನು ಒಬ್ಬೊಬ್ಬರು ಒಂದೊಂದೆಂದು ಹಂಚಿಕೊಂಡು ಮೇಲ ಹೇಳಿದಂತೆ ಪತ್ರಗಳ ಮೇಲೆ ಬರೆದಿಡುತ್ತ ಹೋದರೆ ಆ ಮೇಲ ಎಲ್ಲವನ್ನೂ ಅಕಾರಾದಿ ಕ್ರಮದಲ್ಲಿ ಜೋಡಿಸಿ, ಎಲ್ಲಾದರೂ ದೋಷಗಳಾಗಲಿ, ನ್ಯೂನಾತಿರಿಕ್ತತೆಗಳಾಗಲಿ ಇದ್ದರೆ ಅವನ್ನು ಸಂವಾದಿ ಮುದ್ರಿಸಬಹುದು ಈ ಉದಾಹರಣಾದಿಗಳನ್ನು ಬಿಟ್ಟು ಅರ್ಥವೊಂದನ್ನೇ ಕೊಡುತ್ತ ಹೋದರೆ ಗ್ರಂಥವು ಸಣ್ಣದಾಗಿ ಬಾಲರ ಉಪಯೋಗಕ್ಕಾಗುವುದು ನಿಘಂಟುಗಳನ್ನು ಮೂರು ನಾಲ್ಕು ವರ್ಷಗಳಿಗೆ ಒಂದಾವೃತ್ತಿ ಹೆಚ್ಚು ವಿಷಯಗಳನ್ನು ಸೇರಿಸಿ ಪರಿಷ್ಕರಿಸಿ ಅಚ್ಚು ಹಾಕಿಸುತ್ತ ಬಂದರೆ ವಿಶೇಷ ಪ್ರಯೋಜನವಾಗುವುದು ಇಷ್ಟು ಹೇಳಿದುದೂ ಗ್ರಂಥಭಾಷೆಯ ವಿಚಾರವಾಗಿ , ಮೈಸೂರಿನ ಕನ್ನಡ, ಮಂಗಳೂರಿನ ಕನ್ನಡ, ಧಾರವಾಡದ ಕನ್ನಡ-ಇತ್ಯಾದಿ ಕನ್ನಡಗಳನ್ನೆಲ್ಲಾ ಸಂಪೂರ್ಣವಾಗಿ ಧ್ವಂಸಮಾಡಿ ಬಿಡಬೇಕೆಂದಲ್ಲ ಪ್ರಾಕೃತದಲ್ಲಿ ಆರುಭಾಷೆಗಳು ಹೇಗಿರುವುವೋ ಹಾಗೆ ಅವೂ ಬೇರೆ ಬೇರೆಯಾಗಿರಲಿ, ನಾವು ಉದ್ದೇಶಿಸಿರುವ ವ್ಯಾಕರಣಕ್ಕೆ ಒಂದು ಪರಿಶಿಷ್ಟವನ್ನು ಮಾಡಿ ಅಲ್ಲಿ ಮೈಸೂರಿನ ಭಾಷೆಯಲ್ಲಿ 'ಬರುತ್ತದೆ' ಎಂಬ ರೂಪವುಂಟು, ಧಾರವಾಡದ ಭಾಷೆಯಲ್ಲಿ 'ಬರುತದ' ಎಂಬ ರೂಪವುಂಟು, ಇತ್ಯಾದಿಯಾಗಿ ಸೂತ್ರಿಸಿ, 'ಹಂ' 'ಅಹಂ 'ಅಹಅಂ' ಎಂದು ಒಂದು ಭಾಷೆಯಲ್ಲಿ ರೂಪಗಳಿದ್ದರೆ ಇನ್ನೊಂದರಲ್ಲಿ 'ಹಕೆ 'ಹಗ್ಗೆ' 'ಹಗೆ' ಎಂಬ ರೂಪಗಳುಂಟೆಂದು ಪ್ರಾಕೃತವ್ಯಾಕರಣಕಾರರು ಸೂಚಿಸುವಂತೆ ಸೂಚಿಸುವ ಅಲ್ಲಿಗೆ ಯಾವ ಭಾಷೆಯನ್ನೂ ಮೂಲೆಯ ಪಾಲು ಮಾಡದೆ ಆದರಿಸಿದಂತೆಯೂ

ಆಗುವುದು ಏಕರೂಪತಾಕಾರ್ಯಕ್ಕಾಗಿ ಗ್ರಂಥಭಾಷೆಯನ್ನು ನಿರ್ಮಿಸಿಕೊಂಡಂತೆಯೂ ಆಗುವುದು ಸಂಸ್ಕೃತಜ್ಞರು ನಾಟಕಾದಿಗಳಲ್ಲಿ ಪ್ರಾಕೃತವನ್ನನುಸರಿಸುವಂತೆಯೂ ಸಂಸ್ಕೃತಜ್ಞರಾಗಿ ಸಂಸ್ಕೃತದಲ್ಲಿ ಬೇಕಾದ ಹಾಗೆ ಉದ್ಗ್ರಂಥಗಳನ್ನು ರಚಿಸಿದರಾದರೂ ಪ್ರಾಕೃತದಲ್ಲಿನ ಆದರಾತಿಶಯದಿಂದ ರಾಜಶೇಖರಾದಿಗಳು “ಕರ್ಪೂರಮಂಜರೀ” ಮೊದಲಾದ ಗ್ರಂಥಗಳನ್ನು ರಚಿಸಿದಂತೆ ಮೈಸೂರಿನ ಭಾಷೆಯಲ್ಲಿಯೋ ಧಾರವಾಡದ ಭಾಷೆಯಲ್ಲಿಯೋ ಆದರಾತಿಶಯವುಳ್ಳವರು ತಮಗೆ ತೋರಿದಂತೆ ಗ್ರಂಥಗಳನ್ನು ರಚಿಸುವುದಕ್ಕೆ ಯಾವ ಪ್ರತಿಬಂಧಕವೂ ಇರುವುದಿಲ್ಲ. ಆ ಗ್ರಂಥ ಭಾಷೆಯೂ ಯಾರಲ್ಲಿ ನಮಗೆ ಗೌರವವೋ ಯಾವ ಮಾತಿನಲ್ಲಿ ನಮಗೆ ಆದರವೋ ಆ ನಮ್ಮ ಪೂರ್ವಿಕರ ಗ್ರಂಥಗತವಾದ ಭಾಷೆಯ ಆಧಾರದಿಂದ ಬರುವುದಲ್ಲವೇ ?

ಇದೇ ಸಂದರ್ಭದಲ್ಲಿ ಪಂಡಿತರೂ ನೆನಪಿನಲ್ಲಿಡಬೇಕಾದ ಅಂಶಗಳು ಕೆಲವಿರುವುವು. ಪೂರ್ವದಲ್ಲಿ ನಮ್ಮ ಚಕ್ರೇಶ್ವರರು ದಿಗ್ವಿಜಯಗಳನ್ನು ಮಾಡಿಕೊಂಡು ಬರುತ್ತಿದ್ದುದರಿಂದಲೂ ನಮ್ಮ ವಣಿಜರು ದ್ವೀಪಾಂತರದ ಐಶ್ವರ್ಯವನ್ನೆಲ್ಲಾ ವಾಣಿಜ್ಯ ಮೂಲಕವಾಗಿ ಆಕರ್ಷಿಸುತ್ತಿದ್ದುದರಿಂದಲೂ ನಮ್ಮ ಕರ್ಮಕಾರರು ನಿರಂತರವೂ ವಸ್ತು ನಿರ್ಮಾಣ ನಿರತರಾಗಿದ್ದುದರಿಂದಲೂ ಎಲ್ಲಿನೋಡಿದರೂ, ಐಶ್ವರ್ಯ, ಔದಾರ್ಯ, ಧೈರ್ಯ ಶೌರ್ಯ, ಮೊದಲಾದುವು ತುಂಬಿ ತುಳುಕುತ್ತಿದ್ದುವು. ಈಗಲಾದರೆ ನಮ್ಮ ಶಕ್ತಿ ಸಾಹಸಗಳೆಲ್ಲವೂ ಕುಗ್ಗಿಹೋಯಿತು, ಐಶ್ವರ್ಯವೆಲ್ಲವನ್ನೂ ಕಳೆದುಕೊಂಡು ದರಿದ್ರರಾದೆವು. ಪರದೇಶದ ಕರ್ಮಕಾರರನ್ನು ಇದಿರಿಸಲಾರದೆ ನಮ್ಮ ವಸ್ತು ನಿರ್ಮಾಣ ಕೌಶಲವನ್ನೇ ಮರೆಯುತ್ತ ಬಂದೆವು. ಗೆಯ್ಮೆ ಮಾಡುವುದಕ್ಕೆ ಹೊಟ್ಟೆಗೆ ಸಾಲದೆ ಶಕ್ತಿಯಿಲ್ಲದಿರಲು ಮೇವು ಸಾಲದೆ ಬಡಕಲಾದ ಎತ್ತುಗಳನ್ನು ಕಟ್ಟಿಕೊಂಡು ಭೂಮಿಯನ್ನು ಅಷ್ಟು ಕೆದಕಿ ಗೊಬ್ಬರವೆಂದರೆ ಈಗಲ್ಲ ಸಿಕ್ಕುವುದು ಎಂದು ಬಿಟ್ಟು ಬಡಗಾಳನ್ನು ಬಿತ್ತಿ ಏನೋ ಹೊಟ್ಟೆಹೊರೆದುಕೊಳ್ಳುವ ಉದ್ಯೋಗವೊಂದಲ್ಲದೆ ಇನ್ನು ಯಾವುದೂ ನಿಂತಿಲ್ಲ. ಇನ್ನೇನು ! ಅದೂ ಪರದೇಶದವರ ಕೈಗೆ ಬೀಳುವ ಸಂಭವವಿರುವುದು. ನಮ್ಮ ದೇಶದಲ್ಲಿಯೇ ಬೆಳೆವುದಾದರೂ ಅಂಗಡಿಗೆ ಹೋಗಿ ‘ಪೋಲ್ಸನ್ಸ್ ಕಾಫಿ’ ‘ಲಿಪ್ಟನ್ಸ್ ಟೀ’ ಕೊಡಿ ಎಂದು ಕೇಳಬೇಕಾಗಿರುವುದು. ಮುಖ್ಯವಾಗಿ ನಿರುದ್ಯೋಗರಾದವರು ಭೂಮಿಯ ಮೇಲೆ ಬೀಳುವ ಸಂಭವವೇ ಇಲ್ಲದ ಸಂಕಟವು ಪ್ರಾಪ್ತವಾಗಿರುವುದು. ಇಂತಹ ಆಪತ್ತಿನಲ್ಲಿಯೂ ಉದ್ಯೋಗವನ್ನು ಮಾಡುವೆನೆಂದರೆ ಯಾವುದನ್ನು ಮಾಡಬೇಕೋ ಹೇಗೆ ಮಾಡಬೇಕೋ ಅದಕ್ಕೆ ಸಾಧನಗಳೇನೋ ಯಾವುದೂ ತಿಳಿಯದಿರುವುದು. ಅನ್ಯದೇಶದಿಂದ ಯಾವುದಾದರೂ ಪದಾರ್ಥವು ಬಂದರೆ ಅನ್ಯದೇಶದವರ ಬುದ್ಧಿ ಶಕ್ತಿ ಚಮತ್ಕಾರಗಳನ್ನು ಕೊಂಡಾಡುತ್ತ ಆಶ್ಚರ್ಯನಿಮಗ್ನರಾಗಿ ಹೋಗುವೆವೇ ಹೊರತು “ಇದೂ ಮನುಷ್ಯಶಕ್ತಿಗೆ ಸಾಧ್ಯವಾದುದು, ನಾವೂ ಮನುಷ್ಯರಲ್ಲವೇ, ನಮ್ಮ ಹಿರಿಯರು ಮಹಾ ಸಾಹಸವನ್ನು ಮಾಡಿದವರಲ್ಲವೇ, ನಾವೂ ಏಕೆ ಪ್ರಯತ್ನಮಾಡಬಾರದು” ಎಂದು ಆಲೋಚನೆಯನ್ನೇ ಮಾಡುವುದಿಲ್ಲ, ಯಾವನಾ

ದರೂ 'ಇದನ್ನು ನಾವೂ ಮಾಡಬಹುದು' ಎಂದರೆ, 'ಮುಚ್ಚು ನಿನ್ನ ಮೋರೆ, ನೀನು ಮಾಡಿದಹಾಗೇ ಇದ್ದೀಯೆ' ಎಂದು ಅವನ ಮುಖಭಂಗಮಾಡುವುದೂ, 'ಮಾಡುವುದೇನೋ ಸಾಧ್ಯವಾಗಬಹುದು ನೋಡಿ, ಆದರೆ ನಮ್ಮ ದೇಶದಲ್ಲಿ ನಡೆಯುವುದಿಲ್ಲ' ಎಂದು "ಷ್ಮೈಸಲು" ಮಾಡಿಬಿಡುವುದೂ ಸ್ವಾಭಾವಿಕವಾಗಿರುತ್ತಿರುವುದು. ಇದಕ್ಕೆಲ್ಲಾ ಮೋಹ, ವಿಸ್ಮೃತಿ-ಎಂಬ ಎರಡು ಕಾರಣಗಳಿರುವುವು ಎಲ್ಲೆಲ್ಲಿಯೂ ಜ್ಞಾನ ವಿಜ್ಞಾನಗಳು ಹರಡಿ ನಮ್ಮ ಜನರು "ನಷ್ಟೋಮೋಹಃ ಸ್ಮೃತಿರ್ಲಬ್ಧಾ" ಎಂದು ಹೇಳುವ ಸ್ಥಿತಿಗೆ ಎಂದು ಬರುವರೋ ಅಲ್ಲಿಯವರೆಗೂ ನಮಗೆ ಜೀವಿತ ಸಂದೇಹವೇ ಉಂಟಾಗುತ್ತಿರುವುದು. ವ್ಯಾವಹಾರಿಕಶಾಸ್ತ್ರ ಕಲಾದಿಗಳಲ್ಲೆಲ್ಲಾ ನಿಸ್ಸಂದೇಹವಾಗಿ ವಿಷಯಗಳನ್ನು ತಟ್ಟನೆ ಗ್ರಹಿಸುವ ಶಕ್ತಿ ಅತ್ಯವಶ್ಯಕವು. ಮೊದಲು ಕಾವ್ಯಾದಿಗಳಲ್ಲಿ ಬಿದ್ದು ಚೆನ್ನಾಗಿ ನುರಿದ ಹೊರತು ಆ ಗ್ರಹಣಶಕ್ತಿ ಬರುವುದಿಲ್ಲ ಅದಕ್ಕಾಗಿ ಸರ್ವಜನಾದೃತವಾದ ಒಂದು ಗ್ರಂಥಭಾಷೆಯನ್ನು ಸಂಕೇತಿತವಾಗಿ ಅಂಗೀಕರಿಸಬೇಕೆಂದು ಪ್ರಯತ್ನವು. 'ಹಳಗನ್ನಡವೇ ಗ್ರಂಥಭಾಷೆಯಾಗಲಿ' ಎಂದರೆ ಅದನ್ನು ಅಭ್ಯಾಸಮಾಡುವುದಕ್ಕೇ ಎಷ್ಟೋ ಕಾಲಬೇಕು. ಅಭ್ಯಾಸಮಾಡಿದರೂ ಗ್ರಂಥಕಾರರು ಸ್ವಾಭಿಪ್ರಾಯವನ್ನು ಧಾರಾಳವಾಗಿ ಸಂದೇಹಕ್ಕಾಸ್ಪದವಿಲ್ಲದಂತೆ ಹೇಳುವುದು ಕಷ್ಟವು ಒಂದುವೇಳೆ ಅದೂ ಸುಲಭವೇ ಆದರೂ ಜನಗಳನ್ನು ಹಳಗನ್ನಡವನ್ನೇ ಓದಿರೆಂದರೆ ದೃಷ್ಟ ಪ್ರಯೋಜನವೂ ಸದ್ಯಃ ಫಲವೂ ಇಲ್ಲದ ಕೆಲಸಕ್ಕೆ ಈಗಿನ ಸ್ಥಿತಿಯಲ್ಲಿ ಹೋಗುವವರು ಯಾರು ? ಇಂತಹ ಮಹಾಭಯವು ಪ್ರಾಪ್ತವಾಗಿರುವಾಗಲೂ ಪಂಡಿತರು ಹಳಗನ್ನಡಕ್ಕೆ ಹೊಡೆದಾಡುತ್ತ ಬಂದರೆ ಅದು ಯಾರ ದೌರ್ಭಾಗ್ಯವೋ ಯಾರು ಬಲ್ಲರು ? ಸಂಸ್ಕೃತವೆಂದರೆ ಮಂತ್ರ, ತಂತ್ರ, ಜಪ, ಯಜ್ಞ ಮೊದಲಾದುವುಗಳಿಗಲ್ಲಾ ಉಪಯೋಗಿಸುವೆವು, ಅಲ್ಲಿ ಶಬ್ದವು ಸ್ವರದಲ್ಲಾಗಲಿ ವರ್ಣದಲ್ಲಾಗಲಿ ದುಷ್ಟವಾದರೆ ಯಜಮಾನನನ್ನು ಹೊಡವುದು, ಎಂಬ ಭೀತಿಯುಂಟು ಕನ್ನಡವನ್ನೇನೂ ನಾವು ಈಗ ಅಂತಹ ಅದೃಷ್ಟಪ್ರಯೋಜನದ ಕಾರ್ಯಗಳಿಗೆ ಉಪಯೋಗಿಸುತ್ತಿಲ್ಲವಲ್ಲಾ. 'ಅಪ್ಪುದು ಎನ್ನುವುದನ್ನು ಬಿಟ್ಟು 'ಅಹುದು' ಎಂದರೆ ಪಾತಿತ್ಯವೇನು, ಪ್ರತ್ಯವಾಯವೇನು ? ಇದನ್ನೆಲ್ಲಾ ಪರ್ಯಾಲೋಚಿಸಿ ಪಂಡಿತರು ವೃಥಾ ಮುಷ್ಕರವನ್ನು ಮಾಡುತ್ತಲೂ, ಮಾಡುವವರ ಕೆಲಸವನ್ನು ಧ್ವಂಸಮಾಡುತ್ತಲೂ, ಬದ್ಧರಾದವರಲ್ಲಿ ಪರಸ್ಪರ ಭೇದವನ್ನುಂಟುಮಾಡುತ್ತಲೂ ಇರದೆ ಇರಲೆಂದು ಕೋರುವೆವು ಹೀಗೆಂದುದರಿಂದ ಹಳಗನ್ನಡವನ್ನು ಹಾಳುಮಾಡಬೇಕೆಂದು ನಮ್ಮ ಉದ್ದೇಶವಲ್ಲ, ನಾವೂ ಅದನ್ನು ಓದಿರುವೆವು ಆದರಲ್ಲಿಯೂ ಗ್ರಂಥಗಳನ್ನು ಬರೆವರು ಅಗತ್ಯವಾಗಿ ಬರೆಯಲಿ, ನಮಗೆ ವ್ಯವಧಾನವಿದ್ದರೆ ನಾವೂ ಬರೆವೆವು. ಆದರೆ ಕನ್ನಡಿಗರ ಐಹಿಕಾಭ್ಯುದಯಕ್ಕಾಗಿ ವಿಜ್ಞಾನವನ್ನು ಪ್ರಚುರಪಡಿಸುವುದು ಅತ್ಯವಶ್ಯಕವಾಗಿ ಬಂದಿರುವುದರಿಂದ ಅದಕ್ಕೆ ಸಹಕಾರಿಯಾಗುವ ಗ್ರಂಥಭಾಷೆಯೊಂದನ್ನು ಕಲ್ಪಿಸಿಕೊಳ್ಳಬೇಕಾಗಿರುವುದು. ನಿಶ್ರೇಯಸ ಸಿದ್ಧಿಮಾತ್ರವೇ ಧರ್ಮವಲ್ಲ ಧರ್ಮದಿಂದ ಅಭ್ಯುದಯವೂ ಸಿದ್ಧಿಸ

ಬೇಕಾಗಿರುವುದು * ಇಂತಹ ಕಾರ್ಯಕ್ಕೆ ಯಾರೂ ಪರಿಪಂಥಿಗಳಾಗದಿರಲೆಂದು 'ನಮ್ಮದು, ನಿಮ್ಮದು' ಎಂಬ ಮಾತನ್ನು ಬಿಟ್ಟು 'ನಮ್ಮ ಎಲ್ಲರದು' ಎಂದು ಸರ್ವಸಮ್ಮತವಾಗುವಂತೆ ವರ್ತಿಸಬೇಕಾಗಿರುವುದು

ಇಷ್ಟೆಲ್ಲಾ ಆದರೂ ಎಲ್ಲೆಲ್ಲಿಯೂ ಓದುವರು ಹೆಚ್ಚಿದ ಹೊರತು ಮಾಡಿದ ಕೆಲಸವು ಶಾಶ್ವತವಾಗುವುದಿಲ್ಲ. ಕನ್ನಡ ನಾಡುಗಳ ಸ್ಥಿತಿಯನ್ನು ನೋಡಿದರೆ ಮೊದಲು ಕನ್ನಡದ ಗ್ರಂಥಗಳನ್ನು ಓದಬೇಕೆಂಬ ಬುದ್ಧಿಯನ್ನೇ ಹುಟ್ಟಿಸಬೇಕಾಗಿರುವುದು. ಆಧುನಿಕ ಮಾರ್ಗವನ್ನನುಸರಿಸಿ ಉತ್ತಮಾದ್ಯಗ್ರಂಥಗಳನ್ನೂ ವಿಜ್ಞಾನ ಕಲಾದಿಗ್ರಂಥಗಳನ್ನೂ ರಚಿಸಿದರೆ ಅವನ್ನು ಓದುವವರು ಕೇವಲ ವಿರಳರು ನಮ್ಮಲ್ಲಿ ಪುರಾಣೇತಿಹಾಸಾದಿಗಳು ಬೇಕಾದ ಹಾಗಿರುವವಷ್ಟೆ, ಅವನ್ನೆಲ್ಲಾ ನಮ್ಮ ಗ್ರಂಥಭಾಷೆಯಲ್ಲಿ ಬರೆದು ಅಚ್ಚುಹಾಕಿಸಿ ಕಾಗದಕ್ಕೆ ಎಷ್ಟು ತಗಲುವುದೋ ಅದರ ಎರಡರಷ್ಟಕ್ಕೆ ಪುಸ್ತಕಗಳು ಮಾರುವಂತೆ ಮಾಡಿ ಪುಸ್ತಕಗಳನ್ನು ಮನೆ ಮನೆಗೂ ತೆಗೆದುಕೊಂಡು ಹೋಗಿ ಮಾರುವಂತೆ ಮಾಡಿದರೆ ಎಲ್ಲೆಲ್ಲಿಯೂ ಓದುವರಾಗುವರು † ಕೆಲವರು 'History' ಗೆ ಸಂಬಂಧಪಡುವ ವಿಷಯವೇನಿರಬಹುದೆಂದು ಓದುವರು, ಕೆಲವರು ಪುರಾಣಾದಿಗಳೆಂದು ಭಕ್ತಿಯಿಂದ ಓದುವರು, ಹೆಂಗಸರಿಗೂ ಅತ್ಯುತ್ಕೃಷ್ಟವಾದ ಓದಾಗುವುದು ಇದರಿಂದ ನಮ್ಮ ಗ್ರಂಥಭಾಷೆ ಎಲ್ಲೆಲ್ಲಿಯೂ ಹಬ್ಬುವುದು ಅದರಲ್ಲಿ ಯಾವ ವಿಜ್ಞಾನ ಕಲಾದಿ ಗ್ರಂಥಗಳನ್ನು ಬರೆದರೂ ಜನರಿಗೆ ಚೆನ್ನಾಗಿ ಅರ್ಥವಾಗಿ ಅಧಿಕತರವಾದ ಪ್ರಯೋಜನವಾಗುವುದು ಇಷ್ಟೆಲ್ಲಾ ಆಗಬೇಕಾದರೆ ಕನ್ನಡಿಗರೆಲ್ಲರೂ ಕಲೆತು ಏಕಮತ್ಯದಿಂದ ಹೊರಡಬೇಕು ಈ ವಿಷಯದಲ್ಲಿ ಋಗ್ವೇದದ ಕೊನೆಯ ಮೂರು ಋಕ್ಕುಗಳಿಗಿಂತಲೂ ಇನ್ನೇನು ಉಪದೇಶವು ಬೇಕಾಗಿರುವುದು ? ‡

ಸಂಗಚ್ಛಧ್ವಂ ಸಂವದಧ್ವಂ ಸಂವೋಮನಾಂಸಿ ಜಾನತಾಂ |
ದೇವಾಭಾಗಂ ಯಥಾ ಪೂರ್ವೇ ಸಂಜಾನಾನಾ ಽ ಉಪಾಸತೇ ||
ಸಮಾನೋಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹಚಿತ್ತಮೇಷಾಂ|
ಸಮಾನಂ ಮಂತ್ರಮಭಿ ಮಂತ್ರಯೇವಃ ಸಮಾನೇನವೋಹವಿಷಾ ಜುಹೋಮಿ ||
ಸಮಾನೀವ ಆಕೂತಿಃ ಸಮಾನಾಹೃದಯಾನಿವಃ |
ಸಮಾನಮಸ್ತು ವೋಮನೋಯಥಾವಃ ಸುಸಹಾಸತಿ ||

* ಯತೋಽಭ್ಯುದಯನಿಃಶ್ರೇಯಸಸಿದ್ಧಿಸ್ಸಧರ್ಮಃ—ವೈಶೇಷಿಕಸೂತ್ರ-೨

† I have elsewhere dealt with this scheme in detail

‡ ಋಕ್ಕುಗಳು "ಎಲೈ ಈಶ್ವರ (ಅಗ್ನಿ) ನೀನು ನಮಗೆ ವಸುಗಳನ್ನು ಯಥೇಷ್ಟವಾಗಿ ನೀಡು" ಎಂದು ಪ್ರಾರ್ಥಿತನಾದ ದೇವನು ಹೇಳುವ ಉತ್ತರವು ಹೀಗೆ ಮಾಡಿದರೆ ನಿಮಗೆ ಎಲ್ಲವೂ ಸಿದ್ಧವಾಗುವುವೆಂದು ಭಾವವು

"ಯಾವ ರೀತಿಯಲ್ಲಿ ಪುರಾತನ ದೇವತೆಗಳು ಏಕಮತ್ಯದಿಂದ ಸೇರಿ ಹವಿಸ್ಸಿನಲ್ಲಿ ತಮತಮಗೆ ಸಲ್ಲುವುದನ್ನು ಸ್ವೀಕರಿಸುವರೋ § ಹಾಗೇ ನೀವೆಲ್ಲರೂ ಒಟ್ಟಾಗಿ ಸೇರಿ, ಪರಸ್ಪರ ವಿರೋಧವನ್ನು ಬಿಟ್ಟು ಏಕವಾಕ್ಯರಾಗಿ, ನಿಮ್ಮ ಮನಸ್ಸು ಏಕರೂಪಾರ್ಥವನ್ನೇ ಗ್ರಹಿಸಲಿ

"ಇದಕ್ಕೆ ಪ್ರವರ್ತಿಸಿದವರ ಮಂತ್ರ (ಗುಪ್ತಭಾಷಣ) ವು ಏಕವಿಧವಾಗಲಿ, ಸಮಿತಿ (ಪ್ರಾಪ್ತಿ) ಯೂ ಏಕರೂಪವಾಗಲಿ, ಮನನ ಸಾಧನಾಂಗವೂ ಒಂದೇ ವಿಧವಾಗಲಿ, ವಿಚಾರಜ ಜ್ಞಾನವೂ ಏಕೀಭೂತವಾಗಲಿ, ನಾನೂ ಸಮಾನಮಂತ್ರವನ್ನು ಎಲ್ಲವೂ ಏಕವಿಧವಾಗುವಂತೆ ಅಭಿಮಂತ್ರಿಸಿ ಸಮಾನವಾದ ಹವಿಸ್ಸನ್ನು ಹಾಕುವೆನು

"ನಿಮ್ಮ ಸಾಹಿತ್ಯವು (ಸೇರುವಿಕೆ) ಸುಷ್ಠುವಾಗುವುದಕ್ಕೆ ಹೇಗೆ ಬೇಕೋ ಹಾಗೆ ನಿಮ್ಮ ಸಂಕಲ್ಪವು ಏಕವಿಧವಾಗಲಿ, ನಿಮ್ಮ ಹೃದಯವೂ ಏಕರೂಪವಾಗಲಿ, ನಿಮ್ಮ ಅಂತಃಕರಣವೂ ಏಕರೂಪವಾಗಲಿ,"

ಭದ್ರಂಭೂಯಾತ್

—— 0 ——

ಆದಿಪಂಪ ಮಹಾಕವಿಯ ವಿಷಯವು

9 6-17 ರಲ್ಲಿ ಮೈಸೂರಲ್ಲಿ ಸೇರಿದ್ದ ಕರ್ಣಾಟಕ ಸಾಹಿತ್ಯಪರಿಷತ್ತಿನಲ್ಲಿ
ಮೈಸೂರು ಟ್ರೈನಿಂಗ್ ಕಾಲೇಜಿನ ಕನ್ನಡ ಸೀನಿಯರ್ ಪಂಡಿತರು,
ವೇ|| ಎಸ್. ತಿಮ್ಮಪ್ಪಯ್ಯ ಶಾಸ್ತ್ರಿಗಳು ಮಾಡಿದ ಉಪನ್ಯಾಸವು.

ಸಭ್ಯಮಹಾಶಯರೇ !

ಕರ್ಣಾಟಕ ಸಾಹಿತ್ಯಪರಿಷತ್ತಿನ ನಿಯಮದಿಂದ ಆದಿಪಂಪ ಮಹಾಕವಿಯ ವಿಷಯವು ಈಗ ಇಲ್ಲಿ ಉಪನ್ಯಾಸ ಮಾಡತಕ್ಕುದಾಗಿರುವುದು ಈ ಕವಿಯ ವಿಷಯವನ್ನೂ ಈತನ ಕವಿತ್ವದ ಬಗೆಯನ್ನೂ ಬಿಡದೆ ಇದ್ದಂತೆ ಮೊದಲಿನಿಂದ ತುದಿಯವರೆಗೆ ವಿವರಿಸುವುದಕ್ಕೆ ಸಾಕಾದ ಸಲಕರಣೆಗಳೂ, ಕಾಲವೂ, ಶಕ್ತಿಯೂ ಇಲ್ಲ. ಆದರೆ ಇವಕ್ಕೆ ಸಲ್ಲುವ ಕೆಲವಂಶಗಳನ್ನು ತಿಳಿಸಿದರೂ ಇವುಗಳ ಸ್ವರೂಪಜ್ಞಾನವಾಗುವುದಕ್ಕೆ ಅಡ್ಡಿಯಿಲ್ಲ ಮರವನ್ನು ತಿಳಿಸಬೇಕೆಂದು ಹೊರಟವನು ಅದರ ನಾರು ಬೇರು ಮೊದಲಾದುವೆಲ್ಲವನ್ನೂ ತುಸವೂ ಬಿಡದೆ ವಿವರಿಸದೆ, ಕೊನೆ ಕೊಂಬೆಗಳುಳ್ಳುದಾಗಿ ಬೆಳೆವುದು ಮರವೆಂದರೂ ಅದರ ಸ್ವರೂಪವು ಸಾಮಾನ್ಯವಾಗಿ ತಿಳಿಯಬರುವುದಿಲ್ಲವೆ ? ಆದುದರಿಂದ ಪಂಪಕವಿಯ ವಿಷಯವನ್ನು ಸಿಕ್ಕಿದ ಸಲಕರಣೆಗಳಿಂದ ತಿಳಿದ ಮಟ್ಟಿಗೆ ಇಲ್ಲಿ ಅರಿಕೆಮಾಡಿಕೊಳ್ಳುತ್ತೇನೆ ಇದಕ್ಕೆ ಮೊದಲು

§ This shows even gods have to throw off their mutual jealousy and unite together for the common good, *e g* Fire-god carries offerings to water-god.

ಕವಿಚರಿತ್ರೆಯನ್ನು ತಿಳಿವುದರಿಂದ ಗ್ರಂಥವನ್ನೋದುವುದಕ್ಕೆ ಸಹಾಯವೇನಾಗುವುದೆಂಬುದನ್ನು ಸ್ವಲ್ಪ ವಿಚಾರಮಾಡಬೇಕಾಗಿದೆ.

ಕೆಲವರು "ಒಬ್ಬ ಕವಿಯ ಗ್ರಂಥವನ್ನೋದಬೇಕಾದರೆ ಆತನ ಚರಿತ್ರೆಯಿಂದೇನು? ಆ ಗ್ರಂಥದ ಅರ್ಥ ತಾತ್ಪರ್ಯ ಮೊದಲಾದುವನ್ನು ತಿಳಿದರೆ ಸಾಕು. ಕವಿಚರಿತ್ರೆಗಾಗಿ ಹೊತ್ತುಗಳೆವುದು ವ್ಯರ್ಥವಾದುದು" ಎನ್ನುವರು. ಅವರು ಹೇಳುವಂತೆ ಒಂದು ಗ್ರಂಥವನ್ನೋದುವುದು ಅದರ ಅರ್ಥ ತಾತ್ಪರ್ಯ ಮೊದಲಾದುವುಗಳ ಪರಿಜ್ಞಾನಕ್ಕಾಗಿಯೇ ಸರಿ. ಆದರೆ ಆ ಅರ್ಥ ಮೊದಲಾದುವು ಆ ಗ್ರಂಥಕರ್ತೃವಿನ ದೇಶಕಾಲ ಯೋಗ್ಯತೆಗಳನ್ನು ತಿಳಿವ ಹೊರತು ಸ್ಪಷ್ಟವಾಗುವುದಿಲ್ಲ. ಹೇಗೆಂದರೆ—

ಕವಿಯ ದೇಶದ ಪರಿಜ್ಞಾನದಿಂದ ಆಗುವ ಪ್ರಯೋಜನಗಳು.

ಕವಿಗಳು ತಾವಿದ್ದ ದೇಶದಲ್ಲಿ ಯಾವ ನಡತೆಗಳಿರುವುವೋ ಅವನ್ನು ತಮ್ಮ ಗ್ರಂಥಗಳಲ್ಲಿ ವರ್ಣಿಸಿರುವರು. ಆ ದೇಶದ ನಡವಳಿಕೆಯನ್ನು ತಿಳಿಯದವನಿಗೆ ಅವು ಅರ್ಥವಾಗುವುದಿಲ್ಲ. ಉದಾಹರಣೆ—ಇದೇ ಪಂಪನು ತನ್ನ ಭಾರತಗ್ರಂಥದ ೧೨ನೆಯ ಆಶ್ವಾಸ ೧೮ ನೆಯ ಪದ್ಯದಲ್ಲಿ ದುರ್ಯೋಧನನು ಭೀಷ್ಮರಿಗೆ ಸೇನಾಧಿಪತ್ಯಪಟ್ಟವನ್ನು ಕಟ್ಟಿದಾಗ ಕರ್ಣನು ಹಾಸ್ಯಮಾಡಿದನೆಂದು ಹೇಳುವಲ್ಲಿ "ಭಗವತಿಯೇರು ವೇಳ್ವತೆರದಿಂ ಕಥೆಯಾಯ್ತು ವರೇಣ್ಯ...." ಎಂಬುದು ಮೊದಲಾದ ಪದ್ಯವನ್ನು ರಚಿಸಿರುವನು.—ನವರಾತ್ರಿಯಲ್ಲಿ ದೇವಿಯನ್ನು ಪೂಜಿಸುವುದಕ್ಕಾಗಿ ದೇವಿಯ ಕಂದ ಲನ್ನಾಗಲಿ ವಿಗ್ರಹವನ್ನಾಗಲಿ ಗದ್ದಿಗೆಯಮೇಲೆ ಕುಳ್ಳಿರಿಸಿದ್ದು ಪೂಜೆಮಾಡಿ ವಿಸರ್ಜನೆ ಮಾಡುವುದುಂಟೆಂಬ ದೇಶಾಚಾರವು ತಿಳಿಯದಿದ್ದರೆ ಇದರ ಅಭಿಪ್ರಾಯವು ಸೆಟ್ಟಗೆ ಆಗುವುದಿಲ್ಲ. ಜನ್ನಮಹಾಕವಿಯು ಮಾಡಿದ ಯಶೋಧರ ಚರಿತ್ರೆಯಲ್ಲಿ ಹೇಳಿರುವ ಮಾರಿಯ ಸಿಡಿ ಮೊದಲಾದುವು ದೇಶವಿಶೇಷದಲ್ಲಿ ರೂಢವಾದ ಮಾರಿಯ ಜಾತ್ರೆಯನ್ನು ತಿಳಿಯದವರಿಗೆ ಅರ್ಥವಾಗುವುದಿಲ್ಲ. ಮತ್ತು ಕವಿಯು ತನ್ನ ದೇಶದಲ್ಲಿ ಒಟ್ಟೊಟ್ಟಗೆ ಒಂದೊಂದು ಅರ್ಥವಿಶೇಷವನ್ನು ಹೇಳುವುದಕ್ಕೆ ರೂಢವಾಗಿರುವ ಮಾತುಗಳನ್ನು ತನ್ನ ಗ್ರಂಥದಲ್ಲಿ ಪ್ರಯೋಗಿಸುವುದುಂಟು. ಉದಾ—ಪಂಪ ಭಾರತದ ೮ ನೆಯ ಆಶ್ವಾಸ ೨೮ ನೆಯ ಪದ್ಯದಲ್ಲಿ ರಾಜಸೂಯ ಯಾಗವನ್ನು ಮಾಡುವುದು ಅಸಾಧ್ಯವೆಂದು ಕೃಷ್ಣನು ಪಾಂಡವರನ್ನು ಹೆದರಿಸಲು ಭೀಮನು ರಾಜಸೂಯ ಯಾಗವನ್ನು ಮಾಡಿಸುವೆನೆಂಬ ಪ್ರತಿಜ್ಞೆಯನ್ನು ತಪ್ಪೆನೆಂದು ವಾದಿಸುವಲ್ಲಿ "ಎನ್ನಯ ನುಡಿ ಟಾರ ಡಭಣಾಮನ್ನಂಬೆಸಸುವುದು ರಾಜಸೂಯಂಬೇಳಲ್" ಎಂದು ಹೇಳಿದೆ. "ಇಲ್ಲ ಟಾರ ಡಭಣಾಂ" ಎಂದರೆ—ವ್ಯತ್ಯಾಸವನ್ನು ಹೊಂದುವುದಿಲ್ಲವೆಂಬರ್ಥವನ್ನು ದೇಶರೂಢಿಯಿಂದರಿಯಬೇಕಾಗಿದೆ. ಮತ್ತು ಭಾರತದ ೧೧ ನೆಯ ಆಶ್ವಾಸ ೧೫ ನೆಯ ಪದ್ಯದಲ್ಲಿ "ಮೇಳಿಸಿನಣ್ಪನೆ ಬಗೆದರ್, ಜೋಳದಪಾಳಿಯು ಮನಸಿನ ಬಗೆಯಿಂವಿಮ್ಮೊಳ್" ಎಂದಿರುವುದು. ಇಲ್ಲಿ ಜೋಳವೆಂದರೆ ನಮ್ಮಲ್ಲಿ ಉಪ್ಪು ಎಂಬುದರಂತೆ ಹಂಗು ಎಂಬರ್ಥವಾಗಬೇಕು. "ನಮೋಸ್ತುಗೆಯ್ವಂದದಿಸಿದರ್ಮ" ಇವು ಮೊದಲಾದ ಎಷ್ಟೋ

ಉದಾಹರಣೆಗಳು ಗ್ರಂಥಗಳಲ್ಲಿ ಸಿಕ್ಕುವುವು ಆಯಾ ದೇಶದಲ್ಲಿ ಮಾತ್ರ ರೂಢವಾದ ನಾಣ್ಯ ಪರಿಮಾಣ ಮೊದಲಾದುವನ್ನು ಹೇಳುವ ಶಬ್ದಗಳಿಗೂ, ಅಪೂರ್ವವಾದ ನಾಮ ಪದಗಳಿಗೂ ದೇಶ ಪರಿಜ್ಞಾನವಿಲ್ಲದ ಅರ್ಥವಾಗುವುದಿಲ್ಲ ಉದಾಹರಣೆ — ಬಜ್ಜೆ, ಗದ್ಯಾಣ, ಸೂಡುಪಾಡು, ದಾವಣಿಗಿಡ್ಡಂಗಿ, ಬಳ್ಳ, ಉಯ್ಯ ಮೊದಲಾದುವು ಹೀಗೆ ದೇಶಭೇದದಲ್ಲಿ ರೂಢವಾಗಿ ಪರಸ್ಪರರಿಗೆ ಅರ್ಥವಾಗದಿರುವ ಮಾತುಗಳ ವಿಷಯವಾಗಿ ೧೦ ವರ್ಷದ ಹಿಂದೆ ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘದಲ್ಲಿ ನಾನು ಮಾಡಿದ ಉಪನ್ಯಾಸದಲ್ಲಿ ಇನ್ನೂ ಸ್ವಲ್ಪ ವಿಸ್ತಾರವಾಗಿ ತಿಳಿಸಿರುತ್ತೇನೆ ಇನ್ನು ಅನೇಕ ದೇಶಗಳಲ್ಲಿ ವ್ಯಾಪಕವಾಗಿರುವ ಸಂಸ್ಕೃತದ ಭಾಷೆಯಲ್ಲೂ ಮೇಖಲಾದಿ ಶಬ್ದಗಳಿಗೆ ಅರ್ಥವಾಗಬೇಕಾದರೆ ಕವಿಯ ದೇಶವು ತಿಳಿದಿರಬೇಕಾಗಿರುವಲ್ಲಿ ನಾಡಿನ ಭಾಷೆಯಾದ ಕನ್ನಡದ ಪದಗಳಿಗೆ ಅರ್ಥವಾಗಬೇಕಾದರೆ ಕವಿಯ ನಾಡು ತಿಳಿದಿರಬೇಕೆಂದು ಹೇಳಬೇಕಾದುದೇನು ? ಮತ್ತು ಕನ್ನಡ ಭಾಷೆಯ ಗ್ರಂಥಗಳು ಹುಟ್ಟಿದಾಗಿನಿಂದಲೂ ಅವು ಗ್ರಂಥಕರ್ತೃವಿನ ಅಭಿಪ್ರಾಯವನ್ನು ಸರಿಯಾಗಿ ತಿಳಿಸುವುದಕ್ಕೆ ಅವಿಚ್ಛಿನ್ನವಾದ ಪ್ರವಚನ ಪರಂಪರೆಯು ನಡೆದು ಬಂದಂತೆ ಕಾಣಬರುವುದಿಲ್ಲ. ಕನ್ನಡ ಗ್ರಂಥಗಳಿಗೆ ವ್ಯಾಖ್ಯಾನಗಳು ಇಲ್ಲದಿರುವುದೇ ಹೀಗೆ ಊಹಿಸುವುದಕ್ಕೆ ಸಾಧಕವಾಗಿದೆ ಆದ್ದರಿಂದಲೇ ಕನ್ನಡದಲ್ಲಿ ಏನಾದರೂ ಸಂದೇಹ ಬಂದರೆ ಆಯಾ ನಾಡಿನವರಲ್ಲಿರುವ ರೂಢಿಯನ್ನರಿತು ಅರ್ಥಮಾಡಬೇಕೆಂಬುದನ್ನು ತೋರಿಸುವುದಕ್ಕೆ ಕವಿರಾಜಮಾರ್ಗವೆಂಬ ತನ್ನ ಗ್ರಂಥದಲ್ಲಿ ನೃಪತುಂಗನು "ಕನ್ನಡಕ್ಕೆ ನಾಡವರೋಜರ್" ಎಂದು ಹೇಳಿರುವನು ಅಂತು ಕವಿಯ ದೇಶವನ್ನು ತಿಳಿದಿದ್ದರೆ ಆ ದೇಶದಲ್ಲಿ ಈಗಲೂ ಸ್ವಲ್ಪ ವ್ಯತ್ಯಾಸದಿಂದಾಗಲಿ ಅದೇ ರೂಪದಿಂದಾಗಲಿ ಇರುವ ಮೇಲೆ ಹೇಳಿದಂತಹ ಮಾತುಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿಯಬಹುದು. ಇಲ್ಲದಿದ್ದರೆ ಪದಗಳಿಗೆ ಅಪಾರ್ಥವಾಗುವುದು.

ಕವಿಯ ಕಾಲವನ್ನು ತಿಳಿವುದರಿಂದಾಗುವ ಪ್ರಯೋಜನಗಳು

ಕವಿಯು ತನ್ನ ಕಾಲದಲ್ಲಿದ್ದ ಪದಾರ್ಥಗಳನ್ನೂ, ನಾಗರಿಕತೆ, ಪ್ರಾಣಶಕ್ತಿ— ಮೊದಲಾದುವನ್ನೂ ವರ್ಣಿಸುವನು ಆ ಕಾಲದ ಸ್ವಭಾವವು ತಿಳಿಯದಿದ್ದರೆ ಮೇಲೆ ಹೇಳಿರುವು ಕವಿಯ ಕಾಲದಲ್ಲಿ ಸಾಧಾರಣವಾಗಿದ್ದರೂ ಕಾಲಕ್ರಮದಲ್ಲಿ ನಾಗರಿಕತೆ, ಶಕ್ತಿ—ಮೊದಲಾದುವು ವ್ಯತ್ಯಸ್ತವಾಗುತ್ತವೆಯಾಗಿ ಆಗ ಆ ಪದಾರ್ಥಗಳ ವರ್ಣನೆಗಳನ್ನು ಕೇಳಿದರೆ ಅವು ಅತಿಶಯೋಕ್ತಿಗಳೆಂದಾಗಲಿ, ಅಸಂಭಾವಿತಗಳೆಂದಾಗಲಿ ಇಲ್ಲವೆ ಸುಳ್ಳೆಂದಾಗಲಿ ತೋರಬಹುದು ಉದಾ— ಸ್ಪರ್ಶಶಿಲೆ (ಪರುಸದರೆ) ಶರಭ—ಮೊದಲಾದ ಪದಾರ್ಥಗಳನ್ನು ಅತ್ಯಂತ ಪ್ರಾಮಾಣಿಕರಾದವರು ಪುರಾಣಾದಿಗಳಲ್ಲಿ ಹೇಳಿರುವರು, ಅದನ್ನನುಸರಿಸಿ ರಾಜಶೇಖರವಿಳಾಸ ಮೊದಲಾದ ಕನ್ನಡ ಗ್ರಂಥಗಳಲ್ಲೂ ಅವನ್ನು ವರ್ಣಿಸಿರುವರು. ಈ ಪದಾರ್ಥಗಳು ಪೂರ್ವಕಾಲದಲ್ಲಿ ರೂಢವಾಗಿಲ್ಲದಿದ್ದರೆ ಅವುಗಳ ಪ್ರಸಕ್ತಿಯೇ ಬರುತ್ತಿರಲಿಲ್ಲ ಪ್ರಕೃತಕಾಲದಲ್ಲಿ ಕಾಣದಿದ್ದ ಮಾತ್ರಕ್ಕೆ

ಒಂದು ಪದಾರ್ಥವು ಹಿಂದೆ ಇರಲೇ ಇಲ್ಲವೆಂದು ಊಹಿಸುವುದು ಸರಿಯಲ್ಲ. ಅತ್ಯಂತಾಸಂಭಾವಿತಗಳಾದ ಜಾಂಬವರೆ, ನೆಲದಕೋಡು-ಮೊದಲಾದುವನ್ನು ಯಾರು ವರ್ಣಿಸಿರುವರು? ರಾಮಾಯಣಾದಿಗಳಲ್ಲಿ ವರ್ಣಿಸಿರುವ ಆಕಾಶವಿಮಾನಾದಿಗಳು ಈಚೆಗೆ ಪಾಶ್ಚಾತ್ಯರ ನಿರ್ಮಾಣಕೌಶಲ್ಯವನ್ನರಿತವರಿಂದ ಸಂಭಾವಿತವೆಂದು ಊಹಿಸಲ್ಪಡುತ್ತಿರುವುವು. ಇನ್ನು, ಒಂದು ಕಡೆ ಏಕಿದರ ಸಾವಿರಾರು ದೀಪಗಳು ಒಂದೇ ಕಾಲದಲ್ಲಿ ಎಣ್ಣೆ ಬತ್ತಿಗಳಿಲ್ಲದೆ ಹತ್ತಿಕೊಂಡು ನಕ್ಷತ್ರಗಳಂತೆ ಬೆಳಗುತ್ತಿದ್ದುವೆಂದು ಒಬ್ಬ ಕವಿಯು ಈಗ ಇರುವ ವಾಸ್ತವಸ್ಥಿತಿಯನ್ನು ಬರೆದಿಟ್ಟರೆ ಈಗಿನ ವೈದ್ಯುತದೀಪ ಸ್ವಭಾವವನ್ನರಿಯದವರು ಕಾಲಾಂತರದಲ್ಲಿ ಇದನ್ನು ಸುಳ್ಳೆನ್ನುವರು. ಕವಿಯ ಕಾಲವು ತಿಳಿದಿದ್ದರೆ ಈ ಸಂದೇಹಗಳು ಬರುವುದಿಲ್ಲ.

ಶಕ್ತಿ.

ಮಹರ್ಷಿಗಳು ಮಾಡಿದ ಭಾರತ ರಾಮಾಯಣಾದಿ ಗ್ರಂಥಗಳಲ್ಲಿ ಹೇಳಿರುವ ಭೀಮ, ಹನುಮಂತ—ಮೊದಲಾದವರ ಸಾಹಸವನ್ನು ಕೇಳಿದರೆ, ಆ ಕಾಲದ ಸ್ಥಿತಿಯನ್ನರಿಯದವರು ಆ ವರ್ಣನೆಯನ್ನು ಸುಳ್ಳೆನ್ನುವರು. ಆ ಋಷಿಗಳ ಕಾಲವನ್ನು ತಿಳಿದು, ಅದರ ಸ್ವಭಾವವನ್ನೂಹಿಸುವವರಿಗೆ ಈಚೆಗೆ ಆನೆಗಿಂತಲೂ ದೊಡ್ಡಮೈಯುಳ್ಳ ಪ್ರಾಣಿಯ ಅಸ್ಥಿಪಂಜರವು ಪಾಶ್ಚಾತ್ಯಶೋಧಕರಿಗೆ ಸಿಕ್ಕಿ ಪೂರ್ವಕಾಲದ ಪ್ರಾಣಿಗಳು ಈ ಕಾಲದವಕ್ಕಿಂತ ಮಹಾತಿಶಯವನ್ನು ಪಡೆದಿದ್ದುವೆಂದು ಊಹಿಸುವ ಹಾಗೆಯೇ ಹನುಮದ್ಭೀಮಾದಿಗಳ ಶಕ್ತಿಯೂ ಸಂಭವನೀಯವೆಂದು ತೋರದೆ ಇರಲಾರದು. ಹೀಗೆಯೇ ವ್ಯಾಸಭಾರತವನ್ನು ನೋಡಿ ಮಾಡಿದ ಭೀಮವರ್ಣನೆಯ

"ಮದಗಜವೆರಡರ ಬಾಲದ |
ಮೊದಲಂ ಪಿಡಿದೆತ್ತಿಯೊತ್ತಿ ನುಗ್ಗುಗೆತ್ತಿರೆಯಾ ||
ಸ್ಯದಿನುಗುವ ರಕ್ತಮುರಿಯನ |
ತಿರಿಯೊತ್ತುವ ಕಮ್ಮರಂಬೂಲರ್ದಂ ಭೀಮಂ ||

ಎಂಬ ಪದ್ಯವು ಭಾರತದ ಕಾಲವನ್ನು ತಿಳಿದವರಿಗೆ ಅತಿಶಯೋಕ್ತಿಯುಳ್ಳುದಲ್ಲವೆಂದು ಗೊತ್ತಾಗಬಹುದು. ಆದುದರಿಂದ ಕವಿಯು ಇದ್ದ ಕಾಲವು ತಿಳಿದಿದ್ದರೆ ಆ ಕಾಲದ ಸ್ವಭಾವವನ್ನು ಕಾರಣಾಂತರದಿಂದ ತಿಳಿದು ಕವಿಯ ವರ್ಣನೆಯು ಸರಿಯೋ ತಪ್ಪೋ ನಿರ್ಣಯಮಾಡಬಹುದು. ಇಲ್ಲದಿದ್ದರೆ ಆ ವರ್ಣನೆಗಳು ನಂಬಿಕೆಗೆ ಅರ್ಹವಾಗ್ಗುವುದಿಲ್ಲ.

ಕವಿಯ ಯೋಗ್ಯತೆಯನ್ನು ತಿಳಿವುದರಿಂದ ಆಗುವ ಪ್ರಯೋಜನಗಳು

ಕವಿಯ ಯೋಗ್ಯತೆಯಲ್ಲಿ ಶಾಸ್ತ್ರಪಾಂಡಿತ್ಯ, ಸದ್ಗುಣಶಾಲಿತ್ವ, ಸದಾಚಾರಸಂಪನ್ನತೆ ಇವು ಸೇರಿರುವುವು. ಕವಿಯು ವ್ಯಾಕರಣಾದಿಶಾಸ್ತ್ರಗಳಲ್ಲಿ ಪರಿಣತನೆಂದು ತಿಳಿಯಬಂದರೆ, ಆತನ ಪ್ರಯೋಗಗಳನ್ನು ಓದುವವರು ಪ್ರಮಾಣವೆಂದು ಗ್ರಹಿಸಿ ತಾವೂ ಅವನ್ನು ಲೋಕದಲ್ಲಿ ಪ್ರಯೋಗಿಸುವರು. ಇಲ್ಲದಿದ್ದರೆ ಸ್ವತಃ ಶಾಸ್ತ್ರ

ಜ್ಞಾನವಿಲ್ಲದವರು, ಹರಿಕಥೆಯನ್ನು ಮಾಡುವವರ ಹಾಗೆ ಅಲ್ಲಲ್ಲಿ ಕೆಲವು ಶಾಸ್ತ್ರೀಯ ವಿಷಯಗಳನ್ನು ಕೇಳಿಕೊಂಡು ತಮ್ಮ ಗ್ರಂಥಗಳಲ್ಲಿ ಸೇರಿಸಿ ಇರಬಹುದೆಂದು ಓದುವವರಿಗೆ ಪ್ರಮಾಣವಾಗಿ ತೋರುವುದಿಲ್ಲ. ಲೋಕದಲ್ಲಿ ಗುಣಾಢ್ಯರಾದವರ ತಾತ್ಪರ್ಯವು ಉದಾರವಾಗಿಯೂ ದೀರ್ಘವಾದ ವಿಮರ್ಶೆಯಿಂದ ತಿಳಿಯತಕ್ಕವುಗಳಾಗಿಯೂ ಇರುವುದರಿಂದ, ಕವಿಗಳು ಸದ್ಗುಣಗಂಭೀರರೆಂದು ತಿಳಿಯಬಂದರೆ ಅವರ ಕಾವ್ಯದ ತಾತ್ಪರ್ಯಗಳನ್ನು ಓದುವವರು ವಿಮರ್ಶೆಯಿಂದ ಹುಡುಕಿ ತೆಗೆದು ದೃಢವಾಗಿ ಅವಲಂಬಿಸುವರು. ಇದರಿಂದ ವಿಶೇಷ ಪ್ರಯೋಜನಗಳೂ ಆಗುವುವು. ಕವಿಯು ಅಲ್ಪನೆಂದು ತೋರಿದರೆ ಅವನ ಅಲ್ಪವಾದ ತಾತ್ಪರ್ಯವು ವಾಚ್ಯಕ್ಕಿಂತ ಅತಿಶಯವಾಗದೆಯೂ ಗ್ರಾಹ್ಯವಲ್ಲದೆಯೂ ಇರುವುದರಿಂದ ಓದತಕ್ಕವರು ಅದಕ್ಕಾಗಿ ವಿಶೇಷ ಶ್ರಮಪಡಬೇಕಾದುದಿಲ್ಲ.

ಕವಿಯು ಗ್ರಂಥದ ಮುಖದಿಂದ ಸದ್ವಿಷಯಗಳನ್ನು ಬೋಧಿಸುವಂತೆ ತಾನೂ ಆಚರಿಸತಕ್ಕವನೆಂದು ತಿಳಿಯಬಂದರೆ ಆ ಗ್ರಂಥವನ್ನೋದತಕ್ಕವರು ಆತನನ್ನು ಮತಸ್ಥಾಪಕರಾದ ಆಚಾರ್ಯಪುರುಷರಂತೆ ಭಾವಿಸಿ ಆತನ ಗ್ರಂಥಗಳಲ್ಲಿ ಹೇಳಿರುವ ವಿಷಯವನ್ನು ಪರಮಾರ್ಥವಾಗಿ ಎಣಿಸಿ ತಾವೂ ಆಚರಿಸುವರು. ಹಾಗಲ್ಲದೆ ಕವಿಯು ಗ್ರಂಥದಲ್ಲಿ ಮಾತ್ರ ಒಳ್ಳೆಯ ವಿಷಯಗಳನ್ನು ಬೋಧಿಸುತ್ತ ಆಚರಣೆಯಲ್ಲಿ ಕೀಳಾದವನೆಂದು ತಿಳಿಯಬಂದರೆ ಈ ಗ್ರಂಥಗಳಲ್ಲಿ ಹೇಳಿರುವಂತೆ ಕವಿಯು ತಾನೇ ನಡೆಯುತ್ತಿರಲಿಲ್ಲವಾಗಿ ಈ ಗ್ರಂಥದ ವಿಷಯವು ನಂಬಿಕೆಗೆ ಅರ್ಹವಲ್ಲವೆಂದು ಓದುವವರ ಮನಸ್ಸಿಗೆ ಇವು ಹತ್ತುವುದಿಲ್ಲ. ಇದರಿಂದ ಗ್ರಂಥವನ್ನು ಓದುವವರಿಗೆ ಶ್ರಮಮಾತ್ರವಲ್ಲದೆ ಪ್ರಯೋಜನವೇನೂ ಆಗುವುದಿಲ್ಲ. ಕೆಲವರು ಕವಿಗಳು ಜನಗಳಿಗೆ ರಂಜನೆಯಾಗಲೆಂದು, ಇಲ್ಲದುದನ್ನೇ ಕಟ್ಟಿ ವರ್ಣಿಸುವುದುಂಟು. ಇಂತಹ ಸಂದರ್ಭದಲ್ಲಿ ಆತನ ಸ್ವಭಾವವನ್ನು ತಿಳಿಯದವರು ಅದೇ ಪರಮಾರ್ಥವೆಂದು ನಂಬಿ ಅದರಂತೆ ನಡೆದು ಕೆಟ್ಟುಹೋಗುವ ಸಂಭವವೂ ಉಂಟು. ಕವಿಯ ಯೋಗ್ಯತೆಯನ್ನು ತಿಳಿದಿದ್ದರೆ ಈ ವಿಧವಾದ ಅನರ್ಥಗಳಿಗೆ ಅವಕಾಶವಾಗುವುದಿಲ್ಲ. ಆದುದರಿಂದ ಆತನ ಯೋಗ್ಯತೆ ಮೊದಲಾದುವನ್ನು ತಿಳಿವುದು ಓದುವವರಿಗೆ ಆವಶ್ಯಕವೆಂದು ಸಿದ್ಧವಾಯಿತು. ವಾಕ್ಯವನ್ನು ಪ್ರಯೋಗಮಾಡುವವನ ದೇಶ, ಕಾಲ ಸ್ವಭಾವಗಳು ತಿಳಿಯದಿದ್ದರೆ ಅಪಾರ್ಥವಾಗುವುದು ಪ್ರಸಿದ್ಧವಾಗಿಯೇ ಇರುವುದು. ಸೈಂಧವವನ್ನು ತೆಗೆದುಕೊಂಡು ಬಾ, ಮಣ್ಣು ತಿನ್ನು–ಮೊದಲಾದುವು ಇದಕ್ಕೆ ಉದಾಹರಣೆಗಳು.

ಮುಖ್ಯವಾಗಿ ಪ್ರಾಚೀನಮಹಾಕವಿಗಳೂ, ಮತಪ್ರವರ್ತಕರೂ, ಶಾಸ್ತ್ರಕಾರರೂ ಇನ್ನೂ ಮಹಾಮಹಿಮರಾದ ಮಹಾಪುರುಷರೂ ಇವರೆಲ್ಲ ಯಾವ ನಡತೆಯುಳ್ಳವರಾಗಿದ್ದು ಕವಿತ್ವ ಮೊದಲಾದುವನ್ನು ಯಾವ ಯಾವ ಸಲಕರಣೆಗಳಿಂದ ಯಾವ ರೀತಿಯಲ್ಲಿ ಅಭ್ಯಾಸಮಾಡಿ ಯೋಗ್ಯತೆಯನ್ನು ಪಡೆದು ತಮ್ಮ ತಮ್ಮ ಆಚರಣೆಗಳಿಂದ ಲೋಕಕ್ಕೆ ಆದರ್ಶಭೂತರಾಗಿ ಗ್ರಂಥಸಂತಾನಾದಿಗಳಿಂದ ಪ್ರಯೋಜನವನ್ನುಂಟು

ಮಾಡಿದರೋ ಅದನ್ನು ತಿಳಿಯದೆ ಇರುವುದರಿಂದಲೇ ನಮ್ಮ ಆಚಾರಕ್ಕೂ, ಸದ್ಗ್ರಂಥೋತ್ಪಾದನಕ್ಕೂ, ನಮ್ಮ ಏಳ್ಗೆಗೂ ಕುಂದಕವುಂಟಾಗುತ್ತ ಬಂದಿರುವುದೆಂದು ತೋರುತ್ತದೆ ಮೇಲುಪಙ್ಕ್ತಿಯನ್ನು ಚೆನ್ನಾಗಿ ನೋಡುತ್ತಿದ್ದರೆ ಕೆಳಪಙ್ಕ್ತಿಯು ಕೀಳಾಗಲಾರದಲ್ಲವೆ?

ಮೇಲೆ ಹೇಳಿದ ಪ್ರಯೋಜನಗಳೆಲ್ಲವೂ ಕವಿಚರಿತ್ರೆಯ ಜ್ಞಾನದಿಂದ ಆಗಬೇಕಾದರೆ ಆ ಚರಿತ್ರೆಗಳು ಅವರವರ ಕಾಲದಲ್ಲೇ ಇದ್ದಂತೆ ತಿಳಿದವರು ಬರೆದುವುಗಳಾಗಿರಬೇಕು. ಇಲ್ಲದಿದ್ದರೆ ಆಗ ಇದ್ದುದೊಂದು ಈಗ ಊಹಿಸುವುದೊಂದು ಆಗಿ ಇನ್ನೂ ಕೇಡಿಗೇ ಕಾರಣವಾಗುವುದು ಪ್ರಕೃತ ಪಂಪಮಹಾಕವಿಯ ಚರಿತ್ರೆಯು ಎಲ್ಲಾ ಭಾಗದಲ್ಲೂ ಸರಿಯಾಗಿ ತಿಳಿದುಬಂದಿಲ್ಲವಾದರೂ ಮ|| ಆರ್. ನರಸಿಂಹಾಚಾರ್ಯರವರೂ ಮ|| ಎಸ್ ಜಿ ನರಸಿಂಹಾಚಾರ್ಯರವರೂ ಕಂಡುಹಿಡಿದಿರುವುದನ್ನೂ, ಆ ಕವಿಯ ಗ್ರಂಥಗಳಿಂದ ಕಂಡುಬರುವುದನ್ನೂ ಕೆಲಮಟ್ಟಿಗೆ ತೆಗೆದುಕೊಂಡು ವಿಶೇಷ ವಿಚಾರಗಳೊಡನೆ ಆತನ ವಿಷಯವಾದ ಕೆಲವಂಶಗಳನ್ನು ಅರಿಕೆಮಾಡುತ್ತೇನೆ

ಆದಿಪಂಪ

ಈತನಿಗೆ ಹಂಪ, ಪಂಪುಗ, ಗುರುಹಂಪ ಎಂಬ ನಾಮಾನ್ತರಗಳೂ ಇದ್ದಂತೆ ತಿಳಿಯ ಬರುತ್ತದೆ ಈತನ ವಂಶಸ್ಥರು ವೆಂಗಿ ಮಂಡಲದಲ್ಲಿ ವೆಂಗಿಪಳುನೆಂಬ ಅಗ್ರಹಾರದಲ್ಲಿದ್ದರು ವತ್ಸಗೋತ್ರದ ಬ್ರಾಹ್ಮಣರಾದ ಇವರಲ್ಲಿ ಪ್ರಖ್ಯಾತನಾದ ಮಾಧವಸೋಮಯಾಜಿಗೆ ಅಭಿಮಾನಚಂದ್ರನೆಂಬವನೂ, ಆತನ ಮಗ ಕೊಮಾರಯ್ಯನಿಗೆ ಅಭಿರಾಮದೇವರಾಯನೆಂಬವನೂ ಮಕ್ಕಳಾದರು ಅಭಿರಾಮದೇವರಾಯನಿಗ ಜೈನಮತವು ರುಚಿಸಿರುದರಿಂದ ಅವನು ಆ ಮತವನ್ನವಲಂಬಿಸಿದನು ಈತನ ಮಗನೇ ಪ್ರಕೃತನಾದ ಪಂಪ ಮಹಾಕವಿಯು. ಈತನು ಕ್ರಿ ಶ ೯೦೨ಕ್ಕೆ ಸಲ್ಲುವ ದುಂದುಭಿ ಸಂವತ್ಸರದಲ್ಲಿ ಹುಟ್ಟಿದವನು ಈತನ ಜನ್ಮಸ್ಥಳವು ಸರಿಯಾಗಿ ತಿಳಿಯ ಬರುವುದಿಲ್ಲ ಆದರೆ ತಾನುಮಾಡಿದ ಭಾರತದ ೪ ನೆಯ ಆಶ್ವಾಸದ ಅರ್ಜುನ ತೀರ್ಥಯಾತ್ರಾವರ್ಣನೆಯ ೨೯-೩೦-೩೧ ನೇ ಪದ್ಯಗಳಲ್ಲಿ ಬನವಾಸಿದೇಶವನ್ನು ವರ್ಣಿಸುವಾಗ "ಮನುಷ್ಯನು ಬನವಾಸಿ ದೇಶದಲ್ಲಿ ಹುಟ್ಟಬೇಕು ಅದಾಗದಿದ್ದರೆ ಅಲ್ಲಿಯ ಉದ್ಯಾನದ ತುಂಬಿಯಾದರೂ, ಕೋಕಿಲೆಯಾದರೂ ಆಗಬೇಕು" ಎಂದೂ "ಆರಂಕುಸಮಿಟ್ಟೊಡಂ ನೆನೆವುದೆನ್ನಮನಂ ಬನವಾಸಿದೇಶಮಂ" ಎಂದೂ "ತೆಂಕಣ ನಾಡಮರೆಯಲ್ಕೆಂದುಂಮನಂಬರ್ಕ್ಕುಮೋ" ಎಂದೂ ಹೇಳಿರುವುದರಿಂದ ಕವಿಯು ಬನವಾಸಿ ದೇಶದಲ್ಲಿ ಹುಟ್ಟಿದವನಾಗಿರಬಹುದೆಂದು ಕೆಲವರು ಊಹಿಸುವರು ಈತನ ಗುರು ದೇವೇಂದ್ರಮುನಿ ಈತನ ಆಕಾರವು ಎಡತರವಾಗಿಯೂ (ಮಧ್ಯಸ್ಥ), ದೇಹಕಾಂತಿಯು ಬಾಳೆಯ ಸುಳಿಯಂತೆ ಶ್ಯಾಮವಾಗಿಯೂ, ತಲೆಯ ಕೂದಲು ಮೃದುಕುಟಿಲವಾಗಿಯೂ, ಮುಖವು ಪ್ರಸನ್ನಮನೋಹರವಾಗಿಯೂ, ಧ್ವನಿಯು ದುಂದುಭಿಧ್ವನಿಗೆ ಸಮಾನವಾಗಿಯೂ, ಮಾತು ಮೃದುಹಿತವಾಗಿಯೂ, ಉಡುವು ಆಡಂಬರವಿಲ್ಲದೆ

ಉಚಿತವಾಗಿಯೂ ಇದ್ದುವು ತಾನು ಸುಕವಿಗಳ ಯಶಸ್ಸಿಗೆ ಮಚ್ಚರಿಸುವವನಲ್ಲ. ಅಭಿಜನರಲ್ಲಿ ಪ್ರೇಮವುಳ್ಳವನು, ಧೈರ್ಯಶಾಲಿ, ಸಿಂಹಾಸನಪುರದ ದುಂದುಭಿ ಪತಿಯೆಂಬ ಜಿನನ ಭಕ್ತನು, ಎಂದು ಆದಿಪುರಾಣದಲ್ಲಿ ಹೇಳಿಕೊಂಡಿರುವನು ಕೊನೆಗೆ ಕವಿಯು ಚಾಲುಕ್ಯರಾಜರಲ್ಲಿ ಪ್ರಸಿದ್ಧನಾಗಿದ್ದ ಪುಲಿಗೆರೆ ರಾಜಧಾನಿ (ಸವಣೂರು ಹತ್ತಿರವಿರುವ ಹುಲುಗೂರು) ಯಲ್ಲಿದ್ದ ಅರಿಕೇಸರಿಯ ಅಪ್ಪಣೆಯಂತೆ ಈಗಿನ ಧಾರ್ವಾಡಜಿಲ್ಲಾ ಸವಣೂರು ಹತ್ತಿರವಿರುವ ಲಕ್ಷ್ಮೇಶ್ವರದಲ್ಲಿದ್ದುಕೊಂಡು, ಆದಿಪುರಾಣವನ್ನು ಮೂರು ತಿಂಗಳಲ್ಲಿಯೂ ಭಾರತವನ್ನು ಆರು ತಿಂಗಳಲ್ಲಿಯೂ ಮಾಡಿದನೆಂದೂ ಇದಕ್ಕಾಗಿ ಅರಿಕೇಸರಿ ರಾಜನು ತನಗೆ ಅನೇಕ ಬಿರುದುಗಳನ್ನೂ, ಗ್ರಾಮವನ್ನೂ, ಬೇಕಾದಷ್ಟು ದ್ರವ್ಯಗಳನ್ನೂ ಬಹುಮಾನ ಮಾಡಿದನೆಂದೂ ಈತನ ಭಾರತದಿಂದ ತಿಳಿಯಬರುತ್ತದೆ ಅರಿಕೇಸರಿಯು ಕವಿಗೆ ಕೊಟ್ಟ ಧರ್ಮಪುರವೆಂಬ ಗ್ರಾಮವು ಈಗ ಧಾರ್ವಾಡ ಜಿಲ್ಲೆಯಲ್ಲಿ ಜೊಂಬಳವೆಂದು ಕರೆಯಲ್ಪಡುತ್ತಿರುವ ಊರೆಂದು ಹೇಳುತ್ತಾರೆ ಈಗಿನ ಲಕ್ಷ್ಮೇಶ್ವರವೆಂಬ ಊರೇ ಪುಲಿಗೆರೆಯಾಗಿತ್ತೆಂದು ಕೆಲವರೆನ್ನುವರು ಕವಿಯು ಭಾರತದ ೧೪ ನೆಯ ಆಶ್ವಾಸದ

“ಪಂಪಂ ಧಾತ್ರೀವಳಯ ನಿ |
ಳಿಂಪಂ ಚತುರಂಗಬಲ ಭಯಂಕರಣಾಂ ನಿ |
ಷ್ಕಂಪಂ . . ||”

“ಕವಿತೆ ನೆಗಳ್ತೆಯುಂ ಬಿರಿಸೆ ಜೋಳವಪಾಳಿ ನಿಜಾಧಿನಾಥನಾ |
ಹವದೊಳರಾತಿನಾಯಕರ ಪಟ್ಟವೆಸಾರಿಸ ಸಂದಪೆಂಪು ಭೂ |
ಭುವನದೊಳಾವಗಂ ಬೆಳಗ ವಿಕ್ರಮಭಿಮಾನದ ಮಾತು ಕೀರ್ತಿಯುಂ |
ವಿವರಿಸೆ ಸಂದನೇಂ ಕಲಿಯೊ ಸತ್ಕವಿಯೋ ಗುಣಾರ್ಣವಂ ||”

ಎಂಬ ಪದ್ಯಗಳಲ್ಲಿ ತನ್ನ ವಿಷಯವನ್ನು ಹೇಳುವಾಗ “ಚತುರಂಗಬಲಭಯಂಕರಣಾಂ, ಜೋಳದಪಾಳಿನಿಜಾಧಿನಾಥನಾಹವದೊಳರಾತಿನಾಯಕರ ಪಟ್ಟವೆಸಾರಿಸೆ” ಎಂದು ವರ್ಣಿಸಿಕೊಂಡಿರುವುದರಿಂದ ಈತನು ಬರಿಯ ಕವಿಯಲ್ಲದ ಆ ರಾಜನಿಗೆ ಸೇನಾಧಿಪತಿಯೂ ಆಗಿರಬಹುದೆಂದು ಊಹಿಸಬಹುದಾಗಿದೆ. ಮತ್ತು ಆದಿಪುರಾಣದ ೧ನೆಯ ಆಶ್ವಾಸ ೩೨ನೆಯ ಪದ್ಯದಿಂದ ಈತನು ಯೌವನಕಾಲದಲ್ಲಿ ಕೇರಳ ಆಂಧ್ರ ಮೊದಲಾದ ದೇಶಗಳಲ್ಲಿದ್ದವನೋ ಇಲ್ಲವೇ ಅರಿಕೇಸರಿಯು ಆಂಧ್ರ ಕೇರಳ ಕರ್ಣಾಟ ಲಾಟ ದೇಶಗಳನ್ನು ಜಯಿಸುವಾಗ ಜತೆಯಲ್ಲಿ ಆ ದೇಶಗಳಲ್ಲಿ ಸಂಚಾರಮಾಡಿದವನೋ ಆಗಿರಬೇಕೆಂದೂ ಊಹಿಸುವುದಕ್ಕೆ ಅವಕಾಶವಿರುವುದು ಕವಿಯು ತನ್ನ ಗ್ರಂಥಗಳ ಕನ್ನಡವು ತಿರುಳ್ಗನ್ನಡವೆಂಬುದನ್ನು

“ರಾಜಸುಧಾನಿಯು ಪುಲವಸು |
ರಾಜದ ಪುಲಿಗೆರೆಯ ತಿರುಳಕನ್ನಡದೊಳ್ ||
ವ್ಯಾಜದೆಸಕದೊಳೆ ಪುದಿದೊಂ |
ದೋಜೆಯಬಲದಿನಿಯಕವಿತೆ ಪಂಪನಕವಿತೇ ||

ಎಂಬ ಭಾರತಪದ್ಯದಲ್ಲಿ ತಿಳಿಸಿರುವನು. ಕವಿರಾಜಮಾರ್ಗವನ್ನು ಮಾಡಿದ ನೃಪತುಂಗನೂ ಈ ಪುಲಿಗೆರೆಯ ಭಾಗವು ತಿರುಳ್ಗನ್ನಡದ ನಾಡೆಂದು

"ಅದರೊಳಗಂ ಕಿಸುವೊಳಲಾ |
ವಿದಿತಮಹಾಕೊಪಣನಗರದಾ ಪುಲಿಗೆರೆಯಾ ||
ಸದಭಿಸ್ತುತಮಪ್ಪೊಂಕುಂ |
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ||"

ಪದ್ಯದಲ್ಲಿ ಹೇಳುತ್ತಾನೆ. ತಿರುಳ್ಗನ್ನಡವೆಂದರೆ ಲಕ್ಷಣಬದ್ಧವಾಗಿಯೂ ಕನ್ನಡಕ್ಕೆ ಸಾರವಾದ ದೇಶರೂಢಿ ಅಪೂರ್ವವಾದ ಅಚ್ಚಗನ್ನಡಪದಗಳು ಇವುಗಳನ್ನು ಒಳಕೊಂಡ ಕನ್ನಡವೆಂದರ್ಥವಾಗುವುದು. ಈತನ ಗ್ರಂಥದಲ್ಲಿರುವ ಕನ್ನಡ ಭಾಷೆಯು ಹೀಗೆ ಮಾರ್ಗಾರೂಢವಾದ ತಿರುಳ್ಗನ್ನಡವಾಗಿರುವುದರಿಂದಲೇ ಶಬ್ದಮಣಿದರ್ಪಣವೆಂಬ ವ್ಯಾಕರಣದಲ್ಲಿ ಕೇಶಿರಾಜನು ಈತನ ಗ್ರಂಥದಿಂದ ಪದ್ಯರೂಪವಾಗಿಯೂ ಪದರೂಪವಾಗಿಯೂ, ವಾಕ್ಯರೂಪವಾಗಿಯೂ ಇರುವ ನೂರಾರು ಉದಾಹರಣೆಗಳನ್ನು ತೆಗೆದುಕೊಂಡಿರುವನು. ಇನ್ನು ನಾಗವರ್ಮನು ತನ್ನ ಭಾಷಾಭೂಷಣದಲ್ಲಿ ವ್ಯಾಕರಣ ವಿಷಯಕ್ಕಾಗಿಯೂ, ಕಾವ್ಯಾವಲೋಕನದಲ್ಲಿ ಕವಿಸಮಯ, ರಸ, ರೀತಿ, ಅಲಂಕಾರ ಮೊದಲಾದುವುಗಳಿಗಾಗಿಯೂ ಅನೇಕ ವಾಕ್ಯಗಳನ್ನೂ, ಪದ್ಯಗಳನ್ನೂ ಉದಾಹರಿಸಿರುವನು. ನವೀನ ವ್ಯಾಕರಣಕಾರನಾದ ಭಟ್ಟಾಕಳಂಕನು ತನ್ನ ಶಬ್ದಾನುಶಾಸನದಲ್ಲೂ ಈತನ ಗ್ರಂಥದಿಂದ ಕೆಲವು ಉದಾಹರಣೆಗಳನ್ನು ಸಂಗ್ರಹಿಸಿರುವನು. ಆ ಪ್ರಯೋಗಗಳಲ್ಲಿ ಅಪೂರ್ವವಾದ ಕೆಲವು ಇಲ್ಲಿ ತೋರಿಸಲ್ಪಟ್ಟಿವೆ.

೧ "ಅರಿಯಿರೆ ನೀಮುಮಾಮು ಮೊಡನೋದಿದೆವೆಂಬುದನಣ್ಣ"
೨ "....ಎಲ್ಲಿದನೋ ಲಲಿತಾಂಗವಲ್ಲಭಂ"
೩ "ಅನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್"
೪ "ಸಂಗತಸತ್ವಂ ಕುರುರಾಜಂಗಂ ಕರ್ಣಂಗಂ"
೫ "ಕಃ ಕೇನಾರ್ಥೀ ಕೋ ದರಿದ್ರಃ ಎನುತುಮುಸಿತುಮುಂ"
೬. "ಎನಿತುಂ ಕಾಯ್ದುಂ ಬೆನ್ನೀರ್ ಮನಸುಡದು"
೭. "ಗಾಂಗೇಯರ ಪೇಳ್ದದೊಂದು ತೆರದಿಂ"
೮. "ತೆಂಕನಾಡ ಮರೆಯಲ್ಕೆಂದುಂ ಮನಂ ಬರ್ಕುಮೇ"
೯. "ಜಲಧಿದ್ವೀಪಾಂತರಾಳಂಗಳನಿರದೆ ಪುಗಿಂಪೋಗಿಮುಗ್ರಾರಿಗಳ್"

ಇವು ಶಬ್ದಮಣಿದರ್ಪಣದವು. ಮಿಕ್ಕ ಗ್ರಂಥಗಳನ್ನು ವಿವರಿಸಿದರೆ ವಿಸ್ತಾರವಾಗುವುದೆಂದು, ಇಷ್ಟುಮಟ್ಟಿಗೆ ಸೂಚಿಸಿದೆ.

ಪ್ರಯೋಗಶರಣರಾದ ಲಕ್ಷಣಕಾರರೆಲ್ಲರೂ ಪಂಪನ ಪ್ರಯೋಗಗಳನ್ನೇ ಮುಖ್ಯವಾಗಿಟ್ಟುಕೊಂಡಿರುವರು. ಇಷ್ಟಾದರೂ ಈ ಕವಿಯ ಎಲ್ಲಾ ಪ್ರಯೋಗಗಳನ್ನೂ ತೆಗೆದುಕೊಂಡು ಈ ಲಕ್ಷಣಕಾರರು ಸೂತ್ರಗಳನ್ನು ಮಾಡಿದಂತಾಗಿಲ್ಲ. ಇವರ ಲಕ್ಷ

ಣಾಗಳಿಂದ ನಿಷ್ಪನ್ನವಾಗದೆ ಲಾಕ್ಷಣಿಕವಾಗಿಯೂ ಮಾರ್ಗರೂಢವಾಗಿಯೂ ಇರುವ ಇನ್ನೂ ಹಲವು ಪ್ರಯೋಗಗಳು ಪಂಪನ ಗ್ರಂಥಗಳಲ್ಲಿ ಕಾಣಬರುವುವು ಉದಾಹರಣೆ “ಬೇಂಟೆಯನೊರ್ವಂ, ಮಾಡಿತನುಂಡುಕಳ್ಳದೆ, ಅಳ್ತಿಯೆ ಪೇಳ್ದಂ” ಇತ್ಯಾದಿ

ಈತನು ಲೋಕಸ್ವಭಾವವನ್ನು ವಿಶೇಷವಾಗಿ ತಿಳಿದು ಉಪಮಾಪ್ರಚುರವಾಗಿ ವರ್ಣಿಸುತ್ತ ಸಂಸ್ಕೃತದಲ್ಲಿ ಕಾಳಿದಾಸನು ಹೇಗೋ ಹಾಗೆ ಕನ್ನಡ ಕವಿಗಳಿಗೆ ಮಾರ್ಗದರ್ಶಿಯಾಗಿರುವುದರಿಂದ ಈತನನ್ನು ಕರ್ಣಾಟಕ ಕಾಳಿದಾಸನೆನ್ನುವುದಕ್ಕೆ ಅಡ್ಡಿಯಿಲ್ಲ ಈತನ ಗ್ರಂಥದಿಂದ ಅನೇಕ ಪದಗಳನ್ನೂ ಅರ್ಥಗಳನ್ನೂ ತೆಗೆದುಕೊಂಡು ಅನೇಕರು ತಮ್ಮ ಗ್ರಂಥಗಳಲ್ಲಿ ಪ್ರಯೋಗಿಸಿರುವರು. ನವೀನಕಾಲದಲ್ಲಾದ ಗದುಗಿನ ಕನ್ನಡ ಭಾರತದಲ್ಲಿ ಹೇಳಿರುವ ಮಾತುಗಾರಿಕೆಗಳಲ್ಲಿ ಹಲವು ಪಂಪ ಭಾರತದಿಂದ ತೆಗೆಯಲ್ಪಟ್ಟಂತೆ ಕಾಣುವುವು. ಪದಪದಾರ್ಥಾದಿಗಳನ್ನು ರುದ್ರಭಟ್ಟ ಮೊದಲಾದವರು ಸಂಗ್ರಹಿಸಿರುವರು. ನಾಗಚಂದ್ರನು ಈತನ ಕವಿತ್ವವನ್ನು ಚೆನ್ನಾಗಿ ತಿಳಿದು ತಾನೂ ಅದರಂತೆ ಕವಿತ್ವಮಾಡಿ ಅಭಿನವ ಪಂಪನೆಂಬ ಬಿರುದನ್ನು ಪಡೆದಿರುವನು ಆದಿಪಂಪನಿಗೆ ಕವಿತಾಗುಣಾರ್ಣವ, ಸಂಸಾರಸಾರೋದಯ, ಸುಕವಿಜನಮನೋಮಾನಸೋತ್ತಂಸಹಂಸ, ಸರಸ್ವತೀ ಮಣಿಹಾರ, ಎಂಬ ಬಿರುದುಗಳಿದ್ದುವು ಇವುಗಳಲ್ಲಿ ಕವಿತಾಗುಣಾರ್ಣವನೆಂಬ ಬಿರುದು ಆಶ್ವಾಸ ಸಮಾಪ್ತಿವಾಕ್ಯಗಳಲ್ಲಿ ಎಲ್ಲೆಡೆಯಲ್ಲೂ ದೊರೆಯುವುದರಿಂದ ಇದು ಕವಿಗೆ ಮುಖ್ಯವಾದುದೆಂದು ತಿಳಿಯಬರುತ್ತದೆ

ಈತನು ರಚಿಸಿರುವ ಗ್ರಂಥಗಳು ಆದಿಪುರಾಣ ಮತ್ತು ಪಂಪಭಾರತ ಕವಿಯ ಗ್ರಂಥಗಳನ್ನು ಸಮಗ್ರವಾಗಿ ವಿಮರ್ಶೆಮಾಡುವುದು ಅನಾವಶ್ಯಕವಾದರೂ ಕವಿಯ ಸಾಮರ್ಥ್ಯವನ್ನು ತೋರಿಸುವುದಕ್ಕಾಗಿ ಸ್ವಲ್ಪಮಟ್ಟಿಗೆ ವಿಮರ್ಶೆಮಾಡುವುದು ಆವಶ್ಯಕವಾಗಿದೆ

ಆದಿಪುರಾಣ — ಇದು ೧೬ ಆಶ್ವಾಸಗಳುಳ್ಳ ಚಂಪೂಪ್ರಬಂಧವು ಇದು ಲಲಿತವಾಗಿಯೂ ಸಂಸ್ಕೃತಪ್ರಾಯವಾಗಿಯೂ ಇರುವುದು ಇಲ್ಲಿ ಕವಿಯು ತನ್ನ ಅಸಾಧಾರಣವಾದ ಕವಿತ್ವಶಕ್ತಿಯನ್ನು ತೋರಿಸಿರುವನು ಇದರಲ್ಲಿ ಆದಿಜಿನನಾದ ಪುರುದೇವನ (ವೃಷಭನಾಥನ) ಹತ್ತು ಜನ್ಮದ ಕಥೆಗಳೂ ಅಲ್ಲಲ್ಲಿಗೆ ಸಂಬಂಧಪಟ್ಟ ಇನ್ನೂ ಹಲವರ ಜನ್ಮಾಂತರದ ಕಥೆಗಳೂ ತುಂಬಿರುವುವು. ಇದರಿಂದ ಗ್ರಂಥವನ್ನೋದುವವರಿಗೆ ಸ್ವಲ್ಪ ಬೇಸರವಾಗುವುದಾದರೂ ಕಥಾಂಶಗಳನ್ನು ಬಿಟ್ಟು ಈತನ ಕವಿತ್ವದ ಅಸಾಧಾರಣವಾದ ಲಾಲಿತ್ಯ, ಮಾಧುರ್ಯ, ಅರ್ಥ ಗಾಂಭೀರ್ಯ ಮೊದಲಾದುವುಗಳ ಮೇಲೆ ದೃಷ್ಟಿಯಿಟ್ಟು ಓದತೊಡಗಿದ ರಸಿಕರಿಗೆ ಓದುವುದನ್ನು ಬಿಡಬೇಕೆಂಬ ಅಭಿಪ್ರಾಯವು ಹುಟ್ಟುವುದಿಲ್ಲ. ಇದರೊಳಗೆ ಜೈನಮತದ ಪ್ರಕ್ರಿಯೆಗಳು ವಿಶೇಷವಾಗಿರುವುವಲ್ಲದೆ ಕವಿಯು ವಿಷಯಲಂಪಟನಾದವನಿಗೆ ವೈರಾಗ್ಯ ಹುಟ್ಟುವಂತೆ ಮಾಡುವುದಕ್ಕಾಗಿ ತರುವ ಸಂವಿಧಾನವು ಬಹು ಚಮತ್ಕಾರವಾಗಿರುವುದು. ಉದಾಹರಣೆ — ಮಹಾರಾಜನು ತನ್ನ ಕೈಯಲ್ಲಿರುವ ಲೀಲಾಕಮಲವನ್ನು ತಿರುಗಿಸುತ್ತಿರುವಾಗ ಹಿಂದಿನ

ರಾತ್ರಿ ಆ ಹೂವಿನಲ್ಲಿ ಸೇರಿ ಸತ್ತಿದ್ದ ತುಂಬಿಯು ಕೆಳಗೆ ಬೀಳಲು ಅದನ್ನು ನೋಡಿ ವಿಷಯಾಭಿಲಾಷೆಯು ಅಪಾಯಕರವಾದುದು, ಎಂದೆಣಿಸಿ ತಾನು ಆಕ್ಷಣವೇ ವೈರಾಗ್ಯವನ್ನು ತಾಳುವುದು, ಮೊದಲಾದುವು. ಅಭಿನವ ಪಂಪ, ಅಗ್ಗಳ ಮೊದಲಾದವರೂ ಈತನ ಈ ವಿಧವಾದ ಸಂವಿಧಾನಗಳನ್ನೇ ಅನುಸರಿಸಿರುವರು ಆದಿಪುರಾಣದ ವಿಷಯವಾಗಿ ರನ್ನನು "ಉಪಮಾತೀತಮೆನಿಪ್ಪಾದಿಪುರಾಣಂ" ಎಂದು ಹೇಳಿರುವನು ಈ ಪುರಾಣದಲ್ಲಿ ಕವಿಯು ವಿಜ್ಞಾನವಾದಿಮತ, ಶೂನ್ಯವಾದಿಮತ ಮೊದಲಾದ ನಾಸ್ತಿಕಮತಗಳನ್ನು ವಿಸ್ತಾರವಾಗಿ ಖಂಡಿಸಿ, ತನ್ನ ಜೈನಸಿದ್ಧಾಂತವನ್ನು ಸ್ಥಾಪಿಸಿರುವನು ಜಿನಮತ ಸಿದ್ಧಾಂತದಲ್ಲಿ ಈತನು ಉದ್ದಾಮ ಪಂಡಿತನಾಗಿದ್ದುದರಿಂದಲೇ ರನ್ನನು ಈತನ ವಿಷಯವಾಗಿ

"ಕವಿಜನದೊಳ್ ರತ್ನತ್ರಯ |
ಪವಿತ್ರಮೆ ನೆಗಳ್ದ ಪಂಪನುಂ ಪೊನ್ನಿಗನುಂ ||
ಕವಿರತ್ನನು ಮೀಮೂವರ್ |
ಕವಿಗಳ್ ಜಿನಸಮಯದೀಪಕರ್ ಪೆರರೊಳರೇ ||"

ಎಂದು ಹೇಳಿರುತ್ತಾನೆ

ಈತನಿಗೆ ಲೋಕಸ್ವಭಾವವನ್ನು ವರ್ಣಿಸುವುದು ಇಷ್ಟವಾಗಿರುವುದು ಯಾವ ವರ್ಣನೆಯನ್ನು ಮಾಡಿದರೂ ಹಿತಮಿತವಾಗಿ ಮಾಡುವನು ಅಪೂರ್ವವಾದ ಅಲಂಕಾರಗಳನ್ನು ಹೇಳುವುದಿಲ್ಲ ಉಪಮೆ, ರೂಪಕ, ಉತ್ಪ್ರೇಕ್ಷೆ ಮೊದಲಾದ ಪ್ರಸಿದ್ಧವಾದ ಅಲಂಕಾರಗಳನ್ನು ಹೇಳುವನು. ಅತಿಶಯೋಕ್ತಿಯು ಬಹು ವಿರಳವಾಗಿರುವುದು. ಶ್ಲೇಷಾಲಂಕಾರವಿಲ್ಲವೆಂದೇ ಹೇಳಬಹುದು ಉತ್ಪ್ರೇಕ್ಷೆಗಳನ್ನು ಹೇಳಿದರೂ ಪ್ರಕೃತಕ್ಕೆ ತಕ್ಕಂತೆ ಹೇಳಿರುವನು ಮಾತಿನ ಚಮತ್ಕಾರಗಳು ಈತನಿಗೆ ಬಲು ಹೆಚ್ಚಾಗಿ ತಿಳಿವುವು ಈತನು ಕಾಳಿದಾಸ, ಭಾಣ ಭಾರವಿ-ಮೊದಲಾದ ಪ್ರಾಚೀನ ಸಂಸ್ಕೃತ ಮಹಾಕವಿಗಳ ಉತ್ತಮವಾದ ಹಲವು ಪದ್ಯಗಳನ್ನು ಈ ಗ್ರಂಥದಲ್ಲೂ ಭಾರತದಲ್ಲೂ ಪರಿವರ್ತನೆಮಾಡಿ ಸೇರಿಸಿರುವನು

ಪಂಪಭಾರತ (ವಿಕ್ರಮಾರ್ಜುನವಿಜಯ)

ಇದು ೧೪ ಆಶ್ವಾಸವುಳ್ಳ ಚಂಪೂಗ್ರಂಥವು ಇದರಲ್ಲಿ ಪ್ರಸಿದ್ಧರಾದ ಕೌರವ ಪಾಂಡವರ ಚರಿತ್ರೆಯೆಲ್ಲ ವರ್ಣಿಸಲ್ಪಟ್ಟಿರುವುದು ಆದರೆ ವ್ಯಾಸಭಾರತದ ಕಥೆಗೂ ಇಲ್ಲಿಯ ಕಥೆಗೂ ಸ್ವಲ್ಪ ವ್ಯತ್ಯಾಸವುಂಟು ಇದರಲ್ಲಿ "ದ್ರೌಪದಿಯನ್ನು ಅರ್ಜುನನೇ ವಿವಾಹ ಮಾಡಿಕೊಂಡನು ಕೊನೆಯಲ್ಲಿ ಅರ್ಜುನನಿಗೆ ಪಟ್ಟಾಭಿಷೇಕವಾಯಿತು" ಎಂಬಿವೇ ಮೊದಲಾದ ವಿಷಯಗಳು ವರ್ಣಿತವಾಗಿರುವುವು ಚಾಲುಕ್ಯರಲ್ಲಿ ಪ್ರಸಿದ್ಧನಾಗಿ ತನಗೆ ಪೋಷಕನಾಗಿದ್ದ ಅರಿಕೇಸರಿರಾಜನು ಅರ್ಜುನನಿಗೆ ಸರಿಸಾಟಿಯಾಗಿದ್ದನೆಂದೂ ಆದುದರಿಂದಲೇ ಅರ್ಜುನನು ಮಾಡಿದ ಕೆಲಸಗಳನ್ನು ಅರಿಕೇಸರಿಯು ಮಾಡಿದಂತೆ ವರ್ಣಿಸಿರುವೆನೆಂದೂ ಕವಿಯು ಈ ಗ್ರಂಥದ ಪ್ರಾರಂಭದಲ್ಲಿ ಹೇಳಿರುವನು

ಈ ಗ್ರಂಥವು ಆದಿಪುರಾಣದಂತೆ ಸಂಸ್ಕೃತಪ್ರಾಯವಾಗಿಲ್ಲ. ಇದರ ಬಂಧವು ಆದಿಪುರಾಣದಷ್ಟು ಲಲಿತವಾಗಿಲ್ಲ ಇದರಲ್ಲಿ ಅಪೂರ್ವವಾದ ಹಳಗನ್ನಡ ಪದಗಳೇ ಹೆಚ್ಚು. ಅನೇಕ ಪದಗಳಿಗೆ ಅರ್ಥವಾಗುವುದೇ ಕಷ್ಟವಾಗಿರುವುದು ಆದರೂ ರೀತಿ, ಶಯ್ಯೆ-ಮೊದಲಾದುವುಗಳ ವಿಷಯದಲ್ಲಿ ಈ ಗ್ರಂಥವು ಅದ್ವಿತೀಯವಾಗಿರುವುದು. ಅಲಂಕಾರದಲ್ಲೂ ಮಾತುಗಾರಿಕೆಯ ಚಮತ್ಕಾರದಲ್ಲೂ ಆದಿಪುರಾಣಕ್ಕಿಂತ ಮೇಲೆನಿಸಿಕೊಂಡಿರುವುದು

ಈತನ ಕವಿತ್ವವನ್ನು ಅನೇಕ ಕವಿಗಳು ಬಗೆಬಗೆಯಾಗಿ ಹೊಗಳಿರುವರು. ಅದನ್ನು ಸಂಗ್ರಹವಾಗಿ ಇಲ್ಲಿ ತಿಳಿಸುತ್ತೇನೆ "ಪಂಪನೊಂದಸದೃಶಮಪ್ಪ ಪೂರ್ವರ ಸಭಾವಂ" ಎಂದು ಧರ್ಮಾಮೃತದಲ್ಲಿ ನಯಸೇನನೂ, "ಪಂಪನಗುಣಂ" ಎಂದು ಸೂಕ್ತಿಸುಧಾರ್ಣವದಲ್ಲಿ ಮಲ್ಲಿಕಾರ್ಜುನನೂ, "ಪಂಪನರೀತಿ" ಎಂದು ಜಗನ್ನಾಥವಿಜಯದಲ್ಲಿ ರುದ್ರಭಟ್ಟನೂ, "ಪಂಪನನುಣ್ಪುವೆತ್ತನುಡಿ" ಎಂದು ಪಾರ್ಶ್ವನಾಥಪುರಾಣದಲ್ಲಿ ಪಾರ್ಶ್ವಪಂಡಿತನೂ ಹೇಳಿರುವರು ಆದಿಪುರಾಣದಲ್ಲಿ —

"ವಿದಿತಂ ಪ್ರಾತೀತಿಕಂ ಕೋಮಲಮತಿಸುಭಗಂ ಸುಂದರಂ ಸೂಕ್ತಿಗರ್ಭಂ |
ಮೃದುಸಂದರ್ಭಂ ವಿಚಾರಕ್ಷಮ ಮುಚಿತಪದಂ ಶ್ರವ್ಯಮವ್ಯಾಕುಳಂ ವ್ಯಾ ||
ಪ್ತದಿಗಂತಂ ಕಾವ್ಯಮೆಂದಸ್ಮಿತಸುಕವಿಜನಂ ಮೆಚ್ಚಿ ಸಿಚ್ಚಂ ಮನಂಗೊ |
ಳ್ವುದರಿಂದಂ ನೆಟ್ಟನೀತಂ ಸುಕವಿಜನಮನೋಮಾನಸೋತ್ತಂಸಹಂಸಂ ||"

ಎಂದು ತನ್ನ ಕಾವ್ಯದಲ್ಲಿ ಇಷ್ಟು ಗುಣಗಳಿರುವುವೆಂದು ಹೇಳಿಕೊಂಡಿರುವನು ಅಂದರೆ —ರೀತಿ, ರಸ, ಮಾಧುರ್ಯಗುಣ, ವ್ಯಂಗ್ಯ, ಲಾಲಿತ್ಯ, ಮಾತಿನಬೆಡಗು, ಲಾಕ್ಷಣಿಕವಾದ ಪದಗಳುಳ್ಳೀಣ, ಅಪೂರ್ವವಾದ ವಿಷಯಗಳನ್ನೊಳಕೊಂಡಿರುವಿಕೆ, ಉಚಿತ ಪದಗಳಿರುವಿಕೆ, ಶ್ರಾವ್ಯತೆ, ಅಕ್ಲಿಷ್ಟವಾದ ಅನ್ವಯ ಇವುಗಳು ಈತನ ಗ್ರಂಥದಲ್ಲಿ ಸ್ಫುಟವಾಗಿರುವುವೆಂದು ಹೇಳಿದಂತಾಯಿತು ಈತನ ಕಾವ್ಯವು ನಾನು ಹಿಂದೆ ಹೇಳಿರುವಂತೆಯೂ, ಇತರ ಕವಿಗಳು ಬಗೆ ಬಗೆಯಾಗಿ ಹೊಗಳಿರುವಂತೆಯೂ, ಕವಿಯು ತಾನೇ ಹೊಗಳಿಕೊಂಡಿರುವಂತೆಯೂ ಇರುವುದೆ' ಎಂಬುದನ್ನು ಇಲ್ಲಿ ಸ್ವಲ್ಪ ವಿಚಾರ ಮಾಡುತ್ತೇನೆ

ಆದಿ|| ೬ ನೆಯ ಆಶ್ವಾಸ. ೮೫ ನೆಯ ಪದ್ಯ.

"ಮೊಗಮಂ ತಾವರೆಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆ |
ಳ್ಳುಗುರಂ ಕೇದಗೆ ಪುರ್ಬನಂಗಜನಬಿಲ್ ಪಂತಾಳಿಯಂ ಮುತ್ತುಕ್ಕ ||
ಮುಗಿದಾರಾಧಿಸಿಪೋಲ್ತುವನ್ನದ ಸರೋಜಾತಾದಸಿಸ್ನಾರವ |
ಸ್ತುಗಳೊಳ್ ಪೋಲಿಪರಂತದೇಂ ಪರುಳರೋ ರೂಪಂ ವಿಚಿತ್ರಾಂಗಿಯಾ" ||

ಇದರಲ್ಲಿ ಮೊದಲಿಂದ ಕೊನೆಯವರೆಗೂ ರೀತಿಭೇದವಿಲ್ಲದುದರಿಂದ ಸಮತ್ವವೆಂಬ ಗುಣವೂ, ಪದಗಳು ಬಿಡಿಬಿಡಿಯಾಗಿರುವುದರಿಂದ ಮಾಧುರ್ಯವೂ, ಅಕ್ಲಿಷ್ಟವಾದ ಅನ್ವಯವೂ, ಬೇಗನೆ ಅರ್ಥಸ್ಫೂರ್ತಿಯಾಗುವುದರಿಂದ ಅರ್ಥವ್ಯಕ್ತಿಯೆಂಬ ಗುಣವೂ

ಶ್ರಾವ್ಯತೆಯೂ ಉಚಿತಪದ ಪ್ರಯೋಗವೂ, ಪ್ರತೀಪಾಲಂಕಾರವನ್ನು ಹೇಳುವುದರಲ್ಲಿ ಕೈಮುಗಿದಾರಾಧಿಸಿ ಪ್ರೇಲ್ಯುತ್ತವೆಂದು ಮಾತಿನ ಚಮತ್ಕಾರವೂ, ವರ್ಣ್ಯೆಯಾದ ಸ್ತ್ರೀಯರೂಪು ಲೋಕೋತ್ತರವಾದುದೆಂಬ ವ್ಯಂಗ್ಯಾರ್ಥವೂ ಕಾಣಬರುವುವು.

ಆದಿ|| ೪ ನೆಯ ಆಶ್ವಾಸ. ೪೯ ನೆಯ ಪದ್ಯ.

ಇನಿಯನ ಕೆಂದಳಂ ತಳಮನೂಯ್ಯನೆ ಸೋಂಕೆ ಪೊದಳ್ದ ನಾಣಪೆಂ |
ಪಿನೊಳೊಗೆತರ್ಪ ಘರ್ಮಜಲಬಿಂದುಗಳಿಂ ನಮಿತಾನನಾಬ್ಜೆ ಬ ||
ಜ್ಜನೆಬಸಿದಿಂದುಕಾಂತಕರಸಂಕುಳವೊಯ್ಯನೆವುಂಕಿಸೋಂಕೆ ಸೋಂ |
ಕಿನೊಳೊಸರ್ಕೆ ಎಂದುಕಾಂತಮಣಿಪುತ್ರಿಕೆಯಂದದಿನೊಪ್ಪಿತೋರ್ಪುದಳ್ ||

ಇದರಲ್ಲಿ ಸಾಮಗ್ರಿ ಸಹಿತವಾದ ಶೃಂಗಾರರಸವೂ, ಪಾಂಚಾಲಿ ರೀತಿಯೂ, ಸುಕುಮಾರಾಕ್ಷರಗಳೇ ಹೆಚ್ಚಾಗಿರುವುದರಿಂದ ಸೌಕುಮಾರ್ಯಗುಣವೂ, ಪ್ರಸಾದಮಾಧುರ್ಯಾರ್ಥ ವ್ಯಕ್ತಿಕಾಂತಿಗುಣಗಳೂ ತೋರಿಬರುವುವು

ಲೋಕಸ್ವಭಾವವರ್ಣನೆ

ಪೂಡೆಮುಡುವಪ್ಪಿಕೊಳ್ವ ನನೆಯುತ್ತಿರನುಂಬ ಸಮಸ್ತವಸ್ತುವಂ |
ಕುಡುವ ಪಲವರ್ನಯಿಂಪರಸಿ ಸೇಸೆಯನಿಕ್ಕುವ ಬುದ್ಧಿವೇಳ್ವ ಕೈ ||
ಯೆಡೆ ನಿಮಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣನೀರ್ಗಳಂ |
ಮಿಡಿವ ಬಹುಪ್ರಕಾರಜನಸಂಕಟ ಮಾಪ್ಪಿದುದಾ ಪ್ರಯಾಣದೊಳ್ ||

ಅಸಾಧಾರಣವಾದ ಉಪದೇಶಕ್ರಮಕ್ಕೆ—

ಆದಿ|| ಆಶ್ವಾಸ ೩ ಪದ್ಯ ೫೩

ಕಳಿದವರ್ಗಳ್ಪದಳ್ದಡವರೇಸ್ವರೆ ನೋಣವರಿಂ ಬಳಿಕ್ಕೆ ತಾ |
ಮುಳಿವರೆ ಎಳರಂತವರಣಂ ತಮಗಂ ಬರ್ದಕಿಲ್ಲ ಧರ್ಮವುಂ ||
ಘಳಿಯಿಸಿಕೊಳ್ವುದೊಂದೆ ಜದುರಿಂತುಟು ಸಂಸೃತಿಧರ್ಮಮೇಕೆ ಬಾ |
ಯಳಿವುದದೇಕೆ ಚಿಂತಿಸುವುದೇಕೆ ಮಱುಂಬುವುದೇಕೆ ನೋವುದೋ ||

ಆದಿ|| ಆಶ್ವಾಸ ೩, ಪದ್ಯ ೫೫

ತನಯಂ ತಾಯ್ತಂದೆ ತಮ್ಮಂ ಕೆಳೆಯ ಗಳಿಯನಾಳ್ವ ಜಸಮ್ಮಜ್ಜ ನಿಪ್ಪಾಂ |
ಗನೆಯೆಂವಾರಾರನಾವಾವಪರಿಕಯ ಭವಸಂಬಂಧನಂ ಕಂಡು ನಿಚ್ಚಂ ||
ನೆನೆವೂನೀನಾರ್ಗೆ ನಿನ್ನಂ ಪಳಯಿಸುವವರಾರ್ಗೇಕೆ ಶೋಕಿಪ್ಪೆ ಮಾರ್ಗ್ಗಾಣ್ |
ಮನದೊಳ್ನಿರ್ವಾಪೂರ್ಡಿಂ ನಿನ್ನೊಡಲನ ಜಿನದೀಕ್ಷಾಕ್ಷಮಂ ಮಾಡು ಪುತ್ರಾ ||

ವಿಪ್ರಲಂಭ ಶೃಂಗಾರವನ್ನು ಚಮತ್ಕಾರವಾಗಿ ವರ್ಣಿಸಿರುವುದಕ್ಕೆ—

ಆದಿ|| ಆಶ್ವಾಸ ೧೨, ಪದ್ಯ ೪೨

ಇನಿಯನಗಲ್ದುಪೋಗಿ ಪರದೇಶದೊಳಿರ್ದಪ ನಾನುಮಿಲ್ಲಿಮಾ |
ವಿನ ತಳಿರ್ವಾಸಿನೊಳ್ ಪೊರಳುತಿರ್ದಪೆನಾಗಳು ಮಿಂತೆ ನೀನು ಮೆ ||

ನ್ನನೆ ನಡೆ ನೋಡುತುಂ ನಭದೊಳಿರ್ದಪೆಯುಪ್ಪುದರಿಂದೆ ನಿನ್ನ ನಾ |
ನನುವಿಪೆನೆನ್ನ ಮೆಯ್ಪಡವೊ ನಲ್ಲನಮೆಯ್ಪಡವೊ ನಿಶಾಕರಾ ||

ಮಾತುಗಾರಿಕೆಯ ಚಮತ್ಕಾರಕ್ಕೆ

ಆದಿ|| ೧ ನೆಯ ಆಶ್ವಾಸ. ೨೫ ನೆಯ ಪದ್ಯ.

ಗುರುದೇವೇಂದ್ರಮುನೀಂದ್ರನಿಂದ್ರನ ಮಿತಂ ದೇವಂ ಕಥಾನಾಯಕಂ |
ಪುರುದೇವಂ ಕಥೆಯುಂ ಕಥಾದಿಪುರುಷಪ್ರಸ್ತುತ್ಯಜನ್ಮಾಳಿ ಬಂ ||
ಧುರಮೆಂದಂದೆ ಮದೀಯವಾಗ್ವಿಭವವಿನ್ಯಾಸಂ ಒಲಂಬೆತ್ತುದಿ |
ನ್ನಿರು ಬಲ್ಲಿತ್ತರಕೋಡು ಕೂರಿತದನಂತಿಂತುಂತೆನಲ್ಬರ್ಕುಮೇ ||

" ಇನ್ನಿವಿರೆ ಬಣ್ಣಿಸಲಾಂ ಕರಮೆಗ್ಗನಾಗೆನ '' ಎಂಬಿವು ಮೊದಲಾದುವು.

ಆದರೆ ಪಂಪನು ತನ್ನ ಆದಿಪುರಾಣದಲ್ಲಿ ಸಂಸ್ಕೃತ ಪದಗಳನ್ನು ವಿಶೇಷವಾಗಿ ಪ್ರಯೋಗಿಸಿರುವನು ಇದರಿಂದ ಆತನಿಗೆ ಅಚ್ಚಗನ್ನಡ ಪದಗಳಿಂದಲೇ ಕಾವ್ಯವನ್ನು ಮಾಡುವ ಶಕ್ತಿ ಸಾಲದೆಂದು ತಿಳಿಯಲಾಗದು ಈ ಪುರಾಣದಲ್ಲೂ ಭಾರತದಲ್ಲೂ ಅಚ್ಚಗನ್ನಡ ಪದ್ಯಗಳೇ ಎಷ್ಟೋ ಇರುವವು

ಉದಾ:— ಪಂಪಭಾರತ || ೪ ನೇಯ ಆಶ್ವಾಸ. ೧೦೧ ನೇಯ ಪದ್ಯ.

ಬಿರಿಯಿಸೆ ಬೇಟದೊಳ್ ಪಿರಿವ ನಲ್ಲರಗಲ್ದು ಕನಲ್ದೊನಲ್ವ ನ |
ಲ್ಲರದೆಸೆಯಿಂದ ಮುಟ್ಟಿವರೆ ಕೋಗಿಲೆಯಕ್ಕಲರಕ್ಕೆ ತುಂಬಿಯ |
ಕ್ಕರಗಿಳಿಯಕ್ಕೆ ಬಂದೂಡಪೊರಲ್ದೆರ್ದೆಯಾರುವರೆಂದೊಡೋತ ಗೂ |
ತರೆ ತರೆ ಬಂದ ಸಬ್ಬವದ ಮಾತುಗಳಂ ಗುಡಿಗಟ್ಟಿ ಕೇಳರೇ ||

ಪಂಪಭಾರತ | ಆ ೫ | ಪ ೪೨ |

ಆಡಲಾಡಿಸಲ್ಪಾಟಿಯುಂ ನಿರಿಪಲುಂ ಪರಿಗೊಳಲ್ ತೊವಲಿಕ್ಕಲೊಳಗಂಬರ |
ಲ್ಕಾಡಬೇಲಿಯಂ ಮಾರ್ಕಾಡನರಿಯಲುಂ ಮೂಡಿಗೆ ಕಕ್ಕುಂಬಂ ಸುಳಿಸಿ ಜೊಂಪಂ||
ಬೀಡುಬಿಡುವಿಂಬು ಕದಳಿ ತೆಂಗಿನತಾಣಂ ಜಾಣೆಂ ನೀರ್ದಾಣಮೆಂದೆಡೆಯರಿದುಂ|
ಮಾಡಲ್ಕಾಡಿಸಲ್ ಪಡೆಮೆಚ್ಚೆ ನೀಂ ಬಲ್ಲನೀಂ ಮೆಚ್ಚೆ ಹರಿ ಕೇಳಾನೆ ಬಲ್ಲೆಂ ||

ಮತ್ತು ಈತನು ಕಾಳಿದಾಸನಂತೆ ಸಂದರ್ಭಾನುಸಾರವಾಗಿ ರಸಸ್ಫೂರ್ತಿಯು ಚೆನ್ನಾಗಿ ಆಗುವುದಕ್ಕೆ ತಕ್ಕ ವೃತ್ತಗಳನ್ನು ಹಲವುಕಡೆ ಪ್ರಯೋಗಿಸುವನು ಉದಾ — ಆದಿಪುರಾಣದ ೩ ನೆಯ ಆಶ್ವಾಸದಲ್ಲಿ, ಚಿಂತಾಕ್ರಾಂತೆಯಾದ ವಜ್ರದಂತನೆಂಬ ಚಕ್ರವರ್ತಿಯ ಮಗಳಾದ ಶ್ರೀಮತಿಯನ್ನು ಅವಳ ಸಖಿಯಾದ ಪಂಡಿತೆ ಎಂಬವಳು ಸಾಂತ್ವನಾಡಿಸುವಾಗ ಪೃಥ್ವೀವೃತ್ತದಲ್ಲಿ ಹೇಳಿರುವನು (ಪದ್ಯ ೩೭)

ಸರೋತ್ಪಲದಳೇಕ್ಷಣೇ ಮನದೊಳಾದ ನಿರ್ವೇಗನೊಂ |
ದವಶ್ಯಮದು ಕೂರ್ಪರೊಳ್ ನುಡಿದೊಡಲ್ಲದೇಂ ಪೋಕುಮೇ ||
ನಿವೇದಿಸು ನಿಜಾಂತರಂಗಗತಮಪ್ಪುದಂ ನೀನಿದಂ |
ವಿನೇಕವಿಕಳರ್ಕಳಂತೆಲಗೆ ಚಿತ್ತದೊಳ್ ತಾಳ್ದುವೋ ||

ಇಲ್ಲಿಯೇ ಶ್ರೀಮತಿಯು ತನ್ನ ಸಖಿಗೆ ವಿನಯದಿಂದ ಪ್ರತ್ಯುತ್ತರವನ್ನು ಕೊಡುವಾಗ ಉಜ್ವಲವೃತ್ತವನ್ನು ಹೇಳಿರುವನು.

ಳಿಳಿ ನೆಯ ಪದ್ಯ

ಬಗೆಯುಬಯ್ಕೆಯನೊಪ್ಪಿಸುವಾಗಳ್ ನೀನೆ ವಲಂ ಮೊರ ಪೇಳ್ದಪೆಂ |
ಬಗೆದು ಕೇಳ್ ನಡನೋಡಲೊಡಂ ದೇವಾಗಮುಮಂ ಪಿರಿದೊಂದು ದಂ ||
ದುಗದ ಸಂದಣೆಯಿಂದ ಮೆ ಮತ್ತಾಗ್ರಸ್ಮಕಥಾವಳಿಯೆಲ್ಲಮಂ |
ಬಗೆದು ನೋಡವೆನಗಾದುದು ನೋವಂತುಂತೆನಗಾವುದು ಬೇವಸಂ ||

ಇವು ಮೊದಲಾದುವು.

ಇನ್ನು ಆದಿಪುರಾಣದಲ್ಲಿ ಸಂಸ್ಕೃತ ಪದಗಳನ್ನು ಹೆಚ್ಚಾಗಿ ಪ್ರಯೋಗಿಸಿರುವುದರ ವಿಚಾರ

ಸಾಮಾನ್ಯವಾಗಿ ಸಂಸ್ಕೃತ ಪದಗಳನ್ನು ಗ್ರಂಥಗಳಲ್ಲಿ ಹೆಚ್ಚಾಗಿ ಉಪಯೋಗಿಸುವುದಕ್ಕೆ ಕಾರಣವೇನೆಂದರೆ —

೧ ಕನ್ನಡವು ಸಂಪೂರ್ಣವಾಗಿ ತಿಳಿಯದ ಕವಿಗಳು ಸಂಸ್ಕೃತದಲ್ಲಿ ವಿಶೇಷ ಪಂಡಿತರಾಗಿದ್ದು ಕನ್ನಡದಲ್ಲಿ ಗ್ರಂಥಮಾಡಬೇಕೆಂದು ಹೊರಡುವುದು

೨ ಈಗಿನ ಕಾಲದಲ್ಲಿ ಇಂಗ್ಲಿಷ್ ಭಾಷೆಯು ಮುಖ್ಯವಾಗಿಯೂ ವ್ಯಾಪಕವಾಗಿಯೂ ಇರುವುದರಿಂದ, ಕನ್ನಡ ವಿಷಯಗಳಿಗೂ ಹೇಗೆ ಇಂಗ್ಲಿಷಿನ ಪ್ರಕಟನಪತ್ರ ಮೊದಲಾದುವುಗಳನ್ನು ಹೊರಡಿಸುವರೋ, ಮತ್ತು ಎಲ್ಲಾ ಭಾಷೆಗಳಲ್ಲೂ ಇಂಗ್ಲಿಷನ್ನು ಬೆರಸಿ ವ್ಯವಹರಿಸುವರೋ, ಹಾಗೆಯೇ ಸಂಸ್ಕೃತವು ಅತಿ ಪ್ರಚುರವಾಗಿದ್ದಾಗ ಅಭ್ಯಾಸ ಸೌಲಭ್ಯಾದಿಗಳಿಂದ ಎಲ್ಲರಿಗೂ ತಿಳಿಯಲೆಂದು ಸಂಸ್ಕೃತವನ್ನು ಬೆರಸತೊಡಗುವುದು

೩. ಸಂಸ್ಕೃತದಲ್ಲೇ ಅಭಿಮಾನಿಗಳಾದ ರಾಜರಿಗಾಗಲಿ ವಿದ್ವಾಂಸರಿಗಾಗಲಿ ಕನ್ನಡವು ಗ್ರಾಹ್ಯವಾಗಬೇಕೆಂಬ ಅಭಿಲಾಷೆಯಿಂದ ಕನ್ನಡಿಗರು ಸಂಸ್ಕೃತಮಿಶ್ರಮಾಡಿ ಗ್ರಂಥವನ್ನು ರಚಿಸತೊಡಗುವುದು ಎಂದು ತೋರುವುದು

ಆದರೆ ಪಂಪನು ಗ್ರಂಥಗಳನ್ನು ರಚಿಸಿದಾಗ ಆತನಿಗೆ ಆಶ್ರಯವನ್ನು ಕೊಟ್ಟಿದ್ದ ರಾಜನು ಕನ್ನಡದಲ್ಲಿ ಅಭಿಮಾನವುಳ್ಳವನಾಗಿಯೂ, ಕನ್ನಡವು ವಿದ್ವನ್ಮಾನ್ಯವಾಗಿ ಅಭಿವೃದ್ಧಿಸ್ಥಿತಿಯಲ್ಲೂ, ಇದ್ದಿತೆಂದು ತಿಳಿಯಬರುವಕಾರಣ, ಈತನ ಸಂಸ್ಕೃತ ಬೆರಕೆಗೆ ಕಾರಣವೇನಿರಬಹುದೆಂದರೆ—ಅಪೂರ್ವಗಳಾದ ಜೈನರ ಸಂಸ್ಕೃತ ಮತಗ್ರಂಥಗಳಲ್ಲಿ ಪ್ರಸಿದ್ಧವಾದ ಮತತತ್ತ್ವಗಳನ್ನು ಈ ಆದಿಪುರಾಣದಲ್ಲಿ ಹೇಳಬೇಕಾಗಿ ಬಂದುದರಿಂದಲೂ, ಸೂಕ್ಷ್ಮವಾದ ಮತವಿಚಾರಗಳನ್ನು ತಿಳಿಸುವುದಕ್ಕೆ ಕನ್ನಡದಲ್ಲಿ ಪದಗಳು ಸಾಲವಾದ್ದರಿಂದಲೂ, ಸಂಸ್ಕೃತಪದಗಳನ್ನು ಈ ಗ್ರಂಥದಲ್ಲಿ ಪ್ರಯೋಗಿಸಬೇಕಾಯಿತು, ಆಗ ತನ್ನ ಉದ್ದಾಮಸಂಸ್ಕೃತಪಾಂಡಿತ್ಯವಶನಾಗಿ ಹೆಚ್ಚು ಸಂಸ್ಕೃತ ಪದಗಳನ್ನು ಪ್ರಯೋಗಿಸಿರಬಹುದು. ಮತ್ತು ಅಜಿತನಾಥ, ಚಂದ್ರಪ್ರಭ ಮೊದಲಾದ ಪುರಾಣಗಳಲ್ಲೂ ಹೀಗೆಯೇ ಇರುವುದನ್ನು ನೋಡಿದರ ಕನ್ನಡದಲ್ಲಿ ಮಾಡಿದ ಈ ಪುರಾಣ ಗ್ರಂಥಗಳು

ಸಾಮಾನ್ಯರಿಗೆ ಅರ್ಥವಾಗದಂತೆ ಉಪದೇಶಗಮ್ಯವಾಗಿ ಗಹನವಾಗಿರಬೇಕೆಂಬ ಅಭಿಪ್ರಾಯದಿಂದ ಸಂಸ್ಕೃತಪ್ರಾಯವಾಗಿ ಪುರಾಣ ಗ್ರಂಥಗಳನ್ನು ಕನ್ನಡದಲ್ಲಿ ರಚಿಸುವ ಪದ್ಧತಿ ಬಂದಿದ್ದರೂ ಬಂದಿರಬಹುದೆಂದು ತೋರುವುದು ಇಷ್ಟೇಹೊರತು ಕನ್ನಡದಲ್ಲಿ ತಿಳಿವಳಿಕೆ ಸಾಲದೆಂಬ ಕಾರಣವನ್ನು ಈತನ ವಿಷಯದಲ್ಲಿ ಹೇಳಲಾಗುವುದಿಲ್ಲ.

ಈತನ ಯೋಗ್ಯತೆಯನ್ನು ಸ್ಪಷ್ಟಪಡಿಸುವುದಕ್ಕಾಗಿ ಇತರ ಕವಿಗಳ ಗ್ರಂಥಗಳಿಗೂ ಈತನ ಗ್ರಂಥಗಳಿಗೂ ಇರುವ ತಾರತಮ್ಯವನ್ನು ಉದಾಹರಣೆಗಳೊಡನೆ ವಿವರಿಸುವುದು ಆವಶ್ಯಕವಾದರೂ ಅವಕಾಶವು ಸಾಲದಾಗಿ ಮುಖ್ಯವಾದ ತಾರತಮ್ಯವನ್ನು ಒಂದೆರಡು ಮಾತಿನಿಂದ ತಿಳಿಸುತ್ತೇನೆ ಆಧುನಿಕರಾದ ಷಡಕ್ಷರಿಯೇ ಮೊದಲಾದವರ ಗ್ರಂಥದಲ್ಲಿ, ಈತನ ಕವಿತ್ವದಲ್ಲಿರುವ ಮೇಲೆ ವಿವರಿಸಿದ ಗುಣಗಳಿಗೆ ವಿಪರೀತವಾದ ಗುಣಗಳೇ ಹೇರಳವಾಗಿರುವುವು ಸಾಮ್ಯವು ಕಡಿಮೆಯಾಗಿರುವುದು ಪಂಪನ ಸಮಕಾಲ ಸಮೀಪಕಾಲಗಳ ಪೊನ್ನ, ಅಗ್ಗಳ—ಮೊದಲಾದವರ ಶಾಂತಿಪುರಾಣ, ಚಂದ್ರಪ್ರಭಪುರಾಣ ಮುಂತಾದುವುಗಳಲ್ಲಿ ಈತನ ಕಾವ್ಯಗುಣಗಳಿಗೆ ವಿಪರೀತವಾದ ಗುಣಗಳು ಕಡಿಮೆಯಾಗಿರುವುವು ಸಾಮ್ಯವು ಹೆಚ್ಚಾಗಿರುವುದು

ಕವಿಚರಿತ್ರೋಪನ್ಯಾಸದ ಉದ್ದೇಶ

ಲೋಕದಲ್ಲಿ ಕವಿಗಳು, ಸಾಮಾನ್ಯಜನರಿಗೂ ಕೂಡ ಅಜ್ಞಾನನಿವೃತ್ತಿಯಾಗಿ ಉತ್ತಮಗತಿ ದೊರೆವುದಕ್ಕೂ, ವ್ಯಸನಾದಿಗಳಲ್ಲಿ ಸಿಕ್ಕಿಬಿದ್ದವರಿಗೆ ಮನೋರಂಜನೆಯಾಗಿ ಕಾರ್ಯಗಳಲ್ಲಿ ತವಕವುಂಟಾಗುವುದಕ್ಕೂ ನೆರವಾಗಲೆಂದು ಅಸಾರವಾದ ಸಂಸಾರದ ಸ್ವರೂಪವನ್ನು ಕಾಲ ದೇಶ ಪದಾರ್ಥಗಳ ಸ್ವಭಾವಗಳೊಡನೆ ಚಮತ್ಕಾರವಾಗಿ ವಿವರಿಸಿ ಮಹಾನದಿಗಳಂತೆ ಎಡೆಬಿಡದೆ ಪರೋಪಕಾರ ಮಾಡತಕ್ಕುವುಗಳಾಗಿಯೂ, ಯಾವಾಗಲೂ ಬೇಕಾದವರೆಲ್ಲರ ಹತ್ತಿರದಲ್ಲೂ ಇದ್ದು ಸದ್ಗುರುವಿನಂತೆ ಹಿತವನ್ನು ಬೋಧಿಸತಕ್ಕುವಾಗಿಯೂ ಇರುವ ಅಮೂಲ್ಯವಾದ ಗ್ರಂಥಗಳನ್ನು ರಚಿಸಿರುವರು. ಹೀಗೆ ಗ್ರಂಥಮುಖದಿಂದ ಹಿತೋಪದೇಶಮಾಡುತ್ತ ಲೋಕಕ್ಕೆ ಪರಮಗುರುಗಳಾಗಿರುವ ಕವಿಗಳ ಹಂಗನ್ನು ಮನುಷ್ಯರು ಎಂದಿಗೂ ತೀರಿಸಿಕೊಳ್ಳಲಾರರು ಇದು ಹಾಗಿರಲಿ , ಈಗ ಆ ಕವಿಗಳ ಗ್ರಂಥಗಳನ್ನು ಚೆನ್ನಾಗಿ ಓದಿ ತಿಳಿದು ಅದರಂತೆ ನಡೆದರೆ ತಾವು ಕೃತಾರ್ಥರಾಗುವುದಲ್ಲದೆ, ಆ ಗ್ರಂಥಕರ್ತೃಗಳೂ ಕೃತಾರ್ಥರಾಗುವಂತಿದೆ ಆದುದರಿಂದ ಕವಿಯ ಯೋಗ್ಯತೆ ಮೊದಲಾದುವುಗಳ ಪ್ರಕಟನೆಯಾದರೂ ಮಾಡಿದರೆ, ಮನುಷ್ಯನ ಯೋಗ್ಯತಾಪತ್ರಿಕೆಯನ್ನು ನೋಡಿದಮೇಲೆ ಅವನಲ್ಲಿ ಆದರವು ಹೆಚ್ಚುವಂತೆ ಗ್ರಂಥಗಳನ್ನು ಓದುವುದರಲ್ಲಿ ಅಭಿಲಾಷೆಯೂ ಪ್ರಯತ್ನವೂ ಹೆಚ್ಚಾಗಬಹುದೆಂದು ಕವಿಚರಿತ್ರೆಯ ಉಪನ್ಯಾಸವನ್ನು ಕೈಕೊಂಡೆನಾಗಿ ಇದನ್ನು ಕೇಳಿದವರಲ್ಲಿ ಕೆಲಬರಾದರೂ ಮಹಾಕವಿಗಳ ಕಾವ್ಯಗಳನ್ನು ಓದತೊಡಗಿದರೆ ನನ್ನ ಶ್ರಮವು ಸಾರ್ಥಕವಾಗುವುದೆಂದು ಭಾವಿಸುತ್ತೇನೆ

ಉಪಸಂಹಾರ.

ಮೇಲೆ ಹೇಳಿದಂತಹ ಅಮೂಲ್ಯವಾದ ಕನ್ನಡಗ್ರಂಥಗಳು ನಿರ್ನಾಮವಾಗುತ್ತಿರುವಾಗ ಕರ್ಣಾಟಭಾಷೋಜ್ಜೀವಿನಿಯೆಂಬ ಪಾಠಶಾಲೆಯನ್ನು ಸ್ಥಾಪಿಸಿ ಭಾಷೋಜ್ಜೀವನಕ್ಕೆ ಪ್ರಾರಂಭಿಸಿದ ಆಳಿದ ಮಹಾಸ್ವಾಮಿಯವರಾದ ಶ್ರೀಮಚ್ಚಾಮರಾಜ ಒಡೆಯರವರ ವಿಷಯದಲ್ಲೂ, ಆ ಕಾವ್ಯಗಳ ಪ್ರಚಾರಕ್ಕೆ ಸಾಧಕವಾದ ಕನ್ನಡ ಪಂಡಿತ ತರಗತಿ, ಪಂಡಿತ ಪರೀಕ್ಷೆ ಮೊದಲಾದುವನ್ನಿಟ್ಟು ಮಹೌದಾರ್ಯದಿಂದ ಕನ್ನಡವನ್ನು ಒಳಿಯಿಸುತ್ತಿರುವ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರವರ ವಿಷಯದಲ್ಲೂ, ಮತ್ತು ಆ ಭಾಷೋಜ್ಜೀವಿನಿಯು ಕಾಲದಲ್ಲಿ ಕನ್ನಡವನ್ನು ಓದತಕ್ಕವರೂ ಹೇಳತಕ್ಕವರೂ ಅತಿವಿರಳವಾಗಿ ದಿಕ್ಕುತೋರದೆ ಇದ್ದಾಗ ಎದೆಗೊಟ್ಟು, ಪರಿಪಾಡುಪಟ್ಟು ದೇಶವಾತ್ಸಲ್ಯ ಸ್ವಾಮಿಭಕ್ತಿಗಳಿಂದ ಕಾರ್ಯನಿರ್ವಾಹವನ್ನು ಮಾಡಿ, ಪ್ರವಚನಸಮರ್ಥರಾದ ಕೆಲವರು ಪಂಡಿತರನ್ನು ಸಿದ್ಧಮಾಡಿ ಅವರ ಮೂಲಕ ದೇಶದಲ್ಲೆಲ್ಲ ಪಾಠಕರನ್ನು ಹರಡುವುದಕ್ಕಾಗಿ ಭಾಷೋಜ್ಜೀವಿನಿಯ ಅಂಶಗಳನ್ನು ಬಿಡದೆ ನಾರ್ಮಲ್‌ಸ್ಕೂಲ್, ಕೊನೆಗೆ ಈಗಿನ ಟ್ರೈನಿಂಗ್ ಕಾಲೇಜ್ ಎಂಬ ಶಾಶ್ವತವಾದ ವಿದ್ಯಾಸಂಸ್ಥೆಯನ್ನು ನೆಲೆಗೊಳಿಸಿ, ಈ ದೇಶದಲ್ಲೆಲ್ಲ ಬಗೆಬಗೆಯಾಗಿ ಕನ್ನಡವನ್ನು ವಿಶೇಷ ಅಭಿವೃದ್ಧಿಗೆ ತಂದು, ಉಭಯಮಹಾರಾಜರವರ ಸದುದ್ದೇಶಗಳನ್ನು ನೆರವೇರಿಸುತ್ತಿರುವ ಈಗಿನ ವಿದ್ಯಾಶಾಖೆಯ ಮುಖ್ಯಾಧಿಕಾರಿಗಳಾದ ರಾವ್‌ಬಹದೂರ್ ಎಮ್ ಶಾಮರಾವ್, ಎಮ್ ಎ. ಇವರ ವಿಷಯದಲ್ಲೂ ಕನ್ನಡನಾಡಿನವರಾದ ನಾವೆಲ್ಲರೂ ಅತ್ಯಂತ ಕೃತಜ್ಞರಾಗಿರಬೇಕಾಗಿದೆ

ಸಭ್ಯಮಹಾಶಯರೆ! ನನ್ನ ಈ ನೀರಸವಾದ ಉಪನ್ಯಾಸಕ್ಕೆ ಇಷ್ಟುಹೊತ್ತೂ ತಾವು ತಮ್ಮ ಅಮೂಲ್ಯವಾದ ಗಮನವನ್ನು ಕೊಟ್ಟುದಕ್ಕಾಗಿಯೂ, ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಅವಕಾಶವನ್ನು ಕೊಟ್ಟುದಕ್ಕಾಗಿಯೂ, ನಾನು ಕೃತಜ್ಞತೆಯೊಡನೆ ವಂದಿಸುತ್ತೇನೆ

——— 0 ———

ಕರ್ಣಾಟಕ ಪದಗಳು ಮತ್ತು ದೇಶೀಯ ಪದಗಳು.

ಪ್ರಾಕೃತದಲ್ಲಿ ತತ್ಸಮ, ತದ್ಭವ, ದೇಶೀ—ಈ ಮೂರು ಜಾತಿಯ ನಾಮಗಳಿದ್ದವು ಕನ್ನಡದಲ್ಲಿಯೂ ಈ ವರ್ಗಭೇದವನ್ನು ಇಟ್ಟುಕೊಂಡಿರುವೆವು ಪ್ರಾಕೃತದ ದೇಶೀಯನಾಮಗಳನ್ನು ಸಂಗ್ರಹಿಸಿ ಹೇಮಚಂದ್ರನು ಹದಿನರಡನೆಯ ಶತಮಾನದಲ್ಲಿ ಬರೆದ ನಿಘಂಟನ್ನೂ, ಅದರ ವೃತ್ತಿಯನ್ನೂ ವಿಲಾಯತಿಯ ಪಂಡಿತರು ಪರಿಷ್ಕರಿಸಿ ಮುದ್ರಿಸಿರುವರು ಈ ನಾಮಗಳಲ್ಲಿ ಕೆಲವು ಸಂಸ್ಕೃತದಿಂದಲೇ ಹುಟ್ಟಿರುವೆಂಬುದಕ್ಕೆ ಸಂದೇಹವಿಲ್ಲ ಉಳಿದವುಗಳು ಆವ ಭಾಷೆಯಿಂದ ಬಂದುವೆಂದು ಈ ವರೆಗೆ ಆರೂ ಹೇಳಿದ್ದಿಲ್ಲ ಅವು ಸಂಸ್ಕೃತೇತರ ಭಾಷೆಗಳನ್ನಾಡುತಿದ್ದ ಮೂಲನಿವಾಸಿಗಳು ತಾವು ಕಲಿತ ಪ್ರಾಕೃತದಲ್ಲಿ ಇಟ್ಟುಕೊಂಡ ಮಾತುಗಳೆಂದು ತರ್ಕಿಸಬಹುದು. ಆ ಜನರಾರೋ, ಅವರ ಭಾಷೆಯಾವುದಿತ್ತೋ, ಗೊತ್ತಿಲ್ಲ ಭಿಲ್ಲರ ಮಾತಿನ ಮಾದರಿಗಳನ್ನು ಗ್ರಿಅರ್ಸನ್ ಪಂಡಿತರು ಪ್ರಕಟಿಸಿರುವರು ಅವುಗಳನ್ನು ಪರೀಕ್ಷಿಸಿದರೆ, ಈ ಜನರು ತಮ್ಮ ಮೂಲ ಭಾಷೆಯೊಂದಿದ್ದರೆ ಅದನ್ನು ಮರೆತುಬಿಟ್ಟು, ಈಗಿನ ಮರಾಠಿ ಗುಜರಾಥಿ ಭಾಷೆಗಳನ್ನು ಕಲಿಯಲಿಕ್ಕೆ ಪ್ರಯತ್ನಿಸಿದಂತೆ ಕಾಣುವುದು ಅದು ಹೇಗಿದ್ದರೂ, ಈ ನಾಮಾವಲಿಯಲ್ಲಿ ಕನ್ನಡ ಮಾತುಗಳು ಸಿಕ್ಕುತ್ತವೆಯೋ ಎಂಬುದನ್ನು ಶೋಧಿಸಿ ನೋಡುವುದು ಕನ್ನಡಿಗರ ಕರ್ತವ್ಯ ನಾನು ಗುರುತು ಹಿಡಿದ ಕೆಲವು ಪದಗಳನ್ನು ಈ ನಿಬಂಧದಲ್ಲಿ ಎತ್ತಿ ಹಾಕುವೆನು ಅವೆಲ್ಲವೂ ಅಚ್ಚಗನ್ನಡವಲ್ಲ. ಆದರೂ ಪ್ರಾಕೃತ ವ್ಯಾಕರಣಕರ್ತರು ಅವುಗಳಿಗೆ ದೇಶೀಯ ಎನ್ನುವರು ಈ ನುಡಿಗಳನ್ನು ಉದಾಹರಿಸಿದ ಮೇಲೆ ಅವುಗಳಿಂದ ಹುಟ್ಟುವ ವಿಚಾರಗಳನ್ನು ಚರ್ಚಿಸಬಹುದು ಕೆಳಗೆ ಹೇಮಚಂದ್ರನ ಪ್ರಾಕೃತ ವಾಕ್ಯಗಳನ್ನೂ ವೃತ್ತಿಕಾರನ ಸಂಸ್ಕೃತ ವಾಕ್ಯಗಳನ್ನೂ ಉದ್ಧರಿಸಿ ಹಾಕಿದ

೧. ಅಕ್ಕ—'ಅಕ್ಕಾ ಬಹಿಣೀ' ಸಂಸ್ಕೃತದಲ್ಲಿ ಈ ಪದದ ಅರ್ಥ ತಾಯಿ. ದೇಶೀಯದಲ್ಲಿ ಭಗಿನೀ ಆದಕಾರಣ ಅದನ್ನು ದೇಶೀಯನಾಮಗಳಲ್ಲಿ ಸೇರಿಸಿರಬಹುದು

೨ ಅಣೆ— 'ಅಯಿಣಾಂಗಿರಿತಟಂ ಇದಕ್ಕೆ ಜಲಪ್ರತಿಬನ್ಧನವೆಂದು ಒಂದು ಅರ್ಥವಿರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕೆ ದಿನ್ನೆ ಎಂಬ ಅರ್ಥವಿದೆ ಇದು 'ಅವನಯನಂ' ಶಬ್ದದ ತದ್ಭವವಾಗಲಾರದೇ ?

೩ ಅದಲು ಬದಲು— 'ಉತ್ಥಲ್ಲ ಪತ್ಥಲ್ಲಾ ಪಾರ್ಶ್ವದ್ವಯೇನ ಪರಿವರ್ತನಂ'. ಇಲ್ಲಿ ಎರಡನೆಯ ಮಾತು 'ಪ್ರತಿಫಲ' ದಿಂದ ಹುಟ್ಟಿರಬಹುದು ಅದಕ್ಕೆ ದ್ವಿರುಕ್ತಿಯಾಗಿ 'ಉತ್ಥಲ್ಲ' ವನ್ನು ಹಿಂದಕ್ಕೆ ಸೇರಿಸಿದರೋ ಏನೋ

೪ ಅಪ್ಪ— 'ಅಪ್ಪೋ ಪಿತಾ' ಸಂಸ್ಕೃತ, ಅಂಬಃ

೫ ಅಮ್ಮ, ಅವ್ವ— 'ಅವ್ವಾ ಅಮ್ಮಾ ಯ ಅಂಬಾ ಏ'. ಸಂ—ಅಂಬಾ

೬ ಅಸಲಿ 'ಅಜ್ಞೊಲ್ಲಿ ಆಕ್ರೋಡಾ ಭರಣಂ' ಇದನ್ನು ಅಯ್ದೆತನದ ಚಿಹ್ನವಾಗಿ ಧರಿಸಿಕೊಳ್ಳುವುದರಿಂದ ಈ ಮಾತು 'ಅಯುಃಶಾಲಿ' ಯ ತದ್ಭವವೆಂದು ನನ್ನ ಎಣಿಕೆ ಅಯುಃ=ಸೌಭಾಗ್ಯ 'ಅಯಿರಾಣೀ ಸೌಭಾಗಾಢಂ ವೃತಾ ಸೇವಿನೀ' (ವೃತ್ತಿ)

೭. ಅಡು- 'ಅಕೋಡೋಭಾಗಃ' ಸಂ-ಪಡಕಃ

೮ ಅರಂಬ- ಅರಂಬಿಟ ಮಾಲಾಕಾರಃ' ಸಂ-ಆರಾಮಿಕಃ-ಅರಂಬಗಾರನು ಮೊದಲು ತೋಟಗಾರನಾಗಿದ್ದು ಆ ಮೇಲೆ ಸಾಧಾರಣವಾಗಿ ಕೃಷಿ ಜೀವಿಯಾದನೇನು ? ಇಲ್ಲವಿದ್ದರೆ 'ಅರಂಬ' ಶಬ್ದದ ಮೂಲವು ಬೇರೆಯೇ ಇರಬಹುದು

೯ ಅರೋಗಣ- 'ಅರೂಗಿ ಅಂ ಭುಕ್ತಂ' ಸಂ-ಆಹರಣ

೧೦. ಉಂಡೆ- ಉಂಡಲೋಸಿಕರಃ' ಸಂ-ಧಾತು ಊರ್ಣ ?

೧೧ ಉದ್ದು- 'ಉಡಿದೋವಮಾಸಪ್ಪ' ಊರ್ಜದಃ ? ಇದು ಉಂಡೆಯಂತೆಯೇ ಶುದ್ಧ ದೇಶೀಯನಾಮನೇ ಇರಬಹುದು

೧೨. ಉಬ್ಬರ-'ಉಬ್ಬಾರೋ ಅಧಿಕಾರ್ಥಃ'-'ಉವ್ವರಂ ಅಧಿಕಂ' ಉರ್ವರಿತ ಉಬ್ಬಟೆ- 'ಉಬ್ಭಡ'. ಉದ್ಭಟ ?

೧೩ ಉಮ್ಮತ್ತ- 'ಉಮ್ಮತ್ತೋಧತ್ತೂರೇ' ಸಂ-ಉನ್ಮತ್ತ

೧೪ ಉರಳಿ- 'ಉಕ್ಖಲೀ ಪಿಠರಂ' ಸಂ-ಉಖಾ. ಉರುಟು, ವೃತ್ತ, ಆಕಾರದ ದೆಸೆಯಿಂದ ರಕಾರ ಬಂದಿರಬಹುದು

೧೫ ಊರು- 'ಗ್ರಾಮೇ ಸಂಘೇ ಊರೋ'. ಪುರಶಬ್ದವು ಪೃ ಧಾತುವಿನಿಂದ ಬಂತಂತೆ ಇದಕ್ಕೂ ಊರು ಧಾತುವಿಗೂ ಅರ್ಥದಲ್ಲಿ ಸಾದೃಶ್ಯವಿದೆ. ಆದರೂ ಇದು ಶುದ್ಧ ದೇಶೀಯಾಗಿರಬಹುದು

೧೬ ಒಕ್ಕಣಿಕೆ- 'ಉಕ್ಖಣಿಅಂ, ಕಂಡಿತಂ' ಸಂ-ಅವಕ್ಷೇಪಣ ?

೧೭ ಒಪ್ಪ- 'ವಿಮಲ ಓಪ್ಪಾ - ಶಾಣಾದಿನಾಮಣ್ಯಾದೇರ್ಮಾರ್ಜನಂ'. ಸಂ-ಉಪಸ್ಕರಣಂ ?

೧೮. ಓಕರಿಕೆ- 'ಓಕಿಅಂ, ವಾಂತಂ'. ಇದು ಅನುಕರಣ ವಾಚಕವಾದುದರಿಂದ ಆವ ಭಾಷೆಯಲ್ಲಿಯೂ ಇರಬಹುದು.

೧೯ ಓಳಿ-'ಓಲೀಕುಲಪರಿಪಾಟೀ, ಪಙ್ಕ್ತಿವಾಚಕಸ್ಯಾವಲೀಶಬ್ದಭವಃ'

೨೦. ಕಟಕ- 'ಖಟ್ಟಿಕ್ಕೋ ಸೌನಿಕಃ' ಹದಿನೆಂಡನೆಯ ಶತಮಾನದಲ್ಲಿ ಈ ಶಬ್ದವು ದೇಶೀಯ ಎನ್ನಲಿಕ್ಕೆ ಇವ ಕಾರಣವಿದ್ದರೂ, ಈಗ ಅದು ಸಂಸ್ಕೃತ ನಿಘಂಟುಗಳಲ್ಲಿ ಸಿಕ್ಕುತ್ತದೆ

೨೧. ಕರಾರಿ- 'ಕಟ್ಟಾರೀಛುರಿಕಾ' ಸಂ-ಕಟ್ಟಾರಃ

೨೨. ಕಡಿತಲೆ- 'ಕಡತಲಾವಕ್ರಮೇಕಧಾರಂ ಲೋಹಾಯುಧಂ' ಈ ಮಾತು

ಅಚ್ಚ ಕನ್ನಡವೇ, ಮತ್ತು ತಲೆಕಡಿಯುವ ಆಯುಧವೆಂದು ದೇಶೀಯರತ್ನಾವಲಿಯ ವೃತ್ತಿಕಾರನು ಎಣಿಸಿದ್ದೂ ಸಹಜವೇ ಆದರೆ ನಾಚಿರಾಜೀಯದಲ್ಲಿ ಇದಕ್ಕೆ ಚರ್ಮದ ಫಲಕವೆಂದು ಅರ್ಥ ಹೇಳಿದ್ದಕ್ಕೂ, ಅದೇ ಅರ್ಥದಲ್ಲಿ ಕವಿಗಳು ಪ್ರಯೋಗಿಸಿದ್ದಕ್ಕೂ, ಕಾರಣವೇನು ? ಕಿಟ್ಟೆಲವರ ನಿಘಂಟನ್ನು ನೋಡುವುದು ಆಪಟೆಯವರ ನಿಘಂಟಿನಲ್ಲಿಯೂ ಕಡಿತುಲಃ ಎಂಬುದಕ್ಕೆ ಖಡ್ಗ ಎಂಬ ಅರ್ಥವನ್ನು ಹೇಳಿದೆ ಇದು ಶುದ್ಧ ಸಂಸ್ಕೃತವಾಗಲಿ, ಇಲ್ಲದಿರಲಿ, ನಾಚಿರಾಜೀಯದ ಮಾತು ಬೇರೆಯಾಗಿರಬಹುದು

೨೩ ಕಡ್ಡ– 'ಖಡ್ಗಾಖಾತಃ' ಸಂ–ಖಾತ

೨೪. ಕಡ್ಡ– 'ಕಡ್ಡಿಓಮತ್ತಃ' ಸಂ–ಕಡ , ಕಡ್‌ ಧಾತು

೨೫. ಕನಸು– 'ಕನವಸ ಇಸ್ವಪಿತಿ' ಸಂ–ಕಣ್‌ ಧಾತುವಿಗೆ ಕಣ್ಣುಮುಚ್ಚು ಎಂಬ ಅರ್ಥವಿದೆಯಂತೆ (ಆಪಟೆ)

೨೬. ಕರಡ– 'ಕರಇಲ್ಲೀ ಶುಷ್ಕವೃಕ್ಷಃ' ಈ ಕರ್ನಾಟಕ ಮತ್ತು ದೇಶೀಯ ನಾಮಗಳಲ್ಲಿ ಕರ ಶಬ್ದಕ್ಕೆ ಕರಗಿದ,ಶುಷ್ಕ,ಈ ಅರ್ಥವಿರಬಹುದು 'ಇಲ್ಲಿ' ಎಂದರೇನೋ 'ಇಲ್ಲೀ ಶಾರ್ದೂಲಃ ಸಿಂಹೋವರ್ಷರ್ತ್ರಾಣಾಂ' ಹೀಗೆ ನಾನಾರ್ಥಗಳನ್ನು ಇನ್ನೊಂದು ಕಡೆಯಲ್ಲಿ ಹೇಳಿದೆ 'ಇಲ್ಲೋದ ಬದ್ರಃ ಕೋಮಲಃ ಪ್ರತೀಹಾರೋ ಲಪಿತ್ರಂ ಕೃಷ್ಣವರ್ಣಶ್ಚೇತಿ'–ಇವು ಇಲ್ಲ ಶಬ್ದದ ಅರ್ಥಗಳಂತೆ ಇಲ್ಲದತನ ಎಂದರೆ ಒಡತನ ವೆನ್ನಬಹುದು ಆದರೆ ಬೇರೆ ಅರ್ಥಗಳು ಕನ್ನಡದಲ್ಲಿಲ್ಲದಿರುವುದರಿಂದ, ಇದು ಆವ ಭಾಷೆಯಮಾತೋ

೨೭ ಕರಗ– 'ಕರಿ ಆ ಮದ್ಯಪರಿವೇಷಣ ಭಾಂಡಂ' ಸಂ – ಕರಕ ಅರ್ಥದಲ್ಲಿ ಭ್ರಷ್ಟತೆ

೨೮ ಕಳ್ಳು– 'ಕಲ್ಲಾಮಚ್ಛಃ' ಸಂ–ಕಲ್ಯಂ ಕಿಟ್ಟೆಲವರು ಇದನ್ನು ಅಚ್ಚಗನ್ನಡದಲ್ಲಿ ಏಕೆ ಸೇರಿಸಿದರೋ.

೨೯. ಕಳವು– 'ಕಲವೋತಥಾ ಕುಸುಮಾಲೋ ಚೌರಃ , ಕಲಮಶಬ್ದಃ ಸಂಸ್ಕೃತಸವೋಽಪಿ ಕವೀನಾಂ ನಾತಿ ಪ್ರಸಿದ್ಧ ಇತಿನಿಬದ್ಧಃ, ಸಂ–ಕಲ್ = ಅಪಹರಿಸು (ಆಪಟೆ)- ಕಳವು ಅಚ್ಚಗನ್ನಡವಲ್ಲವೆನ್ನಬಹುದು, ಇಲ್ಲದಿದ್ದರೆ ದ್ರಾವಿಡಮಾತು ಸಂಸ್ಕೃತದಲ್ಲಿ ಸೇರಿರಬೇಕು 'ಕುಸುಮಾಲೋ'– ಇಲ್ಲಿ 'ಕಸುಕೊಳ್ಳು' ಎಂಬುದರ ತಲೆತೋರುತ್ತದೇನು ?

೩೦ ಕಾವಲಿ–'ಕಾಹಲ್ಲೀ ಅಪೂಪಾದಿ ಪಚನಭಾಂಡಂ' ಸಂ–ಖಲ್ಲಿಕಾ.

೩೧ ಕಾಹುರ- 'ಕಾಹಲೋ ಕಾತರ ವಾಚೀತು ಕಾತರ ಶಬ್ದಭವ.'

೩೨ ಕಿಟಿಕಿ– 'ಖಡ್ಡಕ್ಕಿಲಘುದ್ವಾರಂ', ಸಂ–ಖಡಕ್ಕಿಕಾ

೩೩. ಕುಂಚಿ– 'ಕಂಠಕುಂಚೀ ವಸ್ತ್ರಾದಿನಾಂ ಕಂಠೇ ನಿಬದ್ಧೋ ಗ್ರಂಥಿಃ' ಸಂ–ಕುಂಚ್ ಧಾತು

೩೪. ಕುತ್ತರ–'ಕೊತ್ತಲೋ ಕುಶೂಲಃ'–ಇದು ಕುಶೂಲದ ತದ್ಭವವೆಂದರೇನು?

೩೫. ಕುಂದು– 'ಕುಂದಬಿಕ್ರಶಃ' ಸಂ–ಕುಂಚ್ ?

೩೬. ಕುರುಳು– 'ಕುರುಲೋ ಕುಟಿಲಕೇಶಃ' ಈಗಿನ ಸಂಸ್ಕೃತ ನಿಘಂಟುಗಳಲ್ಲಿ ಇದನ್ನು ಹಾಕಿರುವರು ದೇಶೀಯ ಎನ್ನಲು ಕಾರಣವೇನೊ

೩೭. ಕೂಳು– 'ಕೂರಂ ಭಕ್ತಮಿತಿ ಸಂಸ್ಕೃತ ಸಮ'

೩೮. ಕೊರಲು–'ಕೋಲೋ ಗ್ರೀವಾ' ಕನ್ನಡದಲ್ಲಿಯೂ ಕೊಳ್ ಎಂಬುದಾಗಿ ಉಚ್ಚರಿಸುವುದುಂಟು (ಕಿಟ್ಟೆಲ್)

೩೯. ಕೊಮ್ಮೆ–'ತೃಣಾದಿಮಯಂ ವೃಷ್ಟಿನಿವಾರಣಂ ಖುಂಪಾ'

೪೦. ಕೊಳ್ಳಿ– 'ಕೋಣೋ ಲಕುಟಃ' ಸಂ–ಕೂಲತ

೪೧. ಕೋಟೆ– 'ಕೊಟ್ಟಂ ನಗರಂ' ಸಂ–ಕೋಟಃ

೪೨. ಕೋಡು– 'ಕುಡ್ಡಂ ಆಶ್ಚರ್ಯಂ ಕೇಚಿತ್ ಕೋಡ್ಡಂ ಇತ್ಯಾಹುಃ' ಸಂ–ಕೌತುಕಂ (ಡಾಕ್ಟರ ಭಾಂಡಾರಕಾರವರ ವ್ಯಾಖ್ಯಾನಗಳಲ್ಲಿ ಮಾಡಿದ ಸೂಚನೆ.)

೪೩. ಕೋಣೆ– 'ಕೊಣ್ಣೋ ಗೃಹಕೋಣಃ' – ಮನೆಯ ಮೂಲೆ ಎಂಬ ಅರ್ಥವಾಯಿತು ಚೈತ್ರದ ಸಂಚಿಕೆಯಲ್ಲಿ 'ಕೊಂಡಿ' ಗೆ ಸಂ–ಕೋಣ ಎಂದು ಬರೆಯುವುದರ ಬದಲಾಗಿ ಅಜಾಗರೂಕತೆಯಿಂದ ಕೋಣೆಗೆ ಅದನ್ನು ಸಮಾಕರಿಸಿರೆ

೪೪. ಖಾಲಿ– 'ಖಲಇಅಂ ರಿಕ್ತಂ'. ಸಂ–ಸ್ಖಲಿತ ? ಇದು ಅರಬಿ ಮಾತೆಂದು ಕೆಲವರನ್ನುವರು. ಹೇಮಚಂದ್ರನು ಅನ್ಯದೇಶೀಯ ಶಬ್ದವನ್ನು ದೇಶೀಯೆಂದು ಹನ್ನೆರಡನೆಯ ಶತಮಾನದಲ್ಲಿ ಭ್ರಮಿಸುವುದು ಅಸಾಧ್ಯ

೪೫. ಗಡ್ಡ–'ಖಡ್ಡಂ ಮಂಸು = ಶ್ಮಶ್ರು, ಮೀಸೆ ಸಂ–ಕೂರ್ಚ

೪೬. ಗಂಡ–'ಗಂಡೋ ದಾಣ್ಡಪಾಶಿಕಃ, ತಲಾರ' ಮೂರುರಾಯರಗಂಡ, ಭಾಷೆಗೆ ತಪ್ಪುವರ ಗಂಡ, ಇತ್ಯಾದಿ ಬಿರುದುಗಳನ್ನು ಹಾಕಿಕೊಳ್ಳುವುದಕ್ಕೆ ಈ ಅರ್ಥವೇ ಕಾರಣವಾಗಿರಬಹುದು.

೪೭. ಗವುಡ–'ಗಾಮಉಡೋ ಗಾಮಗೋಹೋ ಗ್ರಾಮಪ್ರಧಾನಾರ್ಥಾಃ'.

೪೮. ಗಾಡಿ–'ಗಡ್ಡೀ ಗಂತ್ರೀ' ತದ್ಭವವಾಯಿತು

೪೯. ಗಿಣಿ–'ಕಣಇಲ್ಲೋ ಕೀರೋ ಶುಕವಾಚಕಾಃ.'

೫೦. ಗಿಡ್ಡ–'ಘಟ್ಟೋ ಕುಬ್ಜಃ, ಸಂ–ಕ್ಷುದ್ರ

೫೧. ಗುಡ್ಡ–'ಕುಹಡೋ ಕುಬ್ಜಃ' ಪ್ರಾಕೃತ–ಖುದ್ದ (ಕ್ಷುದ್ರ).

೫೨ ಗುಟಕು—'ಘುಟ್ಟ ಇತಿ ಪಿಬತಿ' ಇದು ಅನುಕರಣವಾಚಕವಾಗಿರಬಹುದು, ಅಥವಾ ಸಂ—ಗಿಲಿತ ?

೫೩ ಗೊಂಚಲು—'ಗೊಚ್ಛಾ ಮಂಜರೀ' ಸಂ—ಗುಚ್ಛಃ, ಗುಂಜಃ

೫೪ ಗೊಂಡೆ—'ಗೊಂಡೀ ಮಂಜರೀ' ಸಂ—ಗುಂಜಃ

೫೫ ಗೊಂದಣ, ಗೊಂದಳ—'ಕುಂದಣೋ ರಾಸಕಃ' ಸಂ—ಗುಧ್', ಗೋಧತೇ.

೫೬ ಚಿಕ್ಕ—'ಚಿಕ್ಕಾ ಅಲ್ಪಂ' ಸಂ—ಚುಟ್'ಧಾತು' ಚಿಟ್ಟು, ಚುಟುಕು, ಇವೆಲ್ಲ ಒಂದೇ ಮೂಲದಿಂದ ಹುಟ್ಟಿರಬಹುದು

೫೭ ಚಂಗುಳಿ—'ಝೂಂಡಲಿ, ರಾಸಕಸದೃಶಕ್ರೀಡಾ' ಸಂ—ಚಂಗಕ್ರಮಣಂ ಚಂಕ್ರಮಣ'

೫೮ ಜಡತ—'ಜಡಿಅಂ, ಖಚಿತಂ', ಸಂ—ಝುಟ್' ?

೫೯ ಜಡಿ—'ಝಡೀ ನಿರಂತರವೃಷ್ಟಿಃ' ಸಂ—ಜಟ್'ಧಾತುವಿಗೆ ಮಳೆಗರೆ ಎಂಬ ಅರ್ಥವಿದೆಯಂತ (ಆಪಟೆ)

೬೦ ಜುಟ್ಟು—'ಚಡೋ ತಧಾ ಜೊಟ್ಟೀ ಶಿಖಾ' ಸಂ—ಚೂಡಾ

೬೧ ಟಂಕೆ—'ಟಂಕೋ ಜಂಘಾ' ಸಂ—ಟಂಕಃ

೬೨ ತಟ್ಟಿ—'ತಟ್ಟೀ ವೃತಿ, ಟಟ್ಟ ಇತಿ, ಜವಣಿಆ, (ಯವನಿಕಾ). ಸಂ—ತ್ರಾತಂ, ತ್ರಾಣಂ?

೬೩ ತಳಾರ, ತಳವಾರ—'ತಲಾರೋ ನಗರಾರಕ್ಷಕಃ' ಸಂ—ಸ್ಥಲವಾರಃ

೬೪ ತಾಮರಸ—'ತಾಮರಸಂ ಜಲೋದ್ಭವ ಪುಷ್ಪಂ, ಪದ್ಮವಾಚಕಸ್ತು ಸಂಸ್ಕೃತಸಮಃ'

೬೫ ತಿಣ್ಣ—'ತಿಣ್ಣೋ ದೃಪ್ತಃ' ಸಂ—ಸ್ತ್ಯಾನ ?

೬೬. ತಿಮಿಂಗಿಲ—'ತಿಮಿಂಗಿಲೋ ಮೀನಃ, ಮತ್ಸ್ಯವಿಶೇಷವಾಚಕಸ್ತು ಸಂಸ್ಕೃತಸಮಃ'

೬೭ ತುಪ್ಪ—'ತುಪ್ಪಂ ಕೌತುಕಂ ಏವಾಹು ಸರ್ಪಂ ಪ್ರೋಭ್ರಕ್ಷಿತಃ ಸ್ನಿಗ್ಧಃ ಕುತು ಪಕ್ಷೇತಿ ಷಡರ್ಥಃ' ಕನ್ನಡದಲ್ಲಿ ಸ್ನಿಗ್ಧ-ಇದೊಂದೇ ಅರ್ಥವಿರಲಿಕ್ಕೆ ಕಾರಣವೇನು ? ಇದು ಅಚ್ಚಗನ್ನಡವಾಗಬಹುದೇ ?

೬೮. ನಸ್ಟಿ—'ಣಸ್ಟಾ ಣಸ್ಟೀ ಣಸ್ಟಿಣೀ ಗೋವಾಚಕಾಃ' ಈ ನಾಮಗಳು ಸಂಸ್ಕೃತದಲ್ಲಿ ಸಾಮಾನ್ಯ ಗೋವಾಚಕಗಳಲ್ಲದ ದೇಶೀಯೆಂದು ಹೇಳಿರಬಹುದು ದೇಶೀನಾಮಗಳ ಪ್ರಥಮಾಕ್ಷರವು ಣಕಾರವಾಗಬೇಕಲ್ಲದೆ ನಕಾರವಾಗಬಾರದೆಂದು ಹೇಮಚಂದ್ರನ ಮತ ಆದಕಾರಣ ಅವನ ರತ್ನಾವಲಿಯಲ್ಲಿ ಕನ್ನಡಮಾತುಗಳಿದ್ದರೂ, ಅವನಿಗೆ ಕನ್ನಡ ತಿಳಿದಿತ್ತೆಂದು ಹೇಳಲಿಕ್ಕಾಗುವುದಿಲ್ಲ ಅವನು ಕೇಳಿದ ಅಥವಾ ಪ್ರಾಕೃತದಲ್ಲಿ ನೋಡಿದ ನಾಮಗಳು ಆವ ಭಾಷೆಗಳಿಂದ ಬಂದುವೆಂಬುದು ಚನ್ನಾಗಿ ತಿಳಿಯದೆ ನಿಘಂಟಿನಲ್ಲಿ ಸೇರಿಸಿರಬೇಕು

೬೯. ನೇಸರು– ‘ ಣೇಸರೋರವಿಃ ’ ಇದು ದಿನೇಶ್ವರಶಬ್ದಭವವಾದರೆ ವಿದರ್ಭ, ಗುರ್ಜರರಾಷ್ಟ್ರ, ಮುಂತಾದ ದೇಶಗಳಲ್ಲಿ ಹೇಮಚಂದ್ರನು ಕೇಳಿರಬಹುದಿತ್ತು. ಕನ್ನಡಿಗ ಶಿಷ್ಯರ ಮುಖಾಂತರ ಕೇಳಿದ್ದರೆ ಣಕಾರವನ್ನು ಪ್ರಯೋಗಿಸಿದ್ದು ಆಶ್ಚರ್ಯವೇ

೭೦. ಪಕ್ಕಾ– ‘ ಪಕ್ಕೋ ಸಮರ್ಥಃ ’ ಸಂ–ಪಕ್ವ.

೭೧. ಪಡದೆ– ‘ ಪಡವಾಯುವನಿಕಾ ’ ಸಂ–ಪ್ರತಿವಾರಃ, ಪ್ರತಿರೋಧಃ ?

೭೨ ಪಲ್ಲಟ– ‘ ಪಲ್ಲಟ್ಟೋಪರ್ಯಸ್ತ ’–ತದ್ಭವವಾಯಿತು

೭೩ ಪಡ್ತೆ– ‘ ಪಡ್ಡಿಪ್ರಥಮಪ್ರಸೂತಾ ಸಂ–ಪ್ರೌಢಾ ?

೭೪. ಪಾಂಡುರಂಗ– ‘ ಪಾಂಡುರಂಗೋರುದ್ರಃ ಈಗ ವಿಷ್ಣುವಿನ ಅವತಾರವೆನ್ನುವರು.

೭೫ ಪೆಂಡೆಯ– ‘ ಪೆಂಡಂವಲಯಃ ಸಂ–ಪಾದಾಂದುಃ

೭೬ ಪೊಟ್ಟೆ, ಹೊಟ್ಟೆ– ‘ ಪೊಟ್ಟಂ ಉದರಂ ’ ಚೈತ್ರದ ಸಂಚಿಕೆಯಲ್ಲಿ ಅಜ್ಞಾತ ತದ್ಭವಗಳನ್ನು ನೋಡುವುದು

೭೭ ಪೋಗಂಡ– ‘ ಪೋಅಂಡೋಷಂಡಃ ’ ಇದು ಸಂಸ್ಕೃತವೇ

೭೮. ಪೋಣಿಸು– ‘ ಪೋಣಿಅ, ಸೂತ್ರಭೃತಾತರ್ಕುಃ ’ ಸಂ–ಪ್ರವೇಶ್ ?

೭೯. ಬಪ್ಪು– ‘ ವಪ್ಪೋಭೂತಾದಿಗ್ರಹಿತ ’ ಇದರ ಪರಿಣಾಮ–ವೇಪನ. ಆದರೂ ಇದು ಶುದ್ಧದೇಶೀಯಶಬ್ದವೇ ಆಗಿರಬಹುದು

೮೦. ಬೊಪ್ಪು– ‘ ಒಪ್ಪೋಸಿತಾ ’ ಸಂ–ಬ್ರಹತಾಸಿತಾ ?

೮೧ ಬಂಡಿ– ‘ ಭಂಡೀಗಾಂತ್ರೀ ’ ಸಂ–ಪತರ್ಸೀ ?

೮೨. ಭಾವ– ‘ ಭಾವೋಭಾಗಿನೇಯಃ ’ ಸಂ–ಭಾವುಃ

೮೩. ಮದ್ದಳೆ– ‘ ಮದ್ದಲೋಮುರಜಃ ’ ಸಂ–ಮರ್ದಲಃ

೮೪ ಮುಂಗುಲಿ– ‘ ಮುಂಗುಸೋನಕುಲವಾಚಕಃ ’ ಸಂ–ಅಂಗೂಷಃ ?

೮೫. ಮೊಗ್ಗೆ– ‘ ಮೊಗ್ಗರೋಮುಕುಲಂ ತದ್ಭವವಾಯಿತು.

೮೬. ಮೈಲು– ‘ ಮಇಲೋ ಗತತೇಜಾ ’ ಸಂ–ಮಲಿನ

೮೭ ರೊಟ್ಟೆ– ‘ ರೊಟ್ಟಂತಂದುಲಪಿಷ್ಟಂ ’ ಸಂ–ರುಚ್ಯ ?

೮೮. ಲೊಟ್ಟೆ– ‘ ಲೊಟ್ಟಂಪ್ರಿಯಂವದಃ ’ ಸಂ – ಲುಟ್, ಲೋಟಯತಿ = ಮಾತಾಡು ?

೮೯ ವಲಂ– ‘ ವಲೇಸಿಕ್ತಯೋ ಸಂ–ವಲ್, ಒಲ್, ಈ ಧಾತುವಿನಿಂದ ಹುಟ್ಟುವುದು ಅಸಾಧ್ಯವಲ್ಲ

೯೦ ವಳ್ಳಿ, ಒಳ್ಳಿ– ‘ ಒಲಿಅಂ ಅಂಗೇ ಪಿಸದ್ದಂ ’ ಸಂ–ವಲ್ಲಃ

೯೧ ಶೇಂದಿ– ‘ ಸಿಂದೀಖರ್ಜೂರೀ ’ ಸಂ–ಸಿಂದುಕಃ ? ಇದರ ರಸ.

೯೨ ಸಿಪ್ಪೆ– ‘ ಸಿಪ್ಪಂಪಲಾಲೇ ’ ಸಂ–ಶಿಂಬಾ

೯೩. ಸುರಗಿ- (ಸುರಂಗೀ ಶಿಗ್ರುತರುಃ ' ತದ್ಭವವಾಯಿತು

೯೪. ಸೂಟಿ- ಸುಳೀ ಉಲ್ಕಾ ' ಸಂ-ಜ್ಯೋತಿಃ ? ಚೂಡಾ ?

೯೫ ಸೆಟ್ಟಿ- (ಸೆಟ್ಟೀ ಗ್ರಾಮೇಶಃ ' ಸಂ-ಶ್ರೇಷ್ಠಿನ್

೯೬. ಹರಿಯಾಲೀ, ಹರಿವೆ- (ಹರಿ ಆಲೀ ದೂರ್ವಾ ' ಸಂ-ಹರಿತಾ, ಹರಿತಕಂ.

೯೭ ಹಲಬಲ- (ಹಲಬೋಲೋ ಕಲಕಲಃ '-ಅನುಕರಣವಾಚಕ.

೯೮ ಹೂಡೆ- (ಆಹೋಡ ಇತಾಡಯುತಿ ' ಸಂ-ಆಹನ್ ಇವು ಬೇರೆ ಬೇರೆ ಶಬ್ದಗಳಾಗಿರಬಹುದು.

೯೯. ಹೊಂಡ- (ಪುಂಖೋಗರ್ತಃ ' ಚೈತ್ರದ ಸಂಚಿಕೆಯಲ್ಲಿ ಅಜ್ಞಾತ ತದ್ಭವಗಳನ್ನು ನೋಡುವುದು

೧೦೦ ಹೂಳೆ- (ವಹಾಲೀ ಲಘುಜಲಪ್ರವಾಹ ' ಸಂ-ವಹಾ

ಈ ನಾಮಗಳಲ್ಲಿ ಕೆಲವು ಸಂಸ್ಕೃತ ತತ್ಸಮಗಳೇ, ಬಹುತರ ಭಾಗದವು ತದ್ಭವಗಳು, ಕರ್ಣಾಟಕ ದೇಶೀಯವೆನ್ನಬಹುದಾದ ಮಾತುಗಳು ಸ್ವಲ್ಪವೇ ಗೋದಾವರಿಯವರೆಗೆ ಕನ್ನಡವು ವ್ಯಾಪಿಸಿತ್ತೆಂದು ನೃಪತುಂಗನು ಹೇಳುವುದರಿಂದ ಹೇಮಚಂದ್ರನೂ ವೃತ್ತಿಕಾರನೂ ಕೆಲವು ಕನ್ನಡಿಗರನ್ನು ನೋಡಿರಬಹುದು ಅವರಿಗ ಕನ್ನಡಿಗರಲ್ಲಿ ಶಿಷ್ಯರಿರಬಹುದಿತ್ತು ಆದರೆ ಅವರಿಗೆ ಕನ್ನಡ ತಿಳಿದಿತ್ತೆಂದು ಹೇಳುವುದು ದುಃಸಾಧ್ಯ ಮೇಲೆ ಉದ್ಧರಿಸಿ ಹಾಕಿದ ಅನೇಕ ನಾಮಗಳು ಮರಾಠಿಯಲ್ಲಿಯೂ ಸಿಕ್ಕುತ್ತವೆ. ಕೆಲವು ನಾನು ವಿಚಾರಿಸಿದಮಟ್ಟಿಗೆ ಈಗ ಕನ್ನಡದಲ್ಲಿ ಮಾತ್ರ ಕಾಣಬಹುದು. ನಿಘಂಟಿನಲ್ಲಿಯೂ ವೃತ್ತಿಯಲ್ಲಿಯೂ ಎಷ್ಟು ಕೊರತೆಗಳಿದ್ದರೂ ಕರ್ಣಾಟಕ ಶಬ್ದಗಳ ವ್ಯುತ್ಪತ್ತಿಯನ್ನು ಶೋಧಿಸುವವರಿಗೆ ಸಿಕ್ಕುವ ಸಾಹಿತ್ಯಕ್ಕೆ ನಾವು ಕೃತಜ್ಞರಾಗಿರಬೇಕು

ಹ. ನಾರಾಯಣರಾವ್

—— 0 — ——

ಗೋಖಲೆಯವರ ಜೀವಿತಚರಿತೆಯ ಸಾರ *

ಚಂ|| ಹರಣಮೆ ಪೋದೊಡಂ ದುರಿತಕೃತ್ಯವಗೆಯ್ಯದೆ ನೀತಿನಿಷ್ಠೆಗೋ |
ಸರಿಸದೆ ಬೇಡದಲ್ಪಧನರೊಂದಿನಿಸಾಪ್ತರುಮಂ ದುರಾತ್ಮರಂ |
ಎರೆಯದೆ ಕಷ್ಟದಲ್ಲಿ ಧೃತಿಗುಂದದೆ ಸತ್ಪುರುಷಾನುಕೂಲಮಾ |
ಗಿರುವ ಸುದುಷ್ಕರವ್ರತವನಾರ್ ಸುಜನರ್ಗುಪದೇಶವಿತ್ತರೋ |

ನೀತಿಶತಕ.

ಸ್ವದೇಶ ಪ್ರೀತಿಯನ್ನು ಗುರುತರ ಧರ್ಮವೆಂದೆಣಿಸಿ ಸ್ವದೇಶ ಹಿತಸಾಧನೆಗಾಗಿ ಸ್ವಾರ್ಥವನ್ನು ಬಿಟ್ಟು ಜೀವನಪಥವನ್ನು ನಡೆದ ಮಹಾತ್ಮರ ವೃತ್ತಾಂತವು ಎಲ್ಲರೂ ಆದರಿಸತಕ್ಕುದಾಗಿರುವುದು ಭರತಖಂಡದ ಇತಿಹಾಸವು ಇಂತಹ ಮಹಾತ್ಮರ ಮಹಿಮೆಯಿಂದ ಪರಿಪೂರ್ಣವಾಗಿರುವುದು ಇಂತಹ ದೇಶವತ್ಸಲರ ಚರಿತೆಯನ್ನು ಕೇಳಿದೊಡನೆಯೇ ನಮ್ಮ ದೇಹದಲ್ಲಿ ರಕ್ತವು ವೇಗವಾಗಿ ಹರಿಯುವುದು. ನಮ್ಮ ಮನಸ್ಸು ಉತ್ಸಾಹದಿಂದ ಕಂಪಿಸುವುದು. ಅವರ ಕೀರ್ತಿಗೂ, ಗೌರವಕ್ಕೂ ನಾವೂ ಪಾತ್ರರಾಗಲು ಪ್ರಯತ್ನಶೀಲರಾಗುವೆವು ಗೋಪಾಲಕೃಷ್ಣಗೋಖಲೆಯು ಇಂತಹ ದೇಶವತ್ಸಲರಲ್ಲೊಬ್ಬನು.

ಗೋಖಲೆಗೆ ಬಾಲ್ಯದಲ್ಲಿಯೇ ಪಿತೃವಿಯೋಗದುಃಖವು ಪ್ರಾಪ್ತಿಯಾಗಿ ಅವನ ವಿದ್ಯಾಭ್ಯಾಸಕ್ಕೆ ಬಹಳ ಅಡಚಣೆಗಳುಂಟಾದುವು ಆದರೂ ಬಹುಪ್ರಯಾಸದಿಂದ ತನ್ನ ಹದಿನೆಂಟನೆಯ ವರ್ಷದಲ್ಲಿಯೇ ಬಿ ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು. ಆಗಿನ ಕಾಲದಲ್ಲಿ, ದೊಡ್ಡದೊಡ್ಡ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಬಹಳ ಕಡಿಮೆ ಗೋಖಲೆಯು ಜನಸಾಮಾನ್ಯರಂತೆ ದ್ರವ್ಯಾಪೇಕ್ಷೆಯಿಂದ ಸರ್ಕಾರಿ ಉದ್ಯೋಗಕ್ಕೆ ಸೇರಿ, ಶ್ರಮವಿಲ್ಲದೆ, ಸುಖವಾಗಿ ಕಾಲವನ್ನು ಕಳೆಯಬಹುದಾಗಿದ್ದಿತು ಕೆಲವು ಸ್ನೇಹಿತರು ಪ್ರೇರಿಸಿದಂತೆ, ಇವನು ಇಂಗ್ಲೆಂಡಿಗೆ ಹೋಗಿ, “ಇಂಡಿಯನ್ ಸಿವಿಲ್

* ಮೈಸೂರು ಶ್ರೀಮದ್ಯುವರಾಜರವರ ಪೋಷಣೆಯಲ್ಲಿರುವ ಬೆಂಗಳೂರು ಅಮೆಚೂರ್ ನಾಟಕಮಂಡಲಿಯವರು [Bangalore Amateur Dramatic Association) ಶ್ರೀಯುತ ಗೋಪಾಲಕೃಷ್ಣ ಗೋಖಲೆಯವರ ಜ್ಞಾಪಕಾರ್ಥವಾಗಿ ಏರ್ಪಡಿಸಿದ್ದ ಬಹುಮಾನಕ್ಕಾಗಿ ಅನೇಕ ಲೇಖಕರಿಂದ ಬಂದ ಉಪನ್ಯಾಸಗಳಲ್ಲಿ ಮೇಲ್ಕಾಣಿಸಿರುವ ಈ ಉಪನ್ಯಾಸವು ಮ|| ಗಳಾದ ಹೆಚ್ ಆರ್ ಕೃಷ್ಣಮೂರ್ತಿ ಬಿ. ಎ ಯವರು, ಕರ್ಣಾಟಕದ ಎಡಿಟರ್ ಡಿ. ವಿ. ಗುಂಡಪ್ಪನವರು ಮತ್ತು ವೈ. ಕೆ ರಾಮಚಂದ್ರರಾವ್ ಬಿ. ಎ. ಬಿ ಇ ಯವರು, ಸೇರಿದ ಪರೀಕ್ಷಕ ಮಂಡಲಿಯಿಂದ ಉತ್ತಮವಾದುದೆಂದು ನಿರ್ಣೀತವಾಗಿ ಲೇಖಕರಾದ ಮ|| ಸುಬ್ಬರಾಯರಿಗೆ ರೂ ೨೦ ಬಹುಮಾನವು ಕೊಡಲ್ಪಟ್ಟಿದೆ. ಈ ಲೇಖಕರ ಮೇಲ್ಪಂಕ್ತಿಯನ್ನು ಇತರ ಪ್ರೌಢವಿದ್ಯಾರ್ಥಿಗಳು ಅನುಸರಿಸುವರೆಂದು ಹಾರೈಸುತ್ತೇವೆ.

ಸರ್ವಿಸ'' ಪರೀಕ್ಷೆಗೆ ಓದಿ ಉತ್ತೀರ್ಣನಾಗಬಹುದಾಗಿದ್ದಿತು. ಈ ಉದ್ದೇಶ ಸಾಧನೆಗಾಗಿ ಅವನಿಗೆ ಬುದ್ಧಿ ಕೌಶಲ್ಯವೂ ಸಹಾಯಸಂಪತ್ತಿಗಳೂ ಇಲ್ಲದಿರಲಿಲ್ಲ. ''ಇಂಡಿಯನ್ ಸಿವಿಲ್ ಸರ್ವಿಸ'' ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ, ''ಕಲೆಕ್ಟರ್'' ಅಧಿಕಾರವನ್ನು ಪಡೆದು ವಿಶೇಷವಾದ ದ್ರವ್ಯವನ್ನೂ, ಘನವಾದ ಬಿರುದುಗಳನ್ನೂ ಆರ್ಜಿಸಬಹುದಾಗಿದ್ದಿತು ಆದರೆ ವಿಧಿಯು ಅವನಿಗೆ ಕಷ್ಟವನ್ನೇ ಕೊಟ್ಟು ದೇಶಸೇವಾ ದುರಂಧರರಲ್ಲಿ ಅಗ್ರಗಣ್ಯನಾಗಿ ಮಾಡಿತು ದೈವವಶಾತ್ ಭಾರತಭೂಮಿಯ ಅದೃಷ್ಟ ಬಲವು ಚನ್ನಾಗಿದ್ದಿತು ಗೋಖಲೆಯು ಕೇವಲ ತುಚ್ಛವಾದ ಅರ್ಥಾಭಿಲಾಷೆಯನ್ನು ತ್ಯಜಿಸಿ ತನ್ನ ಅನುಜರ ದುಃಖ, ದಾರಿದ್ರ್ಯ, ದುರ್ಬಲ, ದೈನ್ಯ, ದಾಸ್ಯ ಇವುಗಳೆಲ್ಲವನ್ನೂ ನೋಡಿ ನೋಡಿ ಈ ದುರವಸ್ಥೆಯನ್ನು ಸರಿಪಡಿಸುವೆನೆಂದು ಸಂಕಲ್ಪಿಸಿದನು ಸ್ವದೇಶದ ಉದ್ಧಾರಾರ್ಥವಾಗಿ ಮಾಡಿದ ಅವನ ಸ್ವಾರ್ಥತ್ಯಾಗವು ಎಂತಹ ಉಚ್ಚಭಾವವನ್ನು ಸೂಚಿಸುವುದು !

ತಾನು ಓದಿದ ಪಾಠಶಾಲೆಯಲ್ಲಿಯೇ ಹುಡುಗರಿಗೆ ಪಾಠವನ್ನು ಕಲಿಸುತ್ತಾ ಆ ಶಾಲೆಯನ್ನು ಊರ್ಜಿತಸ್ಥಿತಿಗೆ ತರಲುದ್ಯುಕ್ತನಾದನು. ಗೋಖಲೆಯು ತನ್ನ ಬಾಲಕರಿಗೆ ಉತ್ಸಾಹವನ್ನು ತುಂಬುತ್ತಾ ಅವರೊಡನೆ ಸರಸವಾಗಿ ಕಲತು ಅವರಲ್ಲಿ ಸ್ವದೇಶ ಪ್ರೇಮ, ಸ್ವಾರ್ಥತ್ಯಾಗವೇ ಮೊದಲಾದ ಸದ್ಗುಣಗಳನ್ನು ನಲೆಗೊಳಿಸುತ್ತಿದ್ದನು.

ತಾನು ಗಣಿತಶಾಸ್ತ್ರಜ್ಞನಾದರೂ ಚರಿತ್ರೆಯನ್ನು ಓದುವುದರಲ್ಲಿ ಹೆಚ್ಚು ಆಸಕ್ತಿಯುಳ್ಳವನಾಗಿದ್ದನು ತಾನು ಉಪಾಧ್ಯಾಯನಾಗಿರುವಾಗಲೇ ಭರತಖಂಡದ ರಾಜಕೀಯ, ಸಾಮಾಜಿಕ, ವಿದ್ಯಾಭ್ಯಾಸ ಇವುಗಳ ಸ್ಥಿತಿಗಳನ್ನು ಚೆನ್ನಾಗಿ ಗ್ರಹಿಸಿದ್ದನು. ಕ್ರಮೇಣ ಇವನಲ್ಲಿದ್ದ ಸ್ವಜನ ಮತ್ತು ಸ್ವದೇಶಾಭಿಮಾನವು ಎಲ್ಲರಿಗೂ ಗೋಚರವಾಯಿತು ಬೊಂಬಾಯಾಧಿಪತ್ಯದ ನ್ಯಾಯವಿಧಾಯಕ ಸಭಿಕರಲ್ಲಿ ಒಬ್ಬನಾಗಿದ್ದು ಕಡೆಗೆ ಸುಪ್ರೀಮ್ ಲೆಜಿಸ್ಲೇಟೀವ್ ಕೌನ್ಸಿಲಿನಲ್ಲಿ ಸಭಿಕನಾದನು

ತನ್ನ ಇಷ್ಟಾರ್ಥವನ್ನು ನೆರವೇರಿಸುವುದಕ್ಕೆ ಸಮಯ ದೊರಕಿತು ಇಂತಹ ಘನಪದವಿಯನ್ನು ಹೊಂದಿದ್ದರೂ, ಗೋಖಲೆಯು ತನ್ನ ಸರಳತನವನ್ನೂ, ನಮ್ರತೆಯನ್ನೂ ತ್ಯಜಿಸಲಿಲ್ಲ. ದೊಡ್ಡ ಪದವಿಯುಂಟಾದಾಗ ಜನಸಾಮಾನ್ಯರಂತೆ ಅಹಂಕಾರಪಡದೆ ತನ್ನ ಜನಾಂಗದವರ ಕೊರತೆಗಳನ್ನು ನಿವಾರಿಸಲು ಯತ್ನಿಸಿದನು ಪದಪ್ರಾಪ್ತಿಯಾಗಿರುವಾಗ ಹೀಗೆ ನಯವಾಗಿರುವವರು ಎಷ್ಟು ವಿರಳ !

ರಾಜ್ಯದ ಆಯವ್ಯಯ ವಿಚಾರವನ್ನು ವಿಮರ್ಶಿಸುವುದರಲ್ಲಿ ಇವನನ್ನು ಯಾರೂ ಮೀರಿಸುತ್ತಿರಲಿಲ್ಲ ಕ್ರಿ ಶ ೧೮೯೭ ರಲ್ಲಿ ಇಂಗ್ಲಂಡಿನಲ್ಲಿ ನಡೆದ 'ವೆಲ್ಬಿಕಮಿಷನ್'' ಎನ್ನುವ ಸಭೆಗೆ ಇಂಡಿಯಾದೇಶದ ಪ್ರತಿನಿಧಿಯಾಗಿ ಹೋದನು ಅಲ್ಲಿ ತನ್ನ ವಾಕ್ಚಾತುರ್ಯದಿಂದಲೂ ಬೇಕಾದ ವಿಷಯಗಳೆಲ್ಲವನ್ನೂ ಸ್ಪಷ್ಟವಾಗಿ ತಿಳಿಸುವುದರ ಮೂಲಕವೂ ಇಂಡಿಯಾದೇಶದ ಆಯವ್ಯಯದ ವಿಚಾರವನ್ನು ವ್ಯಕ್ತಪಡಿಸಿದನು. ಇಷ್ಟು ಕಷ್ಟಪಟ್ಟು ದೇಶದ ದಾರಿದ್ರ್ಯಸ್ಥಿತಿಯನ್ನು ವ್ಯಕ್ತಪಡಿಸಿದ್ದರ ಫಲವೇನು ?

ಈ ಸಭೆಯಿಂದ ಯಾವ ಫಲಿತಾಂಶವೂ ಉಂಟಾಗಲಿಲ್ಲ. ಗೋಖಲೆಯ ಕಷ್ಟಗಳು ವರ್ಷವರ್ಷವೂ ಹೆಚ್ಚುತ್ತಿದ್ದುವು. ಅವನಿಗೆ ಅನ್ಯದೇಶೀಯ ವಿರೋಧಿಗಳಲ್ಲದೆ ಸ್ವದೇಶೀಯ ವಿರೋಧಿಗಳನೇಕರಿದ್ದರು ಆದರೂ ಗೋಖಲೆಯು, ತನಗೆ ನಿಜವೆಂದು ತೋರಿರುದನ್ನು ಯಾರ ಮುಂದೆಯೇ ಆಗಲಿ ಹೇಳುವುದಕ್ಕೆ ಅಂಜುತ್ತಿರಲಿಲ್ಲ ಪ್ರತಿ ವರ್ಷದ ಕೊನೆಯಲ್ಲಿಯೂ, ದೇಶದ ಆಯುವ್ಯಯುವನ್ನು ಚರ್ಚಿಸುವಾಗ ಇಲ್ಲಿಯ ಜನರ ಕೊರತೆಗಳನ್ನು ವಿವರಿಸಿ, ಅವುಗಳನ್ನು ನಿವಾರಣೆಮಾಡುವಂತೆ ತನ್ನ ಕೈಯಲ್ಲಾದ ಮಟ್ಟಿಗೂ ಪ್ರಯತ್ನಪಡುತ್ತಿದ್ದನು ಆಯುವ್ಯಯ ಸಭೆಯಲ್ಲಿದ್ದ ಅಧಿಕಾರಿಗಳೆಲ್ಲರೂ ಗೋಖಲೆಯನ್ನು ಸ್ತೋತ್ರಮಾಡುತ್ತಿದ್ದರು ಒಂದು ವೇಳೆ ಲಾರ್ಡ್‌ಕರ್ಜನ್‌ರವರು, ಗೋಖಲೆಯ ದೇಶಾಭಿಮಾನದಿಂದ ವಿಮೋಹಿತರಾಗಿ “ ಗೋಖಲೆಯ ಸಂಗಡ ವಾದಿಸುವುದು ಆತ್ಮಾನಂದವನ್ನುಂಟುಮಾಡುವುದು ” ಎಂದರು

ಗೋಖಲೆಗೆ ಇಂಡಿಯಾದೇಶದ ರಾಜ್ಯಭಾರದ ಸ್ಥಿತಿ ಚೆನ್ನಾಗಿ ಗೊತ್ತಿತ್ತು ಭಾರತ ಭೂಮಾತೆಯ ಸುಖವೇ ತನ್ನ ಸುಖವೆಂದು, ಆಕೆಯ ದುಃಖವೇ ತನ್ನ ದುಃಖವೆಂದು ಅರಿತಿದ್ದನು. ಮಾತೃದೇಶ ಸೇವೆಮಾಡುವುದಕ್ಕಾಗಿ ಪೃಥ್ವೀರಾಜನು ಶೌರ್ಯದಿಂದಲೂ, ಸ್ವಾತಂತ್ರ್ಯದಲ್ಲಿದ್ದ ಪ್ರೇಮದಿಂದಲೂ ಕಾದಿ ಅಜೇಯನೆನಿಸಿಕೊಂಡನು ಸಮರಸಿಂಹನು ತನ್ನ ಪ್ರಾಣವನ್ನು ತುಚ್ಛವಾಗಣಿಸಿ ವಿಧರ್ಮಿಗಳಾದ ಶತ್ರುಗಳ ಮುಂದೆ ನಿಂತನು. ಶಿವಾಜಿಯು ಆರ್ಯಧರ್ಮಸ್ಥಾಪನೆಗಾಗಿ ತನ್ನ ಜೀವಮಾನವನ್ನೆಲ್ಲಾ ಕಳೆದನು ಇಂತಹ ಘೋರಯುದ್ಧಗಳು ಅಡಗಿ ಶಾಂತಿ ನೆಲೆಗೊಂಡಿತ್ತು ಗೋಖಲೆಯು ದೇಶಸೇವೆಗಾಗಿ, ಈ ಭಾರತಪೀರರಂತ ಭೇದೋಪಾಯವನ್ನಾಗಲಿ, ದಂಡೋಪಾಯವನ್ನಾಗಲಿ ಹುಡುಕಲಿಲ್ಲ. ಇವನು ಸಾಮೋಪಾಯವನ್ನು ಅವಲಂಬಿಸಿದ್ದನು. ಇದು ಫಲಿಸಬೇಕಾದರೆ ದೀರ್ಘಕಾಲ ಬೇಕಾಗುವುದು ಆದರೆ ಫಲಿತಾಂಶವು ಅತ್ಯುತ್ತಮವಾಗಿಯೂ ಚಿರಕಾಲ ಬಾಳತಕ್ಕದಾಗಿಯೂ ಇರುವುದು ಸರ್ಕಾರದ ನಡವಳಿಕೆಗೆ ವ್ಯತಿರಿಕ್ತವಾಗಿ ಹೋಗುವುದು ಇವನ ಮತವಲ್ಲ ಬಾಲಗಂಗಾಧರ ತಿಲಕರು, ಬಾಬು ಬಿಪಿನಚಂದ್ರಪಾಲರು, ಇವರುಗಳಂತೆಯೇ ಗೋಖಲೆಯೂ ದೇಶವತ್ಸಲನು ಭಾರತೀಯರು ದೊಡ್ಡ ದೊಡ್ಡ ಪದವಿಗಳಿಗೆ ಬರಬೇಕೆಂಬುದೂ,ಸ್ವಾತಂತ್ರ್ಯವನ್ನು ಪಡೆಯಬೇಕೆನ್ನುವುದೂ ಇವನ ಉದ್ದೇಶವೂ ಅಭಿಲಾಷೆಯೂ ಆಗಿದ್ದುವು ಆದರೆ ಭಾರತೀಯರು ಘನಪದವಿಗಳನ್ನೂ ಸ್ವಾತಂತ್ರ್ಯವನ್ನೂ ಹೊಂದುವುದಕ್ಕೆ ಮುಂಚೆ ತಾವು ಅವುಗಳನ್ನು ಪಡೆಯುವುದಕ್ಕೆ ಅರ್ಹರಾಗಲು ಪ್ರಯತ್ನಿಸಬೇಕೆಂದು ಹೇಳುತ್ತಿದ್ದನು ಇದು ಅತ್ಯುತ್ಸಾಹಿಗಳ ಕಿವಿಗೆ ಬಿದ್ದರೆ ಗೋಖಲೆಯನ್ನು ಎಂದಿಗೂ ಹಿಯ್ಯಾಳಿಸದಿರರು. ದೂರಾಲೋಚನಪರರಾದ ರಾಜತಂತ್ರಪ್ರವೀಣರಿಗೂ ದೇಶಾಭಿಮಾನಿಗಳಿಗೂ ಈ ಮಾತಿನ ಬಲೆ ಗೊತ್ತಾಗುವುದು ಆತುರ ಪಡುವುದರಿಂದ ಕೇಡುಂಟಾಗುವುದೆನ್ನುವುದನ್ನು ಗೋಖಲೆಯು ಬಲ್ಲನು ಅತ್ಯಾತುರದಿಂದ, ತನ್ನ ಉದ್ದೇಶಗಳಿಗೆ ಕುಂದಕ ಬರುವುದಲ್ಲದೆ ತನ್ನ ಸಹಚರರಿಗೂ, ತನ್ನನ್ನೇ ನಂಬಿದ್ದ ಸ್ವಜನಾಂಗದವರಿಗೂ ಕೇಡುಂ

ಟಾಗುವುದೆಂದು ತಿಳಿದು ಯಾವಾಗಲೂ ತಾಳ್ಮೆಯನ್ನು ಹೊಂದಿದ್ದನು ಹಿಂದೂ ಜನಾಂಗವನ್ನು ಉನ್ನತಸ್ಥಿತಿಗೆ ತರುವುದಕ್ಕೆ ಇಂತಹ ಮುಂದಾಳುಗಳಲ್ಲವೇ ಬೇಕಾದವರು ! ಇಂತಹ ಗೋಖಲೆಯರು ಅತಿವಿರಳ.

ಗೋಖಲೆಯೂ ಪ್ರತಾಪಸಿಂಹನಂತಹ ವೀರನೇ ಅಹುದು ಪ್ರತಾಪನು ಯಾವರೀತಿಯಲ್ಲಿ ಧೀರನಾಗಿ ನಿಂತು ಸ್ವದೇಶದ ಗೌರವವನ್ನು ರಕ್ಷಿಸುವ ನಿಮಿತ್ತವಾಗಿ ಪ್ರಾಣವನ್ನು ಕೊಡುವಂತೆ ಉತ್ಸಾಹಗೊಳಿಸಿದನೋ ಹಾಗೆಯೇ ಗೋಖಲೆಯು ಭಾರತ ಮಾತೆಯ ಸೇವೆಗಾಗಿ ಒಂದು ಸಂಘವನ್ನು ಏರ್ಪಡಿಸಿ ಸ್ವದೇಶೀಯರನ್ನು ಸೇರುವಂತೆ ಪ್ರೇರಿಸಿದನು ಸ್ವದೇಶಪ್ರೇಮವನ್ನು ಹೆಚ್ಚಿಸಿ ಭರತಖಂಡದ ಏಳಿಗೆಯನ್ನು ಸಾಧಿಸುವುದೇ ಅದರ ಮುಖ್ಯೋದ್ದೇಶವು ಗೋಖಲೆಯು ಈ ಸಂಘದ ಅಧ್ಯಕ್ಷನಾಗಿ, ತನ್ನ ದೇಶೋನ್ನತಿಗಾಗಿ ತನುಧನಮನಗಳನ್ನು ಅರ್ಪಿಸಿದನು ಇವನ ಸ್ವಾರ್ಥಪರಿತ್ಯಾಗವನ್ನೂ, ಸ್ವದೇಶಾಭಿಮಾನವನ್ನೂ ಮೆಚ್ಚಿ ಇಂಡಿಯಾ ಚಕ್ರವರ್ತಿಯವರು ಘನವಾದ ಕೆ ಸಿ ಐ ಇ ಎನ್ನುವ ಬಿರುದನ್ನು ದಯಪಾಲಿಸಿದರು ಆದರೆ ಗೋಖಲೆಯು, ಎಷ್ಟೋ ಜನರು "ನನಗೆ, ತನಗ" ಎಂದು ಡಂಭಾಭಿಲಾಷೆಯಿಂದ ಹೊಂದಲಿಚ್ಛಿಸುವ ಈ ಬಿರುದನ್ನು ಸ್ವೀಕರಿಸಲು ಇಷ್ಟಪಡಲಿಲ್ಲ

ಭರತಖಂಡದಲ್ಲಿ ಎಲ್ಲರಿಗೂ ಕೊಂಚಮಟ್ಟಿಗಾದರೂ ಅವಶ್ಯವಾಗಿ ವಿದ್ಯಾಭ್ಯಾಸಮಾಡಿಸಬೇಕೆಂದು, ಬಲಾತ್ಕಾರೋಚಿತ ಪ್ರಾರಂಭ ವಿದ್ಯಾಭ್ಯಾಸದ ಒಂದು ಕಾನೂನನ್ನು ಈ ದೇಶದಲ್ಲಿ ಸ್ಥಾಪಿಸುವಂತೆ ಸೂಚಿಸಿದನು ಗೋಖಲೆಯ ಜೀವಮಾನಕಾಲದಲ್ಲಿ ಇದು ನಡೆವಳಿಕೆಗೆ ಬರಲಿಲ್ಲ ಆದರೂ ಈ ವೇಳೆಯಲ್ಲಲ್ಲದಿದ್ದರೂ, ಮುಂದಾದರೂ, ಈ ವಿದ್ಯಾಭ್ಯಾಸದ ಆವಶ್ಯಕತೆಯು ಜನಗಳಿಗೆ ಗೊತ್ತಾಗಿ, ಎಲ್ಲರೂ ಒಕ್ಕಟ್ಟಾಗಿ ಸೇರಿ ಈ ದೇಶದ ಪ್ರಭುಗಳಿಗೆ, ಬಲಾತ್ಕಾರೋಚಿತ ವಿದ್ಯಾಭ್ಯಾಸದ ಆವಶ್ಯಕತೆಯನ್ನು ವ್ಯಕ್ತಪಡಿಸಿದರೆ, ಅವರು ಎಂದಿಗೂ ಒಪ್ಪದಿರರು ಇದು ತನ್ನ ಜೀವಮಾನಕಾಲದಲ್ಲಿ ನಡೆಯಲಿಲ್ಲವಾದರೂ, ಇದರ ಅವಶ್ಯಕತೆಯನ್ನೂ ಪ್ರಯೋಜನಗಳನ್ನೂ ಭಾರತೀಯರಿಗೆ ವಿಶದಪಡಿಸಿದವನು ಆತನಲ್ಲವೆ !

ಅನ್ಯದೇಶಗಳಲ್ಲಿ ವಾಸಮಾಡುತ್ತಿದ್ದ ಭಾರತೀಯರಿಗೂ ಗೋಖಲೆಯ ಸಹಾಯವು ಆವಶ್ಯಕವಾಯಿತು. ಕೆಲವರು ಭಾರತೀಯರು ಪ್ರಾಣಧಾರಣೆಗೋಸ್ಕರ, ದಕ್ಷಿಣ ಆಫ್ರಿಕಾಕ್ಕೆ ಹೋಗಿ ಅಲ್ಲಿ ಪರಜಾತಿಯವರ ಅಧೀನದಲ್ಲಿ ಕೆಲಸಮಾಡುತ್ತಿದ್ದರು. ಈ ಜನಗಳು ಪಟ್ಟ ಕಷ್ಟವನ್ನು ಯಾರೂ ಅನುಭವಿಸಲಿಲ್ಲ ಅವರ ಕಷ್ಟವು ವರ್ಣಿಸಲಶಕ್ಯವಾದುದು ಇಷ್ಟೇಕೆ ? ಈ ಜನಗಳನ್ನು ಮೃಗಗಳಿಗಿಂತಲೂ ತುಚ್ಛವಾಗಿ ಕಾಣುತ್ತಿದ್ದರು ಈ ವಿಷಯವನ್ನು ಕೇಳಿ ಯಾವ ಭಾರತೀಯನ ಹೃದಯವು ಕರಗದು? ಗೋಖಲೆಯು ತಾನೇ ಹೋಗಿ, ಅಲ್ಲಿಯ ಜನಗಳ ದುರವಸ್ಥೆಯನ್ನು ನೋಡಿ ಕನಿಕರಪಟ್ಟು ಅಲ್ಲಿಯ ಅಧಿಕಾರಿಗಳೊಂದಿಗೆ ತನ್ನ ಜನಾಂಗದವರಿಗಾಗಿ ವಾದಿಸಿ ಅವರಿ

ಗಿದ್ದ ಕಷ್ಟಗಳನ್ನು ನಿವಾರಿಸಲು ಸರಿಯಾದ ಅನುಕೂಲಗಳನ್ನು ಸರ್ಕಾರದವರಿಂದ ಕಲ್ಪಿಸಿಕೊಟ್ಟನು

ಗೋಖಲೆಯು ತನ್ನ ನಲವತ್ತೊಂಭತ್ತನೆಯ ವಯಸ್ಸಿನಲ್ಲಿ ಪರಲೋಕಯಾತ್ರೆ ಮಾಡಿದನು. ತನ್ನ ಪ್ರೀತಿಗೆ ಅವಲಂಬನವಾಗಿದ್ದ ಭಾರತಸೇವಾ ಸಂಘಾಲಯದಲ್ಲಿಯೇ ತನ್ನ ಕೊನೆಗಾಲವನ್ನು ಕಳೆದನು ತಾನು ಸ್ವಾತಂತ್ರ್ಯಕ್ಕಾಗಿಯೂ ದೇಶಾಭಿವೃದ್ಧಿಗಾಗಿಯೂ ಪಟ್ಟ ಶ್ರಮವೆಲ್ಲವೂ ಈ ಕಳೇಬರದೊಂದಿಗೆ ಹೋಗುವುದೋ ಎನ್ನುವ ಚಿಂತೆಮಾತ್ರ ಅವನನ್ನು ಬಿಡಲಿಲ್ಲ ಗೋಖಲೆಯಂತೆ ಚಿಂತಿಸುವವನಿಗೆ ಶಾಂತಿ ಎಲ್ಲಿಯದು ? ಮತ್ತೆ ಹತ್ತು ಹನ್ನೆರಡು ವರ್ಷಗಳು ಗೋಖಲೆಯು ಬದುಕಿದ್ದರೆ ಇನ್ನೇನು ಕಾರ್ಯಗಳನ್ನು ಮಾಡುತ್ತಿದ್ದನೋ ಮತ್ತೆಷ್ಟು ಯಶೋವಂತನಾಗುತ್ತಿದ್ದನೋ, ಭಾರತ ಭೂಮಾತೆಯು ಮತ್ತೆಷ್ಟು ಕೀರ್ತಿಯಿಂದ ಉನ್ನತಳಾಗುತ್ತಿದ್ದಳೋ ಹೇಳಲಶಕ್ಯವು. ಮುಖ್ಯ ನಮ್ಮ ದೌರ್ಭಾಗ್ಯದಶೆಯಿಂದ ಕ್ರೂರವಾದ ಕಾಲಚಕ್ರವು ನಮ್ಮ ಏಕಮಾತ್ರ ಮಿತ್ರನನ್ನು, ದೇಶಭಕ್ತಾಗ್ರಣ್ಯನನ್ನು, ಪರಮ ಪೂಜ್ಯನನ್ನು ಕೊಂಡು ಹೋಯಿತು ಆದರೆ ಅವನ ಯಶಸ್ಸು ಚಿರಸ್ಥಾಯಿಯಾಗಿ ನಿಲ್ಲುವುದು ಅವನು ಜನ್ಮಭೂಮಿಯ ಉದ್ಧಾರಾರ್ಥವಾಗಿ ಮಾಡಿದ ಸಾಹಸಗಳು ಭರತಖಂಡದ ಇತಿಹಾಸದಲ್ಲಿ ಸ್ವರ್ಣಾಕ್ಷರಗಳಿಂದ ಅಂಕಿತವಾಗುವುವು ಕೃತಜ್ಞರಾದ ಭಾರತೀಯರು ಅವನ ಕಾರ್ಯಗಳನ್ನು ಮರೆಯುವುದಿಲ್ಲ, ಎಂದಿಗೂ ಮರೆಯುವಂತೆಯೂ ಇಲ್ಲ.

ಕೊನೆ ಕೊನೆಗೆ ಅವನಿಗೆ ಮೊದಲಿನ ಉತ್ಸಾಹವು ಕಡಿಮೆಯಾಗುತ ಬಂದಿತು ದೇಹಶ್ರಮವು ಹೆಚ್ಚಾಯಿತು. ರಾಯಲ್ ಕಮಾಷನ್ನಿನ ಫಲವನ್ನು ನೋಡುವುದಕ್ಕೆ ಕೂಡ ಪ್ರಾಪ್ತಿಯಿಲ್ಲದೆಹೋಯಿತು ಇವನಲ್ಲಿ ಯಾವ ದೋಷವಿದ್ದರೂ ಮಾನವನ್ನು ಕೊಟ್ಟು ಪ್ರಾಣವನ್ನು ಕೊಂಡ ದೋಷಮಾತ್ರ ಇರಲಿಲ್ಲ. ಅವನ ಸಕಲಕೀರ್ತಿಗೂ ಸಕಲ ಸೌಭಾಗ್ಯಕ್ಕೂ ಅವನ ಸ್ವದೇಶಪ್ರೇಮವೇ ಕಾರಣವಲ್ಲವೇ ? ಆತ್ಮಪ್ರೀತಿಗಿಂತಲೂ ಸ್ವಜನಪ್ರೀತಿ, ಸ್ವಜನಪ್ರೀತಿಗಿಂತಲೂ ಸ್ವದೇಶಪ್ರೀತಿಯು ಶ್ರೇಷ್ಠವೆನ್ನುವ ಪಕ್ಷಕ್ಕೆ ಆ ಮಹಾಮಂತ್ರವೇ ಗೋಪಾಲಕೃಷ್ಣ ಗೋಖಲೆಯ ಜೀವನವಾಗಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ತಾನು ಸಂಕಲ್ಪಿಸಿದ್ದ ಮಹಾಕಾರ್ಯಕ್ಕೆ ಸಾಕಾದಷ್ಟು ಸಹಾಯ ಸೌಕರ್ಯಗಳು ಯಾರಿಂದಲೂ ಉಂಟಾಗಲಿಲ್ಲ ಈ ಸ್ಥಿತಿಯಲ್ಲಿ ಅವನು ಸಾಧಿಸಿದ ಕಾರ್ಯವು ಸಾಮಾನ್ಯವಾದುದೆಂದು ಯಾರೂ ಹೇಳಲಾರರು. ನಿರಾಶನಾಗದವನ ವೀರತನವೂ, ಸ್ವಾರ್ಥವನ್ನು ಕಾಣದವನ ದೇಶಾಭಿಲಾಷೆಯೂ ಎಷ್ಟು ದೃಢವಾದುದೋ, ಎಷ್ಟು ಪವಿತ್ರವಾದುದೋ, ಎಷ್ಟು ವ್ಯಾಪಕವಾದುದೋ ತಿಳಿಯಬಲ್ಲವರು ತಿಳಿಯಲಿ ಅವನ ಘನತೆಗೆ ಕಾರಣವೇನು ? ಸ್ವದೇಶಪ್ರೇಮ, ಸ್ವಧರ್ಮಾನುರಾಗ, ಸ್ವಾರ್ಥಪರಿತ್ಯಾಗ ಈ ಸದ್ಗುಣಗಳ ಪ್ರಭಾವವೇ ಅಲ್ಲವೇ ? ಯಾವನು ಆತ್ಮಸುಖಗಳನ್ನೆಲ್ಲಾ ತ್ಯಜಿಸಿ, ಸ್ವದೇಶದ ಮಂಗಳವನ್ನು ಸಾಧಿಸುವುದಕ್ಕಾಗಿ ಪ್ರಾಣವನ್ನಿಟ್ಟುಕೊಂಡಿದ್ದನೋ, ಯಾವನು ಧೈರ್ಯಗುಂದದೆ ದೃಢಪ್ರಯತ್ನನಾಗಿದ್ದನೋ, ಯಾವ ದೇಶ

ಭಕ್ತನ ದೇಹವು ಮಾತೃಸೇವೆಯಲ್ಲಿಯೇ ಮುಪ್ಪನ್ನೊಂದಿದ್ದಿತೋ, ಯಾವ ದೇಶವತ್ಸಲನು ಭಗ್ನಮನೋರಥನಾದರೂ ತನ್ನ ಸ್ಥಿರಪ್ರಯತ್ನದಿಂದ ದೇಶವನ್ನುದ್ಧಾರ ಮಾಡುವೆನೆಂದು ಸಂಕಲ್ಪಿಸಿದ್ದನೋ ಅವನ ದೇಹವು ಪಂಚಭೂತಗಳಲ್ಲಿ ಐಕ್ಯವಾಯಿತು. ಭರತಖಂಡದ " ದಿನಮಣಿ '' ಯು ಅಸ್ತಮಿಸಿದನು ಆದರೇನು ?

ದಿನಮಣಿಯಸ್ತಮಿಸಿದೊಡಂ |
ಪುನರುದಯುವ ನೊಂದಿ ಲೋಕವಂ ಬೆಳಗುವವೋಲ್||
ಘನನಹ ಗೋಖಲೆಯುಂ ತಾಂ |
ಪುನರುದಯುವನೊಂದಿ ಭಾರದಿರ್ಪನೆ ನವ್ಮೋಳ್ ||

—— 0 ——

ವಿಶ್ವ ವಿದ್ಯಾಸಂಗ್ರಹ ಗ್ರಂಥಮಾಲೆ

(ಸರಳಕವಿಸೂರಿ ಪಂಡಿತ ರಾಜಗೋಪಾಲ ಚಕ್ರವರ್ತಿಗಳಿಂದ)

ಪ್ರಕೃತ ಇಪ್ಪತ್ತನೆಯ ಶತಮಾನದ ಈ ಆದಿಭಾಗದಲ್ಲಿ ಒಂದೊಂದು ಕ್ಷಣದಲ್ಲಿಯೂ ಸಭ್ಯಕುಲಗಳ (Civilized Nations) ಸಮ್ಮಿಳಿತವಾದ ಸದುದ್ಯಮದಿಂದ ವಿವಿಧ ಜ್ಞಾನವ್ಯಾಪ್ತಿಯು ಅತಿ ತ್ವರೆಯಿಂದ ವಿಶ್ವತೋಮುಖವಾಗಿ ಹರಡುತ್ತಿರುವ ಸಂಗತಿಯು ಸರ್ವಜನವಿದಿತವಾಗಿಯೇ ಇರುವುದು ಪಂಡಿತ ಮಾತ್ರಗಮ್ಯವಾಗಿಯೂ ಅನೇಕ ನವನವ ತಥ್ಯಪೂರ್ಣವಾಗಿಯೂ ಇರುವ ಗ್ರಂಥಗಳನ್ನು ಮಾತ್ರವೇ ಅಲ್ಲದೆ ಆಧುನಿಕವೂ ಉತ್ತಮಜ್ಞಾನಪ್ರದವೂ ಸರ್ವಸಾಧಾರಣವೂ ಆದ ಇತರ ಗ್ರಂಥಗಳನ್ನು ಸುಬೋಧವಾಗಿಯೂ ಸರಸವಾಗಿಯೂ ಇರುವ ರೀತಿಯಲ್ಲಿ ಬರೆಯಿಸಿ, ಆಗಾಗ ಸಣ್ಣ ಸಣ್ಣ ಪುಸ್ತಕಗಳಂತೆಯೂ ಕ್ರಮವಾದ ಗ್ರಂಥಾವಲಿಯಂತೆಯೂ ಪ್ರಕಟಿಸಿ ಸರ್ವರಿಗೂ ಸುಲಭವಾಗಿ ಸಿಕ್ಕುವಂತೆ ಮಾಡಿರುವರು ಇದೂ ಅಲ್ಲದ ಸಂಸಾರ ತಾಪತ್ರಯಕ್ಕೊಳಗಾಗಿ ಅವಕಾಶವನ್ನು ಪಡೆಯಲಶಕ್ತರಾದವರಿಗೂ ಶ್ರಮಜೀವಿಗಳಿಗೂ ಅವರವರ ವಿರಾಮಕಾಲಗಳಲ್ಲಿ ವ್ಯಾಸಂಗ ಮಾಡಬಹುದಾದ ಗ್ರಂಥಗಳನ್ನು ಸರಳಭಾಷೆಯಿಂದ ವಿಶ್ವವಿದ್ಯಾಪ್ರಚಾರಕೋಪನ್ಯಾಸಗಳು (University Extension Lectures) ಎಂಬ ಹೆಸರಿನಿಂದ ಹೊಸ ಹೊಸ ವಿಷಯಗಳು ಪ್ರೌಢ ಪಾಠಶಾಲಾ ಬಹಿರ್ಭೂತರಾದವರಿಗೂ ದೊರೆಯುವಂತೆ ಮಾಡಿಟ್ಟಿರುವರು.

ನಮ್ಮ ಭರತಖಂಡದಲ್ಲಿಯಾದರೋ ಈ ವಿಧವಾದ ಏರ್ಪಾಡಾವುದೂ ಆಗಿಲ್ಲ ಆದರೆ ಯೂರೋಪಿನವರ ದೇಶಗಳಿಗಿಂತಲೂ ನಮ್ಮ ಭರತವರ್ಷದಲ್ಲಿ ಅಂತಹ ನವವಿಕಾಸಶಾಲಿಯಾದ ಜ್ಞಾನವೇ ಹೆಚ್ಚಾಗಿ ಬೇಕಾಗಿರುತ್ತದೆ , ಏಕೆಂದರೆ ಅಂತಹ ಜ್ಞಾನಸಾಧನೆಗೆ ಅವಕಾಶವಿಲ್ಲದುದರಿಂದ ಭಾರತವಾಸಿಗಳು ಯೂರೋಪಿನವರಿಗಿಂತ ಎಷ್ಟೋ ಹಿಂದು ಬಿದ್ದಿರುವರು. ಭಾರತೀಯ ದೇಶಭಾಷಾ ಗ್ರಂಥಾವ

ಳಿಯು ಈಗಲೂ ಅನೇಕ ಭಾಗಗಳಲ್ಲಿ ಅರಿಭಾಗದಲ್ಲಿ ಅವನತದಶೆಯಲ್ಲಿದ್ದ ಯೂರೋಪು ಭಾಷೆಗಿಂತಲೂ ನಿಕೃಷ್ಟದಶೆಯಲ್ಲಿಯೇ ಇರುವುದೆಂದು ಲೋಕ ವೃತ್ತಾಂತಾಭಿಜ್ಞರಿಗೆ ತಿಳಿಯಿಸಬೇಕೇ ? ನಮ್ಮ ಭಾರತೀಯ ಸಹೋದರರೆಲ್ಲರೂ ಒಮ್ಮನದಿಂದ ಹೆಚ್ಚಾದ ಸದುದ್ಯಮವನ್ನು ಕೈಗೊಳ್ಳುವುದಾದರೆ ದೀರ್ಘಕಾಲದಿಂದ ಒಂದ ನ್ಯೂನತೆಯನ್ನು ಶೀಘ್ರದಲ್ಲಿಯೇ ದೂರೀಕರಿಸಬಹುದು. ಹಾಗೆ ಮಾಡದೆ ಹೋದರೆ, ಸರ್ವಶ್ಲಾಘ್ಯವಾದ ಈಗಿನ ಸಂದರ್ಭದಲ್ಲಿಯೂ ಕಣ್ಣು ಮುಚ್ಚಿಕೊಂಡು ಕಾರಿರುಳಲ್ಲಿಯೇ ಲೀನರಾಗುವುದಾದರೆ, ಸರ್ವಥಾ ಮೂರ್ಖದಶೆಯು ಸಂಭವಿಸುವುದೆಂದು ಅನುಭವಿಸುತ್ತಿರುವವರಿಗೂ ಮತ್ತೊಮ್ಮೆ ಹೇಳಬೇಕೆ ? ಪ್ರಪಂಚದಲ್ಲಿ ಮನುಷ್ಯರಿಗಿರುವುದೇ ಜ್ಞಾನಶಕ್ತಿ ಆ ಶಕ್ತಿಯು ಅವರವರ ಸರಳವಾದ ಮಾತೃಭಾಷೆಯಲ್ಲಿ ರಚಿತವಾದ ಸದ್ಗ್ರಂಥಗಳ ಮೂಲಕವಾಗಿಯೇ ಬರಬೇಕು ಅಂತಹ ಶಕ್ತಿಯು ನಮ್ಮ ಭಾರತೀಯರಲ್ಲ ತುಂಬಿ ತುಳುಕುತ್ತಿರಬೇಕು. ಆಗ ಜಾತೀಯ ಒಂಧವೂ (Racial inferiority) ಮುಕ್ತಿಯಾಗುವುದು ಈ ಮಾರ್ಗವನ್ನು ಬಿಟ್ಟರೆ ಮತ್ತಾವ ಮಾರ್ಗವೂ ಇರುವುದಿಲ್ಲ

ನಮ್ಮ ಭರತಖಂಡದಲ್ಲಿ ಭಿನ್ನ ಭಿನ್ನ ದೇಶಭಾಷಾ ಸೇವಕರು ಎಷ್ಟೋ ಮಂದಿಯಿದ್ದರೂ, ಇಂತಹ ಕಾರ್ಯದಲ್ಲಿ ಯಾರೂ ಇದುವರೆಗೂ ಮುಂಬರಿದು ಬಂದಿಲ್ಲ. ಆದರೆ ವಂಗ ದೇಶೀಯರು ಮಾತ್ರ ಚಿರಕಾಲದಿಂದಲೂ ತಮ್ಮ ಮಾತೃ ಭಾಷಾ ಸೇವೆಯಲ್ಲಿ ಬದ್ಧಕಂಕಣರಾಗಿ ಸ್ಥಿರಸಂಕಲ್ಪದಿಂದ ಸ್ಥಿರವಾಗಿ ನಿಂತಿರುವರು. ಈಗಲೂ ಆ ಮಹನೀಯರೇ ಮೊತ್ತಮೊದಲು "ವಿಶ್ವವಿದ್ಯಾಸಂಗ್ರಹ" ಎಂಬ ಹೆಸರಿನಿಂದ ಒಂದು ಗ್ರಂಥಾವಳಿಯನ್ನು ಪ್ರಕಾಶಪಡಿಸಲು ಸಂಕಲ್ಪಿಸಿರುವರು. ಇದನ್ನು Home University Library ಮತ್ತು Cambridge Manuals of Science and Literature ಎಂಬುವುಗಳನ್ನು ಆದರ್ಶಪ್ರಾಯವಾಗಿಟ್ಟುಕೊಂಡು ಆರಂಭಿಸಿರುವರು, ಮತ್ತು ತಮ್ಮ ಕೆಲಸವನ್ನು ಸಮರ್ಪಕವಾಗಿ ನಡೆಯಿಸಿಕೊಂಡು ಬರಲು ಈ ಕೆಳಗೆ ವಿವರಿಸುವಂತೆ ನಿಯಮಗಳನ್ನು ಮಾಡಿಕೊಂಡಿರುವರು ಅವು ಯಾವುವೆಂದರೆ.—

(1) "ಪ್ರತಿಗ್ರಂಥವೂ ಪೈಕಾ ಅಕ್ಷರದ ಡಬ್ಬಲ್ ಕ್ರೌನ್ 16 ಪುಟಗಳ ಆಕಾರದ 200 ಅಥವಾ 250 ಪುಟಗಳನ್ನೊಳಕೊಂಡಿರತಕ್ಕುದು

(2) "ಪ್ರತಿಪುಸ್ತಕದ ಕೊನೆಯ ಭಾಗದಲ್ಲಿ ಪ್ರಮಾಣಪಂಚಿಕೆಯನ್ನು (Bibliography) ಕೊಡತಕ್ಕುದು

(3) "ಗ್ರಂಥದ ಪ್ರತಿಯೊಂದು ಸಂಪುಟಕ್ಕೂ ಹನ್ನೆರಡಾಣೆಯ ಬೆಲೆಯು ಇರತಕ್ಕುದು

(4) "ನವನವ ವಿಷಯಗಳು ಪ್ರತಿ ಪುಸ್ತಕದಲ್ಲಿಯೂ ಸೇರಿರಬೇಕು ಗ್ರಂಥಗಳ ಭಾಷೆ ಮತ್ತು ರಚನಾ ಪ್ರಣಾಳಿಗಳು ಸಾಮಾನ್ಯವಾಗಿ ಓದು ಬರೆಹ

ಗಳನ್ನು ಕಲಿತವರಿಗೂ ಸುಬೋಧವಾಗಿರುವಂತೆ ಬರೆಯಿಸಬೇಕು. ದೀರ್ಘ ಸಮಾಸಗಳೂ, ಕಠಿನ ಸಂಸ್ಕೃತ ಶಬ್ದಗಳೂ, ಪ್ರಾದೇಶಿಕ ಪದಗಳೂ ಕೂಡಿದ ಮಟ್ಟಿಗೂ ವರ್ಜಿಸಲ್ಪಡಬೇಕು

(5) "ಪರಿವರ್ತನ ಕಾಲದಲ್ಲಿ ಸಂಭವಾನುಸಾರವಾಗಿ ವಿದೇಶೀಯ ಶಬ್ದಗಳನ್ನು ಸೇರಿಸಲೇಬೇಕು, ಮತ್ತು ವಿದೇಶೀಯ ಪಾರಿಭಾಷಿಕ ಶಬ್ದಗಳನ್ನು ಅದೇ ರೀತಿಯಲ್ಲಿ ಉಪಯೋಗಿಸುವುದೇ ಒಳ್ಳೆಯದು ಅಂತಹ ಶಬ್ದಗಳಿಗೆ ದುರ್ಬೋಧವಾದ ಸಂಸ್ಕೃತ ಪದಗಳನ್ನು ಕಲ್ಪಿಸಿ ಯಾರಿಗೂ ತಿಳಿಯದಂತೆ ಮಾಡುವುದು ಉಚಿತವಲ್ಲ

(6) "ಗ್ರಂಥಗಳ ಸರ್ವಸ್ವಾತಂತ್ರ್ಯವೂ ಗ್ರಂಥಪ್ರಕಾಶಕ ಸಮಿತಿಗೇ ಇರತಕ್ಕುದು. ಕಾಪಿರೈಟನ್ನು (copyright) ಗ್ರಂಥಕಾರರಿಂದ ಉಚಿತವಾದ ಪುರಸ್ಕಾರ ಮೂಲಕವಾಗಿ ತೆಗೆದುಕೊಳ್ಳತಕ್ಕುದು

(7) "ಗ್ರಂಥಾವಲೀ ಸಂಪಾದಕರ ಇಷ್ಟಾನುಗುಣವಾಗಿ ಗ್ರಂಥಲೇಖಕರು ಬರೆಯತಕ್ಕುದು ಬರೆದ ಗ್ರಂಥಗಳ ಶೋಧನ ಪರಿವರ್ತನಾದಿಗಳ ಸ್ವಾತಂತ್ರ್ಯವು ಗ್ರಂಥಾವಲೀ ಸಂಪಾದಕರಿಗೇ ಇರತಕ್ಕದ್ದು.

(8) "ಇಂತಹ ಮಹಾಕಾರ್ಯಕ್ಕೆ ಉಪದೇಶಕರೂ ಮಾರ್ಗದರ್ಶಕರೂ ಕಾರ್ಯನಿರ್ವಾಹಕರೂ ಆದ ಕವಿಸಾರ್ವಭೌಮರೆಂದು ಜಗದ್ವಿಖ್ಯಾತರಾದ ಸರ್. ರವೀಂದ್ರನಾಥ ಟಾಗೂರರವರು ಅಧ್ಯಕ್ಷರಾಗಿರತಕ್ಕುದು"

ಗ್ರಂಥವಿಭಾಗ ಕ್ರಮ.

1	ದರ್ಶನ (Philosophy)	6	ಸಾಹಿತ್ಯ (Literature)
2	ವಿಜ್ಞಾನ (Science)	7	ಸಾಹಿತ್ಯದ ಇತಿಹಾಸ (History of Literature)
3	ಇತಿಹಾಸ (History)	8	ಸಾಹಿತ್ಯದ ಭಾಷೆ
4	ಭೂಗೋಲ (Geography)	9	ಕಲೆ (Art)
5	ಅರ್ಥ ನೀತಿ	10.	ಶಿಕ್ಷಾ ವಿಜ್ಞಾನ.

ಈ ವಿಧವಾಗಿ ಕಾರ್ಯಕ್ರಮವನ್ನು ವಿಭಾಗಿಸಿಕೊಂಡು ಪ್ರತಿಯೊಂದು ಭಾಗಕ್ಕೂ ಒಬ್ಬೊಬ್ಬರು ಸುಪ್ರಸಿದ್ಧರಾದ ಮಹಾಪಂಡಿತರನ್ನೂ ನಿಯಮಿಸಿಕೊಂಡಿರುವರು. ಅವರವರು ಆಯಾಭಾಗಗಳಲ್ಲಿ ಅನುಗುಣವಾದ ಕೆಲ ಕೆಲವು ಗ್ರಂಥಗಳನ್ನು ಬರೆದುಕೊಡಲು ಒಪ್ಪಿರುವರು ಮೇಲೆ ವಿವರಿಸಿರುವ ಭಾಗಗಳಲ್ಲಿ ಸುಮಾರು 52 ಗ್ರಂಥಗಳು ಲಿಖಿತಗಳಾಗಿ ಪ್ರಕಟಿಸಲ್ಪಡಬಹುದೆಂದು ಆಶೆಯಿದೆ ಇಂತಹ ಮಹಾಕಾರ್ಯವನ್ನು ಸರ್ ರವೀಂದ್ರನಾಥ ಟಾಗೂರರವರು ಕೈಗೊಂಡುದು ವಂಗಭಾಷೆಯ ಭಾಗ್ಯೋದಯವೆಂದೇ ಭಾವಿಸಬೇಕಾಗಿದೆ

ಪ್ರಕೃತ ನಮ್ಮ ಮೈಸೂರು ಸಂಸ್ಥಾನಕ್ಕೂ ಯೂನಿವರ್ಸಿಟಿಯು ಲಬ್ಧವಾಗಿರುವುದು ನಮ್ಮ ದೇಶದಲ್ಲಿ ಟಾಗೂರರವರಂತೆ ದೇಶಭಾಷಾಭಿಮಾನಿಗಳಾಗಿರುವವರು

ಇಬ್ಬರು ಮೂವರೂ ಇರುವರಲ್ಲವೇ ? ಅವರಲ್ಲಿ ಯಾರಾದರೂ ಒಬ್ಬರು ಸ್ಥಿರಸಂಕಲ್ಪದಿಂದ ನಿಂತು ಪ್ರಯತ್ನಿಸುವುದಾದರೆ ನಾವೂ ಸ್ವಲ್ಪ ಬೆಳಕನ್ನು ನೋಡುವ ಕುತೂಹಲವನ್ನಾದರೂ ಪಡೆಯಬಹುದು ಅಲ್ಲದೆ, ಪರೋತ್ಕರ್ಷಾಸಹಿಷ್ಣುಗಳೂ ಕುಹಕರೂ ಆದ ಕೆಲವು ಲೇಖಕಂಮನ್ಯರು ತಮ್ಮ ದೌರಾತ್ಮ್ಯವನ್ನು ಪ್ರಕಟಪಡಿಸಿಕೊಂಡು ವಿಘಾತಕರಾಗುವುದಾದರೆ, ಅಷ್ಟುಮಾತ್ರಕ್ಕೇ ಹಿಂದುಳಿಯದೆ ದೇಶಭಾಷಾ ಸೇವೆಗಾಗಿ ಬದ್ಧ ಪರಿಕರರಾಗಿ ನಿಲ್ಲಬೇಕು ಆದರೆ ಕೆಲವರು ಹೇಳುವಂತೆ ಗ್ರಂಥಗಳನ್ನು ಬರೆವುದಕ್ಕೆ ಮೊದಲೇ ಪಾರಿಭಾಷಿಕ ಶಬ್ದಗಳನ್ನು ಸಿದ್ಧಪಡಿಸಿ ಕೊಳ್ಳಬೇಕಾದರೆ, ಅದೆಂದೂ ಆಗದ ಕೆಲಸವಾಗಿಯೇ ನಿಲ್ಲುವುದು ಆದುದರಿಂದ ನಮ್ಮ ನೆರೆ ಹೊರೆಯವರಂತೆಯೇ ನಾವೂ ಈಗಿನ ಕಾಲಕ್ಕನುಗುಣವಾದ ಗ್ರಂಥಗಳನ್ನು ಬರೆಯಲು ಮುಂದರಿದು, ಕರ್ಮ ಕ್ಷೇತ್ರದಲ್ಲಿ ನಿಂತು ಕಾದಾಡುವುದು ಮೇಲೇ ಹೊರತು ಸುಮ್ಮ ಸುಮ್ಮನೆ ಕಾರ್ಯ ವಿಘಾತವನ್ನು ಮಾಡಿ ಕುಚೋದ್ಯವನ್ನು ಮಾಡುವುದು ಯೋಗ್ಯವಲ್ಲ ಈಗಲಾದರೂ ನಾವು ಸೌಹಾರ್ದವನ್ನೂ ಏಕಮತ್ಯವನ್ನೂ ದೃಢವಾಗಿ ಹೊಂದಿ, ಕರ್ಮಕ್ಷೇತ್ರದಲ್ಲಿ ಕೃಷಿಮಾಡದಿದ್ದರೆ ನಮ್ಮ ದುರ್ದಶೆಯು ಎಂದೆಂದಿಗೂ ಒಂದು ತಿಲಾಗ್ರದಷ್ಟೂ ಕಡಿಮೆಯಾಗಲಾರದು , ಆದುದರಿಂದ ಮಾತೃಭಾಷಾ ಸೇವಾನಿರತರೇ,

" ಉತ್ತಿಷ್ಠತ !   ಜಾಗ್ರತ ! !   ಪ್ರಾಪ್ಯವರಾನ್ನಿಬೋಧತ ! ! ! "

ಕರ್ಣಾಟಕ ಸಾಹಿತ್ಯಪರಿಷತ್ತಿನ ವಿಷಯ.

I (a) ಉತ್ತಮ ಪ್ರಬಂಧದ ಬಹುಮಾನದ ವಿಷಯವನ್ನು ಕುರಿತು ಇದೇ ೧೯೧೭ ನೆಯ ಇಸವಿ ಏಪ್ರಿಲ್ ೧೫ ನೆಯ ತಾರೀಖಿನಲ್ಲಿ ಆದ ನಿರ್ಣಯ

೧೯೧೭ ನೆಯ ಇಸವಿ ಫೆಬ್ರವರಿ ೨೫ ರಲ್ಲಿ ಮಾಡಿದ ೨ನೆಯ ನಿಯಮಕ್ಕನುಸಾರವಾಗಿ ೧೦೦ ರೂಪಾಯಿಗಳ ಬಹುಮಾನವನ್ನೂ ಯೋಗ್ಯತಾಪತ್ರಿಕೆಯನ್ನೂ ಅಲಹಾಬಾದಿನಲ್ಲಿ ವಾಸವಾಗಿರುವ ಮತ್ತು ಗಂಗಾಶರಣರೆಂಬ ಕಲ್ಪಿತನಾಮದೊಡನೆ ಉಪನ್ಯಾಸವನ್ನು ಬರೆದಿರುವ ಮ|| ರಾ|| ಎಸ್. ಎನ್. ನರಹರಯ್ಯ ಬಿ ಎ, ಎಲ್ ಎಲ್. ಬಿ. ಯವರಿಗೆ ಕೊಡತಕ್ಕದೆಂದು ಪರೀಕ್ಷಕ ಮಂಡಲಿಯವರ ವರದಿಗನುಸಾರವಾಗಿ ನಿರ್ಣಯಿಸಲ್ಪಟ್ಟಿತು

ಅಧ್ಯಕ್ಷರವರ ಸೂಚನಾನುಸಾರವಾಗಿ ೨೫ ರೂ ಬೆಲೆಯುಳ್ಳ ದ್ವಿತೀಯ ಬಹುಮಾನ ಒಂದನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಸೀರಾ ತಾಲೂಕಿನ ನಗವಾಡಿ ಗ್ರಾಮದಲ್ಲಿ ವಾಸವಾಗಿರುವ ಮತ್ತು ನೃಪತುಂಗನೆಂಬ ಕಲ್ಪಿತನಾಮದೊಡನೆ ಉಪನ್ಯಾಸವನ್ನು ಬರೆದಿರುವ ಮ|| ನಾರಾಯಣ ಶ್ರೀನಿವಾಸ ರಾಜಪುರೋಹಿತರೆಂಬುವರಿಗೆ ಕೊ

ಡತಕ್ಕದೆಂದು ನಿರ್ಣಯವಾಯಿತು. ಮೇಲ್ಕಂಡ ೨೫ ರೂಪಾಯಿಗಳನ್ನು ಅಧ್ಯಕ್ಷರವರೇ ಉದಾರಮತಿಯಿಂದ ಪರಿಷತ್ತಿಗಾಗಿ ಕೊಟ್ಟಿರುವರು

ಪರೀಕ್ಷಕ ಮಂಡಲಿಯವರು ಉಪನ್ಯಾಸಗಳನ್ನು ಪರೀಕ್ಷಿಸಿ ಸಕಾಲಕ್ಕೆ ವರದಿಯನ್ನು ಕಳುಹಿಸಿದುದಕ್ಕಾಗಿ ಪರಿಷತ್ತಿನ ಪರವಾಗಿ ವಂದನೆಗಳನ್ನು ಸಮರ್ಪಿಸತಕ್ಕದೆಂದೂ ನಿರ್ಣಯವಾಯಿತು

(b) ೧೯೧೭ನೆ ಇಸವಿ ಜೂನ್ ತಾರೀಖು ೧೦ ರಲ್ಲಿ ಮೈಸೂರು ಟವರ್ ಹಾಲಿನಲ್ಲಿಕರ್ನಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಸಭೆಯಲ್ಲಿ ಆದ ನಿರ್ಣಯ

ಪಿಂಗಳ ಸಂವತ್ಸರಕ್ಕೆ ಜಂಟಿಗೌರವ ಕಾರ್ಯದರ್ಶಿಗಳನ್ನೂ ಗೌರವ ಕೋಶಾಧ್ಯಕ್ಷರನ್ನೂ ನಿಯಮಿಸುವ ವಿಷಯ

ಕಳೆದ ವರ್ಷದ ಗೌರವ ಕಾರ್ಯದರ್ಶಿಗಳಾದ ಮ|| ರಾ|| ಆರ್ ರಘುನಾಥರಾಯರು, ಬಿ ಎ. ಮತ್ತು ಡಾಕ್ಟರ್ ಪಿ ಎಸ್ ಅಚ್ಯುತರಾಯರು, ಎಲ್, ಎಮ್ ಎಸ್ ಮತ್ತು ಗೌರವ ಕೋಶಾಧ್ಯಕ್ಷರಾದ ಮ| ರಾ|| ಟಿ ಲಕ್ಷ್ಮೀನರಸಿಂಹರಾಯರು ಬಿ ಎ, ಬಿ ಎಲ್ ಅವರು ಕೆಲಸವನ್ನು ತೃಪ್ತಿಕರವಾಗಿ ಮಾಡಿರುವುದರಿಂದ ಈ ವರ್ಷವೂ ಅವರುಗಳೇ ಗೌರವ ಕಾರ್ಯದರ್ಶಿಗಳಾಗಿಯೂ ಗೌರವ ಕೋಶಾಧ್ಯಕ್ಷರಾಗಿಯೂ ಇರತಕ್ಕದೆಂದು ಸಭೆಯ ಅಧ್ಯಕ್ಷರಾದ ಮ|| ರಾ|| ಎಂ ಶಾಮರಾಯರು, ಎಂ. ಎ, ಯವರು ಸಭೆಗ ಶೃತಪಡಿಸಿದರು ಇವರ ಸೂಚನೆಯು ಸಭೆಯಲ್ಲಿದ್ದವರೆಲ್ಲರಿಂದಲೂ ಅಂಗೀಕರಿಸಲ್ಪಟ್ಟಿತು

II ನೂತನ ಸದಸ್ಯರುಗಳ ಪಟ್ಟಿ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ದ್ವಿತೀಯ ವರ್ಷದ ಮೊದಲನೆಯ ಮೂರು ತಿಂಗಳಿನ ಎಂದರೆ ಏಪ್ರಿಲ್ ಪ್ರಾರಂಭದಿಂದ ಜೂನ್ ಅಂತ್ಯದವರೆಗೆ ಸೇರಿರುವ ಸದಸ್ಯರುಗಳ ಪಟ್ಟಿ.

ಆಜೀವ ಸದಸ್ಯರು

	ಹೆಸರು ಮತ್ತು ವಿಳಾಸ	ಸೇರಿದ ತಾರೀಖು
೧	ಮ|| ರಾ|| ಬಿ ನರಹರಿಶಾಸ್ತ್ರಿಗಳು, ಎಜುಕೇಷನಲ್ ಸೂಪರ್‌ವೈಜರು, ತುಮಕೂರು ರೇಂಜು, ತುಮಕೂರು	೧೩—೫—೧೯೧೭

ದ್ವಿತೀಯವರ್ಗದ ಸಾಧಾರಣ ಸದಸ್ಯರು

೧ ಮ|| ರಾ|| ಆರ್. ಎಸ್ ಕುಲಕರ್ಣಿ, ಆಕ್ಟಿಂಗ್ ಪ್ರಿನ್ಸಿಪಾಲ್, ಟ್ರೈನಿಂಗ್ ಕಾಲೇಜ್, ಧಾರವಾಡ

III ಪರಿಷತ್ತಿನ ಚಂದಾಹಣದ ಪಟ್ಟಿ.

೧೯೧೭ ನೆಯ ಇಸವಿ ಏಪ್ರಿಲ್ ೧ ನೆಯ ತಾರೀಖಿನಿಂದ ಜೂನ್ ತಿಂಗಳ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾಹಣದ ಪಟ್ಟಿ.

ತಾರೀಖು		ಕೊಟ್ಟವರ ಹೆಸರು	ಮೊಬಲಗು.
2—4—1917	ಮ|| ರಾ||	ಆರ್ ಎಸ್ ಕುಲಕರ್ಣಿಯವರು	೪—೦—೦
3—4—1917	,,	ಬಿ. ರಾಮಸ್ವಾಮಯ್ಯಂಗಾರ್ಯರವರು	೬—೦—೦
5—4—1917	,,	ಎಸ್ ಆರ್ ಬಾಲಕೃಷ್ಣರಾಯರವರು	೫೦—೦—೦
6—4—1917	,,	ಎಮ್ ಲಕ್ಷ್ಮಣಶಾಸ್ತ್ರಿಗಳವರು	೫೦—೦—೦
7—4—1917	,,	ಪಿ ಜಿ. ಹಳಕಟ್ಟಿಯವರು	೫೦—೦—೦
,,	,,	ಸಿ ರಾಮರಾಯರವರು	೩—೦—೦
,,	,,	ವೀರಪ್ಪ ಬಸಪ್ಪ ಬಿಳೀ ಅಂಗಡಿಯವರು	೪—೦—೦
9—4—1917	,,	ಬಿ ವೆಂಕೋಬರಾಯರವರು	೩೮—೦—೦
,,	,,	ಎಚ್ ವೆಂಕಟರಮಣಯ್ಯ	೫—೦—೦
11—4—1917	,,	ಬಿ ವೆಂಕಟಾಚಾರ್ ಬಿ ಎ	೫—೦—೦
,,	,,	ಜಿ ಕೆ ಮುಸಿಶಾಮಯ್ಯ	೪—೦—೦
,,	,,	ಎನ್ ವೆಂಕಟೇಶಯ್ಯಂಗಾರ್	೨೦—೦—೦
30—4—1917	,,	ಸಿ ಕಪ್ಪಣ್ಣ	೪—೦—೦
4—5—1917	,,	ಬಿ ನರಹರಿಶಾಸ್ತ್ರಿಗಳು	೫—೦—೦
11—5—1917	,,	ಕೆ. ಆರ್ ನರಸಿಂಹಯ್ಯ	೧—೦—೦
13—5—1917	,,	ಸಿ ರಾಮರಾಯರು	೨—೦—೦
,,	,,	ಆರ್ ನರಸಿಂಹಾಚಾರ್ಯರು	೨೫—೦—೦
16—5—1917	,,	ಆರ್ ಎ ಜಹಗೀರುದಾರ್	೩೮ ೦—೦
23—5—1917	,,	ಕೆ ಕೃಷ್ಣರಾಯರು	೪—೦—೦
9—6—1917	,,	ಬಿ ದಾಸಪ್ಪನವರು	೧೨—೦—೦
15—6—1917	,,	ಎಮ್. ಶಾಮರಾಯರು	೧೨—೦—೦
30—6—1917	,,	ಎಚ್ ನಾರಾಯಣರಾಯರು (ಬೊಂಬಾಯಿ)	೩—೦—೦
		ಒಟ್ಟು	೩೪೫—೦—೦
		ಹಿಂದೆ ವಸೂಲಾದ ಮೊತ್ತ	೧೬೪೬—೦—೦
			೧೯೯೧—೦—೦

IV ಪರಿಷತ್ಪತ್ರಿಕೆಯನ್ನು ಕೊಂಡವರಿಂದ ಬಂದ ಮೊಬಲಗು.

22—4—1917	ಮ|| ರಾ||	ಎಮ್ ಶ್ರೀನಿವಾಸನ್ ಬಿ ಎ. ಯವರು	೧—೦—೦
8—6—1917	,,	ಸಿ. ಎಸ್ ಬಾಲಸುಂದರಂ ಅಯ್ಯರವರು ಬಿ. ಎ.	೩—೦—೦

8—8—1917	ಮ|| ರಾ|| ಬಿ. ರಾಮಕೃಷ್ಣರಾಯರು	೩—೦—೦
,,	,, ಪಿ. ರಾಘವೇಂದ್ರರಾಯರು ಬಿ. ಎ	೩—೦—೦

V ಪರಿಷತ್ತಿನ ಪುಸ್ತಕ ಭಂಡಾರ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪುಸ್ತಕ ಭಂಡಾರಕ್ಕೆ ಉಚಿತವಾಗಿ ಕಳುಹಿಸಿರುವ ಗ್ರಂಥಗಳ ಮತ್ತು ದಾತೃಗಳ ಪಟ್ಟಿ

ಗ್ರಂಥಗಳ ಹೆಸರು	ಗ್ರಂಥಕರ್ತರ ಹೆಸರು	ದಾತೃಗಳ ಹೆಸರು
೧ ಸ್ತ್ರೀಸಂಸ್ಕಾರ ಪ್ರಕಾಶಿಕೆ	ಆರ್. ರಘುನಾಥರಾಯರವರು	ಗ್ರಂಥಕರ್ತ
೨ ಪ್ರಕ್ಷಿಪ್ತವಚನ ಬಂದರ ಜಾತಕ	,,	,,
೩ ನಿಯೋಗ ವಿಧಿಯವಿಚಾರ	,,	,,
೪ Aryan Marriage	,,	,,
೫ ಶ್ರೀಚಲ್ವ ನಾರಾಯಣ ಶತಕ	ತಿ. ಅಳಸಿಂಗ್ರಾಚಾರ್ಯರವರು	ಮ||ರಾ|| ಎಮ್ ಎ ಶಿಂಗ್ರಾಚಾರ್ಯ ರವರು
೬ ಸಟೀಕಾ ಕಬ್ಬಿಗರಕೈಪಿಡಿ	,,	
೭ ಕರ್ಣಾಟಕ ಭಾಷಾಕರಂ	ಎ ಜಯರಾಮಾಚಾರ್ಯ	,,
೮ ಸೂರ್ಯೋದಯ ರಾಜ್ಯವು	ಎಸ್ ವರದರಾಜಯ್ಯಂಗಾರ್ಯರು	ಗ್ರಂಥಕರ್ತ
೯ ಆಹಾರಶುದ್ಧಿ	,,	,,
೧೦ ಭಾರತ ಸಾಧ್ವೀಮಣಿಯರ ಇತಿಹಾಸ ಮಂಜರಿ	,,	,,
೧೧ ಮಕ್ಕಳ ತಿದ್ದುವಿಕೆ	ಎ ಎಮ್ ಸುಬ್ಬರಾವ್	,,
೧೨ ಪುಷ್ಪರಚನೆ	,,	,,

VI ವಿಮರ್ಶೆಗಾಗಿ ಕರ್ಣಾಟಕ ಸಾಹಿತ್ಯ ಪರಿಷತ್ ಕಾರ್ಯಾಲಯಕ್ಕೆ ಬಂದಿರುವ ಪುಸ್ತಕಗಳ ಪಟ್ಟಿ.

ಪುಸ್ತಕದ ಹೆಸರು	ಗ್ರಂಥಕರ್ತರ ಹೆಸರು
೧ ಸುಕುಮಾರ	ಆರ್ ಶ್ರೀನಿವಾಸರಾಯರವರು
೨ ವಿವೇಕ ಮಂಜರಿ	,,
೩ ಲಕ್ಷ್ಮೀರಾಣಿ	ಪಂ|| ರಾಜಗೋಪಾಲ ಚಕ್ರವರ್ತಿಗಳವರು
೪ ಕಾಶಿಯಾತ್ರಾಚಂದ್ರಿಕ	ಕೆ ನಂಜುಂಡಶಾಸ್ತ್ರಿ (ಶ್ರೀಕಾಶಿ)

VII ಪರಿಷತ್ಪತ್ರಿಕೆಯ ಚಂದಾದಾರರುಗಳಿಂದ ವಸೂಲಾದ ಮೊಬಲಗು.

ತಾರೀಖು	ಹೆಸರು	ಮೊಬಲಗು
೫-೪-೧೭	ಮ|| ಆರ್ ಎ. ಕೃಷ್ಣಸಾಮಯ್ಯರವರು ಬಿ. ಎ	೩-೦-೦

೧೭-೫-೧೭	ಮೈಸೂರು ವಿದ್ಯಾಭ್ಯಾಸದ ಇಲಾಖಾ 'ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಂದ	೩-೦-೦
,,	ಮ|| ರಾ|| ಎಸ್. ಮುಡಿವಾಳೇಶ್ವರ ಸ್ಕೂಲುಮಾಸ್ತರು	೨-೦-೦
೨೩-೬-೧೭	ಹರಪನಹಳ್ಳಿ ಮ|| ರಾ|| ಇಜಾರಿ ಚೌಡಪ್ಪನವರು	೩-೦-೦
೨೫-೬-೧೭	ಮುದ್ದೆಬಿಹಾಳದ ಸ್ಟೂಡೆಂಟ್ಸ್ ಲೈಬ್ರೆರಿಯಿಂದಕಾಣಿಕೆಯಾಗಿ	೧-೦-೦

ಗ್ರಂಥವಿಮರ್ಶೆ

ಲಕ್ಷ್ಮೀರಾಣಿ.

ಲಕ್ಷ್ಮೀರಾಣಿ ಎಂಬೀ ನಾಟಕವು ಪರಿವರ್ತನೆಯ ಗ್ರಂಥವಾಗಿದೆ ಇದರ ಮೂಲವನ್ನು, ನಮ್ಮ ಮ|| ರಾ|| ಸರ್‌ದಾರ್ ಕಾಂತರಾಜ ಅರಸಿನವರು ತಮ್ಮ ಪೂರ್ವವಚನದಲ್ಲಿ [Foreword) ಹೇಳುವಂತೆ, "ಸಮರ್ಥರಾದ ವಿದ್ವಾಂಸ ರಾಗಿಯೂ, ವಿವಿಧವಿದ್ಯಾ ವಿಶಾರದರಾಗಿಯೂ, ಗ್ರಂಥರಚನಾಸಕ್ತರಾಗಿಯೂ, ಕವಿಗಳಾಗಿಯೂ ಶೋಭಿಸುವ ರಾಜಮಂತ್ರಿ ಪ್ರವೀಣ ದಿವಾನ್ ಬಹದ್ದೂರ್ ಜೆ ಎಸ್ ಚಕ್ರವರ್ತಿ, ಎಂ ಎ, ಎಫ್ ಆರ್ ಎ. ಎಸ್. ಎಂಬುವರು ವಂಗ ಭಾಷೆಯಲ್ಲಿ ಬರೆದರು ಇವರು ಈ ಲಕ್ಷ್ಮೀರಾಣಿ ಎಂಬ ನಾಟಕವನ್ನಲ್ಲದೆ ವಂಗಭಾಷೆಯಲ್ಲಿ "ಮಧ್ಯಲೀಲ," "ಪೇವಾಚಿ," "ಅನುಪಮ" ಮುಂತಾದ ನಾಟಕಗಳನ್ನೂ, "ಲೋಕಾಲೋಕ" ಮುಂತಾದ ಕಾವ್ಯಗಳನ್ನೂ, ಸಂಸ್ಕೃತದಲ್ಲಿ "ಅಹ್ನಿಕಗುಚ್ಛ" ಮುಂತಾದ ಪ್ರಬಂಧಗಳನ್ನೂ ಬರೆದಿರುವುದರಿಂದ ಗ್ರಂಥ ರಚನಾ ಕಾರ್ಯದಲ್ಲಿ ವಿಶೇಷವಾದ ಅನುಭವವನ್ನು ಪಡೆದಿರುತ್ತಾರೆ "ಶಬ್ದಕೌಶಲ್ಯ ದಲ್ಲಿಯೂ, ಭಾವಗಳ ಗಾಂಭೀರ್ಯದಲ್ಲಿಯೂ, ಪದಾಲೋಚನೆಯ ಔನ್ನತ್ಯದಲ್ಲಿ ಯೂ, ಧರ್ಮವಿವೇಚನೆಯಲ್ಲಿಯೂ, ನಾನಾಪಾತ್ರಗಳ ವಿವಿಧ ಗುಣವರ್ಣನಾ ಚಾತುರ್ಯದಲ್ಲಿಯೂ" ಈ ನಾಟಕವು ಶ್ರೇಷ್ಠವಾಗಿರುವುದು "ಈ ನಾಟಕವನ್ನು ಕೈಲಾದಮಟ್ಟಿಗೂ ಮೂಲಗ್ರಂಥದ ರಸಭಾವಾದಿಗಳನ್ನು ಬಿಡದೆ ಕನ್ನಡಕ್ಕೆ ತರಲು ಪ್ರಯತ್ನಿಸಲಾಗಿದೆ ಈ ಗ್ರಂಥದ ಪರಿವರ್ತನೆಯ ಕಾಲದಲ್ಲಿ ಗ್ರಂಥಕಾರರೂ ನನ್ನ ಪ್ರಿಯ ಸಹೋದರರೂ ಆದ ಮ|| ರಾ|| ಚಕ್ರವರ್ತಿಗಳು ಮಾಡಿದ ಸಹಾಯವನ್ನು ಸ್ಮರಿಸಿದರೆ ಪರಿವರ್ತಕರೂ ಕೂಡ ಅವರೇ ಎಂದು ಧಾರಾಳವಾಗಿ ಹೇಳಬಹುದು" ಎಂದು ಪರಿವರ್ತಕರಾದ ಪಂಡಿತ ರಾಜಗೋಪಾಲ ಚಕ್ರವರ್ತಿಗಳು ತಮ್ಮ ಪೀಠಿಕೆ ಯಲ್ಲಿ ತಿಳಿಸುತ್ತಾರೆ. ಕನ್ನಡಕ್ಕೆ ಪರಿವರ್ತಿತವಾಗಿರುವ ಈ ಲಕ್ಷ್ಮೀರಾಣಿ ಎಂಬ ನಾಟಕವನ್ನು ಆಮೂಲಾಗ್ರವಾಗಿ ನಾವು ಓದಿ ಆನಂದವನ್ನು ಹೊಂದಿದೆವು ಸಂವಿಧಾನವು ಶ್ಲಾಘ್ಯತರವಾಗಿರುವುದು. ಕಥಾನಾಯಕನಾದ ಸಮರಜಿತ್ ಸಿಂಹನ

ಧೈರ್ಯಸ್ಥೈರ್ಯಾದಿ ಸದ್ಗುಣಗಳು ಚೆನ್ನಾಗಿ ವರ್ಣಿಸಲ್ಪಟ್ಟಿವೆ. ದ್ರೋಹಿಗಳ ಕೃತ್ರಿಮಗಳಿಂದ ಶಿಷ್ಟರು ಕೆಲವು ಕಾಲದವರೆಗೆ ಕಷ್ಟಪರಂಪರೆಗಳಿಗೆ ಗುರಿಯಾದರೂ ಕೊನೆಗೆ ಶಿಷ್ಟರನ್ನೇ ಭಗವಂತನು ಪರಿಪಾಲಿಸುವನೆಂಬ ಅಂಶವು ಈ ನಾಟಕದಲ್ಲಿ ಬಹಳ ಚೆನ್ನಾಗಿ ವಿಶದಪಟ್ಟಿದೆ ಕಥಾನಾಯಕಿಯಾದ ಲಕ್ಷ್ಮೀರಾಣಿಯಲ್ಲಿ ರಸಿಕರವೂ, ಋಜುಸ್ವಭಾವವೂ, ಪಾತಿವ್ರತ್ಯವೂ ಪ್ರಕಾಶಿಸುತ್ತಿರುವುವು ತನ್ನ ಪತಿಯು ಗರ್ ತನ್ನ ನ್ಯಾಯಮಾರ್ಗದಲ್ಲಿ ಕಂಡುಹಿಡಿದು ಆತನನ್ನು ಆಚ್ಛಾದಿಸಿದ್ದ ದುಷ್ಕೀರ್ತಿಯನ್ನೆಲ್ಲಾ ತಕ್ಕ ಸಾಕ್ಷ್ಯದಿಂದ ತೊಲಗಿಸಿ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸಿ, ಸರ್ವರಿಗೂ ಸಂತೋಷವನ್ನುಂಟುಮಾಡಿ, ಲಕ್ಷ್ಮೀರಾಣಿಯು ತನ್ನ ಪ್ರಿಯಕಾಂತನನ್ನು ಸೇರಿ ಸುಖಿಯಾಗುವಳು

ಮೂಲಗ್ರಂಥವನ್ನು ವಂಗಭಾಷೆಯಲ್ಲಿ ಮ|| ರಾ|| ಚಕ್ರವರ್ತಿಗಳು ಅಮಿತಾಕ್ಷರ ಛಂದಸ್ಸಿನಲ್ಲಿ ಬರೆದಿರುವರು ಸರಳಕವಿಸೂರಿ ಎಂಬ ಬಿರುದನ್ನು ಪಡೆದಿರುವ ಪರಿವರ್ತಕರು ಪದ್ಯಗಳೊಂದನ್ನೂ ಹಾಕದೆ ಕೇವಲ ಗದ್ಯರೂಪದಲ್ಲೇಕೆ ಬರೆದರೋ, ಹೀಗೆ ಬರೆದುದನ್ನು ರಸಿಕರಾದ ಮೂಲಗ್ರಂಥಕರ್ತರು ಹೇಗೆ ಒಪ್ಪಿದರೋ ನಾವು ಹೇಳಲಾರೆವು ಕಾಳಿದಾಸನ ಶಾಕುಂತಲ ನಾಟಕವನ್ನು ಕೇವಲ ಗದ್ಯರೂಪಕ್ಕೆ ಪರಿವರ್ತಿಸಿದರೆ, ಮೊದಲಿನ ಸ್ವಾರಸ್ಯವೂ ರಸಪುಷ್ಟಿಯೂ ಇರುವುವೆ ? "ಕೇವಲ ಗದ್ಯರೂಪದಲ್ಲಿ ಬರೆವುದರಿಂದ ಗ್ರಂಥವು ಸರ್ವರಿಗೂ ಸುಗಮವಾಗುವುದು" ಎಂದು ಪರಿವರ್ತಕರು ಹೇಳುವ ಮಾತನ್ನು ನಾವು ಒಪ್ಪಲಾರೆವು ಸರಿಯಾಗಿ ಬರೆದರೆ ಪದ್ಯಗಳೂ ಸುಗಮವಾಗಿಯೇ ಇರುತ್ತವೆ ಈಗಿರುವ ಗದ್ಯರೂಪದಲ್ಲಿ ಈ ಗ್ರಂಥವು ವ್ಯಾಸಂಗಕ್ಕೆ ಯೋಗ್ಯವಾಗಿರುವುದಾದರೂ, ರಂಗಸ್ಥಳಕ್ಕೆ ಯೋಗ್ಯವಾಗಿರುವಂತೆ ತೋರುವುದಿಲ್ಲ ರಂಗಸ್ಥಳದಲ್ಲಿ ಈ ನಾಟಕವನ್ನಾಡಿ ತೋರಿಸಬೇಕಾದರೆ, ಅಲ್ಲಲ್ಲಿ ಪದ್ಯಗಳನ್ನು ಸೇರಿಸಲೇ ಬೇಕಾಗುವುದು ಹೀಗೆ ಹೇಳಿದ ಮಾತ್ರಕ್ಕೆ ಗ್ರಂಥದಲ್ಲಿ ಪೂರ್ಣವಾದ ಯೋಗ್ಯತೆಯಿಲ್ಲವೆಂದು ಭಾವಿಸಕೂಡದು ಭಾಷೆಯು ಶುದ್ಧವಾಗಿಯೂ ಭಾವಗರ್ಭಿತವಾಗಿಯೂ ಇದೆ ಅಪ್ಪರ್‌ಸೆಕಂಡರಿ ಮುಂತಾದ ಪರೀಕ್ಷೆಗಳಿಗೆ ನಿಯಮಿಸಲು ಅರ್ಹವಾಗಿದೆ

ಗ್ರಂಥವು ಉತ್ತಮವಾದ ಕಾಗದದಲ್ಲಿ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಇದರ ಕ್ರಯ [?]ರೂ ೧ ಪರಿವರ್ತಕರಿಗೆ ಬರೆದು ವಾಚಕರು ಗ್ರಂಥವನ್ನು ಪಡೆಯಬಹುದು

ಮಾಸಪತ್ರಿಕೆಗಳು—ವಿಜ್ಞಾನ.

ಈ "ವಿಜ್ಞಾನ" ಎಂಬ ಮಾಸಪತ್ರಿಕೆಯು ಭೌತಿಕಾದಿ ಶಾಸ್ತ್ರವನ್ನು ಕುರಿತಿರುವುದು. ಕರ್ಣಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯವರು ಈ ಪತ್ರಿಕೆಯನ್ನು ಪ್ರತಿಮಾಸದಲ್ಲಿಯೂ ಹೊರಡಿಸುತ್ತಿದಾರೆ ಈ ಸಮಿತಿಯ ಪ್ರಥಮ ಸಭ್ಯರುಗಳ ಹೆಸರುಗಳನ್ನು ನೋಡಿದರೆ, ಈ ಮಾಸಪತ್ರಿಕೆಯು ಸರಿಯಾಗಿ ನಡೆಯುವುದೆಂಬ ನಂಬುಗೆಯು ಹುಟ್ಟುವುದು. ಇವರೆಲ್ಲರೂ ಶಾಸ್ತ್ರಜ್ಞರಾಗಿಯೂ ಉತ್ಸಾಹಭರಿತರಾಗಿಯೂ ಇದಾರೆ

ನಾವು ಪ್ರಥಮ ದ್ವಿತೀಯ ತೃತೀಯ ಸಂಚಿಕೆಗಳನ್ನು ಓದಿ ಆನಂದ ಭರಿತರಾದೆವು ಈ ಮೂರು ಸಂಚಿಕೆಗಳಲ್ಲಿ ಪರಸೀಯಗಳಾಗಿರುವ ಲೇಖನಗಳು ಹೇರಳವಾಗಿವೆ. ಆರ್ಕಿಮಿಡೀಸ್ (Archimedes) ಎಂಬ ಪೂರ್ವಕಾಲದ ಶಾಸ್ತ್ರಜ್ಞನನ್ನು ಕುರಿತ ಲೇಖನಗಳು ಮೂರು ಸಂಚಿಕೆಗಳಲ್ಲಿಯೂ ಇವೆ ಸಸ್ಯಾಹಾರಗಳನ್ನು ಕುರಿತು ಮ॥ ಕೆ ಭೀಮರಾಯರು ಪ್ರಥಮ ದ್ವಿತೀಯ ಸಂಚಿಕೆಗಳಲ್ಲಿ ಬಹು ವಿಶದತೆಯಿಂದ ಲೇಖನಗಳನ್ನು ಬರೆದಿರುತ್ತಾರೆ ಇವು ವ್ಯವಸಾಯಗಾರರಿಗೆ ಉಪಯುಕ್ತಗಳಾಗಿವೆ. ಸೊಳ್ಳೆಯ ಕಾಟವನ್ನು ಕುರಿತು ಮ॥ ಬಿ ಸುಬ್ಬರಾಯರವರು ಬರೆದಿರುವ ಲೇಖನವು ಜನಸಾಮಾನ್ಯಕ್ಕೆ ಪ್ರಯೋಜನಕಾರಿಯಾಗಿದೆ ವಿಜ್ಞಾನೋದ್ಯಾನವೆಂಬ ಲೇಖನದ ವಾಕ್ಸರಣಿಯು ಸಂಭಾಷಣಾರೂಪದಲ್ಲಿದೆ, ಎಲ್ಲರಿಗೂ ತಿಳಿವಂತೆ ಸುಲಭಶೈಲಿಯಲ್ಲಿ ಬರೆದಿರುತ್ತಾರೆ ದ್ವಿತೀಯ ತೃತೀಯ ಸಂಚಿಕೆಗಳಲ್ಲಿ ಮ॥ ಎಲ್ ಸುಬ್ಬರಾಯರೂ ಮ॥ ಬಿ ವೆಂಕಟನಾರಣಪ್ಪನವರೂ ವಜ್ರವನ್ನು ಕುರಿತು ಬರೆದಿರುವರು. ಮಳೆಯು ಹುಟ್ಟುವ ತೆರವನ್ನು ಕುರಿತು ಮ॥ ಎನ್ ವೆಂಕಟೇಶಯ್ಯಂಗಾರ್ಯರು ಬರೆದಿರುವ ಲೇಖನವು ಆದರಣೀಯವಾಗಿದೆ ಇವರ ಬರವಣಿಗೆಯ ತರವು ಶ್ಲಾಘ್ಯವಾಗಿರುವುದು ಮಾಂಸಾಹಾರಿಗಳಾದ ಸಸ್ಯಗಳು ಎಂಬ ಲೇಖನವು ಅನೇಕ ಹೊಸ ವಿಷಯಗಳನ್ನೊಳಕೊಂಡಿದೆ ದಕ್ಷಿಣ ಇಂಡಿಯಾದೇಶದ ಹಾವುಗಳನ್ನು ಕುರಿತು ಮ॥ ಆರ್. ನಾರಾಯಣರಾಯರವರು ಬರೆದಿರುವ ಸಚಿತ್ರವಾದ ಲೇಖನವು ಸರ್ವರಿಗೂ ಪ್ರಯೋಜನಕಾರಿಯಾಗಿದೆ.

ಸರ್ವರಿಗೂ ಪ್ರಯೋಜನಕಾರಿಯಾಗಿರುವಂತೆ ಈ ವಿಜ್ಞಾನ ಸಮಿತಿಯವರು ಈ ಮಾಸಪತ್ರಿಕೆಯನ್ನು ಹೊರಡಿಸುತ್ತಿರುವುದು ಶ್ಲಾಘನೀಯವಾಗಿರುವುದು ವಿದ್ಯಾರ್ಥಿಗಳಿಗಿದು ವಿಶೇಷ ಪ್ರಯೋಜನಕಾರಿಯಾಗಿರುವುದರಿಂದ ಇದನ್ನು ವಿದ್ಯಾಭ್ಯಾಸದ ಇಲಾಖೆಯ ಸರ್ವಾಧಿಕಾರಿಗಳು ಲೋಯರ್ ಸೆಕಂಡರೀ ಸ್ಕೂಲುಗಳಿಗೆಲ್ಲಾ ಕಳುಹಿಸಿಕೊಟ್ಟು ಸಮಿತಿಯವರಿಗೆ ತಕ್ಕ ಪ್ರೋತ್ಸಾಹವನ್ನುಂಟು ಮಾಡುವರೆಂದು ನಂಬಿದೇವೆ ಇಂತಹ ವಿಜ್ಞಾನ ಮಾಸಪತ್ರಿಕೆಯು ಇದುವರೆಗೂ ಮೈಸೂರು ಸಂಸ್ಥಾನದಲ್ಲಿ ಹೊರಟಿರಲಿಲ್ಲ. ಈಗ ಹೊರಟುದಕ್ಕಾಗಿ ನಾವು ಬಹು ಸಂತೋಷಪಡುತ್ತೇವೆ ಕಾವ್ಯಕಲಾನಿಧಿಗೆ ಸರ್ಕಾರದವರು ಎಷ್ಟು ಸಹಾಯಮಾಡುತ್ತ ಬಂದರೋ, ಅಷ್ಟಕ್ಕಿಂತಲೂ ಹೆಚ್ಚಾದ ಸಹಾಯವನ್ನು ಈ ಪತ್ರಿಕೆಗೆ ಮಾಡುವುದು ಸರ್ಕಾರದವರ ಕರ್ತವ್ಯವಾಗಿರುವುದೆಂದು ನಮಗೆ ತೋರುತ್ತದೆ "ಜನಸಾಮಾನ್ಯದಲ್ಲೆಲ್ಲಾ ಈ ವಿಜ್ಞಾನವನ್ನು ಹರಡಿದ ಹೊರತು ದೇಶವು ಅಭಿವೃದ್ಧಿಸ್ಥಿತಿಗೆ ಬರಲಾರದು" ಎಂಬ ನುಡಿ ಅತಿಶಯೋಕ್ತಿಯಲ್ಲ

——— 0.———

ವಿವಿಧ ವಿಷಯ ವಿಮರ್ಶೆ

ಹೋದ ಜೂನ್ ತಿಂಗಳಲ್ಲಿ ನಡೆದ ಕರ್ಣಾಟಕ ವಿದ್ವನ್ಮಂಡಲಿಯ ತೃತೀಯ ಸಮ್ಮೇಳನದಲ್ಲಿ ಶ್ರೀಮದ್ಯುವರಾಜರವರು ಅಗ್ರಾಸನವನ್ನು ಅಲಂಕರಿಸಿ ಪರಿಷತ್ತಿಗೆ ಪ್ರೋತ್ಸಾಹವನ್ನುಂಟುಮಾಡಿರುವುದಕ್ಕಾಗಿ ಕನ್ನಡಿಗರೆಲ್ಲರೂ ಸಂತೋಷಪಡಬೇಕಾಗಿದೆ ಶ್ರೀಮದ್ಯುವರಾಜರವರ ಭಾಷಣವನ್ನು ಪರಿಷತ್ತಿನ ಸದಸ್ಯರುಗಳೂ ಕರ್ಣಾಟ ಭಾಷಾಭಿಮಾನಿಗಳೂ ಸಾವಧಾನದಿಂದೋದಿ ಅದರ ಮುಖ್ಯಾಂಶಗಳನ್ನು ಮನನಮಾಡಬೇಕೆಂದು ಬೇಡಿಕೊಳ್ಳುತ್ತೇವೆ ''ಸುಲಭವಾದ ಹೊಸಗನ್ನಡದ ಅಭಿವೃದ್ಧಿಗೆ ಕುಂದಕ ಬಾರದಂತೆ ಹಳಗನ್ನಡದ ರೂಪಗಳನ್ನು ಎಷ್ಟು ಮಟ್ಟಿಗೆ ಪುನಃ ಉಪಯೋಗಕ್ಕೆ ತರಬಹುದು'' ಎಂಬ ಅಂಶಕ್ಕೆ ಅಗ್ರಸ್ಥಾನವನ್ನು ಕೊಟ್ಟು, ಈ ವಿಷಯಕ್ಕೆ ''ಪರಿಷತ್ತಿನವರು ಮುಂದೆ ವಿಶೇಷ ಗಮನಕೊಡುವರೆಂದು ನಂಬುತ್ತೇವೆ'' ಎಂದು ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿರುವ ಸಂಗತಿಯನ್ನು ಧಾರವಾಡ ಮುಂತಾದ ಪ್ರಾಂತಗಳ ಕನ್ನಡಿಗರು ಪರ್ಯಾಲೋಚಿಸಬೇಕೆಂದು ಪ್ರಾರ್ಥಿಸುತ್ತೇವೆ ''ನೀವು ಕೈಕೊಂಡಿರುವ ಕಾರ್ಯವು ಶ್ಲಾಘ್ಯವಾದುದು ಅದನ್ನು ನೆರವೇರಿಸುವ ವಿಷಯದಲ್ಲಿ ನಿಮಗೆ ಅನೇಕ ತೊಂದರೆಗಳುಂಟಾಗಬಹುದು ಆದರೂ ನೀವು ಅಧೈರ್ಯಪಡುವುದಕ್ಕೆ ಕಾರಣವಿಲ್ಲ'' ಎಂದು ಶ್ರೀಮದ್ಯುವರಾಜರವರು ಅಭಯಪ್ರದಾನವನ್ನು ಮಾಡಿರುವುದಕ್ಕಾಗಿ ಕನ್ನಡಿಗರೆಲ್ಲರೂ ಸಂತೋಷ ಪಡಬೇಕಾಗಿದೆ

*   *   *   *

ಮ|| ಎನ್ ಎನ್. ನರಹರಯ್ಯನವರು ತಾವು ಗ್ರಾಂಥಿಕರೂಪಗಳ ಏಕೀಕರಣದ ವಿಷಯವನ್ನು ಕುರಿತು ಬರೆದ ಉಪನ್ಯಾಸದಲ್ಲಿ ನೃಪತುಂಗನು ಕವಿರಾಜಮಾರ್ಗವೆಂಬ ಗ್ರಂಥದಲ್ಲಿ ತೋರಿಸಿರುವ ದಕ್ಷಿಣೋತ್ತರ ಮಾರ್ಗಗಳ ವಿಚಾರವಾಗಿಯೇ ಆಗಲಿ, ಕರ್ಣಾಟಕ ಕವಿಚರಿತೆಯಲ್ಲಿ ಕ್ರಿ ಶ ೧೩ನೆಯ ಶತಮಾನದಲ್ಲಿ ಪ್ರಚುರವಾಗಿದ್ದಂತೆ ತೋರಿಸುವ ''ಹೊಸಗನ್ನಡದ'' ರೂಪಗಳ ವಿಷಯವಾಗಿಯೇ ಆಗಲಿ, ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆಯಲ್ಲಿ ಈ ವಿಷಯವನ್ನು ಕುರಿತು ಇತರರು ಬರೆದಿರುವ ಲೇಖನಗಳನ್ನು ಕುರಿತೇ ಆಗಲಿ, ಯಾವ ಮಾತನ್ನೂ ಆಡದಿರುವುದು ವಿಸ್ಮಯವನ್ನುಂಟು ಮಾಡುತ್ತದೆ. ಈ ವಿಷಯಗಳನ್ನೆಲ್ಲಾ ನೋಡಿದ ಮೇಲೆ ಅವರು ತಮ್ಮ ಉಪನ್ಯಾಸವನ್ನು ಬದಲಾಯಿಸುವರೋ ಇಲ್ಲವೋ ಎಂಬ ಅಂಶವು ವಿಚಾರಾರ್ಹವಾಗಿರುವುದು.

ಶ್ರೀಃ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ

ಸಂಪುಟ ೨] ಪಿಂಗಳಸಂ|| ಆಶ್ವಯುಜ-ಅಕ್ಟೋಬರ್ ೧೯೧೭ [ಸಂಚಿಕೆ ೩

ಪರಶುರಾಮರಾಮಾಯಣಂ

ಈ ಗ್ರಂಥವು ಅಷ್ಟಾದಶವರ್ಣನೆಗಳೇ ಮೊದಲಾದ ಕಾವ್ಯಲಕ್ಷಣಗಳಿಂದ ಯುಕ್ತವಾಗಿ, ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿರುವುದರಿಂದ ಪದ್ಯಕಾವ್ಯವಾಗಿದೆ. ಇದನ್ನು ವೇದಾವತೀ ನದೀತೀರದಲ್ಲಿರುವ ಬೊಬ್ಬೂರೆಂಬ ಗ್ರಾಮದ ಸೇನಬೋವ (ಶಾನುಭೋಗ) ನಾರ ರಂಗಪ್ಪನೆಂಬ ಕವಿಯು 18 ನೆಯ ಶತಮಾನದಲ್ಲಿ ರಚಿಸಿದಂತೆ ತಿಳಿಯಬರುತ್ತದೆ. ಈ ಕವಿಯು 'ಅಂಬಿಕಾವಿಜಯ' ವೆಂಬ ಗ್ರಂಥವನ್ನೂ ಭಾಮಿನೀಷಟ್ಪದೀರೂಪದಲ್ಲಿ ಬರೆದಿರುವಂತೆ ಇದರಲ್ಲಿ ಹೇಳಿದ್ದಾನೆ. ಈ ಗ್ರಂಥದ ಶೈಲಿಯು, ಲಕ್ಷ್ಮೀಶನ ಜೈಮಿನಿಭಾರತದಷ್ಟು ಪ್ರೌಢವಲ್ಲದಿದ್ದರೂ, ವರ್ಣನಾ ಭಾಗಗಳೆಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಜೈಮಿನಿ ಭಾರತವನ್ನೇ ಹೋಲುತ್ತಿವೆ. ಅಂತಹ ಹೋಲಿಕೆಗಳನ್ನು ಮುಂದೆ ಕೆಲವು ಪದ್ಯಗಳಿಂದ ತೋರಿಸಿದೆ. ಇದರ ಸರಣಿಯು ರಸವತ್ತಾಗಿಯೂ, ಸುಲಭವಾಗಿಯೂ, ಶ್ರಾವ್ಯವಾಗಿಯೂ ಇರುತ್ತದೆ. ಭಾಷೆಯು ಹೊಸಗನ್ನಡ ಹಳಗನ್ನಡಗಳೆರಡನ್ನೂ, ತಕ್ಕಮಟ್ಟಿಗೆ ಅನುಸರಿಸಿರುವುದರಿಂದ ಮಿಶ್ರಮಾರ್ಗದ ಕನ್ನಡವೆಂದು ಹೇಳಬಹುದಾಗಿದೆ. ಈ ಕಾವ್ಯದಲ್ಲಿ ಉಪಮೆ, ಉತ್ಪ್ರೇಕ್ಷೆ, ಶ್ಲೇಷೆ, ಪರಿಸಂಖ್ಯೆ, ಸ್ವಭಾವೋಕ್ತಿ, ಈ ಅಲಂಕಾರಗಳೇ ಹೆಚ್ಚಾಗಿರುವುವು. ಕುಮಾರವ್ಯಾಸನ ಭಾರತದಲ್ಲಿರುವ ಪ್ರಯೋಗಗಳೂ ಇದರಲ್ಲಿ ಅಲ್ಲಲ್ಲಿ ತೋರಬರುವುವು. ಪರಶುರಾಮನ ಚರಿತ್ರೆಯು ಇದರಲ್ಲಿ ಸಂಪೂರ್ಣವಾಗಿ ವರ್ಣಿತವಾಗಿರುವುದರಿಂದ ಪರಶುರಾಮ ರಾಮಾಯಣವೆಂದು ಇದಕ್ಕೆ ಹೆಸರು ಬಂದಿರುವುದು. ಈ ಗ್ರಂಥದಲ್ಲಿ ೪೩ ಸಂಧಿಗಳೂ, ಒಟ್ಟು ೧೬೭೪ ಪದ್ಯಗಳೂ ಇವೆ. ಗ್ರಂಥದಲ್ಲಿ ಬರವಣಿಗೆಯ ಸ್ಖಾಲಿತ್ಯಗಳು ಹೆಚ್ಚಾಗಿರುವುದರಿಂದ, ಪರಿಷ್ಕರಿಸಿದರೆ ಶುದ್ಧವಾದ ಉತ್ತಮಕಾವ್ಯವಾಗುವುದು.

ಈ ಗ್ರಂಥದ ಕಥಾಸಾರಾಂಶ.

೧ ನೆಯ ಸಂಧಿ-ಪದ್ಯಗಳು (೨೨)

ಪದ್ಯಸಂಖ್ಯೆ	ಕಥಾವಿಷಯ.
೧—೯	ದೇವತಾಸ್ತುತಿ.
೯—೧೨	ಕವಿಗಳ ಪ್ರಶಂಸೆ
೧೩—೧೬	ಕವಿಯು ಸ್ವವಿಷಯವನ್ನು ಹೇಳಿಕೊಂಡಿರುವನು.
೧೭—೨೨	ಕವಿಯು ತನ್ನ ಗ್ರಂಥದ ಪ್ರಶಂಸೆಯನ್ನು ಮಾಡಿ, ತನ್ನ ಸ್ಥಳ, ಗೋತ್ರ, ವಂಶ ಮೊದಲಾದುವನ್ನು ಹೇಳಿದ್ದಾನೆ ಈ ಗ್ರಂಥವನ್ನು ರಂಗನಾಥ ಸ್ವಾಮಿಯ ಅಂಕಿತದಿಂದ ಹೇಳಿರುವನು

೨ ನೆಯ ಸಂಧಿ—ಪದ್ಯಗಳು (೪೩)

೧—೧೫	ವಾಲ್ಮೀಕಿಮುನಿಯು ಕುಶಲವರಿಗೆ ಸಂಕ್ಷೇಪವಾಗಿ ರಾಮಾಯಣದ ಕಥೆಯನ್ನು ಹೇಳುವನು
೧೬—೧೮	ಲವಕುಶರು ಅದನ್ನು ಕೇಳಿ ಭರತನ ವೃತ್ತಾಂತವನ್ನು ಹೇಳಬೇಕೆಂದು ಕೇಳಿಕೊಳ್ಳುವರು
೧೯—೩೯	ವಾಲ್ಮೀಕಿಯು ‘ ರಾಮಪಾದುಕೆಗಳೊಡನೆ ನಂದಿಗ್ರಾಮಕ್ಕೆ ಸೇರುವವರಿಗೆ ’ ಭರತನ ವೃತ್ತಾಂತವನ್ನು ತಿಳಿಸುವನು.
೩೯—೪೩	ಶಿಶಿರಋತುವರ್ಣನೆ ೪೦ ನೆಯ ಪದ್ಯದಲ್ಲಿ ಶೃಂಗಾರರಸವು ವಾಚ್ಯವಾಗಿದೆ

೩ ನೆಯ ಸಂಧಿ—ಪದ್ಯಗಳು (೫೪)

೧—೯	ಭರತನಿಗೂ ನಾರದನಿಗೂ ಸಂವಾದವು ನಡೆದು, ಭರತನು ಕಾರ್ತವೀರ್ಯಾರ್ಜುನನ ಕಥೆಯನ್ನು ಹೇಳಬೇಕೆಂದು ನಾರದನನ್ನು ಕೇಳಿಕೊಳ್ಳಲು ಆತನು ಅದೇ ಪ್ರಕಾರವಾಗಿ ಹೇಳಲಾರಂಭಿಸುವನು.
೯—೨೦	ಕಾರ್ತವೀರ್ಯಾರ್ಜುನನ ಉತ್ಪತ್ತಿಗೆ ಕಾರಣವನ್ನು ಹೇಳತೊಡಗಿ " ಮಹಾವಿಷ್ಣುವಿಗೂ ಲಕ್ಷ್ಮಿಗೂ ನಡೆಯುತ್ತಿದ್ದ ಸಂವಾದದಲ್ಲಿ, ಸುದರ್ಶನ ಚಕ್ರವು ಅಹಂಕಾರದಿಂದಾಡಿದ ಮಾತಿಗೆ ವಿಷ್ಣುವು ಕೋಪಿಸಿಕೊಂಡು, ಭೂಲೋಕದಲ್ಲಿ ಕಾರ್ತವೀರ್ಯನಾಗಿ ಹುಟ್ಟುವಂತೆ ಚಕ್ರಕ್ಕೆ ಶಾಪವನ್ನು ಕೊಟ್ಟನು " ಎಂಬ ವಿಷಯವನ್ನು ಹೇಳಿದೆ.
೨೧—೨೩	ಮಾಹಿಷ್ಮತೀಪುರದಲ್ಲಿ ಕೃತವೀರ್ಯನೆಂಬ ದೊರೆಯು ಹುಟ್ಟಿ,
೨೪—೨೬	ರಾಜ್ಯಾಧಿಪತ್ಯಮಾಡಿದನೆಂಬುದನ್ನೂ, ಅವನ ಪ್ರಜೆಗಳ ವರ್ಣನೆಯನ್ನೂ ಹೇಳಿದೆ.
೨೭—೩೦	ದೊರೆಯು ತನಗೆ ಸಂತಾನವಿಲ್ಲದುದರಿಂದ ವ್ಯಥೆಪಡುತ್ತಿರಲು, ನಾರ

ದನು ಈಶ್ವರಾರಾಧನೆಯಿಂದ ಪುತ್ರೋತ್ಪತ್ತಿಯಾಗುವುದೆಂದು ದೊರೆಯನ್ನು ಸಮಾಧಾನ ಪಡಿಸಿದನು

೩೧—೩೪ ಈಶ್ವರನ ಪೂಜೆಗಾಗಿ ದೊರೆಯು ಹೆಂಡತಿಯೊಡನೆ ಆಲೋಚಿಸಿದುದು. ಅರಸಿಯು ಋತುಸ್ನಾನವಮಾಡಿದುದು.

೩೮—೩೯ ಸ್ತ್ರೀವರ್ಣನೆ

೪೦—೪೨ ಇವರಿಗಾದ ಸ್ವಪ್ನವೃತ್ತಾಂತ

೪೩—೪೬ ಗರ್ಭಿಣೀವರ್ಣನೆ, ಶೃಂಗಾರರಸವು ಪ್ರಕಟವಾಗಿದೆ.

೪೭—೫೪ ಕಾರ್ತವೀರ್ಯಾರ್ಜುನನ ಜನನ ನಾಮಕರಣೋತ್ಸವಾದಿಗಳು

೪ನೆಯ ಸಂಧಿ— ಪದ್ಯಗಳು (೬೫)

೧—೧೨ ಕಾರ್ತವೀರ್ಯನ ಶೈಶವವರ್ಣನೆ, ಅವನ ಉಪನಯನ

೧೩—೨೪ ದತ್ತಾತ್ರೇಯನು ಕಾರ್ತವೀರ್ಯನ ಬಳಿಗೆ ಬರುವ ಮಾರ್ಗದಲ್ಲಿ ಸಿಕ್ಕಿದ ಪ್ರಪಾಶಾಲೆ, ಮತ್ತು ಪಾಮರಿಯರ ವರ್ಣನೆ—ಪುರಪ್ರವೇಶ,

೨೫—೩೨ ವ್ಯಾಪಾರಿಗಳ ವರ್ಣನೆ, ಹೂವಡಿಗಿತ್ತಿಯರ ವರ್ಣನೆ, ೨೬ರಲ್ಲಿ ಸ್ತ್ರೀವರ್ಣನೆ

೩೩—೩೯ ಶೃಂಗಾರರಸವು ಪ್ರಕಟವಾಗಿದೆ

೪೦—೪೩ ದತ್ತಾತ್ರೇಯನು ಅರಮನೆಗೆ ಬರುವುದು

೪೪—೪೫ ಅರಮನೆಯ ವರ್ಣನೆ.

೪೬—೫೨ ದತ್ತಾತ್ರೇಯನು ಕಾರ್ತವೀರ್ಯನನ್ನು ವಿದ್ಯಾಭ್ಯಾಸಕ್ಕಾಗಿ ಕರೆದುಕೊಂಡು ಹೋಗುವನು

೫೩—೫೯ ಕಾರ್ತವೀರ್ಯನು ತಂದೆತಾಯಿಗಳನ್ನು ಬಿಟ್ಟು ಬಂದುದಕ್ಕಾಗಿ ವ್ಯಥೆಪಡುತ್ತಿರಲು, ದತ್ತಾತ್ರೇಯನು ಮಾರ್ಗದಲ್ಲಿರುವ ವನ ಪ್ರದೇಶಗಳ ಸೊಗಸನ್ನು ತೋರಿಸಿ ಬೇಸರವನ್ನು ಪರಿಹರಿಸಿ ಸಮಾಧಾನ ಪಡಿಸುವನು. ಅಷ್ಟರಲ್ಲಿ ಸಾಯಂಕಾಲವಾಗುವುದು ಗಂಗಾನದಿಯ ವರ್ಣನೆ

೬೦—೬೫ ಋಷ್ಯಾಶ್ರಮಗಳನ್ನು ಪ್ರವೇಶಿಸುತ್ತ ಕೊನೆಗೆ ದತ್ತಾತ್ರೇಯನ ಆಶ್ರಮವನ್ನು ಸೇರುವುದು.

೫ನೆಯ ಸಂಧಿ— ಪದ್ಯಗಳು (೩೧)

೧—೪ ಗುರುಶಿಷ್ಯರಿಬ್ಬರೂ ಪ್ರಾತಃಕಾಲದಲ್ಲಿ ಗಂಗಾಸ್ನಾನ ಮಾಡಿಕೊಂಡು ಆಶ್ರಮಕ್ಕೆ ಬರುವರು

೫—೧೦ ಕಾರ್ತವೀರ್ಯನು, ಧನುರ್ವಿದ್ಯೆ, ಮಂತ್ರಾಸ್ತ್ರ, ಬಾಣಪ್ರಯೋಗೋಪಸಂಹಾರಕ್ರಮ, ಮಲ್ಲವಿದ್ಯೆ, ಗರಡಿಯ ಸಾಧನೆ, ಇಂದ್ರಜಾಲ ಮೊದಲಾದವುಗಳನ್ನು ೫ ವರ್ಷಗಳ ಕಾಲದಲ್ಲಿ ಕಲಿತು ಪ್ರವೀಣನಾಗುವನು.

೧೧—೧೩ ಅತ್ರಿಮುನಿಯು ಈ ವೃತ್ತಾಂತವನ್ನು ತಿಳಿದು, ಅಲ್ಲಿಗೆ ಬಂದು ಕಾರ್ತ

ವೀರ್ಯನನ್ನು ನೋಡಿ ಸಂತೋಷಪಟ್ಟು ಹರಸಿ ಹೊರಟುಹೋಗುವನು

೧೪—೩೧ ದತ್ತಾತ್ರೇಯನು ರಾಜಧರ್ಮವನ್ನೂ, ಸ್ತ್ರೀ ಸ್ವಭಾವವನ್ನೂ ವರ್ಣಿಸಿ ಬುದ್ಧಿವಾದವನ್ನು ಹೇಳುವನು ೨೬ ರಲ್ಲಿ ಶೃಂಗಾರವಿದೆ.

೬ ನೆಯ ಸಂಧಿ— ಪದ್ಯಗಳು (೩೫)

೧—೧೦ ಕೃತವೀರ್ಯನ ಹೆಂಡತಿಯಾದ ವರದಿವಾಶ್ವಿನೀದೇವಿಯು ಮಗನ ಅಗಲಿಕೆಯಿಂದ ದುಃಖಿಸುವಳು ರಾಜನ ಅಪ್ಪಣೆಯ ಪ್ರಕಾರ ಮಂತ್ರಿಯು ಸೇನಾಸಮೇತನಾಗಿ ಹೊರಟು, ಕಾರ್ತ್ತವೀರ್ಯನನ್ನು ಕರೆತರುವುದಕ್ಕಾಗಿ ದತ್ತಾತ್ರೇಯನ ಆಶ್ರಮಕ್ಕೆ ಬರುವನು

೧೦—೧೮ ಕಾರ್ತ್ತವೀರ್ಯನು ಮಂತ್ರಿಯೊಡನೆ ಮಾಹಿಷ್ಮತೀಪುರಕ್ಕೆ ತೆರಳುವುದು.

೧೯—೨೯ ಕಾರ್ತ್ತವೀರ್ಯನು ಸಾಯಂಕಾಲದಲ್ಲಿ ಮಾಹಿಷ್ಮತಿಯನ್ನು ಸೇರುವನು. ಚಂದ್ರೋದಯವರ್ಣನ.

೩೦—೩೫ ಕಾರ್ತ್ತವೀರ್ಯನು ರಾಜೋಪಚಾರದೊಡನೆ ಅರಮನೆಯನ್ನು ಸೇರಲು, ಅವನನ್ನು ತಂದೆಯು ಕುಶಲಪ್ರಶ್ನೆಮಾಡಿದುದು

೭ ನೆಯ ಸಂಧಿ— ಪದ್ಯಗಳು (೪೮)

೧— ೫ ಕಾಶೀರಾಜನಾದ ಭದ್ರಾಂಕನ ಮತ್ತು ಅವನ ರಾಜ್ಯದ ವರ್ಣನೆ

೬— ೭ ಭದ್ರಾಂಕನ ಮಗಳಾದ ಕಾಶ್ಮೀರೆಯ ವರ್ಣನೆ ೭ ರಲ್ಲಿ ಶೃಂಗಾರವಿದೆ,

೮—೧೧ ಶರತ್ಕಾಲದ ಮತ್ತು ಚಂದ್ರನ ವರ್ಣನೆಗಳು.

೧೨—೨೦ ಕಾಶ್ಮೀರೆಯವರ್ಣನೆ, ಬಹು ರಸವತ್ತಾಗಿದೆ ಶೃಂಗಾರವು ವಾಚ್ಯವಾಗಿಲ್ಲ.

೨೧—೨೭ ಕಾಶ್ಮೀರೆ ಯೌವನವತಿಯಾಗಿರಲು, ನಾರದನ ಮೂಲಕವಾಗಿ, ಕಾರ್ತ್ತವೀರ್ಯನ ಗುಣ, ರೂಪ, ಶೌರ್ಯಾದಿಗಳನ್ನು ಕೇಳಿ, ಅವನನ್ನು ಮೋಹಿಸಿ ವಿರಹವ್ಯಧೆಯನ್ನು ಹೊಂದುವಳು

೨೭—೩೨ ಸಖಿಯರು ಇವಳ ದುರವಸ್ಥೆಯನ್ನು ನೋಡಿ, ತಕ್ಕ ವರನಾವನೆಂದು ವಿಚಾರಮಾಡುತ್ತಿರಲು, ಆಕೆಯು ಯಾರನ್ನೂ ಒಪ್ಪದೆ ಕಾರ್ತ್ತವೀರ್ಯನನ್ನೇ ತಾನು ವರಿಸಿರುವಂತೆ ಹೇಳುವಳು

೩೩—೩೮ ಸಖಿಯರು ಈ ಸಮಾಚಾರವನ್ನು ರಾಣಿಗೆ ತಿಳಿಸಲು ಆಕೆಯು ದೊರೆಯೊಡನೆ ಹೇಳುವಳು ರಾಜನು ತನ್ನ ತಮ್ಮನಾದ ಭೀಷ್ಮಕನನ್ನು ಸೇನೆಯೊಡನೆ ವರಾನ್ವೇಷಣೆಗಾಗಿ ಮಾಹಿಷ್ಮತೀಪುರಕ್ಕೆ ಕಳುಹಿಸಿಕೊಡಲು, ಅವನು ಕೃತವೀರ್ಯನ ಬಳಿಗೆ ಬರುವುದು

೩೯—೪೮ ಭೀಷ್ಮಕನು ಕೃತವೀರ್ಯನಿಗೆ ತಾನು ಬಂದಿರುವ ಕಾರ್ಯವನ್ನು ತಿಳಿಸಲು ಅವನು ರಾಜಪುತ್ರಿಯಾದ ಕಾಶ್ಮೀರೆಯು ತನ್ನ ಮಗನನ್ನು ವರಿಸಿರುವಳೆಂಬುದನ್ನು ಕೇಳಿ ಸಂತೋಷದೊಡನೆ ಪತ್ನೀಪುತ್ರ ಸಮೇತನಾಗಿ

ಕಾಶೀನಗರಕ್ಕೆ ಪ್ರಯಾಣಮಾಡಿ ಹೊರಟು ಆ ಪುರವನ್ನು ಸೇರುವನು

೮ ನೆಯ ಸಂಧಿ — ಪದ್ಯಗಳು (೩೩)

೧—೧೨ ಕಾಶೀನಗರದಲ್ಲಿ ದತ್ತಾತ್ರೇಯನೇ ಮೊದಲಾದವರೆಲ್ಲರೂ ಸೇರಿ ಘಟಿತಾರ್ಥವನ್ನು ನೋಡಿ, ಕಾರ್ತವೀರ್ಯ, ಕಾಶ್ಮೀರೆಯರ ವಿವಾಹ ಲಗ್ನವನ್ನು ನಿಷ್ಕರ್ಷಿಸುವರು ದೊರೆಯ ಅಪ್ಪಣೆಯಂತೆ ವಿವಾಹ ಮಂಟಪವನ್ನು ನಿರ್ಮಾಣಮಾಡುವರು.

೧೩—೧೬ ಕಾಶ್ಮೀರೆಗೆ ಮಂಗಳಸ್ನಾನ ಮಾಡಿಸಿ, ಅಲಂಕಾರ ಮಾಡುವರು. ೧೬ ರಲ್ಲಿ ಶೃಂಗಾರರಸವು ಪ್ರಕಟವಾಗಿದೆ

೧೭—೩೩ ವಿವಾಹ ಮಹೋತ್ಸವ ವರ್ಣನೆ, ಕಾರ್ತವೀರ್ಯನ ಯೌವರಾಜ್ಯ ಪಟ್ಟಾಭಿಷೇಕ

೯ ನೆಯ ಸಂಧಿ — ಪದ್ಯಗಳು (೨೬)

೧—೧೨ ದತ್ತಾತ್ರೇಯನು ಕೃತವೀರ್ಯನಿಗೆ ವೇದಾಂತವನ್ನು ಬೋಧಿಸಿದುದು ಈ ಭಾಗವು ಬಹು ಚೆನ್ನಾಗಿದೆ ಕ್ಷತ್ರಧರ್ಮ ಪ್ರಕಾರ ನೀನು ಅಶ್ವಮೇಧಯಾಗವನ್ನು ಮಾಡೆಂದು ಹೇಳುವನು

೧೩—೧೯ ಕೃತವೀರ್ಯನು ಕಾರ್ತವೀರ್ಯಾರ್ಜುನನ ಕಾವಲಿನಿಂದ ದಿಗ್ವಿಜಯಕ್ಕಾಗಿ ಕುದುರೆಯನ್ನು ಬಿಡುವನು

೨೦—೨೬ ಕಾವಲಿಗಾಗಿ ಚತುರಂಗಸೇನೆ ಹೊರಡುವುದು ಸೇನೆಯ ರಭಸದಿಂದೆದ್ದ ಧೂಳಿ ಮೊದಲಾದುವುಗಳ ವರ್ಣನೆ

೧೦ ನೆಯ ಸಂಧಿ — ಪದ್ಯಗಳು (೩೦)

೧—೧೬ ಕಾರ್ತವೀರ್ಯನು, ಕುರು, ಕೋಸಲ, ಸಾಕೇತ, ಸಿಂಹಳ, ಮಿಥಿಲೆ, ಕಳಿಂಗ, ಸಿಂಧು, ಗುಜ್ಜರ, ಚೀನಾ, ಮೊದಲಾದ ೫೬ ದೇಶದ ರಾಜರಿಂದಲೂ, ಕಪ್ಪಕಾಣಿಕೆ ತೆಗೆದುಕೊಂಡು, ಎಲ್ಲವನ್ನೂ ಯಜ್ಞಾಶ್ವದೊಡನೆ ಮಂತ್ರಿಯ ವಶಕ್ಕೆ ಕೊಟ್ಟು ತಂದೆಯ ಬಳಿಗೆ ಕಳುಹಿಸಿ ಈಶ್ವರನ ದರ್ಶನಕ್ಕಾಗಿ ಕೈಲಾಸಕ್ಕೆ ಹೋಗಿ ಬರುವೆನೆಂದು ಹೊರಡುವನು

೧೭—೨೨ ಸತ್ಕೀರ್ತಿ ಎಂಬ ಸಾರಥಿಯೊಡನೆ ರಥದಲ್ಲಿ ಕುಳಿತು ಕೈಲಾಸಕ್ಕೆ ಬರಲು, ಅಲ್ಲಿರುವ ಶಿವಗಣಗಳು ತಡೆವರು ಕಾರ್ತವೀರ್ಯನು ಅಲ್ಲಿಯೇ ಕುಳಿತು ಭಕ್ತಿಯಿಂದ ಈಶ್ವರನನ್ನು ಪೂಜಿಸಲು, ಆ ಹೂಗಳು ಈಶ್ವರನ ಮೈಮೇಲೆ ಕಾಣಬರುವುವು, ಪಾರ್ವತಿಯು ನಿನ್ನನ್ನು ಪೂಜಿಸುತ್ತಿರುವರು ಯಾರು ? ಎಂದು ಕೇಳುವಳು.

೨೩—೩೦ ಶಿವನು, ಸುದರ್ಶನ ಚಕ್ರಕ್ಕೆ ಶಾಪ ಬಂದುದು ಮೊದಲ್ಗೊಂಡು

ಕಾರ್ತ್ತವೀರ್ಯನ ವೃತ್ತಾಂತವೆಲ್ಲವನ್ನೂ ತಿಳಿಸಿ, ಅವನನ್ನು ಕರೆತರುವಂತೆ ವೃಷಭನನ್ನು ಕಳುಹಿಸುವನು.

೧೧ ನೆಯ ಸಂಧಿ—ಪದ್ಯಗಳು (೩೦)

೧— ೯ ವೃಷಭನು ಒಂದು ಕಾರ್ತ್ತವೀರ್ಯನನ್ನು ಈಶ್ವರನ ಬಳಿಗೆ ಕರೆದುಕೊಂಡು ಹೋಗಲು, ಅಲ್ಲಿ ಈಶ್ವರನಿಂದ ಉತ್ತಮಗಳಾದ ವರಗಳನ್ನು ಪಡೆದು ಕಾರ್ತ್ತವೀರ್ಯನು ಮಾಹಿಷ್ಮತಿಗೆ ಬರುವನು

೧೦—೧೯ ಕೃತವೀರ್ಯನು ಸಾಂಗವಾಗಿ ಯಾಗವನ್ನು ಪೂರಯಿಸಿ, ದೇವ ಬ್ರಾಹ್ಮಣರನ್ನು ತೃಪ್ತಿಗೊಳಿಸಿ ವೈರಾಗ್ಯವನ್ನು ಕೈಕೊಂಡು ಋಷಿವೃತ್ತಿಯನ್ನು ಹೊಂದುವನು

೨೦—೩೧ ಕಾರ್ತ್ತವೀರ್ಯನು ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ವಹಿಸುವನು.

೧೨ ನೆಯ ಸಂಧಿ—ಪದ್ಯಗಳು (೩೬)

೧— ೬ ಕಾರ್ತ್ತವೀರ್ಯನ ಪ್ರಭುತ್ವವರ್ಣನೆ

೬—೧೦ ಅನೇಕ ಮಂದಿ ರಾಜರು ಕಾಣಿಕೆಯಾಗಿ ತಂದೊಪ್ಪಿಸಿದ ೫೦೦ ಮಂದಿ ಕನ್ಯೆಯರನ್ನು ಕಾರ್ತ್ತವೀರ್ಯನು ಪರಿಣಯ ಮಾಡಿಕೊಳ್ಳುವನು

೧೧—೧೨ ಕಾರ್ತ್ತವೀರ್ಯನಿಗೆ ಬಹು ಜನ ಪುತ್ರರು ಹುಟ್ಟುವರು

೧೩—೧೮ ವಸಂತಋತು ವರ್ಣನೆ

೧೯—೩೬ ಕಾರ್ತ್ತವೀರ್ಯನು ಪತ್ನಿಯರೊಡನೆ ಸೇನಾಸಮೇತನಾಗಿ ಹೊರಟು ನರ್ಮದಾ ನದಿಗೆ ಜಲಕ್ರೀಡೆಗಾಗಿ ಬರುವನು ಜಲಕ್ರೀಡಾ ವರ್ಣನೆ. ೩೩ ರಲ್ಲಿ ಶೃಂಗಾರರವು ವರ್ಣಿತವಾಗಿದೆ.

೧೩ ನೆಯ ಸಂಧಿ—ಪದ್ಯಗಳು (೪೩)

೧—೧೫ ಜಲಕ್ರೀಡಾ ವರ್ಣನೆ

೧೬—೨೧ ರಾವಣನು ಶುಕಸಾರಣರೆಂಬ ರಾಕ್ಷಸರೊಡನೆ ಒಂದು ನರ್ಮದಾನದಿಯೊಳಗೆ ಕುಳಿತು ಶಿವಲಿಂಗವನ್ನು ಪೂಜಿಸುವನು.

೨೨—೨೫ ಕಾರ್ತ್ತವೀರ್ಯನು ತನ್ನ ಸಹಸ್ರ ಬಾಹುಗಳಿಂದ ಪ್ರವಾಹವನ್ನು ತಡೆದಿದ್ದು, ಕೈಗಳನ್ನು ಅಲ್ಲಾಡಿಸಲು ನದಿಯಲ್ಲಿ ಪ್ರವಾಹವು ಹೊರಟು ರಾವಣನು ಪೂಜಿಸುತ್ತಿದ್ದ ಲಿಂಗವನ್ನೂ ಪೂಜಾ ಸಾಮಾಗ್ರಿಗಳನ್ನೂ ಕೊಚ್ಚಿಕೊಂಡು ಹೋಯಿತು ರಾವಣನು ಆ ಅಕಾಲಪ್ರವಾಹಕ್ಕೆ ಆಶ್ಚರ್ಯಪಟ್ಟು, ಎಲ್ಲಿಯೋ ಮಳೆಯಾಗಿರಬಹುದೆಂದು ನೆನೆದು, ಇಂದ್ರನ ಮೇಲೆ ಕೋಪಿಸುತ್ತಿರಲು, ಕಾರ್ತ್ತವೀರ್ಯನು ಪುನಃ ನೀರನ್ನು ಕಟ್ಟಲು ನದಿಯ ಪಾತ್ರವು ಬರಿದಾಯ್ತು. ರಾವಣನು ಸಂತೋಷಪಟ್ಟು ಇನ್ನೊಂದು ಸಾರಿ ಅರ್ಚನೆಗೆ ಕುಳಿತುಕೊಳ್ಳುವನು.

೨೬—೩೩ ಅಷ್ಟರಲ್ಲಿಯೇ ಜಲಕ್ರೀಡೆಯು ಮುಗಿಯಲು ಕಾರ್ತ್ತವೀರ್ಯನು ನದಿಯ ಪ್ರವಾಹಕ್ಕೆ ತಡೆಯಾಗಿದ್ದ ತನ್ನ ಬಾಹುಗಳನ್ನು ತೆಗೆದುಬಿಡುವನು. ಪ್ರವಾಹವು ನುಗ್ಗಿ ರಾವಣನ ಅರ್ಚನೆಯನ್ನು ನಾಶಮಾಡುವುದು. ರಾವಣನು ಕೋಪದಿಂದುರಿದೆದ್ದು, ಶುಕಸಾರಣರನ್ನು ಕರೆದು, ಯಾವ ನೀಚನೋ ಮೇಲೆ ಪ್ರವಾಹವನ್ನು ತಡೆತಡೆದು ಬಿಡುತ್ತಿರುವನು, ಅವನನ್ನು ಧ್ವಂಸಮಾಡುವೆನು. ನೀವು ಹೋಗಿ ತಿಳಿದು ಬನ್ನಿ, ಎಂದು ಕಳುಹಿಸಲು, ಅವರು ಬಂದು ನೋಡಿ ನಡೆದ ಸಮಾಚಾರವನ್ನು ಹೇಳುವರು

೩೪—೩೭ ರಾವಣನು ಆರ್ಭಟಿಸುತ್ತ ಕಾರ್ತ್ತವೀರ್ಯನ ಬಳಿಗೆ ಬರುವನು.

೩೮—೪೩ ಕಾರ್ತ್ತವೀರ್ಯನಮೇಲೆ ಬಾಣಗಳನ್ನು ಪ್ರಯೋಗಿಸಲು, ಅವನು ರಾವಣನನ್ನು ಹಿಡಿದು ನೆಲಕ್ಕೆ ತುಳಿದು ಕಂಕುಳಲ್ಲಿ ಇರುಕಿಕೊಂಡು ಸೇನೆಯೊಡನೆ ಹೊರಟು ಮಾಹಿಷ್ಮತೀಪುರವನ್ನು ಹೊಕ್ಕು, ರಾವಣನಿಗೆ ನಿಗಳ ಬಂಧನವಮಾಡಿ ಕಾರಾಗೃಹದಲ್ಲಿಡುವನು

೧೪ ನೆಯ ಸಂಧಿ—ಪದ್ಯಗಳು (೩೪)

೧—೧೨ ರಾವಣನು ತನಗೊದಗಿದ ವಿಪತ್ತನ್ನು ನೆನೆದು ದುಃಖಿಸುತ್ತಾ, ತಪ್ಪಿಸಿಕೊಳ್ಳುವ ಉಪಾಯವನ್ನರಿಯದೆ, ವೇದಗಳಿಗೆ ಪದ, ಕ್ರಮಜಟೆಗಳನ್ನು ಬಿಡಿಸಿ ಪಠನೆಮಾಡುತ್ತಾ ಬ್ರಹ್ಮನಿಗೆ ಮೊರೆಯಿಡುತ್ತಿರಲು, ಬ್ರಹ್ಮನು ಈ ವೃತ್ತಾಂತವನ್ನು ತಿಳಿದು, ಹಂಸಾರೂಢನಾಗಿ ಭೂಲೋಕಕ್ಕಿಳಿದು ಕಾರ್ತ್ತವೀರ್ಯನ ಸಭೆಗೆ ಬರುವನು

೧೩—೩೪ ಕಾರ್ತ್ತವೀರ್ಯನು ಬ್ರಹ್ಮನನ್ನು ಪೂಜಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಸತ್ಕಾರ ಮಾಡುತ್ತಿರಲು, ಆ ಕಾಲಕ್ಕೆ ಅಲ್ಲಿಗೆ ದತ್ತಾತ್ರೇಯನೂ ಬರುವನು ಬ್ರಹ್ಮನು ಕಾರ್ತ್ತವೀರ್ಯನನ್ನು ಕುರಿತು, ಹಿಂದೆ ೨-೩ ಆವೃತ್ತಿ ರಾವಣನು ಹೀಗೆ ಕಷ್ಟಕ್ಕೆ ಸಿಕ್ಕಿದುದನ್ನೂ, ಅವನ ದಿಗ್ವಿಜಯ ವೃತಾಂತವನ್ನೂ ತಿಳಿಸಿ, ಅವನನ್ನು ಸೆರೆಯಿಂದ ತಪ್ಪಿಸೆಂದು ಕೇಳಿಕೊಳ್ಳಲು, ಅವರ ಮಾತನ್ನು ಮೀರಲಾರದೆ ರಾವಣನನ್ನು ಸೆರೆಯಿಂದ ಬಿಡುಗಡೆ ಮಾಡುವನು ರಾವಣನು ಗರ್ವಭಂಗವನ್ನು ಹೊಂದಿ ನಾಚಿಕೆಯಿಂದ ಹೊರಟು ಹೋಗುವನು. ಬ್ರಹ್ಮನೂ ಸತ್ಯಲೋಕಕ್ಕೆ ಪ್ರಯಾಣಮಾಡುವನು. ಕಾರ್ತ್ತವೀರ್ಯನೂ ಓಲಗದಿಂದೆದ್ದು ಅರಮನೆಯನ್ನು ಸೇರುವನು.

೧೫ ನೆಯ ಸಂಧಿ—ಪದ್ಯಗಳು (೫೩)

೧—೬ ಕಾರ್ತ್ತವೀರ್ಯನ ರಾಜ್ಯವರ್ಣನೆ.

೬—೮ ಕಾರ್ತ್ತವೀರ್ಯನು ಸುಖವಾಗಿ ರಾಜ್ಯವಾಳುತ್ತಿರಲು, 'ಈ ಕಡೆ ವಿಷ್ಣುವಿನ ಅಂಶದಿಂದ ಜಮದಗ್ನಿ ಋಷಿಗೆ ಪರಶುರಾಮನೆಂಬ ಮಗನು ಹುಟ್ಟುವನು.' ಎಂದು ಹೇಳುವನಾರದನ ಮಾತನ್ನು ಕೇಳಿ ಭರತನು ಪರಶುರಾಮಾವತಾರದ ಕಥೆಯನ್ನು ವಿಸ್ತಾರವಾಗಿ ಹೇಳಬೇಕೆಂದು ಕೇಳುವನು

೮—೨೬ ಜಮದಗ್ನಿಯ ವಿವಾಹ ಆತನ ಹೆಂಡತಿಯಾದ ರೇಣುಕೆಯು ಗರ್ಭವತಿಯಾಗುವಳು

೨೬—೩೧ ಹಿಮಂತಋತುವರ್ಣನೆ ೨೬ ರಲ್ಲಿ ಶೃಂಗಾರವು ವಾಚ್ಯವಾಗಿದೆ

೩೧—೩೬ ಪರಶುರಾಮನ ಉತ್ಪತ್ತಿ

೩೮—೫೨ ಪರಶುರಾಮನ ಜಾತಕರ್ಮನಾಮಕರಣಾದ್ಯುತ್ಸವಗಳು, ಮತ್ತು ಅವನ ಶೈಶವವರ್ಣನೆ, ೫೨ ರಲ್ಲಿ ಶೃಂಗಾರವಿದೆ

೧೬ ನೆಯ ಸಂಧಿ–ಪದ್ಯಗಳು (೨೬)

೧—೧೫ ಪರಶುರಾಮನ ಬಾಲಲೀಲೆಯ ವರ್ಣನೆ, ತಂದೆ ತಾಯಿಗಳು ಮಗನನ್ನು ನೋಡಿ ಸಂತೋಷಪಡುವರು, ಅವನಿಗೆ ೫ ನೆಯ ವರ್ಷವು ಪ್ರಾಪ್ತವಾಗಲು ಜಮದಗ್ನಿಯು ಉಪನಯನ ಲಗ್ನವನ್ನು ನಿಶ್ಚಯಿಸುವನು.

೧೫—೨೬ ಉಪನಯನ ಮಹೋತ್ಸವವರ್ಣನೆ

೧೭ ನೆಯ ಸಂಧಿ–ಪದ್ಯಗಳು (೨೭)

೧—೨೦ ಒಂದಾನೊಂದು ದಿನದಲ್ಲಿ ಜಮದಗ್ನಿಯು ರೇಣುಕೆಯನ್ನು ನೀರು ತರುವುದಕ್ಕಾಗಿ ನದಿಗೆ ಕಳುಹಿಸಿಕೊಡಲು, ಆಕೆಯು ನೀರಿಗೆ ಹೋಗಿ ಆ ನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದ ಚಿತ್ರರಥನೆಂಬ ಗಂಧರ್ವನನ್ನು ನೋಡುತ್ತಾ ನಿಂತುಕೊಂಡುದರಿಂದ ಕಾಲವು ಕಳೆದುಹೋಗಿ ಬರುವುದು ತಾವಕಾಶವಾಗುವುದು ಜಮದಗ್ನಿಯು ಕುಪಿತನಾಗಿ ಆವಳನ್ನು ತ್ಯಾಗಮಾಡಲು, ಆಕೆಯು ತನಗಾದ ಅವಮಾನವನ್ನು ಸಹಿಸಲಾರದೆ, ಪರಶುರಾಮನ ಬಳಿಗೆ ಒಂದು ತನ್ನನ್ನು ಕೊಲ್ಲಬೇಕೆಂದು ಕೇಳಿಕೊಳ್ಳುವಳು.

೨೦—೨೭ ಆ ಮಾತನ್ನು ಕೇಳಿ ಪರಶುರಾಮನು 'ಹಿಂದೆ ನಾರದಮುನಿಯು ವಜ್ರದ ಕಡಲೆಗಳನ್ನು ತಂದು ಪಕ್ವಮಾಡಿ ಕೊಡಿರೆಂದು ತ್ರಿಮೂರ್ತಿಗಳ ಪತ್ನಿಯರ ಕೈಯಲ್ಲಿ ಕೊಡಲು, ಅದು ಅವರಿಂದಾಗದೆ ಹೋಯಿತು. ಅನಸೂಯೆಯು ಅದನ್ನು ಪಕ್ವಮಾಡಿಕೊಟ್ಟಳು. ಪತಿವ್ರತೆಯರಿಗಲ್ಲದೆ ಮತ್ತಾವ ಹೆಂಗಸರಿಗೂ ಇದನ್ನು ಬೇಯಿಸುವ ಶಕ್ತಿಯಿಲ್ಲವೆಂದು ನುಡಿಯಲು, ತ್ರಿಮೂರ್ತಿಗಳೂ ತಮ್ಮ ಪತ್ನಿಯರನ್ನು ತ್ಯಾಗಮಾಡಿದರು.

ಆಗ ನಾರದನು, ತಕ್ಕಮಾತುಗಳಿಂದ ಅವರೆಲ್ಲರನ್ನೂ ಸಮಾಧಾನ ಪಡಿಸಿ ಹೊರಟುಹೋದನು ' ಎಂಬ ಕಥೆಯನ್ನು ಹೇಳಿ ರೇಣುಕೆಯನ್ನು ಸಮಾಧಾನಗೊಳಿಸುವನು.

೧೪ ನೆಯ ಸಂಧಿ—ಪದ್ಯಗಳು (೨೫)

೧—೯ ರೇಣುಕೆಯು ಸಮೀಪದಲ್ಲಿಲ್ಲದುದನ್ನು ಕಂಡು ಜಮದಗ್ನಿಯು ತನ್ನ ಮಕ್ಕಳನ್ನು ಕೇಳಲು, ಅವರು ಆಕೆಯು ತನ್ನ ತೌರುಮನೆಯಲ್ಲಿರುವ ಳೆಂದು ಹೇಳುವರು ಅವರನ್ನು ಕಳುಹಿಸಿ ಆಕೆಯನ್ನು ಬರಮಾಡಿ ಈಕೆಯಿಂದ ನನಗೆ ಅವಮಾನವಾದುದರಿಂದ ಇವಳ ಶಿರಶ್ಛೇದನವನ್ನು ಮಾಡಿರೆಂದು ತನ್ನಿಬ್ಬರು ಮಕ್ಕಳಿಗೆ ಹೇಳಲು ಅವರಿಬ್ಬರೂ ಒಪ್ಪುವುದಿಲ್ಲ ಪರಶುರಾಮನನ್ನು ಕರೆದು ನಿನ್ನ ತಮ್ಮಂದಿರನ್ನೂ, ತಾಯನ್ನೂ ಕಡಿದು ಹಾಕೆಂದು ಅಪ್ಪಣೆಮಾಡುವನು ಪರಶುರಾಮನು ಒಪ್ಪಿ ಅವರೆಲ್ಲರನ್ನೂ ಕಾಡಿಗೆ ಕರೆದುಕೊಂಡು ಹೋಗುವನು

೯—೧೨ ಈ ಆಶ್ಚರ್ಯವನ್ನು ನೋಡಲು ದೇವತೆಗಳೆಲ್ಲರೂ ಆಕಾಶದಲ್ಲಿ ಒಂದು ಸೇರುವರು ಪರಶುರಾಮನು ಆ ಮೂವರನ್ನೂ ಕಡಿವನು

೧೩—೧೭ ರೇಣುಕೆಯ ತಲೆಯು ಆಕಾಶಕ್ಕೆ ಹಾರಿ ಅರ್ಭಟಿಸುತ್ತಾ ಪರ್ವತಾಗ್ರಕ್ಕೂ ಭೂಮಿಗೂ ನೆಗೆದು ಕೊನೆಗೆ ಮತಂಗಮುನಿಯ ಆಶ್ರಮಕ್ಕೆ ಬಂದು ಆತನ ಕಮಂಡಲುವಿನ ಮೇಲೆ ಕುಳಿತುಕೊಳ್ಳಲು, ಆತನು ಅದನ್ನು ಭಕ್ತಿಪೂರ್ವಕವಾಗಿ ಶಕ್ತಿಯೆಂದು ಆರಾಧಿಸಿ ಬೇಕಾದ ಇಷ್ಟಾರ್ಥಗಳನ್ನು ಪಡೆವನು ಆ ರುಂಡವು ಅಲ್ಲಿಯೇ ನೆಲಸುವುದು

೧೭—೨೫ ಪರಶುರಾಮನು ತಂದೆಯಬಳಿಗೆ ಬಂದು ಆತನಾಜ್ಞೆಯಂತೆ ನಡೆಯಿಸಿದುದನ್ನು ತಿಳಿಸಲು ಜಮದಗ್ನಿಯು ಅವನ ಭಕ್ತಿಗೂ, ಧೈರ್ಯಕ್ಕೂ ಮೆಚ್ಚಿ 'ನಿನಗೇನುಬೇಕು ! ಕೇಳಿಕೋ ! ಸಲ್ಲಿಸುವೆನು, ' ಎನ್ನುವನು. ಪರಶುರಾಮನು ತಾನು ಸಂಹಾರಮಾಡಿರುವವರೆಲ್ಲರೂ ಪುನಃ ಬದುಕಬೇಕೆಂಬ ವರವನ್ನು ಕೇಳುವನು ಜಮದಗ್ನಿಯು ಅವರನ್ನು ಬದುಕಿಸುವುದಕ್ಕೆ ತಕ್ಕ ಮಂತ್ರವನ್ನುಪದೇಶಮಾಡಿ ಅನುಗ್ರಹಿಸುವನು ಪರಶುರಾಮನು ಬಂದು ಸತ್ತಿರುವ ತಮ್ಮಂದಿರ ರುಂಡಮುಂಡಗಳನ್ನು ಕೂಡಿಸಿ ಮಂತ್ರವನ್ನುಚ್ಚರಿಸಲು ಅವರಿಬ್ಬರೂ ಸಚೇತನರಾಗುವರು. ರೇಣುಕೆಯ ಶಿರವನ್ನು ಹುಡುಕಲು, ಅದು ಸಿಕ್ಕದೆ ಹೋದುದರಿಂದ, ತನ್ನ ಕೈಯಲ್ಲಿದ್ದ ದರ್ಭೆಯನ್ನು ಶಿರಸ್ಸಾಗಲೆಂದು ಅಭಿಮಂತ್ರಿಸಿ ಬಿಡಲು ಅದೇ ತಲೆಯಾಗುವುದು. ಆಕೆಯನ್ನೂ ಬದುಕಿಸಿ, ಎಲ್ಲರನ್ನೂ ಕರೆದುಕೊಂಡು ತಂದೆಯಬಳಿಗೆ ಬರುವನು.

೧೯ ನೆಯ ಸಂಧಿ—ಪದ್ಯಗಳು (೩೯)

೧—೩ ಎಲ್ಲರೂ ಜಮದಗ್ನಿಯಬಳಿಗೆ ಬಂದು ನಮಸ್ಕರಿಸಲು, ಆತನು ರೇಣುಕೆಯ ಭಕ್ತಿಗೆ ಮೆಚ್ಚಿ ನಿನಗೆ ಬೇಕಾದ ಇಷ್ಟಾರ್ಥಗಳನ್ನು ಕೇಳು, ಕೊಡುವೆನೆನ್ನಲು, ಆಕೆಯು ನನ್ನ ಅಪರಾಧವನ್ನು ಮನ್ನಿಸಿ ರಕ್ಷಿಸುವುದೊಂದೇ ನನ್ನ ಇಷ್ಟಾರ್ಥವೆಂದು ಹೇಳುವಳು.

೪—೬ ಜಲಂಧರನ ವೃತ್ತಾಂತವನ್ನು ತಿಳಿಸಿ 'ನೀನು ಗೌರೀದೇವಿಯಂತೆ ಲೋಕದಲ್ಲಿ ಪೂಜ್ಯಳಾಗಿರು,' ಎಂದು ರೇಣುಕೆಯನ್ನು ಅನುಗ್ರಹಿಸಿ ಸಂತೋಷಪಡಿಸುವನು.

೭—೯ ಸಂಧ್ಯಾಕಾಲವರ್ಣನೆ ಇಂದ್ರಾದಿದೇವತೆಗಳು ಬಂದು ರೇಣುಕೆಯ ದರ್ಶನಮಾಡಿ ಆಕೆಗೆ ನಮಸ್ಕರಿಸಿ ತೆರಳುವರು

೧೦—೧೭ ಪ್ರಾತಃಕಾಲವರ್ಣನೆ, ಸಮಸ್ತ ಮುನಿಗಳೂ, ಮುನಿಪತ್ನಿಯರೂ ಬಂದು ರೇಣುಕೆಯನ್ನು ನಾನಾಪ್ರಕಾರವಾಗಿ ಪೂಜಿಸಿ, ಇಷ್ಟಾರ್ಥಗಳನ್ನು ಪಡೆಯುತ್ತ ಬರುವರು ದಧೀಚಿಯ ಶಿರಸ್ಸಿನಿಂದ ರೇಣುಕೆಗೆ ಇಷ್ಟು ಮಹಿಮೆಯುಂಟಾಯಿತು, ಪೂರ್ವದ ದುಃಸ್ಥಿತಿಯು ನಿವಾರಣೆಯಾದುದೆಂದು ಹೇಳುವನು

೧೮—೧೯ ಪೂರ್ವದಲ್ಲಿ ನಾನೂ ಸಹ "ಲೋಕದಲ್ಲಿ ನಾನೊಬ್ಬನು ಮಾಯಾಪಾಶಬದ್ಧನಲ್ಲ" ವೆಂದು ಗರ್ವದಿಂದ ಹೇಳಿಕೊಂಡುದರಿಂದ ಬಹು ಕಷ್ಟಕ್ಕೊಳಗಾದೆನೆಂದು ಹೇಳಿದ ನಾರದನ ಮಾತನ್ನು ಕೇಳಿ ಭರತನು

೨೦—೩೯ ಆ ಕಥೆಯನ್ನು ತಿಳಿಸಬೇಕೆಂದು ಬೇಡಿಕೊಳ್ಳಲು, ತಾನು ಹೆಂಗಸಾಗಿ ಭದ್ರನೆಂಬ ರಾಜನನ್ನು ಮದುವೆಮಾಡಿಕೊಂಡು ೬೦ ಮಂದಿಪುತ್ರರನ್ನು ಪಡೆದು ಸಂಸಾರದುಃಖದಲ್ಲಿ ಮುಳುಗಿ ಕೊನೆಗಾಣದೆ ಹರಿಕೃಪೆಯಿಂದ ಪುನಃ ಋಷಿಯಾದೆನೆಂದು ತನಗೆ ಬಂದಿದ್ದ ಕಷ್ಟಗಳನ್ನು ವಿಸ್ತಾರವಾಗಿ ಹೇಳುವನು

೨೦ ನೆಯ ಸಂಧಿ—ಪದ್ಯಗಳು (೨೭)

೧—೧೦ ರೇಣುಕೆಯು ಸರ್ವರಿಂದಲೂ ಪೂಜ್ಯಳಾಗಿ, ಮಹಿಮಾಸ್ಪದಳಾಗಿರಲು ಪರಶುರಾಮನು ಕೈಲಾಸಕ್ಕೆ ಹೋಗಿ ಈಶ್ವರನ ಬಳಿಯಲ್ಲಿ ಸಾಧನೆಗಳನ್ನು ಕಲಿಯಬೇಕೆಂಬಾಶೆಯಿಂದ ತಂದೆ ತಾಯಿಗಳನ್ನು ಕೇಳಿಕೊಳ್ಳುವನು

೧೦—೧೨ ರೇಣುಕೆಯು ಪಾದುಕೆಗಳನ್ನನುಗ್ರಹಿಸಿ ಕೊಟ್ಟು, ಇವುಗಳನ್ನು ಮೆಟ್ಟಿದರೆ ಸ್ವೇಚ್ಛಾಗಮನವುಂಟಾಗುವುದೆಂದು ಹೇಳುವಳು.

೧೩—೧೬ ಪರಶುರಾಮನು ಆ ಪಾದುಕೆಗಳನ್ನು ಮೆಟ್ಟಿ ಕೈಲಾಸವನ್ನು ಸ್ಮರಿ

ಸಲು, ಆ ಪಾದುಕೆಯು ಕೂಡಲೆ ಅವನನ್ನು ಆಕಾಶಮಾರ್ಗದಿಂದ ಕೈಲಾಸದ ಬಳಿಯಲ್ಲಿಳಿಸುವುದು ಅಲ್ಲಿ ಈಶ್ವರನನ್ನು ಕಾಣುವ ಬಗೆ ಗೊತ್ತಾಗದೆ ಮನದಲ್ಲಿ ಶಿವನನ್ನು ಧ್ಯಾನಿಸುತ್ತಿರಲು, ಈಶ್ವರನು ಇದನ್ನು ತಿಳಿದು ಓಲಗವನುಳಿದು ಪರಶುರಾಮನ ಬಳಿಗೆ ಬರುವನು.

೧೬--೨೩ ಪರಶುರಾಮನು ಈಶ್ವರನ ಪಾದಕ್ಕೆರಗಿ ಧನುರ್ವಿದ್ಯೆಯನ್ನು ಕಲಿಸ ಬೇಕೆಂದು ಪ್ರಾರ್ಥಿಸುವನು ಬಳಿಕ ಇಬ್ಬರೂ ಪರಸ್ಪರ ಶ್ಲಾಘನೆ ಮಾಡಿದಮೇಲೆ, ಈಶ್ವರನು ಕೊನೆಗೆ ಅಸ್ತ್ರಶಿಕ್ಷೆಗೆ ಒಪ್ಪಿ ಶಿಷ್ಯನನ್ನು ಕರೆತಂದು ಪಾರ್ವತಿಗೆ ತೋರಿಸಲು, ಆಕೆಯೂ ವಿಷ್ಣುವಿನ ಅವತಾರವಾದ ಪರಶುರಾಮನನ್ನು ನೋಡಿ ಸಂತೋಷಪಡುವಳು

೨೪—೨೬ ಪರಮೇಶ್ವರನು ಪರಶುರಾಮನಿಗೆ ಧನುರ್ವಿದ್ಯೆಯನ್ನು ಉಪದೇಶ ಮಾಡುವನು

೨೧ ನೆಯ ಸಂಧಿ—ಪದ್ಯಗಳು (೪೬)

೧— ೫ ಕಾರ್ತವೀರ್ಯನ ರಾಜ್ಯವರ್ಣನೆ

೬— ೮ ಅವನ ಆಸ್ಥಾನ ಮಂಟಪವರ್ಣನೆ

೯—೧೦ ಕಾರ್ತವೀರ್ಯನು ಸಭಾ ಭವನದಲ್ಲಿ ಕುಳಿತು ಚಿತ್ರಗತವಾಗಿದ್ದ ಬೇಟೆಯ ವಿಸ್ತಾರವನ್ನು ನೋಡಿ ತಾನೂ ಬೇಟೆಯಾಡಬೇಕೆಂದು ಅಪೇಕ್ಷಿಸಿ, ಬೇಟೆಗೆ ಹೊರಡುವುದಕ್ಕೆ ಎಲ್ಲವನ್ನೂ ಸಿದ್ಧಪಡಿಸುವಂತೆ ಮಂತ್ರಿಗೆ ತಿಳಿಸುವನು

೧೧—೨೩ ಬೇಟೆಯ ಪ್ರಯಾಣ ಸೇನೆಯು ಮತ್ತು ಬೇಹರವರ್ಣನೆ

೨೪—೩೧ ಅರಣ್ಯವರ್ಣನೆ ಮತ್ತು ಕೈಲಾಸಪರ್ವತ ವರ್ಣನೆ

೩೨—೪೩ ಬೇಟೆಯನ್ನಾಡಿದ ಮೇಲೆ ಹೊರಟು ಬರುವಾಗ ಜಮದಗ್ನಿಯ ತಪೋವನವನ್ನು ಪ್ರವೇಶಿಸುವುದು

೪೩—೪೬ ಅಷ್ಟರಲ್ಲಿ ಸೂರ್ಯಾಸ್ತಮಯ ಸಮಯವಾಗುವುದು

೨೨ ನೆಯ ಸಂಧಿ —ಪದ್ಯಗಳು (೩೨)

೧— ೭ ಕಾರ್ತವೀರ್ಯನು ರೇಣುಕೆಯನ್ನು ವಿವಿಧೋಪಚಾರದಿಂದ ಪೂಜಿಸುವನು

೮—೨೧ ಕಾರ್ತವೀರ್ಯನು ಜಮದಗ್ನಿಯ ಸಂದರ್ಶನವನ್ನು ಮಾಡಲು ಆತನು ಆದರಿಸಿ ಸೈನ್ಯದೊಡನೆ ಕಾರ್ತವೀರ್ಯನಿಗೆ, ಕಾಮಧೇನುವಿನ ಸಹಾಯದಿಂದ, ದಿವ್ಯವಾದ ಆತಿಥ್ಯವನ್ನು ಮಾಡಿಸುವನು

೨೨—೩೨ ಕಾರ್ತವೀರ್ಯನು ಹಿಂದಿರುಗಿ ಬರುತ್ತ ಮಂತ್ರಿಯೊಡನೆ ಆಶ್ಚರ್ಯದಿಂದ ಆತಿಥ್ಯ ವಿಷಯವನ್ನು ಹೇಳಲು, ಅವನು ಆ ಧೇನುವನ್ನು ಕೇಳಿ ಹೇಗಾದರೂ ಮಾಡಿ ತೆಗೆದುಕೊಂಡು ಬರಬೇಕೆನ್ನಲು ಆ ಮಂತ್ರಿ

ಯನ್ನೇ ಆಕಾರ್ಯಕ್ಕೆ ನಿಯಮಿಸುವನು. ಮಂತ್ರಿಯು ಪುನಃ ಆಶ್ರಮಕ್ಕೆ ಬರುವನು

೨೩ ನೆಯ ಸಂಧಿ- ಪದ್ಯಗಳು (೨೩)

೧—೧೪ ಮಂತ್ರಿಯು ಜಮದಗ್ನಿಯ ಬಳಿಗೆ ಬಂದು, ನಮ್ಮ ರಾಜನು ಕಾಮಧೇನುವನ್ನು ಬಯಸಿರುವನು ದಯಪಟ್ಟು ನನ್ನೊಡನೆ ಕಳುಹಿಸಿ ಕೊಡಬೇಕೆಂದು ಕೇಳುವನು ಮುನಿಯು ಆ ಧೇನುವನ್ನು ಕೊಡಲಾಗದೆಂದು ಎಷ್ಟು ಸಮಾಧಾನೋಕ್ತಿಗಳನ್ನು ಹೇಳಿದರೂ ಕೇಳದೆ, ಬಲಾತ್ಕಾರದಿಂದ ಅದನ್ನು ಹಿಡಿದು ಕೊರಲಿಗೆ ಹಗ್ಗವನ್ನು ಹಾಕಿ ಎಳೆದುಕೊಂಡು ಹೋಗುವನು

೧೫—೧೮ ದಾರಿಯಲ್ಲಿ ಮಂತ್ರಿಗೆ ಅಪಶಕುನಗಳಾಗುವುವು ಅದನ್ನು ಲಕ್ಷಿಸದೆ ನರ್ಮದಾತೀರಕ್ಕೆ ಬಂದು, ದೊರೆಗೆ ಈ ಸಮಾಚಾರವನ್ನು ಹೇಳಿಕಳುಹಿಸಿ ಪುರಪ್ರವೇಶ ಮಾಡುತ್ತಿರುವಷ್ಟರಲ್ಲಿಯೇ ಆ ಧೇನುವು ಅಲ್ಲಿಯೇ ಅದೃಶ್ಯವಾಗುವುದು

೧೯—೨೦ ಮಂತ್ರಿಯು ವಿಸ್ಮಿತನಾಗಿ ಈ ಆಶ್ಚರ್ಯವನ್ನು ದೊರೆಯ ಸಂಗಡ ಹೇಳಲು, ಅವನು ಅಯ್ಯಾ ! ಜಮದಗ್ನಿಯು ಅದನ್ನು ಮಂತ್ರದಿಂದಾಕರ್ಷಣೆಮಾಡಿರಬಹುದು. ಆದಕಾರಣ ಅದು ಮಾಯವಾಯಿತು ಚಿಂತೆಯಿಲ್ಲ ಇನ್ನು ಹೇಗಾದರೂ ಮಾಡಿ ಆ ಧೇನುವನ್ನು ತರುವುದೇ ಸರಿ. ಇದೇ ಶಪಥವು ನಾನು ಬಿಡುವನಲ್ಲ ಇನ್ನೊಂದು ಸಾರಿ ನೀನು ಅಲ್ಲಿಗೆ ಹೋಗಿ ಅದನ್ನು ಹಿಡಿದುಕೊಂಡು ಬಾ, ಎನಲು, ಮಂತ್ರಿಯು ಪುನಃ ಆಶ್ರಮಕ್ಕೆ ಹೋಗುವನು.

೨೧—೨೩ ಮಂತ್ರಿಯು ಸೇನಾಸಮೇತನಾಗಿ ಆಶ್ರಮದ ಬಳಿಗೆ ಬಂದು ನೋಡಲು ಆ ಧೇನುವು ಜಮದಗ್ನಿಯ ಬಳಿಯಲ್ಲಿ ಸಂತೋಷದಿಂದ ನಿಂತಿದ್ದುದನ್ನು ಕಾಣುವನು

೨೪ ನೆಯ ಸಂಧಿ- ಪದ್ಯಗಳು (೨೮)

೧—೧೪ ಮಂತ್ರಿಯು ಜಮದಗ್ನಿಯ ಬಳಿಗೆ ಬಂದು, ಆತನು ಎಷ್ಟು ಹೇಳಿದರೂ ಕೇಳದೆ ರೇಣುಕೆಯನ್ನೂ ಲಕ್ಷ್ಯವಿಡದೆ ಪುನಃ ಕಾಮಧೇನುವನ್ನು ಎಳೆದುಕೊಂಡು ಬಂದು ದೊರೆಗೆ ತೋರಿಸಲು ಅವನು ಅದನ್ನು ಕಂಬಕ್ಕೆ ಕಟ್ಟಿಸುವನು

೧೫—೨೧ ಈ ಆಶ್ಚರ್ಯವನ್ನು ನೋಡಲು ಇಂದ್ರಾದಿಗಳೆಲ್ಲರೂ ಸೇರುವರು ಆಗ ಇಂದ್ರನು ಕಾರ್ತವೀರ್ಯನನ್ನು ಕುರಿತು ! ಅಯ್ಯಾ ಜಮದಗ್ನಿಯ ತಂಟೆಗೆ ಹೋಗಬೇಡ, ಇದರಿಂದ ಮುಂದೆ ನಿನಗೆ ವಿಪತ್ತು ಸಂಭವಿಸುವುದು.

ನಾನು ಹಿಂದೆ ಗೌತಮನ ಕೈಗೆ ಸಿಕ್ಕಿ ನರಳಿದ್ದೇನೆ, ಬೇಡ, ಬಿಟ್ಟು ಬಿಡು ' ಎಂದು ಹೇಳುವನು.

೨೨—೨೭ ಮತ್ತು ಇಂದ್ರನು ಅಹಲ್ಯೆಯನ್ನು ಮೋಹಿಸಿದುದರಿಂದ ಗೌತಮನು ಶಾಪವನ್ನು ಕೊಡಲು ಅದರಿಂದ ತಾನು ಪಟ್ಟ ಕಷ್ಟಗಳನ್ನು ವಿಸ್ತಾರವಾಗಿ ಹೇಳಿ ಧೇನುವನ್ನು ಬಿಡೆನ್ನಲು, ದೇವತೆಗಳೆಲ್ಲರೂ ಹವಿರ್ಭಾಗದ ದಾಕ್ಷಿಣ್ಯಕ್ಕಾಗಿ ಋಷಿಗಳ ಪರವಾಗಿ ಮಾತನಾಡುವುದೇ ಸ್ವಭಾವವಾಗಿದೆ, ನನಗೆ ಅಂತಹ ದಾಕ್ಷಿಣ್ಯವೇನೂ ಇಲ್ಲ ಬೇಕಾದುದನ್ನು ಮಾಡಲಿ, ನಾನು ಬಿಡುವನಲ್ಲವೆಂದು ಹೇಳಿ ಧೇನುವನ್ನು ಕಟ್ಟಿಹಾಕಿಸುವನು.

೨೮—೨೯ ಈ ಕಡೆ ಜಮದಗ್ನಿಯು ಬಹು ಸಂತಾಪಪಡುತ್ತಿರುವನು

೨೫ ನೆಯ ಸಂಧಿ-- ಪದ್ಯಗಳು (೨೧)

೧—೬ ಜಮದಗ್ನಿಯು ರೇಣುಕೆಯೊಡನೆ ಕೂಡಿ ಧೇನುವಿನ ವಿಯೋಗದುಃಖದಿಂದ ಪ್ರಲಾಪಿಸುತ್ತಾ ಈಶ್ವರನಧ್ಯಾನವನ್ನು ಮಾಡುತ್ತಿರಲು ಈಶ್ವರನು ಈ ಸಂಗತಿಯನ್ನು ತಿಳಿಯುವನು

೭—೧೪ ಶಿವನು ಶಿಷ್ಯನಾದ ಪರಶುರಾಮನನ್ನು ಕರೆದು ದಿವ್ಯವಾದ ಕೊಡಲಿಯೊಂದನ್ನು ಅನುಗ್ರಹಿಸಿ ಕೊಟ್ಟು ನೀನು ಜಮದಗ್ನಿಯ ಬಳಿಯಲ್ಲಿರುವ ವೈಷ್ಣವ ಚಾಪವನ್ನು ತೆಗೆದುಕೊಂಡು, ಭೂಲೋಕದಲ್ಲಿ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆಯನ್ನು ಮಾಡು ಹೋಗೆಂದು ಆಶೀರ್ವದಿಸಿ ಕಳುಹಿಸುವನು

೧೫—೧೮ ಪರಶುರಾಮನು ರೇಣುಕೆಯು ಕೊಟ್ಟಿದ್ದ ಹಾವುಗೆಗಳನ್ನು ಮೆಟ್ಟಿ ನಿಮಿಷಮಾತ್ರದಲ್ಲಿ ಜಮದಗ್ನಿಯ ಆಶ್ರಮವನ್ನು ಸೇರುವನು

೧೯—೨೧ ಮಗನು ಬಂದುದನ್ನು ಕಂಡು ಜಮದಗ್ನಿಯೂ ರೇಣುಕೆಯೂ ಸಂತೋಷಪಡುವರು

೨೬ ನೆಯ ಸಂಧಿ- ಪದ್ಯಗಳು [೪೫]

೧—೧೩ ಪರಶುರಾಮನು ದುಃಖಿಸುತ್ತಿರುವ ತಂದೆ ತಾಯಿಗಳನ್ನು ಸಮಾಧಾನಪಡಿಸಿ, ಜಮದಗ್ನಿಯ ಬಳಿಯಲ್ಲಿದ್ದ ವೈಷ್ಣವ ಚಾಪವನ್ನು ತೆಗೆದುಕೊಂಡು, ಕಾರ್ತವೀರ್ಯನನ್ನು ಜಯಿಸಿ ಧೇನುವನ್ನು ಬಿಡಿಸಿ ತರುವೆನೆಂದು, ಬಾಲಾರ್ಕನೆಂಬ ಬ್ರಾಹ್ಮಣಬಟುವನ್ನು ಕರೆದುಕೊಂಡು ಮಾಹಿಷ್ಮತೀಪುರಕ್ಕೆ ಹೊರಡುವನು

೧೪—೨೭ ಮಾಹಿಷ್ಮತೀಪುರ ಮತ್ತು ಅದರ ಉಪವನವರ್ಣನೆ

೨೮—೪೫ ಪರಶುರಾಮನು ಬಾಲಾರ್ಕನನ್ನು ಕಾರ್ತವೀರ್ಯನಬಳಿಗೆ “ ಧೇನುವನ್ನು ಬಿಡು, ಇಲ್ಲದಿದ್ದರೆ ಯುದ್ಧಕ್ಕೆ ನಿಲ್ಲು ' ಎಂದು ಹೇಳಿಕಳುಹಿಸಲು ಅವನು ಕಾರ್ತವೀರ್ಯನಬಳಿಗೆ ಬರುವನು

೨೭ನೆಯ ಸಂಧಿ ಪದ್ಯಗಳು (೩೧)

೧—೭ ಬಾಲಾರ್ಕನು ಮಾಹಿಷ್ಮತೀಪುರದ ಬೀದಿಯಲ್ಲಿ ಹೊರಟು ಎಲ್ಲರನ್ನೂ ನೋಡುತ್ತಾ ಆಸ್ಥಾನಕ್ಕೆ ಬಂದು ಓಲಗದಲ್ಲಿದ್ದ ಕಾರ್ತವೀರ್ಯನನ್ನು ಕಾಣುವನು

೮—೧೪ ಆಸ್ಥಾನವರ್ಣನೆ, ಬಾಲಾರ್ಕನು ತಾನು ಬಂದಿರುವ ಸಮಾಚಾರವನ್ನು ಮಂತ್ರಿಗೆ ತಿಳಿಸುವನು

೧೫—೩೧ ಮಂತ್ರಿಯು ದೊರೆಗೆ ಈ ಸಂದರ್ಭವನ್ನು ತಿಳಿಸಲು, ಅವನು ರೇಗಿ ಬಾಲಾರ್ಕನನ್ನು ಬೆದರಿಸಿ, ಕೂಡಲೆ ದಂಡಿನೊಡನೆ ಹೊರಡುವಂತೆ ಮಂತ್ರಿಗೆ ಆಜ್ಞೆಮಾಡಲು, ಮಂತ್ರಿಯು ಸೇನಾಸಮೇತನಾಗಿ ಪರಶುರಾಮನ ಬಳಿಗೆ ಬರುವನು ಅಷ್ಟರಲ್ಲಿ ಬಾಲಾರ್ಕನು, ಮಂತ್ರಿಯು ಯುದ್ಧೋನ್ಮುಖನಾಗಿ ಬರುತ್ತಿರುವುದನ್ನು ಪರಶುರಾಮನಿಗೆ ತಿಳಿಸಿ, ತಾನು ಅಲ್ಲಿರುವ ಒಂದು ಮರದಮೇಲೆ ಕುಳಿತುಕೊಳ್ಳುವನು.

೨೮ನೆಯ ಸಂಧಿ–ಪದ್ಯಗಳು (೪೩)

೧—೮ ಮಂತ್ರಿಯು ಸೇನೆಯೊಡನೆ ಯುದ್ಧಕ್ಕೆ ಸಿದ್ಧನಾಗಲು, ಪರಶುರಾಮನು ತನ್ನ ಕೊಡಲಿಯನ್ನು ಅಭಿಮಂತ್ರಿಸಿ ಬಿಟ್ಟನು, ಅದು ಚತುರಂಗ ಸೈನ್ಯವನ್ನೆಲ್ಲ ಕೊಂದು ಪರಶುರಾಮನ ಬಳಿಗೈದುವುದು

೯—೧೩ ಈ ಬ್ರಾಹ್ಮಣನಿಗೆ ಕೊಡಲಿಯಿಂದ ಇಷ್ಟು ಶಕ್ತಿ ಬಂದಿದೆ ಅದನ್ನು ನಾವು ಕಿತ್ತುಕೊಂಡರೆ ಇವನು ವಶನಾಗುವನು ಇಲ್ಲದಿದ್ದರೆ ನಮ್ಮೆಲ್ಲರನ್ನೂ ಸಂಹರಿಸದೆ ಬಿಡನು, ಎಂದು ಮಂತ್ರಿ ಹೇಳಲು, ಸೇನಾಪತಿಯ ಮಗನಾದ ಪೃಥುವು ಆ ಕಾರ್ಯಕ್ಕೊಪ್ಪಿ ಯುದ್ಧಕ್ಕೆ ಬಂದು ಪರಶುರಾಮನಮೇಲೆ ಬಾಣಪ್ರಯೋಗಮಾಡಲು ಪರಶುರಾಮನು ಅವೆಲ್ಲವನ್ನೂ ಖಂಡಿಸಿ ಆ ಪೃಥುವನ್ನು ಕೊಲ್ಲುವನು ಅಷ್ಟರಲ್ಲಿಯೇ ಕಾರ್ತವೀರ್ಯನು ಅಪಾರವಾದ ಸೈನ್ಯವನ್ನು ಯುದ್ಧಭೂಮಿಗೆ ಕಳುಹಿಸುವನು ಬಾಲಾರ್ಕನು ಮರದಮೇಲಿನಿಂದ ನೋಡಿ ಪರಶುರಾಮನಿಗೆ ತಿಳಿಸುವನು

೧೪—೨೦ ಆ ಸೇನೆಯೊಡನೆ, ಮಂತ್ರಿಯ ಸಹೋದರರಾದ ವೈರೋಚಿ, ಸುಮುಖ, ದುರ್ಮುಖರೆಂಬುವರು ಸೇರಿ ಯುದ್ಧಕ್ಕೆ ತೊಡಗುವರು.

೨೧—೨೬ ಸೇನೆಯ ಸಹಿತವಾಗಿ ಅವರೆಲ್ಲರನ್ನೂ ಕೊಲ್ಲಲು, ಚಿತ್ರಾಂಗನೆಂಬ ಸೇನಾಪತಿಯು ಯುದ್ಧಕ್ಕೆ ಸಿದ್ಧನಾಗುವನು.

೨೭—೩೯ ಅವನೂ ಯುದ್ಧದಲ್ಲಿ ಹತನಾಗುವನು ವರೇಣ್ಯನೆಂಬ ಮಂತ್ರಿ ಯುದ್ಧಕ್ಕೆ ನಿಲ್ಲುವನು

೩೦—೩೫ ಉಳಿದ ಸೈನ್ಯವನ್ನೂ ಮಂತ್ರಿಯನ್ನೂ ಕೊಲ್ಲಲು ಯುದ್ಧರಂಗವು ಬರಿದಾಗುವುದು.

೩೬—೩೮ ಸಂಧ್ಯಾಕಾಲ ಇಬ್ಬರೂ ರೇವಾನದಿಯಲ್ಲಿ ಸಂಧ್ಯಾದಿ ಕರ್ಮಗಳನ್ನು ನಡೆಯಿಸುವರು

೩೯—೪೩ ದೊರೆಯು ಈ ವೃತ್ತಾಂತವನ್ನು ತಿಳಿದು ದುಃಖಿತನಾಗಿ ತಾನೇ ಯುದ್ಧಕ್ಕೆ ಹೊರಡಬೇಕೆಂದು ಸಿಂಹಾಸನದಿಂದೇಳುವನು

೨೯ ನೆಯ ಸಂಧಿ—ಪದ್ಯಗಳು (೩೫)

೧— ೬ ಆದಿನವು ಕಳೆದು ಪ್ರಾತಃಕಾಲವಾಗಲು, ಕಾರ್ತ್ತವೀರ್ಯನು ಸ್ನಾನ ಸಂಧ್ಯಾದಿಗಳನ್ನು ನಿರ್ವರ್ತಿಸಿ ತನ್ನ ಗುರುವನ್ನು ನೆನೆಯಲು ಆ ದತ್ತಾತ್ರೇಯ ಮುನಿಯು ಬಂದು, ಅಯ್ಯಾ! ನೀನೇಕೆ ಇಂತಹ ಅವಿವೇಕಕ್ಕೊಳಗಾದೆ! ಎಂದು ಕೇಳಲು ಕಾರ್ತ್ತವೀರ್ಯನು ಅವನೊಡನೆ ಹೇಳುತ್ತಾನೆ.

೭—೧೫ ನಾನೇನೋ ಗೋವನ್ನು ಹಿಡಿತರಿಸಿದುದುಂಟು ಇದರಿಂದ ಮಂತ್ರಿ ಸೇನಾಪತಿಗಳೊಡನೆ ನನ್ನ ಚತುರಂಗಸೈನ್ಯವು ನಾಶವಾಯಿತು. ಸ್ವಧರ್ಮವನ್ನು ಬಿಡದೆ ನಾನೂ ಯುದ್ಧಕ್ಕೆ ತೆರಳುವೆನು, ಎನ್ನಲು, ದತ್ತಾತ್ರೇಯನು, ಈಶ್ವರನ ಪೂಜೆಯನ್ನು ಮಾಡಿಕೊಂಡು ಹೊರಡು ನಿನಗೆ ಶುಭವಾಗಲಿ ಎಂದು ಹರಸಿ ಹೊರಟುಹೋಗುವನು ಕಾಂತೆಯರು ಎಷ್ಟು ವಿಧವಾಗಿ ಬೇಡಿಕೊಂಡರೂ ಕೇಳದೆ ಯುದ್ಧಕ್ಕೆ ಪ್ರಯಾಣ ಮಾಡುವನು

೧೬—೩೫ ಅವನು ಯುದ್ಧಕ್ಕೆ ಬರುತ್ತಿರುವುದನ್ನು ಬಾಲಾರ್ಕನು ಪರಶುರಾಮನಿಗೆ ತಿಳಿಯಪಡಿಸಿ ತಾನು ಅಲ್ಲಿರಲಾರೆನೆನ್ನಲು, ಪರಶುರಾಮನು ಅವನನ್ನು ಸಮಾಧಾನಪಡಿಸಿ ಯುದ್ಧಕ್ಕೆ ಸಿದ್ಧನಾಗುವನು. ಕಾರ್ತ್ತವೀರ್ಯನು ಯುದ್ಧಭೇರಿಯನ್ನು ಹೊಡೆಯಿಸಿ ಸಮಸ್ತ ಸೇನಾಪರಿವೃತನಾಗಿ ಹೊರಡುವನು ಸೇನೆಯವರ್ಣನೆ ತರುವಾಯ ಸೇನೆಯು ಮೊದಲು ಯುದ್ಧಕ್ಕೆ ನಿಲ್ಲಲು ಕೊಡಲಿಯಿಂದ ಎಲ್ಲವನ್ನೂ ಸದೆಬಡಿಯುವನು

೩೦ ನೆಯ ಸಂಧಿ—ಪದ್ಯಗಳು (೫೦)

೧—೧೨ ಕಾರ್ತ್ತವೀರ್ಯನ ಚತುರಂಗ ಸೈನ್ಯವು ಯುದ್ಧಕ್ಕೆ ನಿಲ್ಲಲು ಪರಶುರಾಮನ ಹೊಡೆತಕ್ಕೆ ತಡೆಯದೆ ಆ ಧಟ್ಟು ತಟ್ಟುತಾರಾಗುವುದು. ಅದನ್ನು ನೋಡಿ ಸಹಿಸಲಾರದೆ ಕಾರ್ತ್ತವೀರ್ಯನೇ ಯುದ್ಧಕ್ಕೆ ನಿಲ್ಲುವನು.

೧೩—೫೦ ರಣಶೂರರಿಬ್ಬರೂ ತಾವು ವರವಾಗಿ ಪಡೆದಿದ್ದ ದಿವ್ಯಾಸ್ತ್ರಗಳೆಲ್ಲವನ್ನೂ ಪ್ರಯೋಗಿಸಿ, ವೀರವಾದಗಳೊಡನೆ ಸಮಾನವಾಗಿ ಕಾದುತ್ತಿರಲು ದೇವತೆಗಳೆಲ್ಲರೂ ವಿಸ್ಮಿತರಾಗಿ ಆಕಾಶದಲ್ಲಿ ನಿಂತು ನೋಡುವರು. ಈ

ರೀತಿಯಾಗಿ ೮ ದಿನಗಳವರೆಗೆ ಇಬ್ಬರಿಗೂ ಅವಿಚ್ಛಿನ್ನವಾಗಿ ಯುದ್ಧವು ನಡೆಯುವುದು

೩೧ನೆಯ ಸಂಧಿ— ಪದ್ಯಗಳು (೬೫)

೧—೧೬ ಪುನಃ ೩ ದಿನಗಳವರೆಗೆ ಬಿಡದೆ ಒಂದೇ ಸಮವಾಗಿ ಯುದ್ಧ ಮಾಡುವರು

೧೭—೩೨ ಹನ್ನೆರಡನೆಯ ದಿನದ ಯುದ್ಧದಲ್ಲಿ ಪರಶುರಾಮನು ಕಾರ್ತ್ಯವೀರ್ಯನನ್ನು ಕುರಿತು 'ಇನ್ನು ಸೆನ್ನಾ ಸೆಯನ್ನು ಬಿಡು' ನಿಮ್ಮವರೆಲ್ಲರನ್ನೂ ಕರೆಯಿಸು, ದೇವರ ಸ್ಮರಣೆಯನ್ನು ಮಾಡು,' ಎಂದು ಹೇಳಿ ಅವನ ತೋಳುಗಳನ್ನು ಕತ್ತರಿಸಲಾರಂಭಿಸುವನು (೨೩ನೆಯ ಪದ್ಯ ಮೂರನೆಯ ಪಾದವು ಅರ್ಧವಿರುತ್ತದೆ ಪೂರ್ತಿಯಾಗಿಲ್ಲ ಪ್ರತಿಯನ್ನು ಬರೆದವರೂ ೨೩ನೆಯ ಪದ್ಯವನ್ನು ನೋಡಬೇಕೆಂದು ಬರಾ ಬರೆದಿರುವರು)

೩೩—೫೦ ಕಾರ್ತ್ಯವೀರ್ಯನ ಬಾಹುಗಳೆಲ್ಲವೂ ಕತ್ತರಿಸಿಹೋಗಿ ಎರಡುಳಿಯಲು ಆಗ ದಿವ್ಯಜ್ಞಾನವುಂಟಾಗುವುದು ಎದುರಾಗಿರುವ ಮಹಾಪುಸ್ತುವಾದ ಪರಶುರಾಮನನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಯುದ್ಧಕ್ಕೆ ನಿಲ್ಲುವನು

೫೧—೬೫ ಕೊನೆಗೆ ಪರಶುರಾಮನು ಕೊಡಲಿಯಿಂದ ಕಾರ್ತ್ಯವೀರ್ಯನ ಶಿರವನ್ನು ಛೇದಿಸುವನು ಆಕಾಶದಿಂದ ಪುಷ್ಪವೃಷ್ಟಿಯಾಗುವುದು ಯುದ್ಧವು ಮುಗಿಯುವುದು.

೩೨ ನೆಯ ಸಂಧಿ— ಪದ್ಯಗಳು (೩೬)

೧—೪ ಪರಶುರಾಮನು ಧೇನುವನ್ನು ತಗೆದುಕೊಂಡುಬಾರೆಂದು ಬಾಲಾರ್ಕನನ್ನು ಪಟ್ಟಣಕ್ಕೆ ಕಳುಹಿಸುವನು

೫—೧೦ ನನ್ನ ಬೆಂಬಲಕ್ಕೆ ನಿನ್ನ ವಾಹನವಾದ ಗರುಡನನ್ನು ಕಳುಹಿಸೆನ್ನಲು, ಗರುಡನಿಗೆ ಆಜ್ಞೆ ಮಾಡುವನು ಗರುಡನು ಇವನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಅರಮನೆಯ ಬಾಗಿಲಲ್ಲಿಳಿಸುವನು ಧೇನುವನ್ನು ಹುಡುಕುವುದಕ್ಕೆ ಹೋಗಲು ಅಲ್ಲಿದ್ದ ಕಾವಲುಗಾರರು ಇವನಮೇಲೆ ಬೀಳುವರು ಗರುಡನು ಅವರನ್ನು ನಾಶಪಡಿಸುವನು ಸೆರೆಮನೆಯಲ್ಲಿದ್ದ ಧೇನುವನ್ನು ತಗೆದುಕೊಂಡು ಗರುಡನೇ ಒಂದು ಪರಶುರಾಮನಿಗೊಪ್ಪಿಸುವನು ಪರಶುರಾಮನು ತಮ್ಮಾಶ್ರಮಕ್ಕೆ ತೆರಳುವನು

೧೧—೨೫ ಕಾಶ್ಮೀರೆಯೇ ಮೊದಲಾದ ೫೦೦ ಮಂದಿ ರಾಣೀವಾಸದವರೂ ಯುದ್ಧಭೂಮಿಗೆ ಬಂದು ಮೃತನಾಗಿರುವ ಪತಿಯನ್ನು ನೋಡಿ ದುಃಖಪಡುತ್ತಿರಲು ದತ್ತಾತ್ರೇಯನು ಬಂದು ಸಮಾಧಾನಗೊಳಿಸಿ ಕಾರ್ತ್ಯವೀರ್ಯನ ಮಕ್ಕಳಿಂದ ಪ್ರೇತಕೃತ್ಯವನ್ನು ಮಾಡಿಸಿ ಹೊರಟುಹೋಗುವನು ಕಾಶ್ಮೀರೆ ಮೊದಲಾದವರೆಲ್ಲರೂ ಪತಿವಿಯೋಗವನ್ನು ಸಹಿಸಲಾರದೆ ಕಾಡನ್ನು

ಸೇರುವರು. ಮಕ್ಕಳೂ ಉನ್ಮತ್ತರಂತೆ, ಬೆಟ್ಟಗಳನ್ನೂ ಕಾಡುಗಳನ್ನೂ ತೊಳಲುತ್ತಿರುವರು.

೨೭—೨೮ ದೊಡ್ಡಮಗನು ದಾರಿದಪ್ಪಿ ಕಾಡಿನಲ್ಲಿ ಅಲೆಯುತ್ತಿದ್ದುದನ್ನು ಕಂಡು ಅಲ್ಲಿದ್ದ ಬೇಡರು ದಿಳೀಪನ ಪಟ್ಟಣದ ದಾರಿಯನ್ನು ತೋರಿಸುವರು

೨೯—೩೩ ಗ್ರೀಷ್ಮರ್ತುವರ್ಣನೆ.

೩೪—೩೭ ಕಾರ್ತವೀರ್ಯನ ಹಿರಿಯಮಗನಾದ ವೃದ್ಧಭೂಭುಜನು ದಿಳೀಪನ ಪಟ್ಟಣಕ್ಕೆ ಬರುವನು

೩೩ ನೆಯ ಸಂಧಿ—ಪದ್ಯಗಳು (೩೭)

೧—೧೦ ಪರಶುರಾಮನು ಕಾಮಧೇನುವಿನೊಡನೆ ಆಶ್ರಮಕ್ಕೆ ಬರುತ್ತಿರಲು ಎಲ್ಲರೂ ಸಂಭ್ರಮದಿಂದ ನಿರೀಕ್ಷಿಸುತ್ತಿರುವರು ಗೋಧೂಳಿಲಗ್ನದಲ್ಲಿ ಆಶ್ರಮವನ್ನು ಹೊಗುವರು ಜಮದಗ್ನಿಯು ಮಗನನ್ನು ನೇವರಿಸಿ ಆದರಿಸುವನು ಆ ರಾತ್ರಿ ಕಳೆಯುವುದು

೧೧—೩೨ ಮರುದಿನದಲ್ಲಿ ಪರಶುರಾಮನು ಕಾರ್ತವೀರ್ಯನನ್ನು ಕೊಂದು ಧೇನುವನ್ನು ಬಿಡಿಸಿತಂದ ವೃತ್ತಾಂತವನ್ನು ಜಮದಗ್ನಿಯು ಕೇಳಲು ಬಾಲಾರ್ಕನು ಆಮೂಲಾಗ್ರವಾಗಿ ತಿಳಿಸುವನು

೩೩—೩೪ ಮುನಿಧರ್ಮಕ್ಕೆ ವಿರುದ್ಧವಾದ ವೀರಹತ್ಯಾದಿಗಳನ್ನು ಮಾಡಿದುದರಿಂದ ನಿನಗೆ ಪಾತಕವು ಸಂಘಟನೆಯಾಯಿತು. ಅದರ ಪರಿಹಾರಕ್ಕಾಗಿ ಭೂಪ್ರದಕ್ಷಿಣೆ ಮಾಡಿಕೊಂಡು ಬಾರೆಂದು ಜಮದಗ್ನಿಯು ಪರಶುರಾಮನಿಗೆ ಹೇಳಲು, ಅವನು ತಂದೆಯ ಆಜ್ಞೆಯಂತೆ ದಕ್ಷಿಣಾಭಿಮುಖನಾಗಿ ಭೂಪ್ರದಕ್ಷಿಣೆಗೆ ಹೊರಡುವನು

೩೫—೩೭ ಬಾಲಾರ್ಕನು ಬೇಡವೆಂದು ತಡೆಯಲು, ಅವನನ್ನು ಕರೆದುಕೊಂಡು ಪ್ರಯಾಣಮಾಡುವನು

೩೪ ನೆಯಸಂಧಿ—ಪದ್ಯಗಳು (೩೨)

೧— ೭ ವೃದ್ಧಭೂಭುಜನು ತನ್ನ ಸೋದರರ ಮಾವನಾದ ದಿಳೀಪನ ಬಳಿಗೆ ಬರಲು, ಅವನನ್ನು ಆದರಿಸಿ, ನಿನಗೆ ಈ ರೀತಿಯಾದ ದುರವಸ್ಥೆಯು ಹೇಗೆ ಬಂತೆಂದು ಕೇಳುವನು

೭—೧೨ ಕಾರ್ತವೀರ್ಯನ ಮರಣವೃತ್ತಾಂತವನ್ನು ವಿಸ್ತಾರವಾಗಿ ಹೇಳುವನು

೧೩—೨೩ ದಿಳೀಪನು ಅವನನ್ನು ಸಮಾಧಾನ ಪಡಿಸುವುದಕ್ಕಾಗಿ, ಕಪಿಲಋಷಿಯಿಂದ ತಮ್ಮ ವಂಶದ ಸಗರಚಕ್ರವರ್ತಿಗೆ ಒಂದ ಕಷ್ಟವನ್ನು ತಿಳಿಸಲಾರಂಭಿಸಿ, ಸಗರನ ಕಥೆಯನ್ನೂ, ತಾನು ಗಂಗೆಯನ್ನು ತಂದು

ದನ್ನೂ ವಿವರಿಸಿ, ಮುನಿಗಳಲ್ಲಿ ಸೆಣಸಿದರೆ ಕೇಡು ಸಂಭವಿಸುವುದೆಂದು ಹೇಳುವನು

೨೪—೨೭ ದಿಳೀಪನು ಭದ್ರಾಂಕನಿಗೆ ಕಾಗದವನ್ನು ಬರೆದು, ಅವನನ್ನು ಬರಮಾಡಿ ಕೊಂಡು ಎಲ್ಲರೂ ಮಾಹಿಷ್ಮತೀಪುರಕ್ಕೆ ತೆರಳುವರು

೨೮—೩೨ ಅಲ್ಲಿ ವೃದ್ಧಭೂಭುಜನಿಗೆ ಪಟ್ಟವಾಗುವುದು ತನ್ನ ತಮ್ಮನೊಡನೆ ಸಂತೋಷವಾಗಿರುವನು ದಿಳೀಪನು ಕೆಲವು ದಿನಗಳವರೆಗೆ ಅಲ್ಲಿದ್ದು ರಾಜಕಾರ್ಯವೆಲ್ಲವನ್ನೂ ಅನುಕೂಲಪಡಿಸಿಕೊಟ್ಟು ಬಳಿಕ ತನ್ನೂರಿಗೆ ಪ್ರಯಾಣಮಾಡಲು, ವೃದ್ಧಭೂಭುಜನು ಅವನನ್ನು ಸಾಗಕಳುಹಿಸಿ ಅರಮನೆಯನ್ನು ಹೊಗುವನು

೩೫ನೆಯ ಸಂಧಿ— ಪದ್ಯಗಳು (೩೪)

೧—೧೨ ವೃದ್ಧಭೂಭುಜನು ತನ್ನ ಹಗೆಯನ್ನು ಸಾಧಿಸಬೇಕೆಂದಾಲೋಚಿಸಿ ತನ್ನ ಸೋದರದ ಮಾವನಾದ ದಿಳೀಪನ ಸಹಾಯವಿದೆ, ಚಿಂತೆಯಿಲ್ಲ, ಎಂದು ಬಗೆದು ಪರಶುರಾಮನು ಆಶ್ರಮದಲ್ಲಿಲ್ಲವೆಂಬುದನ್ನು ಗೂಢಚಾರರಿಂದ ತಿಳಿದು ಧನುರ್ಧರನಾಗಿ ಜಮದಗ್ನಿಯಾಶ್ರಮಕ್ಕೆ ಹೊರಡುವನು ಅಷ್ಟರಲ್ಲಿ ಸಾಯಂಕಾಲವಾಗುವುದು

೧೩—೧೮ ರಾತ್ರಿವರ್ಣನೆ

೧೯—೨೯ ರಾತ್ರಿ ಗಾಢಾಂಧಕಾರವಾಗಿರಲು ತನ್ನ ಕಡೆಯವರನ್ನು ಆಶ್ರಮಕ್ಕೆ ನುಗ್ಗಿಸಿ, ತಾನೂ ನುಗ್ಗಿ ಹೋಗಿ ಜಮದಗ್ನಿಯ ತಲೆಯನ್ನು ಕಡಿದು ತೆಗೆದುಕೊಂಡು ರಾತ್ರಿಯಲ್ಲಿಯೇ ತನ್ನ ಪುರವನ್ನು ಹೊಗುವನು

೩೦—೩೪ ಪರಶುರಾಮನು ಇತ್ತ ತೀರ್ಥಕ್ಷೇತ್ರಗಳನ್ನು ಸಂಚರಿಸಿ ಬರುತ್ತಾ ಇರಲು, ದಾರಿಯಲ್ಲಿ ಜೋಡಿಕಾಗೆಗಳ ಕಲಹವನ್ನು ಕಂಡು, ಇಷ್ಟಜನಕ್ಕೆ ಏನೋ ಕಷ್ಟವೊದಗಿರಬಹುದೆ ಅದರಿಂದಲೇ ಈ ದುರ್ನಿಮಿತ್ತವು ಕಾಣಿಸಿತೆಂದು ಬಾಲಾರ್ಕನೊಡನೆ ಚಿಂತಿಸುವನು

೩೬ನೆಯ ಸಂಧಿ— ಪದ್ಯಗಳು (೩೨)

೧—೧೫ ಪರಶುರಾಮನು ಆಶ್ರಮಕ್ಕೆ ಬಂದು ರೇಣುಕೆಯಿಂದ ಸಮಾಚಾರವನ್ನು ತಿಳಿದು, ಕೋಪೋದ್ದೀಪಿತನಾಗಿ ೨೧ ಆವೃತ್ತಿ ಭೂಪ್ರದಕ್ಷಿಣೆಮಾಡಿ ಎಲ್ಲಿದ್ದರೂ ದುಷ್ಟರನ್ನು ನಿಗ್ರಹಿಸುವೆನು, ಎಂದು ಪ್ರತಿಜ್ಞೆಮಾಡಿ ತಂದೆಯ ತಲೆಯನ್ನು ತಂದು ಮುಂಡಕ್ಕೆ ಅಂಟಿಸಿ ಬದುಕಿಸುತ್ತೇನೆ, ಎಂದು ತಾಯಿಗೆ ಹೇಳಿ ಸಮಾಧಾನಮಾಡಿ ಮಾಹಿಷ್ಮತೀಪುರಕ್ಕೆ ಬಂದು ಸೇನೆಯನ್ನು ಸವರಿ ವೃದ್ಧಭೂಭುಜನಿರುವಷ್ಟಳಕ್ಕೆ ಬಂದು ನಿಲ್ಲಲು, ಅವನೂ ಯುದ್ಧಕ್ಕೆ ಸಿದ್ಧನಾಗುವನು

೧೬—೨೨ ಅವನ ತಲೆಯನ್ನು ಕಡಿದು ಕಾಲಿನಿಂದ ಚಿಮ್ಮಲು ಅದು ಬಾಲಾರ್ಕನ ಮುಂದೆ ಬಂದು ಬಿದ್ದಿತು ಅವನು ಆಶ್ಚರ್ಯಪಟ್ಟನು ಜಮದಗ್ನಿಯ ತಲೆಯನ್ನು ತಂದು ಮುಂಡಕ್ಕೆ ಸೇರಿಸಿ ಅಭಿಮಂತ್ರಿಸಲು, ಜಮದಗ್ನಿಯು ನಿದ್ರೆಯಿಂದೆಚ್ಚತ್ತಂತೆ ಏಳುವನು

೨೩—೩೨ ಪರಶುರಾಮನು ಬಂದನೇ? ಏನು ಸಮಾಚಾರವೆಂದು ಕೇಳಲು, ರೇಣುಕೆಯು ನಡೆದ ವೃತ್ತಾಂತವನ್ನು ಹೇಳುವಳು ಪರಶುರಾಮನು, ತಾನು ೨೧ ಆವೃತ್ತಿ ಭೂಪ್ರದಕ್ಷಿಣೆಮಾಡಿ ದುಷ್ಟರನ್ನು ನಿಗ್ರಹಿಸಿ ಶಿಷ್ಟರಕ್ಷಣೆ ಮಾಡುವೆನೆಂದು ಪ್ರತಿಜ್ಞೆಮಾಡಿರುವೆನಾದುದರಿಂದ ಹೊರಡುತ್ತೇನೆ, ಎಂದು ಜಮದಗ್ನಿಗೆ ತಿಳಿಸಿ ಹೊರಡುವನು

೩೬ನೆಯ ಸಂಧಿ ಪದ್ಯಗಳು (೪೪)

೧—೧೯ ಪರಶುರಾಮನು, ೧೬ ಆವೃತ್ತಿ ಮಾಡಿದ ದಿಗ್ವಿಜಯಯಾತ್ರೆಯಲ್ಲಿ ಮಾಳವ ಮೊದಲಾದ ೧೮ ದೇಶದ ದೊರೆಗಳನ್ನು ಕ್ರಮವಾಗಿ ಕೊಲ್ಲುವನು ಅಷ್ಟರಲ್ಲಿ ವರ್ಷಾಕಾಲವು ಬರುವುದು

೨೦—೨೬ ವರ್ಷಾಕಾಲವರ್ಣನೆ

೨೯—೩೮ ಪುನಃ ಎರಡಾವೃತ್ತಿ ಹೊರಟು ಅನೇಕ ರಾಜರನ್ನು ಕೊಂದು, ಪಾತಾಳಕ್ಕೆ ಹೋಗಿ ಬಲಿಚಕ್ರವರ್ತಿಯನ್ನು ಮನ್ನಿಸಿ ಕೊನೆಗೆ ಅಯೋಧ್ಯೆಗೆ ಬರುವನು

೩೯—೪೪ ದೇಶವರ್ಣನೆ, ಅಯೋಧ್ಯಾಪುರಕ್ಕೆ ಬರುವುದು

೩೭ ನೆಯ ಸಂಧಿ—ಪದ್ಯಗಳು (೫೧)

೧—೨೧ ದಿಳೀಪನ ಮಗನು ಕುದುರೆಯಮೇಲೆ ಬರುತ್ತಿರಲು, ಪರಶುರಾಮನು ಅವನ ತಲೆಯನ್ನು ಕಡಿದು ಊರುಬಾಗಿಲಿಗೆ ಕಟ್ಟುವನು ದೊರೆಗೆ ವರ್ತಮಾನವು ತಿಳಿದು ರೋಷಾವೇಶದಿಂದ ಸೈನ್ಯದೊಡನೆ ಯುದ್ಧಕ್ಕೆ ಹೊರಡಬೇಕೆಂದಿರಲು, ವಸಿಷ್ಠಾದಿ ಮಂತ್ರಿಗಳು ಬುದ್ಧಿವಾದವನ್ನು ಹೇಳಿ ಶರಣಾಗತನಾಗೆಂದರು ದೊರೆಯು ಶರಣಾಗತನಾಗಬೇಕೆಂದು ಅಂತಃಪುರ ಸ್ತ್ರೀಯರೊಡನೆ ಪರಶುರಾಮನ ಬಳಿಗೆ ಬರುವನು

೨೨—೫೧ ರಾಮನು ಒಪ್ಪದೆ ಕ್ಷತ್ರಧರ್ಮಪ್ರಕಾರವಾಗಿ ಯುದ್ಧವನ್ನೇ ಮಾಡಬೇಕೆನ್ನಲು, ವಸಿಷ್ಠಾದಿಗಳು ಸಮಾಧಾನಪಡಿಸುವರು ರಾಮನನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಿ ಉಪಚಾರಮಾಡಿ ಕಳುಹಿಸಿಕೊಡುವನು ಪರಶುರಾಮನು ದಿಳೀಪನ ಮಗನನ್ನು ಬದುಕಿಸಿಕೊಟ್ಟು ಆಶ್ರಮಕ್ಕೆ ಬಂದು ಈ ವೃತ್ತಾಂತವನ್ನು ರೇಣುಕೆಗೆ ಹೇಳುವನು

೩೯ ನೆಯ ಸಂಧಿ— ಪದ್ಯಗಳು (೫೩)

೧—೪೭ ಈ ಸಂಧಿಯಲ್ಲಿ ಪರಶುರಾಮನು ೧೯, ೨೦, ೨೧ ನೆಯ ಆವೃತ್ತಿಗಳಲ್ಲಿ ಜಯಿಸಿದ ರಾಜರ ಹೆಸರೂ, ಅವರ ದೇಶಗಳ ಹೆಸರೂ ಅಲ್ಲದೆ ಹೆಚ್ಚು ಕಥೆ ಇಲ್ಲ. ಕೊನೆಗೆ ಕಾಶೀನಗರದ ಭದ್ರರಾಜನನ್ನು ಕೊಂದು ತನ್ನ ಕೊಡಲಿಯನ್ನು ಗಂಗೆಯಲ್ಲಿ ತೊಳೆವನು.

೪೮—೫೩ ಕಾಶಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸಿ, ಭೂಮಿಯನ್ನು ಬ್ರಾಹ್ಮಣರಿಗೆ ದಾನಮಾಡಬೇಕೆಂದು ನಿಶ್ಚಯಿಸುವನು.

೪೦ ನೆಯ ಸಂಧಿ—ಪದ್ಯಗಳು (೪೫)

೧—೧೮ ವೀರಹತ್ಯಾದೋಷಪರಿಹಾರಕ್ಕಾಗಿ ಯಜ್ಞಮಾಡೆಂದು ಜಮದಗ್ನಿ ಹೇಳಲು, ಅದೇ ಪ್ರಕಾರವಾಗಿ ಯಜ್ಞಮಾಡಿ ಬ್ರಾಹ್ಮಣರಿಗೆ ಭೂಮಿಯೆಲ್ಲವನ್ನೂ ದಾನಮಾಡಿ ಹಂಚಿಕೊಡುವನು. ಇನ್ನು ನೀನು ಸಮುದ್ರತೀರದಲ್ಲಿ ತಪಸ್ಸುಮಾಡಲು ತೆರಳಬಹುದೆನಲು ಅದೇ ಪ್ರಕಾರವಾಗಿ ಪರಶುರಾಮನು ತಪಸ್ಸಿಗೆ ಹೋಗುವನು.

೧೯—೪೧ ಸಮುದ್ರತೀರದಲ್ಲಿ ನಿಂತು, ಧ್ಯಾನಿಸಿ ಸಮುದ್ರನನ್ನು ಪ್ರಾರ್ಥಿಸಿದರೂ ಅವನು ಪ್ರತ್ಯಕ್ಷನಾಗದಿರಲು, ಧ್ವಂಸಮಾಡುವನೆಂದು ಕೊಡಲಿಯನ್ನು ತೆಗೆದುಕೊಳ್ಳುವನು. ಆಗ ಸಮುದ್ರನು ಹೆದರಿ ಪ್ರತ್ಯಕ್ಷನಾಗಿ ಸ್ಥಳವನ್ನು ಕೊಡಲು, ಅಲ್ಲಿ ಕುಳಿತು ಬ್ರಾಹ್ಮಣರಿಗೆ ರಾಜ್ಯದಲ್ಲಿ ತೊಂದರೆಯೇನಾದರೂ ಆದರೆ ನನ್ನನ್ನು ನೆನೆಯಿರಿ, ನಾನು ಬಂದು ಪರಿಹರಿಸುವೆನೆಂದು ಅಲ್ಲಿದ್ದ ಬ್ರಾಹ್ಮಣರಿಗೆಲ್ಲರಿಗೂ ಆಜ್ಞೆಮಾಡಿ ತಪಕ್ಕೆ ಪ್ರಾರಂಭಿಸುವನು.

೪೨—೪೫ ತನ್ನ ಸಹೋದರರೊಡನೆ ಅಲ್ಲಿ ತಪಸ್ಸನ್ನು ಮಾಡುತ್ತಿರಲು ಅನೇಕ ಋಷಿಗಳು ಬಂದು ರಾಮನನ್ನು ಸೇವಿಸುತ್ತಿರುವರು.

೪೧ ನೆಯ ಸಂಧಿ—ಪದ್ಯಗಳು (೫೩)

೧—೧೫ ಭೂರತ್ನವನ್ನು ಪಡೆದ ಬ್ರಾಹ್ಮಣರೆಲ್ಲರೂ 'ಹಿಂದೆ ಕಾರ್ತವೀರ್ಯನ ಮಗನು ಜಮದಗ್ನಿಯನ್ನು ಕೊಂದಂತೆ, ಈಗ ಶಿಶುಗಳಾಗಿರುವ ಕ್ಷತ್ರಿಯ ಪುತ್ರರು ನಮ್ಮನ್ನು ನಿರ್ಮೂಲಮಾಡಿ ಹಗೆಯನ್ನು ಸಾಧಿಸದೆ ಬಿಡರು. ಇದಕ್ಕಾಗಿ ಎಲ್ಲರೂ ರಾಮನ ಬಳಿಗೆಹೋಗಿ ಹೇಳಿಕೊಳ್ಳೋಣ ನಡೆಯಿರಿ, ಸರ್ವಥಾ ಇದು ಸರಿಯಲ್ಲ,' ಎಂದು ಎಲ್ಲರೂ ಗುಂಪುಕೂಡಿ ಸಮುದ್ರತೀರಕ್ಕೆ ಬರುವರು.

೧೬—೨೫ ರಾಮನನ್ನು ಮರೆಹೊಗಲು ರಾಮನು ಕೋಪಿಸಿ 'ನೀವೆಲ್ಲರೂ ಹೇಡಿ

ಗಳಾಗಿ ಸೇವೆಯಿಂದ ಜೀವಿಸಿರಿ,' ಎಂದು ಶಾಪವನ್ನು ಕೊಟ್ಟು ಪುನಃ ಕರುಣೆಯಿಂದ 'ಮುಂದೆ ಯಾವನು ರಾಜನಾದರೂ ನಿಮ್ಮ ಸಹಾಯ ಎಲ್ಲದೆ ಅವನ ರಾಜತ್ವವು ನಡೆಯದೆ ಹೋಗಲಿ'' ಎಂದು ವರವನ್ನು ಕೊಟ್ಟು ಸಮಾಧಾನಮಾಡಿ ಕಳುಹಿಸಿ, ಇನ್ನಿಲ್ಲಿರುವುದು ಸರಿಯಲ್ಲವೆಂದು ಹಿಮವತ್ಪರ್ವತಕ್ಕೆ ತೆರಳುವನು

೨೬—೩೫ ಸಹೋದರರೊಡನೆ ಹಿಮಾಚಲಕ್ಕೆ ಬಂದು ತಪಸ್ಸಿಗೆ ಕುಳಿತುಕೊಳ್ಳುವನು

೩೬—೪೨ ಎಲೈ ಭರತನೇ! ನಿಮ್ಮಣ್ಣನೂ ರಾವಣಾದಿಗಳನ್ನು ಕೊಂದು ಬೇಗನೆ ಬರುತ್ತಾನೆ, ಹೆದರಬೇಡ, ಎಂದು ಹೇಳಿ ನಾರದನು ಹೊರಟುಹೋಗುವನು, ಎಂದು ವಾಲ್ಮೀಕಿ ಮುನಿಯು ಲವ ಕುಶರಿಗೆ ಹೇಳಲು, ಅವರು ರಾಮನ ರಾಜ್ಯಭಾರಕ್ರಮವನ್ನು ಹೇಳಬೇಕೆಂದು ಬೇಡಲು ಹೇಳಲಾರಂಭಿಸುವನು

೪೩—೫೦ ೧೪ ವರ್ಷಕ್ಕೆ ೩ ದಿನಗಳುಳಿದಿರಲು, ಭರತನು, ರಾಮನು ಬರುವನೆಂದು ಸಂತೋಷದಿಂದಿರುವನು

೫೧—೫೩ ಚಂದ್ರವರ್ಣನ

೪೨ ನೆಯ ಸಂಧಿ—ಪದ್ಯಗಳು (೪೦)

೧—೨೧ ಶ್ರೀರಾಮನು ಕಾಲಕ್ಕೆ ಸರಿಯಾಗಿ ಬಾರದೆ ಹೋಗಲು, ಭರತನು ಚಿತೆಯನ್ನೊಟ್ಟಿ ಅಗ್ನಿಪ್ರವೇಶ ಮಾಡುತ್ತಿರುವಷ್ಟರಲ್ಲಿ, ಆಂಜನೇಯನು ಬಂದು ರಾಮನು ಬರುವನೆಂಬ ವಾರ್ತೆಯನ್ನು ಹೇಳುವನು

೨೨—೪೦ ಆಗ ರಾಮನು ನಂದಿಗ್ರಾಮವನ್ನು ಸೇರಿ ಭರತನಿಗೆ ತನ್ನ ವನವಾಸ ವೃತ್ತಾಂತವನ್ನು ಹೇಳುವನು ಮಾರನೆಯ ದಿನವೇ ಅಯೋಧ್ಯೆಗೆ ಹೊರಡಬೇಕೆಂದು ನಿಷ್ಕರ್ಷೆಯಾಗುವುದು

೪೩ ನೆಯ ಸಂಧಿ—ಪದ್ಯಗಳು (೬೨)

ಶ್ರೀರಾಮನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಿ ಸುಖವಾಗಿ ರಾಜ್ಯಭಾರಮಾಡಿದನೆಂಬ ಕಥೆಯು ಈ ಸಂಧಿಯಲ್ಲಿ ವರ್ಣಿತವಾಗಿದೆ

ಅಂತು ಸಂಧಿಗಳು—೪೩

ಒಟ್ಟು ಪದ್ಯಗಳು.—೧೬೫೪

——— 0 ———

ಈ ಗ್ರಂಥದ ಕೆಲವು ಭಾಗಗಳನ್ನು ಉದ್ಧರಿಸಿ ಮಾದರಿಗಾಗಿ ಇಲ್ಲಿ ಬರೆದಿದೆ

(೧) ಸರಳಕಥಾಭಾಗ

ಕಾರ್ತವೀರ್ಯಾರ್ಜುನನು ರಾವಣನನ್ನು ಸೆರೆಹಿಡಿಯುವುದು

೧೩ ನೆಯ ಸಂಧಿ— ಪದ್ಯ ೨೨-೪೩

ಇಂತೆಂದು ದಶಮುಖಂ ಪ್ರಾರ್ಥನಂ ಗೆಯ್ಯುತವು |
ನಂತರಂ ತಾನೆಯ್ದು ಕಾಮ್ಯದಿಂ ಕಣ್ಮುಗಿದ |
ಚಿಂತ್ಯನಹುದೇವನಂ ಬೇಡಿಕೊಳ್ವಿತರೊಳಗತ್ತಲಾ ವೀರ್ಯಾರ್ಜುನಂ ||
ಸಂತಸದೆ ಕ್ರೀಡಿಸುತ ನೀಡಿರ್ಪತೋಳುಗಳ |
ಹಂತಿಯಂ ಕದಲಿಸಲ್ಕೈರ್ಜಲಂ ಘುಳಿಘುಳಿಸು |
ತಂತರಿಸದ್ದೈತಂದು ಲಿಂಗಮಂ ಪೂತ್ತೊಯ್ಯುದೊತ್ತರಿಸಿ ಪತ್ರವೆರಸಿ ||

ಬೆಚ್ಚಿದಂತಾಗ್ಯೆದೆ ರಾವಣಂ ಬೆರಗಾಗಿ |
ಹುಚ್ಚುಹೊಳೆ ಮತ್ತೆತ್ತಣಿಂದಕಟ ನೂಕಿದುದೊ |
ಕಿಚ್ಚಿಸಂತುರಿಗರೆವ ಬಟ್ಟಬರುಬೇಸಗೆಯೊಳಿದುವೆ ದೈವಾನುಗ್ರಹಂ ||
ಬೆಚ್ಚಿಪೆಂ ಮಳೆಗರೆದ ಸುರಪನಂ ಬೆಟ್ಟದಿಂ |
ಮುಚ್ಚುವೇನೀ ನದಿಯು ಪಾತ್ರಮನದೆಂಬಳಲ |
ಕಿಚ್ಚಿನಿಂ ಚೀರ್ದ್ದಾರ್ದ್ದು ಘುಡಿಘುಡಿಸಿ ಸಲ್ಲಡಿದು ಕನಲಿದಂ ಕ್ರೌರ್ಯದಿಂದೆ ||

ಇರಲಿರಲ್ಕಸಿತರೊಳ್ಕ್ರೀಲೆ ಜಲಮಂ ಮತ್ತ |
ಕರಸಹಸ್ರವನೀಡಿ ಕಟ್ಟಲ್ತರಂಗಿಣಿಯು |
ಬರಿದೆನಿಸಿ ರಂಜಿಸಲ್ದಶಮುಖಂ ಕೈಯೊಡನ ಶಂಕರಂ ಕೃಪೆಗೆಯ್ವನು ||
ನಿರುತಮೆಂದುತ್ಸಾಹಗೊಳುತಸುರನುಂ ಮತ್ತೆ |
ಕರಸುವಿಂಶತಿಗಳೊಳ್ ಸಿಕತಮಂ ಸಮುಗಟ್ಟಿ |
ವಿರಚಿಸಲ್ಕಭವನಂ ನೀಡಿದಂ ಪ್ರೌಢಿಯೊಳ್ ಶುಕನಮಿತಕುಸುಮಂಗಳಾ ||

ಹರಹರಾ ಶ್ರೀಕಂಠ ಕಂಟಕನಿವಾರಣನೆ |
ದುರಿತಮಂಪರಿ ಭರ್ಗಭಾರ್ಗವ ಸ್ಥಾಪಿತಸ |
ವರವಿತ್ತು ದಕ್ಷನಂ ದಕ್ಷಾರಿಮಾಹೆನ್ನಲಿಂಗ ಗಿರಿಜಾಲಿಂಗನಾ ||
ಕರುಣಿಸೈ ಕಾಮಾರಿ ಕಾಮಿತೇಪ್ಸಿತಮುಮಂ |
ಪೊರೆದಿತ್ತು ಶರ್ವನೇ ಲೋಕತ್ರಯಾಕ್ಷ್ಯತೆಯ |
ಬರಿಸೆಂದು ಸುಮನದಿಂ ಸುಮನಂಗಳರ್ಪಿಸುತೆ ನಿರ್ದ್ದರದೆ ಪುಳನಿರ್ದ್ದನು ||

ಭರತಕೇಳ್ ನಿರ್ದೈವಲಾಂಛನ ಪ್ರಸಿದ್ಧರಿಃ |
ಗುರೆತಸಂ ನಿರ್ವಿಘ್ನಸಾರದಿಂ ಸಿದ್ಧಿವುದೆ |

ಕರಗಳಂ ತೆಗೆಯಲ್ಕೆ ಮೂಲದೊಳಗರ್ಜುನಂ ಮೇಲ್ವರಿಯೆ ಸಾಲ್ತೊರೆಯೊಳು ||
ತೊರೆಗಟ್ಟಿರಂತದುಂ ನಾರಿಯರ ನವದಿವ್ಯ |
ತರಹರಿಸ್ರೋದ್ಗಳಿತ ಜೀವನತುಷಾರದಿಂ |
ಪರಿಮಳಿಸುತ್ತೈತಂದು ಲಿಂಗಪುಷ್ಪಂಗಳಂ ಮತ್ತೆಯ್ದಿತೊತ್ತರಿಸುತ ||

ಕಾರ್ಮುಗಿಲಿಸೊಡ್ಡಿನೊಲು ತುಂಬಿಗಳ್ ಝೇಂಕರಿಸು |
ತೂರ್ಯಗಳ ಒಳಿವಿಡಿದು ಒರುತಿರಲ್ಕಗ್ಮನಕೆ |
ಪೆರ್ಮೆಯೊಳ್ತದ್ಗಂಗೆ ತಲೆಗೆದರಿತೋರ್ಪಳನೆ ಕಾಣ್ಬಡಿಸಲುತ್ಕರ್ಷದಿ ||
ನೀರ್ಮತ್ತೆವೆಗ್ಗಳಿಸಿ ರಾವಣನ ದಶಶಿರವ |
ಕೂರ್ಮೆಯಿಂದೊದೆದೊದೆದು ಕುಪ್ಪಳಿಸಿ ನಡಯುಲ್ಕೆ |
ಮಾರ್ಮಲೆತು ತಟ್ಟಳಂ ಬಾಡಿನಕಡುಹಿಸಿಂ ಬಂದೆದ್ದು ಸಿಟ್ಟಿಸಿದನು ||

ಕಾರಿದುವು ಕಣ್ಗಳುರು ಸರ್ಗಿಡಿಯ ಪೊಗೆಯುಮಂ |
ತೋರ್ಪುದುವು ನಾಸಂಗಳುದ್ರೇಕ ಕುದಿಗೊಂಡು |
ಮೋರೆಗಳ್ ಕೆದರಿರುವು ಸಿಗುರೆದ್ದು ಮೀಸೆಗಳ್ ರಾವಣಂ ರವಣೆಯಿಂದೆ ||
ವಾರಿಧಿಯ ಮಧ್ಯದಿಂ ಮೈನಾಕಭೂಧರಂ |
ನೇರದಿಂದೆದ್ದುದೆನೆ ಬಳಸೆದ್ದು ಕೂಲಮುಂ |
ಸಾರುತ್ತೆ ಶೌರ್ಯದಿಂದಬ್ಬರಿಸುತರಿಪಿದಂ ಮುಳಿದು ಶುಕಸಾರಣಗೆ ||

ಮೆರೆವ ಮಧುಮಾಸಮಿದು ವರ್ಷರ್ತುವಲ್ಲಲೇ |
ಬೆರಗಿದೇನುಕ್ಕಿದಂ ತೈತಂದು ಪೆರ್ಜಲಂ |
ಪರಿದುಕ್ಕಿ ತಕ್ಕುತಿದೆ ಮುಟ್ಟಿ ವಾರಾಧನಯು ನೊಂದಲ್ಲದೆರಡುವೇಳೆ ||
ಪುರುಷನಳಿದಂಗನೆಯ ಗರ್ಭದಂತೊಳಗೊಳಗೆ |
ಕರಗಿಪೊರ ಸೀರಟ್ಟಿ ಪೋದುದೆಲೆ ಸಾರಣನ |
ವರಸರಿನ್ಮೂಲದೊಳ್ತಡೆದೈದೆ ಬಿಡುತಿಹುಕರ್ಕಟಕಿಗಳ್ ನೋಡೆಂದನು ||

ಹರಿಯಾಗಲಜನಾಗಲಿಂದ್ರಾದಿದೇವರ್ಕಳ್ |
ಖುರಗನರಕಿಂಪುರುಷರಾರಾದರಲ್ಲಿಹರ್ |
ಕೊರಲನರಿದೀಕ್ಷಣಂ ತಹುದೆಂದು ದಶಗಳಂ ಕಡುಗಿ ಶುಕಸಾರಣಗ್ಗೆ ||
ಬಿಸಿಸಿಂದುಸಿದ್ಧೈರದೆ ಪೇಳ್ಕೊಡಲ್ಬರಿದವರ್ |
ಭರದಿಂದೆ ನೋಡಲ್ಕೆ ನಾಗನಂ ಮುಟ್ಟಗಿದರ್ |
ತಿರುತಿಪ್ಪರ್ ತಟಿಸಿ ಪರಿಶೋಭಿಸಿದುರಿವರಿಸೂಕ್ಷ್ಮನ ಜನಲಾದಂದದ ||

ಪಲ್ಗಡಿದು ರೋಷದಿಂದಾಗಿವರ್ ತಗರಂತೆ |
ಕಲ್ಗರಿಗಳಿಂದಿಡುತೆ ತಾಗಿದರ್ಪ್ರಾತಿಸಿಯು |

ಮೇಲ್ಗಡೆಯೊಳೊತ್ತಿಪಿಡಿಯುತ್ತೆ ಘಡ ಬಿಡುವನಾರ್ ಮತ್ಪತಿಯ ಶಿವಪೂಜೆಯುಂ ||
ಮುಳ್ಗಿನ್ನು ವಿಪರೀತ ವಾದುದವನೆಲ್ಲಿಹಂ |
ತೋಳ್ಗಳಂತರಿದೊಡಲ ಸೀಳ್ದಪೆವು ಭಳಿರೆನಲ್ |
ಬಿಲ್ಗೊಂಡು ತಮತಮಗೆ ಸೈನಿಕರ್ಕಡಿಗೆದರಿ ಸಿಡಿಲ್ಗಳಂತಿಂತೆಂದರು ||

ಕಡಿದಿಳುಹು ಬಾಯ್ಬಡುಕ ಮೂಳರವರುಗ್ಗಡದ |
ನುಡಿನುಡಿವ ರಸನೆಗಳ ನುಗಿಕಿಳ್ತು ತತ್ಪತಿಯ |
ಸಡಗರದ ಶಿವಪೂಜೆಗಾಯ್ತು ಗಡ ಜಡಮಯಂ ಕ್ರೀಡಾಪಸೋದತ್ವದಿಂ ||
ನಡುರೊರೆಯೊಳೊಲಪಿನಿಂ ಪವಡಿಸಿಹ ರಾಜನಂ |
ಪೊಡೆಯ ಸೀಳ್ದಪರಂತ ಕುನ್ನಿಗಳ್ತಾನೆತ್ತ |
ಸಿಡಿದಲೆಗಳೆತ್ತೆನುತ ಬಲನುಳ್ಳಿ ಮುತ್ತಿತುದು ಸರಲ್ಗಳಿಂ ರಕ್ಕಸರನು ||

ಝೊಂಪಿಸೆ ಕಳೇಬರವ ಶುಕಸಾರಣಾಂಕರ ಪ |
ರಂಪರೆಯ ಸರಲ್ಗಳಿಂದೇರ್ವಡೆರು ಕೆಲಸಿಡಿರು |
ಕಂಪಿಸುತ್ತೈತಂದು ರಾವಣಾಂಗತ್ತ ಪಜ್ಞಾಪಿಸಿದರೆಲೆಯಾಳ್ವನೇ ||
ಸೊಂಪಿನಿಂ ಕಾರ್ತವೀರ್ಯಾರ್ಜುನನದೆಂಬವಂ |
ರಂಪದಿಂ ನೀರ್ತರುಬಿ ಬಿಡುತಲ್ಲಿ ನಾರಿಯರ |
ಲಂಪಟದೆ ಕ್ರೀಡಿಸುತ್ತಿರ್ದಪಂ ಬಲದೆ ಪರಿವೇಷ್ಟಿತಂ ನದಿಯೆಡೆಯೊಳು ||

ನಿರ್ಭೀತಿಯಿಂದೆಸಗಿ ನಾವವರನುರುಬಲ್ಕೆ |
ದುರ್ಭಾಷೆಯಿಂದವ ದೂರ್ಷಿಸುತ್ತೆಮ್ಮಸೆಯೊ |
ಳಾರ್ಭಟಿಸುತೀ ಪಥದೆ ಸದೆದರಂದಕ್ಕೆ ಶುಕಸಾರಣಾರ್ವಿಜ್ಞಾಪಿಸೆ ||
ನಿರ್ಭಾಗ್ಯ ಪೌರುಷರ್ಕಲಿಕೆ ನಾರಾಸಿರ್ಪ್ಪ |
ಪೆರ್ಬುಲಿಯು ತೋರವನ ಕಂರವುಂ ಕಡಿದಿಕ್ಕು |
ತಿರ್ಬಿಯಮೆಟ್ಟುವೆಂ ವೂರ್ಬಲವದೆಲ್ಲೆನುತೆ ರಾವಣಂ ಮುಳಿದೆದ್ದನು ||

ಸಿಡಿಲೆಗಿಪೊಷೆವಂತೆ ದಶಮುಖಂಬೊಬ್ಬಿಡುತೆ |
ನಡೆತರಲ್ಮುಂಗಡೆಯೊಳಿರೆ ಸೇನೆ ಕಡಲಂತೆ |
ಮೃಡನ ಪಣೆಗಣ್ಣುರಿಯ ಪರಿವೇಷವೆಂಬವೊಲ್ ಲಕ್ಷ್ಮಾಣ್ಬಡಿಸೆ ಪುಗುತಿರ್ದನು ||
ಒಡೆದುರಿಬ್ಬಗೆಯಾಗಿ ನೃಪಸೈನ್ಯಮತಿಧರ |
ತಡೆದೊಡನೆ ಹುಡಿಯಾಗಲಾ ವರೇಣ್ಯಾರ್ಜುನಂ |
ಘುಡಿಘುಡಿಸಿ ಪಡಿಬಲದೊಳೈದಿದಂ ಪೀನುರುಬಿ ಬರವೆತ್ತ ತಿಳಿಪೆಂದೆನೆ ||

ಆರಿಂಬೆ ಬರವೆತ್ತದುಸುರೆಂದು ನಮ್ಮನೇ |
ಕಾರೊಡಲ ಯಮ ಸದೃಶ ರಾವಣನ ಕಜ್ಜಮಂ |
ಕೂರಲಗ ಕೇಳೆಂದು ತೋರಿದಂ ತೂರಿದಂ ಜಂಭಾರಿ ಮಳೆಗರೆವವೋಲ್ ||
ಹೋರಿದರ್ಪಿಂದೆಗೆಯದಿದಿರೇರ್ದರ್ ಚಿತ್ರಾಂಗ |
ಚೀರಿದಂ ಬಾಣಂಗಳವ ರಿಪ್ಪರಾರ್ಭಟೆಯು |
ತೀರದೊಳದಂಕುರಿಸೆ ಕಾರ್ತವೀರ್ಯಾರ್ಜುನಂ ಕ್ರೀಡೆಯುಳಿದಾಲಿಸಿರನು ||

ಕಲಕಲಮದೇನತ್ತ ಬಲುರವಂ ಬಲದೊಳಂ |
ಮೊಳಗುತಿದೆ ಬಳಿಕದಂ ಬೆಸಗೊಳ್ವ ಬಾಲಕಿಯ |
ದಲಸದಿರ್ ತನ್ನಾಸಂ ತನುಲತೆಯುದಾನಹಿಂ ತೋಳಿನ್ನು ಮಾಣೆಸುತ್ತೆ ||
ಲಲನೆಯುರ ಮೋಳದಿಂ ಕಾರ್ತವೀರ್ಯಾರ್ಜುನಂ |
ನಲವಿನಿಂದಾಗೆದ್ದು ದಿವ್ಯವಸ್ತ್ರಾಭರಣ |
ಗಳನ್ನೆದೆ ಕೈಕೊಂಡು ನಿಜನಗರಿಗನಿಬರಂ ಬೀಳ್ಕೊಟ್ಟು ಪೊಲ್ಗೊಂಡನು ||

ಕಾಲಾಗ್ನಿರುದ್ರನಂತಾ ತರಂಗಿಣಿಯುಳಿದು |
ತೂಳದಿಂ ಮೈದೋರ ಲಾವರೇಣ್ಯಾಂಕನುಂ |
ಸೋಲಿಸಿ ದಿರೇರಿದಂ ರಾವಣಂ ಚಿತ್ರಾಂಗಮಂ ಬೇಸೆ ವೀರ್ಯಾರ್ಜುನಂ ||
ಕಾಳಗಕೆ ನಿಲುಕಿರಂ ಮತ್ತ್ರಾಣಲಿಂಗಮಂ |
ಮೇಲೆ ಜಲಮಂ ಕಟ್ಟಿಬಿಟ್ಟದಂ ಕಳೆವಲಾ |
ಪಳಿಲವೆ ತ್ರೈಲೋಕ್ಯವೀರನಾಂ ಕೊಳ್ಳೆಂದು ಮುಸುಕಿದಂ ಪಿಶಿಖಂಗಳಾ ||

ಕಂಡನವನೆರ್ದೆಯೊಳಗೆ ಬೆಳಗುವುಪವೀತಮಂ |
ದಿಂಡೆಯಿಂಬಾಡ ಬನೆನುತ್ತವನ ತಲೆಗಾಯ್ತು |
ಗಂಡುಗಲಿ ಕೃತವೀರ್ಯನಾತ್ಮಜಂ ಒಗಲೊಡಾಂತಸುರನಂತಿರುಗಲೊಡನೆ ||
ಬೆಂಡೆಂದು ಜೆಲ್ಲಿದುರು ಚಾಪಲಂ ಹಾರೈಸಿ |
ಗೊಂಡೆಯುದೆ ಮಂತ್ರಿಸಹಿತಂದುಪರಿವೇಷ್ಟಿಸಲ್ |
ಘಂಘಣಾರ್ಭಣಾರೆಂದು ಮೊಳಗಿದುವು ರಣವಿಜಯಭೇರಿಗಳಬ್ಬರಯಿಂದೆ ||

ಸಾಲ್ಕುದುರೆತೇರಾನೆ ಗೊಂದಣಂಗೊಳುತ್ತೈದ |
ಒಲ್ಗಯ್ಯನೃಪವರಂ ನಡೆಗೊಳಲ್ಕಕ್ಷದೊಳ್ |
ತೇಲ್ಗಣ್ಣೊಳಂದುಸಿರ ತೆಗೆಬಗೆಯೊಳಮರಾರಿ ಬಸವಳಿದು ಶಶಕವಂತೆ ||
ಪಲ್ಗಿರಿಯುತೆಸೆದರಲ್ ಮೇಲೆದಿನಪಂ ಕಾಣಾ |
ತೇಳ್ಕುದುರೆಯವನಲ್ತೆ ಶಶಿಕುಲಂ ಬಲ್ಲಿದಂ |
ಕೋಳ್ಗೊಂಡು ಪಿರಿಯದಿರನೀಗುತ್ತಮಂ ಸರಿವುದೆನಗೆಂದು ಪಡುವೀರನು ||

ಚರಮಗಿರಿಮಸ್ತಕದ ಮಣಿಯಂತೆ ಕಣ್ಗೊಳಿಸ |
ತರಣಿತಾನಸ್ತಮಂ ಪೊರ್ದೆ ಕಾರ್ಪಿರಿಯಂದು |
ನೆರಳ್ಗೊಂಡುದಾಪರಿಸುತ್ತೇ ಕೈಸೆಯೊಳಿರ್ತಿದುವು ಧರೆಧರೆಯಿ ತನಿನೆಳಗಿನಾ ||
ಉರುತರಜ್ಯೋತಿಗಳ್ ಕ್ಷೇತ್ರಗಳ್ ತಳಿತಂತೆ |
ಮೊರೆವನಾನಾವಾದ್ಯ ಘೋಷದಿಂ ಸಾಸದಿಂ |
ಬಿರುದುಗಳನುಚ್ಚರಿಪ ಪಾಠಕರ ಕಳಕಳದೊಳರ್ಜುನಂ ಬರುತಿರ್ದನು ||

ಇಂತು ತನ್ನ ಧಟಸಿಂ ನಡೆಗೊಂಡು ನಗರಮಂ |
ಕಂತುಹರನಂತೊಡನೆ ಭರದೆ ಪೇರ್ದಾರ್ಜುನನು |
ಮಂತ್ರಸ್ವರಿತದಿಂ ದಶಿಗಳನ ಸಹಿತ್ತೈದೆ ಗಮಕದಿಂ ಪೊಕ್ಕುಬಳಿಕಾ ||
ನಿಂತಲ್ಲಿ ಪಿಳನ ಕಾರಾಗೃಹಸೊಳಪುಗಿಸು |
ತಂಬ ಘನವಜ್ರದಾಸಿಗಳಮಂ ಕಾಲ್ಗಳ್ಗೆ |
ತಾಂ ತುಡಿಸಿ ಬೂಬ್ಬೂರ ಲಕ್ಷ್ಮೀಶನುತ್ಸವದಿಂ ನಿಜಭವನಮಂ ಪೊಕ್ಕನು ||

ಕವನಶೈಲಿ

೪ನೆಯ ಸಂಧಿ–ಪದ್ಯಗಳು ೧೬–೨೧

ಪ್ರಭಾತಕಾಲ ಮತ್ತು ಹಾಮುಗುಪುರ ವರ್ಣನೆ

ಭೂಕಾಮಿನೀಮಣಿಯು ತಾಂ ನವಸುಂದರಮಂ |
ಪಾಕರ್ಗಟಂದೆ ಲೇಪಿಸುತ ಪಸುರುಡುಗೆಯಂ |
ಜೋಕೆಯೊಳಗಿದ್ದಪಳದೆಂಬಂತೆ ಕಳವೆಗಳ್ಪಾಂಬಣ್ಣ ದುರು ಫಲದೊಳು ||
ಕೋಕನದ ಕಾಸಾರದಾರಾಮದೆತ್ತಲುಂ |
ಶ್ರೀಕರದ ಪರಿನೇಷನೊಡನೆಯ್ದುಬಟ್ಟಗಿರೆ |
ಕೋಕಿಲಗಳುಲುಹಿಸಿಂ ಪಾಮುಗುಯುರುತಿರ್ಪರಲ್ಲಲ್ಲಿ ಸುಳಿದಾಡುತೆ ||

ಕರವಾದವಕ್ಷೋಜ ಮುಖಿಗಳ್ಗೆ ಪಂಕಜಂ |
ಸುಸವೆ ಂದಳಗಳುರೆ ಸೂಚಿಸುತನುತ್ತರಿತ |
ವರನೇತ್ರ ಕೈರವಗಳೊಳ್ಗೂಡಿ ಕೊಂಡೆಯುವ ಶ್ರುತಿಗುಪೆ ಪಾಮರಿಯರು ||
ಸ್ಮರಪಕ್ಕ ಸೂಕ್ಕಿವಿಭವೇಳ್ಗೆಯಂತರಸುತಂ |
ಬೆರವಿರಟ ಮೂಲಮಂ ಕಿತ್ತ ಧೃಕಿಡುವರೆನೆ |
ನೆರ ಕಳವೆಗ್ಗತಪ್ಪ ಪಕ್ಕಿಗಳನಬ್ಬಮೂಲಂಗಳಿಂದಡುರುದ್ದರು ||

ಗಿಡುಗನಂತಬ್ಬರಿಸಿ ಗಿಣಿಗಳಂ ಪಾರಿಸುವ |
ರಡಿಸಿಟ್ಟರಸ್ನಿಗಂ ಗುಬ್ಬಿಗೋಲವಂಕಮಂ |
ನಿಡುಕೇಶಪಾಶವಂ ಮಿಗೆಬೀಸಿ ಬೆದರಿಸುವರೊಮ್ಮೊಮ್ಮೆ ದೊರೆವಕ್ಕಿಯು ||

ಬೆಡಗಿನಿಂಬಣ್ಣದುಟಿ ಕೊಳಲೂದಿ ಬೆಚ್ಚಿಸುವ |
ರೆಡೆಯಾಡುತಿರುತಿರ್ಪ ಪಾಂಥರಂ ಕಣ್ಗೊನೆಯ |
ಕಡುನೋಟದಲುಗಿನಿಂ ಚಿಟಿಕಿಸುವ ಪಾಮರಿಯರಿಹ ಸೊಬಗರೇವೇಳ್ವೆನು ||

ನೋಡುತಾಗವರ್ಗಳಂ ಮುಂದೆ ದತ್ತಾತ್ರೇಯ |
ರೂಢಿಯಿಂದಯನವಂ ಪಿಡಿದೆಸೆಗಸದೃಶವಾ |
ಯ್ಯಾದಶೇನಾಪ್ರಪಾನಿಳಯಂಗಳೊಂದೆಡೆಯೊಳಿರೆಚೂತವೃಕ್ಷಂಗಳಾ ||
ಜೋಡಣೆಯ ಸುಚ್ಛಾಯ ಶೈತ್ಯದಿಂದಿರ್ದೆಸೆಯ |
ವೇಢೈಸಿಕೊಂಡೊಡನೆ ಚಂದನಸುಗಂಧಿಸಿಯ |
ರೂಡಿಸುವರಂದಲ್ಲಿ ಪರಿಮಳಸುವಾರಿಯಂ ಪಥಿಕರ್ಗೆ ತೃಷೆಯಡಗಲು ||

ವಿಮಲತರುವಲ್ಲರಿಯ ಸೌರಭದನುಣ್ಣಿಯ |
ರಮಣೀಯವಾಕ್ಸ್ನಿಧಿಯ ಲಾವಣ್ಯರಚನೆಯಿಂ |
ತಮತಮಗೆ ಪಥಿಕರನು ಸೆರೆಗೆಯ್ವ ನೇತ್ರಂಗಳಿಂ ಪ್ರಪಾಸುಂದರಿಯರಾ ||
ಸಮುಖದಿಂದಾಘ್ರಾಣಿಸುತೆ ಪೀರ್ದುವಿಗೆನೋಡಿ |
ಮಮತೆಯಿಂ ಮಿಗೆ ನಲಿಯುತಾವಗಂ ಕರಣಗಳ್ |
ಭ್ರಮೆಗೊಂಡು ಸಾವಿನಾಪ್ಯಾಕ್ಯೈದಿಸುತ್ತಿರ್ಪುವೆನೆ ಒಪ್ಪರುದವನಪೇಕ್ಷಿಸಿ ||

ವಿಧುಬಿಂಬವಕ್ತ್ರೆಯರ ಮೃದುಪಾಣಿಕಿಸಲಯಾ |
ಸ್ಪರದಿಂದೆ ಶೋಭಿಸುವ ಶಶಿಶಿಲಾಕೃತಕಲಶ |
ಮೃದುಕರರಕಮಲವಂ ಬರಿದಾಗದಂತೆರೆಯುತಿರಲಾವಗಂ ಒರ ತೆಬರುತೆ ||
ಚದುರಿನಿಂದಾಶ್ರಯಿಸಿಕೊಂಡು ಸೀರ್ಪುದಿವ ಪಾ
ಹ್ಯಯರ್ಕಳಕ್ಷಿಗುರೆ ಕೋಮಲಿಯರಕ್ಷಿಗಳ್ |
ಪದರಿನಿಂದಂಜುಳಿಗಳಲ್ಸೆಯೆ ಪೆಲ್ಲರ್ಪಿಪಾಸ್ಸೆಯಿಂದುಷ್ಟಿಸುತೆ ||

ಶಿಶಿರ ಋತುವರ್ಣನೆ

೨ ನೆಯ ಸಂಧಿ—ಪದ್ಯಗಳು ೪೧—೪೨

† ವನಲಕ್ಷ್ಮಿಯುಂ ತಾನ ‡ ಪರ್ಣೆಯಾಗಿರೆ ಕಂಡು |
ತನುಮನೋಲ್ಲಾಸದಿಂ § ವರನೀಲಕಂಠನಿರೆ |
ಮುನಿಸಿನಿಂದಾ ತುದಿ ಸುಪರ್ಣಸುಸ್ವರಣೆಯೆಡೆ ಳ್ತುಹರಿಸಲ್ಕಾಕಾಲದಿ ||
ಕನಸಿನುತ್ಸಾಹದಂತಾ ಕುಳಿತೋರ್ವರಡಗು |
ತನವರತ ದೀನರಂತೆಸೆಯುಲ್ಕೆ ದಿನದಿನಕೆ |
ದಿನಪನುತ್ಕೃಷ್ಟಕರ ಕಂಜಕಧಯಂಗಳಂ ಕುಡುತಿರ್ದನಭಿಮಾನಿಸಿ ||

† ವನದೇವತೆ, ಲಕ್ಷ್ಮಿ, ‡ ಎಲೆಗಳುದುರುವುದು, ಪಾರ್ವತಿ § ನವಿಲು, ಈಶ್ವರ

ಮಾಗಿಯಂ ಕಸಗಳೆದು ಚೈತ್ರನಂ ಬಲಗೊಳುತೆ |
ಕೋಗಿಲೆಗಳುಪಚರಿಸು ತಬ್ಬಗಳ ನಿಗುಚುತ್ತೆ |
ಸೋಗೆಗಳಸರಗೆಯ್ಯು ತಳಿಗಳಂಕರೆಯಿಸುತೆ ಪರಸುತ್ತೆ ವೃಕ್ಷಂಗಳಾ ||
ಲಾಗಿನಿಂದಾಗೊಗೆದ ಶಿಶಿರರ್ತು ಜನಮನ |
ಕ್ಕಾಗರುವರಪಿಶಿಗಳೊಂದೆ ಸಮಧಾತುವಿಂ |
ತೂಗಿ ಮಿಗೆತೋರುತಂ ನಲಿಗೊಳಲ್ಮರುಗಿದಂ ಭರತನುಂ ನೆನೆದಾರ್ಯನಾ ||

ಚಂದ್ರೋದಯವರ್ಣನೆ   (ಉತ್ಪ್ರೇಕ್ಷಾಲಂಕಾರ

ಸಂಧಿ ೬ ಪದ್ಯಗಳು ೨೧--೨೬

ಕಾಕುತ್ಸ್ಥ ಕೇಳ್ಮಂದೆ ಕಾರ್ತವೀರ್ಯಂ ಪುರವ |
ಜೋಕೆಯಿಂದೊಳವುಗಲು * ರಾಜಕುಲದವರೇಳ್ಗೆ |
ಲೋಕದೊಳ್ಪ್ರಜ್ವಲಿಪುದಿನ್ನೆಂದು ದಿನಪನುಂ ಮನದೊಳಂ ಸಂಕೋಚಿಸಿ ||
ವ್ಯಾಕುಲಂಗೊಳುತೊಡನೆ ಮಿತ್ರರಂ † ಪಟ್ಟಗಲಿ |
ಸಾಕಿನ್ನು ಸಂಸಾರ ಸಂಚಾರಮೆನಗೆಂದು |
ಶೋಕಿಸಿಂ ಪರಿಗೊರೆಯುಲಬ್ಧಿಯಂ ಪೊಕ್ಕನೆನೆ ಮುಳುಗಿದಂ ಪಡುಗಡಲೊಳು ||

ಹರಿನೀಲ ‡ ವರ್ಣಮಂ ಪರಿಹರಿಸಿ ವಿಶ್ವಕ್ಕೆ |
§ ಹರನ ತನುಮಂಗಳಸ್ಫುರಿತ ಶುಭ್ರಾಂಶುಸಂ |
ಗುರುಕೃಪಾವೃಷ್ಟಿಯಿಂದೀ ಕಾರ್ತವೀರ್ಯನುರೆ ತುಂಬಿಸಿದನೆಂಬಂದದಿಂ ||
ಕರುಮಾಡದೊಳಗಿರ್ಪ ಕೋಮಲೆಯರೆಳನಗೆಯು |
ಸಿರಿದೆರೆಗಳೆಂಬವೋಲ್ ಜನಮನೋಲ್ಲಾಸದಿಂ ||
ಪರಿಶೋಭಿಸುತ್ತಿರ್ದುದಷ್ಟದಿಕ್ತಟಂಗಳೆಂದಿಂಗಡಲ್ ಪೊಂಗಿತೆನಲು ||

ದ್ವಿಜಗಣಪೋಷಿತಂ ದ್ವಿಜನಿಕರಕಧಿನಾಥ |
ಕುವಲಯಪ್ರಿಯ ಮೇಲೆ ಸಲೆನಿಶಾಕರರಾಜ |
ನವೆರುವುತ್ತಭಿವೃದ್ಧಿಯಾಗುತಿರಕಾಂತನುಂ ಸುಖದುಃಖಗಳೊಲ್ಲವಂ ||
ರವಿಯನ್ನ ಕೂಲಲೆಂದು ಬೆನ್ನಟ್ಟಿ ಬರುತಿಹಂ |
ಕವಡಿಲ್ಲದುಳುಹೆಂದು ಕೊಂಡಾಡಿ ಚಂದ್ರನಂ |
ದ್ರವಗುಂಡಿ ಬಸುರನಾಸಿಕೆ ಪೊರಿಷೆಂಬಂತೆ ಲಾಘವಂ ಕಾಣಿಸಿದುದು ||

---

* ಚಂದ್ರವಂಶದವರ ವೃದ್ಧಿ † ಸ್ನೇಹಿತರಾದ ಕಮಲಗಳನ್ನು ಚಂದ್ರನಿಗೂ ಸೂರ್ಯನಿಗೂ ವೈರವಾದುದರಿಂದ ಚಂದ್ರನ ಕುಲದವರಿಗೆ ಏಳಿಗೆಯುಂಟಾಗುವುದರಿಂದ ಸೂರ್ಯನು ಅದನ್ನು ಸಹಿಸಲಾರದೆ ಮಿತ್ರಗಳಾದ ಕಮಲಗಳನ್ನೂ ಬಿಟ್ಟು ಮನೋವ್ಯಥೆಯಿಂದ ಸಮುದ್ರದಲ್ಲಿ ಮುಳಿಗಿದನೆಂಬ ಭಾವವು.
‡ ವಿಷ್ಣುವಿನ ಮೈಯ್ಯ ಕಪ್ಪುಬಣ್ಣ, § ಈಶ್ವರನ ವರ್ಣ (ಬಿಳುಪು)

ಪುತ್ರನಸ್ತ್ರಮಿಸಲ್ಕೆನಲಿವನೊ ಗುರುದ್ರೋಹಿ |
ಪುತ್ರನಿಗೆ ಪಗೆಯಾಗಿ ಬೆಳಗುವಂ ಪರಿಕಿಸಿ ಧ |
ರಿತ್ರಿಯೊಳ್ ರಾಜಿಪಂ ಪರಿವಾರಮೆನ್ನಂಬುದಚ್ಚರಿಯೆ ಕುಮುದಂಗಳುಂ ||
ಶತ್ರುತ್ವದಿಂದೆಮ್ಮನತಿಗಳೆಯುತೀಗುರಿ ಎ |
ಚಿತ್ರದಿಂದೇಡಿಸುವುವಾ ಮಧುಪಸಂಘದಿಂ |
ನೇತ್ರಮೊಳ್ಕಿಟ್ಟಿಸಲ್ಬಾರದೆಂದಂಬುಜಂ ಮುಗಿದಿರ್ಪುವಾವೆಡೆಯೊಳು |

ಲೋಕದೊಳ್ ಪರಿಶುದ್ಧನಾಗಿರ್ಪನಾರವಂ |
ರಾಕಾಸುಧಾಕರಂ ಚಾರುಗಡ ಕಮಲಗಳ್ |
ಮೇಕೆನಿಂತಾಂಚರಿಯುತೆಮ್ಮುಮಂ ನಾಚಿಸುವುವೇಗೆಯ್ದು ದಿನನಾಥನು ||
ತಾ ಕಡೆಗೆ ವಾರುಣೀ ಸೇವ್ಯನಾಗಾಶೆಯುಂ |
ಸ್ವೀಕರಿಸಿ ಮುಳುಗಿದಂ ನೋಡೆಂದು ಕೈರವಂ |
ಕೋಕನದ ನಿಕರಮಂ ಮೂದಲಿಸಿ ನಗುತಿರ್ದುವನ್ನೆಗಂ ಕೌಮುದಿಯೊಳು ||

ಪೊಡವಿಯೊಳ್ ಸರ್ವರ್ಗೆ ಹಿತಕಾರಿಯಾಗ್ಯದೆ |
ನಡೆವರಾ ರೀತಿರದೊಳಬ್ಧಿಯೊಳ್ಪುಟ್ಟಿದಂ |
ಮೃಡಗೈದೆ ತಲೆದುಡುಗೆಯಾದವಂ ಹಿಮಕರಂ ತಾಂ ಬೇಗ ಕೈರವಕ್ಕೆ ||
ನಿಡುಲತೆಯ ಸಂಕುಳಕೆ ಪೊಲ್ಲಮಲ್ಲಿಗಗಳ್ |
ಬೆಡಗಿನ ಚಕೋರಿಗಳ್ಗಮೃತೋಪಮಾನವಸಾ |
ಯ್ತೊಡನೆ ಶತಪತ್ರವನ ಜಾರಚೋರರ್ಗ್ಗಿರವ ವಿಷವಾಗಿ ಕಾಣ್ಬಡಿಸಿತು ||

೫ ನೆಯ ಸಂಧಿ, ಪದ್ಯ ೧೬ ೨೪

ರಾಜಧರ್ಮ.

ಬಲ್ಲಿದಂ ಕೃತವೀರ್ಯಭೂಪನಿಂತೀಧರೆಗೆ |
ಬಲ್ಲಿದಂ ಮೇಣಾತನುದರಾಂಬುನಿಧಿಯೊಳಗೆ |
ಬಲ್ಲಿತುರುಗುಣಗಳಂ ತಳೆದುಕೊಂಡುದಿಸೆ ನೀನತ್ಯಧಿಕನಿರದದರೊಳು ||
ಬಲ್ಲಿತಹ ಮಂತ್ರೋಪದೇಶಮುಂ ಬಿಲುವಿದ್ಯೆ |
ಯೆಲ್ಲ ಕೇಳ್ವಶವಾದುವಿನ್ನಿದರಮೇಲೆಂತು |
ಸಲ್ಲಲಿತವಾಕ್ಯದಿಂ ಪೊರೆವೆಯೋ ಕೊರೆವೆಯೋ ಲೋಕಮಂ ಪೇಳೆಂದನ. ||

ಮಣಿಗಧಿಕಮೆನ್ನುಂಟೆ ಹರಿನೀಲಮಣಿಯು ಸ |
ದ್ಗುಣವನೀಕ್ಷಿಸಿದಲ್ಲಿ ತೃಣವ ತಾಂ ಪೊತ್ತಸೆವು |
ದಣುಗಕೇಳ್ ನಡೆವಳಿಯೊಳದರಪರಿಯಂತಿಹುದು ತೃಣವಾಗಲದಕಳಿಯದೆ ||

ಪಣಗಳರಿತ ರಿತವರ ಪ್ರೇಷಿಸುವುದಿದಿರಾಗಿ |
ಸೇನಸಲ್ಕೆತಂದವರು ಯುಮ ಶನಿಗಳಾದೊಡಂ |
ಪಣೆಯುಕ್ಕರಂದೊಡೆವುದದಕದೇ ಸದ್ಧರ್ಮನೃಪನೀತಿ ಕೇಳೆಂದನು ||

ಜ್ಞಾನಿಗಳೆನಿಪ್ಪವರ ನಿಂದಿಸದೆ ಬಂಧಿಸದೆ |
ಹೀನರಜ್ಞಾನಿಗಳ ನೀಕ್ಷಿಸದಪೇಕ್ಷಿಸದೆ |
ನೀನೆಗತಿಯೆಂಬವರ ಲಂಘಿಸದೆ ಭಂಗಿಸದೆ ಬಡವರಂ ಮೋಸಡಕದೆ ||
ಮೌನಿಸಂದೋಹಮಂ ಪೀಡಿಸದೆ ಬಾಧಿಸದೆ |
ಮಾನಿನಿಯರೊಳಗೊಳಗುಸೂಚಿಸದೆ ಯೋಚಿಸದೆ |
ಪ್ರಾಣಿಯಂ ಕೈಯಾರ ಬಾಧಿಸದೆ ಛೇದಿಸದೆ ಚಂದದಿಂ ಮುಂದಾಳ್ವುದು ||

ಹಿರಿಯರೊಳ್ ಭಕ್ತಿಯಂ ಧುರದಲ್ಲಿ ಶಕ್ತಿಯಂ |
ಕರದಲ್ಲಿ ಒಲ್ಮೆಯಂ ಶರಣರೊಳ್ನಲ್ಮೆಯಂ |
ನೆರೆಯರೊಳ್ತುಷ್ಟಿಯಂ ಗರುವರೊಳ್ ದೃಷ್ಟಿಯಂ ಸರ್ವರೊಳ್ನಯುಭಯಗಳಂ ||
ಪರರಲ್ಲಿ ಮರ್ಯಾದವುಂ ವರರಲ್ಲಿ ಧರ್ಮವುಂ |
ನೆರೆವಲ್ಲಿ ಸರಸವುಂ ತೊರೆದಲ್ಲಿ ವಿರಸವುಂ |
ಚರರಲ್ಲಿ ಲಾಲನೆಯ ಸುರರಲ್ಲಿ ಪಾಲನೆಯ ಬಿಡದಂತೆ ನಡೆಕೊಳ್ವುದು ||

ಗೋದಾನ ಭೂದಾನ ಧನದಾನ ಮನ್ನದಾ |
ನಾದಿಯಾದಿತರವಂ ಯಜ್ಞಾದಿಷಟ್ಕರ್ಮ |
ವೈದಿಕವಿಧಾನದಿಂ ವಿಪ್ರಗುರುದೇವತಾಭಜನೆಗಳ್ಗಲಸದೆಂದುಂ ||
ಆದರಿಸುತನುದಿನಂ ನಡೆಯಿಸುವುದತ್ಯಧಿಕ |
ಸಾಧನಂ ಕೆರೆಕುಂಟೆವಾಪಿಕೂಪಂಗಳಾ |
ಮೋದಕರ ದೇವತಾನಿಲಯಮಂ ವನಗಳಂ ನಿರ್ಮಿಪುದು ಸದ್ಧರ್ಮವು ||

ಸತ್ಯಸನ್ಮಾರ್ಗದೊಳಗಾಚಾರದಯೆ ಬುದ್ಧಿ |
ಮತ್ತಿಯುಂ ಸುಜ್ಞಾನಸಾಮರ್ಥ್ಯಶಿವಭಕ್ತಿ |
ತಥ್ಯಮಾಗಿರ್ಪುದೀ ನರಸುರಾಸುರರಲ್ಲಿ ಯಾರಾದರೇಂ ಬುಧರೊಳು ||
ಕೃತ್ಯಮದು ಸುಕುಮಾರ ಧರ್ಮಾರ್ಥಕೊಡಲಾಗಿ |
ಹೆತ್ತವರನಳಲಿಸದೆ ಲೋಕಾಂಧಕಾರಮಂ |
ಮಿತ್ರನಪಹರಿಪಂತೆ ನಿರುತದಿಂದಾಳುವುದು ಪಾಪಮಂ ಪರಿವರ್ಜಿಸಿ ||

ವನದಂತೆ ಚಿಗುರಿಸುತೆ ತಳಿರ್ಗೆಂಪ ತುಟಿಗಳೊಳ್ |
ಘನದಂತೆ ಚಪಲಮಂ ಪಳಿಸುತ್ತೆ ಕಣ್ಗಳೊಳ್ |
ಮುನಿಯಂತೆ ನಿರ್ಲಜ್ಜೆವೆತ್ತು ರತ್ನಾಕರನ ರೀತಿಯೊಳ್ ರಕ್ಷಿಂಗಳಾ ||

ತನತನಗಲಂಕರಿಸಿ ರತಿಯಂತೆ ಮನ್ಮಥನ |
ನೆನಹಿನಂತಿರ್ಪ ನಾರಿಯರನಾರ್ಗೆಲ್ಲರನು |
ಮಾನವೆನಗಿರ್ಪುದೊಂದಿದನೈಸೆ ಜಯಿಸಿದೊಡೆ ಸಿದ್ಧಿಸುವುದತಿವೃದ್ಧಿಯು ||

ಗುರುಹಿರಿಯರೊಪ್ಪಿನಿಂ ದಗ್ನಿಸಾಕ್ಷಿಕವಾಗಿ |
ಪರಿಣಾಯಂ ಬಳಿಕಾಗಿ ಕ್ರೀಡಿಸುವುದತ್ಯಧಿಕ |
ಮರಿಯಾದೆ ಸದ್ಧರ್ಮ ದೋಷವಿಲ್ಲಾವೃತ್ತಿಯಂಕುರಿಸಿ ಸಂತಾನವು ||
ದೊರೆಕೊಂಡು ಕುಲಕೋಟಿಗಾಶ್ರಯಂ ತಾನಾಗಿ |
ಮೆರೆದಪಂ ಸಿದ್ಧಾಂತಮಿದನುಳಿದು ಪಾದರಿಯ |
ನರಸರಸಿ ಸರಸದಿಂ ಬೆರಸುವಂ ಬೀಳುವಂ ಭಾರಣೆಯರೌರವಕ್ಕೆ ||

ಈ ಗ್ರಂಥದಲ್ಲಿರುವ ಪದ್ಯಗಳಿಗೆ ಜೈಮಿನಿಭಾರತದಲ್ಲಿ ಸಂವಾದಿಗಳಾಗಿರುವ ಪದ್ಯಗಳು.

ಈ ಗ್ರಂಥದ **ಸಂಧಿ ೪ ಪದ್ಯ** ೨೬--ವ್ಯಾಪಾರಸ್ತ್ರೀಯರು-ತದ್ಗುಣಾಲಂಕಾರ

ಹಾಸಸಿರಿಮಲ್ಲಿಗೆಯ ಸೂಸುತ್ತೆ ಮಾಷಮಂ |
ಪೋಷಿಸುತೆ ತಂಡುಲಮಿದೀಗಿವಂ ನೋಡೆಂಬ |
ರಾಸತಿಯರೊಮ್ಮೊಮ್ಮೆ ಚೆಂದಳಿರ್ಗಳಿಂ ಕುಸುಬೆಯಂ ಪಿಡಿಯೊಳಿರಿಸಿ ||
ವೋಸಮಲ್ಲಲಸಂದೆಯೆಂಬರುಗ್ಗಡಿಸುತಂ |
ಮೈಸಿರಿಯ ಪೊಂಬಣ್ಣದಿರವಿನೊಳ್ಕಲೆತಿರ್ಪ |
ಸಾಸುವೆಯ ಮೆಂತೆಯಮಿದೆನುತುಚ್ಚರಿಸುತಂತ ತೂಗಿದರ್ಲಾಗಿಸಿಂದ ||

ಜೈಮಿನಿ ಭಾರತದ **ಸಂಧಿ ೬, ಪದ್ಯ** ೧೮—ಹೂವಾಡಿಗಿತ್ತಿಯರು.

ಮಲ್ಲಿಗೆಯಲರ್ವಿಡಿರು ಕೆಂಜಾಜಿಯಂದೀವ |
ರುಲ್ಲಾಸದಿಂದೆ ನೀಲೋತ್ಪಲವ ನೆಳನಗೆಯ |
ಸೊಲ್ಲಿಂದೆ ಕುಮುದಮೆಂದುಸಿರುವ ಸುರಹೊನ್ನೆಯರಲವಾಳಿಯೊಳೊಪ್ಪುವ ||
ಸಲ್ಲಲಿತಕಾಯದ ಸಂಪಕತ್ತಿಸುರಗಿಯಿಂ |
ದೆಲ್ಲರ್ಗೆ ತೋರಿಸುವರರುಣತಾಮರಸಮಂ |
ಚಲ್ಲಗಣ್ಣೊನೆಯೊಳೀಕ್ಷಿಸಿ ಪುಂಡರೀಕಮೆಂದೆಚ್ಚರಿಪರೆಳವೆಣ್ಗಳು ||

ದೇಶವರ್ಣನೆ, ಪರಿಸಂಖ್ಯಾಲಂಕಾರ ಈ ಗ್ರಂಥದ ಸಂಧಿ ೨೧ ಪದ್ಯ ೪

ಬಿಸಜೌಘಮುಂ ಷಂಡ (1) ನವಿಲಂ ಶಿಖಂಡಿ (2) ಮೋಹ |
ಶಶಿಯು (3) ದೋಷಾಕರಂ ಸರ್ಪನಂಬಸದು (4) ಭಯು |
ರಸನಕಕೋಟಿಳಕಂ (5) ಪಟಪಿಯುಂ (6) ಪಾಮರಂತುಂಬಿಯುಂ(7)ಮಧುಪನೆಂದು ||
ಪಿಸುಪಿಯುಂಕರ್ಬುರಂ (8) ಕದಳಿಯುಂಸಖಿ (9) ಬಾಳೆ |
ಯೆಸೆವರಂಪುತ್ರನಂ (10) ಮಂದನೆಂದೆಲ್ಲರುಂ |
ಪೆಸಗೊಳ್ವರಲ್ಲದುರೆ ದುರಾತ್ಮಕ್ಕದೂಷಣಗಳಂದೆಂಬ ನುಡಿಗಳಿಲ್ಲ||

ದೇಶವರ್ಣನೆ ಜೈಮಿನಿಯ ಸಂಧಿ ೨, ಪದ್ಯ ೯

ಕೊಡೆಯೆಂಬ ರಾತಪತ್ರವ ನುದರದೇಶಮುಂ |
ಪೊಡೆಯೆಂಬ ರೊಳಿದು ಮುಂಧನಪನಸಗೆಂಬುದಂ |
ಕಡೆಯೆಂಬರಾರಡಿಯುನಳಿಯೆಂಬ ರುದಕಪ್ರವಾಹಮುಂ ತೊರೆಯೆಂಬರು||
ಮಡಿಯುಂಬರಂಬರವ ಧೌತಮುಂ ಕಬರಿಯುಂ |
ಮುಡಿಯೆಂಬರೆಡೆವಿಡದೆ ಮುಸುಕಿರ್ದಮೇಘಮುಂ |
ಜಡಿಯೆಂಬರುರುಶಿಲೆಯು ನರೆಯೆಂಬರಲ್ಲದಿವನುಡಿಯುರವನಾಳ್ತಿಳೆಯೊಳು ||

ಜಯಪ್ರಯಾಣ, ಅನೇಕಾಕ್ಷರವೃತ್ತ್ಯನುಪ್ರಾಸ. ಈ ಗ್ರಂಥದ ಸಂಧಿ ೨೧ ಪದ್ಯ ೨೦

ಸಿಂಧಸೀಗುರಥತ್ರರಾಜಿಗಳ ವಾಜಿಗಳ |
ಸ್ಯಂದನವ್ರಜಪತ್ತಿಹಂತಿಗಳದಂತಿಗಳ |
ಸಂದಣಿಯವಾರಕರ ನಾದಗಳ ಮೋದಗಳ ಕಪಿದೇಳ್ವಕೆಂದೂಳ್ಗಳ ||
ಬಂಧಿಸುವ ಝಲ್ಲಿಗಳ ಕುಣಿತಗಳ ರಣಿತಗಳ |
ನಿಂದುಲಿವಕಹಳೆಗಳ ಬಿಂಕಗಳ ಶಂಖಗಳ |
ಚೆಂದದಿಂದೇರ್ಗಳದ ರವಣೆಯಿಂ ಪಮಣಳಿದು ಪಾಗಿದಂಸಂಭ್ರಮದೊಳು ||

---

(1) ಗುಂಪು, ನಪುಂಸಕ, (2) ನವಿಲು, ನಪುಂಸಕ, (3) ರಾತ್ರಿಯಲ್ಲಿ ಕಿರಣಪೂರ್ಣವನು-ತಪ್ಪು ಮಾಡಿದವನು, (4) ಎರಡು ನಾಲಗೆಯುಳ್ಳ, ಆಡದವಾಗಿ ತಪ್ಪುವ, (5) ಸರ್ಪದ ಹೆಸರು, ನೀಚ, (6) ಗಂಟುಗಳುಳ್ಳದ್ದು, ವೃಕ್ಷ, (7) ತುಂಬಿ, ಹೆಂಡಕುಡುಕ, (8) ಚಿನ್ನ, ರಾಕ್ಷಸ,(9) ಬಾಳೆಯಲ್ಲೊಂದುಜಾತಿ,ಮಿತ್ರನೇ ಬದುಕಲಾರೆನು, ಎಂಬ ಮಾತು, (10) ಶನಿ, ಸೋಮಾರಿ

ಜೈಮಿನಿಯ, ಸಂಧಿ ೧೦, ಪದ್ಯ ೩

ಎಸೆದುದಾ ಗಿರಿ ಗಗನಮಂಡಲವ ನಂಡಲೆವ |
ಲಸದುನ್ನತದ ಶೃಂಗದುತ್ಕರದ ಸತ್ಕರದ |
ಶಶಿಕಾಂತಮಯಮಾದ ರಮಣೀಯಕಮಣೀಯ ಕಂದರದ ಸೌಂದರದೊಳು ||
ಮುಸುಕಿ ತಪ್ಪಲ ಮೇವ ಮಂಜುಗಳ ನಂಜುಗಳ |
ದಶನರುಗ್ರಾಹಿಗಳ ಪುತ್ತುಗಳ ಮುತ್ತುಗಳ |
ಬೆಸಲಾದ ಪೆರ್ಬಿದಿರ ಕಾಡುಗಳ ಬೀಡುಗಳ ಶಬರಿಯರ ಸಂಕುಲದೊಳು ||

ಈ ಗ್ರಂಥದ ಸಂಧಿ ೨೧, ಪದ್ಯ ೨೧

ಜಯಪ್ರಯಾಣ, ಏಕಾಕ್ಷರವೃತ್ತ್ಯನುಪ್ರಾಸ

ಗಟ್ಟಬೆಟ್ಟಂಗಳುರುತಿಟ್ಟ ನುರುಮೆಟ್ಟಿಗ |
ಕ್ಕಿಟ್ಟಣಿಸು ತೊಟ್ಟಸಿಂ ಮೆಟ್ಟಿ ಜಗಜಟ್ಟಿಯುತ |
ಸೃಷ್ಟೀಶನಿಷ್ಟಗಣಾವೇಷ್ಟಿಸುತ ಒಟ್ಟಿಗಳಸಿಟ್ಟಸದೆ ನಡೆಗೊಳ್ಳಲು ||
ಹಿಟ್ಟಾಗಿ ಹುಡಿಗಟ್ಟಿ ಭ್ರಷ್ಟೆದ್ದು ಕೆಟ್ಟುದಧಿ |
ಗಟ್ಟಸೆಗೆಕಟ್ಟಡವಿದುಟ್ಟಮಿಗ ಕಟ್ಟುಮುರಿ |
ದಷ್ಟದಿಕ್ ಶ್ರೇಷ್ಠರಿತ ಪಟ್ಟಣದ ರಾಷ್ಟ್ರಗಳ ತಟ್ಟನುರೆಮೊರೆಯಿಟ್ಟುವು ||

ಜೈಮಿನಿಯ ಸಂಧಿ ೪, ಪದ್ಯ ೧೯

ಸೇನೆಯ ಪ್ರಯಾಣ

ಎತ್ತಿಬಹ ಸತ್ತಿಗೆಯ ಮೊತ್ತಂಗಳೆತ್ತಲುಂ |
ಬಲ್ಗತ್ತಿಗಳ ಕತ್ತಲಿಸೆ ಪೊತ್ತಮಸೆವೆತ್ತ |
ಕಿತ್ತು ಭಟರೆತ್ತಿ ಜಡಿವುತ್ತಿರಲ್ಕತ್ತ ಬೆಳಗಿತ್ತವವು ಮತ್ತೆ ಬಲಕೆ ||
ಸುತ್ತಲುಂ ಕೆತ್ತವೋಲ್ಮತ್ತಗಜ ಪೊತ್ತರಿಸಿ |
ಮುತ್ತಿ ನಡೆವುತ್ತಿಲರ ನೊತ್ತಿನಿಲಿಸುತ್ತಿರಲು |
ದತ್ತಹಮರೋತ್ಥಿತ ಮರುತ್ತತಿಯೊಳುತ್ತಮತುಹಿನೋತ್ತರಂ ಬಿತ್ತರಿಸಿತು ||

ಈ ಗ್ರಂಥದ ಸಂಧಿ ೨೧, ಪದ್ಯ ೨೫

ಅರಣ್ಯ-ಶ್ಲೇಷಾಲಂಕಾರ-ಮುಕ್ತಪದಗ್ರಸ್ತ

ಮೃಗಧಾರಿವೋಲ್ಶಿವಾನಂದಮಯ ಶಿವನಂತೆ |
ವಿಗಡಪಂಚಾಸ್ಯಯುತ ಪಂಚಾಸ್ಯಯುತನಂತೆ |
ಮಿಗೆಮಹಾಸ್ಥಾಣುವಾಸ್ಥಾಣುಪನ ಮಾಳ್ಕೆಯಂತಮೃತಪುಮರೀಚಿಧೃತನು ||

ಸೊಗಸಿನಮೃತವಾರೀಚಿಧೃತನಂತೆ ಶೋಭಿಸುವ |
ಖಗರಾಜಶಿಖಿನೇತ್ರ ಖಗರಾಜಶಿಖಿನೇತ್ರ |
ಮೃಗರಾಜರಾಜಿತಂ ತಾನೆನಿಸಿ ಬೀರಿದುದು ಪೆರ್ವಿಪಿನಕುಳಿ*ರ್ವೆಟ್ಟನ ||

ಜೈಮಿನಿಯ ಸಂಧಿ ೧೫, ಪದ್ಯ ೧೩

ಸರೋವರ.

ವನಮಾಲಿಯಂದದಿಂಪದ್ಮ ಪದ್ಮೆಯುವೋಲ್ಪು |
ವನಕುಕ್ಷಿ ಭುವನಕುಕ್ಷಿಯುತೆರದಿ ಹಂಸಲೋ |
ಚನಶೋಭಿ ಹಂಸಲೋಚನಶೋಭಿಯುಂತೆ ವರಚಕ್ರ ವರಚಕ್ರಿಯುವೊಲು ||
ಅನಿಮಿಷಾಶ್ರಯಮೂರ್ತಿಯು ನಿಮಿಷಾಶ್ರಯಮೂರ್ತಿ |
ಯೆನೆ ಕುವಲಯಾಧಾರಿ ಕುವಲಯಾಧಾರಿವೊ |
ಲ್ವನಮಾಲಿಯುಂತೆ ರಂಜಿಸುವ ಕಾಸಾರಮಂ ಪರ್ತ್ತಮಂಗಳೆ ಕಂಡಳು ||

ಹೀಗೆ ಇನ್ನೂ ಅನೇಕವಾಗಿವೆ.

—— 0 ——

ಕರ್ನಾಟಕ ಭಾಷೆಯ ಏಳಿಗೆಯೂ, ಅದರ ಏಕೀಕರಣದ

ಉತ್ಕೃಷ್ಟೋಪಾಯಗಳು.

ಬಾಗಲಕೋಟ ಮ|| „ಗಂಗಾಧರ” ಅವರಿಂದ

I ಪ್ರಾಚೀನ ವೃತ್ತಾಂತ

ನಮ್ಮ ಕರ್ನಾಟಕ ಪ್ರಾಂತದ ಇತಿಹಾಸವೂ ಭೂಗೋಲವೂ ನಮ್ಮಲ್ಲಿ ಎಷ್ಟೋ ಜನರಿಗೆ ಗೊತ್ತಿಲ್ಲದಿರಬಹುದು ಇದು ಸಹಜವಾದದ್ದು. ಯಾಕಂದರೆ, ನಮ್ಮ ಶಾಲೆಗಳಲ್ಲಿ ಕರ್ನಾಟಕದ ಇತಿಹಾಸ ಭೂಗೋಲಗಳನ್ನು ಕಲಿಸುವ ಏರ್ಪಾಡು ಮಾಡಿಲ್ಲ ಇತಿಹಾಸವನ್ನೇನೋ ಮುಂಬಯಿ ಕರ್ನಾಟಕದ ಶಾಲೆಗಳ ನಾಲ್ಕನೆಯ ಇಯತ್ತೆಯಲ್ಲಿ ಮಾತ್ರ ಕಲಿಸುವ ವ್ಯವಸ್ಥೆಯಿದೆ ಆದರೆ ಅದೂ ಸಮಾಧಾನ ಕಾರಕವಲ್ಲ. ಮ|| ವೆಂಕಟರಂಗೋಕಟ್ಟಿಯವರು ರಚಿಸಿದ 'ಕರ್ನಾಟಕ ವರ್ಣನೆಯೂ ಇತಿಹಾಸವೂ' ಎಂಬ ಪುಸ್ತಕವೊಂದನ್ನು ನಾಲ್ಕನೆಯ ಇಯತ್ತೆಯಲ್ಲಿ ಬಾಯಿಪಾಠ ಮಾಡಿಸುತ್ತಾರೆ. ಕರ್ನಾಟಕ ಪ್ರಾಂತವು ದಕ್ಷಿಣ ಹಿಂದೂಸ್ಥಾನದ ಯಾವ ಯಾವ ಭಾಗಗಳಲ್ಲಿ ಹಬ್ಬಿದೆ, ಅದರ ಪ್ರಾಕೃತಿಕ ಸ್ವರೂಪವೆಂತಹದು, ಕರ್ನಾಟಕ ರಾಜ್ಯದ ಪೂರ್ವ ಕಾಲದ ಐತಿಹಾಸಿಕ ವೃತ್ತಾಂತವೇನು, ಕನ್ನಡ ಗ್ರಂಥಕರ್ತೃಗಳೂ ಕವಿಗಳೂ ಯಾವ

ಅರಸರನ್ನಾಶ್ರಯಿಸಿ ಯಾವ ಯಾವ ಕಾವ್ಯಗಳನ್ನು ಬರೆದರು, ಆಗಿನ ಕಾಲದ ಭಾಷೆಯ ಸ್ಥಿತಿಯು ಹೇಗಿತ್ತು, ಅದು ಈ ಪ್ರಕಾರದ ಹೀನದಶೆಗೆ ಯಾಕೆ ಬಂದಿತು, ಕರ್ನಾಟಕ ರಾಜ್ಯವು ಒಡೆದು ಬೇರೆ ಬೇರೆ ರಾಜ್ಯಗಳನೇಕ ಹೇಗೆ ಉಂಟಾದುವು, ಈಗಿರುವ ಭಾಗಗಳು ಯಾವ ಅರಸರಿಗೆ ಅಂಕಿತವಾಗಿರುವುವು, ಈಗಿನ ಕಾಲದ ಜನರು, ಭಾಷೆಯು, ವ್ಯಾಪಾರೋದ್ಯೋಗ ಇವೇ ಮೊದಲಾದವುಗಳ ಸ್ಥಿತಿಯು ಹೇಗೆ ? ಭಾಷೆಯನ್ನು ಊರ್ಜಿತಸ್ಥಿತಿಗೆ ತರುವುದಕ್ಕೆ ಅವಶ್ಯವಾದ ಸಾಧನಗಳು ಯಾವುವು ? ಈ ಮೊದಲಾದ ಪ್ರಶ್ನೆಗಳಿಗೆ ಸಮರ್ಪಕವಾದ ಹಾಗೂ ಸುಸಂಬದ್ಧವಾದ ಉತ್ತರಗಳನ್ನು ಕೊಡುವ ಪುಸ್ತಕಗಳು ಎಲ್ಲಿಯಾದರೂ ದೃಷ್ಟಿಗೆ ಬೀಳುವುವೊ ? ಒಂದೂ ಇಲ್ಲ ಅಲ್ಲದೆ ಈ ಪ್ರಶ್ನೆಗಳು ಈಗಿನಕಾಲದಲ್ಲಿ ಕಠಿನವಾದ ಒಗಟಿಗಳಂತೆ ಇರುವುವು. ಇವುಗಳನ್ನು ಬಿಡಿಸಿದ ಹೊರತು ನಮಗೆ ಗತ್ಯಂತರವಿಲ್ಲ ಇವೆಲ್ಲ ಸಂಗತಿಗಳನ್ನೊಳಗೊಂಡ ಗ್ರಂಥವೊಂದು ಪ್ರಸಿದ್ಧವಾದ ಹೊರತು ನಮ್ಮ ಕರ್ನಾಟಕ ಭಾಷೆಯ ಏಳಿಗೆಯೂ, ಅದರ ಗ್ರಾಂಥಿಕ ಏಕರೂಪತೆಯೂ ಸಾಧಿಸಲಾರವು ಈಗಿನ ವಿದ್ಯಾರ್ಥಿವರ್ಗವು ಕರ್ನಾಟಕದ ಬಗ್ಗೆ ಅಭಿಮಾನವುಳ್ಳದ್ದಾಗಬೇಕಾದರೆ ಈ ತರದ ಗ್ರಂಥವೊಂದಿರುವುದು ಅತ್ಯಾವಶ್ಯಕವಾಗಿದೆ ಅದಿಲ್ಲದೇ ಹೋದರೆ ಕರ್ನಾಟಕದ ಬೇರೆ ಬೇರೆ ಭಾಗಗಳ ಜನರು, ಭಾಷೆಯು ಇವುಗಳ ಬಗ್ಗೆ ಅಭಿಮಾನವೂ ಆದರವೂ ಉಂಟಾಗಲಾರದು ಆದರವಿಲ್ಲದೆ ಹೋದರೆ ಐಕ್ಯವು ಮುರಿದು ಹೋಗುವುದು. ಪರಸ್ಪರ ಐಕ್ಯಾಭಾವವುಂಟಾದ ಕೂಡಲೆ, ಇಷ್ಟಸಿದ್ಧಿಯ ವಿರುದ್ಧವಾದ ಪರಿಣಾಮಗಳುಂಟಾಗಿ, ಪರದೇಶ ಪರಭಾಷೆಗಳ ಜನರಲ್ಲಿ ಕರ್ನಾಟಕಸ್ಥರ ಬಗ್ಗೆಯೂ, ಭಾಷೆಯ ಬಗ್ಗೆಯೂ ಹೇಯ ವುತ್ಪನ್ನವಾಗುವದರಲ್ಲೇನಾಶ್ಚರ್ಯವು !

ಆದುದರಿಂದ ಮಹನೀಯರೇ, 'ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿ'' ಯೊಂದನ್ನು ನಿರ್ಮಾಣಮಾಡಿ, ಪ್ರಾಚೀನ ಅರ್ವಾಚೀನ ಕಾಲಗಳ ಪರಿಸ್ಥಿತಿಯನ್ನನು ಲಕ್ಷಿಸಿ ಒಂದು ಇತಿಹಾಸ ಗ್ರಂಥವನ್ನು ಪ್ರಸಿದ್ಧ ಪಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿರುವುದು ಈ ಗ್ರಂಥವನ್ನೇ ಸಂಕ್ಷೇಪವಾಗಿ ಬರೆಯ, 'ಕರ್ನಾಟಕ ಸಂಕ್ಷಿಪ್ತ ಇತಿಹಾಸ' ವೆಂಬ ಹೆಸರಿನಿಂದ ಅದನ್ನು ಪ್ರಾಥಮಿಕ ಶಾಲೆಗಳ ನಾಲ್ಕನೆಯ ಹಾಗೂ ಐದನೆಯ ತರಗತಿಗಳಲ್ಲಿ ಓದಿಸುವ ವ್ಯವಸ್ಥೆಯುಂಟಾಗುವಂತೆ ಮಾಡುವುದು ನಮ್ಮ ಎರಡನೆಯ ಕರ್ತವ್ಯವಾಗಿರುವುದು ಈಗ್ಗೆ ಮುಂಬಯಿ ಕರ್ನಾಟಕದ ಶಾಲೆಗಳಲ್ಲಿಯ ವಿದ್ಯಾರ್ಥಿಗಳು ಕರ್ನಾಟಕದ ಇತಿಹಾಸದೊಳಗಿನ ಕೆಲಕೆಲವು ಅರಸರ ವಂಶಾವಳಿಯನ್ನೂ, ಇಸವಿಗಳನ್ನೂ ಮಾತ್ರ ಬಾಯಿಪಾಠ ಮಾಡುತ್ತಾರಲ್ಲದೆ, ಇತಿಹಾಸವನ್ನೋದುವುದರಿಂದ ಆಗತಕ್ಕ ಪರಿಣಾಮಗಳು ಅದರಿಂದ ತುಸುವಾದರೂ ಉಂಟಾಗುವದಿಲ್ಲೆಂಬುದು ಅನುಭವಸಿದ್ಧವಾದ ಮಾತಾಗಿದೆ. ಇತಿಹಾಸವನ್ನು ಈ ತೆರನಾಗಿ ಕಲಿಸುವುದಕ್ಕಿಂತ ಅದನ್ನು ಚಲ್ಲಿ ಕೊಡುವುದೊಳ್ಳೆಯದು. ನಿರರ್ಥಕವಾಗಿ ವಿದ್ಯಾರ್ಥಿಗಳ ವೇಳೆಯನ್ನೂ, ಶ್ರಮವನ್ನೂ ಅಪ

ಹರಿಸುವ ಇಲ್ಲಿಯ ವಿದ್ಯಾಖಾತೆಯ ಅಧಿಕಾರಸ್ಥರಿಗೆ ಏನೆನ್ನಬೇಕೋ ತಿಳಿಯದು. ಪ್ರಾಥಮಿಕ ಶಾಲೆಗಳಿಗಾಗಿ ಅಧ್ಯಾಪಕರನ್ನು ತಯಾರಿಸುವ 'ಟ್ರೇನಿಂಗ್ ಕಾಲೇಜ'ದಲ್ಲಾದರೂ ಕರ್ಣಾಟಕದ ಪೂರ್ಣಮಾಹಿತಿಯನ್ನು ಮಾಡಿಕೊಡುತ್ತಾರೆಂದು ಹೇಳಬೇಕೋ? ಅದೂ ಇಲ್ಲ. ಈ ರೀತಿಯಿಂದ ಶಿಕ್ಷಣವನ್ನು ಹೊಂದುವ ಶಿಕ್ಷಕರು ತಾವು ಉದ್ಯೋಗಸ್ಥರಾದ ಬಳಿಕ, ಯಾವ ಆಧಾರಗಳಿಂದ ಅವರು ಕರ್ಣಾಟಕದ ಇತಿಹಾಸವನ್ನು ಕಲಿಸುವರು? ಅವರಿಗೆ ಕರ್ಣಾಟಕದ ಬಗ್ಗೆ ಪೂರ್ಣಜ್ಞಾನವಿರುವುದಿಲ್ಲ, ಅಂತಹ ಜ್ಞಾನವನ್ನು ಮಾಡಿಕೊಡುವ ಪುಸ್ತಕ ಮೊದಲಾದ ಸಾಧನಗಳೂ ಇಲ್ಲ. ಪರೀಕ್ಷೆಗೆ ಮಾತ್ರ ಅವರ ವಿದ್ಯಾರ್ಥಿಗಳು ಕರ್ಣಾಟಕ ಇತಿಹಾಸವನ್ನು ಕಲಿಯಲೇ ಬೇಕು? ಹಾಗಾದರೆ, ಗತ್ಯಂತರವೇನು? ಗಿಳಿಯ ಹಾಗೆ ಪಾಠ ಮಾಡಿಸುವುದೇ ಹೊರತು ಅನ್ಯಮಾರ್ಗವಿಲ್ಲ. ಇರಲಿ.

ಇನ್ನು, ಕರ್ಣಾಟಕದ ಭೂಗೋಲವನ್ನಾದರೂ ಕಲಿಸುತ್ತಾರೆಂದು ಹೇಳಬಹುದೋ? ಕರ್ಣಾಟಕ ಪ್ರಾಂತದ ಸ್ಥಾನ, ಮೇರೆ, ಪ್ರಾಕೃತಿಕ ರಾಜಕೀಯ ವಿಭಾಗಗಳು ಇವೇ ಮೊದಲಾದ ಮಹತ್ವದ ಸಂಗತಿಗಳು ಇತಿಹಾಸ, ಭೂಗೋಲಗಳೆರಡನ್ನೂ ಕಲಿಸುವಾಗ್ಗೆ ಅತಿ ಸ್ಪಷ್ಟವಾಗಿ ತಿಳಿಯಬೇಕಾದ ಅಂಶಗಳಾಗಿವೆ. ಮ|| ಕಟ್ಟಿಯವರ ಇತಿಹಾಸದ ಮೊದಲನೆಯ ಭಾಗದಲ್ಲಿ ಈ ತರದ ವರ್ಣನೆಯು ಸಂಕ್ಷೇಪವಾಗಿ ಕೊಡಲ್ಪಟ್ಟಿದೆ. ಆದರೆ, ಇದನ್ನು ಓದಿಸುವವರಾರು? ಓದುವವರಾದರೂ ಯಾರು? ಈಗ ತಾನೇ ಒಂದು ಮನೋರಂಜಕವಾದ, ಆದರೆ ಲಾಂಛನಾಸ್ಪದವಾದ ಸಂಗತಿಯು ಜ್ಞಾಪಕಕ್ಕೆ ಬರುತ್ತಿದೆ —

ದಾರಿಯಲ್ಲೊಂದು ದಿವಸ ನಾನು ಹೋಗುತ್ತಿರುವಾಗ್ಗೆ ನಾಲ್ಕನೇ ತರಗತಿಯಲ್ಲೋದುತ್ತಿದ್ದ ಒಬ್ಬ ಹುಡುಗನು ಕರ್ಣಾಟಕ ಇತಿಹಾಸವನ್ನು ಓದುತ್ತ ನಡೆದಿದ್ದನು. ಅವನು ನನಗೆ ತುಸು ಪರಿಚಯದವನಾಗಿದ್ದುದರಿಂದ, ನಾನು ಸಹಜವಾಗಿ ಅವನಿಗೆ ಹೀಗೆ ಪ್ರಶ್ನೆಮಾಡಿದೆನು. 'ನಮ್ಮ ಕರ್ಣಾಟಕ ದೇಶವು ಎಲ್ಲಿದೆ?' ಅವನು ಉತ್ತರ ಕೊಟ್ಟನು. 'ವಿಜಾಪೂರ, ಧಾರವಾಡ, ಬೆಳಗಾವ, ಕಾರವಾರ ಜಿಲ್ಲೆಗಳಿಗೆ ಕರ್ಣಾಟಕವೆಂದೆನ್ನುತ್ತಾರೆ.' ಅದಕ್ಕೆ ನಾನು, 'ಇತಿಹಾಸದೊಳಗಿನ ಮೊದಲನೆಯ ಭಾಗವನ್ನು ನಿಮ್ಮ ಮಾಸ್ತರರು ಓದಿಸಿಲ್ಲವೇ' ಎಂದು ಪ್ರಶ್ನೆಮಾಡಲು, ಅವನು ಎರಡು ವರುಷಗಳವರೆಗೆ ನಾಲ್ಕನೆಯ ತರಗತಿಯಲ್ಲಿ ಓದಿದವನಾದ್ದರಿಂದ 'ಹೋದ ವರುಷವೂ ಕಲಿಸಿಲ್ಲ, ಈ ಸಾರೆಯೂ ಓದಿಸಿಲ್ಲ, ಅಲ್ಲದೆ, ಸಾಹೇಬರು ಪರೀಕ್ಷೆಯಲ್ಲಿ ಅದನ್ನು ಕೇಳುವುದೂ ಇಲ್ಲ' ಎಂದು ತಟ್ಟನೆ ಉತ್ತರಕೊಟ್ಟನು. ಆ ಮೇಲೆ ನಾನು ಅವನಿಗೆ ಕರ್ಣಾಟಕದ ಬೇರೆ ಬೇರೆ ಭಾಗಗಳನ್ನು ಹೇಳಿ, ಅವೆಲ್ಲಕ್ಕೂ ಕೂಡಿ ಕರ್ಣಾಟಕ ಪ್ರಾಂತವೆನ್ನುತ್ತಾರೆಂದು ತಿಳಿಸಿದೆನು. ಮಹಾಶಯರೆ, ಈ ತರದ ಜ್ಞಾನವು ಯಾವ ಕೆಲಸಕ್ಕೆ ಬರುವುದು?

ಆದುದರಿಂದ ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಈ ಬಗ್ಗೆ ಚನ್ನಾಗಿ

ಪರ್ಯಾಲೋಚಿಸಿ, ಮೇಲೆ ಹೇಳಿದಂತೆ "ಕರ್ಣಾಟಕ ಇತಿಹಾಸ ಸಂಶೋಧಕ ಮಂಡಳಿ" ಯೊಂದನ್ನೇರ್ಪಡಿಸಿ, ಅದರ ಮುಖಾಂತರವಾಗಿ ವಿಸ್ತಾರವಾದ ಕರ್ಣಾಟಕ ಇತಿಹಾಸವನ್ನೂ, ಅದರ ಸಂಕ್ಷಿಪ್ತ ಇತಿಹಾಸವನ್ನೂ ಆದಷ್ಟು ಬೇಗನೆ ಪ್ರಸಿದ್ಧಿಸುವುದು ಈ ಕಾಲದಲ್ಲಿ ಅತ್ಯವಶ್ಯವಾಗಿದೆಯೆಂದು ಮತ್ತೊಮ್ಮೆ ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ

ಕನ್ನಡ ಭಾಷೆಯನ್ನಾಡುವ ನಾಡೆಲ್ಲ ಕೂಡಿ ಸಾಮಾನ್ಯವಾಗಿ ಕರ್ಣಾಟಕವೆಂದೆನಿಸಿಕೊಳ್ಳುತ್ತದೆ ಆದರೆ ಪ್ರಾಚೀನ ಕಾಲದಲ್ಲಿ ಅಂದರೆ ಸುಮಾರು ಕ್ರಿ. ಶ. ಏಳನೆಯ ಶತಮಾನದಲ್ಲಿ ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಸಂಸ್ಕೃತ ಭಾಷೆಯೇ ಗ್ರಂಥಸ್ಥವಾಗಿದ್ದಿತೆಂದು ತಿಳಿಯುತ್ತದೆ ಆರ್ಯರು ಉತ್ತರ ಹಿಂದುಸ್ಥಾನದಿಂದ ದಕ್ಷಿಣಕ್ಕೆ ಬರಹತ್ತಿದಂದಿನಿಂದ ಅವರ ಭಾಷೆಯೂ, ಆಚಾರ - ವ್ಯವಹಾರಗಳೂ ಇಲ್ಲಿಯೂ ನೆಲೆಗೊಳ್ಳ ಹತ್ತಿದುವು ಇಲ್ಲಿ ಆಗ ವಾಸವಾಗಿದ್ದ ದ್ರಾವಿಡರು ಆರ್ಯರಷ್ಟು ಸುಧಾರಿಸಿದವರಾಗಿದ್ದಿಲ್ಲ ಬುದ್ಧಿ, ಜ್ಞಾನಗಳಲ್ಲಿಯೂ ಅವರಿಗಿಂತ ಕಡಿಮೆಯಾದವರಿದ್ದರೆಂದು ಅನುಮಾನವಾಗುತ್ತದೆ ಆದುದರಿಂದ ಹೆಚ್ಚು ಬುದ್ಧಿಶಾಲಿಗಳಾದ ಆರ್ಯರು ತಮ್ಮ ವರ್ಚಸ್ಸನ್ನು ದಾಕ್ಷಿಣಾತ್ಯರ ಮೇಲೆ ಕೂಡಿಸಲಾರಂಭಿಸಿದ್ದು ಸಹಜವಾದದ್ದು. ಆರ್ಯರ ಯಜ್ಞಯಾಗಾದಿಗಳೂ, ದೇವತಾರಾಧನೆಯೂ ಇವೇ ಮೊದಲಾದ ಧಾರ್ಮಿಕಕಾರ್ಯಗಳು ಇಲ್ಲಿಯ ಜನರ ಮನಸ್ಸನ್ನೆಳೆದುಕೊಂಡವು ಅವರ ಧಾರ್ಮಿಕ ಗ್ರಂಥಗಳೆಲ್ಲ ಸಂಸ್ಕೃತ ಭಾಷೆಯಲ್ಲಿಯೇ ಬರೆಯಲ್ಪಟ್ಟದ್ದರಿಂದ ಆ ಭಾಷೆಯು ಪವಿತ್ರವಾದದ್ದೆನಿಸಹತ್ತಿತು ಆರ್ಯರಾದರೂ ಸುಧಾರಣೇಚ್ಛುಗಳೂ, ತಮ್ಮ ಧರ್ಮ, ಭಾಷೆಗಳನ್ನು ಬೆಳೆಸಬೇಕೆಂಬ ಲವಲವಿಕೆಯುಳ್ಳವರಾಗಿದ್ದುದರಿಂದ, ಈ ಕಾರ್ಯಗಳನ್ನು ಅವರು ಒತ್ತರದಿಂದ ಸಾಗಿಸಿದರು ಆದುದರಿಂದಲೇ, ಅವರ ನಡೆನುಡಿಗಳೂ ಭಾಷೆಯೂ ದ್ರಾವಿಡರಲ್ಲಿ ನೆಲೆಗೊಳ್ಳಲಿಕ್ಕೆ ಆಸ್ಪದವಾಯಿತು. ಸಂಸ್ಕೃತವನ್ನು ಕಲಿತು ಧಾರ್ಮಿಕ ಗ್ರಂಥಗಳನ್ನೋದಿದವನು ಶ್ರೇಷ್ಠನೆನಿಸಿಕೊಳ್ಳಹತ್ತಿದನು ಆದುದರಿಂದ ಅನೇಕರು ಸಂಸ್ಕೃತವನ್ನು ಅಭ್ಯಾಸಿಸಹತ್ತಿದರು ಈಗಿನಂತೆ ಮುದ್ರಣದ ಸಾಧನಗಳು ಆ ಕಾಲದಲ್ಲಿದ್ದವೇ ಆಗಿದ್ದರೆ, ಇಡಿಯ ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಸಂಸ್ಕೃತ ಭಾಷೆಯೇ ಪೂರ್ಣವಾಗಿ ನೆಲೆಗೊಳ್ಳುವ ಸಂಭವವಿತ್ತು ದಕ್ಷಿಣ ಹಿಂದುಸ್ಥಾನದ ಕೆಲವು ಕವಿಗಳೂ, ಗ್ರಂಥಕರ್ತರೂ ಸಂಸ್ಕೃತದಲ್ಲಿಯೇ ತಮ್ಮ ಗ್ರಂಥಗಳನ್ನು ರಚಿಸಿದ್ದು ಇದಕ್ಕೆ ಉದಾಹರಣವಾಗಿದೆ

ಇನ್ನು, ಪಂಚದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಕನ್ನಡ, ಮಲಯಾಳ, ತುಳು ಭಾಷೆಗಳು ಕೆಲಕಾಲದವರೆಗೆ ಅಸ್ತಮಿಸಹತ್ತಿದುವು ಆದರೆ ಸಂಸ್ಕೃತವು ಎಲ್ಲರಿಗೂ ಸುಲಭಸಾಧ್ಯವಾಗಿದ್ದಿಲ್ಲವಾದ್ದರಿಂದ, ಅದರ ಪ್ರಸಾರಕ್ಕೆ ಅಡ್ಡಿಯಾಯಿತು. ಆರ್ಯರ ಧಾರ್ಮಿಕಗ್ರಂಥಗಳ ಪ್ರಸಾರವು ಎಲ್ಲರಲ್ಲಿಯೂ ಆಗಿ, ಅವರ ಸುಧಾರಣೆ ತಮ್ಮಲ್ಲಿಯೂ ನೆಲೆಗೊಳ್ಳಬೇಕೆಂಬ ಇಚ್ಛೆಯು ಆಗಿನ ಕಾಲದ ಹಲ ಕೆಲವು ಅರಸರಲ್ಲಿ

ಉಂಟಾಯಿತು. ಅದರಂತೆ, ಸಂಸ್ಕೃತಗ್ರಂಥಗಳನ್ನು ಕನ್ನಡದಲ್ಲಿ ಬರೆಯುವುದಕ್ಕೆ ಉತ್ತೇಜನವು ದೊರೆಯಲು, ಕೆಲವು ಕಾವ್ಯಗಳನ್ನು ಅನುವಾದ ಮಾಡಿಯೂ, ಬೇರೆ ಕೆಲವು ಗ್ರಂಥಗಳನ್ನು ಭಾಷಾಂತರಿಸಿಯೂ, ಇನ್ನೂ ಹಲವುಗಳನ್ನು ಸಾರಾಂಶರೂಪವಾಗಿಯೂ ಕನ್ನಡದಲ್ಲಿ ಅನೇಕ ಕವಿಗಳೂ, ಗ್ರಂಥಕರ್ತರೂ ಬರೆಯಲಾರಂಭಿಸಿದರು. ಇಂಥ ಗ್ರಂಥಗಳ ಪ್ರಸಾರವು ಬೇಗನೆ ಆಗತೊಡಗಿತು. ಈ ಕಾಲಕ್ಕೆ ಅಂದರೆ, ಸುಮಾರು ೮ ನೇ, ೯ ನೇ ಶತಮಾನಗಳ ಮಧ್ಯಕಾಲದಲ್ಲಿ ಚಾಲುಕ್ಯ, ರಾಷ್ಟ್ರಕೂಟ ಮೊದಲಾದ ಅರಸರ ಆಳಿಕೆಯಲ್ಲಿ ಕನ್ನಡ ಕವಿಗಳು ಆಗಿಹೋದದ್ದು ಕಂಡು ಬರುವುದು. ಇದೇ ಕಾಲದಲ್ಲಿ ನೃಪತುಂಗನು ಬರೆದ ‘ ಕವಿರಾಜಮಾರ್ಗ ’ ವೆಂಬ ಗ್ರಂಥದಲ್ಲಿ ಕನ್ನಡ ನಾಡಿನ ಮರ್ಯಾದೆಯು ಹೀಗೆ ಹೇಳಲ್ಪಟ್ಟಿದೆ

“ ಕಾವೇರಿಯಿಂದ ಮಾಗೋ |
ದಾವರಿ ವರಮಿರ್ಪ್ಪ ನಾಡದಾ ಕನ್ನಡದೊಳ್ ||
ಭಾವಿಸಿದ ಜನಪದಂ ವಸು |
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ ” ||೧||

ಬಳಿಕ ಮೇಲೆ, ಪಂಪ, ಹೊನ್ನ, ಷಡಕ್ಷರಿ, ರನ್ನ ಮೊದಲಾದ ಪ್ರಸಿದ್ಧ ಕವಿಗಳ ಗ್ರಂಥಗಳಲ್ಲಿಯ ಭಾಷೆಯು ಸಂಸ್ಕೃತ, ಹಳಗನ್ನಡಗಳ ಮಿಶ್ರಣವಾಗಿತ್ತು. ಆಂಡಯ್ಯ ಕವಿಯು ಸಂಸ್ಕೃತ ಭಾಷೆಯ ಸಹಾಯವಿಲ್ಲದೆಯೇ ಕನ್ನಡ ಕಾವ್ಯವನ್ನು ಬರೆಯಬಹುದೆಂಬದನ್ನು ತೋರಿಸುವದಕ್ಕೆ ‘ಕಬ್ಬಿಗರ ಕಾವ’ ವೆಂಬದನ್ನು ಬರೆದಿದ್ದಾನೆ. ಆದರೆ ಅವನ ಪ್ರಯತ್ನವು ಎಷ್ಟರಮಟ್ಟಿಗೆ ಸಫಲವಾಗಿದೆಯೆಂಬದನ್ನು ವಾಚಕರೇ ಊಹಿಸಲಿ ! ಹೊಸಗನ್ನಡದಲ್ಲಿಯೂ, ವ್ಯಾವಹಾರಿಕ ಭಾಷೆಯಲ್ಲಿಯೂ ಯಾರೂ ಯಾವ ಗ್ರಂಥಗಳನ್ನೂ ಬರೆದಿಲ್ಲ. ಆದುದರಿಂದ ಇವರ ಕಾವ್ಯಗಳು ಪಂಡಿತರಿಗೆ ಮಾತ್ರವಲ್ಲದೆ, ಪಾಮರರಿಗೆ ಓದಲಸಾಧ್ಯವಾಗಿರುತ್ತವೆ. ಆದಾಗ್ಯೂ, ಈ ಮಹಾಕವಿಗಳು ತಮ್ಮ ಸಾಮರ್ಥ್ಯದಿಂದ ಕರ್ನಾಟಕ ಗ್ರಂಥಭಾಂಡಾರವನ್ನು ಬೆಳೆಯಿಸಿದ್ದಲ್ಲದೆ, ಅದನ್ನು ಬಹು ಮೌಲ್ಯವಾಗಿ ಮಾಡಿಟ್ಟಿರುವರೆಂದೆನ್ನಲಿಕ್ಕೆ ಪ್ರತ್ಯವಾಯವೇನೂ ತೋರುವುದಿಲ್ಲ.

ಮುಂದೆ, ಕನ್ನಡ ಪ್ರೌಢಗ್ರಂಥಗಳನ್ನು ಬರೆಯುವ ಇಚ್ಛೆಯು ಪಂಡಿತರಲ್ಲಿ ಕ್ರಮೇಣ ಕಡಿಮೆಯಾದದ್ದರಿಂದಲೋ, ಕರ್ನಾಟಕ ಭಾಷೆಗೆ ರಾಜಾಶ್ರಯವು ತಪ್ಪಿಹೋದದ್ದರಿಂದಲೋ ಅಂತಹ ಗ್ರಂಥಗಳ ರಚನೆಯೇ ಇಲ್ಲದ ಹಾಗಾಯಿತು. ಆರ್ಯರು (ಬ್ರಾಹ್ಮಣರು) ತಮ್ಮ ಭಾಷೆಯ ರುಚಿಯನ್ನು ಮಾತ್ರ ದಾಕ್ಷಿಣಾತ್ಯರಿಗೆ ಹಚ್ಚಿಕೊಟ್ಟರಲ್ಲದೆ, ಅದು ಕಡೆತನಕ ಸ್ಥಿರವಾಗಿ ಉಳಿಯುವಂತೆ ವ್ಯವಸ್ಥೆಯನ್ನು ಮಾಡಲಿಲ್ಲ, ಮತ್ತು ದಕ್ಷಿಣಕ್ಕೆ ಬಂದ ಆರ್ಯರ ಸಂಖ್ಯೆಗಿಂತ ಇಲ್ಲಿರುವ ದ್ರಾವಿಡರ ಸಂಖ್ಯೆಯೇ ಹೆಚ್ಚಾಗಿದ್ದದರಿಂದಲೂ, ಸಂಸ್ಕೃತವು ಉಳಿದ ದ್ರಾವಿಡ ಭಾಷೆಗಳಿಗಿಂತ ಕಠಿನವಾಗಿರುವುದರಿಂದಲೂ ಅದರ ಪ್ರಸಾರವು ಚನ್ನಾಗಿ ಆಗಲಿಕ್ಕೆ ಉಪ್ಪದವು ದೊರೆ

ಯುವಿಲ್ಲ. ಆದುದರಿಂದ ಅದು ಕೆಲವಟ್ಟಿಗೆ ಗ್ರಂಥಸ್ಥಭಾಷೆಯಾಗಿ ಮಾತ್ರ ಉಳಿಯಿತಲ್ಲದೆ, ವ್ಯಾವಹಾರಿಕ ಭಾಷೆಯಾಗಲೇ ಇಲ್ಲ. ಹೀಗಾಗಿ ದ್ರವಿಡ ಭಾಷೆಗಳೇ ಸಂಸ್ಕೃತದ ಮಿಶ್ರಣದಿಂದ ಊರ್ಜಿತವನ್ನು ಹೊಂದ ಹತ್ತಿದವು ಈ ಕಾಲದಲ್ಲಿ ಅಂದರೆ ಸುಮಾರು ೧೦ ನೆಯ ಶತಮಾನದಲ್ಲಿ ಕರ್ನಾಟಕದ ಎಲ್ಲ ಭಾಗಗಳಿಗಿಂತ ಉತ್ತರ ಕರ್ನಾಟಕದ ಭಾಷೆಯೂ ಊರ್ಜಿತಾವಸ್ಥೆಯಲ್ಲಿದ್ದಿತೆಂದು ನೃಪತುಂಗನ ಗ್ರಂಥದಿಂದ ತಿಳಿಯುತ್ತದೆ

ಕ್ರಿ. ಶ ಸುಮಾರು ೧೨ ನೆಯ ಶತಮಾನದಲ್ಲಿ ದ್ವಾರಸಮುದ್ರವೆಂಬಲ್ಲಿ ಆಳುತ್ತಿದ್ದ ಹೊಯಿಸಾಲ ಬಲ್ಲಾಳರು ಕನ್ನಡಕ್ಕೆ ವಿಶೇಷವಾಗಿ ಆಶ್ರಯಕೊಟ್ಟಿದ್ದರು ಇದೇ ಕಾಲದಲ್ಲಿ ಕೇಶಿರಾಜನು 'ಶಬ್ದಮಣಿದರ್ಪಣ' ವನ್ನು ರಚಿಸಿದನು. ಆಗ್ಗೆ ಕನ್ನಡ ಭಾಷೆಯಲ್ಲಿ ತಮಿಳು ಭಾಷೆಯ ಶಬ್ದಗಳನೇಕ ಬಂದು ಸೇರಿದವು ಮುಂದೆ ಎರಡು ಶತಮಾನಗಳವರೆಗೆ ಅಂದರೆ, ಸುಮಾರು ಕ್ರಿ. ಶ ೧೫ ನೇ ಶತಮಾನದ ಆದಿ ಭಾಗದಲ್ಲಿ ವಿಜಯನಗರದ ರಾಜ್ಯವು ಸ್ಥಾಪಿತವಾಗುವವರೆಗೆ ಕನ್ನಡಕ್ಕೆ ಪ್ರಬಲವಾದ ಯಾವ ರಾಜಾಶ್ರಯವೂ ಇರಲಿಲ್ಲ ಈ ವಿಜಯನಗರದ ಅರಸರ ಪ್ರಾಬಲ್ಯದ ಕಾಲಕ್ಕೆ ದಕ್ಷಿಣಕರ್ನಾಟಕದೊಳಗೆ ತೆಲುಗು ಭಾಷೆಯು ವಿಶೇಷವಾಗಿ ಪ್ರಚಾರದಲ್ಲಿ ಇದ್ದುದರಿಂದ, ಆ ಭಾಷೆಯ ಕೆಲವು ಶಬ್ದಗಳೂ ಕನ್ನಡದಲ್ಲಿ ಬಂದು ಸೇರಿದವು ಮುಂದೆ, ಜನರು ಹಳಗನ್ನಡವನ್ನು ಬಿಟ್ಟು ತಮಿಳು, ತೆಲುಗು ಮೊದಲಾದ ಶಬ್ದಗಳಿಂದ ಕೂಡಿದ ಹೊಸಗನ್ನಡದಲ್ಲಿ ಪುಸ್ತಕಗಳನ್ನು ಬರೆಯತೊಡಗಿದ್ದು, ಆ ಕಾಲದ ಕುಮಾರ ವ್ಯಾಸ ಕನ್ನಡಭಾರತ, ಲಿಂಗಾಯತರ ಷಟ್ಪದಿ ಗ್ರಂಥಗಳು ಇವುಗಳಿಂದ ತಿಳಿಯಬರುವುದು. ಅದೇ ಕಾಲದಲ್ಲಿ ಭಾರತನಿಘಂಟು ಎಂಬದೊಂದು ಕೋಶವು ಹೊಸಗನ್ನಡಕ್ಕೆ ಅನುಕೂಲಿಸುವಂತೆ ಬರೆಯಲ್ಪಟ್ಟಿತೆಂದು ಕಂಡು ಬರುತ್ತಿದೆ ಆದರೆ ಈ ಕಾಲದಲ್ಲಿ ಗ್ರಂಥಸ್ಥ ಭಾಷೆಗನುರೂಪವಾದ ಹೊಸಗನ್ನಡವ್ಯಾಕರಣವನ್ನು ಮಾತ್ರ ಯಾರೂ ಬರೆಯಲಿಲ್ಲೆಂಬದು ದುಃಖಕರವಾದ ಸಂಗತಿಯಾಗಿದೆ ಮುಂದೆ ಕೆಲವು ಶತಮಾನಗಳವರೆಗೂ ಕೇಶಿರಾಜನ ಶಬ್ದಮಣಿದರ್ಪಣವೇ ಪ್ರಮಾಣವಾಗಿ ಉಳಿಯಿತು ಆಮೇಲೆ ಶಬ್ದಾನುಶಾಸನವೆಂಬ ಬೇರೊಂದು ಕನ್ನಡ ವ್ಯಾಕರಣವುಂಟಾಗಲು, ಹಳಗನ್ನಡವೂ ಕ್ರಮೇಣ ಕಡಿಮೆಯಾಗತೊಡಗಿತು ಕ್ರಿ ಶ ಸುಮಾರು ೧೭ ನೆಯ ಶತಮಾನದ ಪೂರ್ವಭಾಗದಲ್ಲಿ ಕನ್ನಡವು ಮೈಸೂರು ಸಂಸ್ಥಾನದಲ್ಲಿ ಮತ್ತೆ ನೆಲೆಗೊಳ್ಳಹತ್ತಿತು ಆಗಲೂ ಕೂಡಾ, ಗ್ರಂಥಕರ್ತರು ಹಳಗನ್ನಡವನ್ನೇ ಗ್ರಂಥಸ್ಥಭಾಷೆಯಾಗಿಟ್ಟುಕೊಂಡರೆಂದು, ಆಗ್ಗೆ ಚಿಕ್ಕದೇವರಾಜವೊಡೆಯರ ಆಸ್ಥಾನ ಕವಿಗಳ ಗ್ರಂಥಗಳಿಂದ ತಿಳಿಯುತ್ತದೆ ಏನೇ ಇರಲಿ. ಈ ಮುಂದೆ ಮೈಸೂರು ಸಂಸ್ಥಾನವು ಮತ್ತೆ ಮುಸಲ್ಮಾನರ ವಶವರ್ತಿಯಾಗಿದ್ದರಿಂದ, ಕನ್ನಡ ನುಡಿಯಲ್ಲಿ ಯಾವ ತರದ ಸುಧಾರಣೆಗಳುಂಟಾಗಲಿಕ್ಕೆ ಆಸ್ಪದವಾಗಲಿಲ್ಲ ಹಿಂದಿನ ೧೯ ನೆಯ ಶತಮಾನದವರೆಗೆ ಅದು ಹಾಗೆಯೇ ಉಳಿಯಿತು. ಈ ಮುಂದೆ ಮಾತ್ರ ಕರ್ನಾಟಕ ಪ್ರಾಂತವು ಬ್ರಿಂದೇ

ಬ್ರಿಟಿಷ್ ಚಕ್ರಾಧಿಪತ್ಯದ ಕೆಳಗೆ ಸುಖ ಶಾಂತಿಗಳುಳ್ಳದ್ದಾಗಿದ್ದರಿಂದ, ಭಾಷೆಯಲ್ಲಿ ಅಂತರ್ವ್ಯವಸ್ಥೆಗಳನ್ನು ಮಾಡಿಕೊಳ್ಳಲಿಕ್ಕೆ ಜನರಿಗೆ ಅನುಕೂಲವಾಗಹತ್ತಿತು. ಕರ್ನಾಟಕದ ಉತ್ತರ ಭಾಗವೂ ಇದೇ ಪ್ರಕಾರವಾಗಿ ಅನೇಕ ರಾಜರುಗಳನ್ನು ಆಗಾಗ್ಗೆ ಆಶ್ರಯಿಸುತ್ತ ಬಂದದ್ದರಿಂದ, ಇಲ್ಲಿಯ ಭಾಷೆಯಲ್ಲಿಯೂ ಕೂಡಾ ಮಹಾರಾಷ್ಟ್ರ ಮೊದಲಾದ ಪರಭಾಷೆಯ ಶಬ್ದಗಳು ಅನೇಕವಾಗಿ ಸೇರಿಕೊಂಡವು. ಈಗೀಗ ಅಂದರೆ, ೨೦ ನೆಯ ಶತಮಾನದಲ್ಲಿ ಕರ್ನಾಟಕದ ಜನರಲ್ಲಿ ಜಾಗ್ರತೆಯೂ, ತಾಯ್ನುಡಿಯ ಅಭಿಮಾನವೂ ಉಂಟಾಗಹತ್ತಿರುವವು ಈ ಅಭಿಮಾನ ವೃಕ್ಷವು ಮೈಸೂರಿನಲ್ಲಿ ಮೊಳೆತು, ಧಾರವಾಡದಲ್ಲಿ ಚಿಗಿತು, ಮತ್ತೆ ಮೈಸೂರಿನಲ್ಲಿ ಬೆಳೆದು ದೊಡ್ಡದಾಗಿ, ಕರ್ನಾಟಕ ಸಾಹಿತ್ಯಪರಿಷತ್ತಿನ ರೂಪದಿಂದ ಫಲ ಕೊಡಹತ್ತಿದೆ. ಇದು ಭಾಷಾಭಿಮಾನಿಗಳಿಗೆ ಪರಮ ಸಂತೋಷದಾಯಕವೇ ಸರಿ ಕರ್ನಾಟಕದ ಎಲ್ಲ ಭಾಗಗಳ ಪಂಡಿತರು ಒಗ್ಗಟ್ಟಾಗಿ ಕೆಲಸ ಮಾಡುತ್ತಹೋದರೆ, ಈ ಸಾಹಿತ್ಯ ಪರಿಷದ್ವೃಕ್ಷವು ಬೇಗನೆ ಮಧುರತರವಾದ ಫಲಗಳನ್ನು ಕೊಡಬಲ್ಲದೆಂಬ ಆಶೆಯಿದೆ ಮಹನೀಯರೇ, ಪ್ರಾಚೀನಕಾಲದಿಂದ ಇಲ್ಲಿಯವರೆಗಿನ ಭಾಷೆಯ ಇತಿಹಾಸವನ್ನು ತಿಳಿಯಲಿಕ್ಕೆ ಇಷ್ಟುಮಾತ್ರ ಸಾಕು

II ಸದ್ಯಃಸ್ಥಿತಿ

ನೃಪತುಂಗನ ಕವಿರಾಜಮಾರ್ಗದಲ್ಲಿ ಹೇಳಿದಂತೆ, ಕರ್ನಾಟಕ ದೇಶವು ಕಾವೇರಿ ಹೊಳೆಯಿಂದ ಉತ್ತರಕ್ಕೆ ಗೋದಾವರೀ ಹೊಳೆಯವರೆಗೆ ಹಬ್ಬಿದ್ದಿತೆಂದು ಸ್ಪಷ್ಟವಾಗುತ್ತಿದೆಯಷ್ಟೆ ? ಆದರೆ, ಹೀಗೆ ವಿಸ್ತಾರವಾದ ಕನ್ನಡನಾಡು ಭಿನ್ನ ಭಿನ್ನವಾಗಿ ಬೇರೆ ಬೇರೆ ಅಧಿಪತ್ಯಗಳಿಂದ ರೋಗಗಳಿಗೆ ಒಳಪಟ್ಟಿರುವುದೇ ಈಗ್ಗ ನಮ್ಮ ಭಾಷಾಭೇದಕ್ಕೆ ಕಾರಣವಾಗಿರುವುದು ಅಧಿಪತ್ಯಗಳ ಸಂಬಂಧದಿಂದ ನಮ್ಮ ಕರ್ನಾಟಕ ಪ್ರಾಂತವು ಐದು ಭಾಗಗಳಾಗಿ ವಿಂಗಡಿಸಲ್ಪಟ್ಟಿರುವುದು —(೧) ವಿಜಾಪುರ, ಧಾರವಾಡ, ಬೆಳಗಾವ, ಕಾರವಾರ ಈ ನಾಲ್ಕು ಜಿಲ್ಲೆಗಳೂ, ದಕ್ಷಿಣಮಹಾರಾಷ್ಟ್ರ ಸಂಸ್ಥಾನಗಳೂ ಮುಂಬಯಿ ಸರಕಾರಕ್ಕೂ, (೨) ರಾಯಚೂರು ಮೊದಲಾದ ಜಿಲ್ಲೆಗಳಿಂದ ಕೂಡಿದ ಹೈದರಾಬಾದ-ಕರ್ನಾಟಕವು ಹೈದರಾಬಾದ ಸಂಸ್ಥಾನಕ್ಕೂ, (೩) ದಕ್ಷಿಣ ಕನ್ನಡ, ಬಳ್ಳಾರಿ, ಅನಂತಪುರ ಜಿಲ್ಲೆಗಳು ಮದ್ರಾಸ್ ಅಧಿಪತ್ಯಕ್ಕೂ, (೪) ಕೊಡಗು ಪ್ರಾಂತವು ಕೊಡಗು ಸರಕಾರಕ್ಕೂ, ಹಾಗೂ (೫) ಉಳಿದ ಭಾಗವೆಲ್ಲ ಮೈಸೂರು ಸಂಸ್ಥಾನಕ್ಕೂ ಸೇರಿವೆ. ಹೀಗೆ, ಕನ್ನಡ ನಾಡು ಐದು ಸರಕಾರಗಳ ಆಡಳಿತೆಗೆ ಒಳಪಟ್ಟು ತುಂಡು ತುಂಡಾಗಿರುವುದು ಅದರಂತೆ, ಕನ್ನಡ ಮೂಲ ಪಾಠಶಾಲೆಗಳಲ್ಲಿ ಓದುತ್ತಿರುವ ಬಾಲಕರ ಪ್ರಾಥಮಿಕ ಶಿಕ್ಷಣವೇ (Primary Education) ಐದು

ಆಧಿಪತ್ಯಗಳಲ್ಲಿ ಐದು ರೀತಿಯಾಗಿ ಅನುಸರಿಸಲ್ಪಡುವ ಕಾರಣ, ಭಿನ್ನ ಭಿನ್ನ ವಿದ್ಯಾಭ್ಯಾಸದಿಂದುಂಟಾದ ಭಾಷೆಗಳೂ ಬೇರೆ ಬೇರೆ ಮಾರ್ಗಗಳನ್ನನುಸರಿಸಿರುವುದು ಆಶ್ಚರ್ಯವಲ್ಲ

ಮುಂಬಯಿ ಕರ್ನಾಟಕಕ್ಕೆ ಮಹಾರಾಷ್ಟ್ರ ಭಾಷೆಯ ಸಂಸರ್ಗವಾಗಿ, ಅನೇಕ ಶಬ್ದಗಳು ರೂಪಾಂತರವನ್ನು ಹೊಂದಿ ಕನ್ನಡ ಭಾಷೆಯಲ್ಲಿ ಗುರುತು ಹಿಡಿಯುವುದಕ್ಕೂ, ವಿಂಗಡಿಸಲಿಕ್ಕೂ ಆಗದ ಹಾಗೆ ಮಿಶ್ರವಾಗಿರುವುವು ಮದ್ರಾಸದ ಕನ್ನಡವು ತೆಲುಗಿನ ಸಂಪರ್ಕದಿಂದ, ಹೆಚ್ಚಾಗಿ ಆಂಧ್ರಶಬ್ದಗಳಿಂದ ಕೂಡಿರುವುದಲ್ಲದೆ, ಸ್ವರವಿಶೇಷದಲ್ಲಿ ಕೂಡಾ ಹೆಚ್ಚು ಕಡಿಮೆ ತೆಲುಗನ್ನೇ ಹೋಲುತ್ತದೆ ಮೈಸೂರು ಸಂಸ್ಥಾನದಲ್ಲಿ ತಮಿಳು (ಬೆಂಗಳೂರು), ತೆಲುಗು ಭಾಷಾ ಮರ್ಯಾದೆಗಳು ಹೇರಳವಾಗಿ ಸೇರಿವೆ, ಆದರೆ ಗ್ರಾಂಥಿಕ ಭಾಷೆಯು ಮಾತ್ರ ಬಹಳಮಟ್ಟಿಗೆ ಕೆಟ್ಟು ಹೋಗಿಲ್ಲ. ಹೈದರಾಬಾದದ ಕರ್ನಾಟಕಕ್ಕೆ ಉರ್ದು ಭಾಷೆಯ ಶಬ್ದಗಳನೇಕ ಸೇರಿಕೊಂಡಿರುವುದರಿಂದ, ಅದರ ರೂಪವೇ ಕೆಟ್ಟು ಹೋಗಿದೆ, ಅಲ್ಲದೆ ಅಲ್ಲಿಯ ಗ್ರಾಂಥಿಕ ರೂಪವೂ ದೋಷಯುಕ್ತವಾಗಿದೆ ದಕ್ಷಿಣ ಕನ್ನಡ ಜಿಲ್ಲೆಯ ಭಾಷೆಯನ್ನು ತುಳು ಮತ್ತು ಕೊಂಕಣೀ ಭಾಷೆಗಳು ಏಕಪ್ರಕಾರವಾಗಿ ಆಕ್ರಮಿಸುತ್ತಿರುವುವು ಇಂತಹ ಸ್ಥಿತಿಯಲ್ಲಿ ಅದು ಜೀವಿತವಾಗಿ ಹೇಗುಳಿಯಬೇಕು? ಈ ಪ್ರಕಾರವಾಗಿ, ಯಾವ ಭಾಷೆಗಾದರೂ ಇಬ್ಬದಿಯಲ್ಲಿಯೂ ಹೊಂದಿಕೆಯಾಗಿರುವ ಅನ್ಯಭಾಷೆಗಳ ಸಂಸರ್ಗದಿಂದ ಅನೇಕ ವಿಕಾರಗಳುಂಟಾಗುತ್ತವೆಂಬದು ನಿರ್ವಿವಾದವಾದ ಮಾತಾಗಿದೆ. ಆಶ್ಚರ್ಯವೇನೂ ಇಲ್ಲ ಇನ್ನು ಮುಂದೆಯಾದರೂ ನಾವು ಎಚ್ಚರದಿಂದಿದ್ದರೆ ತೀರಿತು ಯಾವ ಭಾಷೆಯ ಭಯವೂ ಉಳಿಯುವುದಿಲ್ಲ ಈಗಿನ ರಾಜಭಾಷೆಯಾದ ಇಂಗ್ಲಿಷವೂ ಕಾಲಾನುಕ್ರಮದಿಂದ ನಮ್ಮ ಭಾಷೆಯಲ್ಲಿ ಸೇರುತ್ತಿದೆ ಇದಕ್ಕಾಗಿಯೂ ನಾವು ಬಹಳ ಎಚ್ಚರಪಡತಕ್ಕದ್ದು

ಹೀಗೆ ಪರಭಾಷೆಗಳು ನಮ್ಮ ಕನ್ನಡದಲ್ಲಿ ಬಂದು ಸೇರಿಕೊಳ್ಳದಿರುವುದಕ್ಕೆ ನಾವು ಈಗ್ಗೆ ಅವಶ್ಯವಾಗಿ ಪ್ರಯತ್ನ ಮಾಡಲಿಕ್ಕೆ ಬೇಕು ಈ ಪ್ರಯತ್ನಗಳಲ್ಲೊಂದೆರಡು ನನ್ನ ಅಭಿಪ್ರಾಯದಂತೆ ಯೋಗ್ಯವಾಗಿ ತೋರಿದ್ದರಿಂದ ಅವುಗಳನ್ನು ಇಲ್ಲಿ ಬರೆಯುತ್ತೇನೆ

(೧) ಭಾಷಾಂತರ ಮಾಡಿ ಬರೆಯಲ್ಪಡುವ ಚಿಕ್ಕ ಚಿಕ್ಕ ಪುಸ್ತಕಗಳಿಗಿಂತ ಭಾಷಾಂತರವಲ್ಲದ ಸ್ವತಂತ್ರವಾದ ಪುಸ್ತಕಗಳಿಗೆ ಮೊದಲು ಉತ್ತೇಜನವು ದೊರೆಯಬೇಕು ಶಾಸ್ತ್ರೀಯ ವಿಷಯ ಇತಿಹಾಸ ಮೊದಲಾದ ದೊಡ್ಡ ದೊಡ್ಡ ಗ್ರಂಥಗಳು ಭಾಷಾಂತರದ ಹೊರತು ಸಾಧ್ಯವಲ್ಲವಾದ್ದರಿಂದ, ಅಂಥವುಗಳನ್ನು ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಳಿಯು ಯಥೋಚಿತವಾಗಿ ಪರೀಕ್ಷಿಸಿ, ನಂತರ ಅವುಗಳನ್ನು ಪ್ರಸಿದ್ಧಿಸತಕ್ಕದ್ದು

(೨) ಪರಿಷತ್ತಿನವರಿಗೆ ಮಾನ್ಯವಾಗದ ಪುಸ್ತಕಗಳೂ, ಮಾಸಿಕ ವಹಿಗಳೂ

ಯಾವ ಶಾಲೆಯಲ್ಲಿಯೂ, ವಾಚನಾಲಯದಲ್ಲಿಯೂ ಉಪಯೋಗಿಸಬಾರದೆಂಬ ಬಗ್ಗೆ ಆಯಾಯ ಅಧಿಕಾರಿಗಳಿಗೆ ಪರಿಷತ್ತಿನವರು ವಿಜ್ಞಾಪಿಸಿಕೊಳ್ಳತಕ್ಕದ್ದು

(೩) ಕನ್ನಡ ಸಾಹಿತ್ಯದಲ್ಲಿ ಅವಶ್ಯವಾಗಿ ಬೇಕಾಗುವ ಶಾಸ್ತ್ರೀಯ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಪಾರಿಭಾಷಿಕ ಶಬ್ದಗಳನ್ನಾರಿಸಿ ತೆಗೆದು, ಸ್ಪಷ್ಟವಾದ ಅರ್ಥದೊಂದಿಗೆ ಒಂದು “ ಪಾರಿಭಾಷಿಕ ಶಬ್ದಕೋಶ ” ವನ್ನು ಪಂಡಿತರಿಂದ ರಚಿಯಿಸಿ ಅದರ ಒಂದೊಂದು ಪ್ರತಿಯನ್ನು ಪ್ರಸಿದ್ಧರಾದ ಗ್ರಂಥಕರ್ತರಿಗೂ, ಮಾಸಿಕ ಪುಸ್ತಕ ಸಂಪಾದಕರಿಗೂ, ಪಾಠಶಾಲೆಗಳ ವಾಚನಾಲಯಗಳಿಗೂ ಉಚಿತವಾಗಿ ಕಳುಹಿಸತಕ್ಕದ್ದು

(೪) ಈಗ್ಗೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ರೂಢಿಯಲ್ಲಿರುವ ಗ್ಲಾಸು, ರೈಲು, ಕಪ್ಪು (cup), ಟಪಾಲು, ಹುಕುಮು ಮೊದಲಾದ ಪಾರಿಭಾಷಿಕ ಶಬ್ದಗಳು ಸಾಧುವೆಂದು ಗ್ರಹಿಸಿ, ಇಂಥ ಶಬ್ದಗಳನ್ನು ಕನ್ನಡದಲ್ಲಿ ಉಪಯೋಗಿಸಬಹುದೆಂಬುದನ್ನು ತೋರಿಸುವ ಬೇರೊಂದು “ ಪ್ರಚುರ ಪಾರಿಭಾಷಿಕ ಶಬ್ದಕೋಶ ” ವನ್ನು ರಚಿಯಿಸಿ ಪ್ರಸಿದ್ಧಿಸುವುದು

(೫) ಮೇಲಿನ (೩) ಮತ್ತು (೪) ಈ ನಿಯಮಗಳಲ್ಲಿಯ ಬೇರೆ ಬೇರೆ ಕೋಶಗಳನ್ನು ಕೂಡಿಸಿ ಒಂದೇ ಕೋಶವನ್ನು ಮಾಡಲೂ ಬಹುದು

ಮಹನೀಯರೇ, ಈ ಸಾಧನಗಳು ಶೀಘ್ರಕಾಲದಲ್ಲಿ ಕೈಕೊಳ್ಳಲ್ಪಟ್ಟರೆ, ಈ ಮುಂದೆ ಭಾಷೆಯು ಸಂಸರ್ಗಜನ್ಯದೋಷಕ್ಕೆ ಎಂದೂ ಗುರಿಯಾಗಲಾರದೆಂದು ನಿರ್ವಿವಾದವಾಗಿ ಹೇಳಬಹುದು

———

III ಕರ್ನಾಟಕ ಭಾಷೆಯ ಏಳ್ಗೆಯೂ, ಅದರ ಸಾಧನಗಳೂ.

ಮಾತೃ ಭಾಷೆಯ ಏಳ್ಗೆಯ ಬಗ್ಗೆ ನಿದ್ರಾವಸ್ಥೆಯಲ್ಲಿದ್ದ ಕರ್ನಾಟಕಸ್ಥರು ಈಗೀಗ ಏಳಲಾರಂಭಿಸಿದ್ದಾರೆ ಪಂಡಿತರನೇಕರು ನಾನಾ ಉಪಾಯಗಳನ್ನು ಯೋಚಿಸುತ್ತಿರುವರು. ಧಾರವಾಡದವರು “ ಕರ್ನಾಟಕ ವಿದ್ಯಾವರ್ಧಕ ಸಂಘ” ವೊಂದನ್ನು ಅನೇಕ ವರುಷಗಳ ಹಿಂದೆಯೇ ಏರ್ಪಡಿಸಿಯೂ, ಗ್ರಂಥಕರ್ತರ ಸಮ್ಮೇಲನವನ್ನು ಕೂಡಿಸಿಯೂ ಕರ್ನಾಟಕ ಭಾಷೆಯ ಏಳ್ಗೆಗಾಗಿ ಪ್ರಯತ್ನಗಳನ್ನು ಮಾಡಿದರು ಈಗಲ್ಲು ಸಹ ವಿದ್ಯಾವರ್ಧಕ ಸಂಘದಿಂದ ‘ವಾಗ್ಭೂಷಣ’ ವೆಂಬ ಪ್ರೌಢವಾದ ಮಾಸಪತ್ರಿಕೆಯ ಮುಖಾಂತರವಾಗಿ ಅವರು ಭಾಷಾಸೇವೆಯನ್ನು ಏಕ ಪ್ರಕಾರವಾಗಿ ಮಾಡುತ್ತಿರುವರು ಅಲ್ಲದೆ, ಪ್ರಸಿದ್ಧರಾದ ಗ್ರಂಥಕರ್ತೃಗಳಿಗೆ ಇನಾಮು ಕೊಡುವುದಕ್ಕಾಗಿ ಪ್ರತಿವರುಷ ೫೦೦ ರೂಪಾಯಿಗಳನ್ನು ಮುಂಬಯಿ ಸರಕಾರದವರು ಈ

ಸಂಘಕ್ಕೆ ದಯೆಪಾಲಿಸುತ್ತಿದ್ದಾರೆ. ಕರ್ನಾಟಕ ವೃತ್ತ, ಕರ್ನಾಟಕ ವೈಭವ ಚಂದ್ರೋದಯ, ಈ ಮೂರು ವಾರಪತ್ರಗಳೂ ತಕ್ಕಮಟ್ಟಿಗೆ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೆ ಪ್ರಯತ್ನಿಸುತ್ತಿರುವುವು. ಇದರಂತೆ, ಮೈಸೂರು ಸಂಸ್ಥಾನದ ಭಾಷಾಭಿಮಾನಿಗಳೂ, ಮಹಾರಾಜರವರೂ ಎಷ್ಟೋ ಪ್ರಕಾರಗಳಿಂದ ಕನ್ನಡ ಭಾಷೆಯ ಉನ್ನತಿಗಾಗಿ ಶ್ರಮಪಡುತ್ತಿರುವದನ್ನು ನಾವು ಕಣ್ಣಾರೆ ನೋಡುತ್ತೇವೆ. ಹೋದ ವರುಷ ಸ್ಥಾಪಿತವಾದ ಕರ್ನಾಟಕ ಸಾಹಿತ್ಯ ಪರಿಷತ್ತೊಂದು ಇವೆಲ್ಲ ಮಾತುಗಳಿಗೂ ಸಾಕ್ಷಿಯಾಗಿದೆ. ಈ ಪರಿಷತ್ತಿನ ಶ್ಲಾಘನೀಯವಾದ ಉದ್ದೇಶಗಳೆಂದರೆ ಕರ್ನಾಟಕ ಭಾಷೆಯನ್ನು ಬೆಳಸುವುದೂ, ಅದರ ರೂಪಗಳನ್ನು ಏಕರೂಪತೆಗೆ ತರುವುದೂ ಆಗಿರುವುವು. ಮಂಗಳೂರು, ಉಡಿಪಿ ಮೊದಲಾದ ಸ್ಥಳಗಳಲ್ಲಿಯೂ ಭಾಷೋನ್ನತಿಯ ಬಗ್ಗೆ ಹರವಿಕ ಪ್ರಯತ್ನಗಳು ನಡೆದಿರುವುವು. ಚಿಕ್ಕ ಚಿಕ್ಕ ಗ್ರಂಥಗಳೆಷ್ಟೋ ಮಾಸಪತ್ರಿಕೆಗಳಲ್ಲಿ ಪ್ರತಿಮಾಸವೂ ಪ್ರಕಟವಾಗುತ್ತಿರುವುವು. ಇದರಿಂದ, ಸಣ್ಣ ಪುಟ್ಟ ಲೇಖಕರಿಗೆ ವಿಶೇಷಾನುಕೂಲ್ಯವು ಕಲ್ಪಿಸಲ್ಪಟ್ಟಿದೆ. ಇರಲಿ.

ಮುಂಬಯಿ ಕರ್ನಾಟಕದಲ್ಲಿ ಮ|| ರಾಮಚಂದ್ರರಾವ್ ದೇಶಪಾಂಡೆ, ಎಮ್ ಎ, ಮ|| ಎ ಎನ್ ಮುಗದಾಳ, ಬಿ. ಎ, ಮ|| ವಾಸುದೇವಾಚಾರ ಕೆರೂರ, ಮ|| ವೆ ತಿ ಗಳಗನಾಥ, ಮ|| ಎ ಬಿ ಆಲೂರ ಬಿ ಎ, ಮೊದಲಾದ ಗ್ರಂಥಕರ್ತರೂ, ಮ|| ಪೂಜಾರ, ಮ|| ತಟ್ಟಿ, ಮ|| ಸಬರದ, ಮ|| ಕದಡಿ, ಮ|| ಜೋಶಿ, ಮ|| ಕುರಡಿ, ಮ|| ಬೂದಿಹಾಳ ಮೊದಲಾದ ಲೇಖಕರೂ ಕರ್ನಾಟಕ ಭಾಷೆಯ ಉನ್ನತಿಯ ಬಗ್ಗೆಯೂ, ಗ್ರಂಥ ಸಂಗ್ರಹವನ್ನು ಹೆಚ್ಚಿಸುವ ಬಗ್ಗೆಯೂ ಜಾಗರೂಕತೆಯಿಂದ ಪ್ರಯತ್ನಮಾಡುತ್ತಿರುವರು. ಅಲ್ಲದೆ, ಮ|| ಮುದವೇಡಕರ, ಮ|| ಮನ್ನೂರಕರ, ಮ|| ಹೊನ್ನಾಪುರಮಠ, ಮ|| ಟೆಂಬೆ ಮೊದಲಾದ ವೃತ್ತಪತ್ರಕಾರರೂ, ಮ|| ಎ ಬಿ. ಜೋಶಿ, ಮ|| ಕರಿಗುದರಿ, ಮ|| ಮಹಿಷಿ, ಮ|| ಜಹಗೀರದಾರ, ಪಂಡಿತಕಟ್ಟಿ ಮೊದಲಾದ ಮಹನೀಯರೂ ಕನ್ನಡ ಪ್ರಾಥಮಿಕ ಶಿಕ್ಷಣಾಭಿಮಾನಿಗಳಾಗಿದ್ದು, ಆಗಾಗ್ಗೆ ತಮ್ಮ ಜ್ಞಾನವನ್ನು ಕನ್ನಡಿಗರಿಗೆ ಮಾಡಿಕೊಡುತ್ತಿರುವರು. ಇವರಲ್ಲದೆ, ಇನ್ನೂ ಅನೇಕ ಗ್ರಂಥಕರ್ತರೂ, ಲೇಖಕರೂ ಬೆಳಕಿಗೆ [illegible]ತ್ತಿರುವರು. ಈಗ ಸುಮಾರು ೨೫ ವರುಷಗಳ ಕೆಳಗಿನ ಕನ್ನಡದ ಸ್ಥಿತಿಯನ್ನೂ, ಈಗಿನ ಅದರ ಸ್ಥಿತಿಯನ್ನೂ ಅವಲೋಕಿಸಿದರೆ, ಈ ಅಲ್ಪಕಾಲಾವಧಿಯಲ್ಲಿ ಕನ್ನಡದ ಬೆಳವಣಿಗೆಯು ತಕ್ಕಮಟ್ಟಿಗೆ ಚನ್ನಾಗಿ ಆಗಿರುವುದೆಂದೇ ಹೇಳಬೇಕಾಗುವುದು. ಆದರೆ, ಸುಧಾರಣೆಯ ಮಾರ್ಗದಲ್ಲಿಯೂ, ಕ್ರಮದಲ್ಲಿಯೂ ಮಾತ್ರ ಕೆಲವು ನ್ಯೂನತೆಗಳು ಕಂಡುಬರುತ್ತವೆ. ಅವುಗಳ ಬಗ್ಗೆ ಮುಂದೆ ವಿಚಾರಿಸೋಣ.

ಈ ತರದ ಸುಧಾರಣೆಯ ಕ್ರಮವೂ, ಮಾತೃಭಾಷೆಯ ಮೇಲಿನ ಮಮತೆಯೂ ಮುಂಬಯಿ ಕರ್ನಾಟಕಸ್ಥಳದಲ್ಲಿ ಮಾತ್ರ ಉಂಟಾಗಿರುತ್ತವೆಂದು ಹೇಳಲಾಗದು. ಮಂಗಳೂರು, ಉಡಿಪಿ, ಮೈಸೂರು, ಬೆಂಗಳೂರು ಮೊದಲಾದ ಸ್ಥಳಗಳಲ್ಲಿಯೂ

ಕನ್ನಡವು ಏಳ್ಗೆಯನ್ನು ಹೊಂದುತ್ತ ನಡೆದಿರುವುದು. ಮೈಸೂರು ಸಂಸ್ಥಾನದಲ್ಲಿ ಕನ್ನಡಕ್ಕೆ ಸರಕಾರದ ಆಶ್ರಯವಿರುವುದರಿಂದ ಅಲ್ಲಿ ಪಂಡಿತರ ಸಂಖ್ಯೆಯೂ, ಗ್ರಂಥ ಕರ್ತೃಗಳ ಸಂಖ್ಯೆಯೂ ಹೆಚ್ಚಾಗಿರುವುದೇನೂ ಆಶ್ಚರ್ಯವಲ್ಲ. ಶ್ರೀ. ಆರ್. ತಾತಾ, ಎಮ್, ಎ ಎ. ಶಾಸ್ತ್ರಿ, ಎಚ್. ಚಿದಂಬರಯ್ಯ, ಆರ್. ರಘುನಾಥರಾವ್, ಬಿ. ವೆಂಕಟಾಚಾರ್ಯ, ಶಾ. ವೆಂಕಟರಮಣಯ್ಯ, ಕೆ. ಸುಬ್ಬರಾವ್, ಆರ್. ನರಸಿಂಹಾಚಾರ, ಕೆ. ಸೀತಾರಾಮಶಾಸ್ತ್ರಿ, ಬಿ. ರಾಮರಾವ್, ಸೋಸಲೆ ಅಯ್ಯಾಶಾಸ್ತ್ರಿ ಮೊದಲಾದ ಪಂಡಿತೋತ್ತಮರು ಕನ್ನಡದ ಏಳ್ಗೆಯ ಬಗ್ಗೆಯೂ, ಆದರ ಸುಧಾರಣೆಯ ಬಗ್ಗೆಯೂ ಮನಮುಟ್ಟಿ ಹೆಣಗುತ್ತ, ತಮ್ಮ ಅಗಾಧವಾದ ಜ್ಞಾನದಾನವನ್ನು ಕನ್ನಡಿಗರಿಗೆ ಮಾಡಿಕೊಡುತ್ತಿದ್ದಾರೆ. ಮುಂಬಯಿ ಕರ್ಣಾಟಕಕ್ಕಿಂತ ಉಳಿದ ಭಾಗಗಳಲ್ಲಿ, ಉಚ್ಚತರವಾದ ಮಾಸಪತ್ರಿಕೆಗಳು ಪ್ರಕಟವಾಗುತ್ತಿರುವವು. ಅವುಗಳಲ್ಲಿ ಕರ್ಣಾಟಕ ಕಾವ್ಯಕಲಾನಿಧಿ, ಶ್ರೀ ಕೃಷ್ಣಸೂಕ್ತಿ, ಬೋಧಿನಿ, ಅಕ್ಷರಾಂಜಲಿ, ಕರ್ಣಾಟಕ ಗ್ರಂಥಮಾಲೆ, ಕರ್ಣಾಟಕ ಚಂದ್ರಿಕೆ, ಮಧುರವಾಣಿ ಮೊದಲಾದವುಗಳೂ ಕನ್ನಡದ ಸೇವೆಯನ್ನು ಚನ್ನಾಗಿ ಮಾಡುತ್ತಿರುವುದಾಗಿ ಕಾಣುತ್ತದೆ. ಆದರೆ, ಈಯೆಲ್ಲ ಮಾಸ ಪತ್ರಿಕೆಗಳಲ್ಲಿ ಪರಸ್ಪರ ಪ್ರೇಮವೂ, ಒಗ್ಗಟ್ಟೂ, ಸಹಾನುಭೂತಿಯೂ ತೀರ ಕಡಿಮೆ ಪ್ರಮಾಣದಲ್ಲಿರುವುವೆಂಬುದು ಕೇವಲ ಶೋಚನೀಯವಾದ ಸಂಗತಿಯಲ್ಲದೆ, ಕನ್ನಡದ ಸುಧಾರಣೆಗೆ ಒಂದು ತರದ ಅಡ್ಡಿಯೆಂದೇ ಹೇಳಬೇಕಾಗುವುದು. ಕೋಗಿಲೆ* ಯ ಮೇಲೆ ಕಾಗೆ* ಯೂ, ಕಾಗೆಯ ಮೇಲೆ ಭೂಷಣ*ವೂ, ಭೂಷಣದ ಮೇಲೆ ಕಾಗೆಯೂ, ವೃತ್ತ*ದ ಮೇಲೆ ವೈಭವ*ವೂ, ವೈಭವದ ಮೇಲೆ ಭಾರತವೂ* ಟೀಕೆಗಳನ್ನು ಮಾಡುವುದು ನೋಡಿದರೆ ಮೇಲಿನ ಸಂಗತಿಯು ಮನದಟ್ಟಾಗಿ ದುಃಖವನ್ನುಂಟು ಮಾಡುತ್ತದೆ.

ಮೈಸೂರು ಪ್ರಾಂತದಲ್ಲೇರ್ಪಟ್ಟಿರುವ ಕರ್ಣಾಟಕ ಪಂಡಿತ ವಿದ್ಯಾಲಯವು ಭಾವೀ ಕನ್ನಡದೇಳ್ಗೆಗೆ ಬಲವಾದ ಸಾಧನವಾಗಿದೆ. ಅಲ್ಲಿ ಸಂಸ್ಕೃತ, ಕನ್ನಡ ಭಾಷೆಗಳ ಮತ್ತು ವ್ಯಾಕರಣದ ನಿಜವಾದ ಹಾಗೂ ಪೂರ್ಣವಾದ ಜ್ಞಾನವು ದೊರೆಯುತ್ತಿರುವುದರಿಂದ, ಅಲ್ಲಿ ಕಲಿತು ತೇರ್ಗಡೆ ಹೊಂದಿದವರೇ ನಿಜವಾದ ಪಂಡಿತರು. ಅವರೇ ಭಾಷೆಯ ಭಾವೀ ಉದ್ಧಾರಕರು. ಬೇರೆ ಬೇರೆ ಭಾಗಗಳ ಭಾಷೆಗಳನ್ನು ಏಕರೂಪತೆಗೆ ತರುವುದಕ್ಕಾದರೂ ಅವರೇ ಸಮರ್ಥರು. ಉಳಿದ ಭಾಗಗಳಲ್ಲಿಯ ಗ್ರಂಥಕರ್ತರೂ, ಲೇಖಕರೂ ಸಂಸ್ಕೃತದ ಪರಿಚಯವಿಂದಲೂ, ಕನ್ನಡದ ಸಾಮಾನ್ಯ ಜ್ಞಾನದಿಂದಲೂ ಕೈಲಾದ ಮಟ್ಟಿಗೆ ಪ್ರಯತ್ನಿಸಿ ಮುಂದೆ ಬಂದಿರುವರಲ್ಲದೆ, ಅವರಿಗ ವ್ಯಾಕರಣದ ವ್ಯುತ್ಪತ್ತಿಯೇ ಚನ್ನಾಗಿರುವುದಿಲ್ಲವಾದ್ದರಿಂದ, ಕೆಟ್ಟುಹೋದ ಶಬ್ದರೂಪಗಳನ್ನು ನಿರ್ಣಯಿಸುವುದಕ್ಕೂ, ಸರಿಯಾದ ಬೇರೆ ಶಬ್ದಗಳನ್ನು ಸಿದ್ಧಮಾಡಲಿಕ್ಕೂ ಅವರಿಗೆ

ಕೋಗಿಲೆ—ಕನ್ನಡ ಕೋಗಿಲೆ; ಕಾಗೆ—ಶ್ರೀ ಕೃಷ್ಣಸೂಕ್ತಿ; ಭೂಷಣ—ವಾಗ್ಭೂಷಣ; ವೈಭವ—ಕರ್ಣಾಟಕ ವೈಭವ; ವೃತ್ತ—ಕರ್ಣಾಟಕ ವೃತ್ತ; ಭಾರತ—ಸಚಿತ್ರ ಭಾರತ.

ವಿಶೇಷವಾಗಿ ಶ್ರಮವೆನಿಸುವುದು ಯಾವುದಾದರೊಂದು ಶಬ್ದರೂಪವು ಸರಿಯಾಗಿದೆಯೋ ಇಲ್ಲವೋ ಎಂಬದನ್ನು ನೋಡುವುದಕ್ಕೆ ಐದಾಣೆಯ "ನುಡಿಗಟ್ಟಿಂ" ಬ ಹೊಸಗನ್ನಡ ವ್ಯಾಕರಣವೊಂದಲ್ಲದೆ ಅವರಿಗೆ ಬೇರೆ ಸಾಧನವಿಲ್ಲ ಹಳಗನ್ನಡವನ್ನರಿಯದವರಾದ್ದರಿಂದ ಶಬ್ದಮಣಿದರ್ಪಣ ಮೊದಲಾದ ವ್ಯಾಕರಣಗಳ ಪರಿಚಯವು ಅವರಿಗಾಗುವಂತಿಲ್ಲ ಧಾರವಾಡ 'ಟ್ರೇನಿಂಗ್ ಕಾಲೇಜಿ' ನಲ್ಲಿ ಶಬ್ದಮಣಿದರ್ಪಣವನ್ನು ಕಲಿಸುತ್ತಿರುವುದೇನೋ ನಿಜ, ಆದರೆ, ತುಸುವಾದರೂ ಹಳಗನ್ನಡದ ಪರಿಚಯವಿಲ್ಲದ ವಿದ್ಯಾರ್ಥಿಗಳಿಗೆ ಅದರಿಂದೇನೂ ಪ್ರಯೋಜನವಾಗುವಂತಿಲ್ಲ ಈಗ್ಗೆ ನೂರಾರು ವರುಷಗಳಿಂದ ಹಳಗನ್ನಡ ವ್ಯಾಕರಣವನ್ನು ಕಲಿಸುತ್ತಿರುವ ಈ ಕಾಲೇಜಿನಲ್ಲಿ ಪೂರ್ಣವಾಗಿ ಅಭ್ಯಾಸವನ್ನು ಮಾಡಿದವರ ಸಂಖ್ಯೆಯು ಎಲ್ಲಿಂದರೂ ಎರಡು ಮೂರು ಸಾವಿರದವರೆಗೆ ಹೊರಡಬಹುದು ಅವರೆ ಒಬ್ಬನಾದರೂ ಕರ್ನಾಟಕ ವ್ಯಾಕರಣದಲ್ಲಿ ಪಂಡಿತನಿರುವನೇ ? ಈಗಿನ ಕಾಲದಲ್ಲಿ ನಮಗೆ ಪ್ರಾಚೀನ ಪಂಡಿತರ ಗ್ರಂಥಗಳನ್ನೋದದಿದ್ದರೆ ನಿರ್ವಾಹವಿಲ್ಲ. ಗ್ರಾಂಥಿಕ ಏಕರೂಪತೆಯನ್ನು ಮಾಡುವುದಕ್ಕೂ ಹಳೆಯ ಗ್ರಂಥಾಭ್ಯಾಸವೂ, ವ್ಯಾಕರಣದ ನಿಜವಾದ ಜ್ಞಾನವೂ ನಮಗೆ ಅತ್ಯವಶ್ಯವಾಗಿರುವುವು ಮೈಸೂರು ಪ್ರಾಂತದಲ್ಲಿ ಮಾತ್ರ ಕನ್ನಡ ಪಂಡಿತರ ಸಂಖ್ಯೆಯು ಹೆಚ್ಚಿದ್ದರೆ ಏನು ಫಲವು ! ಬೇರೆ ಬೇರೆ ಭಾಗಗಳ ಭಾಷೆಯ ಸ್ವರೂಪಗಳು ಅವರಿಗೇನುಗೊತ್ತು ? ಆದುದರಿಂದ ಮಹಸೀಯರೇ, ಕನ್ನಡ ಭಾಷೆಯ ಏಳ್ಗೆಗೂ, ಅದರ ಏಕರೂಪತೆಗೂ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪಂಡಿತರಿರುವುದು ಇಷ್ಟವಾದದ್ದಲ್ಲವೆ ? ಇದಕ್ಕಾಗಿ ಎರಡು ಉತ್ಕೃಷ್ಟೋಪಾಯಗಳು ಮಾತ್ರ ನನ್ನ ಬುದ್ಧಿಗೆ ತೋಚುತ್ತವೆ

(೧) ದೇಶಭಾಷೆಯ ಟ್ರೇನಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವ್ಯಾಕರಣದ ನಿಜವಾದ ಜ್ಞಾನವನ್ನು ಮಾಡಿಕೊಡುವದಕ್ಕಾಗಿ ಪ್ರಸಿದ್ಧರಾದ ವೈಯಾಕರಣಿಗಳನ್ನು ನಿಯಮಿಸಿಕೊಳ್ಳುವುದಕ್ಕೆ ಸರಕಾರಕ್ಕೆ ವಿಜ್ಞಾಪಿಸಿಕೊಳ್ಳುವುದು

(೨) 'ಕರ್ನಾಟಕ ವಿದ್ಯಾವರ್ಧಕ ಸಂಘ' ಮೊದಲಾದ ಸಂಸ್ಥೆಗಳು ಪ್ರತಿ ವರುಷ ಇಬ್ಬರನ್ನು ಮೈಸೂರಿನ ಪಂಡಿತ ಪರೀಕ್ಷೆಗೆ ಅಭ್ಯಾಸಮಾಡುವುದಕ್ಕೆ ವಿದ್ಯಾರ್ಥಿ ವೇತನವನ್ನು ಕೊಟ್ಟು ಕಳಿಸುವುದು ಇದಕ್ಕಾಗಿ ಒಂದು ಪ್ರವೇಶ ಪರೀಕ್ಷೆಯನ್ನೂ ನಿರ್ಮಿಸಬಹುದು

ಹೀಗಾಗುವುದರಿಂದ ಹತ್ತೆಂಟು ವರುಷಗಳಲ್ಲಿಯೇ ನಮ್ಮ ಕನ್ನಡವು ವೃದ್ಧಿಗೆ ಬಂದು, ಎಲ್ಲ ಅವಯವಗಳಿಂದ ಪರಿಪೂರ್ಣವಾಗಿ ಶೋಭಿಸ ಹತ್ತುವುದು

——— 0 ———

IV ದೇಶಭಾಷಾ ಪರೀಕ್ಷೆಗಳು.

ಇನ್ನು, ನಮ್ಮಲ್ಲಿಯ ದೇಶಭಾಷೆಗಳ ಪರೀಕ್ಷೆಗಳನ್ನು ಕುರಿತು ಆಲೋಚಿಸುವಾ. ಮೊದಲನೆಯ ಪರೀಕ್ಷೆಯೆಂದರೆ ಕನ್ನಡ ಮುಲಕೀ (Vernacular Final) ಪರೀಕ್ಷೆಯು. ಇದು ಪ್ರತಿಯೊಂದು ಜಿಲ್ಲೆಯಲ್ಲಿ ಆಯಾಯ ಜಿಲ್ಲೆಯ ಶಾಲಾಧಿಕಾರಿಗಳಿಂದಲೂ, ಹೈಸ್ಕೂಲಿನ ಮುಖ್ಯಾಧ್ಯಾಪಕನಿಂದಲೂ ಕೂಡಿದ ಒಂದು ಸಂಘದಿಂದ (Committee) ತೆಗೆದುಕೊಳ್ಳಲ್ಪಡುವುದು. ಪರೀಕ್ಷೆಗೆ ನಿಯಮಿಸಲ್ಪಟ್ಟ ಕನ್ನಡ ಭಾಷಾವಿಷಯದಲ್ಲಿ ಕನ್ನಡ ಕ್ರಮಿಕ ಏಳನೆಯ ಪುಸ್ತಕ, ನುಡಿಗಟ್ಟು (Grammar of new Kanarese), ನಿಬಂಧ ಇವೇ ಮುಖ್ಯ ಭಾಗಗಳಾಗಿರುವುವು. ಏಳನೆಯ ಪುಸ್ತಕದೊಳಗಿನ ಪದ್ಯಭಾಗದ ೩೦೦ ಸಾಲುಗಳು ಮಾತ್ರ ಪ್ರತಿವರುಷ ನಿಯಮಿಸಲ್ಪಟ್ಟ ವಿಷಯವು. ನುಡಿಗಟ್ಟಾದರೋ ಭಾಷೆಯನ್ನು ತಿಳಿದುಕೊಳ್ಳಲಿಕ್ಕೆ ಏನೂ ಉಪಯೋಗವಿಲ್ಲದ ಚಿಕ್ಕ ಪುಸ್ತಕವಾಗಿರುವುದು. (ಇದರ ಹೊರತು ಬೇರೆ ಹೊಸಗನ್ನಡ ವ್ಯಾಕರಣಗಳಿಲ್ಲದ್ದರಿಂದ, ಇದು ಒಂದುವೇಳೆ ಗ್ರಾಹ್ಯವಾದರೂ ಆಗಬಹುದು.) ಪರೀಕ್ಷಕರೂ ಸಹ ವಿದ್ಯಾರ್ಥಿಗಳ ವ್ಯಾಕರಣದ ನಿಜವಾದ ಜ್ಞಾನವನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ಕೇಳುವುದಿಲ್ಲ. ಈ ತರದ ಅಭ್ಯಾಸಕ್ರಮದಿಂದ ವಿದ್ಯಾರ್ಥಿಗಳ ಕಾಲವೂ, ಶ್ರಮವೂ ಮಾತ್ರ ವ್ಯರ್ಥವಾಗಿ ಹೋಗುವುವಲ್ಲದೆ, ಅದರಿಂದ ಯಾವ ಲಾಭವೂ ಕಂಡು ಬರುವುದಿಲ್ಲ. ನಿಬಂಧದ ವಿಷಯವು ಮಾತ್ರ ಇಷ್ಟೇ ಎಂದು ಗೊತ್ತುಪಡಿಸಲ್ಪಟ್ಟಿಲ್ಲ. ಇದೊಂದು ಲಾಭವೇ ಸರಿ. ಆದರೂ ಪರೀಕ್ಷಕರಲ್ಲಿ ವಿದ್ಯಾರ್ಥಿಗಳ ಭಾಷೆ, ಶುದ್ಧಬರಹ, ವಾಕ್ಯರಚನೆ ಇವುಗಳ ಕಡೆಗೆ ಲಕ್ಷ್ಯಗೊಡದೆ, ಉತ್ತರ ಪತ್ರಿಕೆ (Answer paper) ಯನ್ನು ಮಾತ್ರ ತೂಗಿ ಗುಣಗಳನ್ನು ಕೊಡುವ ಪರೀಕ್ಷಕರೇ ಹೆಚ್ಚೆಂದು ಹೇಳಬೇಕಾಗುವುದು. ಇದೂ ಕೇವಲ ಶೋಚನೀಯವಾದ ಸಂಗತಿಯೇ ಸರಿ. ಹೀಗೆ, ಇದ್ದ ಸ್ವಲ್ಪ ಭಾಷಾವಿಷಯದೊಳಗೆ ಪರೀಕ್ಷಕರೂ ಇಂತಹವರು ದೊರೆದರೆ ಕೇಳುವುದೇನು! ಇದರಿಂದ ಭಾವೀ ಕನ್ನಡದೇಳಿಗೆಗೆ ಕುಂದಕವೇ ಹೊರತು ಬೇರೊಂದಿಲ್ಲ. ಪ್ರತಿವರುಷ ಪರೀಕ್ಷೆಗೆ ಬೇರೆ ಬೇರೆ ಪುಸ್ತಕಗಳು ನಿಯಮಿಸಲ್ಪಟ್ಟು, ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನದ ಕಡೆಗೆ ಹೆಚ್ಚು ಲಕ್ಷ್ಯಗೊಡುತ್ತ ಹೋದರೆ ಈ ಅಡ್ಡಿಯು ದೂರಾಗುವುದು. ಸಾಮಾನ್ಯಜ್ಞಾನದ ಪರೀಕ್ಷೆಯಾದರೆ, ವಿದ್ಯಾರ್ಥಿಗಳು ಸಹಜವಾಗಿ ಹೆಚ್ಚು ಕನ್ನಡ ಪುಸ್ತಕಗಳನ್ನು ಓದಹತ್ತುವರು. ಭಾಷೆಯ ಬಗ್ಗೆ ಹೆಚ್ಚು ಕಲಿಯಲು ಯತ್ನಪಡುವರು. ವ್ಯಾಕರಣದ ನಿಯಮಗಳನ್ನು ಭಾಷೆಯಲ್ಲಿ ಹೇಗೆ ಉಪಯೋಗಿಸಬಹುದೆಂಬದನ್ನು ಅರಿತುಕೊಳ್ಳಲಿಕ್ಕೆ ಹವಣಿಸುವರು. ಒಟ್ಟಿನ ಮೇಲೆ, ಪರೀಕ್ಷೆಗಳ ಸ್ವರೂಪದಂತೆ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸಿದ್ಧತೆಯನ್ನಿಡುವರೆಂದರೆ ತಪ್ಪಾಗಲಿಕ್ಕಿಲ್ಲ. ಈ ಪರೀಕ್ಷೆಯಲ್ಲಿ ಒಂದು ವೇಳೆ ತೇರ್ಗಡೆ ಹೊಂದದಿದ್ದ ಉಮೇದವಾರನು (Candidate) ಎರಡನೆಯ ಸಾರಿ ಅದೇ ಪರೀಕ್ಷೆಗೆ

ಬೇರೊಂದು ಪುಸ್ತಕವನ್ನು ಓದಬೇಕಾಗುವುದು. ಆ ಸಾರೆಯೂ ದುರ್ದೈವದಿಂದ ತೇರ್ಗಡೆ ಹೊಂದದಿದ್ದವನು ಮೂರನೆಯ ಸಾರಿ ಮತ್ತೊಂದು ಪುಸ್ತಕವನ್ನೋದಲಿಕ್ಕೆ ಬೇಕು (ಸಾಮಾನ್ಯವಾಗಿ ಎರಡುಸಾರೆ ತೇರ್ಗಡೆ ಹೊಂದದಿರುವವರೇ ಬಹಳ.) ಹೀಗಾಗಿ, ಎಷ್ಟೋ ವಿದ್ಯಾರ್ಥಿಗಳು ಕನ್ನಡದಲ್ಲಿ ಕೆಲಮಟ್ಟಿಗಾದರೂ ಜ್ಞಾನವುಳ್ಳವರಾಗುವರೆಂಬದರಲ್ಲೇನೂ ಸಂದೇಹವಿಲ್ಲ.

ಇದರಂತೆಯೇ, 'ಟ್ರೇನಿಂಗ್ ಕಾಲೇಜ'ದ ಪ್ರವೇಶ ಪರೀಕ್ಷೆ ಹಾಗೂ ವಾರ್ಷಿಕ ಪರೀಕ್ಷೆ ಇವುಗಳಲ್ಲಿಯಾದರೂ ಕನ್ನಡ ಭಾಷೆಯ ಮತ್ತು ವ್ಯಾಕರಣದ ಸಾಮಾನ್ಯಜ್ಞಾನದ ಪರೀಕ್ಷೆಯಾಗುತ್ತಿದ್ದರೆ, ಮೇಲೆ ಹೇಳಿದಂತೆ ಉಮೇದವಾರರು ಸಹಜವಾಗಿಯೇ ಹೆಚ್ಚು ಗದ್ಯ-ಪದ್ಯ ಕಾವ್ಯಗಳನ್ನೂ, ವ್ಯಾಕರಣವನ್ನೂ ಓದಹತ್ತುವರು. ಅವುಗಳಲ್ಲಿ ಯೋಗ್ಯತೆಯ ಮೇರೆಗೆ ನಿಪುಣರೂ ಆಗಿ ಹೊರಡುವರು. ಒಂದೇ ಸ್ಥಳವಲ್ಲಿ ಎಲ್ಲರೂ ಎರಡು ಮೂರು ವರುಷಗಳವರೆಗೆ ಭಾಷೆಯಲ್ಲಿ ವ್ಯವಹರಿಸುವುದರಿಂದ, ಅವರೆಲ್ಲರ ವ್ಯಾವಹಾರಿಕ ಹಾಗೂ ಗ್ರಾಂಥಿಕ ಭಾಷೆಯು ಬಹುತರವಾಗಿ ಒಂದೇ ಆಗುವುದು. ಆದುದರಿಂದ ಪರೀಕ್ಷೆಗಳ ಸ್ವರೂಪದ ವಿಷಯವಾಗಿ ಸಾಹಿತ್ಯ ಪರಿಷತ್ತಿನವರು ಈ ಕೆಳಗಿನ ಉಪಾಯಗಳನ್ನು ಯೋಚಿಸಿ, ಅದರಂತೆ ಕೈಲಾದಮಟ್ಟಿಗೆ ವ್ಯವಸ್ಥೆ ಇಡುವುದಕ್ಕೆ ಆಯಾಯ ಭಾಗಗಳ ಸರಕಾರಗಳಿಗೆ ವಿಜ್ಞಪ್ತಿಯನ್ನು ಮಾಡಿಕೊಳ್ಳತಕ್ಕದ್ದು.

(೧) ಕನ್ನಡ ಮುಲಕೀ ಅಥವಾ ದೇಶಭಾಷೆಯ ಬೇರೊಂದು ಪರೀಕ್ಷೆಗೆ ಓದಿಸುತ್ತಿರುವ ಕ್ರಮಿಕ ಪುಸ್ತಕವೊಂದನ್ನೇ ಪ್ರತಿವರುಷ ಪರೀಕ್ಷೆಗೆ ನಿಯಮಿಸದೆ, ವರುಷವೊಂದರಂತೆ ಬೇರೆ ಬೇರೆ ಪುಸ್ತಕಗಳನ್ನು ಗೊತ್ತುಪಡಿಸುವುದು (ಒಂದೊಂದು ಸಾರಿ ಯೋಗ್ಯತೆಯ ಮೇರೆಗೆ ನ್ಯೂನಾಧಿಕ ಕ್ರಮಿಕ ಪುಸ್ತಕಗಳನ್ನು ನಿಯಮಿಸುವುದು)

(೨) ಇಂತಹ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಮೊದಲಿನ ವಿದ್ಯಾರ್ಥಿಗೆ ೫೦ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಬಹುಮಾನವನ್ನು ಕೊಡುವುದು

(೩) ಟ್ರೇನಿಂಗ್ ಕಾಲೇಜದ ಪ್ರವೇಶ ಹಾಗೂ ವಾರ್ಷಿಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಕನ್ನಡದ ಸಾಮಾನ್ಯಜ್ಞಾನವನ್ನೇ ಪರೀಕ್ಷಿಸುವುದು

(೪) ಸರಳವಾದ ಹಾಗೂ ಪರಿಶುದ್ಧವಾದ ಭಾಷಾಶೈಲಿಯುಳ್ಳ ವಿದ್ಯಾರ್ಥಿಗೆ ಉತ್ತಮವಾದ ಗ್ರಂಥವೊಂದನ್ನು ಬಹುಮಾನವಾಗಿ ಕೊಡುವುದು.

(೫) ಈ ಬಹುಮಾನಗಳನ್ನು ಕೊಡುವುದಕ್ಕೆ ಸರಕಾರದವರು ಒಪ್ಪದಿದ್ದಲ್ಲಿ, ವಿದ್ಯಾವರ್ಧಕ ಸಂಘ ಮೊದಲಾದ ಸಂಸ್ಥೆಯವರು ಆ ಬಗ್ಗೆ ಏರ್ಪಾಡುಗಳನ್ನು ಮಾಡಬಹುದು

ಈ ಐದು ಉಪಾಯಗಳ ಅವಶ್ಯಕತೆಯು ಮೈಸೂರು ಪ್ರಾಂತದವರಿಗಿರದಿದ್ದರೂ, ಮುಂಬಯಿ ಕರ್ನಾಟಕ, ಮದ್ರಾಸ ಕರ್ನಾಟಕದವರಿಗೆ ಈ ಕಾಲದಲ್ಲಿ ಇವುಗಳ ಅಗತ್ಯವು ಅತಿಶಯವಾಗಿರುವುದು. ಈ ಉಪಾಯಗಳೇ ಕರ್ನಾಟಕ ಭಾಷೆಯ

ಏಳ್ಗೆಗೂ, ಅದರ ಏಕರೂಪತೆಗೂ ಸಾಧನಗಳಾಗುವುವೆಂದು ಬೇರೆ ಹೇಳುವ ಕಾರಣವಿಲ್ಲ.

ಈಗಿನ ಕಾಲದಲ್ಲಿ ಇಂಗ್ಲಿಷವು ರಾಜಭಾಷೆಯಾಗಿರುವುದರಿಂದಲೂ, ಆ ಭಾಷೆಯ ಲಲಿತವಾಙ್ಮಯವೂ ಶಾಸ್ತ್ರೀಯ ವಿಷಯವೂ ಊರ್ಜಿತಾವಸ್ಥೆಯಲ್ಲಿರುವುದರಿಂದಲೂ ನಾವೆಲ್ಲರೂ ಅವನ್ನು ಕಲಿಯಲೇ ಬೇಕಾಗಿರುವುದು ಇಂಗ್ಲಿಷ ಗ್ರಂಥಗಳ ಆಧಾರದಿಂದಲೇ ಈಗ್ಗೆ ನಮ್ಮಲ್ಲಿಯ ಎಷ್ಟೋ ಪುಸ್ತಕಗಳು ಬರೆಯಲ್ಪಟ್ಟು, ಕನ್ನಡದ ಗ್ರಂಥಭಾಂಡಾರವು ಹೆಚ್ಚಿಸಲ್ಪಟ್ಟಿದೆ ಮುಂದೆಯಾದರೂ ಇದರಿಂದ ಹೆಚ್ಚು ಸಹಾಯವಾಗುವಂತಿದೆ ಆದರೇನು? ಬರಿಯ ಇಂಗ್ಲಿಷ ವಿದ್ಯಾಭ್ಯಾಸ ಮಾತ್ರದಿಂದಲೇ ಕನ್ನಡ ಗ್ರಂಥ ಭಾಂಡಾರವು ಹೆಚ್ಚಿಸಲ್ಪಡಬಲ್ಲದೆ? ಈ ಉಭಯ ಭಾಷೆಗಳನ್ನು ಚನ್ನಾಗಿ ಅಭ್ಯಾಸಮಾಡಿದವರು ಮಾತ್ರ ಈ ಕಾರ್ಯವನ್ನು ಲಾಭಕರವಾಗುವಂತೆ ಮಾಡಬಲ್ಲರು. ಇಂಗ್ಲಿಷು ಶಾಲೆಗಳಲ್ಲಿ ಕನ್ನಡವನ್ನು ಕಲಿಯಲಿಕ್ಕೆ ಅನುಕೂಲವಿರುವಂತೆ, ಕನ್ನಡ ಶಾಲೆಗಳಲ್ಲಿ ಇಂಗ್ಲಿಷ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲ. ಆದ್ದರಿಂದ, ಇಂಗ್ಲಿಷ ಕಲಿಯುವ ವಿದ್ಯಾರ್ಥಿಗಳಿಗೇ ನಾವು ಹೆಚ್ಚು ಉತ್ತೇಜನ ಕೊಡತಕ್ಕದ್ದು 'ಪಬ್ಲಿಕ್ ಸರ್ವಿಸ್' 'ಸ್ಕೂಲ ಫಾಯನಲ್' ಹಾಗೂ 'ಮ್ಯಾಟ್ರಿಕ್ಯುಲೇಶನ್' ಪರೀಕ್ಷೆಗಳ ಕನ್ನಡದ ಅಭ್ಯಾಸಕ್ರಮವನ್ನು ಹೆಚ್ಚಿಸಬೇಕು ಸ್ಕೂಲ ಫಾಯನಲ್, ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಗಳಲ್ಲಿ ಕನ್ನಡದ ಸಾಮಾನ್ಯಜ್ಞಾನದ ಪರೀಕ್ಷೆಯಾಗುವುದೇನೋ ನಿಜ ಆದರೆ, ಅದೂ ತೀರ ಅಲ್ಪಪ್ರಮಾಣದಿಂದ! ಇಂಗ್ಲಿಷಶಾಲೆಯ ಇಂತಹ ಕಡೆಯ ಪರೀಕ್ಷೆಗೆ ಕೂಡ್ರತಕ್ಕ ವಿದ್ಯಾರ್ಥಿಗಳು ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಐದು ವರುಷ, ಇಂಗ್ಲಿಷ ಶಾಲೆಯಲ್ಲಿ ೭ ವರುಷ, ಹೀಗೆ ೧೨ ವರುಷಗಳವರೆಗೆ ಏಕಪ್ರಕಾರವಾಗಿ ಕನ್ನಡವನ್ನು ಕಲಿಯುತ್ತಿರುವರು ಈ ಕಾಲಾವಧಿಯಲ್ಲಿ ಅವರ ಅಭ್ಯಾಸವು ಮಾತ್ರ ಸುಮಾರು ಮೂರು ನಾಲ್ಕು ವರುಷ ಕಲಿತದ್ದರ ಪರಿಣಾಮವಾಗಿರುವುದು! ಇದು ಅವಶ್ಯವಾಗಿ ವಿಚಾರಿಸತಕ್ಕ ಅಂಶವಾಗಿದೆ ಆದುದರಿಂದ ಕನ್ನಡ ಭಾಷಾಭಿಮಾನಿಗಳಾದ ಮಹನೀಯರು ಹಾಯಸ್ಕೂಲಿನ ಕನ್ನಡದ ಅಭ್ಯಾಸಕ್ರಮದ ಕಡೆಗೆ ಲಕ್ಷ್ಯ ಪೂರೈಸಬೇಕೆಂದು ಬೇಡಿಕೊಳ್ಳುವೆನು ಇದಕ್ಕಾಗಿ ಈ ಉಪಾಯಗಳನ್ನು ಯೋಚಿಸಬಹುದು

(೧) ಹಾಯ ಸ್ಕೂಲಿನ ಕಡೆಯ ಪರೀಕ್ಷೆಗಳ ಕನ್ನಡದ ಅಭ್ಯಾಸಕ್ರಮವನ್ನು ಹೆಚ್ಚಿಸುವದು

(೨) ಪ್ರತಿಯೊಂದು ಹಾಯ ಸ್ಕೂಲಿನಲ್ಲಿ ಕನ್ನಡವನ್ನು ಕಲಿಸುವುದಕ್ಕಾಗಿ ಮೈಸೂರಿನ ಇಬ್ಬರು ಪಂಡಿತರನ್ನು ನಿಯಮಿಸಿಕೊಳ್ಳುವುದಕ್ಕೆ ಸರಕಾರದವರನ್ನು ಬೇಡಿಕೊಳ್ಳುವುದು

(೩) ಪ್ರಾಚೀನ ಕಾವ್ಯಗಳ ಮೂಲಕ ವಿದ್ಯಾರ್ಥಿಗಳಿಗೆ ಹಳಗನ್ನಡ ಭಾಷೆಯನ್ನೂ, ವ್ಯಾಕರಣವನ್ನೂ ಹೆಚ್ಚು ಪ್ರಮಾಣದಿಂದ ಕಲಿಸುವುದು.

(೪) ಈ ಪರೀಕ್ಷೆಗಳಲ್ಲಿ ಕನ್ನಡ ವಿಷಯದಲ್ಲಿ ತೇರ್ಗಡೆ ಹೊಂದಿದ ಮೊದಲನೆಯ ವಿದ್ಯಾರ್ಥಿಗೆ ಬಹುಮಾನವನ್ನಾಗಲಿ, ಅವನು ಮುಂದೆ ಹೆಚ್ಚಿನ ಅಭ್ಯಾಸ ಮಾಡುವವನಿದ್ದಲ್ಲಿ ವಿದ್ಯಾರ್ಥಿ ವೇತನವನ್ನಾಗಲಿ ಕೊಡತಕ್ಕದ್ದು. (ಇಲ್ಲಿ, ತೇರ್ಗಡೆ ಹೊಂದಿದ ವಿದ್ಯಾರ್ಥಿಯ ಭಾಷೆ, ಶುದ್ಧಬರಹ, ವಿಷಯಜ್ಞಾನ ಇವುಗಳ ಕಡೆಗೆ ಹೆಚ್ಚು ಲಕ್ಷ್ಯಗೊಡತಕ್ಕದ್ದು.)

ಈ ಏರ್ಪಾಡುಗಳನ್ನು ಕೈಲಾದಮಟ್ಟಿಗೆ ಬೇಗನೆ ಮಾಡುವುದಕ್ಕೆ ಆಯಾ ಸರಕಾರಗಳನ್ನು ವಿಜ್ಞಾಪಿಸಿಕೊಂಡು, ಬಹುಮಾನದ ಅಥವಾ ವಿದ್ಯಾರ್ಥಿವೇತನದ ಅಧಿಕಾರವನ್ನು ಸಾಹಿತ್ಯ ಪರಿಷತ್ತಿನವರು ಇಟ್ಟುಕೊಳ್ಳತಕ್ಕದ್ದು. ಇವೆಲ್ಲವುಗಳಿಂದಲಾದರೂ ಕರ್ಣಾಟಕ ಭಾಷೆಯ ಏಳ್ಗೆಯೂ, ಬೇರೆ ಬೇರೆ ಹಾಯ ಸ್ಕೂಲುಗಳಲ್ಲಿ ಮೈಸೂರಿನ ಪಂಡಿತರೇ ಅಧ್ಯಾಪಕರಾಗಿರುವುದರಿಂದ ಭಾಷಾರೂಪಗಳ ಏಕರೂಪತೆಯೂ ಏಕಕಾಲಕ್ಕೆ ಸಾಧಿಸುವಂತಿವೆ. ಈ ಮಹತ್ಕಾರ್ಯಗಳಿಗೆ ದ್ರವ್ಯಾನುಕೂಲ ವಿರುವುದೇನೋ ನಿಜ, ಆದರೆ, ಈ ಅನಾನುಕೂಲತೆಯನ್ನು ಪರಿಷತ್ತಿನವರೂ, ವಿದ್ಯಾವರ್ಧಕ ಸಂಘ, ದೇಶಭಕ್ತಸಮಾಜ, ಪ್ರಸಿದ್ಧ ವಾಚನಾಲಯಗಳೂ ಕೆಲಮಟ್ಟಿಗೆ ಹೋಗಲಾಡಿಸಬಹುದು. ಹಾಯ ಸ್ಕೂಲುಗಳಲ್ಲಿ ನಿಯಮಿಸಲ್ಪಟ್ಟ ಪಂಡಿತರು ಮಾತ್ರ ಭಾಷೆಯ ಏಕರೂಪತೆಗಾಗಿ ಕೈಲಾದಮಟ್ಟಿಗೂ ಹೆಣಗತಕ್ಕದ್ದು. ಈ ಪ್ರಕಾರದ ಏರ್ಪಾಡುಗಳಿಂದ ಸದ್ಯಕ್ಕೆ ಇಲ್ಲದಿದ್ದರೂ, ಕಾಲಾನುಕ್ರಮದಲ್ಲಿ ಪ್ರೌಢಜನರಾಡುವ ವ್ಯಾವಹಾರಿಕ ಭಾಷೆಯೂ, ಗ್ರಾಂಥಿಕ ಭಾಷೆಯೂ ಬಹಳ ಮಟ್ಟಿಗೆ ಒಂದೇತೆರನಾಗುವುದರಲ್ಲೇನೂ ಅಭ್ಯಂತರದೋರುವುದಿಲ್ಲ

V ಗ್ರಾಂಥಿಕ ಭಾಷೆಯು ಪ್ರೌಢವೋ, ವ್ಯಾವಹಾರಿಕವೋ ?

ಈಗಿನ ಕಾಲದಲ್ಲಿ ಮೈಸೂರು, ಬೆಂಗಳೂರು, ಮಂಗಳೂರು, ಉಡುಪಿ ಈ ಮೊದಲಾದ ಸ್ಥಳಗಳಲ್ಲಿ ಪ್ರಕಟವಾಗುತ್ತಿರುವ ಪುಸ್ತಕಗಳನ್ನು ವಿಮರ್ಶಿಸಿ ನೋಡಿದರೆ, ಅವುಗಳಲ್ಲಿ ಭಾಷೆಯು ಬಹುತರವಾಗಿ ಪ್ರೌಢವಾಗಿರುವುದೆಂದು ಕಂಡುಬರುವುದು ಅಲ್ಲಿ, ಕೆಲ ಕೆಲವು ಸ್ಥಳಗಳಲ್ಲಿ ಸಂಸ್ಕೃತ ಶಬ್ದಗಳನ್ನು ಹಿಡಿದುತಂದು ಹಾಕಿರುವ ವಾಕ್ಯಗಳನೇಕ ದೊರೆಯುವುವು ಇದು ಕೇವಲ ಪಾಂಡಿತ್ಯದರ್ಶಕ (ಆದರೆ ನಿಂದೆಯಲ್ಲ) ವೆಂದು ಈಗಿನ ಗ್ರಂಥಕರ್ತರು ತಿಳಿದುಕೊಂಡಂತೆ ತೋರುತ್ತದೆ ನಿಜವಾಗಿ ನೋಡಿದರೆ, ಈ ತರದ ಭಾಷೆಯು ಸಾಮಾನ್ಯ ಜನರಿಗೆ ಕಠಿನವಾಗಿಯೂ, ದುರ್ಬೋಧೆಯಾಗಿಯೂ ಕಾಣುವುದು ಸಹಜವಾದದ್ದು. ಮೈಸೂರಿನ ಕರ್ಣಾಟಕ ಭಾಷೆಯು ಅದರಲ್ಲಿಯೂ ಕಾದಂಬರಿಗಳಲ್ಲಿನ ಭಾಷೆಯು, ಅಪೂರ್ಣವಾಕ್ಯಗಳಿಂದ ಕೂಡಿದ್ದು,

ಸಂದಿಗ್ಧವೂ ಆಗಿರುವುದು. ಮ|| ಆರ್. ತಾತಾ, ಎಮ್. ಎ., ಎಲ್. ಟಿ., ಶ್ರೀ ಕೃಷ್ಣಸೂಕ್ತಿ ಸಂಪಾದಕರೂ ಇವರೇ ಇದಕ್ಕೆ ಉದಾಹರಣರಾಗಿರುವರು. ಬೇರೆ ಕೆಲವು ಗ್ರಂಥಕರ್ತೃಗಳಂತೂ ತಮ್ಮ ಗ್ರಂಥಗಳ ಮೊದಲಿನ ಕೆಲವು ವಾಕ್ಯಗಳನ್ನಾಗಲಿ, ಯಾವುದಾದರೊಂದು ವಸ್ತುವಿನ ವರ್ಣನೆಯನ್ನು ಮಾಡುವಾಗಾಗಲಿ ಕರ್ತೃ, ಕರ್ಮ, ಕ್ರಿಯಾಪದಗಳಿಲ್ಲದೆಯೇ ಒಂದೊಂದು ಪುಟದವರೆಗೂ ಒಂದೊಂದು ವಾಕ್ಯವನ್ನು ಬೆಳೆಯಿಸಿ, ಕಡೆಗೊಂದು ಕ್ರಿಯಾಪದವನ್ನಿಡುತ್ತಾರೆ! ಇಂತಹ ವಾಕ್ಯಗಳು ವಿದ್ಯಾರ್ಥಿಗಳ ವಾಕ್ಯವಿಭಜನೆಯ ಸಾಮರ್ಥ್ಯವನ್ನು ಬೆಳೆಸುವುದಕ್ಕೋ, ಅಥವಾ ವಾಚಕರಲ್ಲಿ ಬೇಸರಿಕೆಯನ್ನು ಹುಟ್ಟಿಸುವುದಕ್ಕೋ? ಸಂದಿಗ್ಧವಾದ ವಾಕ್ಯಗಳನ್ನೂ, ಉದ್ದನ್ನ ವಾಕ್ಯಗಳನ್ನೂ, ಪ್ರೌಢಶಬ್ದ ಬಂಧನವುಳ್ಳ ವಾಕ್ಯಗಳನ್ನೂ ಬರೆಯುವುದನ್ನು ಬಿಟ್ಟರೆ ಮೈಸೂರಿನ ಗ್ರಾಂಥಿಕ ಭಾಷೆಯು ಉಳಿದೆಲ್ಲ ಭಾಗಗಳ ಗ್ರಾಂಥಿಕ ಭಾಷೆಯಾಗಿ ಒಪ್ಪಲ್ಪಡಬಹುದೆಂದು ನಿರ್ವಿವಾದವಾಗಿ ಹೇಳಬಹುದು.

ಇನ್ನು, ಮುಂಬಯಿ ಕರ್ನಾಟಕದ ಲೇಖಕರ ಭಾಷೆಯು ಪ್ರೌಢವೂ ಅಲ್ಲ, ಗ್ರಾಮ್ಯವೂ ಅಲ್ಲ, ಸರ್ವಸಾಧಾರಣವಾಗಿ ಸುಧಾರಿಸಿದ ಜನರಾಡುವ ಭಾಷೆಯು ಆದರೇನು? ಮಹಾರಾಷ್ಟ್ರ ಭಾಷೆಯ ಸಂಸರ್ಗದಿಂದ ಅದರ ಸ್ವರೂಪವೇ ಕೆಟ್ಟು ಹೋಗಿದೆ. ಮಹಾರಾಷ್ಟ್ರ ಭಾಷೆಯ ಸಂಸರ್ಗವಿಲ್ಲದ ಮೈಸೂರಿನವರಿಗೆ ಈ ಭಾಷೆಯು ಗ್ರಾಹ್ಯವಾಗಿ ತೋರುವುದಿಲ್ಲ. ಇದು ಸಹಜವಾದದ್ದು. ಹೈದರಾಬಾದಿನ ಕನ್ನಡದ ವಿಷಯವಾಗಂತೂ ಹೇಳುವುದೇ ಬೇಡ. ಮಂಗಳೂರಿನ ಕನ್ನಡವು ಮಾತ್ರ ತುಸು ಹೆಚ್ಚು ಕಡಿಮೆಗಳಾದ ಮೇಲೆ ಗ್ರಾಂಥಿಕ ಭಾಷೆಯಾಗಿ ಅನುಸರಿಸಲ್ಪಡುವಂತಿದೆ. ಓದು ಬರಹವನ್ನು ಮಾತ್ರ ತಿಳಿದವರಿಗೂ ಕೂಡ ತಿಳಿಯುವಂತೆ ಪುಸ್ತಕಗಳನ್ನು ಬರೆಯುವುದೇ ಈ ಕಾಲದಲ್ಲಿ ಹಿತಕರವಾದದ್ದು. ಮೊದಲು, ಪುಸ್ತಕಗಳನ್ನು ಬರೆಯುವವರೂ, ಸಾಮಾನ್ಯ ವಿದ್ಯೆಗಲಿಯುವವರೂ ಸಂಸ್ಕೃತವನ್ನು ಕಲಿಯುತ್ತಲೇ ಇದ್ದರು. ಸಂಸ್ಕೃತ ವ್ಯಾಕರಣದ ವ್ಯುತ್ಪತ್ತಿಯಿಲ್ಲದಿದ್ದರೂ ಕಾವ್ಯಗಳಲ್ಲಿಯ ಶ್ಲೋಕಗಳನ್ನು ಅನ್ವಯಿಸುವುದೂ, ಅವುಗಳ ಭಾವವನ್ನು ತಿಳಿಯುವುದೂ ಬಹುತರ ವಿದ್ಯೆಗಲಿತ ಜನಸಾಮಾನ್ಯಕ್ಕೆಲ್ಲ ಸುಲಭಸಾಧ್ಯವಾಗಿತ್ತು. ಇದರಿಂದ, ಸಂಸ್ಕೃತ ಶಬ್ದಗಳೇ ಹೆಚ್ಚಾಗಿ ಸೇರಿಕೊಂಡಿರುವ ನಮ್ಮ ಪ್ರಾಚೀನ ಕನ್ನಡ ಗ್ರಂಥಗಳನ್ನು ಸಹ ಅವರು ಹೇಗಾದರೂ ಮಾಡಿ ಅರ್ಥಮಾಡಿಕೊಳ್ಳುತ್ತಿದ್ದರು. ಆದದರಿಂದಲೇ ಪ್ರಾಚೀನ ಗ್ರಂಥಗಳು ಅಗ್ಗ ಆದರಣೀಯಗಳಾಗಿದ್ದವು. ಅಲ್ಲದೆ, ಪ್ರೌಢವಾಗಿರುವ—ಶೈಲಿಯಿಂದ ಗಾಂಭೀರ್ಯವೂ, ಪದರಚನೆಯಿಂದ ಬಗಿತರವೂ ಶಬ್ದಾರ್ಥವೃತ್ತಿಯೂ ಉಂಟಾಗಿರುವ—ಗ್ರಂಥಗಳ ಭಾಷೆಯೇ ಎಲ್ಲೆಡೆಗಳಲ್ಲಿ ನೆಲೆಗೊಂಡಿತ್ತು. ವ್ಯಾಕರಣ ನಿಯಮಗಳಿಗೊಳಪಟ್ಟು ಪ್ರಾಚೀನ ವಿದ್ವಜ್ಜನ ಸಮ್ಮತವೆನಿಸುವ ಭಾಷೆಯೇ ಆಕಾಲದ ಗ್ರಾಂಥಿಕ ಭಾಷೆಯಾಗಿತ್ತು. ಕೆಲವಂಶದಿಂದ ಈ ಗ್ರಾಂಥಿಕ ಭಾಷೆಯೇ ಗ್ರಾಹ್ಯವೆನಿಸುವುದು. ಯಾಕೆಂದರೆ, ಸಾಮಾನ್ಯ ಜನರಲ್ಲಿ ರೂಢವಾಗಿರುವ, ಗ್ರಾಮ್ಯ

ಶಬ್ದಗಳಿಂದ ಕೂಡಿರ, ತದ್ಭವ ಶಬ್ದಗಳೇ ಹೆಚ್ಚಾದ ಮತ್ತು ವ್ಯಾಕರಣದ ನಿಯಮಗಳಿಗೆ ಚನ್ನಾಗಿ ಹೊಂದಿಕೆಯಾಗದ ಸಂಭಾಷಣ ಭಾಷೆಯು ಅತಿ ಪೇಲವವಾಗಿರುವುದಲ್ಲದೆ, ಪ್ರೌಢವಾದ ಹಾಗೂ ವ್ಯಾಕರಣ ಶುದ್ಧವಾದ ಭಾಷಾಗೌರವವು ಅದಕ್ಕೆಂದಿಗೂ ಬಾರದು. ಆದರೆ ಮಾಡುವುದೇನು ?

ಮಹನೀಯರೆ, ದೇಶಕಾಲ ಪರಿಸ್ಥಿತಿಗಳನ್ನು ವಿಚಾರಿಸಬೇಕಲ್ಲವೆ ? ಈಗಿನ ಕಾಲದಲ್ಲಿ ಸಂಸ್ಕೃತವನ್ನೋದುವ ಜನರು ಕಡಿಮೆ. ಆದ್ದರಿಂದ, ಪ್ರಾಚೀನ ಕನ್ನಡ ಕಾವ್ಯಗಳನ್ನು ತಿಳಿಯುವುದು ಕಠಿನವೆನಿಸುತ್ತಿದೆ. ಜನರ ಲಕ್ಷ್ಯವು ದ್ರವ್ಯಸಂಪಾದನೆಯ ಕಡೆಗೆ ಹೆಚ್ಚಾಗಿರುವುದಲ್ಲದೆ, ನಿಜವಾದ ವಿದ್ಯಾಭ್ಯಾಸಕ್ಕೆ ಅಷ್ಟು ಆಶಿಸುವವರು ಕಡಿಮೆ. ವಿಜಯನಗರ ಅರಸರ ಆಳಿಗಾಲದಿಂದೀಚೆಗೆ ಕರ್ನಾಟಕವು ಅನೇಕವಾದ ಆಧಿಪತ್ಯಗಳಿಗೊಳಪಟ್ಟದ್ದರಿಂದ ಭಾಷೆಯೂ ತುಂಡು ತುಂಡಾಗಿ ಕೆಟ್ಟುಹೋಗುತ್ತಿದೆ. ಇಂತಹ ಸ್ಥಿತಿಯಲ್ಲಿಯೂ ಕೂಡಾ ಹಿಂದಿನ ಕಾಲದ ಗ್ರಾಂಥಿಕ ಭಾಷೆಯನ್ನೇ ಈಗ್ಯೂ ಅನುಸರಿಸುವುದು-ಸರ್ವಸಮ್ಮತವಾದದ್ದಲ್ಲ. ಮುನ್ನುನಡೆದುದೆಲ್ಲ ಹೊನ್ನೆಂದೇ ಭಾವಿಸಲಾಗದು ಆದನ್ನೇ ನಾವು ಗ್ರಾಂಥಿಕ ಭಾಷೆಯನ್ನಾಗಿಟ್ಟುಕೊಂಡ ಪಕ್ಷದಲ್ಲಿ, ಈಗ್ಗೆ ನಾವು ಮಾಡಬೇಕಾದುದೇನೂ ಇಲ್ಲ. ರೂಢಿಯ ಭಾಷೆಯು ಎಷ್ಟು ಕೆಟ್ಟುಹೋದರೂ ನಾವು ಸುಮ್ಮನೆ ನೋಡುತ್ತ ಕುಳಿತುಕೊಳ್ಳಬೇಕಾಗುವುದು ಇದೇ ಸ್ಥಿತಿಯು ಕೆಲಕಾಲ ನಡೆದುದೇ ಆದರೆ, ಪ್ರಾಚೀನ ಭಾಷೆಯೂ ಕೂಡಾ ಅದೃಶ್ಯವಾಗಿ ಹೋಗುವ ಸಂಭವವೇ ಹೆಚ್ಚಾಗಿದೆ ಕಡೆಗೆ ಅಪಭ್ರಷ್ಟವಾದ ಸಂಭಾಷಣ ಭಾಷೆಯು ಮಾತ್ರ ಕನ್ನಡಿಗರ ಪಾಲಿಗೆ ಉಳಿಯುವುದಲ್ಲದೆ, ಆಮೇಲೆ ನಾವೇನು ಪ್ರಯತ್ನಮಾಡಿದರೂ ನಮ್ಮ ಭಾಷೆಯು ಶುದ್ಧವಾಗಲಿಕ್ಕಿಲ್ಲ. ಇದನ್ನು ಚನ್ನಾಗಿ ಲಕ್ಷ್ಯದಲ್ಲಿಟ್ಟುಕೊಂಡು, ನಾವು ಭಾಷಾ ಸುಧಾರಣೆಯ ಬಗ್ಗೆ ಕರ್ತವ್ಯನಿಷ್ಠರಾಗುವುದು ಅತ್ಯಾವಶ್ಯಕವಾಗಿದೆ ಸಕೃದ್ದರ್ಶನದಲ್ಲಿ ಈ ವಿಚಾರವು ಮೈಸೂರಿನ ಕೆಲಕೆಲವು ಪಂಡಿತರಿಗೆ ಅಭಿಮತವಾಗದಿದ್ದರೂ, ಕಾಲಾಂತರದಲ್ಲುಂಟಾಗುವ ಇದರ ಫಲಪ್ರಾಪ್ತಿಯು ಇಂತಹವರ ಅನಭಿಮತಕಿಂತಲೂ ಶ್ರೇಷ್ಠವಾದದ್ದಿರುವುದರಿಂದ, ಭಾಷಾಸುಧಾರಣೆಯ ಈ ಪವಿತ್ರವಾದ ಕಾರ್ಯಕ್ಕೆ ನಾವೆಲ್ಲರೂ ಬದ್ಧಕಂಕಣರಾಗಲಿಕ್ಕೆ ಬೇಕು

ಸಂಭಾಷಣ ಭಾಷೆಯೆಂದರೆ ಹಳ್ಳಿಗಾಡ ಜನರಾಡುವ ಗ್ರಾಮ್ಯಭಾಷೆಯಲ್ಲ, ಪಟ್ಟಣಿಗರು ಮನೆಯಲ್ಲಾಡುವ ಭಾಷೆಯಲ್ಲ , ಆದರೆ, ವಿದ್ಯೆಗಲಿತವರು ಶಾಲೆಗಳಲ್ಲಿಯೂ, ನ್ಯಾಯಸ್ಥಾನದಲ್ಲಿಯೂ, ಸಭೆಯಲ್ಲಿಯೂ, ಪತ್ರವ್ಯವಹಾರದಲ್ಲಿಯೂ, ಚಿಕ್ಕ ಪುಟ್ಟ ಲೇಖಗಳಲ್ಲಿಯೂ ಉಪಯೋಗಿಸುವ ಭಾಷೆಯೇ ಪ್ರಕೃತದ ಸಂಭಾಷಣ ಭಾಷೆಯೆನಿಸುವುದು ಮೇಲಿನ ಎಲ್ಲ ಪ್ರಸಂಗಗಳಲ್ಲಿ ಅನುಸರಿಸಲ್ಪಡುವ ಭಾಷೆಯು ಓದು ಬರಹ ಕಲಿತ ಎಲ್ಲ ಜನರಿಗೂ ಸಾಮಾನ್ಯವಾಗಿ ತಿಳಿಯುವಂತಿರುವುದು. ಇದಕ್ಕಾಗಿ ವಿಶೇಷ ಶ್ರಮಪಡುವ ಕಾರಣವೂ ಇಲ್ಲ. ವ್ಯಾಕರಣದ

ನಿಯಮಗಳನ್ನು ಮೀರಿರುವ ಪ್ರಯೋಗಗಳನ್ನೂ, ಅನವಶ್ಯಕವಾದ ಅನ್ಯದೇಶೀಯ ಶಬ್ದ ಪ್ರಯೋಗವನ್ನೂ, ಬಹಳ ವಿಕಾರಹೊಂದಿರುವ ತದ್ಭವ ಶಬ್ದಗಳನ್ನೂ ಮಾತ್ರ ತೆಗೆದು ಬಿಟ್ಟರೆ, ಈ ಸಂಭಾಷಣ ಭಾಷೆಯು ಅತ್ಯುತ್ತಮವಾಗಿಯೂ, ಜನ ಸಾಮಾನ್ಯಕ್ಕೆ ಸುಬೋಧವಾದದ್ದಾಗಿಯೂ ಆಗುವುದರಲ್ಲೇನೂ ಸಂದೇಹವಿಲ್ಲ. ಇದರಿಂದ ಪ್ರಾಚೀನ ಕಾವ್ಯಗಳಿಗೂ, ವ್ಯಾಕರಣಗಳಿಗೂ ಹೆಚ್ಚು ಮಹತ್ವವು ಉಂಟಾಗುವುದಲ್ಲದೆ, ಅವುಗಳ ಯೋಗ್ಯತೆಗೆ ಯಾವ ತರದ ಕುಂದಕವು ಬರುವ ಅಂಜಿಕೆಯಿಲ್ಲ. ಯಾಕೆಂದರೆ, ಕನ್ನಡದಲ್ಲಿ ಹೆಚ್ಚು ಜ್ಞಾನವುಂಟಾಗಬೇಕಾದರೆ, ನಾವು ಬಗಿತರವಾದ ಗ್ರಂಥಗಳನ್ನೂ, ಪ್ರಾಚೀನ ಹಳಗನ್ನಡ ಹೊಸಗನ್ನಡ ಕಾವ್ಯಗಳನ್ನೂ ಓದಲೇ ಬೇಕಾಗುವುದು. ಅಲ್ಲದೆ, ಈಗ್ಗ ಉತ್ತಮವಾದ ಹೊಸಗನ್ನಡ ವ್ಯಾಕರಣಗಳಿಲ್ಲದಿರುವುದರಿಂದ ಭಾಷಾಸುಧಾರಣೆಗ ಪ್ರಯತ್ನ ಪಡುವ ನಾವು ಹಳಗನ್ನಡ ವ್ಯಾಕರಣಗಳಾದ ಶಬ್ದಮಣಿದರ್ಪಣ, ಶಬ್ದಾನುಶಾಸನಗಳನ್ನು ಓದುವುದತ್ಯವಶ್ಯವು. ಈ ತೆರನಾಗಿ, ಮೇಲೆ ಹೇಳಿದ ಸಂಭಾಷಣ ಭಾಷೆಯೇ ಈಗಿನ ಕಾಲದಲ್ಲಿ ಗ್ರಾಂಥಿಕ ಭಾಷೆಯಾಗಿರುವುದು ಹಿತಕರವೂ, ಅವಶ್ಯವೂ ಆಗಿರುವುದೆಂದರೆ ತಪ್ಪಾಗದು.

VI ಏಕೀಕರಣದ ಉತ್ಕೃಷ್ಟೋಪಾಯಗಳು

ಇನ್ನು ಕನ್ನಡ ನುಡಿಯ ರೂಪಗಳ ಏಕರೂಪತೆಗಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಪ್ರತ್ಯಕ್ಷವಾಗಿ ಕೆಲವು ಉಪಾಯಗಳನ್ನು ಕೈಕೊಳ್ಳಬೇಕಾಗಿದೆ. ಅವುಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವೆನು. ಕನ್ನಡ ನುಡಿಯ ಬೆಳವಣಿಗೆಗೂ, ಅದರ ಏಕರೂಪತೆಗೂ ನಮಗೆ ಹಳಗನ್ನಡವನ್ನೋದುವುದು ಅವಶ್ಯವಿದೆ. ಅದಕ್ಕಾಗಿ ಸಂಸ್ಕೃತವನ್ನಾದರೂ ನಾವು ಓದಿಕೊಳ್ಳುವುದು ಅಗತ್ಯವು. ಹಳಗನ್ನಡ, ಸಂಸ್ಕೃತಗಳ ಹೊರತು ನಮಗೆ ಅನ್ಯಸಾಧನಗಳಿಲ್ಲ. ಆದದರಿಂದ ಕರ್ನಾಟಕ ವಿದ್ವನ್ಮಂಡಲಿಯು ಒಂದು ಸಂಸ್ಕೃತ ಕನ್ನಡ ಕೋಶವನ್ನು ತ್ವರಿತವಾಗಿ ರಚಿಸಿ ಪ್ರಕಟಿಸಬೇಕಾಗಿದೆ. ಹಳಗನ್ನಡವನ್ನೋದಿಕೊಳ್ಳುವ ಮಟ್ಟಿಗಾದರೂ ಉಪಯೋಗಪಡಿಸಬಹುದಾದ ಸಂಸ್ಕೃತ ಶಬ್ದಗಳನ್ನೊಳಗೊಂಡಿರುವ ಒಂದು ಕೋಶವು ನಿರ್ಮಿತವಾಗಬೇಕು. ಹಳಗನ್ನಡ ವ್ಯಾಕರಣವನ್ನೋದಿಕೊಂಡು ಶಬ್ದ ಸಿದ್ಧಿ, ರೂಪ ಸಿದ್ಧಿ, ವಾಕ್ಯರಚನೆ, ಸರಿಯಾದ ರೂಪಗಳ ಸ್ವರೂಪ ಇವೇ ಮೊದಲಾದ ವಿಷಯಗಳನ್ನು ನಾವು ಅರಿತುಕೊಳ್ಳುವಷ್ಟು ಸಮರ್ಥರಾಗಬೇಕು. ಈಗ್ಗೆ ನೂರು ವರುಷಗಳಿಂದ ಇಂಗ್ಲಿಷವು ನಮ್ಮ ಭಾಷೆಯಲ್ಲಿ ಸೇರಿಕೊಳ್ಳುತ್ತ ನಡೆದಿರುವುದರಿಂದಲೂ, ಮುಂದೆಯೂ ಸಹ ಅದು ನಮ್ಮಲ್ಲಿ ಅನೇಕ ವರುಷಗಳವರೆಗೆ ವ್ಯವಹರಿಸಲ್ಪಡಬಹುದು

ದ್ದರಿಂದಲೂ, ಲಲಿತವಾಙ್ಮಯ, ಶಾಸ್ತ್ರೀಯ ವಿಷಯ ಮೊದಲಾದವುಗಳನ್ನು ಕುರಿತ ಗ್ರಂಥಗಳು ಆ ಭಾಷೆಯಲ್ಲಿ ಹೇರಳವಾಗಿರುವುದರಿಂದಲೂ ಅದನ್ನು ನಾವು ಕಲಿತು ತದ್ಭಾಷಾಮೂಲಕವಾಗಿ ನಮ್ಮ ಗ್ರಂಥ ಭಾಂಡಾರವನ್ನು ಹೆಚ್ಚಿಸಬೇಕಾಗಿರುವುದು ಅದರಿಂದ, ಇಂಗ್ಲಿಷ-ಕನ್ನಡ ಕೋಶವೊಂದು ಈಗಿನ ಕಾಲದಲ್ಲಿ ನಮಗೆ ಪರಮಸಾಧನವಾಗಿರುವುದು. ನಮ್ಮ ಬಳಕೆಯಲ್ಲಿ ಬಂದಿರುವ ಹಾಗೂ ಶಾಸ್ತ್ರೀಯ, ಭೌಗೋಲಿಕ ವಿಷಯಗಳಿಗೆ ಸಂಬಂಧಪಟ್ಟ ಇಂಗ್ಲಿಷ ಶಬ್ದಗಳ ಯಥಾರ್ಥವಾದ ಬೋಧೆಯು ಈ ಕೋಶಗಳಲ್ಲಿರತಕ್ಕದ್ದು. ಇಂತಹ ಕೋಶಗಳು ನಮ್ಮ ಸಾಹಿತ್ಯಸಂಗ್ರಹದಲ್ಲಿಲ್ಲದಿದ್ದದ್ದು ಕೇವಲ ಶೋಚನೀಯವಾದ ಸಂಗತಿಯಾಗಿದೆ. ಆದುದರಿಂದ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿಕಾರಿಗಳು ಮೊದಲು ಈ ನಿಘಂಟು-ಸಂಸ್ಕರಣ ಕಾರ್ಯಕ್ಕೆ, ಅಂದರೆ, ಸಂಸ್ಕೃತ-ಕನ್ನಡ, ಕನ್ನಡ-ಕನ್ನಡ ಹಾಗೂ ಇಂಗ್ಲಿಷ-ಕನ್ನಡ, ಈ ಮೂರು ನಿಘಂಟುಗಳನ್ನು ರಚಿಸುವುದಕ್ಕೆ ಕೈ ಹಾಕಬೇಕು. ಸಂಸ್ಕೃತ, ಕನ್ನಡ, ಇಂಗ್ಲಿಷ ಈ ಮೂರು ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದ ವಿದ್ವಾಂಸರುಗಳಿಂದೊಡಗೂಡಿದ ಉಪಸಂಘವೊಂದನ್ನೇರ್ಪಡಿಸಿ ಈ ಕಾರ್ಯವನ್ನು ನಡೆಯಿಸತಕ್ಕದ್ದು. ಈಗಿನ ಕಾಲದಲ್ಲಿ ಸಂಸ್ಕೃತ, ಇಂಗ್ಲಿಷ ಭಾಷೆಗಳು ಕನ್ನಡಕ್ಕೆ ಅಂಗರಕ್ಷಕರಂತಿರುವುವು. ಇವರನ್ನು ಬಿಟ್ಟರೆ ನಿರ್ವಾಹಕನಾಗುವಂತಿಲ್ಲ. ಈ ರಕ್ಷಕರ ಸಹಾಯದಿಂದಲೇ ಕನ್ನಡಭಾಷಾರಾಣಿಯು ತನ್ನ ಕರ್ತವ್ಯಗಳನ್ನು ಮಾಡುತ್ತ ಕೀರ್ತಿಯನ್ನು ಹೊಂದಬೇಕಾಗಿರುವುದು. ಮೇಲೆ ಹೇಳಿದಂತೆ ಮೂರು ನಿಘಂಟುಗಳು ರಚಿತವಾದ ಮೇಲೆ ಅವುಗಳ ಒಂದೊಂದು ಪ್ರತಿಯನ್ನು ಪ್ರಸಿದ್ಧರಾದ ಗ್ರಂಥ ಕರ್ತೃಗಳಿಗೂ, ವಾಚನಾಲಯಗಳಿರುವ ಶಾಲೆಗಳಿಗೂ ಉಚಿತವಾಗಿಯಾಗಲಿ ಅಥವಾ ಅರ್ಧಬೆಲೆಗಾಗಲಿ ದೊರೆಯುವಂತೆ ವ್ಯವಸ್ಥೆಯನ್ನು ಮಾಡತಕ್ಕದ್ದು.

ಪರಿಷತ್ತಿನವರು ಕೈಕೊಳ್ಳತಕ್ಕ ಎರಡನೆಯ ಮಹತ್ವದಕಾರ್ಯವೆಂದರೆ— ಹೊಸಗನ್ನಡ ವ್ಯಾಕರಣರಚನೆ. ನಮ್ಮ ಬಾಲವರ್ಗಕ್ಕೂ, ಸಾಧಾರಣ ಜನರಿಗೂ ಸುಲಭವಾಗಿ ಹೊಸಗನ್ನಡ ವ್ಯಾಕರಣದ ವ್ಯುತ್ಪತ್ತಿಯಾಗುವಂಥಾದ್ದೊಂದು ಗ್ರಂಥವು ಅತ್ಯವಶ್ಯವಾಗಿದೆ. ತತ್ಸಮ, ತದ್ಭವ, ದೇಶಿ ಶಬ್ದಗಳ ಮೂಲರೂಪಗಳನ್ನು ತಿಳಿದುಕೊಳ್ಳುವುದಕ್ಕೂ, ಅತಿಶಯವಾಗಿ ವಿಕಾರಹೊಂದಿ ರೂಪಕಟ್ಟು, ಕನ್ನಡದಲ್ಲಿ ಉಪಯೋಗಿಸಲ್ಪಟ್ಟಂಥ ತದ್ಭವ, ಅನ್ಯದೇಶ್ಯ ಶಬ್ದಗಳನ್ನು ಪರಿಷ್ಕರಿಸಿ ತಿದ್ದಿಕೊಳ್ಳುವುದಕ್ಕೂ, ಪರಿಶುದ್ಧವಾದ ವಾಕ್ಯರಚನಾಕ್ರಮವು ಭಾವೀ ಪ್ರಜೆಗಳಾಗುವ ಈಗಿನ ಬಾಲಕರಲ್ಲಿ ಉಂಟಾಗುವುದಕ್ಕೂ ಇಂತಹ ವ್ಯಾಕರಣ ಗ್ರಂಥವೊಂದು ಈ ಕಾಲದಲ್ಲಿ ಬಹುಜನ ಸಮ್ಮತಿಯೊಂದಿಗೆ ಇಷ್ಟವಾದದ್ದೆಂಬುದನ್ನು ಒಡೆದು ಹೇಳುವ ಕಾರಣವಿಲ್ಲ. ಸಾಮಾನ್ಯ ಲೇಖಕರಿಗೂ, ಹೊಸಪದ್ಧತಿಯನ್ನನುಸರಿಸಿ ಬರೆಯುವ ಗ್ರಂಥಕರ್ತೃಗಳಿಗೂ ಈ ಗ್ರಂಥದಿಂದ ವಿಶೇಷವಾಗಿ ಸಹಾಯವಾಗುವುದು. ಭಾವೀ ಕನ್ನಡದ ಸುಧಾರಣೆಗೆ ಮೂಲಾಧಾರಿಗಳಾದ ಈಗಿನ ವಿದ್ಯಾರ್ಥಿವರ್ಗಕ್ಕೂ ಇದರಿಂದ ಹೇರಳ

ವಾದ ಲಾಭಗಳುಂಟಾಗುವುವು. ಇದರಿಂದ, ಅವರಲ್ಲಿ ಶುದ್ಧವಾದ ಭಾಷೆಯು ನೆಲೆಗೊಳ್ಳುವುದಲ್ಲದೆ, ಇಂತಹ ವ್ಯಾಕರಣವು ಕರ್ಣಾಟಕದ ಎಲ್ಲ ಭಾಗಗಳಲ್ಲಿ ಉಪಯೋಗಿಸಲ್ಪಡುವುದರಿಂದ ಎಲ್ಲ ಭಾಗಗಳ ಜನರ ಭಾಷೆಯು ಒಂದು ಒಂದೇ ನಿಜವಾದ ಸ್ವರೂಪವೂ ಕಾಲಾನುಕ್ರಮದಿಂದ ನೆಲೆಗೊಳ್ಳುವುದರಲ್ಲೇನೂ ಸಂದೇಹವಿಲ್ಲ.

ಇನ್ನು, ಕರ್ಣಾಟಕ ಭಾಷಾಸುಧಾರಣೆಯು ಬಗ್ಗೆ ವಿದ್ವಾಂಸರು ಹೇಗೆ ಪ್ರಯತ್ನಿಸುತ್ತಿರುವರೆಂಬದನ್ನು ಜನರಿಗೆ ತಿಳಿಸುವುದಕ್ಕೂ, ಸಾಹಿತ್ಯ ಪರಿಷತ್ತಿನಲ್ಲಿ ಆಗಾಗ್ಗೆ ನಿರ್ಣಯಿಸಲ್ಪಡುತ್ತಿರುವ ಸಂಗತಿಗಳನ್ನು ಬೋಧಿಸುವುದಕ್ಕೂ ಪ್ರತಿಯೊಂದು ಜಿಲ್ಲೆಯ ಕನ್ನಡ ಮುಂದಾಳುಗಳು ಪ್ರಯತ್ನಿಸತಕ್ಕದ್ದು. ಗ್ರಂಥರಚನೆಯ ಕಾರ್ಯಕ್ಕೂ, ಬೇರೆ ಅವಶ್ಯವಾದ ಕೆಲಸಗಳಿಗೂ ದ್ರವ್ಯಾನುಕೂಲವು ಬಹಳವಾಗಿ ಬೇಕಾಗಿರುವುದರಿಂದ, ಪ್ರತಿಯೊಂದು ಜಿಲ್ಲೆಯಲ್ಲಿ—ನಿಕೃಷ್ಟಪಕ್ಷಕ್ಕೆ ಪ್ರತಿಯೊಂದು ಭಾಗದಲ್ಲಿ—'ಕರ್ಣಾಟಕ ದೇಶಭಕ್ತಸಮಾಜ' ವನ್ನು ಸ್ಥಾಪಿಸುವುದು ಮೂರನೆಯ ಮಹತ್ವದ ಉಪಾಯವಾಗಿದೆ. ಭಾಷಾಭಿಮಾನಿಗಳೂ, ಕರ್ಣಾಟಕ ಆಯಾ ಭಾಗಗಳ ವಿದ್ವಾಂಸರೂ ಈ ಸಮಾಜದ ಸದಸ್ಯರಾಗಿರತಕ್ಕದ್ದು. ಈ ಸದಸ್ಯರು ಪ್ರತಿಯೊಂದು ಜಿಲ್ಲೆಯೊಳಗಿನ ದೊಡ್ಡ ಊರುಗಳಲ್ಲಿ ವರುಷಕ್ಕೆರಡಾವರ್ತಿ ಉಪಯುಕ್ತವಾದ ವಿಷಯಗಳ ಮೇಲೆ ವ್ಯಾಖ್ಯಾನಗಳು ನಡೆಯುವಂತೆ ವ್ಯವಸ್ಥೆಗಳನ್ನು ಡತಕ್ಕದ್ದು. ಇಂತಹ ಸಂಸ್ಥೆಯು ಸ್ಥಾಪಿಸಲ್ಪಡುವ ಪ್ರತಿಯೊಂದು ಪಟ್ಟಣದಲ್ಲಿ ವಾರಕ್ಕೊಮ್ಮೆಯಾಗಲಿ ಅಥವಾ ತಿಂಗಳಿಗೊಮ್ಮೆಯಾಗಲಿ ಸಾರ್ವಜನಿಕ ಸ್ಥಳದಲ್ಲಿ ಜನರನ್ನು ನೆರೆಯಿಸಿ ಕರ್ಣಾಟಕ ಭಾಷೆಯ ಸುಧಾರಣೆ ಬಗ್ಗೆ ಬೇರೆ ಬೇರೆ ಭಾಗಗಳಲ್ಲಿ ನಡೆದಿರುವ ಪ್ರಯತ್ನಗಳ ಬಗ್ಗೆಯೂ, ಅದಕ್ಕಾಗಿ ಜನರು ಮಾಡತಕ್ಕ ಕಾರ್ಯಗಳ ಬಗ್ಗೆಯೂ ಬೋಧಿಸತಕ್ಕದ್ದು. ಯುಕ್ತಿ ಪ್ರಯುಕ್ತಿಗಳಿಂದ ಕನ್ನಡಿಗರೆಲ್ಲರು ಇಂತಹ ಸಂಸ್ಥೆಗಳಿಗೆ ಸಹಾಯಮಾಡುವಂತೆ ಕೈಲಾದಮಟ್ಟಿಗೆ ಯತ್ನಿಸಬೇಕು. ಉತ್ಸಾಹದಿಂದ ಕೆಲಸ ಮಾಡುವ ಅಭಿಮಾನಿಗಳಿಗೆ ಈ ಕಾರ್ಯವೇನೂ ಕಠಿನವೆನಿಸದೆಂದು ನನ್ನ ಸ್ವಂತದ ಅನುಭವದಿಂದ ಹೇಳಬಲ್ಲೆನು. ಈ ಪ್ರಕಾರದ ಸ್ತುತ್ಯವಾದ ಕಾರ್ಯಗಳಿಗೆ ಕನ್ನಡಿಗರ ಸಹಾನುಭೂತಿಯು ನಿಜವಾಗಿ ದೊರೆಯುವುದು. ಆದರೂ, ಪ್ರಜೆಗಳೆಲ್ಲರೂ ಯುರೋಪಖಂಡದೊಳಗೆ ನಡೆದಿರುವ ಮಹಾಯುದ್ಧದ ಅನಿಷ್ಟವಾದ ಪರಿಣಾಮಗಳಿಂದ ಬೇಸರಪಟ್ಟಿರುವುದರಿಂದ, ಅವರಿಗೆ ಮೇಲಿಂದ ಮೇಲೆ ಧನಸಹಾಯಮಾಡಿರೆಂದು ಕೇಳುವುದು ನ್ಯಾಯವಲ್ಲ, ಅಲ್ಲದೆ, ಕೆಲಕೆಲವರಲ್ಲಿ ಇಂತಹ ಬೇಡಿಕೆ ಪರಂಪರೆಗಳಿಂದ ಭಾಷೆಯ ವಿಷಯವಾಗಿ ಅನಾದರವುಂಟಾಗುವ ಸಂಭವವೂ ಅದೆ. ಇದರಿಂದ ಜನರಿಗೆ ಜುಲುಮೆಯೆನಿಸದಂತೆ ನಾವೆಲ್ಲರೂ ಎಚ್ಚರಪಡತಕ್ಕದ್ದು. ಈ ಕಾರ್ಯದಲ್ಲಿ ಪ್ರಾಥಮಿಕ ಹಾಗೂ ಉಚ್ಚತರಗತಿಯ ಶಾಲಾಧ್ಯಾಪಕರು ಚನ್ನಾಗಿ ಸಹಾಯಕಾರಿಗಳಾಗುವರು. ಅಧ್ಯಾಪಕರು ಈ ಭಾಷಾಸುಧಾರಣೆಯ ಕಾರ್ಯದಲ್ಲಿ ಮನಸ್ಸು ಹಾಕುವಂತೆ ಅವರಿಗೆ ಬೋಧಿಸಿದರೆ ತೀರುವುದು. ಅವರು ಹೇಗಾದರೂ ಮಾಡಿ ದ್ರವ್ಯಾನುಕೂಲವನ್ನು ಒದಗಿಸಿ

ಕೊಡುವರು ಪ್ರತ್ಯಕ್ಷವಾಗಿ ಜನರಿಗೆ ಧನಸಹಾಯವನ್ನು ಬೇಡುವುದಕ್ಕಿಂತ, ಅಪ್ರತ್ಯಕ್ಷವಾಗಿ ಶಾಲೆಯ ವಿದ್ಯಾರ್ಥಿಗಳಿಂದ ಅತ್ಯಲ್ಪಧನಾರ್ಜನೆಯ ಮೂಲಕವಾಗಿ ಸಹಾಯವನ್ನಪೇಕ್ಷಿಸುವುದು ಈಗಿನ ಕಾಲದಲ್ಲಿ ಹಿತಕರವೂ, ಲಾಭದಾಯಕವೂ ಆಗಿರುವುದೆಂದು ಸ್ಪಷ್ಟವಾಗಿ ಹೇಳಬಹುದು. ಒಟ್ಟಿನಮೇಲೆ, ಚಿಕ್ಕ ಚಿಕ್ಕ ಗ್ರಂಥಗಳನ್ನು ರಚಿಸುವುದಕ್ಕೂ, ಅವುಗಳ ಪ್ರಸಾರಕ್ಕೂ ಹೇರಳವಾದ ಧನವು ಬೇಕಾಗಿರುವುದರಿಂದ, ಎಲ್ಲ ಅಂಶಗಳಿಂದಲೂ ನಾವು ಈ ಕಾರ್ಯಕ್ಕೆ ನಮ್ಮ ತನು-ಮನ-ಧನಗಳನ್ನರ್ಪಿಸಬೇಕು.

ಈ ದೇಶಭಕ್ತ ಸಮಾಜದವರು ಕನ್ನಡ ನುಡಿಯ ಏಕರೂಪತೆಗಾಗಿ ಇನ್ನೂ ಕೆಲವು ಕಾರ್ಯಗಳನ್ನು ಮಾಡಬೇಕಾಗಿರುವುದು. ಅವುಗಳ ಬಗ್ಗೆ ಸಂಗ್ರಹವಾಗಿ ನಾಲ್ಕು ಮಾತುಗಳನ್ನು ಹೇಳಿ ಮುಂದೆ ಸಾಗಬೇಕೆಂದಿರುವೆನು. ಈ ಸಮಾಜದವರು ಒಂದು ತ್ರೈಮಾಸಿ ಪತ್ರವನ್ನಾಗಲಿ ಅಥವಾ ಸಾಧ್ಯವಿದ್ದರೆ ಮಾಸಿಕ ಪುಸ್ತಕವನ್ನಾಗಲಿ ಹೊರಡಿಸಿ ಪರಿಷತ್ತಿನ ಕಾರ್ಯನಿರ್ವಾಹವನ್ನೂ, ನಿರ್ಣಯಗಳನ್ನೂ, ತಮ್ಮ ಭಾಗದಲ್ಲಿ ಮೇಲಿಂದ ಮೇಲೆ ನಡೆಯುತ್ತಿರುವ ಭಾಷಾಸುಧಾರಣೆಯ ಕ್ರಮಗಳನ್ನೂ ಈ ಪತ್ರದ ಮುಖಾಂತರವಾಗಿ ಜನರಿಗೆ ಬೋಧಿಸುವುದು. ಅದರ ಪ್ರಬಲವಾದ ಕರ್ತವ್ಯವಾಗಿರುವುದು. ಪ್ರಸಿದ್ಧರಾದ ಲೇಖಕರಿಂದ ಹೊಸಪದ್ಧತಿಯನ್ನನುಸರಿಸಿ ಬರೆಯಲ್ಪಟ್ಟ ಸಂಣ ಪುಸ್ತಕಗಳನ್ನು, ಪ್ರಸಿದ್ಧಿಸುವುದು, ಲೇಖಕರಿಗೆ ಬಹುಮಾನವನ್ನು ಕೊಡುವುದು, ಭಾಷಾವಿಷಯದ ಸ್ವತಂತ್ರವಾದ ಪರೀಕ್ಷೆಯನ್ನು ತೆಗೆದುಕೊಂಡು, ಅದರಲ್ಲಿ ತೇರ್ಗಡೆಹೊಂದಿದ ಮೊದಲಿನ ಒಬ್ಬಿಬ್ಬ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವುದು, ಇವೇ ಮೊದಲಾದ ಉತ್ತೇಜನ ಪರವಾದ ಕಾರ್ಯಗಳನ್ನು ನಡೆಯಿಸುವುದು ಈ ಸಮಾಜದವರ ಬೇರೆ ಕರ್ತವ್ಯಗಳಾಗಿರುವುವು. ಇವೆಲ್ಲ ಕಾರ್ಯಗಳಿಗೆ ಬೇಕಾಗುವ ವೆಚ್ಚವನ್ನು ಮಾತ್ರ ಇಟ್ಟುಕೊಂಡು, ತುಸು ಸಂಗ್ರಹದೊಂದಿಗೆ ಉಳಿದ ಧನವನ್ನು ಸಾಹಿತ್ಯಪರಿಷತ್ತಿನ ಕೋಶಗೃಹಕ್ಕೆ ಸಲ್ಲಿಸಬೇಕು. ತಾವು ಹೊರಡಿಸುವ ಪತ್ರಿಕೆಯ ಒಂದೊಂದು ಪ್ರತಿಯನ್ನು ಪ್ರಸಿದ್ಧವಾದ ಶಾಲೆಗಳಿಗೂ, ಗ್ರಂಥಕರ್ತೃಗಳಿಗೂ ಉಚಿತವಾಗಿ ಕೊಡತಕ್ಕದ್ದು. ಈ ತರದ ಎಲ್ಲ ಸಂಸ್ಥೆಗಳಿಗೆ ಬೆಂಗಳೂರಿನ ಸಾಹಿತ್ಯಪರಿಷದವು ಮೂಲವಾಗಿರಬೇಕು. ಅಲ್ಲಿಯ ನಿರ್ಬಂಧನೆಗಳೆಲ್ಲ ಇಲ್ಲಿ ಅನುಸರಿಸಲ್ಪಡತಕ್ಕದ್ದು.

ಪರಿಷತ್ತಿನವರು ಕೈಕೊಳ್ಳತಕ್ಕ ನಾಲ್ಕನೆಯ ಉಪಾಯವು ಉಪನ್ಯಾಸಕ್ರಮವು. ಇಂಗ್ಲಂಡ, ಫ್ರಾನ್ಸ, ಜರ್ಮನಿ, ಗ್ರೀಸ ಮೊದಲಾದ ದೇಶಗಳಲ್ಲಿ ಪ್ರಾಚೀನಕಾಲದಿಂದ ಪ್ರಸಿದ್ಧರಾದ ವ್ಯಾಖ್ಯಾತೃಗಳುಂಟಾಗುತ್ತ ಒಂದಿರುವರು. ಸದ್ಯಕ್ಕೆ ನಮ್ಮ ದೇಶದಲ್ಲಿ ಬಂಗಾಲ, ಮಹಾರಾಷ್ಟ್ರಪ್ರಾಂತ್ಯಗಳಲ್ಲಿಯೂ ಕೂಡ ಪ್ರಸಿದ್ಧರಾದ ವ್ಯಾಖ್ಯಾನಕಾರರು ಕಂಗೊಳಿಸಹತ್ತಿದ್ದಾರೆ. ವ್ಯಾಖ್ಯಾನಕಾರರ ವಕ್ತೃತ್ವಶಕ್ತಿಯ ಪ್ರಮಾಣದ ಮೇಲಿಂದ ಶ್ರೋತೃಗಳ ಮನಸ್ಸಿನಮೇಲೆ ಪರಿಣಾಮವಾಗುವುದು. ದೇಶ

ಭಾಷೆಗಳನ್ನು ಊರ್ಜಿತಸ್ಥಿತಿಗೆ ತರಬೇಕಾದಲ್ಲಿಯೂ, ಸಮಾಜಸುಧಾರಣೆಯನ್ನು ಮಾಡಬೇಕಾದಲ್ಲಿಯೂ ಯಾವುದೊಂದು ದೇಶದ ಎಲ್ಲ ಭಾಗಗಳಲ್ಲಿಯೂ ವಕ್ತಾವುರುಷರು ಇರುವುದು ಅತ್ಯವಶ್ಯವಾದದ್ದು. ಕರ್ನಾಟಕದ ಒಹುಜನ ಸಮೂಹವು ಅವಿದ್ಯಾವಂತವಾಗಿರುವುದರಿಂದ, ಕರ್ನಾಟಭಾಷೆಯ ಬೆಳವಣಿಗೆಗೂ, ಸುಧಾರಣೆಗೂ ಅಡ್ಡಿಯಾಗುತ್ತಿರುವದೆಂಬದರ ಬಗ್ಗೆ ಏಕವಾಕ್ಯತೆಯಿರುವುದು. ಅವಿದ್ಯಾವಂತರಿಗೆ ವಿದ್ಯೆ ಕಲಿಯುವುದಕ್ಕೂ, ವಿದ್ಯೆಗಲಿತವರಿಗೆ ಭಾಷಾಸುಧಾರಣೆಯನ್ನು ಮಾಡುವುದಕ್ಕೂ ಹುರಿದುಂಬಿಸಲಿಕ್ಕೆ ಇಂತಹ ವ್ಯಾಖ್ಯಾತೃಗಳು ವಿಶೇಷವಾಗಿ ಸಹಾಯವನ್ನು ಮಾಡಬಲ್ಲರು ಆದದರಿಂದ, ಕರ್ನಾಟಕದ ಪ್ರತಿಯೊಂದು ಭಾಗದಲ್ಲಿ-ಎಕೆ, ಪ್ರತಿಯೊಂದು ಜಿಲ್ಲೆಯಲ್ಲಿ—ನಿಕೃಷ್ಟ ಪಕ್ಷಕ್ಕೆ ವರುಷಕ್ಕೊಮ್ಮೆಯಾದರೂ ಭಾಷೆಗೆ ಸಂಬಂಧಪಟ್ಟ ಒಂದು ವ್ಯಾಖ್ಯಾನವಾಗುವುದು ಪ್ರಕೃತಕಾರ್ಯಕ್ಕೆ ಅತಿಶಯವಾಗಿ ಅನುಕೂಲಿಸುವಂತಹ ಸಂಗತಿಯಾಗಿದೆ. ಮೈಸೂರಿನ ಹಾಗೂ ಬೇರೆ ಭಾಗಗಳ ವಿದ್ವನ್ಮಣಿಗಳಿಂದ ಈ ಕಾರ್ಯವು ಸುಲಭವಾಗಿ ನೆರವೇರುವಂತಿದೆ. ಬೆಂಗಳೂರಿನ ಸಾಹಿತ್ಯ ಪರಿಷತ್ತಿನಲ್ಲಿ ಸೇರಿದ "ಸನ್ಮಾನ್ಯ ಸಾಮಾಜಿಕ" ರಿಂದ ಸದ್ಯಕ್ಕೆ ವ್ಯಾಖ್ಯಾನಗಳನ್ನು ಕೊಡಿಸುವಂತೆ ಪರಿಷತ್ತಿನವರಾಗಲಿ ಅಥವಾ ಅವರ ಮುಖಾಂತರವಾಗಿ 'ದೇಶಭಕ್ತ ಸಮಾಜ' ದವರಾಗಲಿ ವ್ಯವಸ್ಥೆಯನ್ನು ಮಾಡತಕ್ಕದ್ದು. ವ್ಯಾಖ್ಯಾನಕ್ಕೆ ಜಾತಿಭೇದವಿಲ್ಲದ ಎಲ್ಲರಿಗೂ ಆಮಂತ್ರಣವಿರತಕ್ಕದ್ದು. ವ್ಯಾಖ್ಯಾನದ ವಿಷಯವನ್ನಾರಿಸುವ ಅಧಿಕಾರವು ಮಾತ್ರ ಸಾಹಿತ್ಯಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರಿಗಿರಬೇಕು.

ಈ ವ್ಯಾಖ್ಯಾನ ಪದ್ಧತಿಯೊಳಗಿನ ಮುಖ್ಯ ತತ್ವಗಳೇನೆಂದರೆ—ಮುಂಬಯಿ ಕರ್ನಾಟಕದ ಜಿಲ್ಲೆಗಳಲ್ಲಿ ಮೈಸೂರಿನ ಪಂಡಿತರಿಂದಲೂ, ಮೈಸೂರಿನಲ್ಲಿ ಮುಂಬಯಿ ಭಾಗದ ವಿದ್ವಾಂಸರಿಂದಲೂ ಸಾಧ್ಯವಿದ್ದ ಮೇರೆಗೆ ವ್ಯಾಖ್ಯಾನಗಳು ನಡೆಯತಕ್ಕದ್ದು. ಹೀಗಾಗುವುದರಿಂದ, ನಾಲ್ಕು ಮುಖ್ಯ ಸಂಗತಿಗಳು ನಮಗ ಲಭ್ಯವಾಗುವುವು (೧) ಬೇರೆ ಬೇರೆ ಭಾಗಗಳ ಪಂಡಿತರ ಪರಿಚಯವು, (೨) ಗ್ರಾಂಥಿಕ ಹಾಗೂ ವ್ಯಾವಹಾರಿಕ ಭಾಷೆಗಳ ಪರಿಚಯವು, (೩) ಭಾಷಾಪದ್ಧತಿಯ ದೋಷಗಳು ಬೈಲಿಗೆಳೆಯಲ್ಪಡುವುದು, (೪) ಭಾಷೆಯ ಬಗ್ಗೆ ಜಾಗ್ರತಿ. ಈ ಉತ್ಕೃಷ್ಟೋಪಾಯವು ಸಂಭವನೀಯವೆಂದು ತೋರಿದಲ್ಲಿ, ಏಮರ್ಶಾನಂತರ ಪರಿಗ್ರಹಿಸೋಣಾಗಬೇಕು.

ಕರ್ನಾಟಕ ಭಾಷೆಯ ಏಕರೂಪತೆಯ ಬಗ್ಗೆ ಅವಶ್ಯವಾಗಿ ಮಾಡತಕ್ಕ ಮೇಲಿನ ನಾಲ್ಕು ಕಾರ್ಯಗಳಲ್ಲದೆ, ಪರಿಷತ್ತಿನವರು ಇನ್ನೊಂದು ಮಹತ್ವದ ಉಪಾಯವನ್ನು ಸದ್ಯಕ್ಕೆ ಯೋಚಿಸಬೇಕಾಗಿರುವುದು. ಅದು "ಗ್ರಾಂಥಿಕಭಾಷಾದೋಷನಿವಾರಣೆ" ಯೆಂಬುದು ಇದು ಎಲ್ಲವುಗಳಿಗಿಂತಲೂ ಉಚ್ಚತಮವಾದದ್ದು. ಶೀಘ್ರ ಫಲಕಾರಿಯೂ ಅಹುದು. ಇದನ್ನು ಪ್ರಚಾರದಲ್ಲಿ ತರುವುದಕ್ಕೆ ಕೆಳಗೆ ಹೇಳಿದ ವಿಧಾನಗಳನ್ನು ಮಾಡತಕ್ಕದ್ದು:—(೧) ಹೊಸಗನ್ನಡದಲ್ಲಿ ಶ್ರೀ. ಬಿ. ವೆಂಕಟಾ

ಚಾರ್ಯ, ಎಮ್ ಬಿ ಶಾಸ್ತ್ರಿ, ಆರ್ ತಾತಾ, ಎಸ್ ಶ್ರೀಕಂಠಯ್ಯ, ಬಿ ರಾಮ ರಾವ್, ವಾಸುದೇವಾಚಾರ್ಯ ಕೆರೂರ, ವೆ ರ ಕಟ್ಟಿ, ಮುಳಬಾಗಲ, ಆಲೂರ ಇವರೇ ಮೊದಲಾದವರಿಂದ ಬರೆಯಲ್ಪಟ್ಟ ಪುಸ್ತಕಗಳನ್ನು ವಿಮರ್ಶಿಸಿ, ಅವುಗಳಲ್ಲಿಯ ಸಾಮಾನ್ಯ ದೋಷಗಳನ್ನು ಬೈಲಿಗೆಳೆಯುವುದು, (೨) ಹೀಗೆ ಬೈಲಿಗೆಳೆದ ದೋಷಗಳನ್ನು ಸಪ್ರಮಾಣವಾಗಿ ಖಂಡಿಸಿ, ಅವುಗಳಿಗೆ ಸರಿಯಾದ ರೂಪಗಳನ್ನು ಪ್ರಸಿದ್ಧಿಸುವುದು, (೩) ಹೊರಪಡಿಸಿದ ದೋಷಯುಕ್ತರೂಪಗಳನ್ನು ಉಪಯೋಗಿಸಿ ಯಾರಾದರೂ ಪುಸ್ತಕಗಳನ್ನು ಬರೆದರೆ, ಅಂತಹರ ಗ್ರಂಥಪ್ರಚಾರಕ್ಕೆ ಆಸ್ಪದವು ದೊರೆಯದಂತೆ ಮಾಡುವುದಲ್ಲದೆ, ವಿದ್ಯಾಖಾತೆಯ ಅಧಿಕಾರಸ್ಥರಿಗೂ ಅಂತಹ ಗ್ರಂಥಗಳಿಗೆ ಉತ್ತೇಜನವನ್ನು ಕೊಡಬಾರದೆಂಬ ಬಗ್ಗೆ ವಿಜ್ಞಾಪಿಸಿಕೊಳ್ಳುವುದು

ಮಹನೀಯರೇ, ಕರ್ನಾಟಕದ ಬೇರೆ ಬೇರೆ ಭಾಗಗಳ ಗ್ರಾಂಥಿಕರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ, ಭಾಷಾಭಿಮಾನಿಗಳು ಕೈಕೊಳ್ಳತಕ್ಕ ಅನೇಕ ಉಪಾಯಗಳಲ್ಲಿ ಮೇಲೆ ಹೇಳಿದ ನಾಲ್ಕು ಉಪಾಯಗಳು ಉತ್ಕೃಷ್ಟವಾದವುಗಳೆಂದು ನಾನು ಸ್ಪಷ್ಟವಾಗಿ ಹೇಳಬಲ್ಲವನಾಗಿದ್ದೇನೆ ಈ ಉಪಾಯಗಳನ್ನು ಕೈಗೊಂಡು ಜಾಗ್ರತೆಯಾಗಿ ಪ್ರಚಾರದಲ್ಲಿ ತರುವುದರಿಂದ ಭಾಷೆಯ ಏಕರೂಪತೆಯು ತಾನು ಶ್ರಮ ವೇಳೆಗಳಲ್ಲಿ ಕೈಗೂಡುವುದೆಂದೂ ನನ್ನ ಪೂರ್ಣ ನಂಬಿಗೆಯಿದೆ ವಿದ್ವಾಂಸರೂ, ಭಾಷಾಭಿಮಾನಿಗಳೂ ಆದ ಮಹನೀಯರ ಸಮರ್ಥನವಾದ ಪಕ್ಷದಲ್ಲಿ ನನ್ನ ಶ್ರಮಕ್ಕೆ ತಕ್ಕ ಫಲವು ದೊರೆಯಿತೆಂದು ಪರಿಭಾವಿಸುವೆನು ಈ ಐದು ಉಪಾಯಗಳನ್ನು ಮತ್ತೊಮ್ಮೆ ಸಂಗ್ರಹವಾಗಿ ಹೇಳುವುದು ಪ್ರಕೃತೋಚಿತವಾಗಿ ತೋರುವದರಿಂದ ಅವುಗಳನ್ನಿಲ್ಲಿ ಬರೆಯುವೆನು

(೧) ಕನ್ನಡ-ಕನ್ನಡ ನಿಘಂಟು ಸಂಸ್ಕೃತ ಕನ್ನಡ ನಿಘಂಟು, ಇಂಗ್ಲಿಷ-ಕನ್ನಡ ನಿಘಂಟು ಈ ಮೂರು ಕೃತಿಗಳನ್ನು ರಚಿಸುವುದು.

(೨) ಹೊಸಗನ್ನಡ ವ್ಯಾಕರಣವನ್ನು ಬರೆಯಿಸುವುದು

(೩) 'ಕರ್ನಾಟಕ ದೇಶಭಕ್ತ ಸಮಾಜ' ವನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಸ್ಥಾಪಿಸುವುದು

(೪) ವ್ಯಾಖ್ಯಾನಗಳನ್ನು ಕೂಡಿಸುವುದು

(೫) ಹೊಸಗನ್ನಡ ಗ್ರಂಥಗಳ ಭಾಷಾಸಂಶೋಧನೆಯನ್ನು ಮಾಡುವುದು.

VII ಉಪಸಂಹಾರ

ಈ ವರೆಗೆ ಆಲೋಚಿಸಿದ ಎಲ್ಲ ಉಪಾಯಗಳ ಬಗ್ಗೆ ಸಂಗ್ರಹವಾಗಿ ಇಲ್ಲಿ ಮತ್ತೊಮ್ಮೆ ವಿಚಾರಿಸುವುದು ಪ್ರಕೃತೋಚಿತವಾಗಿ ತೋರುತ್ತದೆ ಕ್ಷಮೆಯ ಬಗ್ಗೆ ಮಹನೀಯರುಗಳಿಗೆ ಪ್ರಾರ್ಥಿಸುವೆನು.

I ಕರ್ನಾಟಕ ಇತಿಹಾಸ

(೧) ಕರ್ನಾಟಕ ಇತಿಹಾಸ ಸಂಶೋಧಕ ಮಂಡಳಿಯೊಂದನ್ನು ಏರ್ಪಡಿಸಿ, ಪ್ರಾಚೀನ ಅರ್ವಾಚೀನ ಕಾಲಗಳ ಪರಿಸ್ಥಿತಿಗಳನ್ನನುಲಕ್ಷಿಸಿ ಒಂದು ಕರ್ನಾಟಕ ಇತಿಹಾಸಗ್ರಂಥವನ್ನು ರಚಿಸುವುದು

(೨) ಈ ಗ್ರಂಥವನ್ನೇ ಸಂಕ್ಷೇಪವಾಗಿ ಬರೆದು, ಕರ್ನಾಟಕದ ಎಲ್ಲ ಭಾಗಗಳ ಪ್ರಾಥಮಿಕ ಶಾಲೆಗಳ ನಾಲ್ಕನೆಯ ಹಾಗೂ ಐದನೆಯ ತರಗತಿಗಳಲ್ಲಿ ಓದಿಸುವಂತೆ ಏರ್ಪಾಡುಗಳನ್ನು ಮಾಡುವುದು

(೩) ಕರ್ನಾಟಕ ಪ್ರಾಂತದ ಪ್ರಾಕೃತಿಕ, ರಾಜಕೀಯ, ಔದ್ಯೋಗಿಕ ಸಂಗತಿಗಳನ್ನೊಳಗೊಂಡ ಭೂವಿವರಣೆಯೊಂದನ್ನು ಸಿದ್ಧಪಡಿಸಿ ಅದನ್ನು ನಾಲ್ಕನೆಯ ತರಗತಿಗಳಲ್ಲಿ ಕಲಿಸುವಂತೆ ವ್ಯವಸ್ಥೆಗೊಳಿಸುವುದು

II ಭಾಷಾಂತರಗಳು.

(೧) ಭಾಷಾಂತರಿಸಿ ಬರೆಯಲ್ಪಡುವ ಚಿಕ್ಕ ಪುಸ್ತಕಗಳಿಗಿಂತ ಭಾಷಾಂತರವಲ್ಲದ ಸ್ವತಂತ್ರವಾಗಿ ಬರೆದಂತಹ ಪುಸ್ತಕಗಳಿಗೆ ಹೆಚ್ಚು ಉತ್ತೇಜನವು ದೊರೆಯುವುದು

(೨) ಪರಿಷತ್ತಿನವರಿಗೆ ಮಾನ್ಯವಾಗದ ಪುಸ್ತಕಗಳೂ, ಮಾಸಿಕ ಪತ್ರಿಕೆಗಳೂ ಯಾವ ಶಾಲಾವಾಚನ ಮಂದಿರಗಳಲ್ಲಿಯೂ, ಸಾರ್ವಜನಿಕ ವಾಚನಾಲಯಗಳಲ್ಲಿಯೂ ಉಪಯೋಗಿಸಲ್ಪಡದಂತೆ ಆಯಾಯ ಅಧಿಕಾರಿಗಳಿಗೆ ವಿಜ್ಞಾಪಿಸಿಕೊಳ್ಳುವುದು

III ಪಾರಿಭಾಷಿಕ ಶಬ್ದಗಳು.

(೧) ಕನ್ನಡ ಸಾಹಿತ್ಯದಲ್ಲಿ ಅವಶ್ಯವಾಗಿ ಬೇಕಾಗುವ ಶಾಸ್ತ್ರೀಯ ಮೊದಲಾದ ವಿಷಯಗಳಲ್ಲಿಯ ಪಾರಿಭಾಷಿಕ ಶಬ್ದಗಳನ್ನು ಆರಿಸಿ ತೆಗೆದು, ಸ್ಪಷ್ಟವಾದ ಅರ್ಥದೊಂದಿಗೆ ಒಂದು ಪಾರಿಭಾಷಿಕ ಶಬ್ದಕೋಶವನ್ನು ರಚಿಸುವುದು.

(೨) ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ವಿಶೇಷವಾಗಿ ರೂಢಿಯಲ್ಲಿ ಬಂದಿರುವ ಟಪಾಲು ಗ್ಯಾಸು ಮೊದಲಾದ ಪಾರಿಭಾಷಿಕ ಶಬ್ದಗಳು ಸಾಧುವೆಂದು ಗ್ರಹಿಸಿ ಇಂತಹ ಶಬ್ದಗಳನ್ನು ಉಪಯೋಗಿಸಲಿಕ್ಕೆ ಅಡ್ಡಿಯಿಲ್ಲವೆಂದು ತೋರಿಸುವುದಕ್ಕಾಗಿ ಬೇರೊಂದು 'ಪ್ರಚುರ ಪಾರಿಭಾಷಿಕ ಶಬ್ದಕೋಶ' ವನ್ನು ತಯಾರಿಸುವುದು.

IV ದೇಶಭಾಷೆಯ ಪರೀಕ್ಷೆಗಳು.

(೧) ಕನ್ನಡ ಮುಲಕೀ (Vernacular Final) ಪರೀಕ್ಷೆಗೆ ಓದಿಸುತ್ತಿರುವ ಕ್ರಮಿಕ ಏಳನೆಯ ಪುಸ್ತಕವೊಂದನ್ನೇ ಪ್ರತಿವರುಷ ನಿಯಮಿಸದೆ, ವರುಷವೊಂದಕ್ಕೆ ಬೇರೆ ಬೇರೆ ಭಾಗಗಳ ಕ್ರಮಿಕ ಪುಸ್ತಕಗಳನ್ನು ಓದಿಸುವಂತೆ ಏರ್ಪಾಡುಗಳನ್ನು ಮಾಡುವುದು.

(೨) ದೇಶಭಾಷೆಯ ಟ್ರೇನಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವ್ಯಾಕರಣದ ನಿಜವಾದ ಹಾಗೂ ಹೆಚ್ಚಿನ ಜ್ಞಾನವನ್ನುಂಟುಮಾಡಿ ಕೊಡುವುದಕ್ಕೆ ಮೈಸೂರಿನ ಇಬ್ಬರು ಕರ್ನಾಟಕ ಪಂಡಿತರನ್ನು ನಿಯಮಿಸಿಕೊಳ್ಳುವಂತೆ ಸರಕಾರದವರನ್ನು ಬೇಡಿಕೊಳ್ಳುವುದು

(೩) 'ಕರ್ನಾಟಕ ವಿದ್ಯಾವರ್ಧಕ ಸಂಘ' ಮೊದಲಾದ ಸಂಸ್ಥೆಯವರು ಪ್ರತಿವರುಷ ಇಬ್ಬರನ್ನು ಮೈಸೂರಿನ ಕನ್ನಡ ಪಂಡಿತ ಪರೀಕ್ಷೆಗೆ ಓದುವುದಕ್ಕೆ ವಿದ್ಯಾರ್ಥಿ ವೇತನವನ್ನು ಕೊಟ್ಟು ಕಳುಹಿಸುವುದು

(೪) ಮುಲಕೀ, ಟ್ರೇನಿಂಗ್ ಕಾಲೇಜಗಳ ಪರೀಕ್ಷೆಗಳಲ್ಲಿ ಶುದ್ಧ ಬರೆಹ, ಸುಲಭ ಶೈಲಿ, ಸರಳವಾದ ಹಾಗೂ ಪರಿಶುದ್ಧವಾದ ಭಾಷೆಗಳನ್ನುಳ್ಳ ಉತ್ತಮವರ್ಗದ ವಿದ್ಯಾರ್ಥಿಗೆ ಅಥವಾ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನಾಗಲಿ ಇನಾಮಾಗಿ ಕೊಡುವುದು

V ಹೈಸ್ಕೂಲಿನ ಅಭ್ಯಾಸ.

(೧) ಪ್ರತಿಯೊಂದು ಹೈ ಸ್ಕೂಲಿನಲ್ಲಿ ಕನ್ನಡವನ್ನು ಕಲಿಸುವುದಕ್ಕಾಗಿ ಮೈಸೂರಿನ ಇಬ್ಬರು ಕರ್ನಾಟಕ ಪಂಡಿತರನ್ನು ಶಿಕ್ಷಣಾಧಿಕಾರಿಗಳಿಗೆ ಬಿನ್ನವಿಸಿಕೊಳ್ಳುವುದು

(೨) ಹೈಸ್ಕೂಲಿನ ಕಡೆಯ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನದ, ವಿಶೇಷವಾಗಿ ವ್ಯಾಕರಣಜ್ಞಾನದ ಪರೀಕ್ಷೆಯಾಗುವಂತೆ ವ್ಯವಸ್ಥೆಗಳನ್ನು ಮಾಡಿಸುವುದು

(೩) ಈ ಶಾಲೆಗಳಲ್ಲಿಯು ಕನ್ನಡದ ಅಭ್ಯಾಸಕ್ರಮವನ್ನು ಸಾಧ್ಯವಿದ್ದ ಮಟ್ಟಿಗೂ ಹೆಚ್ಚಿಸುವುದು

(೪) ಈ ಪರೀಕ್ಷೆಗಳಲ್ಲಿ ಭಾಷಾವಿಷಯದಲ್ಲಿ ಹೆಚ್ಚು ಗುಣಗಳನ್ನು ದೊರಕಿಸಿದ ಒಬ್ಬಿಬ್ಬ ವಿದ್ಯಾರ್ಥಿಗಳಿಗೆ ಪಾರಿತೋಷಿಕಗಳನ್ನು ಕೊಡುವುದು

ಕರ್ನಾಟಕ ಬಂಧುಗಳೇ, ಭಾಷಾಸುಧಾರಣಾಭಿಮಾನಿಗಳೇ, ಕನ್ನಡದ ಏಕೀಕರಣಕ್ಕಾಗಿ ಎಲ್ಲ ಭಾಗಗಳ ಜನರು ಈಗ್ಗೆ ತಮ್ಮಿಂದಾದಷ್ಟು ಯತ್ನ ಪಡುತ್ತಿರುವುದನ್ನು ನೋಡಿದರೆ ಆನಂದಾಭಿಮಾನಗಳುಂಟಾಗುತ್ತವೆ ಈ ತರದ ಅಭಿಮಾನದಿಂದ ಪ್ರೇರಿತನಾಗಿಯೂ, ಮಹಾರಾಷ್ಟ್ರ ಮೊದಲಾದ ಭಾಷೆಗಳು ಊರ್ಜಿತವನ್ನೂ, ಸುಧಾರಣೆಯನ್ನೂ ಹೊಂದುತ್ತಿರುವುದನ್ನು ನೋಡಿ, ಮಾತೃಭಾಷಾವನತಿಯ ಬಗ್ಗೆ ಕಳಕಳಿ ಹುಟ್ಟಿದವನಾಗಿಯೂ ನನಗೆ ಸರಿದೋರಿದ ನಾಲ್ಕು ಉಪಾಯಗಳನ್ನು ಮಹನೀಯರುಗಳಾದ ತಮ್ಮೆಲ್ಲರ ವಿಮರ್ಶೆಗಾಗಿ ಹೇಳಲು ಯತ್ನಿಸಿರುವೆನು ಸದಯಹೃದಯರಾದ ಅಭಿಮಾನಿಗಳು ಸಾಗ್ರವಾಗಿ ಓದಿ ವಿಚಾರಿಸಬೇಕೆಂಬದಿಷ್ಟೇ ನನ್ನ ಪ್ರಾರ್ಥನೆಯು. ಇದರ ಹಿಂದಿನ ಭಾಗದಲ್ಲಿ ಹೇಳಿರುವ ಐದು ಉತ್ಕೃಷ್ಟೋಪಾಯಗಳು ಮಹತ್ವದವೂ, ಶೀಘ್ರ ಫಲಕಾರಿಗಳೂ ಇರುವುವೆಂದು ನಾನು ಸ್ಪಷ್ಟವಾಗಿ

ಹೇಳಬಲ್ಲೆನು. ಈ ಭಾಗದಲ್ಲಿ ಹೇಳಿರುವ ಬೇರೆ ಬೇರೆ ಉಪಾಯಗಳು ಸದ್ಯಃ ಕಾಲದಲ್ಲಿ ಹೆಚ್ಚು ಪರಿಣಾಮಕಾರಿಗಳೆಂದು ಅನಿಸದಿದ್ದರೂ, ಕಾಲಾಂತರದಲ್ಲಿ ಉಂಟಾಗುವ ಕನ್ನಡದ ಬೆಳವಣಿಗೆಗೂ, ಅದರ ಬೇರೆ ಬೇರೆ ರೂಪಗಳ ಏಕರೂಪತೆಗೂ ಚೆನ್ನಾಗಿ ಸಹಾಯಕಾರಿಗಳಾಗುವುವೆಂಬುದರಲ್ಲೇನೂ ಸಂದೇಹತೋರುವುದಿಲ್ಲ. ಭಾಷಾಸುಧಾರಣೆಯ ಮಹತ್ಕಾರ್ಯವು ಇಂದಲ್ಲ, ನಾಳೆಯಲ್ಲ, ಅನೇಕ ವರುಷಗಳ ವರೆಗೆ ಸತತವಾದ ಪ್ರಯತ್ನದಿಂದಲ್ಲದೆ, ಸಾಧ್ಯವಾಗದು. ಇದನ್ನೇ ಮುಖ್ಯವಾಗಿಟ್ಟುಕೊಂಡು ಕರ್ನಾಟಕದ ಭಾವಿ ಪ್ರಜೆಗಳಾಗುವ ಈಗಿನ ವಿದ್ಯಾರ್ಥಿವರ್ಗಕ್ಕೆ ನಾವು ತಕ್ಕ ಸುಧಾರಣೆಯ ಮಾರ್ಗವನ್ನು ತೋರಿಸಿಕೊಟ್ಟರೆ ಮಾತ್ರ ನಮ್ಮ ಕರ್ನಾಟಕ ಭಾಷೆಯು ನಿಶ್ಚಯವಾಗಿ ಏಳ್ಗೆಯನ್ನು ಹೊಂದುವುದಲ್ಲದೆ, ಎಲ್ಲರಲ್ಲಿಯೂ ಒಂದೇ ತೆರನಾದ ಭಾಷಾ ಸ್ವರೂಪವು ಅಪ್ರತ್ಯಕ್ಷವಾಗಿ ನೆಲೆಗೊಂಡು, ಲೇಖಕರು, ಪತ್ರಿಕಾಕಾರರು, ಗ್ರಂಥಕರ್ತರು ಇವರುಗಳ ಮುಖಾಂತರವಾಗಿ ಗ್ರಾಂಥಿಕ ಭಾಷೆಯು ಏಕರೂಪತೆಯುಳ್ಳದ್ದಾಗುವುದೆಂದೇ ಭಾವಿಸಬೇಕಾಗುವುದು. ಮಹಾಸಭೆಯ ವಿಮರ್ಶನಂತರದಲ್ಲಿ ಈ ವಿಚಾರಗಳು ಬಹುಮಟ್ಟಿಗೆ ಸರಿಹೋಗುವುವೆಂಬ ಆಶೆಯೂ ಇದೆ.

ಕಡೆಗೆ, ಕರ್ನಾಟಕದ ಭಾಷಾಸುಧಾರಕರು ಕೈಗೊಂಡ ಈ ಮಹತ್ಕಾರ್ಯವು ಬೇಗನೆ ಸಿದ್ಧಿಸಲೆಂದೂ, ತನ್ಮೂಲಕ ನಮ್ಮ ಕರ್ನಾಟಕ ಮಾತೆಯು ಪರಿಶುದ್ಧವಾದ ಹಾಗೂ ಉತ್ಕೃಷ್ಟವಾದ ಗ್ರಂಥಾಭರಣಗಳಿಂದ ಶೋಭಿಸುತ್ತ ಕೀರ್ತಿ ಪಡೆಯಲೆಂದೂ ಶ್ರೀ ಪರಮಾತ್ಮನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತ ನನ್ನೀ ಲೇಖನವನ್ನು ಮುಗಿಸುವೆನು.

— ॥ —

“ ಕನ್ನಡನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು ”

(ಲೇಖಕ—ನೃಪತುಂಗ, ಆನವಟ್ಟಿ)

ಉಪೋದ್ಘಾತ

† ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ

ಕವಿಕುಲಗುರುವಾದ ಕಾಳಿದಾಸನು, ತನ್ನ ರಘುವಂಶ ಮಹಾಕಾವ್ಯದ ಆರಂಭದಲ್ಲಿ ಈ ಶ್ಲೋಕದಿಂದ ಪರಮೇಶ್ವರನ ಸ್ತವವನ್ನು ಮಾಡಿದ್ದಾನೆ. ಈ ಸ್ತುತಿಯಲ್ಲಿ ಆ ಕವಿಶ್ರೇಷ್ಠನು ತನ್ನ ಅದ್ವಿತೀಯ ಪ್ರಮಾಣಾತಿಶಯವನ್ನು ತೋರಿಸಿದುದಲ್ಲದೆ, ಗ್ರಂಥರಚನೆಯ ವಿಷಯದಲ್ಲಿ ತನ್ನ ಸ್ವಾನುಭವಸಿದ್ಧಾಭಿಪ್ರಾಯವನ್ನು ಒಳ್ಳೇ ಚಾತುರ್ಯದಿಂದ ಹೇಳಿದ್ದಾನೆ. ಇದನ್ನು ಸ್ವಲ್ಪ ವಿಶದವಾಗಿ ಹೇಳಲುಪಕ್ರಮಿಸುತ್ತೇನೆ, ಏಕೆಂದರೆ—ಈ ಶ್ಲೋಕವು ಈ ಉಪೋದ್ಘಾತದ ಆಧಾರಸ್ತಂಭವೇ ಆಗಿದೆ, ಎಂದು ಹೇಳಬಹುದು.

ಕೆಲವರು ತಿಳಿಯುವುದೇನೆಂದರೆ, ಸುಂದರವಾದ ಭಾಷಾಸರಣಿಯು ಸಾಧಿಸಿತೆಂದರೆ, ಗ್ರಂಥವು ಉತ್ಕೃಷ್ಟವಾಗಲಿಕ್ಕೆ ಬೇಕು. ಇದು ತಪ್ಪು ತಿಳಿವಳಿಕೆ, ಏಕೆಂದರೆ—ಭಾಷೆ ಸುಂದರವಾಗಿದ್ದು, ಅರ್ಥವು ನಿಕೃಷ್ಟವಾಗಿದ್ದರೆ—ಅರ್ಥಾತ್ ಉತ್ತಮವಾದ ವಾಕ್ಯರಚನೆಯಿಂದ ಒಡಗೂಡಿದ್ದರೂ ಅದರೊಳಗಿನ ವಿಚಾರಗಳು ಮಾತ್ರ ಬಾಲಿಶತನದವಾಗಿದ್ದರೆ ಆ ಗ್ರಂಥರಚನೆಯು ಎಂದಿಗೂ ಸನ್ಮಾನಕ್ಕೆ ಪಾತ್ರವಾಗಲರಿಯದು. ವಜ್ರದ ಹರಳೇ ಒಂದುವೇಳೆ ಮಲಿನವಾಗಿದ್ದರೆ, ಅದಕ್ಕೆ ಅತ್ಯುತ್ತಮವಾದ ಕುಂದಣವನ್ನು ಕೂಡಿಸುವುದರಿಂದ ಫಲವೇನು? ಸಾರಾಂಶ, ಗ್ರಂಥರಚನೆಯು ಉತ್ಕೃಷ್ಟವಾಗುವುದಕ್ಕೆ ಅರ್ಥಗಾಂಭೀರ್ಯವು ಅವಶ್ಯವಾಗಿದೆ. ಗ್ರಂಥಕರ್ತೃವಿಗೆ ಅನೇಕ ವಿವಿಧ ವಿಷಯಗಳ ಜ್ಞಾನವೂ ಪ್ರತಿಭಾಸಂಪನ್ನ ಕಲ್ಪನಾಶಕ್ತಿಯೂ ಅಗತ್ಯವಾಗಿವೆ. ಕೇವಲ ಭಾಷಾಸೌಷ್ಠವದಿಂದ ಗ್ರಂಥಕ್ಕೆ ಎಂದಿಗೂ ಮಾನ ದೊರೆಯಲಾರದು. ಆದರೆ ಆ ಗ್ರಂಥದ ಲೋಕಮಾನ್ಯತೆಯು ಅದರಲ್ಲಿ ಅಡಕವಾಗಿದ್ದಂಥ ವಿಚಾರಗಳ ಉತ್ಕೃಷ್ಟತೆಯನ್ನು ಅವಲಂಬಿಸಿರುತ್ತದೆ. ಇತರ ಧರ್ಮಗಳಂದದ, ಕೇವಲ ಶಬ್ದಸೌಷ್ಠವವು ಗ್ರಂಥರಚನಾ ಚಾತುರ್ಯದ ಒಂದು ಅಂಗವಾಗಿದೆ. ಆದುದರಿಂದಲೇ ಕಾಳಿ

---

† ಶಬ್ದ ಮತ್ತು ಅರ್ಥಗಳಂತೆ ಗಾಢವಾದ ಸಂಪರ್ಕವುಳ್ಳಂಥ ಜಗತ್ತಿನ ತಾಯಿತಂದೆಗಳಾದ ಪಾರ್ವತೀಪರಮೇಶ್ವರರನ್ನು ಕುರಿತು ಶಬ್ದ ಮತ್ತು ಅರ್ಥಗಳು ಪ್ರಾಪ್ತವಾಗುವುದಕ್ಕೋಸ್ಕರ ನಾನು ನಮಸ್ಕರಿಸುತ್ತೇನೆ.

ದಾಸನು ಪರಮೇಶ್ವರನನ್ನು ಪ್ರಾರ್ಥಿಸುವಾಗ, ಕೇವಲ ಭಾಷಾಸೌಷ್ಠವವೊಂದನ್ನೆ ಬೇಡಿಕೊಳ್ಳದೆ, ಭಾಷೆಯು ಹಾಗು ಅರ್ಥವು ಇವೆರಡೂ ಪ್ರಾಪ್ತವಾಗಬೇಕೆಂದು ಅಪೇಕ್ಷಿಸಿದ್ದಾನೆ

ಮೇಲೆ ಬರೆದ ತಪ್ಪು ತಿಳಿವಳಿಕೆಯಂತೆಯೇ ತದ್ವಿರುದ್ಧವಾಗಿ ಇನ್ನೊಂದು ಭ್ರಾಂತಿಯು ಕೆಲವರಲ್ಲಿ ವಾಸವಾಗಿದೆ ಏನೆಂದರೆ, ಉತ್ತಮವಿಚಾರಗಳು ಇದ್ದರೆ ಸಾಕು, ಭಾಷೆಯು ಎಂತಹ ಸೊಟ್ಟು ಡೊಂಕಾಗಿದ್ದರೂ ಸಾಗುವುದು ಸಂಭಾವಿತನಾದ ವಿದ್ವಾಂಸನು ಹರಕ ಮುರಕ ಅರಿವೆಗಳನ್ನು ಹೊದೆದುಕೊಂಡಿದ್ದರೂ ಅವನು ಸರ್ವರಿಗೂ ಪೂಜ್ಯನೇ ಸರಿ ಆದರೆ ಮಲಿನವಸ್ತ್ರಗಳನ್ನು ಪರಿಧಾನಮಾಡುವಂತಹ ಪಂಡಿತನಿಗೂ ಕಿಂಚಿತ್ ಕಡಿಮೆ ಮಾನವನ್ನು ಕೊಡಬೇಕಾಗುವುದು ತಾತ್ಪರ್ಯವೇನೆಂದರೆ, ಗ್ರಂಥಕರ್ತೃವು ಭಾಷೆಯನ್ನು ಶುದ್ಧವಾಗಿಯೂ ಸುಂದರವಾಗಿಯೂ ರಸಯುಕ್ತವಾಗಿಯೂ ಬರೆವುದು ಅವಶ್ಯವಾಗಿದೆಯೆಂಬುದನ್ನು ಸರ್ವರೂ ಒಪ್ಪತಕ್ಕದಾಗಿದೆ ಅರ್ಥಾತ್ ಭಾಷೆಯು ಮತ್ತು ಅರ್ಥವು ಇವೆರಡೂ ಅಂಗಗಳು ಗ್ರಂಥಕರ್ತೃವಿಗೆ ಅತ್ಯಗತ್ಯವಾಗಿರುತ್ತವೆ

ಇದುವರೆಗ ವಿವರಿಸಿದಂತಹ ಈ ಯೆರಡು ಅಂಗಗಳ ಪರಸ್ಪರ ಮಹತ್ವದ ಸಂಬಂಧದ ವಿಷಯವಾಗಿ ವಿಚಾರಮಾಡಲು, ಭಾಷಾಸೌಷ್ಠವವು ಅರ್ಥ ಗಾಂಭೀರ್ಯಕ್ಕಿಂತ ಕಡಿಮೆ ಮಹತ್ವವುಳ್ಳದಾಗಿದೆಯೆಂದು ಧಾರಾಳವಾಗಿ ಹೇಳಬಹುದು ಈ ಗೌಣಮುಖ್ಯ ಭಾವವನ್ನು ಕಾಲಿದಾಸನು ಮೇಲಿನ ಶ್ಲೋಕದಲ್ಲಿ ಬಹು ಸುಂದರವಾದ ರೀತಿಯಿಂದ ವ್ಯಕ್ತಮಾಡಿದ್ದಾನೆ. ಕಾಲಿದಾಸನ ಉಪಮೆಯಲ್ಲಿ ಲಿಂಗಸಾದೃಶ್ಯವೂ ಇರುತ್ತದೆಯೆಂಬುದನ್ನು ಕಾವ್ಯಜ್ಞರಿಗ ಹೊಸದಾಗಿ ಹೇಳಬೇಕಾದುದಿಲ್ಲ "ವಾಕ್" ಶಬ್ದವು ಸ್ತ್ರೀಲಿಂಗವಾಗಿದ್ದು "ಅರ್ಥ" ಶಬ್ದವು ಪುಲ್ಲಿಂಗವಾಗಿದೆ ಆದೇ ಮೇರೆಗೆ "ವಾಕ್" ಇನ ಉಪಮೆಯನ್ನು ಪಾರ್ವತಿಗೂ "ಅರ್ಥ" ದ ಉಪಮೆಯನ್ನು ಶಂಕರನಿಗೂ ಕೊಟ್ಟಿದ್ದಾನೆ ಪಾರ್ವತೀ ಪರಮೇಶ್ವರರಲ್ಲಿ ಹೇಗೆ ನ್ಯೂನಾಧಿಕ ಭಾವವಿದೆಯೋ ಹಾಗೆಯೇ ವಾಕ್ಕು ಮತ್ತು ಅರ್ಥಗಳಲ್ಲಿಯೂ ಇರುತ್ತದೆ ಮಥಿತಾರ್ಥವೇನೆಂದರೆ, ಅರ್ಥದೃಷ್ಟಿಯಿಂದ ವಾಕ್ಕಿಗ ಗೌಣತ್ವವಿರುತ್ತದೆ, ಇದೇನೋ ನಿಜ. ಆದರೆ ಅರ್ಥ ಮತ್ತು ವಾಕ್ಕುಗಳಲ್ಲಿ ಒಂದನ್ನೂ ದುರ್ಲಕ್ಷ್ಯಮಾಡುವಂತೆ ಇಲ್ಲ. ಕಿಂಬಹುನಾ ಇವೆರಡೂ ಅಂಗಗಳು ಅತ್ಯಂತ ಮಹತ್ತ್ವವುಳ್ಳವಾಗಿರುತ್ತವೆ. ಮಾತಾಪಿತೃಗಳಲ್ಲಿ ಎಷ್ಟು ಗೌಣಮುಖ್ಯಸಂಬಂಧವಿದೆಯೋ ಅಷ್ಟೇ ವಾಕ್ಕು ಮತ್ತು ಅರ್ಥಗಳಲ್ಲಿ ಇದೆ ಒಮ್ಮೊಮ್ಮೆ ಅರ್ಥಕ್ಕಿಂತ ವಾಕ್ಕೇ ತಾಯಿಯಂತೆ ಹೆಚ್ಚು ಪ್ರಿಯಕರವಾಗುತ್ತದೆ ಈ ವಾಕ್ಕಿನ ವಿಷಯವಾಗಿ ವಿಚಾರಮಾಡುವುದೇ ಈ ಪ್ರಬಂಧದ ಮುಖ್ಯ ಕರ್ತವ್ಯವಾಗಿದೆ

ವಾಕ್ಕಿನಲ್ಲಿ ಅಂದರೆ ಭಾಷೆಯಲ್ಲಿ ಗದ್ಯಪದ್ಯಗಳೆಂದು ಮುಖ್ಯವಾಗಿ ಎರಡು ಭೇದಗಳುಂಟು. ನಮ್ಮ ಈ ಪ್ರಬಂಧದ ವಿಷಯವು "ಕನ್ನಡ ನಾಡುಗಳಲ್ಲಿ ಪ್ರಭು

ರವಾಗಿರುವ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು'' ಎಂಬುದು ಇದೆ. ಈ ವಾಕ್ಯದಲ್ಲಿ ''ಪ್ರಚುರವಾಗಿರುವ ಗ್ರಾಂಥಿಕ ರೂಪಗಳನ್ನು'' ಎಂಬುದಕ್ಕೆ ''ಪ್ರಚುರವಾಗಿರುವ ಗದ್ಯಭಾಷೆಯ ಗ್ರಾಂಥಿಕ ರೂಪಗಳನ್ನು'' ಎಂದು ಅರ್ಥಮಾಡಿಕೊಳ್ಳುವುದು ಯಥಾನ್ಯಾಯವಾಗಿದೆ. ಏಕೆಂದರೆ, ಈ ಇಪ್ಪತ್ತನೆಯ ಶತಮಾನವು ಗದ್ಯಯುಗವಾಗಿದೆಯೇ ಹೊರತು ಪದ್ಯಯುಗವಲ್ಲ. ಎಂದರೆ ಈಗಿನ ಕಾಲದಲ್ಲಿ ಗದ್ಯವಾಙ್ಮಯಕ್ಕೆ ಶ್ರೇಷ್ಠತ್ವವು ಪ್ರಾಪ್ತವಾಗಿದೆ. ಮುದ್ರಣ ಕಲೆಯಿಂದ ಶೋಭಿಸುತ್ತಿರುವಂತಹ ಈ ಶತಮಾನದಲ್ಲಿ ಗಣಿತ, ವೈದ್ಯಕ, ನಿಬಂಧ, ಚರಿತ್ರ, ಇತಿಹಾಸ, ಪದಾರ್ಥಜ್ಞಾನ-ವನಸ್ಪತಿ-ಕೃಷಿಕರ್ಮ ಮುಂತಾದ ಭೌತಿಕ ಶಾಸ್ತ್ರಗಳು, ಮೊದಲಾದ ಅನೇಕ ವಿಷಯಗಳನ್ನು ವಿಸ್ತೃತರೀತಿಯಿಂದ ಪ್ರತಿಪಾದಿಸುವುದಕ್ಕೆ ಗದ್ಯಭಾಷೆಯೇ ಅನುಕೂಲವಾಗಿದೆ ಪದ್ಯಭಾಷೆಯಲ್ಲಿ ಈ ಶಕ್ತಿಯಿಲ್ಲ ಪದ್ಯದ ಉದ್ದೇಶವು ಮನುಷ್ಯನ ಚಿತ್ತವೃತ್ತಿಯನ್ನು ಆನಂದಪಡಿಸಿ ತಲ್ಲೀನಮಾಡುವುದೊಂದೇ ಆಗಿದೆ ಉಪನ್ಯಾಸ ಮಾಡುವುದು ಹಾಗು ಗಾಯನ ಮಾಡುವುದು ಇವುಗಳಲ್ಲಿ ಹೇಗೆ ನಾದದ ಭೇದವೋ, ನಡೆಯುವುದು ಮತ್ತು ನೃತ್ಯ ಮಾಡುವುದು ಇವುಗಳಲ್ಲಿ ಹೇಗೆ ಗತಿಯ ಭೇದವೋ ಅದೇ ಮೇರೆಗೆ ಗದ್ಯಪದ್ಯಗಳ ರಚನೆಯಲ್ಲಿ ಭೇದವಿದೆ ಗಾಯಕನು ಎಷ್ಟು ಸರಳವಾಗಿ ಹಾಡಿದರೂ ಅವನ ಲಕ್ಷ್ಯವು ಅರ್ಥಕ್ಕಿಂತ ಸ್ವರಶುದ್ಧಿಯ ಕಡೆಗೆ ಅಧಿಕವಾಗಿರಲಿಕ್ಕೆ ಬೇಕು ಉಪನ್ಯಾಸ ಮಾಡುವವನ ಲಕ್ಷ್ಯವು ಸ್ವರದ ಕಡೆಗೆ ಕಡಿಮೆಯಾಗಿದ್ದು, (ಕಿಂಬಹುನಾ ತಿಲಪ್ರಾಯವೂ ಇರದ,) ಕೇವಲ ಅರ್ಥದ ಕಡೆಗೆ ಇರುತ್ತದೆ ನೃತ್ಯಮಾಡುವವನ ಲಕ್ಷ್ಯವು ಗತಿಯ ಲಾಲಿತ್ಯದ ಕಡೆಗೆ ಇರಲಿಕ್ಕೇಬೇಕು, ಹಾಗಿಲ್ಲದಿದ್ದರೆ, ಅವನ ಕೃತಿಯಿಂದ ಆನಂದವಾಗಲಾರದು ಆದರೆ ನಡೆಯುವವನ ಲಕ್ಷ್ಯವು ಮಾತ್ರ ಗತಿಯ ಲಾಲಿತ್ಯದ ಕಡೆಗೆ ಲವಮಾತ್ರವೂ ಇರಕೂಡದು, ಕೇವಲ ಗತಿಯ ಕಡೆಗೆ ಇರತಕ್ಕದು ಒಂದು ವೇಳೆ ಹಾಗಿಲ್ಲದಿದ್ದರೆ ಅವನ ನಡಿಗೆಯು ಸರಳವಾಗಿಯೂ ಸ್ವಾಭಾವಿಕವಾಗಿಯೂ ಆಗಲಾರದು ಇಷ್ಟೇ ಅಲ್ಲ, ಅವನ ನೃತ್ಯದ ನಡಿಗೆಯನ್ನು ನೋಡಿ ಜನರು ನಗುವರು. ಇವೆಲ್ಲಕ್ಕಿಂತ ಮುಖ್ಯವಾದ ಹಾನಿಯು ಯಾವುದೆಂದರೆ, ಇಷ್ಟಸ್ಥಳಕ್ಕೆ ಇಷ್ಟಸಾರವೇಳೆಗೆ ಹೋಗುವ ಅವನ ಕಾರ್ಯವು ಸಾಧಿಸಲಾರದು ಇದೇ ಮೇರೆಗೆ ಗದ್ಯಗ್ರಂಥಕಾರನೂ ಉಪನ್ಯಾಸಕನೂ ತಮ್ಮ ಗ್ರಂಥ-ಉಪನ್ಯಾಸಗಳಲ್ಲಿ ಪದಲಾಲಿತ್ಯದ ಕಡೆಗೆ ವಿಷಯ ಸೌಷ್ಠವಕ್ಕಿಂತ ಅಧಿಕ ಲಕ್ಷ್ಯವನ್ನು ಕೊಟ್ಟರೆ (ಈಗಿನ ಕಾಲದಲ್ಲಿ) ಅವನ ಗ್ರಂಥವೂ ಉಪನ್ಯಾಸವೂ ಎಂದಿಗೂ ಮಾನ್ಯವಾಗಲಾರವು, ಮತ್ತು ಅವನ ಉದ್ದೇಶವೂ ಸಫಲವಾಗಲಾರದು. ಈ ಜ್ಞಾನಯುಗದಲ್ಲಿ (ಇಪ್ಪತ್ತನೆಯ ಶತಮಾನದಲ್ಲಿ) ಪದಲಾಲಿತ್ಯಕ್ಕಿಂತ ವಿಷಯಸೌಷ್ಠವದ ಕಡೆಗೆ ಜನರ ಲಕ್ಷ್ಯವು ಅಧಿಕವಾಗಿ ವೇಧಿಸಲ್ಪಟ್ಟಿರುವುದರಿಂದ ಸಮಸ್ತ ಜನರೂ, ಪದ್ಯಕ್ಕಿಂತ ಗದ್ಯಗ್ರಂಥಗಳನ್ನೇ ವಿಶೇಷವಾಗಿ ಅಪೇಕ್ಷಿಸುತ್ತಾರೆ. ಅದೇ ಪ್ರಕಾರ

ಪ್ರಾಯಶಃ ಸರ್ವಗ್ರಂಥಗಳೂ ಗದ್ಯಭಾಷೆಯಲ್ಲಿಯೇ ಓದುತ್ತಿರುತ್ತದೆ. ಸಾರಾಂಶವೇನಂದರೆ, ಗದ್ಯವಾಙ್ಮಯವು ಎಲ್ಲ ತರದ ಸಮಾಜ ಸುಧಾರಣೆಯನ್ನೂ ಸದ್ಗುಣದ ಉತ್ಕರ್ಷವನ್ನೂ ಜ್ಞಾನದ ಅಭಿವೃದ್ಧಿಯನ್ನೂ ಮಾಡುವುದಕ್ಕೆ ಈಗಿನ ಕಾಲದಲ್ಲಿ ಬಲವತ್ತರವಾದ ಶಸ್ತ್ರವಾಗಿದೆ. ಆದುದರಿಂದ ಗದ್ಯಭಾಷೆಯ ಗ್ರಾಂಥಿಕರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳನ್ನು ಶೋಧಿಸುವುದೇ ಈ ಪ್ರಬಂಧದ ಮುಖ್ಯವಿಷಯವಾಯಿತು.

ಇನ್ನು ಗೌಣವಿಷಯವಾದ ಪದ್ಯಭಾಷೆಯ ಗ್ರಾಂಥಿಕರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳ ವಿಷಯವಾಗಿ ಕಿಂಚಿತ್ ವಿಚಾರಮಾಡಿ, ಮುಖ್ಯವಿಷಯದ ಕಡೆಗೆ ತಿರುಗುವ. "ಅರ್ವಾಚೀನ ಕವಿಗಳು ಪ್ರಾಚೀನ ಕವಿಗಳನ್ನು ಆದರ್ಶವಾಗಿಟ್ಟುಕೊಂಡು ತಮ್ಮ ಗ್ರಂಥಗಳನ್ನು ಬರೆದರೆ, ಸುಲಭವಾಗಿ ಪದ್ಯಭಾಷೆಯ ಗ್ರಾಂಥಿಕ ರೂಪಗಳು ಏಕರೂಪತೆಗೆ ಬರುವುವು" ಎಂಬುದೊಂದೇ ವಾಕ್ಯದಿಂದ ಈ ವಿಷಯದ ಇತ್ಯರ್ಥವನ್ನು ಮಾಡಬಹುದು. ಏಕೆಂದರೆ ಉತ್ತರ ಕರ್ನಾಟಕದ ಆದಿಪಂಪ, ಪೊನ್ನ, ರನ್ನ, ಕುಮಾರವ್ಯಾಸ, ಪುರಂದರದಾಸ, ಕನಕದಾಸ ಮುಂತಾದ ಕವಿಗಳು, ದಕ್ಷಿಣ ಕರ್ನಾಟಕದ ಆಧುನಿಕ ಪಂಡಿತರಿಗೂ (ಕವಿಗಳಿಗೂ) ಮಾನ್ಯವಾಗಿದ್ದಾರೆ. ದಕ್ಷಿಣ ಕರ್ನಾಟಕದ ಅಭಿನವಪಂಪ, ಜನ್ನ, ಲಕ್ಷ್ಮೀಶಕವಿ, ಹೊನ್ನಮ್ಮ ಮೊದಲಾದ ಕವಿಗಳು, ಉತ್ತರಕರ್ನಾಟಕದ ಅರ್ವಾಚೀನ ಕವಿಗಳಿಗೂ ಮಾನ್ಯವಾಗಿದ್ದಾರೆ. ಆದುದರಿಂದ ಪದ್ಯಭಾಷೆಯ ಗ್ರಾಂಥಿಕ ರೂಪಗಳ ವಿಷಯವಾಗಿ ಆಧುನಿಕ ಕವಿಗಳಲ್ಲಿ ಅರ್ವಾಚೀನ ಗದ್ಯಗ್ರಂಥಕಾರರಷ್ಟು ಮತಭೇದವಿಲ್ಲ.

ನೃಪತುಂಗನೂ ಕ್ರಿಸ್ತಶಕ (೮೧೪-೮೭೭) ತನ್ನ ಕವಿರಾಜಮಾರ್ಗ ಗ್ರಂಥದಲ್ಲಿ ತನಗೆ ಹಿಂದೆ ಇದ್ದ ಗದ್ಯಗ್ರಂಥಕಾರರ ಹೆಸರುಗಳನ್ನು

ವಿಮಳೋದಯ ನಾಗಾರ್ಜುನ |
ಸಮೇತಜಯಬಂಧು ದುರ್ವಿನೀತಾದಿಗಳೀ ||
ಕ್ರಮದೊಳ್ ನೆಗಳ್ಚಿ ಗದ್ಯಾ |
ಶ್ರಮಪದಗುರುತಾ ಪ್ರತೀತಿಯಂ ಕೈಕೊಂಡರ್ ||೨೯||

(ಪ್ರಥಮಪರಿಚ್ಛೇದ)

ಎಂಬ ಪದ್ಯದಲ್ಲಿ ಹೇಳಿದ್ದಾನೆ. ನೃಪತುಂಗನ ಕಾಲಕ್ಕೆ ಹಿಂದೆಯೇ ಎಂದರೆ ೯ನೆಯ ಶತಮಾನದ ಹಿಂದೆಯೇ ಕನ್ನಡದಲ್ಲಿ ಅನೇಕ ಗದ್ಯಗ್ರಂಥಗಳು ಹುಟ್ಟಿದ್ದವೆಂದ ಬಳಿಕ ಕನ್ನಡ ಗದ್ಯರಚನೆಯು ಪ್ರಾಯಃ ೩ನೆಯ ೪ನೆಯ ಶತಮಾನದಲ್ಲಿ ಸುಗಮವಾಗಿರಬಹುದು. ಆದರೆ ಆಗಿನ ಕಾಲದಲ್ಲಿ ಗದ್ಯರಚನೆಯು ಹೇಗೆ ಇತ್ತೆಂಬುದನ್ನು ನೋಡುವುದಕ್ಕೆ ಮಾತ್ರ ಮಾರ್ಗವಿಲ್ಲ. ಮುಂದೆ ೧೦ನೆಯ ಶತಮಾನದಲ್ಲಿ

ಒಂದು ಗದ್ಯಗ್ರಂಥವು ಹುಟ್ಟಿದೆ. ಅದರ ಹೆಸರು ಚಾವುಂಡರಾಯ ಪುರಾಣ. § ಇದು ಮಾತ್ರ ಸದ್ಯಕ್ಕೆ ಉಪಲಬ್ಧವಿದೆ. ಈ ಗ್ರಂಥದೊಳಗಿನ ಭಾಷಾಸರಣಿಯನ್ನು ನೋಡಿದರೆ ಹತ್ತನೆಯ ಶತಮಾನದಲ್ಲಿ ಗದ್ಯರಚನೆಯು ಎಷ್ಟು ಬಾಲ್ಯಾವಸ್ಥೆಯಲ್ಲಿ ಇತ್ತೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ. ಈಗಿನಂತೆ ಮುದ್ರಣ ಕಲೆಯೂ ಕಾಗದಗಳ ವಿಪುಲತೆಯೂ ಆ ಕಾಲದಲ್ಲಿ ಇದ್ದಿಲ್ಲವಾದುದರಿಂದ ಗದ್ಯರಚನಾಶಾಸ್ತ್ರವು ಉನ್ನತಸ್ಥಿತಿಯನ್ನು ಹೊಂದುವುದಕ್ಕೆ ಆಸ್ಪದವೇ ದೊರೆಯಲಿಲ್ಲ. ಕನ್ನಡ ಭಾಷೆಗೆ ಮುದ್ರಣ ಕಲೆಯ ಸಹಾಯವು ದೊರೆಯುವವರೆಗೆ ಅಂದರೆ ೧೯ನೆಯ ಶತಮಾನದವರೆಗೆ ಇದೇ ಸ್ಥಿತಿಯು ಸ್ಥಿರವಾಗಿ ಇದ್ದಿತು.

೧೯ನೆಯ ಶತಮಾನದಲ್ಲಿ ನಮ್ಮ ಕರ್ನಾಟಕವು ಆಂಗ್ಲ ಸಾರ್ವಭೌಮರ ಆಡಳಿತಕ್ಕೆ ಒಳಪಟ್ಟಿತು. ಆಗ ನಮ್ಮ ಜನರು ಇಂಗ್ಲಿಷ್ ಭಾಷೆಯನ್ನು ಅಧ್ಯಯನ ಮಾಡಲಾರಂಭಿಸಿದರು. ಇದರಿಂದ ಪ್ರಚಂಡವಾದ ಪಾಶ್ಚಾತ್ಯ ಜ್ಞಾನಸಂಪತ್ತಿಯು ನಮಗೆ ಪ್ರಾಪ್ತವಾಗಿ ಅನೇಕ ನೂತನ ವಿಷಯಗಳು ಗೊತ್ತಾದುವು. ಅವುಗಳಲ್ಲಿ ಪಾಶ್ಚಾತ್ಯರ ಗದ್ಯರಚನಾ ಶಾಸ್ತ್ರವೂ ಒಂದಾಗಿದೆ. ಅನೇಕ ತೆರದ ವಾಕ್ಯರಚನೆಗಳೂ ಅಲ್ಪವಿರಾಮ (,) ಅರ್ಧವಿರಾಮ (;) ಪೂರ್ಣವಿರಾಮ (.) ಆವರಣ ಚಿಹ್ನ ( ) ಉದ್ಧಾರವಾಚಕಚಿಹ್ನ ("") ಪ್ರಶ್ನಾರ್ಥಕ ಚಿಹ್ನ (?) ಮುಂತಾದ ವಿರಾಮ ಚಿಹ್ನಪದ್ಧತಿಯೂ ಬಳಕೆಯಲ್ಲಿರುವ ವಾಕ್ಪ್ರಚಾರ (Idiom) ನಾಣ್ಣುಡಿಗಳನ್ನು ಪ್ರಯೋಗಿಸಿ, ಗ್ರಂಥವನ್ನು ಶುದ್ಧವಾದ ವ್ಯಾವಹಾರಿಕ ಭಾಷೆಯಿಂದ ಬರೆದಿರುವ ಜಾಣತನವೂ ಆ ಪಾಶ್ಚಾತ್ಯ ಗ್ರಂಥಗಳಲ್ಲಿ ದೃಷ್ಟಿಗೋಚರವಾಗಿ ನಾವು ಬೆಂಗಾದೆವು. ನಮ್ಮ ಕರ್ನಾಟಕದೊಳಗಿನ ಆಂಗ್ಲವಿದ್ಯಾವಿಭೂಷಿತರಾದ ಪದವೀಧರರು (ಗ್ರ್ಯಾಜ್ಯುವೆಟುಗಳು) ಆ ಪಾಶ್ಚಾತ್ಯ ಜ್ಞಾನಾಮೃತವನ್ನು ಇಂಗ್ಲೀಷ ಭಾಷೆಯನ್ನರಿಯದ ಕೇವಲ ಕನ್ನಡಿಗರಿಗೆ ನಿವೇದಿಸಬೇಕೆಂಬ ಉತ್ಸಾಹದಿಂದ ಕನ್ನಡದಲ್ಲಿ ಗ್ರಂಥಗಳನ್ನು ಬರೆಯಲುಪಕ್ರಮಿಸಿದರು. ಆಗ ಅವರು ಪಾಶ್ಚಾತ್ಯಗದ್ಯರಚನಾ ಶಾಸ್ತ್ರವನ್ನೆ ಆದರ್ಶವಾಗಿಟ್ಟುಕೊಂಡು, ಕನ್ನಡದಲ್ಲಿ ಗದ್ಯಗ್ರಂಥಗಳನ್ನು ಬರೆಯಲಾರಂಭಿಸಿದರು. ಆದುದರಿಂದ, ಈ ಸ್ಥಳದಲ್ಲಿ ಪಾಶ್ಚಾತ್ಯ ಗದ್ಯರಚನಾ ಶಾಸ್ತ್ರದ ಇತಿಹಾಸವನ್ನು ಸ್ವಲ್ಪ ಹೇಳಿಬಿಟ್ಟರೆ, ಮುಂದಿನ ವಿವರಣೆಯೆಲ್ಲ ಸುಲಭವಾಗಿ ತಿಳಿಯುವುದು.

ಗದ್ಯರಚನಾ ಶಾಸ್ತ್ರದ ಅಧ್ಯಯನವು ಮೊದಲು ಪ್ರಾಚೀನ ಗ್ರೀಸದೇಶದಲ್ಲಿ ಪ್ರಾರಂಭವಾಯಿತು. ಗ್ರೀಸದೇಶದಲ್ಲ (ವಿಶೇಷವಾಗಿ ಅಥೆನ್ಸದಲ್ಲಿ) ಪ್ರಜಾಸತ್ತಾತ್ಮಕ ರಾಜ್ಯವಿದ್ದುದರಿಂದ ಸರ್ವಜನರ ಎದುರಿಗೆ ರಾಜ್ಯಕಾರಭಾರದ ಚರ್ಚೆಯು ನಡೆಯುತ್ತಿತ್ತು. ಇದಲ್ಲದೆ ಕೋರ್ಟಿನಲ್ಲಿ ನ್ಯಾಯಾಧೀಶರ ಎದುರಿಗೆ ವ್ಯಾಜ್ಯದ ವಿಷಯ

§ ಈ ಗ್ರಂಥವು, ಧಾರವಾಡದ "ಕರ್ನಾಟಕ- ಇತಿಹಾಸ- ಸಂಶೋಧಕಮಂಡಲ" ದವರ ಬಳಿಯಲ್ಲಿದೆ. ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಶುದ್ಧವಾದ ಒಂದು ಪ್ರತಿಯೂ ಇರುವುದು

ಗಳು ಬರುತ್ತಿದ್ದುದರಿಂದ ವಾದಿ ಪ್ರತಿವಾದಿಗಳ ಪಕ್ಷವನ್ನು ಸ್ವೀಕರಿಸಿ, ಭಾಷಣ ಮಾಡುವ ವಕೀಲರು ಬೇಕಾದರು ಅರ್ಥಾತ್ ರಾಜಸಭೆಯಲ್ಲಿ ಅಥವಾ ನ್ಯಾಯ ಸಭೆಯಲ್ಲಿ ಬಹುಜನರ ಮನಸ್ಸನ್ನು ತಮ್ಮ ಮತದ ಕಡೆಗೆ ಆಕರ್ಷಿಸಿಕೊಳ್ಳುವಂತಹ ವಕ್ತೃತ್ವ ಕಲೆಯ ಆವಶ್ಯಕತೆಯು ಸ್ವಾಭಾವಿಕವಾಗಿ ಉತ್ಪನ್ನವಾಯಿತು ಭಾಷಣ ಮಾಡುವವನು ಗದ್ಯದಲ್ಲಿಯೇ ಮಾತನಾಡಲಿಕ್ಕೆ ಬೇಕೆಂಬುದು ಸ್ಪಷ್ಟವೇ ಇದೆ. ಮೇಲಾಗಿ ಇಷ್ಟಕ್ಕೂ ಮುಂದೆ ಒದಗುತ್ತ ಆ ದೇಶದ ವಾದಿ ಪ್ರತಿವಾದಿಗಳು ತಮ್ಮ ಹಣವು ಹೆಚ್ಚು ಖರ್ಚು ಆಗಬಾರದೆಂದು, ವಕ್ತೃತ್ವ ಕಲೆಯಲ್ಲಿ ನಿಪುಣರಾದ ವಕೀಲರಿಂದ ಭಾಷಣಗಳನ್ನು ಬರೆಯಿಸಿಕೊಳ್ಳಲಾರಂಭಿಸಿದರು. ಇದೇ ಗದ್ಯರಚನೆಯ ಉಗಮಸ್ಥಾನವು. ಈ ಶಾಸ್ತ್ರವು ಮುಂದೆ ವೃದ್ಧಿಯನ್ನು ಹೊಂದುತ್ತ ಹೊಂದುತ್ತ ಕೊನೆಗೆ ಗ್ರೀಕ ತತ್ತ್ವಜ್ಞಾನಿಗಳೂ ಇತಿಹಾಸಕಾರರೂ ತಮ್ಮ ತತ್ತ್ವಜ್ಞಾನ, ಇತಿಹಾಸ ಗ್ರಂಥಗಳನ್ನು ಗದ್ಯದಲ್ಲಿಯೇ ಬರೆಯ ತೊಡಗಿದರು ಆದುದರಿಂದ ಗ್ರೀಕಜನರು ಗದ್ಯರಚನಾ ಶಾಸ್ತ್ರದ ಅಧ್ಯಯನವನ್ನು ಅತ್ಯಂತ ಪರಿಶ್ರಮ ಪೂರ್ವಕವಾಗಿ ಮಾಡಲಾರಂಭಿಸಿದರು

ಅರಿಸ್ಟಾಟಲನ ಪೂರ್ವದಲ್ಲಿ ಗ್ರೀಸದೇಶದಲ್ಲಿ ನಾಮಾಂಕಿತರಾದ ಗದ್ಯಶಾಸ್ತ್ರಕಾರರು ಕಲವರು ಇದ್ದರು ಅಂಟಿಫಾನನೆಂಬುವನು ಪ್ರಸಿದ್ಧನಿದ್ದಾನೆ ಇವನು ವಕ್ತೃತ್ವ ಶಾಸ್ತ್ರವನ್ನು ಕಲಿಸುತ್ತಿದ್ದನು ಇಷ್ಟೇ ಅಲ್ಲ,-ಆಗಿನ ಕಾಲದಲ್ಲಿ ಅಥೆನ್ಸದೊಳಗೆ ಉಪನ್ಯಾಸ ಮಾಡುವವರಲ್ಲಿ ಇವನೇ ಎಲ್ಲಕ್ಕೂ ಹೆಚ್ಚಿನವನಾಗಿದ್ದನು. ಕ್ರಿಸ್ತಶಕದ ಪೂರ್ವದಲ್ಲಿ ೪೨೧ ರಿಂದ ೪೧೧ ರ ವರೆಗೆ ಕೋರ್ಟಿನ ಮುಂದೆ ಓದುವದಕ್ಕೆ ಅನೇಕ ಭಾಷಣಗಳನ್ನು ಜನರಿಗೆ ಇವನು ಬರೆದು ಕೊಟ್ಟಿದ್ದಾನೆ. ಇವನ ತರುವಾಯ ಇಸಾಕ್ರೇಟಿಸನೆಂಬುವನು ಈ ಶಾಸ್ತ್ರದಲ್ಲಿ ಮುಂದೆ ಬಂದನು. ಇವನು ಕ್ರಿ ಶ ಪೂ ೩೯೦ ರಿಂದ ೩೪೦ ರ ವರೆಗೆ ಗದ್ಯಶಾಸ್ತ್ರವನ್ನು ಕಲಿಸುತ್ತಿದ್ದನು. ಇವನು ತನ್ನ ಪಾಠಶಾಲೆಯಲ್ಲಿ ಅನೇಕ ಮಂದಿ ಉಪನ್ಯಾಸಕರನ್ನೂ ಲೇಖಕರನ್ನೂ ತಯಾರುಮಾಡಿದನು ಪ್ರಖ್ಯಾತ ಗ್ರೀಕ ತತ್ತ್ವಜ್ಞಾನಿಯಾದ ಪ್ಲೇಟೋ ಎಂಬುವನು ಇದೇ ಪಾಠಶಾಲೆಯಲ್ಲಿ ಅಧ್ಯಯನ ಮಾಡಿದ್ದಾನೆ ಇವನ ತರುವಾಯ ಜಗದ್ವಿಖ್ಯಾತನಾದ ಅರಿಸ್ಟಾಟಲನು ಅವತರಿಸಿದನು ಇವನು ಈ ಗದ್ಯರಚನಾ ಶಾಸ್ತ್ರದ ವಿಷಯವಾಗಿ (Rhetoric) ಎಂಬುದೊಂದು ಗ್ರಂಥವನ್ನೇ ಬರೆದಿದ್ದಾನೆ. ಹೆಸರಾದ ಗ್ರೀಕ್ ಗ್ರಂಥಕಾರರ ಗದ್ಯಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು, ಗದ್ಯದ ಉದ್ದೇಶವೇನು ? ಗದ್ಯದ ಸ್ವರೂಪಗಳು ಎಷ್ಟು ? ಗದ್ಯಕ್ಕೆ ಸೌಂದರ್ಯವು ಬರಬೇಕಾದರೆ ಯಾವ ಉಪಾಯ-ಗಳನ್ನು ಯೋಜಿಸತಕ್ಕದ್ದು ಇವೇ ಮೊದಲಾದ ವಿಷಯಗಳನ್ನು ಕುರಿತು ತಾತ್ತ್ವಿಕ ರೀತಿಯಿಂದ ಈ ಗ್ರಂಥದಲ್ಲಿ ವಿವೇಚಿಸಿದ್ದಾನೆ. ಸಾರಾಂಶ, ಕ್ರಿ ಶ ಪೂ ೩೨೦ ರ ಕಾಲಕ್ಕೆ ಗದ್ಯರಚನಾ ಶಾಸ್ತ್ರವು ಗ್ರೀಸದೇಶದಲ್ಲಿ ಪೂರ್ಣತ್ವವನ್ನು ಹೊಂದಿತು

ತದನಂತರ ಈ ಶಾಸ್ತ್ರದ ವಿಶೇಷ ಅಭ್ಯಾಸವು ರೋಮನ್ನ ಜನರಲ್ಲಿ ಪ್ರಾರಂಭವಾಯಿತು. ರೋಮನ್ನ ಜನರಲ್ಲಿ ಅಥೆನ್ಸದಂತೆಯೇ ಪ್ರಜಾಸತ್ತಾತ್ಮಕ ರಾಜ್ಯವಿದ್ದುದರಿಂದ ವಕ್ತೃತ್ವ ಕಲೆಯು ಊರ್ಜಿತ ಸ್ಥಿತಿಯಲ್ಲಿ ಇದ್ದೇ ಇದ್ದಿತು ಅದರೊಳಗೂ ಇವರು ಗ್ರೀಸದೇಶವನ್ನು ಪಾದಾಕ್ರಾಂತವಮಾಡಿದ ಬಳಿಕ ಅಲ್ಲಿಯ ಉತ್ಕೃಷ್ಟವಾದ ಗ್ರಂಥಸಂಗ್ರಹವೂ ಗದ್ಯರಚನಾ ಶಾಸ್ತ್ರ ಮುಂತಾದ ಗ್ರೀಕ ವಿದ್ಯೆಗಳೂ ಇವರಿಗೆ ಪರಿಚಯವಾದುವು ಇದರಿಂದ ಈ ಮುಂದಿನ ಎರಡು ಶತಮಾನಗಳಲ್ಲಿ ಒಳ್ಳೆಯ ನಾಮಾಂಕಿತರಾದ ಎಷ್ಟೋ ಗದ್ಯಗ್ರಂಥಕಾರರು ರೋಮನ್ನ ಜನರಲ್ಲಿ ಉದಯರಾದರು ಇವರಲ್ಲಿ ಇತಿಹಾಸಕಾರನಾದ ಸಿಸರೋ ಎಂಬುವನು ಪ್ರಮುಖನಾಗಿದ್ದಾನೆ. ಇವನು ವಕ್ತೃತ್ವಶಾಸ್ತ್ರದ ವಿಷಯವಾಗಿ ಒಂದು ಗ್ರಂಥವನ್ನು ಬರೆದಿದ್ದಾನೆ, ಅಲ್ಲದೆ ಸ್ವತಃ ಇವನು ಪ್ರಸಿದ್ಧನಾದ ಉಪನ್ಯಾಸಕನಾಗಿದ್ದನು. ಹಾಗು ಇವನು ಬರೆದಿರುವ ಗದ್ಯಗ್ರಂಥಗಳು ಇಂದಿಗೂ ಸರ್ವಮಾನ್ಯವಾಗಿರುತ್ತವೆ ಇವನ ತರುವಾಯ ಕ್ವಿಂಟಿಲೀಯನ್ನನೆಂಬುವನು ಈ ಶಾಸ್ತ್ರದಲ್ಲಿ ಹೆಸರಾದನು.

ಗ್ರೀಸ, ರೋಮ ದೇಶಗಳೊಳಗಿನ ವಿದ್ಯೆಯ ಕಿರಣಗಳು ಯೂರೋಪಿಯ ಇತರ ರಾಷ್ಟ್ರಗಳಲ್ಲಿಯೂ ಪ್ರಕಾಶಿಸಹತ್ತಿದವು. ಇಷ್ಟಕ್ಕೂ ಹದಿನೆಂಟನೆಯ ಶತಮಾನದಲ್ಲಿ, ರಾಜಕೀಯ ಸಂಸ್ಥೆಯಲ್ಲಿ ಪ್ರಜಾಸತ್ತಾ ತತ್ವಕ್ಕೆ ಜಯವು ದೊರೆತದ್ದರಿಂದ ವಕ್ತೃತ್ವ ಕಲೆಗೂ ಗದ್ಯರಚನಾ ಶಾಸ್ತ್ರಕ್ಕೂ ಊರ್ಜಿತ ಸ್ಥಿತಿಯನ್ನು ಹೊಂದುವುದಕ್ಕೆ ಚನ್ನಾಗಿ ಆಸ್ಪದವು ದೊರೆಯಿತು. ಇಂಗ್ಲಂಡದ ಪಾರ್ಲಿಮೆಂಟದಲ್ಲಿ ಪಿಟ್, ಬರ್ಕ, ಶೆರಿಡನ್ ಮೊದಲಾದ ಹೆಸರಾದ ಉಪನ್ಯಾಸಕರು ಇದೇ ಕಾಲಕ್ಕೆ ಉದಯರಾದರು. ೧೮ನೆಯ ಹಾಗು ೧೯ನೆಯ ಶತಮಾನದಲ್ಲಿ ಇಂಗ್ಲಂಡದಲ್ಲಿ ಗದ್ಯಗ್ರಂಥಕಾರರು ಅನೇಕರು ಆಗಿಹೋದರು ಅವರಲ್ಲಿ ಬೇಕನ್, ಗೋಲ್ಡ್‌ಸ್ಮಿಥ, ಅಡಿಸನ್, ಜಾನ್‌ಸನ್ ಮುಂತಾದ ನಿಬಂಧಕಾರರು, ಡಿಕೆನ್ಸ ಸ್ಕಾಟ್, ಮೊದಲಾದ ಕಾದಂಬರಿ ಕಾರರು, ಹಾಗು ಮೆಕಾಲೆ, ಗಿಬನ್ ಪ್ರಭೃತಿ ಇತಿಹಾಸಕಾರರು ಈ ಮಹನೀಯರ ಹೆಸರುಗಳನ್ನು ಈ ಸ್ಥಳದಲ್ಲಿ ಅತ್ಯಂತ ಭಕ್ತಿಪುರಸ್ಸರವಾಗಿ ಹೇಳುತ್ತೇನೆ. ಯಾಕಂದರೆ, ಈ ಮಹಾಭಾಗರು ಗದ್ಯರಚನಾಶಾಸ್ತ್ರದಲ್ಲಿ ಮಾರ್ಗದರ್ಶಿಗಳಾಗಿದ್ದಾರೆ ! ಗುರುಗಳಾಗಿದ್ದಾರೆ !! ಆಚಾರ್ಯರಾಗಿದ್ದಾರೆ !!! ಇಂತಹ ಗದ್ಯರಚನಾಶಾಸ್ತ್ರವಿಶಾರದರು ನಮ್ಮ ಕರ್ಣಾಟಕ ಭೂಮಿಯಲ್ಲಿ ಶೀಘ್ರವಾಗಿ ಉದಯರಾಗಲೆಂದು ಜಗನ್ನಿಯಾಮಕನಾದ ಪರಮೇಶ್ವರನನ್ನು ಅನನ್ಯ ಭಾವದಿಂದ ಸ್ತುತಿಸಿ ಈ ಉಪೋದ್ಘಾತವನ್ನು ಮುಗಿಸುತ್ತೇನೆ

ಉಪೋದ್ಘಾತದಲ್ಲಿ (Introdu ction) ಸರ್ವದೃಷ್ಟಿಯಿಂದಲೂ ವಿಚಾರಮಾಡಿ, ಈ ಪ್ರಬಂಧದ ವಿಷಯದ ನಿಜಸ್ವರೂಪವನ್ನು ವ್ಯಕ್ತಪಡಿಸಿದ್ದೇನೆ. ಇನ್ನು ಗದ್ಯ ಭಾಷೆಯ ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡಬಹುದಾದ ಉತ್ಕೃಷ್ಟೋಪಾಯಗಳು ಯಾವುವೆಂಬುದನ್ನು ನಿರೀಕ್ಷಿಸುವಾ —

(ಗ) ಕನ್ನಡ ಪಾಠಶಾಲೆಗಳಲ್ಲಿ ಪಾಠದ ಪುಸ್ತಕಗಳು ಒಂದೇ ಆಗಿರುವಂತೆ ಮಾಡತಕ್ಕದ್ದು.

ರಾಜಮಂತ್ರ ಪ್ರವೀಣ ಶ್ರೀಮಾನ್ ಎಚ್. ವಿ ನಂಜುಂಡಯ್ಯನವರು ತಮ್ಮ ಉಪನ್ಯಾಸದಲ್ಲಿ, "ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರುವುದು ಬಹು ವಿಷಯಗಳಿಗೆ ಒಳ್ಳೆಯದು ಬಾಲಶಿಕ್ಷೆಯ ಪುಸ್ತಕಗಳಲ್ಲಿ ಈ ಏಕರೂಪತೆ ಇರಬೇಕೆಂಬುದಾಗಲಿ ಕನ್ನಡನಾಡುಗಳಲ್ಲಿರುವ ಎಲ್ಲಾ ಪಾಠಶಾಲೆಗಳಲ್ಲಿಯೂ ಒಂದೇ ವಿಧವಾದ ಪುಸ್ತಕಗಳನ್ನು ಉಪಯೋಗಿಸಬೇಕೆಂಬುದಾಗಲಿ ನನ್ನ ಮುಖ್ಯ ತಾತ್ಪರ್ಯವಲ್ಲ. ಅಲ್ಲದೆ ಈ ವಿಷಯವು ಅಷ್ಟು ಮುಖ್ಯವಾದುದೂ ಅಲ್ಲ. ಆದರೆ ಬಾಲಪಾಠದ ಪುಸ್ತಕಗಳಲ್ಲಿ ಭಾಷೆಯು ಈ ಏಕರೂಪತೆಯನ್ನು ಸಾಧಿಸದೆ ಬಿಟ್ಟರೆ, ಮೇಲೆ ಮೇಲೆ ಹೋಗುತ್ತಾ ಇದನ್ನು ಸಾಧಿಸುವುದು ಕಷ್ಟವಾಗುವುದೆಂಬ ಕಾರಣದಿಂದ ಈ ಭಾವನೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ ಮತ್ತೊಂದು ರೀತಿಯಲ್ಲಿ ನೋಡಿದರೆ, ಇಂತಹ ಪ್ರಯತ್ನದಿಂದ, ಚಿಕ್ಕಮಕ್ಕಳು ಓದುವ ಪಾಠಶಾಲೆಗಳಲ್ಲಿ ಮಾತೃಭಾಷೆಯು ಅನ್ಯಭಾಷೆಯಂತೆ ಕಷ್ಟವಾಗಬಹುದಾದುದರಿಂದ ಈ ಪ್ರಯತ್ನವು ಅಷ್ಟೇನೂ ಉತ್ತಮವಾದುದಲ್ಲನೆಂದು ಹೇಳಬಹುದು" ಎಂದು ಅನ್ನುತ್ತಾರೆ. ಆದರೆ ಈ ಅಭಿಪ್ರಾಯವು ಅನುಭವಸಿದ್ಧವಾದುದಲ್ಲ ಮುಂಬಯಿ ಅಧಿಪತ್ಯದಲ್ಲಿ ಧಾರವಾಡ, ವಿಜಾಪೂರ, ಬೆಳಗಾಂವ, ಕಾರವಾರ ಇವು ನಾಲ್ಕು ಕನ್ನಡ ಜಿಲ್ಲೆಗಳು ಇವೆ ಇವುಗಳಲ್ಲಿ ಜನರು ಮಾತನಾಡುವ ಭಾಷೆಯು, ಒಂದೊಂದರಲ್ಲಿ ಒಂದೊಂದು ವಿಧವಾಗಿದೆ. ಧಾರವಾಡ ಜಿಲ್ಲೆಯ ವ್ಯಾವಹಾರಿಕ ಭಾಷೆಯೇ ಬೇರೆ. ಕಾರವಾರದ ಜಿಲ್ಲೆಯ ವ್ಯಾವಹಾರಿಕ ಭಾಷೆಯೇ ಬೇರೆ ಇದೇ ಮೇರೆಗೆ ಬೆಳಗಾಂವ, ವಿಜಾಪೂರ ಜಿಲ್ಲೆಗಳಲ್ಲಿ ಒಂದೊಂದರಲ್ಲಿ ಒಂದೊಂದು ತರಹವಾಗಿದೆ ಆದರೆ ಪ್ರಾಥಮಿಕ ಶಿಕ್ಷಣದ ಅಧ್ಯಾಪಕರನ್ನು ತಯಾರಮಾಡುವ ಟ್ರೇನಿಂಗ ಕಾಲೇಜವು ಈ ನಾಲ್ಕೂ ಜಿಲ್ಲೆಗಳಿಗೆ ಒಂದೇ ಆಗಿದೆ ಈ ಕಾಲೇಜವು ಧಾರವಾಡದಲ್ಲಿದ್ದುದರಿಂದ ಧಾರವಾಡ ಜಿಲ್ಲೆಯ ಭಾಷಾಪ್ರಭೇದವೇ ಗ್ರಾಂಥಿಕ ಭಾಷೆಯಾಗಿ ವರ್ತಿಸುತ್ತಿರುವುದು ಈ ಗ್ರಾಂಥಿಕ ಪ್ರಭೇದವನ್ನೇ ಈ ನಾಲ್ಕೂ ಜಿಲ್ಲೆಗಳ ಎಲ್ಲಾ ಪಾಠಶಾಲೆಗಳಲ್ಲಿಯೂ ಕಲಿಸುತ್ತಿದ್ದಾರೆ. ಆದುದರಿಂದ ಈ ನಾಲ್ಕು ಜಿಲ್ಲೆಗಳಲ್ಲಿ ಮಾತನಾಡುವ ಭಾಷೆಯು, ಒಂದೊಂದರಲ್ಲಿ ಒಂದೊಂದು ತರಹವಾಗಿದ್ದರೂ ಗ್ರಾಂಥಿಕ ಭಾಷೆಯು ಮಾತ್ರ ಎಲ್ಲ ಕಡೆಗೂ ಒಂದೇ ವಿಧವಾಗಿದೆ. ಇದು ಪ್ರತ್ಯಕ್ಷ ಅನುಭವಸಿದ್ಧವಾದ ಸಂಗತಿಯಾಗಿರುತ್ತದೆ. ಶ್ರೀಮಾನ್ ಎಚ್. ವ್ಹಿ. ನಂಜುಂಡಯ್ಯನವರು— "ಎಲ್ಲಾ ಪಾಠಶಾಲೆಗಳಲ್ಲಿಯೂ ಪಾಠದ ಪುಸ್ತಕಗಳು ಒಂದೇ ಆಗಿರುವಂತೆ ಮಾಡಿದರೆ, ಚಿಕ್ಕಮಕ್ಕಳು ಓದುವ ಪಾಠಶಾಲೆಗಳಲ್ಲಿ ಮಾತೃಭಾಷೆಯು ಅನ್ಯಭಾಷೆಯಂತೆ ಕಷ್ಟವಾಗಬಹುದು". ಎಂದು ಊಹಿಸಿದ್ದಾರೆ ಆದರೆ ಮುಂಬಯಿ ಕರ್ನಾಟಕದವರಿಗೆ ಪ್ರತ್ಯಕ್ಷ ಅನುಭವವು ಹೀಗೆ ಇರು

ವುದಿಲ್ಲ. ಆದುದರಿಂದ ಈ ಭೀತಿಯು ವ್ಯರ್ಥವಾಗಿದೆ. ನಿಜವಾಗಿ ವಿಚಾರ ಮಾಡಿದಲ್ಲಿ ಕನ್ನಡ ನಾಡುಗಳಲ್ಲಿರುವ ಎಲ್ಲಾ ಪಾಠಶಾಲೆಗಳಲ್ಲಿಯೂ ಪಾಠದ ಪುಸ್ತಕಗಳು ಒಂದೇ ಆಗಿರುವಂತೆ ಮಾಡಿದರೆ ಗ್ರಾಂಥಿಕ ಭಾಷೆಯು ಸುಲಭವಾಗಿ ಏಕರೂಪತೆಗೆ ಬರುವುದು ಯಾಕಂದರೆ, ಬಾಲಕರ ಕೋಮಲವಾದ ಹಾಗು ನಿರ್ಮಲವಾದ ಹೃದಯದಲ್ಲಿ ಒಮ್ಮೆ ನಾವು ಯಾವ ತರಹದ ಶಿಕ್ಷಣವನ್ನೂ ಭಾಷೆಯನ್ನೂ ಬೀಜಾರೋಪಣ ಮಾಡುತ್ತೇವೆಯೋ ಅದೇ ಸ್ಥಿರವಾಗಿ ನಿಲ್ಲುವುದು. "ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ" ಎಂಬ ನಾಣ್ಣುಡಿಯಾದರೂ ಇದೇ ಮಾತನ್ನೇ ಹೇಳುತ್ತದೆ. * ಆದುದರಿಂದ ಬಾಲಕರ ಪಾಠಶಾಲೆಗಳಲ್ಲಿ ಪಾಠದ ಪುಸ್ತಕಗಳು ಒಂದೇ ಆಗಿರುವಂತೆ ಮಾಡುವುದು, ಗ್ರಾಂಥಿಕ ರೂಪಗಳನ್ನು ಏಕರೂಪತೆಗೆ ತರುವುದಕ್ಕಾಗಿ ಮಾಡುವ ಉಪಾಯಗಳಲ್ಲಿ ಅತ್ಯಂತ ಶ್ರೇಷ್ಠವಾದ ಉಪಾಯವಾಗಿದೆ. ಅತಏವ ಈ ಉಪಾಯವನ್ನು ಮೊದಲನೆಯದಾಗಿ ಹೇಳಿದ್ದೇವೆ

ಈಗ ಸದ್ಯಕ್ಕೆ ಮೈಸೂರು, ಮುಂಬಯಿ, ಮದ್ರಾಸ ಸರಕಾರದವರು, ತಮ್ಮ ತಮ್ಮ ಕನ್ನಡನಾಡುಗಳಲ್ಲಿ ಪ್ರಾಥಮಿಕ ಶಿಕ್ಷಣದ ಪುಸ್ತಕಗಳನ್ನು ಬೇರೆ ಬೇರೆಯಾಗಿ ರಚಿಸಿಕೊಂಡಿದ್ದಾರೆ. ಈ ಪದ್ಧತಿಯು ಕನ್ನಡ ಭಾಷೆಯ ಏಕೀಕರಣಕ್ಕೆ ಶತ್ರುವಾಗಿದೆ. ಇದನ್ನು ಸಮೂಲವಾಗಿ ನಾಶಮಾಡಿದ ಹೊರತು ನಮ್ಮ ಈ ಉದ್ದೇಶವು ಸಫಲವಾಗುವುದಿಲ್ಲ ಆದುದರಿಂದ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಈ ವಿಷಯವಾಗಿ ಪ್ರಯತ್ನ ಮಾಡುವುದು ಅವರ ಆದ್ಯಕರ್ತವ್ಯವಾಗಿದೆ ಇಷ್ಟಕ್ಕೂ ಪರಿಷತ್ತಿನವರು ನಮ್ಮ ಉದ್ದೇಶಸಾಧನ ಕ್ರಮಗಳಲ್ಲಿ "ಕರ್ನಾಟಕ ಭಾಷೋನ್ನತಿಗೂ ಗ್ರಂಥಾಭಿವೃದ್ಧಿಗೂ ಸಂಬಂಧ ಪಡುವ ಸಮಸ್ತ ವಿಷಯಗಳನ್ನೂ ಆಯಾ ಸರ್ಕಾರದವರ ಪರಾಮರ್ಶಕ್ಕೆ ತಂದು ಅವನ್ನು ತೃಪ್ತಿಕರವಾಗಿ ವ್ಯವಸ್ಥೆ ಮಾಡಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡುವುದು," ಎಂಬುದೊಂದು ನಿಯಮವನ್ನು ಇಟ್ಟುಕೊಂಡೇ ಇದ್ದಾರೆ.

ಇದಕ್ಕೆ ಬಲವಾದ ಇನ್ನೊಂದು ಪ್ರತ್ಯಕ್ಷ ಪ್ರಮಾಣವನ್ನು ಹೇಳಿ ಈ ಉಪಾಯದ ವಿಚಾರವನ್ನು ಮುಗಿಸುತ್ತೇನೆ ಮಹಾರಾಷ್ಟ್ರ ದೇಶದಲ್ಲಿ ನಮ್ಮಂತೆಯೇ ಪ್ರಾಂತಭೇದದಿಂದ ಮಾತನಾಡುವ ಭಾಷೆಯು ಒಂದೊಂದು ತರಹವಾಗಿದೆ ಕೊಂಕಣಪ್ರಾಂತದ ಮರಾಠಿ ಭಾಷೆಯೇ ಒಂದು ತರಹ ವರ್‍ಹಾಡ ಪ್ರಾಂತದ ಭಾಷೆಯೇ ಒಂದು ವಿಧ ನಾಗಪೂರ ಪ್ರಾಂತದ ಮಾತೇ ಒಂದು ರೀತಿ, ಪುಣೇ ಪ್ರಾಂತದ ಭಾಷೆಯೇ ಬೇರೆ ಹೀಗಿದ್ದರೂ ಆ ದೇಶದಲ್ಲಿ ಗ್ರಾಂಥಿಕ ಭಾಷೆಯು ಒಂದೇ ವಿಧವಾಗಿದೆ ಯಾಕಂದರೆ, ಮರಾಠಿ ಪ್ರಾಥಮಿಕ ಶಾಲೆಗಳಲ್ಲಿ ಪಾಠದ ಪುಸ್ತಕಗಳು ಒಂದೇ ಆಗಿರುವಂತೆ ಏರ್ಪಾಡು ಮಾಡಿದ್ದಾರೆ ಈ ದೇಶವಾದರೂ ಒಂದೇ ಸರಕಾ

---

* ಯನ್ನವಭಾಜನೇ ಲಗ್ನಃ ಸಂಸ್ಕಾರೋ ನಾನ್ಯಥಾ ಭವೇತ್ |
ಕಥಾಚ್ಛಲೇನ ಬಾಲಾನಾಂ ನೀತಿಸ್ತದಿಹ ಕಥ್ಯತೇ || ಹಿತೋಪದೇಶ

ರಕ್ಕೆ ಒಳಪಟ್ಟಿರದೆ, ಮುಂಬಯಿ ಇಲಾಖೆ, ಮಧ್ಯಪ್ರಾಂತ ಈ ಎರಡು ಆಧಿಪತ್ಯಗಳಲ್ಲಿ ಸಮಾವೇಶವಾಗಿದೆ ಎಂಬುದು ಕನ್ನಡಿಗರು ಜ್ಞಾಪಕದಲ್ಲಿಡತಕ್ಕ ವಿಷಯವಾಗಿದೆ. ಇದೂ ಅಲ್ಲದೆ ಮಹಾರಾಷ್ಟ್ರದಲ್ಲಿ ಕೊಲ್ಹಾಪುರ, ಪುರಂದವಾಡ, ಮಿರಜೆ, ಜಮುಖಂಡಿ, ದೇವಾಸ ಮೊದಲಾದ ದೇಶೀಯ ಸಂಸ್ಥಾನಗಳೂ ಇದ್ದು ಬ್ರಿಟಿಶ ಇಂಡಿಯದ ಪಾಠದ ಪುಸ್ತಕಗಳನ್ನೇ ಉಪಯೋಗಿಸುತ್ತಲಿವೆ.

(೨) ಪ್ರಚುರವಾಗಿರುವ ಕನ್ನಡ ಭಾಷೆಗೆ ಉದಾರ ದೃಷ್ಟಿಯಿಂದ ವ್ಯಾಕರಣವನ್ನು ರಚಿಸುವುದು

ಯಾವದೊಂದು ನಡವಳಿಕೆಯು ಶುದ್ಧವೋ ಅಶುದ್ಧವೋ ಎಂಬುದನ್ನು ನಿರ್ಣಯಿಸಬೇಕಾದರೆ ಎರಡು ಸಂಗತಿಗಳು ಅವಶ್ಯವಾಗಿವೆ, ಒಂದು ಶಾಸ್ತ್ರವು, ಮತ್ತೊಂದು ರೂಢಿಯು ಶಾಸ್ತ್ರವೆಂದರೆ ತತ್ವಜ್ಞಾನಿಗಳು (ಪಂಡಿತರು) ಪೂರ್ಣವಿಚಾರ ಮಾಡಿ, ನಿರ್ಣಯಿಸಿದಂತ ನಿಯಮವಾಗಿದೆ ರೂಢಿಯೆಂದರೆ ಕಾಲಗತಿಯಿಂದ ಉಂಟಾಗಿರುವ ಪ್ರಚಾರವಾಗಿದೆ ಮೊಟ್ಟ ಮೊದಲು ಇವೆರಡರಲ್ಲಿ ಪೂರ್ಣವಾದ ಐಕ್ಯವಿರುತ್ತದೆ. ಅಥವಾ ಬಹು ಮಟ್ಟಿಗಾದರೂ ಇದ್ದೇ ಇರುತ್ತದೆ. ಮುಂದೆ ಬರಬರುತ್ತಾ ರೂಢಿಯು ಶಿಥಿಲವಾಗುತ್ತ ನಡೆದು, ಕಟ್ಟಕಡೆಗೆ ಅದು ಒಮ್ಮೊಮ್ಮೆ ಈ ಶಾಸ್ತ್ರದ ವಿರುದ್ಧವಾದರೂ ಹೋಗುತ್ತದೆ ಈ ರೀತಿಯು ಲೋಕ ವ್ಯವಹಾರಗಳಲ್ಲಿಯೂ ಧರ್ಮದಲ್ಲಿಯೂ ಚೆನ್ನಾಗಿ ದೃಷ್ಟಿಗೋಚರವಾಗುತ್ತದೆ ಇದೇ ನಿಯಮವು ಪ್ರಸಕ್ತ ವಿಷಯಕ್ಕೂ ಅನ್ವಯಿಸುತ್ತದೆ. ಹೀಗೆ ಒರೆಯುವುದು ಶುದ್ಧ, ಹೀಗೆ ಬರೆಯುವುದು ಅಶುದ್ಧ, ವೆಂಬುದನ್ನು ನಿಶ್ಚಯಿಸಬೇಕಾದರೆ ಒಂದು, ಶಾಸ್ತ್ರದಿಂದ, ಎಂದರೆ ವ್ಯಾಕರಣದಿಂದ , ಮತ್ತೊಂದು, ರೂಢಿಯಿಂದ ಅಂದರೆ, ಮಾತಾಡುವುದರಲ್ಲಿ ಅಥವಾ ಬರೆಯುವುದರಲ್ಲಿ ಹೀಗೆ ಪ್ರಯೋಗವಾಗುತ್ತದೆ

(೩) ಕಾರಣದಿಂದ ಯಾವ ಸ್ಥಳದಲ್ಲಿ ಶಾಸ್ತ್ರವೂ ರೂಢಿಯೂ ಒಂದೇ ಆಗಿರುತ್ತವೆಯೋ, ಆ ಸ್ಥಳದಲ್ಲಿ ಸರ್ವೋತ್ತಮವಾಗಿರುವುದು ಆದರೆ ಎಲ್ಲಿ ಇವೆರಡರಲ್ಲಿ ವಿರೋಧವು ಒರುತ್ತದೋ, ಅಲ್ಲಿ ಯಾವ ಮಾರ್ಗವನ್ನು ಸ್ವೀಕರಿಸಬೇಕೋ ತಿಳಿಯದಂತೆ ಆಗುತ್ತದೆ

ಇನ್ನು ನಿಜವಾಗಿ ವಿಚಾರಮಾಡಿ ನೋಡಿದರೆ, ಇಂತಹ ವಾದವು ಎಲ್ಲಿ ಉಂಟಾಗುತ್ತದೋ ಅಲ್ಲಿ ವ್ಯಾಕರಣದಂತೆಯೇ ನಿರ್ಣಯ ಮಾಡುವುದು ಯಥಾನ್ಯಾಯವಾಗಿದೆ ವ್ಯಾಕರಣದ ನಿಯಮಕ್ಕನುಸರಿಸಿ ಇದ್ದಂಥ ಶಬ್ದ ಪ್ರಯೋಗವು ಅಥವಾ ವಾಕ್ಯಪ್ರಯೋಗವು ಶುದ್ಧವೆಂದು ತಿಳಿಯುತ್ತ ಹೋದರೆ, ಗ್ರಾಂಥಿಕ ಭಾಷೆಯು ನಿರ್ದೋಷವಾಗುವುದಲ್ಲದೆ ಎಲ್ಲ ಕಡೆಗೂ ಒಂದೇ ವಿಧವಾದ ರೂಪವನ್ನು ಧರಿಸುವುದು ಹಾಗು ಕನ್ನಡದ ಬರವಣಿಗೆಯನ್ನು ಕಲಿಯಲಿಕ್ಕೂ ಕಲಿಸಲಿಕ್ಕೂ ಸುಲಭವಾಗುವುದು ಆದರೆ ಭಾಷೆಯನ್ನು ಕೇವಲ ವ್ಯಾಕರಣದ ಸೂತ್ರಗಳಿಂದ ಬಂಧಿಸಿದರೆ ಮಾತ್ರ ಅದರ ಸ್ವೇಚ್ಛಾಪ್ರಚಾರವು ನಿಂತುಹೋಗಿ, ಕೃತ್ರಿಮ ತನದ

ದೊಡ್ಡ ದೋಷಕ್ಕೆ ಅದು ಗುರಿಯಾಗುವದು. ಕೆಲಸ ಮಾಡುತ್ತಿರುವ ಜೀವವಂತ ಮನುಷ್ಯನಲ್ಲಿಯೂ ಯಾಂತ್ರಿಕ ಶಕ್ತಿಯಿಂದ ದುಡಿಯುತ್ತಿರುವ ಮನುಷ್ಯನ ಗೊಂಬೆಯಲ್ಲಿಯೂ ಎಷ್ಟು ಭೇದವು ತೋರುತ್ತದೆಯೋ, ಅಷ್ಟೇ ಸ್ವೇಚ್ಛಾಪ್ರಚಾರವುಳ್ಳಂಥ ಭಾಷೆಯಲ್ಲಿಯೂ ವ್ಯಾಕರಣದ ಸೂತ್ರಗಳಿಂದ ಎಲ್ಲಾ ಕಡೆಗೂ ಬಂಧಿಸಲ್ಪಟ್ಟಿರುವಂಥ ಭಾಷೆಯಲ್ಲಿಯೂ ದೃಷ್ಟಿಗೋಚರವಾಗುತ್ತದೆ ಇತ್ಯರ್ಥವೇನಂದರೆ — ಆಕಾಶದಿಂದ ಬೀಳುವ ಮಳೆಯು ನೀರು ಶುದ್ಧವಾಗಿದ್ದರೂ ಸೇವಿಸಲಿಕ್ಕೆ ರುಚಿಕರವಾಗಿರುವುದಿಲ್ಲ ಅತಏವ ಅದು ನಮ್ಮ ನಿರ್ವಾಹಕ್ಕೆ ಎಳ್ಳಷ್ಟೂ ಉಪಯೋಗವಿಲ್ಲ. ಇದೇ ಪ್ರಕಾರ ವೈಯಾಕರಣರ ಶುದ್ಧ ಭಾಷೆಯ ಹಣೆಯ ಬರಹವು. ಆದರೆ ಅದೇ ಮಳೆಯ ನೀರು ಭೂಮಿಯ ಮೇಲೆ ಬಿದ್ದು ಹರಿದು, ಅದರಲ್ಲಿ ಭೂಮಿಯೊಳಗಿನ ಅನೇಕ ದ್ರವ್ಯಗಳು ಮಿಶ್ರವಾಗುವುದರಿಂದ ಅದು ದೂಷಿತವಾಗುವುದೇನೋ ನಿಜ. ಪರಂತು ಆ ಕಾರಣದಿಂದ ಅದು ಮಧುರವಾಗಿ ಸೇವಿಸಲಿಕ್ಕೆ ಯೋಗ್ಯವಾಗುತ್ತದೆ ಇದೇ ಮೇರೆಗೆ ಸ್ವೇಚ್ಛಾಪ್ರಚಾರವುಳ್ಳ ಭಾಷಾ ಸ್ಥಿತಿಯಾಗಿದೆ. ಇಂತಹ ಭಾಷೆಯಲ್ಲಿ ವೈಯಾಕರಣರಿಗೆ ಕಾಣಬರುವ ದೋಷವೇ, ಅದರಲ್ಲಿ ಅರ್ಥ ವ್ಯಂಜಕತೆ, ಮಾಧುರ್ಯ ಮೊದಲಾದ ಗುಣಗಳನ್ನು ಹುಟ್ಟಿಸತಕ್ಕವಾಗಿದೆ ತಸ್ಮಾತ್ ವ್ಯಾಕರಣವು ಮುಖ್ಯವೋ ಪ್ರಚಾರವು ಮುಖ್ಯವೋ ? ಎಂಬುದು ಈ ಸ್ಥಳದಲ್ಲಿ ಒಂದು ಮಹತ್ವದ ಪ್ರಶ್ನೆಯಾಗಿದೆ ನ್ಯಾಯದ ದೃಷ್ಟಿಯಿಂದ ನೋಡಿದರೆ, ವ್ಯಾಕರಣದಿಂದ ಪ್ರಯೋಗದ ಶುದ್ಧತೆಯನ್ನು ನಿರ್ಣಯಿಸುವುದು ಯೋಗ್ಯವಾಗಿದೆ. ಆದರೆ ಕಾಲದೃಷ್ಟಿಯಿಂದ ನೋಡಿದರೆ, ಪ್ರಚಾರಕ್ಕೆ ಅಧಿಕ ಮಹತ್ವವು ಬರುತ್ತದೆ ಭಾಷೆಯು ಹುಟ್ಟಿ ಬಹುಕಾಲವಾದ ನಂತರ ವ್ಯಾಕರಣವು ನಿರ್ಮಿತವಾಗುತ್ತದೆ ವ್ಯಾಕರಣಶಾಸ್ತ್ರವೊಂದೇ ಏಕೆ ? ಎಲ್ಲ ಶಾಸ್ತ್ರಗಳ ಸ್ಥಿತಿಯಾದರೂ ಹೀಗೆಯೇ ಸರಿ. ಮೊದಲು ಪ್ರಚಾರ, ತದನಂತರ ಆ ಪ್ರಚಾರದ ವಿಷಯವಾಗಿ ವಿಚಾರಮಾಡಿ ಕೆಲವು ನಿಯಮಗಳನ್ನು ನಿರ್ಣಯಿಸಿ, ಆ ನಿಯಮಗಳು ಪೂರ್ಣತ್ವವನ್ನು ಹೊಂದಿದ ಕೂಡಲೆ ಅದೇ ಒಂದು ಶಾಸ್ತ್ರವಾಗುತ್ತದೆ ಭಾಷೆಯು ಎಂದು ಹುಟ್ಟಿತೆಂಬುದನ್ನು ಹೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ ಅದು ಅನಾದಿಯಾಗಿದೆ. ಆದರೆ ವ್ಯಾಕರಣದ ಮಾತು ಹಾಗಲ್ಲ ಅದು ಇಂಥಾ ಶತಮಾನದಲ್ಲಿಯೇ ಹುಟ್ಟಿತೆಂದು ಹೇಳಬಹುದು ಆದುದರಿಂದ ಕಾನೂನ ಪ್ರಕಾರ ವಹಿವಾಟು ನೋಡಿದರೆ, ವ್ಯಾಕರಣದ ತರ್ಫೆಯಿಂದ ಫೈಸಲ್ಲಾಗದೆ, ಪ್ರಚಾರದ ಪಕ್ಷಕ್ಕೆ ಜಯವು ದೊರೆಯುವುದು ಕೆಲವು ಪ್ರಯೋಗಗಳು ನೂರಾರು ವರ್ಷಗಳಿಂದ ಭಾಷೆಯಲ್ಲಿ ಸ್ಥಿರವಾಗಿ ಉಳಿತಿರುತ್ತಿವೆ ಅಂತಹ ಪ್ರಯೋಗಗಳನ್ನು ವೈಯಾಕರಣರು ಕಿತ್ತು ಹಾಕುವುದಕ್ಕೆ ಪ್ರಯತ್ನಮಾಡುವುದು ಅಸಮಂಜಸತನವೇ ಸರಿ. ಒಂದು ವೇಳೆ ಯಾವನೊಬ್ಬ ವಿಕ್ಷಿಪ್ತ ವೈಯಾಕರಣನು ಅಂತಹ ಪ್ರಯೋಗಗಳು, ನಿಷಿದ್ಧವೆಂದು ಅವುಗಳಿಗೆ ಬಹಿಷ್ಕಾರವನ್ನು ಹಾಕಿದರೂ, ರೂಢಪಟ್ಟಣದ ಪೋಪ ಮಹಾರಾ

ಜನ ಬಹಿಷ್ಕಾರಕ್ಕೆ ಯತ್ಕಿಂಚಿತ್ತಾದರೂ ಬೆದರದೆ, ಅವನ ಅಪ್ಪಣೆಯನ್ನು ಕಣ್ಣೆತ್ತಿ ನೋಡದೆ, ಪೃಥ್ವಿಯು (ಆ ಜಗದ್ಗುರುವಿನ ವ್ಹ್ಯಾಟಿಕನ್ವೆಂಬ ಸುಂದರವಾದ ಮರವನ್ನು ಪ್ರತ್ಯಕ್ಷ ಆ ಧರ್ಮಮೂರ್ತಿಯನ್ನೂ (ಎಂದರೆ ಪೋಪನ್ನು) ಸಂಗಡ ತೆಗೆದುಕೊಂಡು) ಹೇಗೆ ತಿರುಗತ್ತಲಿ †ಇದೆಯೋ, ಅದೇ ಪ್ರಕಾರ ಆ ಅರಣ್ಯ ಪಂಡಿತ ವೈಯ್ಯಾಕರಣನ ಗತಿಯಾಗುತ್ತದೆ. ಆದುದರಿಂದಲೇ ಸಂಸ್ಕೃತ ವೈಯ್ಯಾಕರಣರು ಈ ವಿಷಯವಾಗಿ ಒಂದು ಗುರುಮಂತ್ರವನ್ನು ಮಾಡಿಕೊಂಡಿದ್ದಾರೆ. "ಪ್ರಯೋಗಶರಣಾಃ ವೈಯಾಕರಣಾಃ", ಇದೇ ಅವರ ಗುರುಮಂತ್ರ, ಇದೇ ಅವರ ಸಿದ್ಧಾಂತ ವೈಯ್ಯಾಕರಣರು ಪ್ರಯೋಗಗಳ ಮುಂದೆ ಸಾಷ್ಟಾಂಗ ನಮಸ್ಕಾರಗಳನ್ನು ಹಾಕಲಿಕ್ಕೆ ಬೇಕು ಅವುಗಳ ಎದುರಿಗೆ ಇವರ ಪಾಂಡಿತ್ಯವು ನಡೆಯಲಾರದು. ಅವುಗಳನ್ನು ಇದ್ದಂತೆಯೇ ಸ್ವೀಕರಿಸಲಿಕ್ಕೆ ಬೇಕು ಭಾಷೆಯೊಂದು ಮಹಾ ನದಿಯಾಗಿದೆ ಇದರ ಪ್ರವಾಹವು ವೇಗದಿಂದಲೂ ಅತ್ಯಂತ ಉಚ್ಛೃಂಖಲ ವೃತ್ತಿಯಿಂದಲೂ ಹರಿಯುತ್ತಿರುತ್ತದೆ ಆದುದರಿಂದ ಅದಕ್ಕೆ ಸೇತುವೆಯನ್ನು ಕಟ್ಟಬೇಕಾದರೆ, ಅದರ ಸ್ವೇಚ್ಛಾವೃತ್ತಿಗೆ ಪ್ರತಿಬಂಧಕವಾಗದಂತೆ ಒಳ್ಳೇ ಜಾಣತನದಿಂದ ತಯಾರಮಾಡತಕ್ಕದು ಇಲ್ಲದಿದ್ದರೆ ಆ ಸೇತುವೆಯು ಎಂದಾದರೂ ಒಂದುದಿನ ಕೊಚ್ಚಿಕೊಂಡು ಹೋಗುವುದೇ ಸರಿ

ನದಿಯ ಅನುರೋಧದಿಂದ ಪಟ್ಟಣವು ಕಟ್ಟಲ್ಪಡುತ್ತದೆಯೇ ಹೊರತು ಪಟ್ಟಣದ ಅನುರೋಧದಿಂದ ನದಿಯು ಹರಿಯುವುದಿಲ್ಲ. ಅದೇ ಪ್ರಕಾರ ಭಾಷೆಯ ಅನುರೋಧದಿಂದ ವ್ಯಾಕರಣವು ಇರತಕ್ಕದೆ ಹೊರತು ವ್ಯಾಕರಣದ ಅನುರೋಧದಿಂದ ಭಾಷೆಯು ಇರತಕ್ಕದಿಲ್ಲ

ಇಷ್ಟೆಲ್ಲ ವಿವರಣೆಯ ಮಥಿತಾರ್ಥವೇನೆಂದರೆ, "ಶಾಸ್ತ್ರಾದ್ರೂಢಿರ್ಬಲೀಯಸೀ|| ಎಂಬ ತತ್ವವನ್ನು ಹೃದಯದಲ್ಲಿ ಜಾಗೃತವಾಗಿಟ್ಟುಕೊಂಡು, ವ್ಯಾಕರಣವನ್ನು ರಚಿಸಿದರೆ, ಅದು ಸರ್ವಮಾನ್ಯವಾಗುವುದು ಈಗ ಪದ್ಯಕ್ಕೆ ಇಂತಹ ಉದಾರದೃಷ್ಟಿಯಿಂದ ನಮ್ಮ ಪ್ರಚಲಿತ ಕನ್ನಡಭಾಷೆಗೆ ವ್ಯಾಕರಣವು ರಚಿಸಲ್ಪಟ್ಟರೆ, ಈ ವ್ಯಾಕರಣವು ಧಾರವಾಡ ಕನ್ನಡಕ್ಕೂ ಮಂಗಳೂರ ಕನ್ನಡಕ್ಕೂ ಮೈಸೂರ ಕನ್ನಡಕ್ಕೂ ಸರಿಯಾಗಿ ಮಾರ್ಗದರ್ಶಿಯಾಗುವುದರಲ್ಲಿ ಸಂದೇಹವಿಲ್ಲ ಸಾಂಪ್ರತಕ್ಕೆ ಉದಾರಚರಿತವಾದ ವೈಯಾಕರಣನು ಅವತರಿಸಿ, ಅವನು ಧಾರವಾಡ, ಮಂಗಳೂರ, ಮೈಸೂರ, ಹೈದರಾಬಾದ, ಬಳ್ಳಾರಿ ಮುಂತಾದ ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ರೂಢವಾಗಿರುವ ಕನ್ನಡ ಬಾಷೆಯನ್ನು ಪರಿಶೀಲಿಸಿ, ಒಳ್ಳೇ ವ್ಯಾಪಕವಾದ ದೃಷ್ಟಿಯಿಂದ

---

† ಸುಪ್ರಸಿದ್ಧ ಗ್ಯಾಲಿಲಿಯೋ ಎಂಬ ಜ್ಯೋತಿಷಶಾಸ್ತ್ರಜ್ಞನು ಪೃಥ್ವಿಯು ಸೂರ್ಯನ ಸುತ್ತುಮುತ್ತು ತಿರುಗುತ್ತದೆಂದು ಹೇಳಿದಾಗ ಬೋಧಮಾಡಿದನು ಈ ಬೋಧದಿಂದ ತಮ್ಮ ಧರ್ಮಕಲ್ಪನೆಗೆ ಏನು ಬಾಧೆಯುಂಟಾದೀತೋ ಎಂಬ ಭೀತಿಯಿಂದ ರೋಮದ ಪೋಪ ಜಗದ್ಗುರುವು ಆ ಗ್ಯಾಲಿಲಿಯೋ ನನ್ನು ಹಿಡಿಸಿದ್ದಲ್ಲದೆ ಪೃಥ್ವಿಯು ತಿರುಗಕೂಡದು"!! ಎಂಬುದಾಗಿ ಒಂದು ಆಜ್ಞಾಪತ್ರವನ್ನೂ ತೆಗೆದಿದ್ದನು.

ವ್ಯಾಕರಣವನ್ನು ರಚಿಸಿದರೆ ಸರ್ವರಿಗೂ ಇದೇ ವ್ಯಾಕರಣವು ಆದರ್ಶವಾಗುವುದು. ಇದಾದ ಮೇಲೆ ಕನ್ನಡನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕ ರೂಪಗಳು ಕ್ರಮ ಕ್ರಮದಿಂದ ಏಕರೂಪತೆಯನ್ನು ಹೊಂದುತ್ತ ಸಾಗಿ, ಅಲ್ಪಾವಧಿಯಲ್ಲಿಯೇ ಕನ್ನಡದ ಏಕೀಕರಣವಾಗುವುದು ಸ್ವಾಭಾವಿಕವಾಗಿದೆ. ಆದುದರಿಂದ ಕನ್ನಡದ ಏಕೀಕರಣಕ್ಕೆ ಈ ಉಪಾಯವು ಸರ್ವೋತ್ಕೃಷ್ಟವಾಗಿದೆ.

ಈಗ್ಗೆ "ಕರ್ನಾಟಕ ಸಾಹಿತ್ಯಪರಿಷತ್ತು" ಎಂಬುದೊಂದು ಪ್ರೌಢವಾದ ಸಂಸ್ಥೆಯು ಅವತರಿಸಿಯೇ ಇದೆ ಇಷ್ಟಕ್ಕೂ ಈ ಸಂಸ್ಥೆಯವರು, ಕನ್ನಡ ಭಾಷೆಯಲ್ಲಿ ಪಂಡಿತ ಯೋಗ್ಯವಾದ ವ್ಯಾಕರಣವನ್ನು ಬರೆಯಿಸುವುದೊಂದು ಉದ್ದೇಶವನ್ನು ತಮ್ಮ ಎದುರಿನಲ್ಲಿ ಇಟ್ಟುಕೊಂಡೇ ಇದ್ದಾರೆ ಈ ಮಹನೀಯರು ಮೇಲೆ ವಿವರಿಸಿದಂಥ ವ್ಯಾಕರಣವನ್ನು ರಚಿಸಿದರೆ, ಕನ್ನಡದ ಏಕೀಕರಣವು ಸುಲಭವಾಗಿ ಸಾಧ್ಯವಾಗುವುದು

ಕೊನೆಗೆ ಒಬ್ಬ ಉದಾರಚರಿತನ, ಉದ್ಗಾರಗಳನ್ನು ಬರೆದು ಈ ಉಪಾಯ ಚಿಂತನವನ್ನು ಮುಗಿಸುತ್ತೇನೆ —

"ದಕ್ಷಿಣ ಕನ್ನಡ ಅಥವಾ ಧಾರವಾಡ, ಬೆಳಗಾಂವ ಪ್ರಾಂತಗಳಲ್ಲಿ ಈಗಲೂ ಕೆಲವುಶಬ್ದಗಳೂ ಪ್ರಯೋಗಗಳೂ ಪೂರ್ವದಲ್ಲಿದ್ದಂತೆ ಶುದ್ಧರೂಪದಲ್ಲಿ ಉಳಿದುಕೊಂಡಿರಬಹುದು — ಅವುಗಳನ್ನೂ ಇಲ್ಲ (ಮೈಸೂರ ಪ್ರಾಂತ್ಯದಲ್ಲಿ) ನಾವು ನಿಷ್ಕಾರಣವಾಗಿ ಬಿಟ್ಟುಬಿಟ್ಟಿರಬಹುದು, ಇಲ್ಲವೆ ಆ ರೂಪಗಳನ್ನೂ ಕೆಡಿಸಿರಬಹುದು ಅಂತಹ ಸಂದರ್ಭಗಳು ಸರಿಯಾಗಿ ಸಿದ್ಧಾಂತ ಪಟ್ಟರೆ, ನಾವು ಅವರನ್ನೇ ಅನುಸರಿಸಲಿಚ್ಛಯಿಸುವೆವು"

(ರಾಜಮಂತ್ರ ಪ್ರವೀಣ ಶ್ರೀಮಾನ್ ಹೆಚ್ ವಿ ನಂಜುಂಡಯ್ಯನವರು)

(೩) ಕನ್ನಡ ನಾಡುಗಳಲ್ಲಿ ಪ್ರಚುರ ವಾಗಿರುವ ವಾಕ್ಪ್ರಚಾರ ಇಡಿಯಮ್ಮು ಗಳನ್ನೂ ನಾಣ್ಣುಡಿಗಳನ್ನೂ ಸೋಪಪತ್ತಿಕವಾಗಿ ವಿವೇಚಿಸಿ ಸಂಗ್ರಹಿಸುವುದು —

ಪ್ರತಿಯೊಂದು ಭಾಷೆಯಲ್ಲಿ "ಇಡಿಯಮ್" ಎಂದರೆ ಶಬ್ದಗಳ ಅಥವಾ ವಾಕ್ಯಗಳ ಪ್ರಯೋಗ ವಿಶೇಷವು ಇದ್ದೇ ಇರುತ್ತದೆ ಇದಕ್ಕೆ "ಸಂಪ್ರದಾಯ" ಅಥವಾ "ವಾಕ್ಪ್ರಚಾರ" ಎಂಬ ಹೆಸರು ಈ ವಾಕ್ಪ್ರಚಾರವು ಭಾಷೆಯ ಪ್ರಾಣವೆಂದು ಹೇಳಿದರೆ, ಅತ್ಯುಕ್ತಿಯಾಗದು ಇವುಗಳನ್ನು ಇದ್ದಕ್ಕಿದ್ದಂತೆಯೇ ಸ್ವೀಕರಿಸಬೇಕೆ ಹೊರತು ಲವಮಾತ್ರವಾದರೂ ಹೆಚ್ಚು ಕಡಿಮೆ ಮಾಡಕೂಡದು. ಪ್ರತ್ಯೇಕ ರಾಷ್ಟ್ರಗಳಲ್ಲಿ ಉಡಿಗೆ ತೊಡಿಗೆ, ರೀತಿ ನಡಾವಳಿ, ಧರ್ಮಗಳು ಹೇಗೆ ಭಿನ್ನ ಭಿನ್ನ ವಾಗಿವೆಯೋ ಹಾಗೆಯೇ ಪ್ರತಿಯೊಂದು ಭಾಷೆಯಲ್ಲಿ ವಾಕ್ಪ್ರಚಾರದಿಂದ ಸ್ವಭಾಷೆಯಲ್ಲಿ ಅರ್ಥವೂ ಅಗಲಿರಿಯದು ಕಿಂಬಹುನಾ ಆ ಆ ಭಾಷೆಯ ಸ್ವಾರಸ್ಯವೇ ಆ ಆ ವಾಕ್ಪ್ರಚಾರಗಳಲ್ಲಿ ಅಡಗಿರುತ್ತದೆ ॥

ಇಂತಹ ವಾಕ್ಪ್ರಚಾರಗಳು ನಮ್ಮ ಕನ್ನಡ ಭಾಷೆಯಲ್ಲಿ ಹೇರಳವಾಗಿವೆ.

ಮನೆಯಲ್ಲಿ ಸ್ತ್ರೀಯರ ಮಾತುಗಳಲ್ಲಿ ಇವು ಮೇಲಿಂದ ಮೇಲೆ ಬರುತ್ತಿರುತ್ತವೆ. ಇವರ ಭಾಷೆಯು ಶುದ್ಧ ಕನ್ನಡವೆಂದು ಹೇಳಬರುದು, ಯಾಕಂದರೆ, ಇವರಿಗೆ ಪರಭಾಷೆಯ ಸಂಸ್ಕಾರವೇನೂ ಆಗಿರುವದಿಲ್ಲ. ಆದುದರಿಂದ ಇವರ ನುಡಿಯು, ಕನ್ನಡ ಭಾಷೆಯ ಶುದ್ಧತೆಗೆ ಉತ್ಕೃಷ್ಟವಾದ ಪ್ರಮಾಣವೇಸರಿ. ಇರಲಿ ಬರೆಯುವ ಭರದಲ್ಲಿ ಇದೊಂದಿಷ್ಟು ವಿಷಯಾಂತರವಾಯಿತು. ಇದನ್ನು ವಾಚಕ ಮಹಾಶಯರು ಕ್ಷಮಿಸಬೇಕು.

ಕರ್ನಾಟಕದ ಎಲ್ಲಾ ಪ್ರಾಂತಗಳ ಭಾಷೆಯಲ್ಲಿರುವಂಥ ವಾಕ್ಪ್ರಚಾರಗಳನ್ನು ಒಂದೂ ಉಳಿಯದಂತೆ ಸಂಗ್ರಹಿಸಿ, ಕನ್ನಡ ಲೇಖಕರ (ಗ್ರಂಥಕರ್ತೃಗಳ) ಎದುರಿಗೆ ಇಟ್ಟುಬಿಟ್ಟರೆ, ಅವುಗಳ ಸಹಾಯದಿಂದ ಸಮಸ್ತ ಕನ್ನಡಿಗರಿಗೂ ತಿಳಿಯುವಂತೆ ತಮ್ಮ ಬರವಣಿಗೆಯ ಕಾರ್ಯವನ್ನು ಸಾಗಿಸುವದು ಅವರಿಗೆ ಸುಲಭವಾಗುವದು. ಅರ್ಥಾತ್ ಗ್ರಂಥಭಾಷೆಯೂ ಮೆಲ್ಲಮೆಲ್ಲನೆ ಏಕರೂಪತೆಯನ್ನು ಹೊಂದುವದು. ಆದುದರಿಂದ ಕನ್ನಡದ ಏಕೀಕರಣಕ್ಕೆ ಈ ಉಪಾಯವು ಉತ್ತಮವಾಗಿರುವದು.

ವಾಕ್ಪ್ರಚಾರಗಳಂತೆಯೇ ಗಾದೆಯ ಮಾತುಗಳನ್ನೂ (ನಾಣ್ಣುಡಿಗಳನ್ನೂ) ಸಂಗ್ರಹಿಸುವದು ಅತ್ಯವಶ್ಯಕವಾಗಿದೆ. ಆದರೆ ವಾಕ್ಪ್ರಚಾರ, ನಾಣ್ಣುಡಿಗಳನ್ನು ಕೇವಲ ಸಂಗ್ರಹಿಸುವದಿಷ್ಟೇ ಕೆಲಸವಲ್ಲ. ಆ ಪ್ರತಿಯೊಂದು ವಾಕ್ಪ್ರಚಾರಕ್ಕೂ ನಾಣ್ಣುಡಿಗೂ ಸೋಪಪತ್ತಿಕವಾಗಿ ಇತಿಹಾಸವನ್ನು ಬರೆಯಬೇಕು. ಎಂದರೆ, ಈ ವಾಕ್ಪ್ರಚಾರ, ನಾಣ್ಣುಡಿಗಳು ಯಾಕೆ ರೂಢಿಯಲ್ಲಿ ಬಂದವು ? ಇದಕ್ಕೆ ಏನಾದರೂ ದಂತಕಥಾ, ಲೋಕವಾರ್ತೆ, ಇತಿಹಾಸ, ಧರ್ಮ, ಸೃಷ್ಟಿರಚನಾ ಮುಂತಾದುವುಗಳ ಸಂಬಂಧವಿದೆಯೋ ಹೇಗೆ ? ಪರೀಕ್ಷಿಸಿ ವಿವೇಚನೆ ಮಾಡಿದರೆ ಆ ವಾಕ್ಪ್ರಚಾರ, ನಾಣ್ಣುಡಿಗಳೊಳಗಿನ ಮರ್ಮವು ತಿಳಿವದು. ಹಾಗು ಗ್ರಂಥದಲ್ಲಿ ಅಥವಾ ಯಾವದೊಂದು ಬರವಣಿಗೆಯಲ್ಲಿ ಇವುಗಳನ್ನು ಸಂದರ್ಭಕ್ಕನುರೂಪವಾಗಿ ಯೋಜಿಸಲಿಕ್ಕೆ ಗೊತ್ತಾಗುವದು.

(೨) ಪಾರಿಭಾಷಿಕಶಬ್ದಗಳ ಕೋಶವನ್ನು ರಚಿಸುವದು,—

ಪ್ರತಿಯೊಂದು ಶಾಸ್ತ್ರಕ್ಕೆ ಆದರ ಕೆಲವು ನಿಯಮಿತಶಬ್ದಗಳು ಇರುತ್ತವೆ. ಅವುಗಳಿಗೆ ಸಂಸ್ಕೃತಭಾಷೆಯಲ್ಲಿ "ಪರಿಭಾಷೆ" ಎಂಬ ಹೆಸರು. ಒಂದು ಭಾಷೆಯಲ್ಲಿದ್ದ ಪರಿಭಾಷೆಗೆ ಮತ್ತೊಂದು ಭಾಷೆಯಲ್ಲಿ "ಪ್ರತಿಪರಿಭಾಷೆ"ಯನ್ನು ರಚಿಸುವದು ಬಹು ಚಾತುರ್ಯದ ಹಾಗು ಶ್ರಮದ ಕೆಲಸವಾಗಿದೆ. ಮೈಸೂರು ಯೂನಿವರ್ಸಿಟಿಯು ಇಂಗ್ಲೀಷ, ಫ್ರೆಂಚ, ಜರ್ಮನ್ನ ಮೊದಲಾದ ಯುರೋಪೀಯ ಭಾಷೆಗಳೊಳಗಿನ ಶಾಸ್ತ್ರೀಯ ಗ್ರಂಥಗಳನ್ನು ಕನ್ನಡದಲ್ಲಿ ಭಾಷಾಂತರಿಸುವ ಕಾರ್ಯವನ್ನು ತನ್ನ ಎದುರಿಗೆ ಇಟ್ಟುಕೊಂಡಿದೆ. ಇಂತಹ ವೇಳೆಯಲ್ಲಿ ಪಾರಿಭಾಷಿಕಶಬ್ದಗಳ ಕೋಶವು ರಚಿಸಲ್ಪಡುವದು ಅತ್ಯಾವಶ್ಯಕವೆಂಬುದನ್ನು ಬೇರೆ ಹೇಳಬೇಕಾದುದಿಲ್ಲ. ಇರಲಿ. ನಮ್ಮ ಕರ್ನಾಟಕದೊಳಗಿನ ಆ ಆ ಶಾಸ್ತ್ರವಿಶಾರದರು ತಮ್ಮ ತಮ್ಮ ಶಾಸ್ತ್ರ

ಗಳಲ್ಲಿರುವ ಪಾರಿಭಾಷಿಕಶಬ್ದಗಳನ್ನು ಕನ್ನಡದಲ್ಲಿ ರಚಿಸಿ, ಅವೆಲ್ಲವನ್ನೂ ಒಂದು ಕೋಶದಲ್ಲಿ ಸಂಗ್ರಹಿಸಿದರೆ, ಕನ್ನಡಗ್ರಂಥಕಾರರಿಗೆ ಒಂದೇ ವಿಧವಾದ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸುವುದಕ್ಕೆ ಅನುಕೂಲವಾಗಿ, ಗ್ರಾಂಥಿಕಭಾಷೆಯು ಏಕ ರೂಪತೆಯನ್ನು ಹೊಂದುವುದಕ್ಕೆ ಸಹಾಯವಾಗುವುದು. ಅರ್ಥಾತ್ ಈ ಉಪಾಯವು ಕನ್ನಡದ ಏಕೀಕರಣಕ್ಕೆ ಸಹಾಯಭೂತವಾಗಿದೆ

ಇಂಗ್ಲೀಷುಭಾಷೆಗೆ ಗ್ರೀಕಭಾಷೆಯು ಸಹಾಯವಿದ್ದಂತೆ ಕನ್ನಡದಲ್ಲಿ ಪಾರಿಭಾಷಿಕಶಬ್ದಗಳನ್ನು ರಚಿಸುವುದಕ್ಕೆ ಸಂಸ್ಕೃತಭಾಷೆಯು ಸಹಾಯವೊಂದು ಉತ್ತಮವಾಗಿದೆ. ಪಾರಿಭಾಷಿಕಶಬ್ದವು ಆದಷ್ಟುಮಟ್ಟಿಗೆ ಚಿಕ್ಕದಾಗಿರುವಂತೆ ರಚಿಸಲ್ಪಡಬೇಕು ಸಂಸ್ಕೃತದಲ್ಲಿ ಸಂಧಿಯು ರಚನೆಯೂ ಸಮಾಸದ ರಚನೆಯೂ ಅತಿ ಉತ್ಕೃಷ್ಟವಾಗಿದ್ದುದರಿಂದ ಹೊಸಶಬ್ದವನ್ನು ಚಿಕ್ಕದಾಗಿ ರಚಿಸುವುದಕ್ಕೆ ತಕ್ಕ ಅನುಕೂಲವಿದೆ ಉದಾ—"ಭೂಗರ್ಭಶಾಸ್ತ್ರ", "ಪದಾರ್ಥವಿಜ್ಞಾನ", "ವಕ್ರೀಭವನ" ಇತ್ಯಾದಿ ಮತ್ತೊಂದು ಏನಂದರೆ, ಪಾರಿಭಾಷಿಕಶಬ್ದವು ಕರ್ಕಶವಾಗಿರಬಾರದು, ಕರ್ಣಮನೋಹರವಾಗಿರಬೇಕು. ಮಾಧುರ್ಯವು ಸಂಸ್ಕೃತಭಾಷೆಯಲ್ಲಿ ತುಂಬಿತುಳುಕುತ್ತಿರುವುದರಿಂದ ಈ ಉದ್ದೇಶವೂ ಈ ಭಾಷೆಯಿಂದಲೇ ಸಾಧಿಸುವುದು. ಇನ್ನೊಂದು ಮೂರನೆಯದು ಏನಂದರೆ, ಪಾರಿಭಾಷಿಕಶಬ್ದವು ವ್ಯಾವಹಾರಿಕ ಭಾಷೆಯಿಂದ ಭಿನ್ನವಿದ್ದಷ್ಟು ಒಳ್ಳೇದು ಸಂಸ್ಕೃತ ಭಾಷೆಯು ಕನ್ನಡ ಭಾಷೆಯಿಂದ ಭಿನ್ನವಾಗಿರುವುದರಿಂದ ಈ ಅಪರಿಚಿತತ್ವವು ಸಾಧ್ಯವಾಗುವುದು ಪಾರಿಭಾಷಿಕ ಶಬ್ದಗಳನ್ನು ರಚಿಸುವ ಮಹನೀಯರು ಈ ನಿಯಮಗಳ ಕಡೆಗೆ ಗಮನಿಸಬೇಕೆಂದು ಪ್ರಾರ್ಥಿಸಿ ಈ ಉಪಾಯದ ವಿಚಾರವನ್ನು ಸಮಾಪ್ತಮಾಡುತ್ತೇನೆ

(೫) ಕನ್ನಡದ ಮಹಾಕೋಶವನ್ನು ರಚಿಸುವುದು.

ರೆವರೆಂಡ್ ಡಾಕ್ಟರ್ ಕಿಟ್ಟೆಲ್ ಇವರು ಬಹು ಪರಿಶ್ರಮಪೂರ್ವಕವಾಗಿ ಕನ್ನಡ ಇಂಗ್ಲೀಷದ ದೊಡ್ಡಕೋಶವನ್ನು ರಚಿಸಿ, ಕನ್ನಡ ವಾಙ್ಮಯದಮೇಲೆ ಮಹದುಪಕಾರವನ್ನು ಮಾಡಿದಾರೆ ಆದರೆ ಅವರು ಪರದೇಶದವರಾದುದರಿಂದ ಕನ್ನಡ ಭಾಷೆಯಲ್ಲಿ ಎಷ್ಟೇ ಪರಿಶ್ರಮಮಾಡಿದರೂ ಅವರಿಗೆ ಅದರ ಪೂರ್ಣಜ್ಞಾನವಾಗುವುದು ಶಕ್ಯವಲ್ಲ. ಈ ಮಾತನ್ನು ಎಲ್ಲಾ ಪಂಡಿತರು ಒಪ್ಪುತ್ತಾರೆ. ಆದುದರಿಂದ ಕನ್ನಡ ನಾಡುಗಳಲ್ಲಿ ಬಳಕೆಯಲ್ಲಿರುವ ಸಮಸ್ತಶಬ್ದಗಳನ್ನೂ ಸಂಗ್ರಹಿಸುವ ಮಹಾಕಾರ್ಯವೊಂದು ಸದ್ಯಕ್ಕೆ ಕನ್ನಡಿಗರಿಗೆ ಪ್ರಾಪ್ತವಾಗಿದೆ ಇದೊಂದು ದೊಡ್ಡಕೆಲಸವು ನೆರವೇರಿತೆಂದರೆ ನಮ್ಮ ಕನ್ನಡದ ಏಕೀಕರಣಕ್ಕೆ ಚನ್ನಾಗಿ ಸಹಾಯವುಂಟಾಗುವುದು. ಈಗ ಸದ್ಯದಲ್ಲಿ, ಶಬ್ದಶುದ್ಧಿಯ ವಿಷಯವಾಗಿ ನಿಶ್ಚಯವಾದ ಅಭಿಪ್ರಾಯವಿಲ್ಲದಿರುವದರಿಂದ ಒಂದು ಶಬ್ದವನ್ನು ಒಬ್ಬರು ಒಂದುವಿಧವಾಗಿ ಉಪಯೋಗಿಸಿದರೆ, ಮತ್ತೊಬ್ಬರು ಅದೇ ಶಬ್ದವನ್ನು ಇನ್ನೊಂದು ರೀತಿಯಾಗಿ ಬರೆಯುವರು ಹೀಗಾಗುವುದರಿಂದ ಗ್ರಾಂಥಿಕಭಾಷೆಯ ಏಕರೂಪತೆಗೆ ಬಲವಾದ ವಿಘ್ನವುಂಟಾಗುವುದು.

ಈ ವಿಷಯವನ್ನು ಪರಿಹಾರಮಾಡುವುದಕ್ಕಾಗಿ ಕನ್ನಡದ ಮಹಾಕೋಶವನ್ನು ರಚಿಸುವುದು ಅತ್ಯವಶ್ಯಕವಾಗಿದೆ.

ಕೋಶವನ್ನು ರಚಿಸುವಾಗ್ಗೆ, ಶಬ್ದಗಳ ಶುದ್ಧಾಶುದ್ಧತೆಯನ್ನು ನಿಶ್ಚಯಿಸಬೇಕಾಗುವುದು. ಆ ವೇಳೆಯಲ್ಲಿ ವ್ಯಾಕರಣಕ್ಕಿಂತ ರೂಢಿಗೆ ಹೆಚ್ಚು ಮಹತ್ವವನ್ನು ಕೊಡಲಿಕ್ಕೆ ಬೇಕು. ಪಾಣಿನ್ಯಾದಿ ಮಹಾ ಸಮರ್ಥರಾದ ಸಂಸ್ಕೃತ ವೈಯ್ಯಾಕರಣರು ಸಹ ಛಂದಸ್ಸು ಹಾಗು ಆರ್ಷಪ್ರಯೋಗಗಳ ಮುಂದೆ ಸಾಷ್ಟಾಂಗ ನಮಸ್ಕಾರವನ್ನೇ ಹಾಕಬೇಕಾಯಿತು । ಅಂತಹ ಸ್ಥಳದಲ್ಲಿ ಅವರು "ಪೃಷೋದರಾದಿತ್ವಾತ್ಸಾಧುಃ" ಎಂಬ ನಿಯಮವನ್ನು ಹೇಳಿ ಪಾರಾಗಬೇಕಾಯಿತು ॥ ಬಳಕೆಯಲ್ಲಿ ಸ್ಥಿರವಾಗಿ ರೂಢವಾಗಿರುವಂಥ ಶಬ್ದಗಳ ಮೇಲೆ ವ್ಯಾಕರಣ ಶಾಸ್ತ್ರವನ್ನು ಪ್ರಯೋಗಿಸಬಾರದು. ಇದ್ದಕ್ಕಿದ್ದಂತೆಯೇ ಅವುಗಳನ್ನು ಸ್ವೀಕರಿಸಬೇಕೆಂಬುದೇ ನನ್ನ ಮುಖ್ಯ ತಾತ್ಪರ್ಯವು

ಇನ್ನು ನಮ್ಮ ಕನ್ನಡ ಭಾಷೆಯಲ್ಲಿ ಬಳಕೆಯಾಗಿ ಬಿಟ್ಟಿರುವಂಥ ಅನ್ಯಭಾಷೆಯ ಶಬ್ದಗಳನ್ನೂ ಈ ಮಹಾ ಕೋಶದಲ್ಲಿ ಸಮಾವೇಶಮಾಡುವುದು ಅವಶ್ಯಕವಾಗಿದೆ ಧಾರವಾಡ ಕನ್ನಡದಲ್ಲಿ ಮರಾಠಿ ಭಾಷೆಯ ಶಬ್ದಗಳು ಕೂಡಿರುವವೆಂಬದಾಗಿ ಮೈಸೂರಿನವರು ಹೇಳುತ್ತಿದ್ದಾರೆ ಈ ಅಭಿಪ್ರಾಯದಲ್ಲಿ ಸತ್ಯದ ಅಂಶವು ಇರುತ್ತದೆಂದು ನಾನು ಪ್ರಾಂಜಲಮನಸ್ಸಿನಿಂದ ಒಪ್ಪುತ್ತೇನೆ. ಇಷ್ಟೇ ಅಲ್ಲ, ಇದಕ್ಕೆ ಒಂದು ಬಲವಾದ ಪ್ರಮಾಣವನ್ನೂ ಇಲ್ಲಿ ಹೇಳುತ್ತೇನೆ

"ಸುದ್ದಿಯ ಸೊಬಗು" ಎಂಬ ಕನ್ನಡ ಮೊದಲನೆಯ ವರ್ತಮಾನ ಪತ್ರದ ವಿಷಯವಾಗಿ ಬರೆಯುವಾಗ್ಗೆ "ಕಾಲಾಪತ್ರಿಕ" ದ ಸಂಪಾದಕರು ಹೀಗೆ ಉದ್ಗಾರಗಳನ್ನು ತೆಗೆದಿದ್ದಾರೆ.—

"ಈಗ ನಾಲ್ಕಾರು ವರ್ಷಗಳ ಹಿಂದಿನ ಸ್ಥಿತಿಯು ನೋಡಲಾಗಿ ಆಗ್ಯೂ ಈಗ್ಯೂ ಬಹಳ ಅಂತರವುಂಟೆಂದು ಕಂಡು ಬರುತ್ತದೆ ಆಗತಕ್ಕ ಮಟ್ಟಿಗೆ ಶುದ್ಧವಾಗಿ ಕನ್ನಡ ಭಾಷೆಯಲ್ಲಿ ನಾಲ್ಕು ಪಙ್ಕ್ತಿಗಳ ಬರೆಯಬಲ್ಲವರನ್ನು ಕಾಣುವುದು ಅಪರೂಪವಾಗಿತ್ತು. ಅರ್ಧ ಮಹಾರಾಷ್ಟ್ರಮಿಶ್ರವಾದ ಕನ್ನಡ ಭಾಷೆಯು ಈ ಪ್ರಾಂತದಲ್ಲಿ ವಾಡಿಕೆಯಾಗಿ ನಡೆಯುತ್ತಿದ್ದಂತೆಯೇ ಎಲ್ಲ ಬಗೆಯ ಕಾಗದ ಪತ್ರಗಳಲ್ಲಿ ದೃಷ್ಟಿಗೆ ಬೀಳುತ್ತಿತ್ತು ಈ ಪತ್ರಕದಲ್ಲಿ ಪ್ರಸಿದ್ಧಿಸಲ್ಪಡುವುದಕ್ಕೆ ನಮ್ಮ ಬಳಿಗೆ ೧೦ ಪತ್ರಗಳು ಬಂದರೆ ಅವುಗಳಲ್ಲಿ ಸ್ಥಲಕೊಡುವಷ್ಟು ಶುದ್ಧವಾದ ಭಾಷೆಯುಳ್ಳ ಪತ್ರ ಒಂದು ಸಹ ದುರ್ಲಭವಾಗಿತ್ತು

ಆದರೆ ಈಗಿನ ಸ್ಥಿತಿಯು ಹಾಗಿಲ್ಲ. ನಮಗೆ ಬಂದ ಪತ್ರಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪತ್ರಗಳು ಸ್ವೀಕರಿಸತಕ್ಕಂಥವಿರುತ್ತವೆಂದು ನೋಡಿ ನಮಗೆ ಬಹಳ ಸಂತೋಷವಾಗುತ್ತದೆ. ಇದಲ್ಲದೆ ಇತ್ತಲಾಗಿ ಬೆಳಗಾಂವಿಯಲ್ಲಿ ಹೊಸದಾಗಿ ಕನ್ನಡ ಅಚ್ಚು ಕೂಟವುಂಟಾದುದರಿಂದ ಕಳೆದ ವರ್ಷ ವೊಂದುವರೆ ವರ್ಷದೊಳಗೆ ಹತ್ತೆಂಟು

ಹೊಸ ಕನ್ನಡ ಪುಸ್ತಕಗಳು ಜನರಿಂದ ಪ್ರಸಿದ್ಧಿಸಲ್ಪಟ್ಟವೆಂಬುದು ಅತ್ಯಾನಂದಕರವಾದ ಸಂಗತಿಯು..."

(ಕ್ರಿ. ಶ ೧೮೭೩ ನೆಯ ಇಸ್ವಿ ಫೆಬ್ರುವರಿ ತಿಂಗಳ ಸಂಚಿಕೆ)

"ಶಾಲಾಪತ್ರಿಕ", ಬೆಳಗಾಂವ.

ಇಂದಿಗೆ (೪೪) ವರ್ಷಗಳ ಹಿಂದಿನ ಧಾರವಾಡ ಕನ್ನಡದ ರೂಪವು ಹೇಗೆ ಇತ್ತೆಂಬುದು ಮೇಲಿನ ಅವತರಣದಲ್ಲಿ ಚನ್ನಾಗಿ ವ್ಯಕ್ತವಾಗಿದೆ.

ಅಹಹ ! ಯಾವ ಕನ್ನಡವು "ತಿರುಳ್ ಕನ್ನಡ !!!" ಎಂದು ನೃಪತುಂಗ, ಆದಿಪಂಪ ಮೊದಲಾದ ಉದ್ದಾಮ ಪಂಡಿತರಿಂದ ಹೊಗಳಿಸಿಕೊಂಡಿತೋ, ಯಾವ ಕನ್ನಡದಲ್ಲಿ ಆದಿಪಂಪ, ಪೊನ್ನ, ರನ್ನ, ಕುಮಾರವ್ಯಾಸರಂತಹ ಉದ್ದಾಮ ಕವಿಗಳೂ ನೃಪತುಂಗ, ನಯಸೇನರಂತಹ ವೈಯ್ಯಾಕರಣರೂ ಅವತರಿಸಿದರೋ ಅಂತಹ ಕನ್ನಡ ಸ್ಥಿತಿಯು ಹೀಗಾಗಬೇಕೆ !!! ಹಾಯ್ ! ಹಾಯ್ !! ಯಾರೇನು ಮಾಡುವುದು, ನಮ್ಮ ಉತ್ತರ ಕರ್ನಾಟಕದ ದುರ್ದೈವವೇ ಸರಿ "ಕಾಲಾಯ ತಸ್ಮೈ ನಮಃ" ಎಂಬ ಭರ್ತೃಹರಿಯ ವಚನವು ಈ ಸ್ಥಳದಲ್ಲಿ ನೆನಪಾಗುತ್ತದೆ ! ಉಪಾಯವಿಲ್ಲ ಇರಲಿ. ಇನ್ನು ಮೇಲಾದರೂ ನಮ್ಮ ಉತ್ತರ ಕರ್ನಾಟಕದ ಬಂಧುಗಳು ತಮ್ಮ ಪೂರ್ವದ ಕೀರ್ತಿಯನ್ನು ಸ್ಮರಿಸಿ, ಕರ್ತವ್ಯನಿಷ್ಠರಾಗಿ, ಸಮಸ್ತ ಕನ್ನಡಿಗರಿಗೆಲ್ಲಾ ಮೇಲುಪಙ್ತ್ತಿಯಾಗಿ ಶೋಭಿಸಬೇಕೆಂದು ಹಾರಯಿಸುತ್ತೇನೆ ಓಹೋ ! ವಿಷಯಾಂತರವಾಗಿ ಹೋಯಿತಲ್ಲಾ !! ಇರಲಿ, ವಾಚಕ ಮಹಾಶಯರೇ ! ಇದೂ ಒಂದು ಸಾರೆ ಕ್ಷಮಿಸಿರಿ.

ಧಾರವಾಡ ಕನ್ನಡದಂತೆಯೇ ಇನ್ನಿತರ ಪ್ರಾಂತಗಳ ಕನ್ನಡ ಭಾಷೆಯಾದರೂ ಅನ್ಯಭಾಷೆಯ ಶಬ್ದಗಳಿಂದ ದೂಷಿತವಾಗಿದೆ ಬಳ್ಳಾರಿ ಮತ್ತು ಅನಂತಪುರ ಜಿಲ್ಹೆಗಳ ಕನ್ನಡವು ತೆಲಗು ಶಬ್ದಗಳಿಂದ ಮಿಶ್ರವಾಗಿದೆ ಮೈಸೂರು ಪ್ರಾಂತದ ಭಾಷೆಯಲ್ಲಿ ತಮಿಳು, ತೆಲುಗು ಶಬ್ದಗಳಲ್ಲದೆ, ಅರಬಿ, ಪಾರ್ಸಿ, ಉರ್ದು, ಇಂಗ್ಲೀಷ ಶಬ್ದಗಳೂ ಹೇರಳವಾಗಿ ಸೇರಿಕೊಂಡಿವೆ ಮಂಗಳೂರು ಪ್ರಾಂತದ ಕನ್ನಡದಲ್ಲಿ ತುಳು ಶಬ್ದಗಳು ವಿಶೇಷವಾಗಿವೆ ಹೈದರಾಬಾದ ಪ್ರಾಂತದ ಕನ್ನಡದಲ್ಲಿ ಉರ್ದು ಶಬ್ದಗಳು ಹೆಚ್ಚಾಗಿವೆ. ಕನ್ನಡ ಭಾಷೆಯೊಂದೇ ಏಕೆ ? ಪ್ರತಿಯೊಂದು ಭಾಷೆಯಲ್ಲಿಯೂ ಅನ್ಯಭಾಷೆಯ ಶಬ್ದಗಳು ಇದ್ದೇ ಇರುತ್ತವೆ. ಅತ್ಯಂತ ಉನ್ನತವಾದವಸ್ಥೆಯನ್ನು ಹೊಂದಿದ ಇಂಗ್ಲೀಷು ಭಾಷೆಯಲ್ಲಿ ಸಹ ಅನೇಕ ಭಾಷೆಯ ಶಬ್ದಗಳು ಸೇರಿಕೊಂಡಿರುತ್ತವೆ. ಘೀ, ಖಟಪಟ, ಬಂದೋಬಸ್ತ ಪಕ್ಕಾ, ಮೊದಲಾದ ಹಿಂದೀಶಬ್ದಗಳು ಕೂಡ ಇಂಗ್ಲೀಷ ಭಾಷೆಯಲ್ಲಿ ಪ್ರವೇಶಮಾಡಿವೆ ! ಇದರ ತಾತ್ಪರ್ಯವೇನಂದರೆ, ಪರಭಾಷೆಯ ಕೆಲವು ಶಬ್ದಗಳು ಕೇವಲ ಸೇರಿದ ಮಾತ್ರಕ್ಕೆ ಭಾಷೆಯು

ಕೆಟ್ಟು ಹೋಗುತ್ತದೆಂದು ತಿಳಿಯುವುದು ಶುದ್ಧ ತಪ್ಪು. ಶ್ರೀಮಾನ್ ಎಚ್. ವಿ. ನಂಜುಂಡಯ್ಯನವರು ಅನ್ನುತ್ತಾರೆ— "ಕನ್ನಡ ಗ್ರಂಥರಚನೆಗೆ ದೇಶ್ಯ, ಸಂಸ್ಕೃತ ಶಬ್ದಗಳೆರಡರ ಪ್ರಯೋಗವೂ ಸಹಜವೆಂದು ಒಪ್ಪಿದ ಬಳಿಕ, ಅವಶ್ಯವಿದ್ದರೆ, ರೂಢಿಯುಳ್ಳಿರುವ ಇತರ ಭಾಷಾ ಶಬ್ದಗಳನ್ನೂ ತೆಗೆದುಕೊಳ್ಳಬೇಕು. ಒಂದು ಅನ್ಯ ಭಾಷಾಶಬ್ದವು ಬಹುಕಾಲದಿಂದ ಬಳಕೆಗೆ ಬಂದಿದ್ದು, ಅದಕ್ಕೆ ಸಮನಾಗಿ ಸಂಸ್ಕೃತದಲ್ಲಿಯಾಗಲಿ ಕನ್ನಡದಲ್ಲಿಯಾಗಲಿ ಕ್ಲೇಶಪಟ್ಟು ಕಲ್ಪಿಸುವ ಶಬ್ದಕ್ಕಿಂತ ಅದು ಸುಲಭವಾಗಿ ತಿಳಿಯ ಬರುವಲ್ಲಿಯೂ, ಅಥವಾ ಉದ್ದಿಷ್ಟವಾದ ಅರ್ಥವನ್ನು ಸುಲಭವಾಗಿ ತಿಳಿಸಲಾಗುವ ಒಂದೇ ಒಂದು ಅನ್ಯ ಭಾಷಾಶಬ್ದಕ್ಕೆ ಬದಲಾಗಿ ದೇಶಭಾಷೆಯಲ್ಲಿ ಸುತ್ತಿ ಸುತ್ತಿ ತಿಳಿಸುವ ವಿಕಾರವಾದ ಶಬ್ದ ಜಾಲವನ್ನು ಪ್ರಯೋಗಿಸಬೇಕಾಗಿರುವಲ್ಲಿಯೂ, ಅನ್ಯಭಾಷಾ ಶಬ್ದಗಳನ್ನು ಪರಿಗ್ರಹಿಸದೆಯೇ ಬಿಡುವುದು ಬರಿಯ ಬಿಂಕವನ್ನಿಸಿಕೊಳ್ಳುವುದು." ಇದು ಎಷ್ಟು ಸಯುಕ್ತಿಕವಾದ ಅಭಿಪ್ರಾಯವಾಗಿದೆ || ಕನ್ನಡದ ಮಹಾಕೋಶವನ್ನು ರಚಿಸುವವರು ಈ ಅಭಿಪ್ರಾಯದ ಕಡೆಗೆ ಚನ್ನಾಗಿ ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ. "ನಮ್ಮ ಮಾತೃಭಾಷೆಯ ಕೇವಲ ಉನ್ನತಿಗೋಸ್ಕರ ಮಾತ್ರ ಅನ್ಯ ಭಾಷೆಯಿಂದ ಶಬ್ದ, ವಾಕ್ಯರಚನೆ, ಭಾಷಾಸರಣಿ, ನಾಣ್ಣುಡಿ ಮೊದಲಾದುವುಗಳನ್ನು ಪ್ರಸಂಗಾನುಸಾರವಾಗಿ ಸ್ವೀಕರಿಸುವುದಕ್ಕೆ ಯಾವ ತರಹದ ಪಾಪವೂ ಇಲ್ಲ. ಆದರೆ ಆ ಅನ್ಯಭಾಷೆಯು ನಮ್ಮ ಮಾತೃ ಭಾಷೆಯನ್ನೇ ಮೂಲೆಗೊತ್ತುವ ಹಾಗೆ ಮಾತ್ರ ಆ ಪರಭಾಷೆಯ ಸಹಾಯವನ್ನು ಅಪೇಕ್ಷಿಸಕೂಡದು ನಮ್ಮ ಭಾಷೆಯು ನ್ಯೂನತೆಯನ್ನು ಅದರ ಸಹಾಯವನ್ನು ಅಪೇಕ್ಷಿಸಬೇಕು || ಎಂದು ಸುಪ್ರಸಿದ್ಧ ಆಂಗ್ಲಗ್ರಂಥಕಾರನಾದ ಡ್ರಾಯುಡನ್ನನ (Dryden) ಅಭಿಪ್ರಾಯವಿದೆ.

ಈ ಎಲ್ಲಾ ಅಭಿಪ್ರಾಯಗಳನ್ನು ಜ್ಞಾಪಕದಲ್ಲಿಟ್ಟುಕೊಂಡು, ಅನ್ಯಭಾಷೆಯ ಶಬ್ದಗಳನ್ನು ಕೋಶದಲ್ಲಿ ಸಂಗ್ರಹಿಸಬೇಕು

(೬) ಗ್ರಂಥಗಳ ಭಾಷೆಯ ಗುಣದೋಷಗಳನ್ನು ಪರೀಕ್ಷಿಸುವ ಒಂದು ಸಭೆಯನ್ನು ನಿರ್ಮಿಸುವುದು.

* ನೀರಕ್ಷೀರವಿವೇಕೇ ಹಂಸಾಽಽಲಸ್ಯಂ ತ್ವಮೇವ ತನುಷೇಚೇತ್ |
ವಿಶ್ವಸ್ಮಿನ್ನಧುನಾನ್ಯಃ ಕುಲವ್ರತಂ ಪಾಲಯಿಷ್ಯತಿ ಕಃ ||

(ಭಾಮಿನೀವಿಲಾಸ)

ಕರ್ಣಾಟಕದ ಯಾವ ಪ್ರಾಂತದಲ್ಲಿಯೇ ಆಗಲಿ ಕನ್ನಡ ಗ್ರಂಥವು ಬರೆಯಲ್ಪಟ್ಟಕೂಡಲೆ "ಕರ್ಣಾಟಕ ಸಾಹಿತ್ಯಪರಿಷತ್ತು"ನಂತಹ ವಿದ್ವತ್ಸಭೆಗೆ ಆ ಗ್ರಂಥದ ಮೂಲಪ್ರತಿಯನ್ನು ಕಳುಹಿಸಿಕೊಡಬೇಕು ಅವರು ಅದನ್ನು ಪರೀಕ್ಷಿಸಿ, ಅದರ

* "ಎಲೈ ಹಂಸಪಕ್ಷಿಯೆ ! ನೀರೂ ಹಾಲೂ ಇವುಗಳನ್ನು ಬೇರೆಬೇರೆ ಮಾಡುವುದಕ್ಕೆ ನೀನು ಸೋಮಾರಿಯಾದರೆ, ಈ ನಿನ್ನ ಕುಲವ್ರತವನ್ನು ಮತ್ತಾರು ಮಾಡುವರು.

ಲ್ಲಿದ್ದ ಭಾಷೆಯ ಗುಣದೋಷಗಳನ್ನು ವಿವರಿಸಿ, ಆ ಪ್ರತಿಯನ್ನು ಗ್ರಂಥಕರ್ತರಿಗೆ ಕಳುಹಿಸಬೇಕು ಇಂತಹ ವಿದ್ವತ್ಸಭೆಯು ಇಡೀ ಕರ್ನಾಟಕಕ್ಕೆ ಒಂದೇ ಒಂದು ಆಗಿರಬೇಕು ಹೀಗಾದರೆ, ಈ ಸಭೆಯವರು ನಿರ್ಣಯಿಸಿದ ಭಾಷೆಯೇ ಎಲ್ಲ ಗ್ರಂಥಗಳಲ್ಲಿಯೂ ವ್ಯಕ್ತವಾಗುವುದರಿಂದ ಗ್ರಾಂಥಿಕಭಾಷೆಯು ಸಹಜವಾಗಿ ಏಕರೂಪತೆಯನ್ನು ಹೊಂದುವುದು

ಆದರೆ ಈ ಸಭೆಯವರಲ್ಲಿ ಸತ್ಯಪ್ರೀತಿಯೂ ಶಾಂತಸ್ವಭಾವವೂ ಉದಾರ ಅಂತಃಕರಣವೂ ಕನ್ನಡಭಾಷೆಯ ಪೂರ್ಣಜ್ಞಾನವೂ ಅತ್ಯವಶ್ಯವಾಗಿ ಇರತಕ್ಕದು ಈ ವಿಷಯವಾಗಿ ಶ್ರೀಮಾನ್ ಎಚ್ ವಿ. ನಂಜುಂಡಯ್ಯನವರು ಅನ್ನುತ್ತಾರೆ 'ಮುಖ್ಯವಾಗಿ ಇಂತಹ ಸಂಘದಿಂದ ಗ್ರಂಥಗಳ ಗುಣದೋಷವಿಮರ್ಶೆ ಮಾಡುವ ಸಾಮರ್ಥ್ಯವುಳ್ಳ ಪ್ರಬಲವಾದ ಸಾಧನವಿದ್ದಂತಾಗುವುದು ಈ ಕೆಲಸಕ್ಕಾಗಿ ಧಾರಾಳವಾದ ಮನಸ್ಸನ್ನೂ, ಅಲ್ಪದೋಷಗಳನ್ನು ಲೆಕ್ಕಿಸದೆ ಗುಣಗ್ರಹಣ ಮಾಡುವ ತಾಳ್ಮೆಯನ್ನೂ ಪಡೆದ ಪಂಡಿತರ ಉಪಸಭೆಯೊಂದನ್ನು ನಿರ್ಮಿಸಿದರೇ ಆದರೆ ಈ ಮಹಾಕಾರ್ಯವು ಬಹುಸಮರ್ಪಕವಾಗಿ ನಡೆಯುವುದು , ಹಾಗಲ್ಲದೆ ತಮ್ಮ ತಮ್ಮ ಗ್ರಂಥಗಳಿಗೆ ಪ್ರಶಸ್ತಿಯನ್ನುಂಟುಮಾಡಿಕೊಳ್ಳುತ್ತಲೂ, ತಮ್ಮತಮ್ಮೊಳಗೇ ಒಬ್ಬರಿಗೊಬ್ಬರು ದಾಕ್ಷಿಣ್ಯದಿಂದ ಸಹಾಯಮಾಡುತ್ತಲೂ ಇರುವವರ ಕೈಗೆ ಈ ಕೆಲಸವು ಸಿಕ್ಕಿಹೋಯಿತೆಂದರೆ, ಉಪಕಾರವಾಗುವುದಕ್ಕೆ ಪ್ರತಿಯಾಗಿ ಅಪಾರವಾದ ಅನರ್ಥವುಂಟಾಗುವುದು '' ಈ ಉದ್ಗಾರಗಳನ್ನು ನೋಡಿದರೆ, ಮಹಾಶಯ ನಂಜುಂಡಯ್ಯನವರಲ್ಲಿ ಎಷ್ಟು ಔದಾರ್ಯಾನ್ವಿತ ಸತ್ಯಪ್ರೀತಿಯು ವಾಸವಾಗಿದೆಂಬುದು ಸಹಜವಾಗಿ ತಿಳಿಯುತ್ತದೆ ಇಂತಹ ಮಹನೀಯರಿಂದ ಆ ವಿದ್ವತ್ಸಭೆಯು ಅಲಂಕೃತವಾದರೆ, ಅಲ್ಪಾವಧಿಯಲ್ಲಿಯೇ ಆ ಸಭೆಯು ಲೋಕಪ್ರಿಯವಾಗುವುದಲ್ಲದೆ ಕನ್ನಡದ ಏಕೀಕರಣದಂತಹ ಕಾರ್ಯವೂ ಶೀಘ್ರವಾಗಿ ಕೊನೆಗಾಣುವುದು

ಈ ವಿದ್ವತ್ಸಭೆಗೆ ಮುಂಬಯಿ, ಮದ್ರಾಸ, ಮೈಸೂರು ಸರಕಾರಗಳ ಸಹಾಯವ ಆವಶ್ಯಕವಾಗಿರುದು, ಹೇಗೆಂದರೆ, ಈ ಸಭೆಯವರು ಮನ್ನಿಸಿದ ಗ್ರಂಥಗಳನ್ನೇ ಮಾತ್ರ ಶಾಲಾಪುಸ್ತಕಗಳನ್ನಾಯೂ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಉಪಚಿತವಾಗಿ ಕೊಡುವ ಪುಸ್ತಕಗಳನ್ನಾಗಿಯೂ ಮಾಡುವದು ಸರಕಾರದವರ ಕರ್ತವ್ಯವಾಗಿದೆ. ಇದರಿಂದ ಕನ್ನಡದ ಏಕೀಕರಣಕ್ಕೆ ಹೇಗೆ ಸಹಾಯವುಂಟಾಗಿದೆ ಎಂಬುದನ್ನು ಒಡೆದು ಹೇಳುವಕಾರಣವಿಲ್ಲ.

(೭) ಪತ್ರಿಕಾಕರ್ತರು ತಮ್ಮತಮ್ಮ ಪತ್ರಿಕೆಗಳಲ್ಲಿ ಕನ್ನಡನಾಡಿನ ಎಲ್ಲಾ ಪ್ರಾಂತಗಳಿಗೂ ಸರ್ವಸಾಮಾನ್ಯವಾದ ಭಾಷೆಯನ್ನು ಉಪಯೋಗಿಸುವುದು·—

ವಾರಪತ್ರಿಕೆಯ ಹಾಗು ಮಾಸಪತ್ರಿಕೆಯ ಸಂಪಾದಕರು ಪರಸ್ಪರ ಒಬ್ಬರಿಗೊಬ್ಬರು ತಮ್ಮತಮ್ಮ ಪತ್ರಿಕೆಗಳನ್ನು ಕಳುಹಿಸುತ್ತಿರುತ್ತಾರೆ. ಎಂದರೆ, ಪ್ರತಿಯೊಬ್ಬ ಪತ್ರಿಕಾಕರ್ತನ ಬಳಿಯಲ್ಲಿ, ಕನ್ನಡನಾಡಿನಲ್ಲಿ ಪ್ರಸಿದ್ಧವಾಗುತ್ತಿರುವ ಎಲ್ಲಾ

ವರ್ತಮಾನಪತ್ರಿಕೆಗಳೂ ಮಾಸಪತ್ರಿಕೆಗಳೂ ಅನಾಯಾಸವಾಗಿ ಬರುತ್ತಿರುತ್ತವೆ. ಆದುದರಿಂದ ಇವರಿಗೆ ಕರ್ನಾಟಕದ ಎಲ್ಲಾ ಪ್ರಾಂತಗಳ ಭಾಷೆಯು ಪರಿಚಯವಾಗುವುದಕ್ಕೆ ಉತ್ಕೃಷ್ಟವಾದ ಅನುಕೂಲತೆಯಿರುವುದು. ಈ ಉತ್ತಮವಾದ ಸಂಧಿಯನ್ನು ಈ ಪತ್ರಿಕಾಸಂಪಾದಕ ಮಹಾಶಯರು ವ್ಯರ್ಥವಾಗಿ ಕಳೆಯದೆ, ಅದರ ಉಪಯೋಗವನ್ನು ಮಾಡಿಕೊಂಡರೆ, ಕನ್ನಡದ ಏಕೀಕರಣದ ಕಾರ್ಯಕ್ಕೆ ಒಳ್ಳೆ ಬಲವಾದ ಸಹಾಯವು ದೊರೆತಂತಾಗುವದು. ಇವರು ಕನ್ನಡದ ಗ್ರಾಂಥಿಕರೂಪಗಳನ್ನು ಏಕರೂಪತೆಗೆ ತರಬೇಕೆಂಬ ವಿಚಾರವನ್ನು ಹೃದಯದಲ್ಲಿ ಜಾಗೃತವಾಗಿಟ್ಟುಕೊಂಡು, ಇತರ ಪ್ರಾಂತಗಳ ಕನ್ನಡ ಪತ್ರಿಕೆಗಳನ್ನು ಓದುತ್ತಿರಬೇಕು. ಆ ಪತ್ರಿಕೆಗಳೊಳಗಿನ ವಿಷಯದಕಡೆಗೆ ದುರ್ಲಕ್ಷ್ಯಮಾಡಿದರೂ ಚಿಂತೆಯಿಲ್ಲ; ಭಾಷೆಯಕಡೆಗೆ ಮಾತ್ರ ಮನಃಪೂರ್ವಕವಾಗಿ ಗಮನಿಸಬೇಕು. ಮತ್ತು ಆ ಪ್ರಾಂತಗಳ ಭಾಷೆಯಲ್ಲಿದ್ದ ಗುಣಗಳನ್ನು ಸ್ವೀಕರಿಸಿ ಅವಗಳನ್ನು ತಮ್ಮ ಪತ್ರಿಕೆಗಳಲ್ಲಿ ಉಪಯೋಗಿಸುತ್ತ ಸಾಗಿದರೆ, ಕ್ರಮಕ್ರಮದಿಂದ ಕನ್ನಡದ ಗ್ರಾಂಥಿಕ ರೂಪಗಳು ಏಕರೂಪತೆಯನ್ನು ಹೊಂದುವುವು.

(೮) ಕನ್ನಡ ಗ್ರಂಥಕಾರರು ಎಲ್ಲಾ ಕನ್ನಡ ಪ್ರಾಂತಗಳ ವಾಙ್ಮಯವನ್ನು ಅಧ್ಯಯನಮಾಡಿ, ಸರ್ವವು ಮಾನ್ಯವಾಗುವ ಗ್ರಾಂಥಿಕಭಾಷೆಯನ್ನು ಕಂಡುಹಿಡಿಯುವುದು

ಒಬ್ಬ ಸಂಸ್ಕೃತಕವಿಯು "ಕಾವ್ಯಶಾಸ್ತ್ರವಿನೋದೇನ ಕಾಲೋ ಗಚ್ಛತಿ ಧೀಮತಾಮ್" ಎಂದು ಹೇಳಿದ್ದಾನೆ. ಪಂಡಿತರು ಯಾವಾಗಲೂ ಕಾವ್ಯಶಾಸ್ತ್ರಗಳ ಅಧ್ಯಯನದಲ್ಲಿ ತಮ್ಮ ಆಯುಷ್ಯವನ್ನು ವೆಚ್ಚಮಾಡುತ್ತಿರುತಾರೆಂಬುದೇ ಇವನ ತಾತ್ಪರ್ಯ. ಯಾವ ಭಾಷೆಯಲ್ಲಿಯಾದರೂ ಇಂತಹ ಪಂಡಿತರೇ ಗ್ರಂಥಗಳನ್ನು ಬರೆಯುವುದಕ್ಕೆ ಅರ್ಹರು. ನಮ್ಮ ಕನ್ನಡ ಭಾಷೆಯಲ್ಲಿಯಾದರೂ ನಿಜವಾದ ಗ್ರಂಥಕಾರನು (ಪಂಡಿತನು) ಹೀಗೆಯೇ ಸದಾ ಕಾವ್ಯಶಾಸ್ತ್ರಗಳಲ್ಲಿ ಮಗ್ನನಾಗಿರುತ್ತಾನೆ. ಇಂತಹ ಶ್ರೇಷ್ಠಗ್ರಂಥಕಾರರಿಗೆ ನಾನು ಪ್ರಾರ್ಥಿಸುವುದೇನಂದರೆ, ನೀವು ಅನೇಕ ಶಾಸ್ತ್ರಗಳನ್ನು ಪ್ರತಿನಿತ್ಯದಲ್ಲಿಯೂ ಅಧ್ಯಯನಮಾಡುತ್ತೀರಿ. ಅದೇ ಮೇರೆಗೆ ಧಾರವಾಡ, ಮಂಗಳೂರು, ಮೈಸೂರು ಪ್ರಾಂತಗಳ ಭಾಷೆಯಲ್ಲಿ ರಚಿಸಲ್ಪಟ್ಟಿರುವ ಗ್ರಂಥಗಳನ್ನು ಭಾಷೆಯ ದೃಷ್ಟಿಯಿಂದ ಅಧ್ಯಯನಮಾಡಿ, ಕರ್ನಾಟಕದ ಎಲ್ಲಾ ಪ್ರಾಂತಗಳೂ ಸರ್ವಮಾನ್ಯವಾಗುವಂತಹ ಭಾಷೆಯೊಂದನ್ನು ಕಂಡುಹಿಡಿಯಿರಿ. ಗ್ರಾಂಥಿಕ ಭಾಷೆಯ ಉಗಮಸ್ಥಾನವು ಗ್ರಂಥಕರ್ತೃಗಳಾಗಿದ್ದಾರೆ. ಈ ಉಗಮಸ್ಥಾನವೇ ಕನ್ನಡದ ಏಕೀಕರಣದ ವ್ರತವನ್ನು ಸ್ವೀಕರಿಸಿದಮೇಲೆ ಕೇಳುವುದೇನು ? ಅಲ್ಪಾವಧಿಯಲ್ಲಿಯೇ ಗ್ರಾಂಥಿಕಭಾಷೆಯು ಏಕರೂಪತೆಯನ್ನು ಹೊಂದುವುದು.

(೯) ಕರ್ನಾಟಕ ಭೂಮಿಯು ಏಕಾಧಿಪತ್ಯಕ್ಕೆ ಒಳಪಡುವುದು.

ಏಕಾಧಿಪತ್ಯವು ಕೇವಲ ಗ್ರಾಂಥಿಕ ಭಾಷೆಯ ಏಕೀಕರಣಕ್ಕೆ ಒಂದೇ ಅಲ್ಲ,

ರೀತಿ, ನಡಾವಳಿ ಮೊದಲಾದ ಸರ್ವ ವಿಷಯಗಳ ಏಕೀಕರಣಕ್ಕೂ ಅನುಕೂಲವಾಗಿದೆ ಈ ಮಾತನ್ನು ಸಿದ್ಧಪಡಿಸುವುದಕ್ಕೆ ಜಗತ್ತಿನ ಇತಿಹಾಸದಲ್ಲಿ ಅನೇಕ ಉದಾಹರಣಗಳಿವೆ.

ಉಪಸಂಹಾರ.

ಶ್ರೀಜಗನ್ನಿಯಾಮಕನ ಕೃಪೆಯಿಂದ ಕನ್ನಡ ಭಾಷೆಯಲ್ಲಿ ಪ್ರತಿಭಾಸಂಪನ್ನ ಲೇಖಕರು ಅವತರಿಸಿದರೆಂದರೆ, ಈ ಕೃತ್ರಿಮ ಭೇದಗಳೆಲ್ಲ ಹೇಳಹೆಸರಿಲ್ಲದೆ ಓಡಿಹೋಗುವುವು ಅಂತಹ ಮಹಾಪುರುಷರು ಕನ್ನಡದ ಗ್ರಾಂಥಿಕರೂಪಗಳ ಏಕೀಕರಣಕ್ಕೆ ಈ ಕೃತ್ರಿಮೋಪಾಯಗಳನ್ನು ಅವಲಂಬಿಸಬೇಕಾಗುವುದಿಲ್ಲ ಅವರ ಪ್ರತಿಭಾಸಂಪನ್ನಭಾಷೆಯೇ ಈ ಕಾರ್ಯವನ್ನು ಮಾಡಿಬಿಡುವುದು. ಸಮಸ್ತ ಕನ್ನಡಿಗರೂ ಆ ಮಹನೀಯರ ಪ್ರಾಸಾದಿಕಭಾಷೆಗೆ ಮೋಹಿತರಾಗಿ, ತಮ್ಮ ಭೇದಗಳನ್ನು ಮರೆತು ಅವರನ್ನೇ ಹಿಂಬಾಲಿಸುವರು ಇದಕ್ಕೆ ಒಂದು ಚಿಕ್ಕ ಉದಾಹರಣವನ್ನು ಹೇಳಿ, ಈ ಲೇಖಣಿಕೆಯನ್ನು ಕೆಳಗೆ ಇಡುತ್ತೇನೆ

“ಸದ್ಬೋಧಚಂದ್ರಿಕೆ” ಎಂಬ ಮಾಸಪತ್ರಿಕೆಯು ಧಾರವಾಡ ಜಿಲ್ಲೆಯ ಗದಗಿನ “ಆನಂದವನ”ವೆಂಬ ಸ್ಥಳದಲ್ಲಿ ಪ್ರಸಿದ್ಧವಾಗುತ್ತಿದೆ. ಈ ಮಾಸಪತ್ರಿಕೆಯಲ್ಲಿ ಬಿ ವೆಂಕಟಾಚಾರ್ಯರಂತೆ ಕಾದಂಬರೀಲೇಖಕರೆಂದು ಪ್ರಸಿದ್ಧರಾದ ಶ್ರೀಯುತ ಗಳಗನಾಥರವರು ಸುಂದರವಾದಹಾಗು ಸುಲಭವಾದ ಭಾಷಾಸರಣಿಯಿಂದ ಕನ್ನಡದಲ್ಲಿ ಕಾದಂಬರಿಗಳನ್ನು ಬರೆಯುತ್ತಿರುವರು ಇವರ ಭಾಷೆಗೆ ಮೋಹಿತರಾಗಿ ಏಳುಸಾವಿರ ಜನರು ಈ ಮಾಸಪತ್ರಿಕೆಗೆ ಚಂದಾದಾರರಾಗಿದ್ದಾರೆ ಇವರಲ್ಲಿ ಸಾವಿರದ ಆರನೂರು ಜನರು ಮೈಸೂರು ಪ್ರಾಂತದವರಾಗಿದ್ದಾರೆ ! ಕನ್ನಡದ ಪುಸ್ತಕಗಳನ್ನು ಎಂದೂ ಕಣ್ಣೆತ್ತಿನೋಡದ ಹೈದರಬಾದ ಪ್ರಾಂತದ ಜನರು ಐದುನೂರು ಮಂದಿ ಇದ್ದಾರೆ !! ಮಂಗಳೂರ, ಮದ್ರಾಸ, ಬಳ್ಳಾರಿ, ಅನಂತಪುರ ಮೊದಲಾದ ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಈ ಮಾಸಪತ್ರಿಕೆಯು ಪ್ರವೇಶಮಾಡಿದೆ!!! ಈ ಮಾಸಪತ್ರಿಕೆಯೊಂದು ನದಿಯೆಂದು ಕಲ್ಪಿಸಿದರೆ, ಈ ನದಿಯ ಮಹಾಪ್ರವಾಹವು ತನ್ನ ಸುತ್ತುಮುತ್ತು ಹಾಕಿದಂಥಾ ಮಂಗಳೂರುಕನ್ನಡ, ಬಳ್ಳಾರಿಕನ್ನಡ, ಮೈಸೂರುಕನ್ನಡಗಳೆಂಬ ಕೃತ್ರಿಮಒಡ್ಡುಗಳನ್ನು ಕಿತ್ತುಒಗೆದು, ಒಳ್ಳೇ ಭರದಿಂದ ಎಲ್ಲಕಡೆಗೂ ಹರಿದುಹೋಗಿದೆ !!! ಇದೇ ಪ್ರತಿಭಾಸಂಪನ್ನಲೇಖಕರ ಪ್ರಭಾವವು ! ಇವರ ಮುಂದೆ ಯಾವ ಭೇದವೂ ನಿಲ್ಲಲಾರದು

ಹೋಗಹೋಗುತ್ತ ಇನ್ನೊಂದು ಸಂಗತಿಯನ್ನು ಹೇಳುವುದು ಅವಶ್ಯವಾಗಿದೆ ಏನಂದರೆ, ಗ್ರಾಂಥಿಕಭಾಷೆಯು ಏಕರೂಪತೆಯನ್ನು ಹೊಂದಿದಬಳಿಕವೂ ವಿಷಯಭೇದಗಳ ಅನುರೋಧದಿಂದ ಭಾಷಾಪದ್ಧತಿಯಲ್ಲಿಯೂ ಭೇದವುಂಟಾಗುತ್ತದೆ. ಕಾದಂ

ಬರಿ, ನಾಟಕಗಳ ಭಾಷೆಯೇ ಬೇರೆ, ಶಾಸ್ತ್ರೀಯಗ್ರಂಥಗಳ ಭಾಷೆಯೇ ಬೇರೆ. ಹೀಗೆ ವಿಷಯಭೇದದಿಂದ ಭಾಷೆಯಲ್ಲಿ ಬೇರೆಬೇರೆ ಪ್ರಕಾರಗಳು ಉತ್ಪನ್ನವಾಗುತ್ತವೆ ಹೀಗಾಗುವುದು ಸ್ವಾಭಾವಿಕವಾಗಿದೆ. ಆದುದರಿಂದ ಈ ಸಂಗತಿಯನ್ನು ಗ್ರಂಥಪರೀಕ್ಷಕರು ಚನ್ನಾಗಿ ಜ್ಞಾಪಕದಲ್ಲಿಡತಕ್ಕದಾಗಿದೆ

——— D. ———

ಪುಸ್ತಕಪರಿಚಯ.

ವಿವಿಧ ಜ್ಞಾನ ವಿಸ್ತಾರ:—ಮಹಾರಾಷ್ಟ್ರದಲ್ಲಿ ಅನೇಕ ದಿವಸಗಳಿಂದ, ನಡೆದುಬಂದು ಈಗ ಐವತ್ತರ ಮನೆಯಲ್ಲಿಯ ೪೮ನೆಯ ವರ್ಷವನ್ನು ಕಂಡ ಈ ಮಾಸ ಪತ್ರಿಕೆಯ ಅಭಿನಂದನವನ್ನು ನಾವು ಸ್ವಾಗತಪೂರ್ವಕವಾಗಿ ಇಲ್ಲಿ ಮಾಡುತ್ತಿರುವೆವು ಆಧುನಿಕವಾಙ್ಮಯಪ್ರಣೇತರಾದ ವಿಷ್ಣುಶಾಸ್ತ್ರೀ ಚಿಪಳೂಣಕರರ ಕ್ರಾಂತಿಕಾರಕವಾದ ನಿಬಂಧಮಾಲೆಯ (೧೮೭೪-೮೨) ಈಗಿನ ಆವೃತ್ತಿಯಲ್ಲಿಯೂ ಇದರ ನಾಮ ನಿರ್ದೇಶವಿದೆ ಮಹಾರಾಷ್ಟ್ರದಲ್ಲಿಯ ಸಾಪ್ತಾಹಿಕ ಜ್ಞಾನಪ್ರಕಾಶಕ್ಕೆ ೭೦ ಸುಮಾರು ವರ್ಷಗಳಾಗಿದ್ದು ಪೂಜ್ಯ ವಿಷ್ಣುಶಾಸ್ತ್ರಿಯವರಿಂದ ತಳಹದಿಯನ್ನು ಹಾಕಿಸಿಕೊಂಡ ಪುಣ್ಯಪತ್ತನ (Poona city) ದ ಕೇಸರೀಪತ್ರಕ್ಕೆ ೪೦ನೆಯ ವರ್ಷವು ನಡೆದಿದೆ

ಇರಲಿ, ಇಲ್ಲಿ, ವಿವಿಧಜ್ಞಾನ ವಿಸ್ತಾರದಲ್ಲಿಯ ಒಂದೆರಡು ಮಾತುಗಳ ವಿಷಯವಾಗಿಯೇ ನಮ್ಮ ಪ್ರಿಯಕನ್ನಡಿಗರಾದ ಅಕ್ಕತಂಗಿ ಅಣ್ಣತಮ್ಮಂದಿರಲ್ಲಿ ಕಿಂಚಿತ್ ನಿವೇದನಮಾಡಿಕೊಳ್ಳಬೇಕೆಂದು ಇದ್ದೇವೆ ಪ್ರಸ್ತುತ ಪುಸ್ತಕದಲ್ಲಿ ಈ ಸಾರೆ ಶ್ರೀಶಂಕರಾಚಾರ್ಯರೂ ಲೋಕಮಾನ್ಯರಾದ ಬಳವಂತರಾವ ಟಿಳಕರು ಇವರಲ್ಲಿ ಗೀತೆಯ ವಿಷಯವಾಗಿದ್ದ ಮತಭೇದ, ಮರಾಠೀ ವ್ಯಾಕರಣ, ಸಂಸ್ಕೃತ ವಾಙ್ಮಯ ವಿಷಯಕವಾದ ಸರ್ ಭಾಂಡಾರಕರರ ನಿಬಂಧ ಮೊದಲಾದ ಅನೇಕ ಲೇಖಗಳೂ ಕೆಲ ಕವಿತೆಗಳೂ ಬಂದಿವೆ. ಅವೆಲ್ಲವುಗಳ ಪರಾಮರ್ಶಕ್ಕೆ ಅವಕಾಶವೂ ಇಲ್ಲ. ಭಿನ್ನರುಚಿಗನುಸರಿಸಿ ಅವೆಲ್ಲವನ್ನೂ ಓದಲು ಪ್ರಕೃತ ಲೇಖಕನಿಗೆ ಆಗಿಯೂ ಇಲ್ಲ. ಅವನ್ನು ಉಳಿದವರು ನೋಡಲಿ.

ಈ ವರ್ಷದ ಮೊದಲನೆಯ ಸಂಚಿಕೆಯಲ್ಲಿ ಪ್ರೋ. ಕರ್ವೇ ಅವರ "ಆತ್ಮವೃತ್ತ" (Autobiography) ದ ಪರೀಕ್ಷಣವಿದೆ. ಮಹಾರಾಷ್ಟ್ರೀಯರ ಆಧುನಿಕ ಉನ್ನತಿಯ ವಿಷಯವಾಗಿ ಸ್ವತಂತ್ರವಾಗಿ ಸಾಂಗೋಪಾಂಗವಾದ ಒಂದು ನಿಬಂಧದಲ್ಲಿ ಬರೆದಿದ್ದೇವೆ. ನಾವು ಇಲ್ಲಿ ಹೇಳುವದೇನಂದರೆ, ಕೇವಲ ಉತ್ಸಾಹವೇನು ಮಾಡುವದೆಂದು ಕೆಲವರು ಕೇಳುವರು ; ಆದರೆ, ಮಲಗಿಕೊಂಡ ಕ್ರಿಯಾಶೂನ್ಯವಾದ ಪಾಂಡಿತ್ಯವಾದರೂ ಏನು ಮಾಡಬಲ್ಲದು ? ಶ್ರೀರಾಮನು ಕೋಕಿಸು

ತ್ತಿರುವಾಗ ವಾಲ್ಮೀಕಿ ರಾಮಾಯಣದಲ್ಲಿ ಲಕ್ಷ್ಮಣನು "ಉತ್ಸಾಹೋ ಬಲವಾನಾರ್ಯ ! ನಾಸ್ತ್ಯುತ್ಸಾಹಸಮಂ ಬಲಮ್'' ಎಂದು ಮೊದಲಾಗಿ ಹೇಳಿದಂತೆ, ಉತ್ಸಾಹದಿಂದಿದ್ದರೆ ಕಾಲಾಂತರದಿಂದ ಬೇಕಾದುದು ಆಗಬಹುದು. ವಿಶೇಷವೇನು ! ಉತ್ಸಾಹಶಾಲಿಗಳಾದ ಮರಾಠಿಗರು ರಾಜಾಶ್ರಯವೇನೂ ಇಲ್ಲದೆ ಕೇವಲ ದೀರ್ಘೋದ್ಯೋಗದಿಂದ ಮಾಡಿದ ಇತ್ತಲಾಗಿನ ವಾಙ್ಮಯೋನ್ನತಿಯ ಒಂದು ಅಂಶಕ್ಕಾದರೂ ನಾವು ಸಂಗಟ್ಟಲಾರೆವು ಪಂಪನಂತಹ ಅಸ್ಖಲಿತಶೈಲಿಯೂ, ಗಂಭೀರವಾದ ಭಾಷಾಧೋರಣೆಯೂ ಮರಾಠಿಯಲ್ಲಿಲ್ಲ ಆದರೆ, ಇತ್ತಲಾಗಿನ ಮರಾಠಿಯವರ ಗದ್ಯ, ಪದ್ಯ, ಕಾದಂಬರಿ, ನಾಟಕ ಮೊದಲಾದ ಅವುದಕ್ಕೂ ಕನ್ನಡವು ಸರಿಯಾಗಿಲ್ಲ ಆವ ಭಾಷೆಯಲ್ಲಿ ದಾಸಬೋಧ, ಗೀತಾರಹಸ್ಯದಂತಹ ತ್ರಿಜಗದ್ವಂದ್ಯಗಳಾದ ಗ್ರಂಥಗಳು ಆದುವೋ ಅದರ ಭಾಗ್ಯವನ್ನೆಷ್ಟೆಂದು ಹೇಳಬೇಕು ? ನಿಜವಾಗಿ ಪ್ರಾತಃಸ್ಮರಣೀಯರಾದ ಸದ್ಗುರು ಶ್ರೀಸಮರ್ಥರಾಮದಾಸಸ್ವಾಮಿಗಳು ನಮ್ಮಲ್ಲಿಯೂ ಆಗಿದ್ದಾರೆ ವಿದ್ಯಾರಣ್ಯಸ್ವಾಮಿಗಳು ಕನ್ನಡ ರಾಮದಾಸರೇ ಇದ್ದು, ಕನ್ನಡ ವಿದ್ಯಾರಣ್ಯರೆಂದರೂ ಸಲ್ಲುವರು ನಮಗೆ ಇಷ್ಟು ಉಜ್ವಲವಾದ ಪೂರ್ವೇತಿಹಾಸವಿದ್ದು ನಾವೇಕೆ ನಿರಾಶರಾಗಬೇಕು ? ಪ್ರಿಯವಾಚಕ ವಾಚಕಿಯರೇ, ತಮ್ಮ ಅನುಮತಿಯಿದ್ದರೆ, ನಾವು ಹೇಳುತ್ತೇವೆ —ಇತಿಹಾಸ—ಇತಿಹಾಸವೆಂದರೇನು ? ನಾವು ಮಾಡಿರುದೇ ಅಲ್ಲವೇ ಇತಿಹಾಸ ? ನಮಗೇಕೆಬೇಕು ಪೂರ್ವೇತಿಹಾಸ ? ಇರಲಿ , ನಮ್ಮ ಧೋಂಡೋಪಂತರಂತಹ ಸಾಧಾರಣ ಮನುಷ್ಯನು ೨೦—೨೫ ವರ್ಷಗಳ ದೀರ್ಘೋದ್ಯೋಗದಿಂದ ಸುಮಾರು ಲಕ್ಷ ರೂಪಾಯಿಗಳ ಸ್ವತಂತ್ರ ಕಟ್ಟಡಗಳಲ್ಲಿ ಸುಮಾರು ನಿನೂರುಕುಮಾರಿಯರು, ಸೌಭಾಗ್ಯವತಿಯರು, ವಿಧವೆಯರು ಮೊದಲಾದ ಹೆಂಗಸರ ಶಿಕ್ಷಣವನ್ನು ನಡೆಯಿಸಿರುದು ವಿಶರಿಂದ ? ಮಾನ್ಯರಾದ ಕೇಸರಿಕಾರರೂ ಇವರಿಗೆ ಉತ್ಕೃಷ್ಟಸುಧಾರಕರೆಂದಿದ್ದಾರೆ ಅನೇಕ ದಿವಸ ಅಪಮಾನವನ್ನು ಸಹಿಸಿ, ತಮ್ಮ ಎಲ್ಲ ದುಡ್ಡು ಸಂಸ್ಥೆ ಉಳಿದರೆ ಒರಲಿ, ಇಲ್ಲದಿದ್ದರೆ ಹೋಗಲಿ, ಎಂಬ ನಿರ್ಧಾರದಿಂದ ಅದರಲ್ಲಿ ಹಾಕಿ ಕೆಲಸ ನಡೆಯಿಸಿದ ಇವರ ಸ್ವಾರ್ಥತ್ಯಾಗವು ಪೂಜ್ಯಬುದ್ಧಿಯನ್ನು ಉತ್ಪನ್ನಮಾಡುತ್ತದೆ ! ಇಲ್ಲದಿದ್ದರೆ ಇದ್ದ ಬದುಕೆಲ್ಲವನ್ನೂ ಹೂಳಿಟ್ಟು ಹೊಟ್ಟೆಗೆಸಹ ತಿನ್ನದವರೆಷ್ಟುಮಂದಿ ? ಪತ್ನಿಯ ಅನುಮತಿಯಿಂದ ಹತ್ತುಸಾವಿರ ರೂ ಮಹಿಳಾವಿದ್ಯಾಲಯಕ್ಕೆ ಕೊಡುವ ಗಾಢಗಾಳರು ನಮ್ಮಲ್ಲಿಯೂ ಮುಂದೆ ಬರಲೆಂದು ಆನ್ನುತ್ತಿರುವೆವು

ಮಹಾರಾಷ್ಟ್ರದ ಆರ್ ನರಸಿಂಹಾಚಾರ್ಯರಾದ ರಾವಬಹದ್ದೂರ್ ಚಿಂತಾಮಣಿರಾವ್ ವೈದ್ಯರು ತುಳಸೀದಾಸನ ರಾಮಾಯಣಕ್ಕೂ, ವಾಲ್ಮೀಕಿ ರಾಮಾಯಣಕ್ಕೂ ತುಲನೆಮಾಡಿ ಬರೆದಿದ್ದಾರೆ ಇದರ ಸಮೂಲ ಭಾಷಾಂತರ ಪ್ರತಿಯು ಮರಾಠಿಯಲ್ಲಿ ಆಗಿದೆ ಅನೇಕ ದಿವಸಗಳಮೇಲೆ ರಾಮನಂತೆ ರಾಮನ ಆಪ್ತರೂ ಪೂಜ್ಯರೆನಿ

ಸಲು ರಸಭಂಗವಾದ ಮಾತನ್ನು ಇಲ್ಲಿ ಲಕ್ಷ್ಯದಲ್ಲಿಡಬೇಕು. ನಮ್ಮ ಪಂಪರಾಮಾಯಣಕ್ಕೂ ವಾಲ್ಮೀಕಿರಾಮಾಯಣಕ್ಕೂ ಬಹಳ ವ್ಯತ್ಯಾಸಗಳು ಆ ವಿಷಯವಾಗಿಯೊಂದು ಲೇಖಬರೆಯಬೇಕು ವೈದ್ಯರಾಯರು ಗ್ವಾಲ್ಹೇರ ದರಬಾರಿನಲ್ಲಿ ಹಿಂದಕ್ಕೆ ನ್ಯಾಯಾಧೀಶರಾಗಿದ್ದು ಐತಿಹಾಸಿಕವಿಷಯದಲ್ಲಿ ತಪಸ್ವಿಗಳಾದ ರಾಜವಾಡೆಯವರಂತೆಯೇ ಇವರೂ ಮಾನ್ಯರಾಗಿದ್ದಾರೆ

ವಿವಿಧಜ್ಞಾನವಿಸ್ತಾರದಲ್ಲಿಯ ಇನ್ನೊಂದು ಸವಿಮಾತು ಹೇಳದೆ ಇರುವುದೆಂದರೆ, ಮನೋಹರವಾದ ಶಾರದೀಯ ಪೌರ್ಣಿಮೆಯ ವಿಷಯವನ್ನು ಹೇಳುವಾಗ ಚಂದ್ರನ ಮಾತನ್ನು ಹೇಳದೆ ಇದ್ದಂತೆಯೇ ಆಗಬಹುದು! ಮೊನ್ನೆ ಹೋಳೀ ಹುಣ್ಣಿಮೆಯ ಸೂಟಿಯಲ್ಲಿ ಮಹಾರಾಷ್ಟ್ರ ಸರಸ್ವತಿಯ ಮಹೋತ್ಸವವು ಇಂದೂರ ದರಬಾರಿನಲ್ಲಿ ಆದುದನ್ನು ಕೇಳಿದವರಿಗೂ ಅತ್ಯಂತ ಉತ್ಸಾಹವೆನಿಸಬಹುದು ಇಂದೂರಿನವರು ಪ್ರತಿವರ್ಷವೂ ಗ್ರಂಥಪ್ರಕಾಶನಕ್ಕೆಂದು ಸುಮಾರು ಸಾವಿರ–ಹನ್ನೆರಡುನೂರು ರೂಪಾಯಿಗಳನ್ನು ಕೊಡುವಂತೆ ವ್ಯವಸ್ಥೆಮಾಡಿ ರಾಜಾಶ್ರಯವನ್ನು ಮನಸ್ಸಿನಲ್ಲಿಯೂ ತಾರದೆ ಆರುಸಾವಿರ ರೂಪಾಯಿಗಳನ್ನು ಕೊಡಹಾಕಲು ತಮ್ಮನ್ನು ಕೇಳುವ ಅಧಿಕಾರವು ಅವರಿಗೆ ಬಂದಿತೋ ಏನೋ ಎನ್ನುವಂತೆ, ಜನರು ಕೇಳುವುದಕ್ಕೂ ಮೊದಲೇ ಮಹಾರಾಜರು ಹತ್ತುಸಾವಿರ ರೂಪಾಯಿಗಳನ್ನು "ಪಾಶ್ಚಾತ್ತ್ಯರೂ ಕೊಂಡಾಡುವಂತೆ ನಮ್ಮಲ್ಲಿ ಗ್ರಂಥರಚನೆಯಾಗಲಿ'' ಎಂದು ಹೇಳಿ ಪರಿಷತ್ತಿಗೆ ಒಪ್ಪಿಸಿದರು ಸಮ್ಮೇಲನದ ಮನೋಹರವಾದ ವರ್ಣನೆಯನ್ನು ಮಾರ್ಚ ತಿಂಗಳ ಸಂಚಿಕೆಯಲ್ಲಿ ಒಲ್ಲವರು ಓದಬೇಕೆಂದು ನಮ್ಮ ಆದರಪೂರ್ವಕವಾದ ಸೂಚನೆಯಾಗಿದೆ ಈ ೯ ನೆಯ ಸಮ್ಮೇಲವಲ್ಲಿ ಸ್ವಯಂಸೇವಕರು (Volunteers) ಸಭಾಸದರಾಗಿ ಒಂದವರ ಸ್ವಾಗತವನ್ನು ಮಾಡಿದುದೂ, ಚಿಟಣೀಸರೆಂದರೆ ಗೌರವಕಾರ್ಯದರ್ಶಿಗಳು ಬಕ್ಷೀಸುಗಳ ಪಟ್ಟಿಯನ್ನು ಓದ್ಯವದೂ, ನಿಘಂಟುವಿನ ಸಂಸ್ಕರಣದ ವಿಷಯಕವಾದ ವಾದವಿವಾದವೂ, ರಾ ರಾ ಮುಳೇ ಎಂಬ ಸದ್ಗೃಹಸ್ಥರು "ನಾನು ಭಿಕ್ಷೆಬೇಡುತ್ತೇನೆಂ''ದು ಹೇಳಿ ತಮ್ಮ ಟೊಪ್ಪಿಗೆಯನ್ನು ತಿರಿವಿಹಿಡಿದು ತುಂಬಿದ ಸಭೆಯಲ್ಲಿ ಅದನ್ನು ದುಡ್ಡಿಗಾಗಿ ತಿರುಗಿಸಿದುದೂ ಮೊದಲಾದ ವರ್ಣನೆಗಳು ಕೇಳಿದವರಿಗೂ ಎಷ್ಟು ಉತ್ಸಾಹಪ್ರದವಿವೆ ನೋಡಿರಿ! ಈ ಮಾತು ಬರೆಯುವಾಗಲೂ ಕೂಡ ನಾವು ರೋಮಾಂಚಿತರಾಗಿರುವೆವು ಇಂದೂರಕರರ ಸ್ವಾಗತವನ್ನು ಅನುಭವಿಸಿ ಅನೇಕರಿಗೆ ತಾವು ವರಪಕ್ಷದ ಬೀಗರಂತೆ ಎನಿಸಿತಂತೆ! ಆ ಸಭೆಯಲ್ಲಿಯ ಆವೇಶಯುಕ್ತವಾದ ವಾದವಿವಾದಗಳಲ್ಲಿಯೂ ವಿಶಿಷ್ಟ ಗ್ರಂಥರಚನೆಯ ಬಗ್ಗೆ ಬಕ್ಷೀಸುಗಳನ್ನು ಜಾಹೀರು ಮಾಡುವಾಗಲೂ ಶ್ರೋತ್ರವರ್ಗದಲ್ಲಿಯ ಆ ಆನಂದಭರಿತವಾದ ಮುಖಚರ್ಯೆಗಳೂ, ಸಂತೋಷದಿಂದ ಹೃದಯಗಳೆಲ್ಲ ಉಕ್ಕಿಬಂದು ಅವರು ಅತಿ ಉತ್ಸಾಹದೊಡನೆ, ಚಪ್ಪಾಳೆಗಳ ಪ್ರಚಂಡವಾದ ಸಪ್ಪಳವನ್ನು ಮಾಡಿ ಗೊಂದಲವನ್ನು ಮಾಡುವುದೂ ಇವೆಲ್ಲ ಮಾತು ಊಹಿಸಿಯೇ ತಿಳಿದುಕೊಳ್ಳ

ಬೇಕಾಗಿದೆ. ಈ ಎಲ್ಲ ಮಾತುಗಳಿಗಿಂತಲೂ ಉತ್ಸಾಹಪ್ರದವಾದ ಮಾತು ಅವು ದೆಂದರೆ, ನಮ್ಮ ಮಾತೃಶ್ರೀಯವರಾದ ಕಾಶೀಬಾಯಿ ಕಾನಿಟಕರ್ ಎಂಬವರೂ ಸರದಾರ ಮಾಧವರಾವ ಕಿಬೆಯವರ ಪತ್ನಿಯವರಾದ ಸೌಭಾಗ್ಯವತಿ ಕಮಳಾಬಾಯಿ ಸಾಹೇಬರೂ ಆಡಿದ ಮಾತುಗಳೂ 'ಆಭಾರಪ್ರದರ್ಶನಗಳೂ' ಇವುಗಳಿಂದ ಸಭೆಯು ಮುಗಿಯುವಾಗ್ಗೆ ಸಳ ಉತ್ಪನ್ನವಾದ ಪಾರಮಾರ್ಥಿಕವಾದ ಶೋಭೆಯು! ಡಾಕ್ಟರ ಟಾಂಬೆಯವರು ಜನರಿಗೆ ಊಟಕ್ಕೆ ಬಡಿಸುವದನ್ನು ನೋಡಿ ಅವರ ಹೆಂಡತಿಯವರು ಅವರಿಗೆ ಶಾಬಾಸ ಅಂದುದೂ ಅದಕ್ಕೆ ಪ್ರತಿಯಾಗಿ ಅವರು ಸಭೆಯಲ್ಲಿ "ನನ್ನ ಹೆಂಡತಿಯು ಏನೋದವನ್ನು ಸ್ವೀಕರಿಸದಿದ್ದರೆ ನನಗೆ ಅಷ್ಟಕ್ಕೆ ಆದರೂ ಇನ್ನೊಬ್ಬ ಹೆಂಡತಿಯನ್ನು ನೋಡಬೇಕಲ್ಲವೇ ?" ಎಂದು ಹೇಳುವಾಗ ಸಂಜೆಗೆ ಅವರಿಗೆ ಮನೆಯಲ್ಲಿ ಊಟವರ್ಜವಾಗುವದನ್ನು ಜನರು ತಿಳಿದರೋ ಎನ್ನುವಂತೆ ಚಪ್ಪಾಳೆಯನ್ನು ಹೊಡೆದರು.

ಸದ್ಗೃಹಸ್ಥರೇ, ನಾವು ಹೀಗೆ ವರ್ಣಿಸುತ್ತ ಹೋದಹಾಗೆಲ್ಲ ಅವಕಾಶವಿಲ್ಲ. ಈ ವರ್ಣನಶ್ರವಣದಿಂದ ಏನೂ ಉದಾಹರಣವನ್ನು ನಾವು ತೆಗೆದುಕೊಳ್ಳದಿದ್ದರೆ, ಎಲ್ಲವೂ ವ್ಯರ್ಥ! ಮಹನೀಯರೇ, ನಾವೂ ಹಿಂದಕ್ಕೊಮ್ಮೆ ಮರಾಠಿಗರಂತೆ ಈ ದೇಶವೆಲ್ಲವನ್ನೂ ಕಾವೇರಿ, ಗೋದಾವರಿಗಳ ಪರ್ಯಂತ ವ್ಯಾಪಿಸಿದ್ದಿಲ್ಲವೇ ? ಸಮಸ್ತ ಭೂತಳವೂ ಬೆಳಗುವ ಗ್ರಂಥರಚನೆಯು ನಮ್ಮಲ್ಲಿ ಆಗಿಲ್ಲವೇ ? ದೇಶಾಭಿಮಾನಿಗಳೇ, ಮತಭೇದಗಳಿಂದಲೇ ಉನ್ನತಿ, ಮತಭೇದಗಳಿಂದಲೇ ಉನ್ನತಿ! ಆದರೆ, ಪೂಜ್ಯ ವಿಷ್ಣುಶಾಸ್ತ್ರಿಯವರು—ಅವರು ನಮ್ಮವರೇ ಅಲ್ಲವೇನು ? ಮರಾಠಿಗರು ನಮ್ಮ ಹತ್ತಗಡೆಯ ಆಪ್ತರಲ್ಲವೇ? ಅವರು ಹೇಳುವಂತೆ ತತ್ತ್ವಮಸಿಯೆಂದರೆ ದುಡ್ಡನ್ನು ದೇಶಹಿತದ ಕೆಲಸಕ್ಕೆ ಒಪ್ಪಿಸಲಿಕ್ಕೆ ಹಿಂದೆಮುಂದೆ ನೋಡಕೆ ದೊಡ್ಡದೊಡ್ಡ ಜಗಳಗಳಲ್ಲಿಯೂ ಬಂಧುಪ್ರೀತಿ ವಿನಯಗಳನ್ನು ಬಿಡಬೇಡಿರಿ ಮತಭೇದ ಅವಶ್ಯಬೇಕು! ಮಾತೃಭಾಷೆಯ ಮೇಲೆ ನಿರ್ವ್ಯಾಜಪ್ರೇಮವನ್ನು ಮಾಡುವ ಉದಾರಹೃದಯರಾದ ತಮ್ಮ ಸ್ವಾರ್ಥತ್ಯಾಗದಿಂದಲೂ ದೀರ್ಘಪ್ರಯತ್ನಗಳಿಂದಲೂ ನಮ್ಮ ಪರಿಷತ್ತಿನ ಮುಂದಿನ ಧಾರವಾಡದಲ್ಲಿಯ ಸಮ್ಮೇಳನವಾದರೂ ಇದೇ ಮಾದರಿಯಲ್ಲಾಗಲೆಂದು ಕೇಳಿಕೊಂಡು ಕಿಂಚಿತ್ ವಿಸ್ತಾರವಾದ ಈ ಪರಿಚಯಲೇಖವನ್ನು ಮುಗಿಸಿ ತೇಜಸ್ವಿಯಾದ ಮಹಾರಾಷ್ಟ್ರ ಸಾಹಿತ್ಯೋದ್ಯಾನದಿಂದಲೂ ತೆರಳುತ್ತೇವೆ!

—— 0 ——

ಕರ್ಣಾಟಕ ಸಾಹಿತ್ಯಪರಿಷತ್ತಿನ ವಿಷಯ.

I

(1) ಐದು ಜನಗಳಿಗೆ ಮೀರದಂತೆ ಪಂಡಿತ ಸದಸ್ಯರುಗಳನ್ನು ಕಾರ್ಯನಿರ್ವಾಹಕಮಂಡಲಿಗೆ ಪಿಂಗಳಸಂವತ್ಸರಕ್ಕೆ ಪಂಡಿತಸದಸ್ಯರನ್ನು ಚುನಾಯಿಸುವ ವಿಷಯವನ್ನು ಕುರಿತು ೨೯-೭-೧೯೧೭ ರಲ್ಲಿ ಆದನಿರ್ಣಯ.

ಮ|| ರಾ|| ಚನ್ನಕೇಶವಯ್ಯಂಗಾರ್ಯರ ಮತ್ತು ಮ|| ರಾ|| ಬಿ. ರಾಮರಾಯರವರ ಸೂಚನೆಗಳನ್ನು ಓದಿ ಈ ಕೆಳಗೆ ಕಾಣಿಸಿರುವ ಐದುಜನ ಪಂಡಿತರುಗಳು ಪಿಂಗಳಸಂವತ್ಸರಕ್ಕೆ ಕಾರ್ಯನಿರ್ವಾಹಕ ಮಂಡಲಿಗೆ ಪಂಡಿತಸದಸ್ಯರುಗಳಾಗಿರತಕ್ಕದೆಂದು ನಿರ್ಣಯವಾಯಿತು.

ಮದರಾಸು ಪ್ರಾಂತಕ್ಕೆ.

ಪಂಡಿತರು ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು
ಪ್ರೆಸಿಡೆನ್ಸಿಕಾಲೇಜು, ಮದರಾಸು

ಧಾರವಾಡಪ್ರಾಂತಕ್ಕೆ

ಧಾರವಾಡದ ಕಾರ್ಯನಿರ್ವಾಹಕಮಂಡಲಿಯು ಸದಸ್ಯರೊಪ್ಪುವ ಪಂಡಿತರೊಬ್ಬರು.

ಮೈಸೂರು ಪ್ರಾಂತಕ್ಕೆ.

ಪಂಡಿತ ರಾಜಗೋಪಾಲಚಕ್ರವರ್ತಿಗಳು ಸರಳಕಏಸೂರಿ, ಬೆಂಗಳೂರು.
,, ಜಯರಾಮ ವೆಂಕಟಾಚಾರ್ಯರು, ಕೋಲಚೆಯೇಟು ಹೈಸ್ಕೂಲು, ಬೆಂಗಳೂರು.
,, ತಿಮ್ಮಪ್ಪಯ್ಯಶಾಸ್ತ್ರಿಗಳು, ಮೈಸೂರು ಟ್ರೈನಿಂಗು ಕಾಲೇಜು

(೨) ಪಿಂಗಳಸಂವತ್ಸರಕ್ಕೆ ಪರಿಷತ್ಪತ್ರಿಕೆಯ ಸಂಪಾದಕಮಂಡಲಿಯನ್ನು ನಿಯಮಿಸುವ ವಿಷಯವನ್ನು ಕುರಿತು ೧೯೧೭ನೆಯ ಇಸವಿ ಆಗಸ್ಟು ೨೬ನೆಯ ತಾರೀಖಿನಲ್ಲಿ ಆದ ನಿರ್ಣಯ.

ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಗೆ ಬೆಂಗಳೂರು ನಿವಾಸಿಗಳಾದ ಮೂರುಮಂದಿ ದೊಡ್ಡ ಮನುಷ್ಯರುಗಳು ಇರತಕ್ಕದೆಂದೂ, ಪಿಂಗಳಸಂವತ್ಸರಕ್ಕೆ ಕೆಳಗೆ ಹೇಳಿರುವ ಮೂರುಮಂದಿ ದೊಡ್ಡಮನುಷ್ಯರುಗಳು ಸಂಪಾದಕ ಮಂಡಲಿಗೆ ಮೆಂಬರುಗಳಾಗಿ ಇರತಕ್ಕದೆಂದೂ ನಿರ್ಣಯವಾಯಿತು

ಮ|| ರಾ|| ಆರ್. ರಘುನಾಥರಾಯರು ಬಿ ಎ., ಬೆಂಗಳೂರು (ಛೇರ್‌ಮನ್)
ಪಂಡಿತರು ಸರಳಕಏಸೂರಿ ರಾಜಗೋಪಾಲಚಕ್ರವರ್ತಿಗಳು.
,, ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು

II

ಕರ್ಣಾಟಕ ಸಾಹಿತ್ಯಪರಿಷತ್ತಿನ ದ್ವಿತೀಯವರ್ಷದಲ್ಲಿ ಜೂಲೈ ಪ್ರಾರಂಭದಿಂದ ಅಕ್ಟೋಬರ್ ಅಂತ್ಯದವರೆಗೆ ಸೇರಿರುವ ಸದಸ್ಯರುಗಳ ಪಟ್ಟಿ.

	ಆಜೀವಸದಸ್ಯರು	ಸೇರಿದ ತಾರೀಖು.
ಮ॥ ರಾ॥	ಎಮ್. ಎನ್. ಗೋಪಾಲರಾಯರು ಎಲಕ್ಟ್ರಿಕಲ್ ಆಪರೇಟರು, ಬೆಂಗಳೂರು.	೨೯-೭-೧೭
	ದ್ವಿತೀಯವರ್ಗದ ಸಾಧಾರಣ ಸದಸ್ಯರು	
ಮ॥ ರಾ॥	ಎಚ್. ಎಸ್. ಗೋವಿಂದರಾಯರು ಬಿ ಎ. ಸೆರಿಕಲ್ಚರಲ್‌ಫಾರಂ, ತಿರುಮಕೂಡ್ಲುನರಸೀಪುರ	೨೯-೭-೧೭
,,	ಎನ್. ಜಿ. ಪ್ರಭಪ್ಪನವರು ಹೆಡ್ಮಾಸ್ಟರು ನ್ಯಾಮತಿ, ಹೊನ್ನಾಳಿ ತಾಲೂಕು	,,
,,	ವೇದತೀರ್ಥ ಕಾಶೀನಾಥಶಾಸ್ತ್ರಿಗಳು, ಚಿತ್ರದುರ್ಗ	,,
,,	ಕೆ. ವಿಠ್ಠಲ ಮೂರ್ತ್ಯಾಚಾರ್ಯರು, ಮಂಚೇನಹಳ್ಳಿ ಎ. ವಿ. ಸ್ಕೂಲ್ ಹೆಡ್ಮಾಸ್ಟರು	೨೬-೮-೧೭
,,	ಕೆ ದುಗ್ಗಪ್ಪಯ್ಯನವರು ಶೇಕದಾರ್, ಶಿಕಾರಿಪುರ ಹೋಬಳಿ, ಶಿಕಾರಿಪುರ	,,

(ಹೊಸನಿರ್ಣಯದಂತೆ)

III

೧೯೧೭ ನೆಯ ಇಸವಿ ಜುಲೈ ೧ನೆಯ ತಾರೀಖಿನಿಂದ ಸೆಪ್ಟಂಬರ್ ತಿಂಗಳ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾಹಣದ ಪಟ್ಟಿ

೩-೭-೧೯೧೭	ಮ॥ ರಾ॥	ಸಿ ರಾಮರಾಯರು	೫-೦-೦
೨೮-೭-೧೯೧೭	,,	ಎಚ್ ವೆಂಕಟರಮಣಯ್ಯನವರು	೫-೦-೦
೨-೮-೧೯೧೭	,,	ಎನ್ ಜಿ ಪ್ರಭಪ್ಪನವರು	೪-೦-೦
೧೦-೮-೧೯೧೭	,,	ಬಿ ವೆಂಕಟಸುಬ್ಬರಾಯರು	೪-೦-೦
೩೧-೮-೧೯೧೭	,,	ಎಚ್ ಪಿ ಶೇಷಾಚಾರ್ಯರು	೩-೦-೦
೩-೯-೧೯೧೭	,,	ಎಚ್ ಎನ್. ವೆಂಕಟರಮಣಯ್ಯನವರು ಬಿ. ಎ.	೪-೦-೦
,,	,,	ಎಮ್ ಎನ್ ಗೋಪಾಲರಾಯರು	೫-೦-೦
೫-೯-೧೯೧೭	,,	ಸಿ ರಾಮರಾಯರು	೩-೦-೦
೬-೯-೧೯೧೭	,,	ಎಮ್. ಕೃಷ್ಣಪ್ಪನವರು	೫-೦-೦
,,	,,	ವಿಠ್ಠಲ ಮೂರ್ತ್ಯಾಚಾರ್ಯರವರು	೪-೦-೦
೭-೯-೧೯೧೭	,,	ವಿ ವಾಸುದೇವರಾಯರು ಬಿ. ಎ.	೮-೨-೦

೧೩-೯-೧೯೧೭	ಮ|| ರಾ|| ಎಚ್. ಎನ್. ಗೋವಿಂದರಾಯರು ಬಿ.ಎ.	೩-೦-೦
೧೮-೯-೧೯೧೭	,, ಎಚ್. ವಿ. ಸಂಜುಂಡಯ್ಯನವರು ಎಮ್.ಎ ಎಮ್. ಎಲ್.	೨೪-೦-೦
	ಒಟ್ಟು	೭೭-೦-೦
	ಹಿಂದೆ ವಸೂಲಾದ ಮೊತ್ತ	೧೯೯೧-೦-೦
	ಜುಮ್ಲಾ	೨೦೬೮-೦-೦

ಪರಿಷತ್ಪತ್ರಿಕೆಯನ್ನು ಕೊಂಡವರಿಂದ ಬಂದ ಮೊಬಲಗು

೨೨-೭-೧೯೧೭	ಮ|| ರಾ|| ಎ. ಲಕ್ಷ್ಮೀನಾರಾಯಣರವರು	೧-೦-೦
೮-೮-೧೯೧೭	,, ಎನ್. ಫರ್ನಾಂಡೆಸ್‌ಯವರು	೩-೦-೦
೧೩-೮-೧೯೧೭	,, ಎ ಲಕ್ಷ್ಮೀನಾರಾಯಣರವರು	೧-೦-೦
೧೪-೮-೧೯೧೭	,, ಎಚ್. ಜೆ. ಗೋಖಲೆಯವರು	೨-೦-೦
,,	,, ದಾವಣಗೆರೆ ಕನ್ನಡ ಹೈಸ್ಕೂಲು ಹೆಡ್ಮಾಸ್ಟರು	೩-೦-೦
೧೫-೮-೧೯೧೭	,, ವೈ ಕೆ ರಾಮರಾಯರು	೪-೦-೦
೧-೯-೧೯೧೭	,, ಶಿವಮೊಗ್ಗ ಶಿದ್ದಪ್ಪನವರು	೩-೦-೦
೫-೯-೧೯೧೭	, ಎ ಲಕ್ಷ್ಮೀನಾರಾಯಣರವರು	೧-೦-೦
೬-೯-೧೯೧೭	,, ಎಚ್ ಸುಬ್ಬರಾಯರು	೧-೦-೦
	ಒಟ್ಟು	೧೯-೦-೦

ಪರಿಷತ್ಪತ್ರಿಕೆ ಚಂದಾದಾರರಿಂದ ವಸೂಲಾದ ಮೊಬಲಗು.

೯-೭-೧೯೧೭	ಕೋಲಾರದ ಡಿಸ್ಟ್ರಿಕ್ಟು ನಾರ್ಮಲ್‌ಸ್ಕೂಲ್ ಹೆಡ್ಮಾಸ್ಟರು	೩-೦-
೨೩-೭-೧೯೧೭	ಚನ್ನಪಟ್ಟಣದ ಹೈಸ್ಕೂಲು ಹೆಡ್ಮಾಸ್ಟರು	೩-೦-೦
,,	ದೊಡ್ಡಬಳ್ಳಾಪುರದ ಕನ್ನಡ ಹೈಸ್ಕೂಲ್ ಹೆಡ್ಮಾಸ್ಟರು	೩-೦-೦
,,	ತೀರ್ಥಹಳ್ಳಿ ವೆಂಕಟೇಶರಾಯರಿಂದ	೩-೦-೦
೨-೮-೧೯೧೭	ಹೊಳಲ್ಕೆರೆ ಎ. ವಿ. ಸ್ಕೂಲ್ ಹೆಡ್ಮಾಸ್ಟರಿಂದ	೩-೦-೦
೧೪-೮-೧೯೧೭	ಮ|| ರಾ|| ಎಚ್ ಜೆ. ಗೋಖಲೆಯವರು	೩-೦-೦
೨೬-೯-೧೯೧೭	,, ಕೆ.ವೆಂಕಟಸ್ವಾಮಯ್ಯನವರು ಬಿ ಎ ಬಿ.ಎಲ್.	೩-೦-೦
೨೦-೯-೧೯೧೭	,, ಎಚ್. ನರಸಿಂಹಮೂರ್ತಿಯವರು ದಾವಣಗೆರೆ	೩-೦-೦
	ಒಟ್ಟು	೨೪-೦-೦

ಪರಿಷತ್ತಿನ ಪುಸ್ತಕ ಭಂಡಾರ.

VI

ಕರ್ನಾಟಕ ಸಾಹಿತ್ಯಪರಿಷತ್ತಿನ ಪುಸ್ತಕಭಂಡಾರಕ್ಕೆ ಉಚಿತವಾಗಿ ಕಳುಹಿಸಿರುವ ಗ್ರಂಥಗಳ ಮತ್ತು ದಾತೃಗಳ ಪಟ್ಟಿ

ಗ್ರಂಥಗಳ ಹೆಸರು	ಗ್ರಂಥಕರ್ತ	ದಾತೃಗಳು
ಕಮಲಾಕೋಮಲಾ	ದೊರೆಸ್ವಾಮಯ್ಯರ್	ಪಂಡಿತಕೃಷ್ಣಪ್ಪ
ಕಥಾರತ್ನಾಕರ ಭಾಗ 1	ಎಂ ಕೆ ತಿರುಮಲಾಚಾರ್ಯ	,,
ಪ್ರದ್ಯುಮ್ನಾನಂದ ನಾಟಕಂ	ವೆಂಕಟಾಚಾರ್ಯ	,,
ಕಾದಂಬರಿ	ಭಾಣಕವಿ	,,
ಹಂಸಸಂದೇಶ	ವೆಂಕಟನಾಥಾರ್ಯ	,
ವಿಕ್ರಮಾರ್ಕಮಹಾರಾಜ ಚರಿತ್ರಂ		,,
ಅನರ್ಘರಾಘವಂ	ಭಟ್ಟಮುರಾರಿ	,,
ಭಾರತಮಂಜರಿ	ನಾರಾಯಣಪಂಡಿತ	,, [ಕವಿ
ಚಂದ್ರಹಾಸಾಭ್ಯುದಯ	ಎಚ್ ವೆಂಕಟರಾಯಕವಿ	ಎಚ್. ವೆಂಕಟರಾಯ
ಜಾನಕೀಪರಿಣಯಂ	,,	,,
ಮಲ್ಲಿಕಾಮಾಕಂದಂ	,,	,,
ಶೃಂಗಾರಪ್ರಕರಣಂ	,,	,
ಕೃಷ್ಣನಾಮಾಮೃತಂ	,,	,, [ಯರು
ಸನಾತನಧರ್ಮ ಪ್ರಶ್ನೋತ್ತರಮಾಲೆ	ಆರ್ ರಘುನಾಥರಾವ್	ಆರ್ ರಘುನಾಥರಾ
ವ್ಯಾಕರಣೋಪನ್ಯಾಸಮಂಜರಿ	,,	,,
ಸನಾತನಧರ್ಮದೀಪಿಕೆ	,,	,,
ಗ್ಲಾಡ್‌ಸ್ಟನ್‌ರವರನುಡಿಗಳು	ಸೈ ಕ ರಾಮಚಂದ್ರರಾವ್	ಪಂಡಿತ ರಾಜಗೋಪಾಲಚಕ್ರವರ್ತಿಗಳು
ಸಂಗೀತಸಮಯಸಾರ	ಸೋಶೆಪದ್ಮರ್ ಸುಬ್ರಹ್ಮಣ್ಯಯರ್	,,
ಚಿತ್ರಚರಿತ್ರ	ರಾಜಗೋಪಾಲಚಕ್ರವರ್ತಿ	,,
ಶುಕಸಪ್ತತಿ	ಚಿಕ್ಕುಪಾಧ್ಯಾಯ	,,
ಶ್ರುತಿಗೋಪನ	ವಿ ಶ್ರೀಕಂಠಶಾಸ್ತ್ರಿಗಳು	,,
ವಾಣಿಜ್ಯಭೂಗೋಳ	ಜಿ ಎಸ್ ಸುಬ್ಬರಾವ್	,,

ಸಂಕ್ಷೇಪರಾಮಾಯಣ	ಕೆ ಆರ್ ನರಸಿಂಹಯ್ಯ	,,
ಆರ್ಯ ಮ್ಯಾರೇಜ ಆಫ್ ದ್ವಿಜ ಗರ್ಲ್ಸ್	ಟಿ ಪಿ ಶ್ರೀನಿವಾಸಶಾಸ್ತ್ರಿಗಳು	,,
ಶ್ರೀಮಜ್ಜಗದ್ಗುರು ಚಂಪೂಪ್ರಬಂಧ	ಶ್ರೀಕಂಠಶಾಸ್ತ್ರಿಗಳು	ರಾಜಗೋಪಾಲ ಚಕ್ರವರ್ತಿಗಳು
ಸಂಸ್ಕೃತಪ್ರವೇಶಿನಿ	ಜಿ ರಾಮಸ್ವಾಮಿಶಾಸ್ತ್ರಿಗಳು	,,
ಮಹಿಶೂರುರಾಜಚರಿತ್ರಂ	ಅಯ್ಯಾಶಾಸ್ತ್ರಿಗಳು	,,
ಬಾಲವ್ಯಾಕರಣ	ಕೆ ಆರ್ ನರಸಿಂಹಯ್ಯ	,,
ಬಾಗಿಲುಭದ್ರ	ಎಂ ಎ ರಾಮಾನುಜಯ್ಯಂಗಾರ್	,,
ಶ್ರೀರಾಮಕಥಾಪ್ರಸಂಗ	ಬಿ ರಾಮಕೃಷ್ಣರಾವ್	,,
ವಾಲ್ಮೀಕಿ, ಷೇಕ್ಸ್ಪಿಯರ್	,,	,,
ಆರ್ಯಧರ್ಮಪ್ರಕಾಶಿಕ	ಮ|| ರಾಮಾಶಾಸ್ತ್ರಿಗಳು	,,
ಹಿಂದೂಸ್ಥಾನದ ಭೂಗೋಳ	ಎ ಎಲ್. ಮುಗದಾಳ	,,
ಸುವ್ರತ	ಎಂ ಎ ರಾಮಾನುಜಯ್ಯಂಗಾರ್	,,
ರಾಯಲ್ ಸಂವರ್	ಎಂ ಕೆ ಆಚಾರ್ಯ	,,
ಕನ್ನಡ ಲೇಖನಲಕ್ಷಣ	ಎಂ ಎಸ್ ಪುಟ್ಟಣ್ಣನವರು	,
ಪುರುಷಾರ್ಥಮೀಮಾಂಸೆ	,,	,,
ಕನಕಾಲಂಕಾ	ಡಿ ಎ ಗುಂಡಪ್ಪನವರು	,,
ಜೀವಗೀತೆ ಆತ್ಮಗೀತೆ ಇತ್ಯಾದಿ ಕವಿತೆಗಳು	,,	,,
ಭೂಗೋಲಪದ್ಯ ಭಾಗ ೧	ಕೆ ಪಿ ಭಂಡಿವಾಡ	,,
ಪ್ರಮಾಣಪ್ರಮೇಯದೀಪಿಕೆ	ಎಂ ಎ ರಾಮಾನುಜಯ್ಯಂಗಾರ್	,,
ಶಬ್ದಕಲ್ಪದ್ರುಮ ೧೧ ವಾಲ್ಯೂಂಗಳು	ರಾಧಾಕಾಂತದೇವ	ಕ್ಯೂರೇಟರ್, ಬೆಂಗಳೂರು ಸೆಂಟ್ರಲ್ ಬುಕ್ಡಿಪೋ
ಬಾಲಮನೋರಮಾ (ಪೂರ್ವಾರ್ಧ)	ಚಂದ್ರಶೇಖರಶಾಸ್ತ್ರಿ ಆದನೂರು	,,
,, (ಉತ್ತರಾರ್ಧ)	,,	,,
ಅಷ್ಟಾಧ್ಯಾಯಿ	,,	,,
ಪ್ರತಾಪರುದ್ರೀಯ	ಕುಮಾರಸ್ವಾಮಿ	,,
ತರ್ಕಸಂಗ್ರಹ	,,	,,
ದಹರವಿದ್ಯಾಪ್ರಕಾಶಿಕ	ಚಂದ್ರಶೇಖರಶಾಸ್ತ್ರಿ	,,

—— —— ॥ —— ——

ಗ್ರಂಥವಿಮರ್ಶೆ.

ಸೊಬಗಿನಬಳ್ಳಿ—ಇದರಲ್ಲಿ ಏಳು ಮುಗುಳುಗಳಿವೆ. ಮೊದಲನೆಯ ಮುಗುಳು ಚೌಪದಿಯಲ್ಲಿ ಬರೆಯಲ್ಪಟ್ಟಿದೆ. ಎರಡನೆಯ ಮುಗುಳಿನ ವೃತ್ತಗಳು ಲಕ್ಷ್ಯವುಗಳಾಗಿವೆ. ಗ್ರಂಥಕರ್ತರು ಇದರಲ್ಲಿ ಪ್ರಾಸವನ್ನು ಐಚ್ಛಿಕವಾಗಿಟ್ಟಿರುವಂತೆ ಕಾಣುತ್ತದೆ. ಮೂರನೆಯ ಮುಗುಳಿನ ವೃತ್ತಗಳನ್ನು ಸೀಸಪದ್ಯಗಳೆಂದು ಮುದ್ರಿಸಿ ಅವನ್ನು [illegible] ಚೌಪದಿಯೆಂದು ಬರೆದಿದ್ದಾರೆ. [illegible] ಕೆಲವು ಸ್ಥಳಗಳಿಗೆ ಸೇರಿರುವ ಹಸ್ತದೋಷದಿಂದ ತಪ್ಪು ಬಿದ್ದಿರಬಹುದು. ನಾಲ್ಕನೆಯ ಮುಗುಳು ಲಲಿತರಗಳೆ. ಇದರಲ್ಲಿ ಚೌಪದಿಗಳಿಟ್ಟಿರುವಂತೆಯೇ ಎರಡು ಪ್ರಾಸಗಳನ್ನಿಟ್ಟಿರುತ್ತಾರೆ. ಐದನೆಯ ಮುಗುಳು ಸಾಂಗತ್ಯವು. ಸಾಂಗತ್ಯದ ಲಕ್ಷಣವು ಯಾವ ಛಂದೋಗ್ರಂಥದಲ್ಲಿಯೂ ಕಾಣುವುದಿಲ್ಲ. ಗ್ರಂಥಕರ್ತರು ಲಕ್ಷಣವನ್ನೂ ತಿಳಿಸಿದ್ದರೆ ವಾಚಕರಿಗೆ ಸ್ವಲ್ಪ ಅನುಕೂಲವಾಗುತ್ತಿತ್ತು. ಆರನೆಯ ಮುಗುಳು ಮಂದಾನಿಲರಗಳೆಯಲ್ಲಿಯೂ ಏಳನೆಯ ಮುಗುಳು ಕುಸುಮಷಟ್ಪದಿಯಲ್ಲಿಯೂ ಬರೆಯಲ್ಪಟ್ಟಿವೆ. ಗ್ರಂಥಾಂತದಲ್ಲಿ ಒಂದು ಚೌಪದಿಯೂ ಒಂದು ಕಂದಪದ್ಯವೂ ಸೇರಿಸಲ್ಪಟ್ಟಿರುವುದಲ್ಲದೆ ಕಥಾಸಾರಾಂಶವೂ ಕೊಡಲ್ಪಟ್ಟಿದೆ. ಮನ್ಮಥನು ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀಕೃಷ್ಣನ ಮಗನಾಗಿ ಶಂಬರಾಸುರನನ್ನು ಕೊಲ್ಲುವನು ಎಂಬ ಕಥೆಯು ವಿಸ್ತೃತವಾಗಿದೆ. ಕಬ್ಬಿಗರ ಕಾವದಂತಿರುವ ಈ ಗ್ರಂಥವು ಮೈಸೂರು ಕಾದಂಬರೀಸಂಗ್ರಹ ಗ್ರಂಥಮಾಲೆಯ ೪೩ನೆಯ ಪುಸ್ತಕವಾಗಿದೆ. ಇದರ ಬೆಲೆ ೨ ಆಣೆ.

ಸುಕುಮಾರಿ—ಇದೊಂದು ಸಣ್ಣ ಕಾದಂಬರಿ. ಮ॥ ರಾ॥ ರಾ॥ [illegible] ಅವರಿಂದ ರಚಿತವಾದುದು. ಮಧುರವಾಣೀ ಸಂಪಾದಕರು ತಮ್ಮ ಗ್ರಂಥಮಾಲೆಯ ೧೪ನೆಯ ಪುಸ್ತಕವಾಗಿ ಪ್ರಕಟಿಸಿದಾರೆ. ಭಾಷೆಯು ಶುದ್ಧವಾಗಿಯೂ ಶೈಲಿಯು ಸುಲಭವಾಗಿಯೂ ಇರುವುದು. ಪುಸ್ತಕವು ಓದುವವರ ಚಿತ್ತವನ್ನು ಹಿಡಿಸುವುದು. ಸದಾಚಾರದಲ್ಲಿರುವ ಸುಖಕ್ಕೆ [illegible] ತೋರಿಸುವುದು ಎಂಬ ಸಂಗ್ರಹಾರ್ಥವನ್ನು ತಿಳಿಸುವುದು. ಇದರ ಬೆಲೆ ೦-೨-೦.

ವಿವೇಕಮಂಜರಿ (ತೃತೀಯಗುಚ್ಛ)—ಮ॥ ರಾ॥ ಶ್ರೀನಿವಾಸರಾಯರವರಿಂದ ರಚಿತವಾದ ಈ ಪುಸ್ತಕವು ಮೈಸೂರು ಹನುಮಾನ್ ಕಂಪೆನಿಯವರಿಂದ ಮಧುರವಾಣೀ ಗ್ರಂಥಮಾಲೆಯ ನಾಲ್ಕನೆಯ ಪುಸ್ತಕವಾಗಿ ಪ್ರಕಟವಾಗಿದೆ. ಇದರಲ್ಲಿ ಏಕತೆ, ಕನ್ನಡಿಗರ ಕರ್ತವ್ಯ, ಭಾರತಿ, ಹಣ, ಬಲ ಮತ್ತು ಸೌಖ್ಯ, ಬುದ್ಧಿ, ಮನ, ಯೋಗ, ಪ್ರಾರ್ಥನೆ, ಕೃತಿಯ ಅವಶ್ಯಕತೆ ಎಂಬ ಹತ್ತು ಪ್ರಬಂಧಗಳು ಸಂಗ್ರಹಿತವಾಗಿವೆ. ಈ ಉಪನ್ಯಾಸಗಳನ್ನು ಓದುವುದರಿಂದ ಗ್ರಂಥಕರ್ತರಿಗಿರುವ ವಾಗ್ಧೋರಣೆಯೂ ಭಾಷಾಪಾರಿಶುದ್ಧ್ಯವೂ ಕಾಣಬರುವುವು. ದ್ವಿತೀಯಸ್ಥಾಯಿಯ ಪಾಠಶಾಲೆಗಳ ವಿದ್ಯಾ-

ರ್ಥಿಗಳು ಓದಬಹುದಾದ ಪುಸ್ತಕ. ಎಪ್ಪತ್ತು ಪುಟಗಳನ್ನುಳ್ಳ ಈ ಪುಸ್ತಕದ ಬೆಲೆ ೦-೮-೦ ಆಣೆ. ಪುಸ್ತಕವನ್ನಪೇಕ್ಷಿಸುವವರು ಗ್ರಂಥಕರ್ತರಿಂದಲೂ ಮತ್ತು ಮೈಸೂರು ಹನುಮಾನ್ ಕಂಪೆನಿಯಿಂದಲೂ ಪಡೆಯಬಹುದು

ಸೂರ್ಯೋದಯ ರಾಜ್ಯವು ಸುಕರ್ವ ಚಕ್ರಾಧಿಪತ್ಯವಾದುದು

ಇದನ್ನು ಬೆಂಗಳೂರಿನಲ್ಲಿರುವ ರಿಟೈರ್ಡ್ ಸಬಾರ್ಡಿನೇಟ್ ಸೆಷನ್ಸ್ ಜಡ್ಜರವರಾದ ಮ|| ರಾ|| ಎಸ್ ವರದರಾಜಯ್ಯಂಗಾರ್ಯರವರು ಬರೆದಿರುತ್ತಾರೆ ಈ ಪುಸ್ತಕದಲ್ಲಿ ಜಪಾನ್ ದೇಶದ ಭೂವಿವರಣೆಯೂ ವರ್ತಮಾನ ಭೂತಕಾಲಗಳ ವೃತ್ತಾಂತಗಳೂ, ಜಪಾನ್ ದೇಶವು ಸಾಮಾನ್ಯಸ್ಥಿತಿಯಲ್ಲಿದ್ದು ಹೇಗೆ ಲೋಕೋತ್ತರವಾದ ಪದವಿಯನ್ನು ಪಡೆಯಿತೆಂಬುದೂ, ಹಿಂದೆ ಉಳಿದಿರತಕ್ಕ ಸಕಲ ಜನಾಂಗವೂ ಇದರಿಂದ ಕಲಿಯತಕ್ಕ ವಿಷಯಗಳನ್ನು ಕಲಿತು ಆಚರಣೆಗೆ ತಂದರೆ ಜಪಾನಿನಂತೆ ಉನ್ನತಿಯನ್ನು ಹೊಂದುವುದರಲ್ಲಿ ಸಂಶಯವಿಲ್ಲವೆಂಬುದೂ, ಇನ್ನೂ ಇತರ ಮುಖ್ಯಸಂಗತಿಗಳೂ ಸುಲಭವಾದ ಕರ್ಣಾಟಕಭಾಷೆಯಲ್ಲಿ ಉಕ್ತವಾಗಿವೆ ಭಾಷೆಯ ವಿಷಯವಾದ ಅನೇಕ ದೋಷಗಳನ್ನು ಗ್ರಂಥಕರ್ತರು ಶುದ್ಧಾಶುದ್ಧಪತ್ರಿಕೆಯಲ್ಲಿ ತಿಳಿಸಿರುವುದು ಶ್ರೇಷ್ಠವಾದ ಸಂಗತಿಯು ಆದರೂ ಶ್ರೀಮಾನ್ ಯುವರಾಜ ಕಂಠೀರವನರಸಿಮ್ಹರಾಜ ಒಡೆಯರ್, ಪುನರಾಳ್ವಿಕೆಗೋಸ್ಕರ, ಇಷ್ಟೆ, ಆದ್ದರಿಂದ, ಮೊದಲಾದುವುಗಳನ್ನು ಗ್ರಂಥಕರ್ತರು ದ್ವಿತೀಯಮುದ್ರಣದಲ್ಲಿ ಸರಿಮಾಡುವರೆಂದು ಭಾವಿಸುತ್ತೇವೆ

ಈ ಮಹನೀಯರಂತೆ ಆಂಗ್ಲಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದಿರುವ ಒಬ್ಬೊಬ್ಬರೂ ಒಂದೊಂದು ಪುಸ್ತಕಗಳಂತೆ ಆಂಗ್ಲಭಾಷೆಯ ಗ್ರಂಥಗಳನ್ನು ಪರಿವರ್ತಿಸಿದರೂ ಕರ್ಣಾಟಕ ಭಾಷೆಯಲ್ಲಿರುವ ಕೊರತೆಯು ಪರಿಹಾರವಾಗುವುದೆಂಬುದರಲ್ಲಿ ಸಂಶಯವಿಲ್ಲ ಗ್ರಂಥವು ಪ್ರಚಾರಕ್ಕೆ ಬಂದರೆ ಅದರಲ್ಲಿರಬಹುದಾದ ಭಾಷೆಯ ದೋಷಗಳೇ ಮೊದಲಾದುವು ದ್ವಿತೀಯ ಮುದ್ರಣದಲ್ಲಿ ಸರಿಪಡುವುವು ಈ ವಿಷಯದಲ್ಲಿ ಗ್ರಂಥರಚನೆಗೇ ಕೈ ಹಾಕದಿರುವ ಪ್ರತಿಯೊಬ್ಬನೂ ‘ಗಚ್ಛತಃ ಸ್ಖಲನಂ ನ ದೋಷಾಯ’ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ಆಂಗ್ಲಭಾಷೆಯಲ್ಲಿರುವ ಬಗೆಬಗೆಯ ಶಾಸ್ತ್ರಗ್ರಂಥಗಳೇ ಮೊದಲಾದುವುಗಳನ್ನು ಕನ್ನಡದಲ್ಲಿ ವಿಷಯವು ವ್ಯತ್ಯಾಸವಾಗದಂತೆ ಬರೆದು ಭಾಷಾ ಸೇವೆಯನ್ನು ಮಾಡಬೇಕೆಂದು ಹಾರೈಸುತ್ತೇವೆ ಪ್ರಕೃತ ಗ್ರಂಥವು ನಮ್ಮ ಶ್ರೀಮದ್ಯುವರಾಜರವರಿಗೆ ಸಮರ್ಪಿತವಾಗಿ ಅನೇಕ ಭಾಷಾಭಿಜ್ಞರಿಂದ ಪ್ರಶಸ್ತಿಯನ್ನು ಪಡೆದಿದೆ ಮೈಸೂರು ಶ್ರೀಮನ್ಮಹಾರಾಜರವರ, ಶ್ರೀಮದ್ಯುವರಾಜರವರ, ಹಿಂದಿನ ಮತ್ತು ಈಗಿನ ಮಿಕಾಡೋ ಚಕ್ರವರ್ತಿಗಳವರ ಭಾವಚಿತ್ರಗಳಿಂದ ರಂಜಿಸುವ ಉತ್ತಮವಾದ ಈ ಗ್ರಂಥವನ್ನು ಸಕಲರೂ ಓದಿ ಗ್ರಂಥಕರ್ತರ ಶ್ರಮವನ್ನು ಸಾರ್ಥಕಗೊಳಿಸುವರೆಂದು ನಂಬುತ್ತೇವೆ ಸ್ಕೂಲುಗಳ ಮತ್ತು ಲೈಬ್ರರಿಗಳ ಉಪಯೋಗಕ್ಕೆ ತಕ್ಕ ಪುಸ್ತಕವೆನ್ನುವುದರಲ್ಲಿ ಸಂಶಯವಿಲ್ಲ

ಮೇಲೆ ಕಂಡ ಗ್ರಂಥಕರ್ತರಿಂದಲೇ ವಿರಚಿತವಾದ ಆಹಾರ ಶುದ್ಧಿಯೆಂಬ ಸಣ್ಣ ಗ್ರಂಥವನ್ನು ಸಮಗ್ರವಾಗಿ ಓದಿದೆವು. ಇದರ ಪ್ರಥಮಭಾಗವು ಶುದ್ಧಾನ್ನಪಾನಗಳು ಜ್ಞಾನವೃದ್ಧಿಕರಗಳೆಂಬ ವಿಷಯವನ್ನೂ ಮದ್ಯ ಮಾಂಸಗಳನ್ನು ಆಹಾರವಾಗಿ ಉಪಯೋಗಿಸುವುದು ಬಹು ಹಾನಿಕರವೆಂಬುದನ್ನೂ ತಿಳಿಸುತ್ತದೆ. ಇದರ ಎರಡನೆಯ ಭಾಗದಲ್ಲಿ ಮದ್ಯ ಭೇದಗಳೂ, ಅವುಗಳ ಫಲಾಫಲಗಳೂ, ಇದರಿಂದ ಮಿದುಳು, ಪಿತ್ತಕೋಶ ಮೊದಲಾದ ಅವಯವಗಳಲ್ಲಿ ಆಗುವ ವ್ಯತ್ಯಾಸವೂ, ಮದ್ಯಸಾರವು ಭಯಂಕರವಾದ ವಿಷವಾದುದರಿಂದ ಸರ್ಕಾರದವರು, ಜನಗಳು ಇದನ್ನು ಉಪಯೋಗಿಸದಂತೆ ಮಾಡಬೇಕೆಂಬುದೇ ಮೊದಲಾದ ಸಂಗತಿಗಳು ಹೇಳಲ್ಪಟ್ಟಿವೆ. ಆಹಾರ ಮತ್ತು ಪಾನ ಇವುಗಳ ಗುಣಾವಗುಣಗಳನ್ನು ನಿಷ್ಪಕ್ಷಪಾತದಿಂದ ತಿಳಿಸುತ್ತದೆ. ಈ ಪುಸ್ತಕದ ಬೆಲೆ ನಾಲ್ಕಾಣೆ. ಸಚಿತ್ರವಾದ ಈ ಪುಸ್ತಕವು ಪ್ರತಿಯೊಬ್ಬ ಕುಟುಂಬಿಯ ಮತ್ತು ವಿದ್ಯಾರ್ಥಿಯ ಸಂಗ್ರಹಕ್ಕೆ ಯೋಗ್ಯವಾದುದು. ಈ ಗ್ರಂಥವು ಮೈಸೂರ್ ವಿದ್ಯಾಶಾಖೆಯ ಅಧ್ಯಕ್ಷರಾದ ರಾವ್ ಬಹದೂರ್ ಮ|| ಎಂ. ಶಾಮರಾವ್ ಎಂ. ಎ. ಯವರ ಸನ್ನಿಧಿಗೆ ಸಮರ್ಪಿತವಾಗಿದೆ.

ಮಕ್ಕಳ ತಿದ್ದುವಿಕೆ

ಮೈಸೂರು ಟ್ರೈನಿಂಗ್ ಕಾಲೇಜು ಕಿಂಡರ್‌ಗಾರ್ಟನ್ ಸೆಕ್ಷನ್ ಟೀಚರ್ ಮ|| ರಾ|| ಎ. ಎನ್. ಸುಬ್ಬರಾಯರವರಿಂದ ರಚಿತವಾದ ಈ ಪುಸ್ತಕವು ಮೈಸೂರು ಸಬ್ ರಿಜಿಸ್ಟ್ರಾರ್ ಮ|| ಸಿ. ಕೃಷ್ಣಮೂರ್ತಿಶಾಸ್ತ್ರಿಗಳಿಂದಲೂ ಗ್ರಂಥಕರ್ತರಿಂದಲೂ ಪ್ರಕಟಿತವಾಗಿದೆ. ಇದರ ಮೊದಲನೇ ಭಾಗದಲ್ಲಿ ವಿದ್ಯಾಭ್ಯಾಸದ ಮುಖ್ಯ ಭಾಗಗಳಾದ ಮಾನಸಿಕ ಶಿಕ್ಷಣ, ಶಾರೀರಕ ಶಿಕ್ಷಣ ಮೊದಲಾದುವುಗಳೂ, ಎರಡನೆಯ ಭಾಗದಲ್ಲಿ ತಿದ್ದುವಿಕೆಯ ಪಾಠಗಳೂ, ಮೂರನೆಯ ಭಾಗದಲ್ಲಿ ತಿದ್ದುವಿಕೆಯ ವಿಮರ್ಶೆ ಮೊದಲಾದುವುಗಳೂ ಉಕ್ತವಾಗಿವೆ. ಗ್ರಂಥದ ಆದಿಯಲ್ಲಿ ಕೊಟ್ಟಿರುವ ಅಭಿಪ್ರಾಯಗಳನ್ನು ನೋಡುವಲ್ಲಿ ಮ|| ರಾ|| ಎಂ. ಎ. ಪಿ. ತಿರುಮಲಯ್ಯಂಗಾರ್ ಬಿ. ಎ., ಎಲ್. ಟಿ. ಅವರು "ನಾನು ೧೯೧೨-೧೪ ವರ್ಷಗಳಲ್ಲಿ ಮೈಸೂರು ಸರ್ಕಾರದ ನಾರ್ಮಲ್ ಸ್ಕೂಲಿನಲ್ಲಿ ಟ್ರೈನಿಂಗು ತರಗತಿಗಳಲ್ಲಿ ಕೊಟ್ಟ ಉಪನ್ಯಾಸಗಳು ಗರ್ಭೀಕರಿಸಲ್ಪಟ್ಟ ಪುಸ್ತಕದ ಅನೇಕ ಭಾಗಗಳಲ್ಲಿ ನನ್ನ ಮಾತೇ ಪ್ರತಿಫಲಿಸುತ್ತದೆ" ಎಂದು ಅಭಿಪ್ರಾಯಪಟ್ಟಿರುವುದರಿಂದ ಗ್ರಂಥಕರ್ತರು ಅವರ ಅನೇಕ ಉಪನ್ಯಾಸಗಳನ್ನು ಯಥಾವತ್ತಾಗಿ ಸೇರಿಸಿರುವರೆಂದು ಊಹಿಸಬಹುದಾಗಿದೆ. ಈ ಗ್ರಂಥವು ನಾರ್ಮಲ್‌ಸ್ಕೂಲುಗಳ ವಿದ್ಯಾರ್ಥಿಗಳಿಗೂ ಪಾಠಶಾಲೆಗಳ ಉಪಾಧ್ಯಾಯರುಗಳಿಗೂ ಉಪಯುಕ್ತವಾದುದೆನ್ನುವುದರಲ್ಲಿ ಸಂಶಯವಿಲ್ಲ. ಮೈಸೂರು ರಾಯಲ್ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿತವಾಗಿರುವ ೩೮ ಪುಟಗಳುಳ್ಳ ಈ ಪುಸ್ತಕದ ಬೆಲೆ ೧೨ ಆಣೆ.

ಪುಷ್ಪರಚನೆ—ಮೈಸೂರು ಗಾ|| ಟ್ರೈನಿಂಗ್ ಕಾಲೇಜ್ ಕಿಂಡರ್‌ಗಾರ್ಟನ್ ಸೆಕ್ಷನ್ ಟೀಚರು ಮ|| ರಾ|| ಎ. ಎನ್ ಸುಬ್ಬರಾಯರಿಂದ ವಿರಚಿತವಾದುದು. ಇದರ ಬೆಲೆ ೦—೧೪—೦ ಆಣೆ. ಗ್ರಂಥದ ಆದಿಯಲ್ಲಿ ಈ ಗ್ರಂಥದ ವಿಷಯವಾಗಿ ಮ|| ಸಿ. ಆರ್. ನಾರಾಯಣರಾವ್ ಎಂ. ಎ., ಎಲ್. ಟಿ. ಯವರೂ ಮತ್ತು ಚಿಕ್ಕಬಳ್ಳಾಪುರದ ಗರ್ಲ್ಸ್ ಸ್ಕೂಲ್ ಹೆಡ್‌ಮಿಸ್ಟ್ರೆಸ್ ಶ್ರೀ|| ಟಿ. ವೆಂಕಮ್ಮನವರೂ ಕೊಟ್ಟ ಸದಭಿಪ್ರಾಯಗಳು ಮುದ್ರಿತವಾಗಿವೆ. ಗ್ರಂಥಕರ್ತರು ಶ್ರಮಪಟ್ಟು ಬರೆದಿರುವ ಈ ಪುಸ್ತಕವನ್ನು ಪಾಠಶಾಲೆಗಳಲ್ಲಿ ಉಪಯೋಗಿಸಿ ಕೆಲಸಮಾಡುವುದರಿಂದ ಮಕ್ಕಳು ಬಗೆಬಗೆಯ ಬಣ್ಣದ ಹೂಗಳನ್ನೂ ಸ್ವಾಭಾವಿಕವಾದ ಪುಷ್ಪಗಳಂತೆ ರಚಿಸುವುದರಲ್ಲಿ ಸಂಶಯವಿಲ್ಲವೆಂದು ತೋರಬರುವುದು. ಗ್ರಂಥಕರ್ತರು ಹೊಸಬಗೆಯ ಈ ಪುಸ್ತಕವನ್ನು ನಮ್ಮ ಮಕ್ಕಳ ಉಪಯೋಗಕ್ಕಾಗಿ ಒದಗಿಸಿಕೊಟ್ಟುದಕ್ಕಾಗಿ ತುಂಬ ಹರ್ಷಿಸುತ್ತೇವೆ. ಗ್ರಂಥವು ಮೈಸೂರ್ ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಅವರಾದ ರಾವ್ ಬಹದೂರ್ ಮ|| ಎಂ. ಶಾಮರಾವ್ ಎಂ. ಎ. ಯವರ ಸನ್ನಿಧಿಗೆ ಸಮರ್ಪಿತವಾಗಿದೆ. ಮಕ್ಕಳ ಹಸ್ತಕೌಶಲವನ್ನು ಅಭಿವೃದ್ಧಿಪಡಿಸುವ ಈ ಪುಸ್ತಕವನ್ನು ಪಾಠಶಾಲೆಗಳ ಉಪಾಧ್ಯಾಯರೂ ಮಕ್ಕಳ ತಾಯ್ತಂದೆಗಳೂ ಮಕ್ಕಳಿಗೋಸ್ಕರ ಉಪಯೋಗಿಸಬಹುದು.

——0——

ಶ್ರೀ

ಕರ್ಣಾಟಕ ಸಾಹಿತ್ಯ

ಪರಿಷತ್ಪತ್ರಿಕೆ.

ಸಂಪುಟ ೨] ಪಿಂಗಳ ಸಂ|| ಪುಷ್ಯ—ಜನವರಿ ೧೯೧೮ [ಸಂಚಿಕೆ ೪

ಶ್ರೀಮತ್ಪಂಚಗುರುಭ್ಯೋನಮಃ

ಚಾವುಂಡರಾಯ ಪುರಾಣಂ.

* ಎಂ ಗುರುತು ಸಿದ್ಧಾಂತ್ವವನ್ನು ತೋರಿಸುತ್ತದೆ

ಕಂದ|| ಶ್ರೀವೃಷಭಜಿನೇಂದ್ರಾದಿಮ
ಹಾವೀರ ಜಿನಾಂತರಾದ ಜಿನಪತಿಗಳ್ ಭ ।
ವ್ಯಾವಳಿಗೆ ಚತುರ್ವಿಂಶತಿ
ದೇವರ್ ದಯೆಗೆಯ್ಗೆ ವಿಮಳರತ್ನತ್ರಯಮಂ ॥ ೧ ॥

ಶ್ರೀಮದಶೋಕಂ ಮುಕ್ಕೊಡೆ
ಚಾಮರತತಿ ದಿವ್ಯಭಾಷೆ ಸುರತೂರ್ಯರವಂ ।
ಪೂಮಳೆ ಕೇಸರಿ ಪೀಠಂ
ಭಾಮಂಡಲ ಮೆಸೆಯೆ ನೆಗಳ್ದನಾದಿಜಿನೇಂದ್ರಂ ॥ ೨ ॥

ವಸುಮತಿಗೆ ನೆಗಳೆ ತತ್ತ್ವಾ
ರ್ಥಸೂತ್ರಮಂ ಬರೆದು ಗೃಧ್ರಪಿಂಛಾಚಾರ್ಯರ್ ।
ಜಸದಿಂ ದಿಗಂತಮಂ ಮು
ದ್ರಿಸಿ ಜಿನಶಾಸನದ ಮಹಿಮೆಯಂ ಪ್ರಕಟಿಸಿದರ್ ॥ ೩ ॥

ಪ್ರತಿಭಾ ವಿಶೇಷದಿಂ ಸ
ನ್ಮತಿಯಿಂ ವಿರಚಿಸಿ ಕವೀಂದ್ರ ಸಮಿತಿಗೆ ಕವಿತಾ ।
ಚತುರತೆಯಂ ಮೆರೆದು ಜಗ
ನ್ನುತರೆನಿಸಿದರಲ್ತೆ ಸಿದ್ಧಸೇನಾಚಾರ್ಯರ್ ॥ ೪ ॥

ಅಭಿಮತವಾಗಿರೆ ತತ್ತ್ವಾ
ರ್ಥ ಭಾಷ್ಯಮಂ ತರ್ಕಶಾಸ್ತ್ರಮಂ ಬರೆದುವಹೋ ।

---

1 ಈ [illegible] 2 ಈ [illegible]

ವಿಭವದಿ ನಿಳಿಗೆಸೆದ ಸಮಂ
ತಭದ್ರದೇವರ ಸಮಾನರೆಂಬರುಮೊಳರೆ ? ||೫||

ಅವಿಚಾರಿತ ರಮಣೀಯರ
ಕವಿತೆಯದಿರ್ಕೆ ಸಮಂತಭದ್ರ ತ್ರಯಮಂ |
ಕವಿಗಳ್ ರತ್ನತ್ರಯ ಮಂ
ದೆ ಪಲಂ ಕೊಂಡಾಡಿದರ್ ಮಹೀಮಂಡಲದೊಳ್ ||೬||

[1] ಸುಕವಿ ಪ್ರಣುತರ್ ವ್ಯಾಕರ
ಣ ಕರ್ತೃಗಳ್ ಗಗನ ಗಮನ ಸಾಮರ್ಥ್ಯರ್ ತಾ |
ರ್ಕಿಕ ತಿಳಕರೆಂದು ಪೊಗೞ್ದುದು
ಸಕಲಜನಂ ಪೂಜ್ಯಪಾದ ಭಟ್ಟಾರಕರಂ ||೭||

[2] ಚರಿತ ಪುರಾಣದೊಳೊಂದನೆ |
ಬರೆದರ್ ಬರೆದಿರ್ಕ್ಕೆದರ್ ತ್ರಿಷಷ್ಟಿಶಲಾಕಾ ||
ಪುರುಷ ಪುರಾಣಮಂ ಕೇ |
ಪರಮೇಶ್ವರರಂತು ಜಸಕೆ ನೋಂತರುಮೊಳರೇ || ||೮||

[3] ಜಿನಮತತಿಳಕಂ ಸಂಯಮ |
ಧನರೆನಿಸಿದ ವೀರಸೇನ ಭಟ್ಟಾರಕರಂ ||
ಜಿನಸೇನಾಚಾರ್ಯರುಮಂ |
ಜಿನರೆನ್ನದೆ ಕೇಳ್ ಮುನೀಂದ್ರರೆಂಬರುಮೊಳರೆ ? ||೯||

[4] ವಿರಚಿತಸಿದ್ಧಾಂತ ಮಹಾ |
ಪುರಾಣನಯಶಾಸ್ತ್ರಕಾವ್ಯ ನಾಟಕತತಿಯಂ |
ಪರಿಣತರಿದರ್ಭಿವರ್ಣಿಸೆ |
ಧರೆಗೆಸೆದುದು ವೀರಸೇನ ಜಿನಸೇನಜಸಂ|| ||೧೦||

[5] ಆ ಸ್ತೋಂದಂ ಮಾಡಿದರ |
ಲ್ಲಾ ಸ್ತೋಂದಂ ಪೆಱರ್ಗೆ ಪೇೞ್ದರಲ್ಲನೆ ನೆಗೞ್ದರ್ ||
ತ್ರೈವಿದ್ಯರವರ್ ಗಣಧರ |
ದೇವರ್ ಗುಣಭದ್ರದೇವರೆನ್ನದರೊಳರೆ ? ||೧೧||

[6] ಒಡವಳಿದುದಱಿಂ ವಾಗ್ವಧು |
ವೊಡನೋದಿದಳೊಡನೆ ಕಲ್ತನಜನನೆ ಬೆರಲಂ ||
ಮಿಡಿದಿದರಲ್ಲದೆ ಜಡರೇಂ |
ನುಡಿವರೊ ! ಗುಣಭದ್ರದೇವರಂ ದೇವರುಮಂ || ||೧೨||

1 ಗ. ಜಗಳಲ್ಲಿ ಈ ಪದ್ಯವಿಲ್ಲ. 2 ಗ ಜಗಳಲ್ಲಿ ಈ ಪದ್ಯವಿಲ್ಲ. 3 ಘ. ಪ್ರತಿಯಲ್ಲಿ ಜಿನಪತಿ ತಿಲಕರ್ ಎಂದಿದೆ. 4 ಘ. ಪ್ರತಿಯಲ್ಲಿ ವಿರಚಿಸೆ ಎಂದಿದೆ. 5 ಗ. ಜ. ಗಳಲ್ಲಿ ಇಲ್ಲ. 1 ಈ ಪದ್ಯವು ಕ. ಗ. ಜ ಗಳಲ್ಲಿಲ್ಲ.

ಪೆಸರ್ಗೊಳೆ ಪಾಪಮನುೞಿಯಲೆ |
ಯಿಸುಗುಂ ಬಂದಿಸಿದೊಡಿಂದ್ರಪದಮಕ್ಕುಂ ಪೂ ||
ಜಿಸೆ ದೊಡಜರಾಮರತ್ವದೊ |
ಳೆಸೆದಿರ್ಪರ್ ಸರ್ವಸಾಧು ಭಟ್ಟಾರಕರುಂ || ||೧೩||

ಧವಳಯಶರ್ ತ್ರೈವಿದ್ಯ |
ಪ್ರವೇಕರಮಳಿನ ಚರಿತ್ರರೆನಿಸಿದರೀ ಭೂ ||
ಭುವನಕ್ಕೆ [2]ಚಂದ್ರಿಕಾ ವಾ |
ಟವಾಸದೊಳ್ ನೆಗೞ್ದ ಧರ್ಮಸೇನಾಚಾರ್ಯರ್ || ||೧೪||

ವೃತ್ತ|| ಅಸಿಧಾರಾ ವ್ರತದಿಂದೆ ಪೆಂಪೆಸೆಸಂ ಮುಳ್ಳಿಂದದೊಳ್ ಮುನ್ನೆ ಸಂ |
ನ್ಯಸನಕ್ಕೆಯ್ದೆ ನಿವೃತ್ತಿಗೆಯ್ದು ಕೊಪಣಾದ್ರೀಂದ್ರಕ್ಕೆ ವಂದಾಗಮೋ ||
ಕ್ತಸಮಾಧಾನ ವಿಧಾನದಿಂ ಮುಡಿಪಿ ಮುಕ್ತಿಸ್ಥಾನಮಂ ಮುಂಚಿಸಾ |
ಧಿಸಿಕೊಂಡೊಳ್ಕುಮಾರಸೇನ ಮುನಿಪಂಗಕ್ಕುಂ ನಿಸರ್ಗ್ಗಕ್ರಮೋ? ||೧೫||

ವಸುಧೆಗೆ ನೆಗೞ್ದರ್ ತಪದೊ |
ಳ್ಪೆಸೆದಿರೆ ತಮ್ಮಿಂದೆ ಜೈನಸಮಯೋನ್ನತಿ ರಂ ||
ಜಿಸೆ ನಾಗಸೇನರುಂ ವೀ |
ರಸೇನರುಂ ಚಂದ್ರಸೇನ ಮುನಿಪುಂಗವರುಂ || ||೧೬||

ವೃತ್ತ|| ಅನಿತುಪಶಾಂತರಾರನಿತು ನಿರ್ಮಲರಾರನಿತಾಪ್ತ ತತ್ತ್ವದರಾ |
ರನಿತು ಜಿನೇಂದ್ರಮಾರ್ಗಚರಿತಾರ್ಥಕರಾರನಿತಾಗಮಜ್ಞರಾ ||
ರನಿತು ವಿನೇಯಲೋಕಹಿತರಾರನಿತುಗ್ರತಪೋನಿಯುಕ್ತರಾ |
ರೆನೆ ನೆಗೞ್ದಾರ್ಯ ಸಂಘಮುನಿನಾಥರೆ ಜಂಗಮತೀರ್ಥರಲ್ಲವೇ? ||೧೭||

ಕಂದ|| ಶ್ರೀಮದಖಿಲಾವನೀತಳಶಿ
ಖಾಮಣಿ ರುಚಿರುಚಿರ ಚರಣರಪ್ರತಿಮತಪ |
ಶ್ರೀಮಹಿತರ್ [3]ನಯಸೇನ ಮು
ಹಾ ಮುನಿಪತಿಶಿಷ್ಯರಜಿತಸೇನಾಚಾರ್ಯರ್ || ೧೮ ||

ವೃತ್ತ|| ಶೋಧಿಸಲುಗ್ರಕರ್ಮಮಳಮಂ ಪ್ರತಿಬೋಧಿಸಲಾಪ್ತವರ್ಗಮಂ |
ಬಾಧಿಸಲನ್ಯವಾದಿನಿಕುರುಂಬಮನಕ್ಷಯ ಮೋಕ್ಷಲಕ್ಷ್ಮಿಯುಮಂ ||
ಸಾಧಿಸಲಟ್ಟಿಯುಂ ಬಗೆಯು ಮುಳ್ಳೊಡೆ ಚಿತ್ತವಿಶುದ್ಧಿಯಿಂದಮಾ |
ರಾಧಿಸು ಭವ್ಯ! ನೀನಜಿತಸೇನ ಮುನೀಂದ್ರರ ಪಾದಪದ್ಮಮಂ || ೧೯ ||

ಕಂ|| ಪ್ರಿಯದರ್ಶನರೆನೆ ಧರ್ಮ
ಪ್ರಿಯರೆನೆ ಧರ್ಮಾನುರಾಗಮಂ ಕೂಡೆ ಜಗ ||

---

1 ಘ. ದಲ್ಲಿ ಪಾಪಮನುರೆ ಗಳಿಯಿಸುಗುಂ ಎಂದು ಇದೆ 2 ಘ. ದಲ್ಲಿ ಚಂದ್ರಿಕಾವಾದಿ ದಂತದೊಳ್ ಎಂದಿದೆ 3 ಚ. ದಲ್ಲಿ ಆರ್ಯಸೇನಮ | ಹಾಮುನಿಪ.

ತ್ರಯದೊಳ್ ಮಾಡಿದ ಪಿಮಾ೯
ಡಿಯುಮಣ್ಣನುಮಜಿತಸೇನ ದೇವರಗುಡ್ಡರ್ ॥ ೨೦ ॥

ಗದ್ಯ॥ ಅಂತು ಗುಣಮಣಿ ವಿಭೂಷಣರುಂ,[1] ಸಕಲಾಲಂಕಾರರುಂ ಜಗತ್ಪವಿತ್ರ ಚಾರಿತ್ರರುಂ, ವಿಜಿತದುರಿತಾರಾತಿ ಸೇನರು,[2] ಮೆನಿಸಿದ ಅಜಿತಸೇನ ಭಟ್ಟಾರಕರೆ ಗುರುಗಳಾಗೆ, ಗಂಗ ಕುಲಾಚಲ ಶಿಖರ ಶೇಖರನುಂ, ಗಂಗ ಚೂಡಾಮಣಿಯುಂ, ಜಗದೇಕ ವೀರನುಂ, ಧರ್ಮಾವತಾರನು ಮೆನಿಸಿದ ನೊಳಂಬಕುಲಾಂತಕ ದೇವನೆ, ತನಗೆ ಪರಮಸ್ವಾಮಿಯಾಗೆ, ಜಗತ್ಪವಿತ್ರ ಬ್ರಹ್ಮ ಕ್ಷತ್ರಿಯ ವಂಶಮೆ ವಂಶಮಾಗೆ,

ವೃತ್ತ। ಚಲದಿಂ ರಾಜಾದಿತ್ಯನಂ ತಳ್ತಿಱಿದ ಭುಜಬಲಂ ರಾಜಸಿಂ ಕೊಂಡ ವೀರಂ ।
ನೆಲದಿಂದಂತಾಗೆ ಗೋವಿಂದರಸನಿರವೆ ಬೆಂಕೊಂಡ ಬಲ್ಲಾಳ್ತನಂ ಮಂ ॥
ಡಲರಾಜ್ಯಾಸಕ್ತನಂ ರಾಜಯನಸಧಿಕಸಂ ಪಾಳಿಯೊಳ್ ಕೊಂದಶೌರ್ಯಂ।
ಪಲಗಾರ್ಕಶ್ಚರ್ಯಪ್ರತಾಪೋನ್ನತನೆನೆನೆಗಳ್ದಂ ವೀರಮಾರ್ತಾಂಡದೇವಂ ॥೨೧॥

ಕಂ॥ ನಡೆಯುಲ್ ಬಗೆದಂ ತನ್ನ
ದೆಡೆಯಿಂದಂ ತಳ್ದೆನೆತ್ತ ಮೊಗಸಿದ ನಾವಂ ॥
ಗಡಿಯಿಟ್ಟ ನಣ್ಣನೆಂದುಂ
ಪ್ರಡಿಕೆಯ ಮೊಲದಂತೆ ತುಬ್ಬುತಿಪ್ಪರ್ ಪಗೆವರ್ ॥ ೨೨ ॥
ಮುಳಿದನಸಹಾಯ ವಿಕ್ರಮ
ನೊಳಕೊಳ್ವುದು ಕಾವುದೆಮ್ಮ ನೆಂದೆಂದರಿಪಾಂ ।
ಡಳಿಕರ್ ಭಯವಶದಿಂದೀ
ವಳಗೆಯ ಪರಿಯಂತೆ ಪೊಕ್ಕಪರ್ ಮನೆಮನೆಯಂ ॥ ೨೩ ॥

ಗದ್ಯ॥ ಇಂತೆನಿಸಿ ನೆಗಳ್ದ ಸಮ್ಯಕ್ತ್ವ ರತ್ನಾಕರಂ ಶ್ರೀಮಚ್ಚಾವುಂಡರಾಜಂ,
ವಿರಚಿಸಿದರ್ ಮುನ್ನೆ ಮಹಾ
ಪುರಾಣಮಂ ನೆಗಳ್ದ ಕೂಚಿ ಭಟ್ಟಾರಕರುಂ ॥
ಪರಮಶ್ರೀ ನಂದಿ ಮುನೀ
ಶ್ವರರುಂ ತದನಂತರಂ ಜಿನಾಗಮ ತಿಲಕರ್ ॥ ೨೪ ॥

ವೃತ್ತ॥ ಕವಿಪರಮೇಶ್ವರರ್ ಬರೆದುದಂ ಜಿನಸೇನ ಮಹಾಮುನೀಶರೀ ।
ಯುವನಿಗೆ ಪೇೞ್ದುಪಾಣೆ ಗುಣಭದ್ರ ಮುನೀಶ್ವರರೆಯ್ದೆ ಪೇೞ್ದ ಪ ॥
ಲ್ಲವಿಸಿದುದಂ ತ್ರಿಷಷ್ಟಿ ಪುರುಷ ಪ್ರತಿಬದ್ಧ ಪುರಾಣಮಂ ಮಹೋ ।
ತ್ಸವದೊಳೆ ಭವ್ಯಕೋಟಿಗಱಿಯಲ್ ಬರೆದಂ ಗುಣರತ್ನ ಭೂಷಣಂ ॥ ೨೫ ॥

ಗದ್ಯ॥ ಕಲ್ಯಾಣಾರ್ಥಿಯಪ್ಪಾತಂ ವಿವಕ್ಷಿತಮಪ್ಪ ವಸ್ತುವಂ ಪೇೞ್ವಾಗಳ್ ಮುನ್ನಮಾಪ್ತಂ, ಆಗಮಂ, ವಕ್ತೃ, ಕಥೆ, ಶ್ರೋತೃ, ಎಂಬಿವಂ ಪೇೞ್ವುದು ಅವಱೊಳ್

---

1 ಜ. ಪ್ರತಿಯಲ್ಲಿ ಯಶೋಲಂಕಾರರುಂ 2 ಜ ಪ್ರತಿಯಲ್ಲಿ ಜನಸೇನ ಎಂದಿದೆ. 3 ಘ. ದಲ್ಲಿ ಪೆರೆಯಂತೆ ಎಂದಿದೆ.

ಮೊದಲಾಪ್ತನೆಂಬೊ ನಷ್ಟಾದಶ ದೋಷರಹಿತನಪ್ಪಂ, ಎರಡನೆ ಯಾಗಮಮೆಂಬುದು ಆಪ್ತ ಮುಖವಿನಿರ್ಗತಮುಂ, ಪೂರ್ವಾಪರ ವಿರೋಧ ರಹಿತಮುಂ, ಸಪ್ತಭಂಗಿಸಮಾಲಿಂಗಿತಮುಂ, ಸ್ಯಾದ್ವಾದೋಪಲಕ್ಷಿತಮುಂ, ಯಥಾವಸ್ಥಿತ ಸಮಸ್ತ ವಸ್ತುಸ್ವರೂಪ ನಿರೂಪಕಮುಮಪ್ಪುದು, ಮೂಱನೆಯ ವಕ್ತೃವೆಂಬೊಂ ಪ್ರವಯಸ್ಸನುಂ, ವಪುಷ್ಮಂತನು ಮರೋಗನುಂ, ಬಹುಶ್ರುತನುಂ ಪ್ರಗಲ್ಭನುಂ ಮೇಧಾವಿಯುಂ [1]ನಿರೂಪಕ್ರಿಯಾಪ್ರವೃತ್ತನುಂ ಚಾರಿತ್ರವಂತನು ಮೆಂದಷ್ಟಗುಣ ಸಮನ್ವಿತನಕ್ಕುಂ

ಅಲ್ಲಿ ಪ್ರವಯಸ್ಸನೆಂಬೊನತಿವೃದ್ಧನು ಮತಿ ಬಾಲಕನುಮಲ್ಲದೆ ಸಮತಿಕ್ರಾಂತ ಷೋಡಶವರ್ಷನು ಮನತಿಕ್ರಾಂತ ಸಪ್ತತಿಸಂವತ್ಸರನುಮಕ್ಕುಂ, ವಪುಷ್ಮಂತನೆಂಬೊ ನಹೀನ ಪಂಚೇಂದ್ರಿಯನುಂ ಕಲ್ಯಾಣಶರೀರನುಂ ಶ್ರೋತೃಜನ ಮನೋಹಾರಿ ಹಿತಮಿತಾಸಂದಿಗ್ಧಮಧುರವಚನನುಮಕ್ಕುಂ, ಅರೋಗನೆಂಬೊಂ ವಾತಪಿತ್ತ ಶ್ಲೇಷ್ಮ ಸನ್ನಿಪಾತಾದಿ ವ್ಯಾಧಿ ವಿರಹಿತ ಶರೀರನಕ್ಕುಂ, ಬಹುಶ್ರುತನೆಂಬೊಂ ದ್ವಾದಶಾಂಗ ಚತುರ್ದಶಪೂರ್ವ ಪ್ರಕೀರ್ಣಕಾರ್ಥ್ಯಮಸಂಗಳೊಳ್ ಗ್ರಂಥಾರ್ಥ ಕುಶಲನಪ್ಪೊಂ, ಪ್ರಗಲ್ಭನೆಂಬೊಂ ದೇವಾಸುರ ಮನುಷ್ಯ ಸಭೆಯೊಳ್ ನಿರ್ಭಯನು ಮುನ್ನತ ಲಲಾಟನುಮನುದ್ಧತಕಂಠನುಮಾಗಿ ತತ್ತ್ವಪ್ರತಿಪಾದನ ಸಮರ್ಥನಪ್ಪೊಂ, ಮೇಧಾವಿಯೆಂಬೊ ನವಗ್ರಹೇಹಾವಾಯಧಾರಣಾ ಗುಣಯುಕ್ತನಪ್ಪೊಂ, ನಿರೂಪ ಕ್ರಿಯಾಪ್ರವೃತ್ತನೆಂಬೊಂ ನಾನೆಂತು ತತ್ತ್ವಜ್ಞನಾದೆನೆನ್ನಂ ಪೊದ್ದಿದ ಜನಂಗಳುಮಂತೆ ತತ್ತ್ವಜ್ಞರಕ್ಕೆಂದು ಖ್ಯಾತಿಭೋಜನಪಾನೋಪಕರಣಾದಿ ಪೂಜೆಗಳನಪೇಕ್ಷಿಸದೆ ತತ್ತ್ವೋಪದೇಶಂಗೆಯ್ವೊಂ, ಚಾರಿತ್ರವಂತನೆಂಬೊಂ ಜಿನಮತಗತ ವಿಧಾರ್ಥ ಸಂಲಬ್ಧ ತಮತಿಯುಂ, ಪ್ರಜ್ಞಾಸಾಪಜ್ಞನುಂ, ತ್ರಿಗುಪ್ತಿಗುಪ್ತನುಂ, [2]ತ್ರಿದಂಡ ತ್ರಿಶಲ್ಯ ತ್ರಿಗಾರವ ವಿರಹಿತನುಂ, ಚತುಷ್ಕಷಾಯಮಥನನುಂ, ಚತುರ್ವಿಧ ವಿಕಥಾವಿರಕ್ತನುಂ, ಚತುರ್ವಿಧ ಬಂಧ ವಿಶೇಷಜ್ಞನುಂ, ಚತುರ್ವಿಧ ಸತ್ಯಕಥಾಭಿರತನುಂ, ಪಂಚಸಮಿತಿಸಮೇತನುಂ, ನಿರುದ್ಧಪಂಚಾಸವನುಂ, ಷಡಾವಶ್ಯಕ ಸಂಯುಕ್ತನುಂ, ಅಪಗತಸಪ್ತಭಯನುಂ, ಅಷ್ಟಮದವ್ಯಪೇತನುಂ, ನವವಿಧ ಬ್ರಹ್ಮಚರ್ಯೋಪೇತನುಂ, ಪರಿಗೃಹೀತ ದಶವಿಧ ಶ್ರಮಣಧರ್ಮನುಂ, ವಿನಿಶ್ಚಿತೈಕಾದಶೋಪಾಸಕಸ್ಥಾನನುಂ, ದ್ವಾದಶವಿಧ ತಪೋಯುಕ್ತನುಂ, ತ್ರಯೋದಶವಿಧ ಕ್ರಿಯಾನಿರತನುಂ, ಆಚಾರಸೂತ್ರ ವ್ಯವಹಾರ ದೃಷ್ಟಿವಾದ ಕುಶಲನುಂ, ವೇದವೇದಾಂಗ ನ್ಯಾಯಶಬ್ದಾರ್ಥವೇದಿಯುಂ, ಪರವಾದಿ ದರ್ಪಘಾತನ ಪರಿಣತನುಂ, ಅಷ್ಟಾದಶ ಸಹಸ್ರಶೀಲಭೂಷಿತನುಂ, ಚತುರಶೀತಿಲಕ್ಷ ಗುಣಭೂಷಣನುಮಕ್ಕುಂ

ನಾಲ್ಕನೆಯ ಪೇಳ್ವ ಕಥೆಯೆಂಬುದು ದ್ರವ್ಯಮುಂ, ಕ್ಷೇತ್ರಮುಂ, ಕಾಲಮುಂ, ಭಾವಮುಂ, ಪ್ರಕೃತಿಯುಂ, ತೀರ್ಥಮುಂ, ಫಲಮುಮೆಂದು ಸಪ್ತಾಂಗಮಕ್ಕುಂ

ಅವಱೊಳ್ ದ್ರವ್ಯಮೆಂಬುದು ಜೀವಾಜೀವಾಸ್ರವ ಸಂವರನಿರ್ಜರ ಬಂಧಮೋಕ್ಷಮೆಂಬ ತತ್ತ್ವಮನುಳ್ಳುದು, ಕ್ಷೇತ್ರಮೆಂಬುದು ತ್ರೈಲೋಕ್ಯಂ, ಕಾಲಮೆಂಬುದು ಅತೀತಾನಾಗತ ವರ್ತಮಾನಾತ್ಮಕ ತ್ರಿಭೇದಮುಂ ಸುಷಮಸುಷಮಾದಿ ಷಡ್ಭೇದಮು

1 ಚ. ಛ ಗಳಲ್ಲಿ ನಿರುಪಮ ಎಂದಿದೆ 2 ಚ ದಲ್ಲಿ ತ್ರಿದಂಡತ್ರಿಶಲ್ಯ ಎಂಬುದು ಮಾತ್ರವೇ ಇದೆ

ಸುಳ್ಳುದು, ಭಾವವೆಂಬುದು ಕರ್ಮಂಗಳ ಕ್ಷಯದಿನುಪಶಮದಿಂ ಕ್ಷಯೋಪಶಮದಿ ನಪ್ಪಾತ್ಮನ ಪರ್ಯಾಯಂ, ಪ್ರಕೃತಿಯೆಂಬುದು ಜೀವಾದಿ ತತ್ತ್ವಂಗಳೊಳಗಾವುದೊಂ ದಾನು ವೊಂದು ಪ್ರಸ್ತುತಮಪ್ಪುದಕ್ಕು, ತೀರ್ಥಮೆಂಬುದು ಜಿನಪತಿಚರಿತಂ, ಫಲ ಮೆಂಬುದು ತತ್ತ್ವಜ್ಞಾನಂ,

ಐದನೆಯ ಶ್ರೋತೃವೆಂತಪ್ಪೊಂ

ವಸಂತತಿಲಕಂ॥ ವೃತ್ತಾನುರಾಗೀ ಮತಿಮ ಮಂಸ ಬುಕಸ್ಯಭಾವಾ[1] ।
ಮಾಚಾರ್ಯ ಕಂಠ ಮುರಕಾಂ ಜಲಭೂಷಣಾನಾಂ ॥
ಸಮ್ಯಕ್ತ್ವ ಕುಂಭ ಸಹಿತ ನ್ಯೋಮಯಾನಾ
ಸ್ತ್ರೀಶ್ರಾವಕಾ ಧುಂ ಚತುರಾಶ್ರಯತಾ ಭವಂತಿ ॥ ॥೨೮॥

ಇಂತು ಪ್ರತಿಪಾದ್ಯಪ್ರತಿಪಾದ್ಯಾತ್ಮಕ ಚತುರ್ದಶ ವಕ್ತ್ರಂ, ಸುತ್ತಂ ಪ್ರತಿಪಾದ್ಯಾತ್ಮಕ ಶ್ರೋತೃವರಗುಣಾಧಿಪನುಮಪ್ಪಂ ಕಾವಲಂದೊಡೆ-ಕ್ಷುಣವಂತನು ಮನಸ್ಸು ಮನಸ್ಸನುಂ, ಅನುಕೂಲನುಂ ಅನಾಲಸ್ಯನುಂ, ಪ್ರಶ್ನಾಲುವುಮುದಾರನುಂ, ಲಬ್ಧವಿಧರಸಮುನುಂ, ಕಳಂಕ ಸಮನುಂ ಪ್ರವಕ್ತನುಂ ಮಧ್ಯಸ್ಥನು ಮೆಂಬವ ರೊಳ್. ಕ್ಷುಣಾಂತನೆಂಬೊಂ ಧರ್ಮದೊಳ್ ಸಮುಯುಮೊಳ್ ಪರಿತ್ಯಕ್ತ ಸಕಲ ವ್ಯಾ ಪಾರಂ, ಅವನ್ಮಸನಸ್ಕನೆಂಬೊಂ ಪ್ರಸಂಗದಿಂ ಪುರುಷಯೊಳ್ ನಿವರ್ತಿತ ಮನ ಸ್ಕಂ, ಅನುಕೂಲನೆಂಬೊಂ ಬಿಂದಾಸನ್ತುಮಾ ಬ್ರಹ್ಮಚರ್ಯ ಕ್ರೋಧಮಾನ ಮಾಯಾಲೋಭ ಪ್ರವರ್ತಿತಂ, ಅನಾಲಸ್ಯನೆಂಬೊಂ ನಾಸ್ತಿಕ್ಯಪ್ರವೃತ್ತಿವಿದ್ಯಾವಿ ನಿರ ಕ್ಷಣ ಬುಂಧಿಯ ಮರ್ದಿತಂ, ಪ್ರಶ್ನಾಲುವೆಂಬೊಂ ಧರ್ಮಶ್ರವಣಾನುರಾಗದಿಂ ರೋಮಾಂಚ ಕಂಚುಕಿತ ಶರೀರನು ಜಗದ್ಗುರುಮಂ ಬಿಲಸುಂ ಅರ್ಹಾದಿ ತಟ ಘಟಿತ ಮುಕುಳಿತ ಕರತಳನುಂ, ಪ್ರಶ್ನವಚನ ವಾಗಾಸ್ವಾದನಾವಗಾಹನ ಪರಿಣತ ಮತಿಪ್ರಸರನುಂ, ಕಥಕನುಂ ಪ್ರವಚನ ವಿಹಿತ ಬುದ್ಧಿ ಭಾವೋಚನನು ಮಪ್ಪಂ, ಉದಾರನೆಂಬೊಂ ಧ್ರುವದಾನ ಸಮನ ನಾನಾ ಪ್ರಯೋಗ ಪರಿಪೂರ್ಣ ಕರಜ ರಗೋದರ ಪ್ರಕಾರ ವಿರಚಿತನುಂ, ಸಭಾಕೃದಯಮಾರಿಪ್ರತ್ಯಕ್ಷನುಂ, ಪ್ರವಕ್ತೃಮನೋ ಗತಾಭಿಪ್ರಾಯ ಪ್ರಜ ಸುಮ ಪ್ಪೊಂ, ಲಬ್ಧವಿಧರಸಮನೆಂಬೊಂ ಸುಜುಂಗಿ ಕವಡ ನಂತು ಕೂಟಿಗೆಯ್ದುದ ತನ್ನ ಮನೋಭಿಮತಮಪ್ಪರ್ಥಮಂ ಕೇಳ್ದು ಕೈಕೊಳ್ವು ಮಂತೆ ಜಿನೋಪದಿಷ್ಟ ತತ್ತ್ವಗ್ರಹಣ ಬುದ್ಧಿಯುಂ ನಿರೂಪ್ಯಮಾಣಮಪ್ಪರ್ಥಮುಂ ಕೇಳ್ದು ಮನದೊಳ್ ನಿಱಿಸುವಂ, ಕಳಂಕನೆಂಬೊ ನೆಂತು ಹಂಸಂ ಪಾಲಿಂ ನೀರಂ ಬೇರಿಸಿದಲ್ಲಿ ನೀರಂ ಪಾಲನೆ ಪಿರ್ದಗುಮಂತೆ ವಕ್ತೃದೋಷದಿಂದ ಪಾದ ವಚನದೋ ಷಮುಮನರ್ಥದೋಷಮುಮಂ ಕೈಕೊಳ್ಳದೆ ಜಿನೋಪದಿಷ್ಟ ತತ್ತ್ವಾರ್ಥಮನೆ ಕೈಕೊಳ್ವಂ, ಪ್ರವಕ್ತನೆಂಬೊಂ ವಕ್ತೃದಾಗಸ್ಥಿತನಾಗಿ ಧರ್ಮಾರ್ಥ ವ್ಯಾಖ್ಯಾ ನಮಂ ಪರಿಣತಮಾಗಿ ಸೇವಿಸುವಂ ಅದಂ ಯಥಾವಸ್ಥಿತ ಸ್ವರೂಪದಿಂ ಕೈಕೊಳ್ವಂ, ಮಧ್ಯಸ್ಥನೆಂಬೊಂ ವಸ್ತುವಿಚಾರದೊಳ್ ವಕ್ತೃವಿನ್ನ ಗುಣದೋಷಂಗಳೊಳ್ ದೋಷ ಮಂ ಕೊಂಡಿಸಗಡೆ ವಸ್ತುವಿಟ್ಟ ಗುಣಮನೆ ಕೈಕೊಳ್ವಂ, ಶ್ರೋತೃವಿಂಗೆ ಪೇಳ್ದ ಗುಣ

1 ಗ ೮ ಗಳಲ್ಲಿ ವೃತ್ತಾನುಲಿಪಿ ಬಿಟ್ಟಿದೆ ಬಟ್ಟಸಿಂಹನ ದಶಭಕ್ತ್ಯಾದಿಮಹಾಶಾಸ್ತ್ರ

ಗಣಸಮೇತಂಗ-ರಾಗಿದರ್ಷ್ಟ ವಿಧಕರ್ಮಮೂಲಂಗಳಂ ಕಿಡಿಪ ಧರ್ಮಂಗಳಂ ಕೇಳ್ವುದು ಅವಾವುವೆಂದೊಡೆ- ಸತ್ಪ್ರಣೀತಮುಂ, ಸಮಾನಮುಂ, ನಿರುಪಾದಾನಮುಂ, ನಿರನ್ವೇಷಮುಂ, ದುಶ್ಚರಮುಂ, ಪ್ರರೂಢಮುಂ, ಅಹಿಂಸಾವ್ರತಮುಂ, ಫಲವಂತಮುಮೆಂದಕ್ಕುಂ

ಅಲ್ಲಿ ಸತ್ಪ್ರಣೀತಮೆಂಬುದು- ಭಯ ರಾಗಾದಿ ದೋಷರಹಿತರಿಂ ಪ್ರಣೀತಮಪ್ಪ ಧರ್ಮಂ, ಸಮಾನಮೆಂಬುದು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಪಶು ಮೃಗ ಪಕ್ಷಿ ಸರೀಸೃಪಂಗಳುಮಂ ಸಮಂಗಾಗೆಪ್ಪ ಧರ್ಮಂ, ನಿರುಪಾದಾನಮೆಂಬುದು ಶಯನಾಸನವಸ್ತ್ರ ಚ್ಛತ್ರೋಪಾನತ್ಕನಕ ಭಾಜನಾದಿಗಳುಮಂ ದ್ರವ್ಯಮಂ ಉಪಾದಾನಂಗಳುಮಂ ನಪೇಕ್ಷಿಸದೆ ಪ್ರವರ್ತಿಸುವ ಧರ್ಮಂ, ನಿರನ್ವೇಷಮೆಂಬುದು ಭೋಗೋಪಭೋಗ ಪೂಜಾಮಂದನೈಶ್ವರ್ಯಾದಿಗಳ ನನ್ವೇಷಿಸದೆ ಧರ್ಮ್ಯಸ್ವಾಂತರಂಗ ಕರಣದ ಧರ್ಮಂ, ದುಶ್ಚರಮೆಂಬುದು ಬಾಲವೃದ್ಧರೋಗಾತುರಾದಿಗಳಿಂದಾಚರಿಸಲೊಂದುಂ ನೆರೆಯದ ಮಹೋತ್ಸಾಹದೆ ನೆಗಳ್ವುದಕ್ಕೆ ಯೋಗ್ಯಮಪ್ಪ ಧರ್ಮಂ, ಪ್ರರೂಢಮೆಂಬುದು ದೀರ್ಘಕಾಲ ಪ್ರವೃತ್ತಮುಮನಾದ್ಯನಿಧನಮುಮಪ್ಪ ಧರ್ಮಂ, ಅಹಿಂಸಾವ್ರತಮೆಂಬುದು ಪರಂಧರ್ಮಮಪ್ಪ ಧರ್ಮಂ, ಫಲವಂತಮೆಂಬುದು ಜಾತಿಜರಾರೋಗಮರಣ ವಿಚ್ಛೇದದಿಂದಂ, ಅನುಪಮಮುಮವ್ಯಾಬಾಧಮುಮಪ್ಪ ಪರಮನಿರ್ವಾಣಮುಮಂ ಪುಟ್ಟಿಸುವ ಧರ್ಮಂ

ಎಲ್ಲಾ ಪ್ರಾಣಿಗಳು ಮಾತ್ರಂ ತಿಳಿಸುವುದನಿಕ್ಕುವುದು, ಈ ಧರ್ಮಂ ಕರ್ಮಕ್ಷಯದಿನಲ್ಲದಾಗದು ಕರ್ಮಕ್ಷಯಕ್ಕೆ ಮುಖ್ಯಕಾರಣ ಮೋಕ್ಷದಾಗಿಯುಂ ಮುಖ್ಯಕಾರಣಂ ಸಮ್ಯಕ್ತ್ವಂ ಸಮ್ಯಕ್ತ್ವಮಲ್ಲಿ ಮತ್ತು ಪ್ರಥಮಾನುಯೋಗಂ ಅಪ್ರಥಮಾನುಯೋಗಮುಂ ಮುನ್ನೆ ಕ್ರಮದಿಂ ದೋಷದೂರನಪ್ಪ ಭಗವಂ ಭರತರಾಜಂ ಬೆಸಗೊಳೆ ಜಗತ್ತ್ರಯಸ್ವಾಮಿ ಕಾಲತ್ರಯವೇದಿ ಭುವನತ್ರಯೈಕಬಂಧು ಮುನ್ನಿನುತ್ಸರ್ಪಿಣಿಯುಂ ಕಾಲದಿಂದಾದ ಪುರಾಣಂಗಳಂ ಬೆಸಸೆ, ಅದಂ ಕೇಳ್ದು ಭರತರಾಜಂ ಮುಕುಳಿತ ಕರಕಮಲನುಮನಸಕ ಮಣಿಮುಕುಟನುಮಾಗಿ

ಜನಿಯಿಸಿ ಪೆಸರುಂ ಜಗ್ಗಗ
ನನಿಯಿಸಿ ಬಿಡದೆ ಪರಬಿಡಸ್ತ್ಯರುಂ ದಾ
ಮನಿಯಿಸಿ ವೃಷಭೇಶ್ವರ! ಎನ
ಸನಿಯಿಸಿ ಪ್ರತಿಮಾಸುದೇವರದನ ರಯೊಳ್ ‖ ೨೭ ‖

ಎನೆ, ಕಲ್ಪವೃಕ್ಷದಂತಪಗತದಾನ ಬುದ್ಧಿಪೂರ್ವಕನಾಗಿಯುಂ, ಸಮುಪಗತದೇವ ಸಮಭಿಲಷಿತ ವಿವಿಧಫಲ ವಿತರಣ ಪರಾಯಣನಪ್ಪುದರಿಂ, ಸರ್ವಭಾಷಾ ಸ್ವಭಾವಕಮುಂ ತ್ರಿಭುವನ ಜನದಮನಕ್ಕೆ ಯುಗಪದರ್ಥ ಪ್ರತಿಪಾದನ ಸಮರ್ಥಮುಮಪ್ಪ ದಿವ್ಯಧ್ವನಿಯೊಳ್ ಮೂಲತಂತ್ರ ಕರ್ತೃಗಮಪ್ಪ ನಾದಿದೇವ ಪುರಾಣ ಟೀಕೆಯೊಳ್, ಕಾಲಾವತಾರಮುಮಂ, ಕುಲಧರಾವತಾರಮುಮಂ ಪೇಳ್ದಂ, ಉಳಿದ ಮೂಲತಂತ್ರಕರ್ತೃಗಳಪ್ಪ ತೀರ್ಥಂಕರರು ಮದಂ ಪ್ರತಿಪಾದಿಸ, ವೃಷಭಸೇನ ಗಣಧರ ಪ್ರಭೃತಿಗಳನು ತಂತ್ರೋಪತಂತ್ರಕಾರ ಶಿಷ್ಯ ಪ್ರತಿಶಿಷ್ಯ ಪ್ರತಿಭಾಜನಕಮಾಗಿ ಪಾರಂಪರ್ಯದಿಂ ಬರೆ, ಪಶ್ಚಿಮತೀರ್ಥಂಕರ ಸಮವಸರಣಂ ವಿಪುಲಗಿರಿಯೊಳಿರೆ, ಗೌತಮಸ್ವಾಮಿಗಳ್ ಶ್ರೇಣಿ

ಕಮಹಾರಾಜನಂ ಕುಱಿತು ಬೆಸಸಿದೊಡದವನವಧರಿಸಿ ಸುಧರ್ಮಶ್ರುತಕೇವಲಿಗಳ್‌, ಜಂಬೂನಾಮ ಭಾವಿಕೇವಲಿಗಳ್ಗೆ ಪೇೞ್ದತ್ರಿಷಷ್ಟಿ ಲಕ್ಷಣಮಪ್ಪ ಮಹಾಪುರಾಣಕಥಾ ಸಂಬಂಧ ಮದಱೊಳ್‌ ಕಾಲಕುಲಧರಾವತಾರದೊಳ್‌ ದಶಸಾಗರೋಪಮ ಕೋಟಿ ಕೋಟಿಸ್ಥಿತಿಯುಪ್ಪವಸರ್ಪಿಣಿ ಕಾಲಂ ಸುಷಮ ಸುಷಮೆ, ಸುಷಮೆ, ಸುಷಮ ದುಷ್ಷಮೆ, ದುಷ್ಷಮಸುಷಮೆ, ದುಷ್ಷಮೆ, ಅತಿದುಷ್ಷಮೆಯೆಂದು ಷಡ್ವಿಧಮಕ್ಕುಂ.

ಮತ್ತಂ ದಶಕೋಟಿ ಕೋಟಿಸಾಗರೋಪಮಸ್ಥಿತಿ ಯುಪ್ಪುತ್ಸರ್ಪಿಣಿ ಯತಿದುಷ್ಷಮೆ ದುಷ್ಷಮೆ, ದುಷ್ಷಮ ಸುಷಮೆ, ಸುಷಮ ದುಷ್ಷಮೆ, ಸುಷಮೆ, ಸುಷಮ ಸುಷಮೆ ಎಂದು ಷಡ್ವಿಧಮಕ್ಕುಂ ಅಲ್ಲಿಸುಷಮಸುಷಮೆಯೆಂಬ ಕಾಲಂ ಚತುಸ್ಸಾಗರೋಪಮ ಕೋಟಿ ಕೋಟಿಸ್ಥಿತಿ ಪ್ರವರ್ತಿಸುವಂದಾ ಕಾಲದೊಳ್‌ ಭರತ ಷಟ್ಖಂಡದೊಳ್‌ ಮಧ್ಯಮ ಖಂಡ ಮನವಸ್ಥಿತೋತ್ತಮ ಭೋಗಭೂಮಿಯಾದುದಂದಿನ ಮನುಷ್ಯರ್‌ ತರುಣಾದಿತ್ಯಸಕೆರವರ್ಣರುಂ ಷಟ್ಸಹಸ್ರ ಚಾಪ ಶರೀರೋತ್ಸೇಧರುಂ ತ್ರಿಪಲ್ಯೋಪಮಾಯುಷ್ಯರುಂ ದಿನತ್ರಯಕ್ಕೆ ಬದರೀಫಲ ಪ್ರಮಾಣಾಹಾರರುಂ ವಿಹಾರಾದಿವಿಗತರುಂ ಶುಭಲಕ್ಷಣ ಮಂಡಿತ ನಿರ್ಮಲಶರೀರರುಂ ಅಪಗತಮಾನಸಾಗಂತುಕ ಶಾರೀರ ದುಃಖರುಂ ಪ್ರಮುದಿತ ಭೋಗನಿರತರುಮಾಗಿ ಮದ್ಯಾಂಗಾದಿ ದಶವಿಧ ಕಲ್ಪವೃಕ್ಷಂಗಳಭಿಮತ ಪ್ರದಂಗಳಾಗೆ ಸುಖಮಿರ್ಪರ್‌

ಅಲ್ಲಿ ಮದ್ಯಾಂಗಮೆಂಬುದು ಮದವಿಕಾರಮನಾಗಿಸದೆ ನಾನಾವಿಧ ಪಾನವಿಶೇಷಂಗಳ ನಿತ್ತು ದಂಪತಿಗಳ್ಗೆ ಕಾಮರಾಗಮಂ ಪುಟ್ಟಿಸುವುದು ತೂರ್ಯಾಂಗಮೆಂಬುದು ಪಣವಕಾಹಳ ಭೇರೀಶಂಖ ಮೃದಂಗಾದಿ ವಿವಿಧ ತೂರ್ಯ ವಿಶೇಷಂಗಳನೀವುದು, ಭೂಷಣಾಂಗಮೆಂಬುದು ಕಟಕಕಟಿಸೂತ್ರ ಕುಂಡಲ ಕೇಯೂರಹಾರ ನೂಪುರಾದಿ ಸ್ತ್ರೀಪುರುಷ ಯೋಗ್ಯಭೂಷಣ ವಿಶೇಷಂಗಳ ನೀವುದು, ಜ್ಯೋತಿರಂಗಮೆಂಬುದು ಸಕಲದಿಙ್ಮಂಡಲ ಪ್ರಕಾಶನ ಪರಂಗಳನನಂತ ಚಂದ್ರಾದಿತ್ಯರ ಕಿರಣಪ್ರವೇಶಂಗಳ್ಗೆಡೆ ಗುಡದಿರ್ಪ ಜ್ಯೋತಿರ್ವಿಶೇಷಂಗಳು ಮನುಳ್ವುದು, ಗೃಹಾಂಗಮೆಂಬುದು ಏಕತಳ ದ್ವಿತಳ ತ್ರಿತಳ ಚತುಸ್ತಳ ಸಪ್ತತಳಾದಿ ನಾನಾಸೋಪಾನ ಮಣಿಮಯ ಭಿತ್ತಿವಿರಾಜಿತ ವಿವಿಧಗೃಹ ವಿಶೇಷಂಗಳ ನೀವುದು, ಭೋಜನಾಂಗಮೆಂಬುದು ತೇಜೋಬಲಾಯುರಾರೋಗ್ಯ ತುಷ್ಟಿ ಪುಷ್ಟಿ ಪ್ರತಿಭಾ ಪ್ರಭೃತಿದಾಯಿಗಳಪ್ಪ ಅಮೃತಾನ್ನಂಗಳನೀವುದು; ಭಾಜನಾಂಗಮೆಂಬುದು ಕನತ್ಕನಕ ಮಣಿಖಚಿತ ವಿವಿಧಭಾಜನ ವಿಶೇಷಂಗಳನೀವುದು, ದೀಪಾಂಗಮೆಂಬುದು ನಿಜಭವನಾಭ್ಯಂತರ ಸಮಸ್ತ ವಸ್ತುಪ್ರಕಾಶನ ಪರಂಗಳಪ್ಪ ಪ್ರದೀಪ ವಿಶೇಷಂಗಳ ನೀವುದು, ಮಾಲ್ಯಾಂಗಮೆಂಬುದು ಜಾತಿಕೇತಕೀ ಮರುವಕ ಪ್ರಭೃತಿ ಸಾರ್ವರ್ತುಕ ದಾಮ ವಿಶೇಷಂಗಳ ನೀವುದು, ವಸ್ತ್ರಾಂಗಮೆಂಬುದು ದೇವಾಂಗಾದಿ ವಿವಿಧವಸ್ತ್ರ ವಿಶೇಷಂಗಳ ನೀವುದು.

ವೃತ್ತ|| ಪೆಸರಿಂ ಜ್ಯೋತಿಃಪ್ರದೀಪಾಸನ ವಸನಲಸದ್ಭೂಷಣಾತೋದ್ಯಮದ್ಯಾ |
ವಸಥಸ್ರಗ್ಭೋಜನಾಂಗಂ ಪ್ರಕಟತರದಶಾಂಗಾಮರಾನೋಕಹಂ, ಸಂ ||
ಧಿಸುಗುಂ ತಾವೇನನೊಂದಂ ಬಗೆದರದನೆ ತಂದಟ್ಟಿಯಿಂದೆಂದೊಡೇನೆಂದು
ಸಿರ್ವರ್‌ ಪೇೞ್ಗಿಂತು ತದ್ದಂಪತಿಗಳ ಪರಮಾಗಣ್ಯ ಸತ್ಪುಣ್ಯದೊಳ್ಪಂ ||

ವ॥ ತದನಂತರಂ ವೃಕ್ಷವೀರ್ಯಹಾನಿಯುಂ ಮನುಷ್ಯೋತ್ಸೇಧಾದಿ ಹಾನಿಯು
ಮಾಗೆ, ಸುಷಮೆಯೆಂಬೆರಡನೆಯ ಕಾಲಂ ತ್ರಿಸಾಗರೋಪಮ ಕೋಟಿಕೋಟಿ ಸ್ಥಿತಿ
ಯಿಂ ಪ್ರವರ್ತಿಸುವಂದಾಕಾಲದ ಮನುಷ್ಯರ್ ಹಿಮಕರನಿರ್ಮಲ ಶರೀರರುಂ ಚತುಸ್ಸ
ಹಸ್ರ ಚಾಪೋತ್ಸೇಧರುಂ ದ್ವಿಪಲ್ಯೋಪಮಾಯುಷ್ಯರುಂ ದಿನದ್ವಯದಿ ನಕ್ಷಫಲ ಮಾ
ತ್ರಾಹಾರರುಮಾಗಿ ಮನವಸ್ಥಿತ ಮಧ್ಯಮ ಭೋಗಭೂಮಿಸ್ಥಿತಿ ನೆಗಳೆ ಪೂರ್ವೋ
ಕ್ತಕ್ರಮದೊಳ್ ವೃಕ್ಷವೀರ್ಯ ಶರೀರೋತ್ಸೇಧಾಯು ರಾದಿಹಾನಿಯೊಳ್ ಸುಷಮ
ದುಷ್ಷಮಮೆಂಬ ಕಾಲಂ ದ್ವಿಸಾಗರೋಪಮ ಕೋಟಿಕೋಟಿಸ್ಥಿತಿಯಿಂ ಪ್ರವರ್ತಿ
ಸುವಂತಾಕಾಲದ ಮನುಷ್ಯರ್ ಪ್ರಿಯಂಗು ಶ್ಯಾಮವರ್ಣರುಂ ದ್ವಿಸಹಸ್ರ ಚಾಪೋ
ತ್ಸೇಧರುಂ ಏಕಪಲ್ಯೋಪಮಾಯುಷ್ಯರುಂ ಪ್ರತಿದಿನಮಾಮಳಕ ಪ್ರಮಾಣಾಹಾರರು
ಮಾಗಿ ಮನವಸ್ಥಿತಜಘನ್ಯ ಭೋಗಭೂಮಿಯ ಸ್ಥಿತಿಯೊಳ್ ಪೂರ್ವೋಕ್ತ ಕ್ರಮ
ದೊಳ್ ನಡೆಯೆ ಪಲ್ಯೋಪಮಾಷ್ಟಮ ಭಾಗಾವಶಿಷ್ಟಂ ತೃತೀಯಕಾಲಮಾದೊಡೆ
ಕಲ್ಪತರುಪ್ರಭಾವಂಗಳ್ ಹಾನಿಯಾಗುತ್ತಿರಲ್ ಅವರೊಳ್ ಜ್ಯೋತಿರಂಗಂ ನಷ್ಟ
ಮಾಗೆಯಾಗಳುಂ ಆಷಾಢದ ಪೂರ್ಣಿಮೆಯ ಪರಾಹ್ಣದೊಳ್ ಚಂದ್ರಾದಿತ್ಯರ್ಕಳ್ ಪೂ
ರ್ವಾಪರದೊಳ್ ಜಾಜ್ವಲ್ಯಮಾನರ್ಕಳಾಗಿ ಇರೆ ಅ ಭೋಗಭೂಮಿಜರು ಮದೃಷ್ಟಪೂ
ರ್ವಮಂ ಕಂಡಾಗಳ್ ವ್ಯಾಕುಲರಾಗಿರ್ಪ ಪ್ರಸ್ತಾವದೊಳ್ ಪ್ರತಿ ಶ್ರುತಿಯೆಂಬಂ ಪ್ರಥ
ಮಕುಲಧರಂ ಪಲ್ಯೋಪಮ ದಶಮಭಾಗಾ ಯುಷ್ಯನುಂ ಅಷ್ಟಶತೋತ್ತರ ಸಹಸ
ಚಾಪೋತ್ಸೇಧನು ಮಪ್ಪಾತ ನಾರ್ಯರ ಸಂಚಲಿಸಿ ಇವರ್ ಚಂದ್ರಾದಿತ್ಯರ್ಕಳೆಂದು
ಇವರದೆಸೆಯಿಂದಂ ನಿಮಗೊಂದುಂ ಭಯಮಿಲ್ಲಂ ಭರತಕ್ಷೇತ್ರದೊಳಿಲ್ಲಿಂದಿತ್ತಲೀ
ತೆಱದ ನಿಯೋಗಮಕ್ಕು ಮೆಂದಱಿಪಿದಂ ತದನಂತರ ಮಾಕ್ರಮದೊಳ್ ತಾರಕಾ
ದರ್ಶನಮಾಗೆ ಸನ್ಮತಿಯೆಂಬೆರಡನೆಯ ಕುಲಧರಂ ತ್ರಿಶತಾಧಿಕಸಹಸ್ರಚಾಪೋತ್ಸೇಧನುಂ
ಅಮಮ[1] ಪ್ರಮಾಣ ವರ್ಷಾಯುಷ್ಯನು ಮಪ್ಪಾತಂ, ಇವ ತಾರೆಗಳೆಂಬುವು. ಇವ
ರ್ಗಂಜಬೇಡೆಂದಱಿಪಿದಂ ತದನಂತರಂ ಕ್ಷೇಮಂಕರನೆಂಬೊಂ ಮೂಱನೆಯಕುಲ
ಧರಂ, ಅಷ್ಟಶತ ಚಾಪೋತ್ಸೇಧನುಂ ತ್ರುಟಿತಪ್ರಮಾಣ[2] ವರ್ಷಾಯುಷ್ಯನು ಮಪ್ಪಾತಂ,
ಮುನ್ನ ಕಾಲಸ್ವಭಾವದಿ ನುಪಶಾಂತಮಾಗಿರ್ದ ಸಿಂಹ ವ್ಯಾಘ್ರಾದಿಗಳಪ್ಪ ಕೋಱ್ಮೃ
ಗಂಗಳೆಂಬವು, ಬೞಿಕಂ ಮನುಷ್ಯರಂ ಕಂಡು ಗರ್ಜನಾದಿಗಳನಂಜಿಸೆ ನೀಮಿನ್ನವಂ
ಪರಿಹರಿಸಿ ಬಾಳ್ವುದೆಂದಱಿಪಿದಂ, ತದನಂತರಂ ಕ್ಷೇಮಂಧರನೆಂಬೊಂ ನಾಲ್ಕನೆಯ
ಕುಲಧರಂ ಪಂಚಸಪ್ತತ್ಯುತ್ತರ ಸಪ್ತಶತಚಾಪೋತ್ಸೇಧನುಂ [3]ತದಧಿಕ ಪ್ರಮಾಣ ವತ್ಸರಾ
ಯುಷ್ಯನುಮಾಗಿ ದುಷ್ಟಮೃಗ ನಿರಾಕರಣೋಪಾಯಮನಱಿಪಿದಂ, ಅತನಿಂಬೞಿ
ಯಂ ಸೀಮಂಕರನೆಂಬಂ ಐದನೆಯ ಕುಲಧರಂ ಪಂಚಾಶ ದುತ್ತರ ಸಪ್ತಶತ ಚಾಪೋ
ತ್ಸೇಧನುಂ ಕಮಳಪ್ರಮಾಣಾಯುಷ್ಯನುಮಾಗಿ ವೃಕ್ಷದಿಂ ಸೀಮಾವಿವಾದಮಂ
ಪಿಂಗಿಸಿದಂ ಅತನಿಂ ಬೞಿಯುಂ ಸೀಮಂಧರನೆಂಬೊಂ ಆಱನೆಯಕುಲಧರಂ, ಪಂಚ
ವಿಂಶತ್ಯುತ್ತರ ಸಪ್ತಶತ ಚಾಪೋತ್ಸೇಧನುಂ ನಳಿನಪ್ರಮಾಣ ವರ್ಷಾಯುಷ್ಯನುಮಾಗಿ,

---

1 ಚ ಪ್ರತಿಯಲ್ಲಿ ಲವಪ್ರಮಾಣವೆಂದಿದೆ 2 ಗ. ಚ. ಪ್ರತಿಗಳಲ್ಲಿ ಅಧಿಕಪ್ರಮಾಣಾಯುಷ್ಯನುಂ ಎಂದಿದೆ. 3 ಚ ಪ್ರತಿಯಲ್ಲಿ ಅಟಟಪ್ರಮಾಣ ಎಂದಿದೆ

ಸೀಮೆಗಳ್ಗಾಘಾಟ ಶುದ್ಧಿಯುಂ ಮಾಡಿದೊಂ, ಅತನಿಂ ಬಳಿಯುಂ ವಿಮಲವಾಹನ ನೆಂಬೊ ನೇಳನೆಯ ಕುಲಧರಂ, ಸಪ್ತಶತ ಚಾಪೋತ್ಸೇಧನುಂ, ಪದ್ಮಪ್ರಮಾಣ ವರ್ಷಾಯುಷ್ಯನುಮಾಗಿ ಕರಿ ತುರಗಾರೋಹಣೋಪಾಯ ಮನಱಿಪಿದಂ, ಅತನಿಂಬಳಿಯುಂ ಚಕ್ಷುಷ್ಮನೆಂಬೊ ನೆಂಟನೆಯ ಕುಲಧರಂ, ಪಂಚಸಪ್ತತ್ಯುತ್ತರ ಷಟ್ಛತಚಾಪೋತ್ಸೇಧನುಂ ಪದ್ಮಾಂಗ ಪ್ರಮಾಣ ವರ್ಷಾಯುಷ್ಯನುಮಾಗಿ ಸ್ತ್ರೀ ಪುರುಷ ಮಿಥುನಂಗಳ್ಗೆ ಸುತಮುಖ ಕಮಲದರ್ಶನಾ ಕುಲಿತಂಗಳಾಗಲುಮಱಿಂ ತಿಳಿಪಿದಂ, ಅತನಿಂಬಳಿಯುಂ ಯಶಸ್ವಿಯೆಂಬೊ ನೊಂಬತ್ತನೆಯ ಕುಲಧರಂ, ಪಂಚಾಶದುತ್ತರ ಷಟ್ಛತ ಚಾಪೋತ್ಸೇಧನುಂ ಕುಮುದ ಪ್ರಮಾಣ ವರ್ಷಾಯುಷ್ಯನು ಮಾದೊನಾತನ ಕಾಲದೊಳ್ ಮಕ್ಕಳ್ಗೆ ಪೆಸರಿಟ್ಟು ಯುಗಲಂಗಳ್ ಲೋಕಾಂತರಿತರಪ್ಪರ್, ಅತನಿಂಬಳಿಯುಂ, ಅಭಿಚಂದ್ರನೆಂಬೊಂ ಪತ್ತನೆಯ ಕುಲಧರಂ ಪಂಚವಿಂಶತ್ಯುತ್ತರ ಷಟ್ಛತಚಾಪೋತ್ಸೇಧನುಂ ಕುಮುದಾಂಗ ಪ್ರಮಾಣ ವರ್ಷಾಯುಷ್ಯನು ಮಾತನ ಕಾಲದೊಳ್, ಮಿಥುನಂಗಳ್ ಶಿಶುಗಳ್ಗೆ ಶಶಿದರ್ಶನಾದಿ ಕ್ರೀಡನಮಂ ತೋಱಿ ಲೋಕಾಂತರಿತರಪ್ಪರ್ ಅತನಿಂಬಳಿಯುಂ ಚಂದ್ರಾಭನೆಂಬೊಂ ಪನ್ನೊಂದನೆಯ ಕುಲಧರಂ, ಷಟ್ಛತಚಾಪೋತ್ಸೇಧನುಂ ನಧಪ್ರಮಾಣ ವರ್ಷಾಯುಷ್ಯನು ಮಾತನ ಕಾಲದೊಳ್ ಮಿಥುನಂಗಳ್ ಪುತ್ರಜನಕ್ಕೆ ಚಂದ್ರದರ್ಶನಾದಿ ಕ್ರೀಡನಮಂ ತೋಱಿ ಕತಿಪಯದಿವಸ ಸಂಬಂಧನ ಸಹಜೀವನಾನಂತರಂ ಲೋಕಾಂತರಿತರಪ್ಪರ್, ಅತನಿಂ ಬಳಿಯುಂ ಮರುದ್ದೇವನೆಂಬೊಂ ಪನ್ನೆರಡನೆಯ ಕುಲಧರಂ, ಪಂಚಸಪ್ತತ್ಯುತ್ತರ ಪಂಚಶತ ಚಾಪೋತ್ಸೇಧನುಂ ನಧಾಂಗಪ್ರಮಾಣ ವರ್ಷಾಯುಷ್ಯನು ಮಾತನ ಕಾಲದೊಳ್, ಪುತ್ರಸಹಿತಂ ಚಿರಕಾಲಜೀವನಮುಂ, ಸಮುದ್ರ ಪರ್ವತ ಸಮುತ್ಪತ್ತಿಯುಂ, ಮಧುರ ಸಲಿಲವೃಷ್ಟಿಯುಂ ಕುತ್ಸಿತ ನದನದಿಗಳುಮಾದುವಾ ನಾವಾದಿಗಳಿಂದವಗಳಂ ದಾಂಟುವುದಂ ತೋಱಿ ಲೋಕಾಂತರಿತರಪ್ಪರ್, ಅತನಿಂ ಬಳಿಯುಂ ಪ್ರಸೇನಜಿತ್ತೆಂಬ ಪದಿಮೂಱನೆಯ ಕುಲಧರಂ, ಪಂಚಾಶದುತ್ತರ ಪಂಚಶತ ಚಾಪೋತ್ಸೇಧನುಂ ಪೂರ್ವಪ್ರಮಾಣ ವರ್ಷಾಯುಷ್ಯನುಮಾದೊಂ ಅತನಕಾಲದೊಳ್ ಮಕ್ಕಳ್ ಪುಟ್ಟಿ ಗರ್ಭಮಲ ನಿರಾಕರಣಮುಂ ಮೂತ್ರ ಪುರೀಷದೋಷಾಪನಯನಮುಂ ಮಾದುದು, ಅತನಮಗಂ ನಾಭಿರಾಜನೆಂಬೊಂ, ಪದಿನಾಲ್ನೆಯ ಕುಲಧರಂ ಪಂಚವಿಂಶತ್ಯುತ್ತರ ಪಂಚಶತ ಚಾಪೋತ್ಸೇಧನುಂ ಪೂರ್ವಕೋಟಿ ಪ್ರಮಾಣ ವರ್ಷಾಯುಷ್ಯನು ಮಾದ ನಂದು ಶಿಶುಗಳ್ಗೆ ನಾಭಿನಾಳ ನಿಕರ್ತನಮಾದೊಡಾಕಾಲದೊಳ್ ನಿರವಶೇಷ ಕಲ್ಪ ತರು ವೀರ್ಯ ಹಾನಿಯೊಳ್ ಸಿಮ್ಮಟಿ ಕೊಳೆ ಜಳವಸು ಮತಿ ಪವನಾತಪಂಗಳಿನ ಗೋಚರಮಪ್ಪ ಕ್ಲೇದನಾದಾನ ವಿಹರಣೋತ್ಸಾವಗಾಹನ ಸನ್ನಿಧಾನ ಜನಿತೋಪಕಾರದಿಂ, ಬೆಳೆದೆಱಗಿದ ಶಾಲಿ ಗೋಧೂಮಾದಿ ಸಸ್ಯ ಸಂಪತ್ತಿಯುಂ, ಗಜಕುಂಭ ಮಂಡಲ ನಿವರ್ತಿತ ಮೃಣ್ಮಯಸ್ಥಾಲೀ ಕಲಶಪಿಠೋಧಿಕಾ ರಂಜನಕರಕ ಕಾಲಂಜಕಾದಿ ಭಾಜನಂಗಳೊಳ್ ಪಚನ ಭೋಜನೇಕ್ಷುರಸ ಗ್ರಹಣೋಪಾಯಮುಂ, ನಾಭಿರಾಜನಿಂದಾದುದು

ಈ ಪೇಳ್ದ ಪದಿನಾಲ್ವರ್ ಮನುಗಳ್ ವಿದೇಹಂಗಳೊಳ್ ಶುಭ ಪರಿಣಾಮ ಸಹಿತಂ ದಾನಾದಿ ಕುಶಲ ವಿಧಿ ಸಿದ್ಧ ಮಾನುಷ್ಯಾಯುಷ್ಯರುಂ ಪರಿಗೃಹೀತ ಸಮ್ಯಗ್ದ

ಶನ ಪ್ರಕಟೀಕೃತ ಕ್ಷಾಯಿಕ ಸಮ್ಯಗ್ದೃಷ್ಟಿಗಳು ಮಾಗಿ ಬಂದೀಕ್ಷೇತ್ರದೊಳ್ ಪುಟ್ಟಿ ಸಮಧಿಗತ ಜಾತಿ ಸ್ಮರಣದಿಂದೀತೆಱದ ನಿಯೋಗಂಗಳನುಪದೇಶಂಗೆಯ್ದರ್.

ಈ ಮನುಗಳಂತರದ ಸಂಖ್ಯಾತ ವರ್ಷಮಾದಂದು ವೃಷಭನಾಥಂ ಕುಲಧರಂ ತೀರ್ಥಂಕರನುಮಾದಂ. ಭರತೇಶ್ವರಂ ಕುಲಧರನುಂ ಚಕ್ರವರ್ತಿಯುಮಾದನಾಕಾಲದೊಳ್, ಮನುಷ್ಯರಪರಾಧಂಗೆಯ್ಯೆ ಮುನ್ನಮಯ್ವರ್ ಮನುಗಳ್ ಹಾಕಾರಲಕ್ಷಣಮಪ್ಪ ದಂಡಮುಮಂ ಮಾಡಿದರ್ ಬೞಿಯ ಮಯ್ವರ್ ಮನುಗಳ್ ಹಾಮಾಕಾರ ದಂಡಮಂ ಮಾಡಿದರ್ ಮತ್ತಮಯ್ವರ್ ಮನುಗಳ್ ಹಾಮಾಧಿಕ್ಕಾರ ದಂಡಮಂ ಮಾಡಿದರ್ ಭರತಂ ಶರೀರ ದಂಡಮುಂ ಮಾಡಿದಂ.

ಕಂದ|| ಹಾ ದಂಡೆ ಮಯ್ವರಿಂ ಹಾ
ಮಾ ದಂಡಂ ಮತ್ತ ಮಯ್ವರಿಂ ಹಾಮಾಧಿ |
ಗ್ಗೀದಂ ಕುಲಧರರಯ್ವರಿ
ನಾದುದು ತನುದಂಡಮಾಯ್ತು ಭರತೇಶ್ವರನಿಂ ||೭೯||

ಇಂತು ಕಾಲಾವತಾರಮಂ ಷೋಡಶ ಕುಲಧರಾವತಾರಮುಮಂ ಪ್ರಥಮಾನುಯೋಗದ ಪೀಠಿಕೆಯೊಳ್ ಪವರ್ಣಿಸೆ ಪುರಾಣ ಕಥನದೊಳ್ ಲೋಕಾಖ್ಯಾನಮುಂ, ದೇಶಾಖ್ಯಾನಮುಂ, ನಗರಾಖ್ಯಾನಮುಂ, ರಾಜಾಖ್ಯಾನಮುಂ, ತೀರ್ಥಾಖ್ಯಾನಮುಂ, ತಪೋಧನಾಖ್ಯಾನಮುಂ, ಗತ್ಯಾಖ್ಯಾನಮುಂ, ಫಲಾಖ್ಯಾನಮುಮೆಂದಷ್ಟವಿಧ ವರ್ಣನಮುಕ್ಕುಂ.

ಅಲ್ಲಿ ಲೋಕಾಖ್ಯಾನಮೆಂಬುದು ಅನಂತಾನಂತಮಪ್ಪಾಕಾಶ ಮಧ್ಯಪ್ರದೇಶದೊಳ್ ಅಸಂಖ್ಯಾತಪ್ರದೇಶಾತ್ಮಕವಾಗಿ ವಾತತ್ರಯ ವೇಷ್ಟಿತಮುಮಧಸ್ತಿರ್ಯಗೂರ್ಧ್ವಭೇದ ಭಿನ್ನಮುಂ ಜೀವಾದಿಪದಾರ್ಥಾವಲೋಕನ ಕರಣಾಧಾರಭೂತಮುಮಕೃತ್ರಿಮಮುಮನಾದಿ ನಿಧನಮುಂ ದ್ವಿಸಪ್ತ ರಜ್ಜೂತ್ಸೇಧಮುಂ ಸಪ್ತೈಕ ಪಂಚೈಕರಜ್ಜು ವಿಸ್ತಾರಮುಮಾಗಿ, ಪೃಥ್ವೀಸಮೂಹ ಕಾಂತಲತಾಸಂಖ್ಯಾತ ದ್ವೀಪಸಮುದ್ರಸರಿತ್ಸರೋವರ ಕುಲಾಚಲ ನಿಲಯ ವಿಮಾನಂಗಳ್ಗೆ ಆಧಾರಭೂತಮುಮಪ್ಪುದಂ ಪೇಳ್ವುದು.

ದೇಶಾಖ್ಯಾನಮೆಂಬುದು ವಿಷಯವ್ಯಾವರ್ಣನಂ, ಆ ವಿಷಯಂಗಳು ಮಾವಾವುವೆಂದೊಡೆ ಕಚ್ಛಮುಂ, ಸುಕಚ್ಛಮುಂ, ಮಹಾಕಚ್ಛಮುಂ, ಕಚ್ಛಕಾವತಿಯುಂ ಆವರ್ತಮುಂ, ಲಾಂಗಲಾವರ್ತಮುಂ, ಪುಷ್ಕಳೆಯುಂ, ಪುಷ್ಕಳಾವತಿಯುಂ, ಎಂಬೀ ಎಂಟುಂ ಪೂರ್ವವಿದೇಹದ ಸೀತಾನದಿಯ ಬಡಗಣ ತಡಿಯುವು, ವತ್ಸೆಯುಂ, ಸುವತ್ಸೆಯುಂ, ಮಹಾವತ್ಸೆಯುಂ, ವತ್ಸಕಾವತಿಯುಂ, ರಮ್ಯೆಯುಂ, ಸುರಮ್ಯೆಯುಂ, ರಮಣೀಯೆಯುಂ, ಮಂಗಳಾವತಿಯುಮೆಂಬೀ ಎಂಟುಂ ತೆಂಕಣತಡಿಯುವು, ಪದ್ಮೆಯುಂ, ಸುಪದ್ಮೆಯುಂ, ಮಹಾಪದ್ಮೆಯುಂ, ಪದ್ಮಕಾವತಿಯುಂ, ಸಂಖೆಯುಂ, ನಳಿನೆಯುಂ, ಕುಮುದೆಯುಂ, ಸರಿದೆಯುಂ, ಮೆಂಬೀ ಎಂಟು ಮಪರವಿದೇಹದ ಸೀತೋದಾನದಿಯ

* ಪಾ — ಅಕಾಶ ಮಧ್ಯಪ್ರದೇಶದೊಳ್ 2 ಗ ಘ ಚ ಗಳಲ್ಲಿ ಕಾರಣಾಧಾರಭೂತಮುಂ ಎಂದಿದೆ. † ಚ ದಲ್ಲಿ ಅವಲಾನವರ್ತಮುಂ ಎಂದಿದೆ. ‡ ಪ ಸಿದ್ಧಾಂತ.

ತೆಂಕಣ ತಡಿಯುವು, ವಪ್ರೆಯುಂ, ಸುವಪ್ರೆಯುಂ, ಮಹಾವಪ್ರೆಯುಂ, ವಪ್ರಕಾವತಿಯುಂ, ಗಂಧೆಯುಂ, ಸುಗಂಧೆಯುಂ, ಗಂಧಿಳೆಯುಂ, ಗಂಧಮಾಳಿನಿಯುಮೆಂಬೀಯೆಂಟು ಬಡಗಣ ತಡಿಯುವು ಇಂತು ಪ್ರದಕ್ಷಿಣಮಾಗಿ ನಿರ್ಮಿಸಿದ ವಿಷಯಮುಮಂ ವ್ಯಾವರ್ಣಿಸುವುದು.

ನಗರಾಖ್ಯಾನಮೆಂಬುದು ನಗರವ್ಯಾವರ್ಣನಂ ಆ ನಗರಂಗಳಾವುವೆಂದೊಡೆ- ಕ್ಷೇಮೆಯುಂ, ಕ್ಷೇಮಪುರಿಯುಂ, ಅರಿಷ್ಟೆಯುಂ, ಅರಿಷ್ಟಪುರಿಯುಂ, ಖಡ್ಗೆಯುಂ, ಮಂಜೂಷೆಯುಂ, ಊಷಧೆಯುಂ, ಪುಂಡರೀಕಿಣಿಯುಮೆಂಬೀಯೆಂಟುಂ ಸೀತಾನದಿಯ ಬಡಗಣತಡಿಯ ವಿಷಯಂಗಳ ರಾಜಧಾನಿಗಳ್, ಸುಸೀಮೆಯುಂ, ಕುಂಡಳೆಯುಂ ಅಪರಾಜಿತೆಯುಂ, ಪ್ರಭಾಕರಿಯುಂ, ಅಂಕಾವತಿಯುಂ, ಪದ್ಮಾವತಿಯುಂ, ಸುಪ್ರಭೆಯುಂ, ರತ್ನಸಂಚಯೆ ಎಂಬೀಯೆಂಟುಂ ತೆಂಕಣತಡಿಯ ವಿಷಯಂಗಳ ರಾಜಧಾನಿಗಳ್, ಅಶ್ವಪುರಿಯುಂ, ಸಿಂಹಪುರಿಯುಂ, ಮಹಾಪುರಿಯುಂ, ವಿಜಯಪುರಿಯುಂ, ಅರಜೆಯುಂ, ವಿರಜೆಯುಂ ಅಶೋಕೆಯುಂ, ವೀತಶೋಕೆಯುಮೆಂಬೀಯೆಂಟುಂ ಸೀತೋದೆಯ ತೆಂಕಣತಡಿಯ ವಿಷಯಂಗಳ ರಾಜಧಾನಿಗಳ್, ವಿಜಯೆಯುಂ, ವೈಜಯಂತಿಯುಂ, ಜಯಂತೆಯುಂ, ಅಪರಾಜಿತೆಯುಂ, ಚಕ್ರಪುರಿಯುಂ, ಖಡ್ಗಪುರಿಯುಂ, ಅಯೋಧ್ಯೆಯುಂ, ಅವಧ್ಯೆಯುಂ ಎಂಬೀಯೆಂಟುಂ ಬಡಗಣತಡಿಯ ವಿಷಯಂಗಳ ರಾಜಧಾನಿಗಳ್ ಇಂತೀ ವಿಧದ ನಗರಂಗಳಂ ವ್ಯಾವರ್ಣಿಸುವುದು

ರಾಜಾಖ್ಯಾನಮೆಂಬುದು, ತತ್ಕ್ಷಿತಿಯಪ್ಪರಸನ ವಂಶವೀರ್ಯ ಶ್ರುತ ವಿಭವಾದಿಗಳಂ ಪೇೞ್ವುದು

ತೀರ್ಥಾಖ್ಯಾನಮೆಂಬುದು ದುರಿತ ವಿನಾಶಕಾಂಕ್ಷಿಗಳ್ ಸಂಸಾರಸಮುದ್ರಮಂ ನೀಸಲೆಂದು ಜಿನಪತಿಮುಖಕಮಲ ವಿನಿರ್ಗತ ಧರ್ಮಸಂತತಿ ಪ್ರಕಟೀಕರಣಂಗೆಯ್ವುದು.

ತಪೋಧನಾಖ್ಯಾನ ಮೆಂಬುದು ಜಿನತೀರ್ಥದೊಳ್ ಪುಟ್ಟಿದ ತ್ರಿಷಷ್ಟಿಶಲಾಕಾಪುರುಷರ ತಪದ ಶ್ರಾವಕ ನಿಯೋಗಂಗಳ ಮೆಚ್ಚುಡಿತಕ್ಕೆ ಯಂತ್ರತಂತ್ರಾನುಪೂರ್ವಗಳಿಂ ಸದ್ಧರ್ಮಕಥನಂ ಗೆಯ್ವುದು

ಗತ್ಯಾಖ್ಯಾನ ಮೆಂಬುದು ತ್ರಿಷಷ್ಟಿ ಶಲಾಕಾ ಪುರುಷ ಕೃತಕರ್ಮ ಸಂಬಂಧ ಜನಿತಸುಖಾದಿ ಸಮನುಭವನ ಕಾರಣಂಗಳಪ್ಪ ಗತಿ ವಿಕಲ್ಪಂಗಳಂ ಪೇೞ್ವುದು.

ಫಲಾಖ್ಯಾನಮೆಂಬುದು ಆ ತ್ರಿಷಷ್ಟಿಶಲಾಕಾ ಪುರುಷರ ಪುಣ್ಯಕರ್ಮ ಪರಿಪಾಕದೊಳ್ಪುಟ್ಟಿದಭ್ಯುದಯ ಸುಖಮನಕ್ಕೆ, ಕರ್ಮಕ್ಷಯದೊಳ್ಪುಟ್ಟಿದ ನಿಶ್ರೇಯಸ ಸುಖಮನಕ್ಕೆ, ಪೇೞ್ವುದು.

ಇಂತೀ ಮಹಾಪುರಾಣ ಪೀಠಿಕಾಮುಖಮಂ ನಿರ್ವರ್ಣಿಸಿ ಕಥಾವತಾರದೊಳ್-

ಜಂಬೂದ್ರುಮೋಪಲಕ್ಷಿತ ಜಂಬೂದ್ವೀಪದ ಮಂದರದ ಅಪರವಿದೇಹದ ಸೀತೋದಾನದಿಯ ಬಡಗಣತಡಿಯೊಳ್ ಸೀತೋದೆಗಂ ನೀಳಗಿರಿಯ ವಕ್ಷಾರಗಿರಿಯ ಊರ್ಮಿಮಾಳಿನೀ ವಿಭಂಗನದಿಯ ನಡುವಣ ಗಂಧಿಲವಿಷಯದ ವಿಜಯಾರ್ಧ ಪರ್ವತದ ಉತ್ತರಶ್ರೇಣಿಯ ಅಳಕಾಪುರಮೆಂಬ ಪೊೞಲನಾಳ್ವ ಸತಿಬಳನೆಂಬಂ ವಿದ್ಯಾಧರರಾಜಂ ಆತನ ಮಹಾದೇವಿ ಮನೋಹರಿಯೆಂಬೊಳ್. ಅವರ ಮಗಂ ಮಹಾಬಳನೆಂಬೊಂ,

ಆತಂಗೆ ಯುವರಾಜಪದವಿಯುಮಂ ಕೊಟ್ಟೊಂದು ದಿವಸಂ ತನ್ನ ಕೆನ್ನೆಯ ನರೆಯುಮಂ ಕಂಡು ನಿರ್ವೇಗ ಕಾರಣಮಾಗೆ ಮಹಾಬಳಂಗೆ ರಾಜ್ಯಮಂ ಕೊಟ್ಟು, ಅತಿಬಳಂ ಸಾಸಿರ್ವರರಸು ಮಕ್ಕಳು ಮಯ್ನೂರ್ವರರಸಿಯರುಮಂ ಬೆರಸು, ಗಣಧರ[1] ಕೇವಲಿಗಳ ಪಾದಮೂಲದೊಳ್ ತಪಮಂ ಕೈಕೊಂಡಂ

ಇತ್ತಲಾ ಮಹಾಬಳಂ ಸ್ವಯಂಬುದ್ಧ, ಮಹಾಮತಿ, ಸಂಭಿನ್ನ, ಶತಮತಿಗಳೆಂಬ ನಾಲ್ವರುಂ ಮಂತ್ರಿಗಳ ಮೆಯ್ಯೊಳ್ ರಾಜ್ಯಭಾರಮಂ ನಿಱಿಸಿ ನಿಶ್ಚಿಂತನಿರ್ದೊಂದು ದಿವಸಂ, ತನ್ನ ವರ್ಷವರ್ಧನ ದಿನದೊಳ್ ಸಿಂಹಾಸನಾಸೀನನೋಲಗಂಗೊಟ್ಟಿರ್ದು ಮಹಾಪ್ರಸ್ತಾವದೊಳ್ ಸದ್ಧರ್ಮೋಪದೇಶಲಬ್ಧಾವಸರಂ ಸ್ವಯಂಬುದ್ಧನರಸಂಗಿಂತೆಂದಂ

ಈ ನಿನ್ನ ವಿದ್ಯಾಧರ ಸಾಮ್ರಾಜ್ಯಂ ಪುಣ್ಯಜನಿತಮಿದಲ್ಲದೆಯುಂ ಚಕ್ರಛತ್ರಾದಿ ಲಕ್ಷಣಂಗಳೆಲ್ಲಂ ಪುಣ್ಯಪ್ರಭಾವದಿಂದಕ್ಕುಮೆನೆ, ಲೋಕಾಯತಿಕ ಮತಾನುಸಾರಿ ಮಹಾಮತಿ ಜೀವನಿಲ್ಲಂ ತದಾಶ್ರಯಮಪ್ಪ ಪುಣ್ಯಪಾಪಂಗಳಿಲ್ಲಂ, ಅದಱಿಂ ಸತ್ತಂ ಪುಟ್ಟಂ, ಕೆಟ್ಟಂ ಕೆಟ್ಟಂ ಎಂದು ನುಡಿದಂ ತದನಂತರಂ ವಿಜ್ಞಾನವಾದಮನಾಶ್ರಯಿಸಿ ಸಂಭಿನ್ನನುಂ, ಶೂನ್ಯವಾದಮನಾಶ್ರಯಿಸಿ ಶತಮತಿಯುಂ, ತಂತಮ್ಮ ಮತದ ಕುಹೇತು ಕುದೃಷ್ಟಾಂತಂಗಳಿಂದಮಿಂತು ಮೂವರುಂ ಜೀವಾಭಾವಮನೆ ಸಮರ್ಥಿಸಿ ದೊಡವರ ನುಡಿಯನವಧಾರಿಸಿ ಸ್ವಯಂಬುದ್ಧಂ ಜೀವನಿಲ್ಲೆಂಬರಪ್ಪೊಡೆ ಪಱಸೊಳ್ ಸತ್ತು ಕಲೆವೆರಸು ಪುಟ್ಟುವುದುಮಂ, ಭವಮನಱಿತು ಮುನ್ನಿನ ಬಯಕೆಗಳಂ ತೋಱುವುದುಮಂ ದೇವಗತಿಯೊಳ್ಪುಟ್ಟಿ ಹನನಕಾಮ ಬಲಿಕಾಮ ರತಿಕಾಮಂಗಳಂ ತಂತಮ ಬಯಕೆಗಳಂ ತೀರ್ಚುವುದುಮಂ ಕಾಣಲಾದಪ್ಪುದೆ ? ಯೆಂಬಿವು ಮೊದಲಾಗೆ ಪಱಸಂ ಸುಹೇತುದೃಷ್ಟಾಂತಂಗಳಿಂದವರಂ ನಿರುತ್ತರರಂ ಮಾಡಿ, ಮತ್ತಂ ಸಭೆಯುಮಂ ಸಭಾಪತಿಯುಮಂ ತಿಳಿಪುವ ಬಗೆಯಿಂದಂ ದೃಷ್ಟಶ್ರುತಾನುಭೂತ ತದನ್ವಯಸಂಬಂಧಿಗಳ ಕಥೆಗಳನಿಂತೆಂದು ಪೇಳ್ದಂ

ದೇವ! ನಿನ್ನ ಸಂತತಿಯೊಳರವಿಂದನೆಂಬೊಂ ಅಂಬರಚರಂ ತನಗಂ ವಿಜಯೆಯೆಂಬೊಳ್ಗಂ ಪುಟ್ಟಿದ ಹರಿಶ್ಚಂದ್ರ ಕುರುವಿಂದರೆಂಬ ಮಕ್ಕಳ್ವೆರಸು ರಾಜ್ಯಂಗೆಯ್ವು, ಬಹ್ವಾರಂಭ ರೌದ್ರಧ್ಯಾನದಿನುಪಾರ್ಜಿಸಿದ ನಾರಕಾಯುಷ್ಯಂ ಆಸನ್ನಮೃತ್ಯುವಾಗಿ, ದಾಹಜ್ವರ ಮುರಿಯುತ್ತಿರಲ್, ಚಂದನದ್ರವಾದಿ ಶೀತಲಕ್ರಿಯೆಯುಂ ಸಂತಾಪಮನೆಂತುಂ ಆಱಿಸಲಾಱದೆ ಇರೆ, ಪುಣ್ಯಕ್ಷಯದೊಳ್ ತನ್ನ ವಿದ್ಯೆಗಳುಂ ಬೆಸಗೆಯ್ಯದಿರೆ, ಹರಿಶ್ಚಂದ್ರನಂ ಕರೆದು ದುಸ್ಸಹಾವಸ್ಥೆಯನಱಿಪಿ ನೀನೆನ್ನಂ ವಿದ್ಯೆಯಿಂದುತ್ತರ ಕುರುವನೆಯ್ದಿಸು ತಣ್ಣೆಲರಿಂ ಮದೀಯಾಂಗ ಸಂತಾಪಮನಾಱಿಸುವೆನೆಂದು ಪೇಳುತ್ತಿರ್ದ ದಾತನುಂ, ತನ್ನ ಗಗನಗಾಮಿನೀವಿದ್ಯೆಯುಂ ಬೆಸಕೆಯ್ಯದುದುಂ ನರಕಗಮನಾಭಿಮುಖನಾಗಿರ್ದರವಿಂದಂಗುಪಕಾರಂ ಗೆಯ್ವುದೆನಗಶಕ್ಯಮೆನೆ, ವಿದ್ಯಾವಚನದಿಂ ತಮ್ಮಯ್ಯನ ಪಾಪಮುಂ ದುರ್ಗತಿಗಮನಮುಮನಱಿತು ವಿಷಣ್ಣಮನನಂತು ದಾಸೀನನಾಗಿರ್ದಂ ಅನ್ನೆಗಂ ಗೃಹಕೋಕಿಲಂಗಳೊಂದೊಂದಂ ಬಿಂದೊಂದು ಕಾದಿ ಕೆನೆ ಪನಿತ ಶೋಣಿತ

1 ಚ ಪ ಗಳಲ್ಲಿ ಗುಣಧರ ಎಂದಿದೆ

ಬಿಂದುಗಳ್ ತನ್ನ ಮೆಯ್ಗೆ ಪಾಪಪರಿಪಾಕದಿಂ ತಣ್ಪಂ ಪಡೆಯೆ, ಪರಮೌಷಧಮಂ ಪಡೆದೆನೆಂದು ಕರಮೊಸೆದರವಿಂದಂ ಕುರುವಿಂದನಂ ಕರೆದು, ಉತ್ಪನ್ನ ವಿಭಂಗ ಜ್ಞಾನದಿಂ ಮೃಗಂಗಳ ಕೆಯ್ಯ ನಱದು ನಿಷ್ಕರುಣ ನವರುಣ ಜಲದೊಳ್ ಎನಗೆ ಲೀಲಾಸರೋವರಮಂ ಮಾಡೆಂದು ಪೇೞೆ, ನಿಸ್ತ್ರಿಂಶಕರ್ಮಕ್ಕೆ ಆವಂ ಕೊಕ್ಕರಿಸಿ ಪಾಪಭೀರುವಾಗಿಯುಂ, ತಂದೆಯುಪರೋಧದಿಂ ಮನಮಿಲ್ಲದ ಮನದೊಳ್ ಆತಂ ಪೇೞ್ದ ಮೃಗದಿಕೇಯುನೆಯ್ದು ಗಣಧರರೆಂಬ ದಿವ್ಯಜ್ಞಾನಿಗಳ ನಲ್ಲಿರ್ದರಂ ಕಂಡು, ನಿವೇದಿತ ನಿಜಜನಕ ವೃತ್ತಾಂತನವರ ವಚನದಿಂ ತಮ್ಮಯ್ಯನ ಪಾಪಮಂ ನರಕಕ್ಕೆ ಪೋಪುದುಮ[1] ನಱದು, ಕರುಣಾವಿನದಿಂ ಮಾಡದೆ ರಕ್ತಮಂ ಪೋಲ್ವ ಲಾಕ್ಷಾದ್ರವದೊಳ್ ದೊಡ್ಡವಾವಿಯಂ ತೀವಿದೊಡದರೊಳ್ ಪೊಕ್ಕು ಮುಯ್ಗಾಡಿ ಮುಕ್ಕುಳಿಸಿ ನೋಡಿ, ಕೃತಕರುಧಿರಮಪ್ಪುದ ನಱದಿವನೆನ್ನಂ ವಂಚಿಸಿದನೆಂದು ಮುಳಿದು, ಸುರಗಿಯುಂ ಕಿತ್ತು ತವತವ ವರಿಸುತ್ತ ಬಱಯಲ್ ಪೋಪಾತಂ ಬಾಯ ಸೋಪಾನದಂ ನಡರುತ್ತುಂ ಜಾಱ ವಂದುರದೊಳ್ ಸಟ್ಟ ಸುರಗಿ ಬೆನ್ನೊಳ್ ಸ್ಮಾಡಿ ಸತ್ತು ನರಕಕ್ಕೆಯ್ದಿದಂ, ಇದನೀಗಳು ಮಾಪುರದ ಜನಂಗಳ್ ಪೇೞೆ ಬಿಡುದು ಶ್ರುತಂ

ಮತ್ತಮಾತನ ವಂಶದೊಳ್ ದಂಡಕನೆಂಬೊ ನಾತನರಸಿ ಸೌಂದರಿಯೆಂಬೊಳವಗೇ ಮಣಿಮಾಳಿಯೆಂಬೊ ಮಗನಾಗೆ, ದಂಡಕಂ ಪಲವುಕಾಲ ಮರಸುಗೆಯ್ದು, ನ್ಯಾಯದೊಳ್ ಪೃಥ್ವಿಯಂ ಪಾಲಿಸಿ ಪೋಪಬೊಯ್ತ್ತು. ಅತಿಲುಬ್ಧಂ ಸತ್ತು ತನ್ನ ಭಂಡಾರದೊಳ್ ಗಜಗರನಾಗಿ ಪುಟ್ಟಿ, ತನ್ನ ಮುನ್ನಿನ ವಸ್ತುಗಳುಮಂ ಮಗಂ ಮಣಿಮಾಳಿಯುಮಂ ಕಂಡು ಜಾತಿಸ್ಮರನಾಗಿ ಮಗನಲ್ಲದುಳಿದ ರಾರುಮಂ ಸಾರಲೀಯದೆ ಭಂಡಾರಮ ಕಾದುಕೊಂಡಿರ್ಪ್ಪನ ನೊಂದು ದಿವಸಂ, ಮಣಿಮಾಳಿ ರತಿಸಾರಣನೆಂಬವಧಿ ಜ್ಞಾನಿಗಳ ನಜಗರ ವೃತ್ತಾಂತಮಂ ಬೆಸಗೊಂಡು ತಮ್ಮಯ್ಯನೆಂದಱದು ಅದಱ ಕೆಲಕ್ಕೆ ಬಂದಿಂತೆಂದಂ ನೀನತಿ ಲೋಭದೊಳಾರ್ತಧ್ಯಾನದೊಳ್ ಸತ್ತು ತಿರ್ಯಗ್ಗತಿಯೊಳ್ ಪುಟ್ಟಿ ನವೆದಪ್ಪೆಯೆನ್ನ ಪೊಡಂ ನಾಂ ಪೇೞ್ವ ಧರ್ಮಮಂ ಕೈಕೊಳ್ಳೆನಲೊಡಮದು, ಆಹಾರಮಂ ತೊಱದು, ಶರೀರಪರಿತ್ಯಾಗಂಗೆಯ್ದು ಸಗ್ಗದೊಳ್ ದೇವನಾಗಿ ಪುಟ್ಟಿ. ತನ ಮಗಂ ಗೆಯ್ದುಪಕಾರಮಂ ನೆನೆದು ಬಂದು ಮಗನಂ ಪೂಜಿಸಿ ಮೇಲಪ್ಪ ಮಣಿಹಾರಮಂ ಕೊಟ್ಟೊಡೆ, ಕುಲಧನಮಾಗಿ ನೀನೀಗಳ್ ಕೊರಲೊಳ್ ತಾಳ್ದಿರ್ದಪೆಯದನುಭೂತಂ

ಅದಲ್ಲದೆಯುಂ ನಿಮ್ಮ ಪಿತೃಪಿತಾಮಹಂ ಸಹಸ್ರಬಳನೆಂಬೊ ನಂಬಿರ ಶ್ರೀಯುನನುಭವಿಸುತ್ತಿರ್ದೊರ್ಮ್ಮೆ ಘನಾಂತಮಮಯ ಜಲಧರವಿಳಯ ನಿರೀಕ್ಷಣದಿಂ ತನ ಮಗಂ ಶತಬಳಂಗೆ ರಾಜ್ಯಮನಿತ್ತು ದುರ್ಧರತಪದಿ ನನಗಾರ ಕೇವಲಿಯಾಗಿ ಮೋಕ್ಷಕ್ಕೆಸಂದಂ. ಆ ಶತಬಳನುಂ ನಿನ್ನ ತಂದೆಯುಪ್ಪತಿಬಳಂಗೆ ರಾಜ್ಯಮಂ ಕೊಟ್ಟು ಬಟ್ಟ ತಪಂಬಟ್ಟನಶನಾವ ಮೋದಾರ್ಯಾದ್ಯಾದರಣದಿಂ ಕಾಲಾಂತರದೊಳ್ ಸಂನ್ಯಾಸವಿಧಿಯಿಂ ಮುಡಿಪಿ, ಮಹೇಂದ್ರ ಕಲ್ಪದೊಳ್ ಸಪ್ತಸಾಗರ ಪ್ರಮಿತ ಜೀವಿತಂ, ಅಣಿಮಾದ್ಯಷ್ಟಗುಣೈಶ್ವರ್ಯೋಪೇತಂ ದೇವನಾಗೆ, ಕುಮಾರ ಕಾಲದಂದು ನೀಮುಂ ಮಾಮುಂ ಕ್ರೀಡನ ನಿಮಿತ್ತದಿಂ ಪೋಗಿ ಮಂದರದ ನಂದನವನದೊಳಂ ವನಕ್ರೀಡೆಯಾಡುತಿರ್ಪಿನಂ,

1 ಗ ವ ಜ ಪ್ರತಿಗಳಲ್ಲಿ ಬಿಟ್ಟ . ಎಂದಿದೆ.

ಅಲ್ಲಿಯ ಮೂಡಣ ಅಕೃತ್ರಿಮ ಚೈತ್ಯಾಲಯಮಂ ವಂದಿಸಲಾ ಮಹೇಂದ್ರಕಲ್ಪಜಂಬಂದು ಜಿನಪೂಜೆಯುಂ ಮಾಡಿ ಪೊಱಮಡುತುಂ ನಿನ್ನಂ ಕಂಡಟ್ಟುರ್ತು ಪರಸಿ ತಟ್ಟಿತ್ತ್ರ್ಯಸಿ ನೀನೆನ್ನ ಮೊಮ್ಮಗನೆಂದು ನಿಜವೃತ್ತಾಂತಮನಱಿಪಿ ಜಿನಧರ್ಮವೆ ಸ್ವರ್ಗಾಪವರ್ಗಕ್ಕೆ ಕಾರಣಮಪ್ಪುದಂ ಮಱೆಯದಿರೆಂಬುದ ನಱಿಪಿದಂ, ಅದಲ್ಲದೆಯುಂ ನಿಮ್ಮಯ್ಯಂ ನಿನಗೆ ರಾಜ್ಯಮುಂ ಕೊಟ್ಟು ತನ್ನ ಮಕ್ಕಳುಂ ಮೊಮ್ಮಕ್ಕಳುಂ ಪೆಱವರರಸುಮಕ್ಕಳುಂ ಬೆರಸು ತಪಮಂಕೈಕೊಂಡು ಶುಕ್ಲಧ್ಯಾನದಿಂ ಘಾತಿಕ್ಷಯಂಗೆಯ್ದು ಕೇವಳಿಯಾಗೆ ದೇವನಿಕಾಯದೊಡನೆ ನಾಮೆಲ್ಲಮರ್ಚಿಸಿ ಬಂದೆವು ಇದು ದೃಷ್ಟಂ.

ಎಂದಿಂತು ಶ್ರುತಾನುಭೂತ ದೃಷ್ಟಕಥೆಗಳಂ ತೋಱಿಸಿ ಜೀವಸಿದ್ಧಿಗೆಯ್ಯೆ, ಸಭೆಯುಂ ಸಭಾಪತಿಯುಂ ತಿಳಿದು ಜಿನಧರ್ಮವೆ ಧರ್ಮವೆಂದು ಮೆಚ್ಚಿ ಜಯಪತ್ರಮಂ ಸ್ವಯಂಬುದ್ಧಂಗೆ ಕೊಟ್ಟು ಸತ್ಕಾರಪೂರ್ವಕಂ ತುಷ್ಟಿದಾನಂಗೊಟ್ಟು ತನಗಾಪ್ತನಾತನೆಯಾಗೆ ಮಹಾಬಳಂ ಮೂವತ್ತಾಱುಲಕ್ಷಪೂರ್ವಂ ರಾಜ್ಯಂಗೆಯ್ಯುತ್ತಿರೆ, ಮತ್ತೊಂದುದಿವಸಮಾಸ್ವಯಂಬುದ್ಧಂ ಮಂದರದ ಅಕೃತ್ರಿಮ ಚೈತ್ಯಾಲಯಂಗಳ ಬಂದಿಸಿ ಬಂದು ಸೌಮನಸವನದ ಪೂರ್ವ ದಿಗ್ಭಾಗದ ಜಿನಭವನದ ಮಂಟಪದೊಳಿರ್ಪನ್ನೆಗಮಲ್ಲಿಗೆ ಪೂರ್ವವಿದೇಹದ ಸೀತಾನದಿಯ ಬಡಗಣತಡಿಯ ಮಹಾಕಚ್ಛವಿಷಯದ ಅರಿಷ್ಟಪುರದ ಯುಗಂಧರ ತೀರ್ಥಕರ ಸಮವಸರಣದಿಂ ಗಗನಚಾರಣರಾದಿತ್ಯಗತಿಗಳುಮರಿಂಜಯರು ಮೆಂಬವಧಿಜ್ಞಾನಿಗಳ್ ಬರೆ, ಭಕ್ತಿ ಪೂರ್ವಕಮಿದಿರ್ಗೊಂಡು ವಂದಿಸಿ ವ್ರತಮನೇಱಿಸಿಕೊಂಡು ಧರ್ಮಶ್ರವಣಾನಂತರ ಮಾದಿತ್ಯಗತಿಗಳ್ಗಿಂತೆಂದು ಪ್ರಶ್ನಂಗೆಯ್ದಂ.

ಎಮ್ಮರಸಂಗಾ ನೆನಿತು ಧರ್ಮಶ್ರವಣಂ ಗೆಯ್ದೊಡಂ ಭೋಗಂಗಳ್ಗೆ ವಿಮುಖನಾಗಂ. ಆತನಭವ್ಯನೊ ಭವ್ಯನೊ ದೂರಭವ್ಯನೊ? ನಿಮ್ಮಡಿಗಳ್ ತಿಳಿಯೆ ಬೆಸಸಿಮೆಂಬೊಡವರಿಂತೆಂದರ್ ಆತನಭವ್ಯನಲ್ಲಂ, ಭವ್ಯನೇ ಭವ್ಯನಾಗಿಯುಮಾಸನ್ನಭವ್ಯಂ

ಎಂತೆಂದೊಡೆ ಜಂಬೂದ್ವೀಪದ ಪರವಿದೇಹದ ಗಂಧಿಲವಿಷಯದ ಸೀತೋದಾನದಿಯ ದಕ್ಷಿಣತಡಿಯ ಸಿಂಹಪುರಮನಾಳ್ವಂ ಶ್ರೀಷೇಣಂಗ ಮಾತನರಸಿ ಸುಂದರಿಗಂ ಜಯವರ್ಮನುಂ ಶ್ರೀವರ್ಮನುಮೆಂಬ ತನಯರಾಗೆ ಕಿಱಿಯಾತನೆ ಪರಿವಾರಕ್ಕಮರಸಂಗಮಣುಗನಾಗಿ ಬಳೆಯೆ, ಶ್ರೀಷೇಣಂ ಪಿರಿಯಮಗಂ ಯೋಗ್ಯನಲ್ಲೆಂದು ಕಿಱಿಯಮಗಂ ಶ್ರೀವರ್ಮಂಗೆ ರಾಜ್ಯಮಂಕೊಟ್ಟು ತಪಕ್ಕೆ ಪೋದಂ ಇತ್ತ ಜಯವರ್ಮಂ ಕ್ರಮಕ್ಕೆ ಪುಟ್ಟಿದನಿರ್ದಂತೆನ್ನ ತಮ್ಮಂಗೆ ರಾಜ್ಯಮಂ ಕೊಟ್ಟಂ ಈ ಭವದೊಳ್ ಪಡೆಯದೊಡಮನ್ಯಭವದೊಳಪ್ಪೊಡಂ ರಾಜ್ಯಮಂ ಪಡೆವೆನೆಂದು ಸ್ವಯಂಪ್ರಭಗುರುಗಳ ಸಾರೆ ದೀಕ್ಷೆಯಂ ಕೊಂಡು, ಪಱಿದು ಮಕುಟ ಕುಂತಳಂಗಳಂ ಪುತ್ತಿನೊಳಗೆ ಮಡಗಲೆಂದು ಕಯ್ಯಂ ಕುತ್ತಿದೊಡಲ್ಲಿರ್ದ ಕಾಳಂಗನಾಗಂ ಕಯ್ಯಂ ಕೊಂಡೊಡಾ ಪ್ರಸ್ತಾವದೊಳ್, ಮಹೀಧರನೆಂಬ ವಿದ್ಯಾಧರಂ ಪಿರಿದುಂ ವಿಭೂತಿಯಿಂದ ಮಂಬರದೊಳ್ ಪೋಪುದಂ ಕಂಡೆನ್ನತಪದ ಫಲಮುಳ್ಳೊಡೆ ವಿದ್ಯಾಧರನಪ್ಪೆನಕ್ಕೆಂದು ಸತ್ತಾತಿಬಳಂಗೆ ಮಹಾಬಳನಾಗಿ ಪುಟ್ಟಿ ಮುನ್ನಿನ ಭವದೊಳ್ ಬಯಸಿ ಪಡೆದ ವಿದ್ಯಾಧರ ಶ್ರೀಯನಿನ್ನಗಂ ಬಿಸುಡದಿರ್ದೊಡೇನಾದುದೆಂದು ಇಂದು ಕನಸಿನೊಳ್ ತನ್ನ ಮೂವರುಂ ಪೆರ್ಗಡೆಗಳಡಸಿ ಕಟ್ಟಿ ಕೊಟ್ಟುಕೆಸರಬಾವಿಯೊಳಿಟ್ಟುದ್ದೀಂಬಂದು ಅವರಂ ಭಂಗಿಸಿ ಕನಕ

ಪೀಠದೊಳಿರಿಸುವುದುಮನೆಚ್ಚರ ಸಂದುವುದುಮಂ ಕಂಡಿರ್ದ ಶುಭಸ್ವಪ್ನ ದರ್ಶನಕ್ಕೆ ಕೊಕ್ಕರಿಸಿ ನಿನ್ನ ಬರವನೆ ಪಾರುತ್ತಿರ್ದಪಂ ಆತಂಗೊಂದೇ ತಿಂಗಳಾಯುಷ್ಯಂ. ಆತನಿಂ ಮುನ್ನಂ ನೀನೀ ಕನಸುಗಳಂ ಪೇೞ್ವಪೇೞಲೊಡಂ ನಿನ್ನ ಮಾತನೆ ಕೈಕೊಂಡು ನೀಂ ನೋನಿಸೆ ನೋಂತು, ಮಹಾಬಳಂ, ಲಲಿತಾಂಗದೇವಂ, ವಜ್ರಜಂಘಂ, ಆರ್ಯಂ, ಶ್ರೀಧರದೇವಂ, ಸುವಿಧಿ, ಅಚ್ಯುತೇಂದ್ರಂ, ವಜ್ರನಾಭಿ, ಅಹಮಿಂದ್ರನುಂ ಆಗಿ ಭರತನೊಳಾದಿ ದೇವನಪ್ಪಂ

ನೀನುಂ ಮೂಱನೆಯ ಭವದೊಳ್ ಕರ್ಮಕ್ಷಯಂಗೆಯ್ವೆಯೆಂಬುದುಂ ಸ್ವಯಂಬುದ್ಧಂ ಚಾರಣಯುಗಳಮಂ ಬಂದಿಸಿ ಬಂದು ಮಹಾಬಳನಂ ಕಂಡು ಆತನು ಕಂಡ ಕನಸುಗಳೆಲ್ಲಮಂ ಸಪ್ರಪಂಚಮಱಿಪಿ, ಮತ್ತಂ ದಿವ್ಯಜ್ಞಾನಿಗಳ್ ನಿನಗೊಂದು ತಿಂಗಳಾಯುಷ್ಯಮೆಂದು ಪೇೞ್ದರ್ ಇನ್ನೀ ಪ್ರಮಾಣಲಾಗದೆಂಬುದುಮಂತೆ ಗೆಯ್ವೆನೆಂದು ನಿಜನಗರೋದ್ಯಾನದ ಜಿನಗೃಹದೊಳ್ ಮಹಾಮಹಮೆಂಬ ಜಿನಮಹಾಮಹಮೆಯನೆಂಟು ದಿವಸಂ ಮಹಾಬಳಂ ಮಾಡಿ, ಪರಿಜನಮೆಲ್ಲಮುಂ ಬರಿಸಿ ತನ್ನ ಮಗನತಿಬಳಂಗೆ ರಾಜ್ಯಮಂ ಕೊಟ್ಟು ಸಿದ್ಧಕೂಟಕ್ಕೆ ಪೋಗಿ ತ್ರಿಪ್ರದಕ್ಷಿಣಂಗೆಯ್ದು ದೇವರಂ ಪೂಜಿಸಿ ಮಹಾಜನಾಗ್ರಹಣಸಮೇತ ಮಾರಾಧನೆಯನರ್ಚಿಸಿ ವೀರಸಂಸ್ಕಾರರೂಢನಾಗೆ, ಸ್ವಯಂಬುದ್ಧಂ ನಿರ್ಯಾಪಕಾಚಾರ್ಯನಾಗಿ ಪಂಚಗುರುಸಮಕ್ಷದೊಳ್ ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗಪುರಸ್ಸರಂ ಮಹಾಬಳನಂ ಜಾತರೂಪಧರನಂ ಮಾಡಿ ಚತುರ್ವಿಧಾಹಾರ ಶರೀರ ಪ್ರತ್ಯಾಖ್ಯಾನಮಂ ಕೊಟ್ಟು ತಾನುಂ ದೀಕ್ಷೆಯಂ ಕೈಕೊಳೆ, ಮಹಾಬಳನುಂ ಪ್ರಾಯೋಪಗಮನದೊಳ್ ಪತ್ತೆರಡುದಿವಸಂ ನೋಂತು, ಈಶಾನಕಲ್ಪದ ಶ್ರೀಪ್ರಭವಿಮಾನದೊಳೊಂದು ಸಾಗರೋಪಮಾಯುಷ್ಯಕೊಡೆಯನುಂ, ಸಪ್ತಹಸ್ತೋತ್ಸೇಧನುಂ, ಪಂಚದಶದಿನಕೃತ ಸಮುಚ್ಛ್ವಾಸನುಂ ಸಹಸ್ರವರ್ಷಕೃತಮಾನಸಾಮೃತಾಹಾರನುಂ ಸಂಪ್ರಾಪ್ತಭವಪ್ರತ್ಯಯಾವಧಿಜ್ಞಾನನುಂ ಮಹಿಮಾದ್ಯಷ್ಟಗುಣೈಶ್ವರ್ಯೋಪೇತನುಂ ನಿಷ್ಟಪ್ತಕನಕವರ್ಣನುಮಪ್ಪ ಲಲಿತಾಂಗದೇವನಾಗಿಪ್ಪುಟ್ಟಿ, ಸ್ವಯಂಪ್ರಭೆ ಕನಕಪ್ರಭೆ ಕನಕಲತೆ ವಿದ್ಯುಲ್ಲತೆಯೆಂಬ ನಾಲ್ವರ್ ಮಹಾದೇವಿಯರೊಳಂ ನಾಲ್ಸಾಸಿರ್ವರ್ ಮನೋನಯನವಲ್ಲಭೆಯರೊಳಂ ದಿವ್ಯಸುಖಮನುಭವಿಸಿ ಸ್ವಯಂಪ್ರಭಾದೇವಿಯರ್ ಪಲಂಬರುಂ ಕಟ್ಟಿಯೆ, ತನಗೆಯ್ದು ಪಳಿತೋಪಮಾಯುಷ್ಯ ಮುಗ್ವೆನೆ, ಮತ್ತೊರ್ವ ಸ್ವಯಂಪ್ರಭಾದೇವಿಯುಂ ತಾನು ಮಚ್ಯುತೇಂದ್ರನ ಪೂಜೆಯಿಂ ಸ್ವರ್ಗಸುಖಮನನುಭವಿಸಿ ಜೀವಿತಾಂತ್ಯದೊಳ್ ಸಾಮಾನಿಕದೇವ ಪ್ರತಿಬೋಧಿತಂ ಪದಿನೈದುದಿವಸಂ ತ್ರಿಭುವನಜಿನಭವನ ಕೃತಪೂಜಾವಿಧಾನಂ ಅಚ್ಯುತಕಲ್ಪದ ಜಿನಗೃಹಚೈತ್ಯವೃಕ್ಷಮೂಲದೊಳ್ ಮುಕುಳೀಕೃತಕರಕಮಲನುಮಾಗಿ ಪಂಚನಮಸ್ಕಾರ ಪದಮನುಚ್ಚರಿಸುತ್ತಬಂದು, ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಬಡಗಣತಡಿಯ ಪುಷ್ಕಲಾವತೀವಿಷಯದ ಉತ್ಪಲಖೇಟಮನಾಳ್ವ ವಜ್ರಬಾಹುಗಂ ವಸುಂಧರಾದೇವಿಗಂ ವಜ್ರಜಂಘನೆಂಬೊಂ ಮಗನಾಗಿಪ್ಪುಟ್ಟಿ ಬಳೆದು, ತನ್ನ ಮುನ್ನಿನ ಸ್ವಯಂಪ್ರಭೆಯುಂ ನೆನೆಯುತ್ತಿರ್ಪಿನ ಮಾಸ್ವಯಂಪ್ರಭಾದೇವಿಯುಂ ಜೀವಿತಾಂತ್ಯದೊಳ್ ಆಱುದಿಂಗಳ್ವರಂ ಜಿನಪೂಜೆಯಂ ಮಾಡಿ ಮೇರುಗಿರಿಯ ಸೌಮನಸವನದ ಪೂರ್ವದಿಗ್ಭಾಗದ ಚೈತ್ಯವೃಕ್ಷದಡಿಯೊಳ್ ಪಂಚನಮಸ್ಕಾರ ಪದಮನುಚ್ಚರಿಸುತ್ತಂ ಪ್ರಾಣವಿಯೋಗಮಾಗೆ

ಬಂದಾ ವಿಷಯದೊಳ್ ಪುಂಡರೀಕಿಣೀ ನಗರಮನಾಳ್ವ ವಜ್ರದಂತಂಗಂ ಲಕ್ಷ್ಮೀಮತಿಗಂ ಶ್ರೀಮತಿಯೆಂಬೊಳ್ ಮಗಳಾಗಿ ಪುಟ್ಟಿ ಪಂಡಿತೆಯೆಂಬ ದಾದಿಯೋದಿಸೆ ಬಳೆದು ಯೌವನ ಪ್ರಸ್ತಾವದೊಳ್ ತನ್ನ ಮಾಡದೊಳ್ ಪವಡಿಸಿ ಬೆಳಗಪ್ಪ ಜಾವದೊಳಾ ಪೊಱಲ ಬಹಿರುದ್ಯಾನ ವನದೊಳ್ ವರ್ಯಶೋಧರ ಗುರುಗಳ ಕೇವಲಜ್ಞಾನೋತ್ಪತ್ತಿಯೊಸಗೆಗೆ ಬಪ್ಪ ದೇವನಿಕಾಯಮಂ ಕಂಡು ತನ್ನ ಮುನ್ನಿನ ಭವದ ಲಲಿತಾಂಗದೇವನಂ ನೆನೆದು ಮೂರ್ಛೆವೋಗೆ ವಜ್ರದಂತನುಂ ಲಕ್ಷ್ಮೀಮತಿಯುಂ ಬಂದು ಮೂರ್ಛೆಯಿಂದೆಬ್ಬಱಿಸಿ ಬೆಸಗೊಳೆ ತಮಗೆಂತುಂ ಬಗೆ ವೇೞದೆ ಮೌನವ್ರತ ಪ್ರತಿಜ್ಞೆಯಿನಿರೆ ಪಂಡಿತೆಯುಂ ನಿನ್ನ ಬಲ್ಲಂದದೊಳ್ ಬೆಸಗೊಳ್ಕೆಂದು ಪೋದರ್. ಅನ್ನೆಗಮಾತಂ ತನ್ನ ಗುರುಗಳಪ್ಪ ಯಶೋಧರ ಗುರುಗಳ್ಗೆ ಕೇವಲಜ್ಞಾನಮುಮಾಯುಧಾಗಾರದೊಳ್ ಚಕ್ರರತ್ನಮುಂ ಪುಟ್ಟಿದೆರಡೊಸಗೆಯೊಳ್ ಮುಖ್ಯಮಪ್ಪ ಕೇವಳಿಪೂಜೆಯಂ ವಿಶೋಧಿಯಿಂ ಮಾಡಿದೊಡವಧಿಜ್ಞಾನಂ ಪುಟ್ಟೆ ಬಂದು ಚಕ್ರರತ್ನಪೂಜೆಯುಂ ಮಾಡಿ ದಿಗ್ವಿಜಯಕ್ಕೆ ಪೋದಂ.

ಅನ್ನೆಗಮಿತ್ತ ಪಂಡಿತೆ ಶ್ರೀಮತಿಯನಶೋಕವನದೊಳ್ ತನ್ನ ಬಲ್ಲಂದದೊಳೊಡಂಬಡಿಸಿ ಬೆಸಗೊಳೆ ನಿಜವೃತ್ತಾಂತಮೆಲ್ಲಮಂ ಪೇೞಲ್ ತಗುಳ್ದು ಆ ನೀ ಭವಕ್ಕೆ ಮೂಱನೆಯ ಭವದೊಳ್ ಧಾತಕೀಷಂಡದ ಪೂರ್ವ ಮಂದರದಪರವಿದೇಹದ ಸೀತೋದಾನದಿಯ ಬಡಗಣತಡಿಯ ಗಂಧಿಲವಿಷಯದ ಪಾಟಲಿಗ್ರಾಮದೊಳ್ ನಾಗದತ್ತನೆಂಬ ವರದಂಗವಾತನ ವರದಿತಿ ವಸುದತ್ತೆಗಂ ನಂದಂ, ನಂದಿಮಿತ್ರಂ, ನಂದಿಷೇಣಂ, ವರಸೇನಂ, ಜಯಸೇನನೆಂಬೈವರ್ ತನಯರಿಂದಂ ಮದನಕಾಂತೆ ಶ್ರೀಕಾಂತೆಯುಮೆಂಬಿರ್ವರ್ ತನೂಜೆಯರಿಂದಂ ಕಡೆಯ ಗರ್ಭದೊಳಾಂ ನೆಲಸಲೊಡನೆನ್ನದೊಂದಶುಭಕರ್ಮೋದಯದಿ ನೆನ್ನೊಡವುಟ್ಟಿದರುಂ ತಂದೆಯುಂ ಕಳಿದೊಡೆ ಅರಸರದೆಸೆಯಿಂ ಮನೆಕವರ್ತೆವೋಗೆ ಪಿರಿಯ ಕೇೞಿಯೊಳ್ ಸಾದೆಮ್ಮಬ್ಬೆಯುಂ ಮುತ್ತಬ್ಬೆಯುಂ ಬದಗುಗೆಯ್ದುಣುತಿರ್ಪಿನಂ ಱಂ ಪುಟ್ಟಿದೊಡನೆನ್ನ ಮೆಯ್ಯ ದುರ್ಗಂಧಕ್ಕೆ ಪೇಸಿ ಕಂಡರೆಲ್ಲಮೆಱಿದು ಕಳೆಯೆ ಪ್ರೇತವನದೊಳ್ ಸನ್ನಂ ಜೀರ್ಣ ಶೀರ್ಣ ಚೀರಂಗಳಿಂದಂ ಪುದಿದಿರಿಸಿ ತಾವಿಪ್ಪರುಂ ತಿರಿದು ತಂದಿಕ್ಕಿದೆಂಜಲ[1] ಟಮುಮಂ ತಿಂದು ಪೆಸರುಮಿಲ್ಲದೆ ನಿನಾಮಿಕೆಯಾಗಿ ಬಳೆವನ್ನೆಗಮವರೆಲ್ಲರು ಮೆನ್ನ ಮೊಗದೊಳ್ ನಿಲ್ಲದೆ ಪೋದಡಾನುಮಂಬರತಿಲಕವೆಂಬ ಚಾರಣಚರಿತವೆಂಬ ಪರ್ವತದಮೇಲೆ ಪಿಹಿತಾಸ್ರವರೆಂಬವಧಿಜ್ಞಾನಿಗಳಂ ಕಂಡಱಿವಿಲ್ಲದೆಯುಂ ಮನದೆಱಕದಿಂ ಪೊಡೆವಟ್ಟು ಎನ್ನಗೆಯ್ದ ಪಾಪಮೇನೆಂದು ಬೆಸಗೊಂಡೊಡವರಿಂತೆಂದರ್.

ಈ ವಿಷಯದ ಪಳಾಳಕೂಟ ಗ್ರಾಮದೊಳ್ ದೇವಿಲನೆಂಬ ಗಾವುಂಡಂಗಂ ಸುಮತಿಯೆಂಬ ಗಾವುಂಡಿತಿಗಂ ಧನಶ್ರೀಯೆಂಬ ಮಗಳಾಗಿ ನೀನಾಡುವೆಡೆಯೊಳ್ ಸಮಾಧಿಗುಪ್ತಯತಿಪತಿಗಳಧ್ಯಯನಂ ನಿನಗನಿಷ್ಟಮಾದೊಡದಂ ಮಾಣಿಸಲೆಂದು ನಾಯಪಡುಕೆಯ ನಿಕ್ಕಿದೊಡವರ್ ನಿನ್ನ ಪಾಪೋಚ್ಚಯಮನಱಿದು ಬಗ್ಗಿಸಿದೊಡೆ ನೀಂ ಬೆರ್ಚಿ ಬೇಗಮದನೆಳೆದು ಕಳೆದಱಿಯದೆ ಗೆಯ್ದೆನೆಂದವರ ಕಾಲ್ಗೆಱಗಿ ಪಶ್ಚಾತ್ತಾಪದಿಂದಂ ಮನುಷ್ಯಗತಿಯಂ ಪಡೆದೊಡಂ ಮುಂ ನೀಂ ಗೆಯ್ದ ಪಾಪಫಲದಿನಿನಿತು ದುಃಖಮನುಂಡೌ.

---

1 ಅ. ಗ, ಗಳಲ್ಲಿ ಎಂಜಲೂಟಮುಮಂ ಎಂದಿದೆ.

ನೀನಿನ್ನಪ್ಪೊಡಂ ಜಿನಧರ್ಮಮಂ ಕೈಕೊಳ್ವುದೆಂದೊಡವರ್ ಬೆಸಸಿದಂದದೊಳೆ ಶ್ರಾವಕವ್ರತಮಂ ಕೈಕೊಂಡು ಷೋಡಶಕಾರಣಂಗಳುಮಂ ಪಂಚಮಹಾಕಲ್ಯಾಣಮುಮಂ ಅಷ್ಟಮಹಾಪ್ರಾತಿಹಾರ್ಯಮುಮಂ ಚತುಸ್ತ್ರಿಂಶದತಿಶಯಮುಮುಮನುಪದೇಶಂಗೆಯ್ದು ಬಾವತ್ತು ಮೂಱುದಿವಸಂ ನೋಂಪ ಜಿನಗುಣಸಂಪತ್ತಿಯುಮನಿಪ್ಪತ್ತೆಂಟು ತೆಱದ ಮತಿಜ್ಞಾನಮುಮಂ ಪನ್ನೊಂದು ತೆಱದಂಗಮುಮಂ ಪನ್ನೆರಡು ತೆಱದ ಪರಿಕರ್ಮಮುಮನೆಣ್ಬತ್ತೆಂಟು ತೆಱದ ಸೂತ್ರಮುಮನೊಂದು ತೆಱದ ಪ್ರಥಮಾನುಯೋಗಮುಮಂ ಪದಿನಾಲ್ಕು ತೆಱದ ಪೂರ್ವಮುಮನೆಯ್ದು ತೆಱದ ಚೂಳಿಕೆಯುಮನಾಱು ತೆಱದವಧಿಜ್ಞಾನಮುಮನೆರಡು ತೆಱದ ಮನಃಪರ್ಯಯಜ್ಞಾನಮುಮನೊಂದು ತೆಱದ ಕೇವಳಜ್ಞಾನಮುಮನುಪದೇಶಿಸಿ, ಮೂವತ್ತೆಂಟು ದಿವಸಂ ನೋಂಪಶ್ರುತಜ್ಞಾನಮುಮಂ ಯಥೋಕ್ತವಿಧಿಯಿಂ ನೋಂತಾಯುಷ್ಯಾವಸಾನದೊಳ್ ಈಶಾನಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವಂಗೆ ದೇವಿಯುಂ ಸ್ವಯಂಪ್ರಭೆಯುನಾಗಿ ಪೂರ್ವೋಪಕಾರಮಂ ಬಗೆದು ಪಿಹಿತಾಶ್ರವಗುರುಗಳ್ ನಾನುಮಾತನುಂ ಪೋಗಿ ಪೂಜಿಸಿ ಸುರಲೋಕಸುಖಮನನುಭವಿಸಿ ಲಲಿತಾಂಗದೇವಂ ದೇವಲೋಕದಿಂ ಬಂದೆಲ್ಲಿ ಪುಟ್ಟಿದನೆಂದು ಅಱಿಯೆಂ ಆನುಮಾತನ ವಿಯೋಗದೊಳ್ ಆಱುದಿಂಗಳ್ವರಂ ಜಿನಮಹಿಮೆಯುಮಂ ಮಾಡಿ ಬಂದಿಲ್ಲಿ ಪುಟ್ಟಿ ದೇವಾಗಮನಮಂ ಕಂಡು ಜಾತಿಸ್ಮರೆಯೆನಾಗಿ ಲಲಿತಾಂಗದೇವನಂ ನೆನೆದು ಮೂರ್ಛೆಗೆ ಸಂದೆಂ ಇನ್ನೀ ಭವದೊಳಾತನೆ ಗಂಡನಲ್ಲದಂದಿಂತೆ ಕಾಲಮಂ ಕಳಿಪ್ಪೆನೆನೆ ಪಂಡಿತೆ ನಿನ್ನನಲ್ಲನನೆಲ್ಲಿರ್ದೊಡಂ ಪೊಕ್ಕಱಸಿ ತಪ್ಪೆನೆಂದಾಕೆ ಬರೆದ ಪಟಮಂ ಕೊಂಡಲ್ಲಿ ಬರೆಯದ ಪನ್ನಾಣಂಗಳಂ ಬೆಸಗೊಂಡುಪೋಗಿ ನಗರಮಧ್ಯಸ್ಥಿತ ಮಹಾಪೂತ ಜಿನಾಲಯದ ಪಟ್ಟಸಾಲೆಯ ಮುಂದೆ ನೇಲಿಸಿ ಕಾರ್ಯಸಿದ್ಧಿಯಂ ಪಾರುತ್ತಿರ್ಪ್ಪಾಗಳ್

ಅನ್ನೆಗಮಿತ್ತ ವಜ್ರದಂತ ಚಕ್ರವರ್ತಿ ದಿಕ್ಚಕ್ರಮಂ ಕ್ರಮದಿಂ ಬಾಯ್ಪೋಳಿಸಿ ಬಂದು ಪೊೞಲಂ ಪೊಕ್ಕು ಮಗಳ್ಗೆ ಬೆಸಸಿಯಟ್ಟಿ ನೀನಿನ್ನುದ್ವೇಗಂಬಡದಿರ್ ನಾಳೆಯೊ ನಾಳೆದೊ ನಿಜಪ್ರಿಯ ಸಮಾಗಮಮಕ್ಕುಂ ಅದೆಂತೆಂದೊಡೆ ಯಶೋಧರ ಗುರುಗಳೊಳಪ್ಪ ಅಧಿಕ ಭಕ್ತಿಯಿಂದೆನಗೆ ಪುಟ್ಟಿದವಧಿಜ್ಞಾನದೊಳೆನ್ನ ನಿನ್ನ ನಿನ್ನ ಕಾಂತನ ಜನ್ಮಾಂತರಮನಱಿದೆನೆಂದಿಂತೆಂದು ಪೇೞಲ್ ತಗುಳ್ದಂ

ಆನೀ ಭವಕ್ಕೈದನೆಯ ಭವದೊಳೀ ಪುಂಡರೀಕಿಣಿಯೊಳರ್ಧ ಚಕ್ರವರ್ತಿ ವಾಸುದೇವಂಗೆ ಚಂದ್ರಕೀರ್ತಿಯೆಂಬ ಮಗನಾಗಿ ಜಯಕೀರ್ತಿಯೆಂಬ ಕೆಳೆಯನುಮಾನುಮೊಡವೞೆದು ಗೃಹೀತಾಣುವ್ರತರೆ ಗೃಹಸ್ಥಧರ್ಮದೊಳಿರ್ದ್ವರುಂ ನೆಗೞ್ದು ಜೀವಿತಾಂತ್ಯದೊಳ್ ಪ್ರೀತಿವರ್ಧನೋದ್ಯಾನದೊಳ್ ಚಂದ್ರಸೇನಾಚಾರ್ಯರ ಪಕ್ಕದೊಳ್ ಸನ್ಯಾಸಂಗೆಯ್ದು ಸಮಾಧಿವಡೆದು ಮುಡಿಪಿ ಮಹೇಂದ್ರಕಲ್ಪದೊಳ್ ಸಪ್ತಸಾಗರ ಪ್ರಮಿತಜೀವಿತನೆಂದೇವನಾಗಿ ಪುಟ್ಟಿದೆಂ ಜಯಕೀರ್ತಿಯುಂ ಮಾಕಲ್ಪದೊಳೆ ಸಮಾನವಿಭವನಾಗಿ ಪುಟ್ಟಿದೊಂ ಅಂತಿರ್ವರುಮಮರ ಲೋಕಸುಖಮನನುಭವಿಸಿ ಬಂದು ಪುಷ್ಕರವರ ದ್ವೀಪದ ಮೂಡಣ ಮಂದರದ ಪೂರ್ವವಿದೇಹದ ಮಂಗಳಾವತೀ ವಿಷಯದ ರತ್ನಸಂಚಯ ಪುರಮನಾಳ್ವ ಶ್ರೀಧರ ನರಸಿಯರಪ್ಪ ಮನೋಹರಿಗಂ ಮನೋರಮೆಗಂ ಶ್ರೀವರ್ಮಂ ವಿಭೀಷಣನೆಂಬ ಪೆಸರೊಳ್ ಬಲವಾಸುದೇವರೆನಿಸಿ

ಬಳಿಯಂ ಮಹೀಯುಜನಕ ನಿರ್ವೇದಮನಧಿರಾಜ ಯುವರಾಜ ಪದವಿಯೊಳ್ ನಿಱಿಸಿ ಸುಧರ್ಮಗುರುಗಳ ಪಕ್ಕದೆ ತಪಮಂ ಕೈಕೊಂಡು ಕರ್ಮಂಗಳಂ ಕಿಡಿಸಿ ಕೃತಾರ್ಥನಾದಂ ಎನ್ನ ತಾಯ್ ಮನೋಹರೆಯುಂ ಮನ್ನೋಡಿಸ್ಸ್ವ ಮೋಹಂ ಕಾರಣಮಾಗೆ ಸಕಲ ಶ್ರಾವಕವ್ರತಂಗಳಂ ಕೈಕೊಂಡು ಸೂಱುನಾಲ್ವತ್ತು ದಿವಸಂ ನೆಱೆ ಪಕ್ವಮಾಕ್ಷಪಣವೆಂಬ ನೋಂಪಿಯಂ ನೋಂತು ಜೀವಿತಾಂತ್ಯದೊಳೀಶಾನ ಕಲ್ಪದ ಶ್ರೀಪ್ರಭವಿಮಾನದೊಳ್ ಲಲಿತಾಂಗದೇವನಾದಳ್

ಅನ್ನೆಗಮೆನ್ನನುಜನಪ್ಪ ವಿಭೀಷಣನ ಜನ್ಮದೊಳ್ ಸಂಸುತ್ತಿರ್ದ್ದೆನ್ನ ಶೋಕಮನಱಿದು ಮುನ್ನಿನ ಭವದ ಜನನಿಯಪ್ಪ ಲಲಿತಾಂಗದೇವಂ ವಿಭೀಷಣನರೂಪದಿಂ ಬಂದು ಬಱಿಯುಂ ದೇವರೂಪದಿನೆನ್ನಂ ಪ್ರತಿಬೋಧಿಸೆ ವಿಭೀಷಣಸುತಂಗೆ ರಾಜ್ಯಮಂ ಕೊಟ್ಟು ಶ್ರೀವರ್ಮಂ ಯುಗಂಧರ ತೀರ್ಥಕರರ ಪಕ್ಕದೆ ಪತ್ತುಸಾಸಿರ್ವರರಸುಮಕ್ಕಳ್ವೆರಸು ಜಿನರೂಪಮಂ ತಾಳ್ದು ಸರ್ವತೋಭದ್ರ ಸಿಂಹನಿಃಕ್ರೀಡಿತವೆಂಬ ತಪದೊಳ್ ನೆಗೞ್ದು ಸಮಧಿಗತಮತಿಶ್ರುತಾವಧಿಜ್ಞಾನನೆಂ ಮುಡಿಪಿ ಸಂನ್ಯಸನವಿಧಿಯಿಂ ಅಚ್ಯುತಕಲ್ಪದೊಳಿಪ್ಪತ್ತೆರಡು ಸಾಗರೋಪಮಾಯುಷ್ಯದೊಡೆಯ ನಚ್ಯುತೇಂದ್ರನಾಗಿ ಜನನೀಚರನಪ್ಪ ಲಲಿತಾಂಗದೇವನಿಂದೆನಿತೊಂದಾದುದೆಂದು ಬಂದು ಲಲಿತಾಂಗದೇವನಂ ಪೂಜಿಸಿ ಪ್ರೀತಿವರ್ಧನ ವಿಮಾನಮನೇಱಿಸಿಕೊಂಡು ಬೈಷ್ಣಕಲ್ಪದೊಳಗಣ್ ದಿವ್ಯಾಂಬರಾದಿಗಳಂ ಮನ್ನಿಸಿದಂ ಆದಿಬಜನು ಮೇಕಸಾಗರೋಪಮ ಜೀವಿತಾಂತ್ಯದೊಳ್ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ಮಂಗಳಾವತೀವಿಷಯದ ವಿಜಯಾರ್ಧಪರ್ವತ ದುತ್ತರಶ್ರೇಣಿಯ ಗಾಂಧರ್ವಪುರಮನಾಳ್ವ ವಿದ್ಯಾಧರರಾಜಂ ವಾಸವಂಗಂ ಪ್ರಭಾವತಿಯುಂಬಳಾತನ ರಿಯರಸಿಗಂ ಮಹೀಧರನೆಂಬ ತನೂಜನಾಗೆ ವಾಸವಂ ಮಹೀಧರಂಗೆ ವಿದ್ಯಾಧರಶ್ರೀಯುಮಂ ಕೊಟ್ಟು ಅರಿಂಜಯಮುನಿಪತಿಗಳ ಪಕ್ಕದೆ ಮುಕ್ತಾವಳಿ ತಪಮಂ ಕೈಕೊಂಡು ಗೆಲ್ದಂ ಗೊಂಡ ಪ್ರಭಾವತಿಯುಂ ಪದ್ಮಾವತಿಯರೆಂಬ ಕಂತಿಕೆಯರಸಾದಿ ರತ್ನಾವಳಿತಪದೊಳ್ ನೆಗೞ್ದು ಅಚ್ಯುತಕಲ್ಪದೊಳ್ ಪ್ರತೀಂದ್ರನಾದೊಳ್.

ಇತ್ತ ಮಹೀಧರನು ಮೊದಲ್ ಪುಷ್ಕರಾರ್ಧದ ಪಶ್ಚಿಮ ಮಂದರದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ವತ್ಸಕಾವತೀ ವಿಷಯದ ಪ್ರಭಾಕರೀಪುರಿಯ ಪಡುವಣದೆಸೆಯ ದೇವದಾರು ವನದೊಳ್ ವಿನಯಂಧರಯೋಗಿಗಳ ಪರಿನಿರ್ವಾಣ ಪೂಜೆಯಂ ಮಾಡಿ ಮೇರುಗಿರಿಯ ನಂದನವನದ ಪೂರ್ವದಿಗ್ಭಾಗದ ಕೃತ್ರಿಮಚೈತ್ಯಾಲಯದೊಳ್ ವಂದನಭಕ್ತಿಗೆ ಬಂದಿರೆ ಮಹೀಧರನ ನಾನಲ್ಲಿ ಕಾಣ್ಬುದುಮಱಿದು ಎಲೆ ವಿದ್ಯಾಧರ ನೀಂ ಲಲಿತಾಂಗ ದೇವನಪ್ಪಂದು ಮಾತೃಚರನೆಂದು ಪೂಜಿಸಿದೆಂ ನಾನಚ್ಯುತೇಂದ್ರಂ ನೀನೆನಿತು ವಿಷಯಾಸಕ್ತನಪ್ಪೆಯೆಂದು ಜೀವಸಂಬೋಧನಂ ಮಾಡೆ ಮಹೀಕಂಪನೆಂಬ ನಿಜನಂದನಂಗೆ ರಾಜ್ಯಮಂ ಕೊಟ್ಟು ಜಗನ್ನಂದ ಗುರುಗಳಲ್ಲಿ ಶಿಷ್ಯತ್ವಮಂ ಪೊರ್ದ್ದು ಕನಕಾವಳಿ ತಪದೊಳ್ ನೆಗೞ್ದು ಮುಡಿಪಿ ಪ್ರಾಣತೇಂದ್ರನಾಗಿ ಸುರಲೋಕದಸುಖಮಂ ಇಪ್ಪತ್ತು ಸಾಗರೋಪಮಂಬರ ಮುಂಡುಬಂದು ಧಾತಕೀಖಂಡದ ಪೂರ್ವಮಂದರದಪರವಿದೇಹದ ಸೀತಾನದಿಯ ಬಡಗಣತಡಿಯ ಗಂಧಿಳವಿಷಯದ ಅಯೋಧ್ಯೆಯನಾಳ್ವ ಜಯವರ್ಮಂಗಂ ಸುಪ್ರಭೆಗಂ ಅಜಿತಂಜಯನೆಂಬ ಮಗನಾದೊಡಾತಂಗೆ ಧರಾಭಾರಮಂ ಕೊಟ್ಟು

ಅಭಿನಂದನರೆಂಬಾಚಾರ್ಯರ್ ಆಚಾಮ್ಲವರ್ಧನತಪದಿಂ ನೆಗೞ್ದ ಜಯವರ್ಮಂ ಪರಮಪದಮನೆಯ್ದಿದೊಂ. ಸುಪ್ರಭೆಯುಂ ಸುದರ್ಶನ ಕಂತಿಕೆಯರ ಸಾರೆ ರತ್ನಾವಳಿಯುಂ ನೋಂತು ಅಚ್ಯುತಕಲ್ಪದೊಳ್ ಅನುದ್ಧತ ವಿಮಾನದೊಳ್ ಪುಟ್ಟಿದಳ್. ಇತ್ತಲ್ ಅರಿಂಜಯನುಂ ಷೋಡಶವರ್ಷವಯದೊಳ್ ಚಕ್ರವರ್ತಿಪದವಿಯನೆಯ್ದಿದಂ. ಬೞಿಯಂ ಅರಿಂಜಯಂ ಜಿನಮಹಿಮೆಯುಂ ಮಾಡಿ ಪಿಹಿತಪಾಪಾಸ್ರವದ್ವಾರನಾದುದರಿಂದೆ ಪಿಹಿತಾಸ್ರವನೆಂಬ ಪೆಸರಂಪಡೆದು ರಾಜ್ಯಂಗೆಯ್ಯುತ್ತುಮಿರೆ, ಮತ್ತಮೊನೊರ್ಮೆ ಕಂಡಾತನಂ ಪ್ರತಿಬೋಧಿಸೆ ಪರಿಚ್ಛೇದಿಯಾಗಿ ಸಾಸಿರ್ವರರಸುಗಳ್ ವೆರಸು ಮಂದರಸ್ಥವಿರ ಮುನಿಪತಿಗಳ ಪಕ್ಕದೆ ಮೋಕ್ಷಮಾರ್ಗಮಂ ಕೈಕೊಂಡು ಅವಧಿಜ್ಞಾನಧರರುಂ ಗಗನಚಾರಣ ಋದ್ಧಿಸಂಪನ್ನರುಮಪ್ಪಿರ್ವರಂಬರಚಾರಣರೊಡನೆ ವಿಹಾರಿಸುತ್ತುಂ ಚಾರಣಚರಿತಮೆಂಬ ಪುಣ್ಯಾರಣ್ಯದೊಳಗಣಂಬರತಿಳಕಗಿರಿಯೊಳ್ ಯೋಗಸ್ಥರಾಗಿರ್ದಂದು ನಿರ್ನಾಮಿಕೆಯಪ್ಪ ಭವದೊಳೆನ್ನ ಜನನೀಚರಗುರುಗಳ್ ಎನಗಂ ನಿನಗಂ ಗುರುಗಳಾದರ್ ಅವರ್ ಪೇೞ್ದುಪದೇಶದೊಳ್ ನೋಂತು ಮಹಾಬಲಚರ ಲಲಿತಾಂಗದೇವಂಗೆ ಸ್ವಯಂಪ್ರಭೆಯೆಂಬ ದೇವಿಯಾದಯ್. ಅನುಮೆನ್ನ ಜನನೀಚರ ಲಲಿತಾಂಗದೇವನೊಳನುಭವಿಸಿದ ಮೋಹದೊಳ್ ನಿನ್ನ ದೇವನಪ್ಪ ಲಲಿತಾಂಗಂಬೆರಸಿಪ್ಪತ್ತೆರ್ವರ್ ಲಲಿತಾಂಗದೇವರಂ ಪೂಜಿಸಿದೆಂ ಅದಂ ನೀನುಮರಿವೆ[1]. ಅದಲ್ಲದೆಯುಂ ನೀನುಂ ನಿನ್ನ ದೇವನುಂ ಕೇಳುತ್ತಿರೆ ಲಾಂತವೇಂದ್ರನುಂ ಬ್ರಹ್ಮೇಂದ್ರನುಂ ನಮ್ಮ ಮೂವರುಮಂ ನಿನ್ನ ಭವದ ಗುರುಗಳಪ್ಪ ಯುಗಂಧರ ತೀರ್ಥಕರರ ಚರಿತಮಂ ಪೇೞ್ವೆನೆ ಯುಗಂಧರ ಚರಿತಮುಮಂ ಪೇೞ್ದಂ

ಅದೆಂತೆಂದೊಡೆ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ವತ್ಸಕಾವತೀವಿಷಯದ ಸುಸೀಮಾನಗರಮನಾಳ್ವ ಅಜಿತಂಜಯನೆಂಬರಸನ ಸಚಿವನಮಿತಮತಿಗಮಾತನ ಕುಲಲಲನೆ ಸತ್ಯಭಾಮೆಗಂ ಪ್ರಹಸಿತನೆಂಬೊಂ ಮಗನಾತನ ಕೆಳೆಯಂ ವಿಕಸಿತನೆಂಬೊಂ ಇರ್ವರುಂ ವಿದ್ಯಾಜ್ಞಾನಿಗಳ್ ಶೂನ್ಯವಾದಿಗಳೊಂದು ದಿವಸಂ ಅಜಿತಂಜಯನೊಡನೆ ಪೋಗಿ ತತ್ಪುರೋಪವನದೊಳಿರ್ದ ರಸರ್ದ್ಧಿಯೊಳಮೃತಾಸ್ರವತ್ವಮೆಂಬ ಬುದ್ಧಿಪ್ರಾಪ್ತರಪ್ಪ ಮತಿಸಾಗರ ಮುನಿಪತಿಗಳೊಳ್, ವಾದುಗೆಯ್ದು ಹತಪ್ರತಿಭರಾಗಿ ಶಿಷ್ಯತ್ವಮಂ ಪೊರ್ದ್ದು ಮಹಾವ್ರತದೊಳಾಚಾಮ್ಲವರ್ಧನಮಂ ನೋಂತು ಸಮಾಧಿವಡೆದು ಮಹಾಶುಕ್ರಕಲ್ಪಕ್ಕೆ ಸಂದು ಪ್ರಹಸಿತ ನಿಂದ್ರನಾದೊಂ. ವಿಕಸಿತನುಂ ವಾಸುದೇವನ ವಿಭೂತಿಯುಂ ಕಂಡು ನಿಧಾನಂಗೆಯ್ದು ಹತಪ್ರಭನಾಗಿ ಸಮಾಧಿವಿಧಿಯಿಂ ಕಾಲಾಂತರದೊಳಲ್ಲಿಯೆ ಪ್ರತೀಂದ್ರನಾಗಿ ಪದಿನಾರು ಸಾಗರೋಪಮವರ್ಷಂಬರಂ ಸುರಲೋಕಸುಖಮನನುಭವಿಸಿ ಬಂದು, ಧಾತಕೀಷಂಡದ ಪಡುವಣಮಂದರದ ಪೂರ್ವವಿದೇಹದ ಪುಷ್ಕಲಾವತೀವಿಷಯದ ಪುಂಡರೀಕಿಣಿಯನಾಳ್ವ ಧನಂಜಯನರಸಿಯಪ್ಪ ಯಶಸ್ವತಿಗಂ ಜಯಸೇನೆಗಂ ಮಹಾಬಲನು ಮತಿಬಲನುಮೆಂಬರ್ ರಾಮಕೇಶವರಾಗಿ ಪುಟ್ಟಿ ತಂದೆಯ ಪರೋಕ್ಷದೊಳ್ ರಾಜ್ಯಂಗೆಯ್ಯುತತಿಬಲನೆಂಬ ಕೇಶವನವಿಪತ್ತಿಯೊಳ್ ಮಹಾಬಲಂ ಸಮಾಧಿಗುಪ್ತರಪಕ್ಕದೆ ಮಹಾವ್ರತಮನಾಂತು ಜೀವಿತಾಂತ್ಯದೊಳ್ ಪ್ರಾಣತ ಕಲ್ಪದೊಳ್ ಪ್ರಾಣತೇಂದ್ರನಾಗಿ

1 ಘ. ದೇವಗುಪ್ತ ಎಂದಿದೆ. ಚ. ಗ. ಗಳಲ್ಲಿ ಶಿವಗುಪ್ತನೆಂದಿದೆ.

ವಿಂಶತಿ ಸಮುದ್ರೋಪಮ ವಿರಾಮದೊಳ್ ಧಾತಕೀಷಂಡದ ಪಡುವಣ ಮಂದರದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ವತ್ಸಕಾವತೀ ವಿಷಯದ ಪ್ರಭಾಕರೀಪುರಮನಾಳ್ವ ಮಹಾಸೇನಂಗಂ ವಸುಂಧರೆಗಂ ಜಯಸೇನನೆಂಬ ಮಗನಾಗಿ ನಿಜಗುರುಗೃಹೀತ ಮಹಾವ್ರತನಾಗಿ ಪೋಗಿ ತನಗಾದ ಚಕ್ರವರ್ತಿಪದಮಂ ಬಿಸುಟು ಸೀಮಂಧರ ಜಿನರಪಕ್ಕದೆ ದಿಗಂಬರನಾಗಿ ಷೋಡಶ ಭಾವನೆಗಳಂ ಭಾವಿಸಿ ಜೀವಿತಾಂತದೊಳ್ ಸೌಮನಸಮೆಂಬುಪರಿಮಮಧ್ಯಮಗ್ರೈವೇಯಕದೊಳಹಮಿಂದ್ರನಾಗಿ ಮೂವತ್ತು ಸಾಗರೋಪಮಾಯುಷ್ಯಂಬರಂ ಸುಖಮನನುಭವಿಸಿ ಬಂದು ಪುಷ್ಕರಾರ್ಧದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ ತೆಂಕಣತಡಿಯ ಮಂಗಳಾವತೀ ವಿಷಯದ ರತ್ನಸಂಚಯ ಪುರಮನಾಳ್ವ ಜಿತಂಜಯ ಮಹಾರಾಜಂಗಂ ವಸುಮತಿಗಂ ಯುಗಂಧರನೆಂಬ ಮಗನಾಗಿ ದೀಕ್ಷೆಯಂ ಪೂಣ್ದು ಘಾತಿಕ್ಷಯಾನಂತರೋತ್ಪನ್ನ ಕೇವಲ ಜ್ಞಾನತೀರ್ಥಕರಪರಮ ದೇವಂವೇದ ಸಮ್ಯಕ್ತ್ವದುತ್ಕೃಷ್ಟಸ್ಥಿತಿಯೊಳ್ ಮುಱುವತ್ತುಸಾಗರೋಪಮ ಕಾಲಮಭ್ಯುದಯ ಸುಖಮನನುಭವಿಸಿ ನಿರ್ವಾಣಕ್ಕೆಸಂದಂ ಅದಂ ಕೇಳ್ವುದಲರುಂ ಸಮ್ಯಗ್ದರ್ಶನ ವಿಶುದ್ಧರಾದರ್ ಅದಲ್ಲದೆಯುಂ ನಮ್ಮಿರ್ವರ ಗುರುಗಳಪ್ಪ ಪಿಹಿತಾಸ್ರವ ಭಟ್ಟಾರಕರ ಕೇವಲ ಜ್ಞಾನೋತ್ಪತ್ತಿಯೊಸಗೆಯ ನಂಬರತಿಲಕಗಿರಿಗೆ ಪೋಗಿ ಮಾಡಿದೆವು. ಅದಲ್ಲದೆಯುಂ ಮೇರುಗಿರಿಯೊಳ್ ವನಕೇಳಿಯುಮಂ ಸ್ವಯಂಭೂರಮಣ ಸಮುದ್ರದೊಳ್ ಜಲಕೇಳಿಯುಮನಾಡಿದೆವೆಂದಿವು ಮೊದಲಾಗೆ ಮುನ್ನಿನ ಜನ್ಮದ ಕಥಾಂತರಮನಱಿಪಿದೊಡಮೆಲ್ಲಮನಱಿದೆಂ. ಎನ್ನ ವಲ್ಲಭಂ ಲಲಿತಾಂಗದೇವನೆಲ್ಲಿ ಪುಟ್ಟಿದನೆಂಬುದುಂ ಆಂ ನಿಮ್ಮಿಂ ಮುನ್ನಮಚ್ಯುತ ಕಲ್ಪದೊಳ್ ಬಂದಲ್ಲಿ ಯಶೋಧರಂಗಂ ವಸುಮತಿಗಂ ವಜ್ರದಂತನಾದೆಂ, ನಿನ್ನ ವಲ್ಲಭಂ ಲಲಿತಾಂಗನುಂ ಈಶಾನ ಕಲ್ಪದಿಂಬಂದು ಉತ್ಪಲಖೇಟಮನಾಳ್ವ ಎನ್ನಮೆಯ್ದುನಂ ವಜ್ರಬಾಹುಗಮೆನ್ನತಂಗೆ ವಸುಂಧರೆಗಂ ವಜ್ರಜಂಘನೆಂಬ ಮಗನಾದಂ ಆ ಸ್ವಯಂಪ್ರಭೆಯೆ ನೀನೆನಗೆ ಮಗಳಾದೆ ವಜ್ರಬಾಹುವುಂ ನಿಮ್ಮತ್ತೆಯುಂ ಮೂಱನೆಯ ದಿವಸಕ್ಕೆ ಬಪ್ಪರ್ ಆಮುಮವರ್ಗಿದಿರ್ಪೋಪ ಒಸಗೆಯ ಮಾತಂಕೊಂಡು ಪಂಡಿತೆಯುಮಾಗಳೆ ಬರ್ಪಳೆಂದು ಪೋದಂ, ಅನ್ನೆಗಂ ಶ್ರೀಮತಿಯುಂ ಪಂಡಿತೆ ಬಂದು ಕಂಡು ನಿನ್ನ ಬರೆದ ಪಟಮಂ ಮಹಾಪೂತ ಜಿನಾಲಯದ ಮುಂದೆ ನೇಱಿಸಿದೆ ನನ್ನೆಗಂ ಕೇಶವನುಮೂರ್ವರ ಮಕ್ಕಳ್ ವಾಸವ ದುರ್ದಾಂತರೆಂಬವರ್ ದುರ್ವಿದಗ್ಧರದಂ ಕಂಡಿದೆಲ್ಲಮೆಮ್ಮ ಪ್ರಪಂಚಮೆಂದು ಪುಸಿಯನೆ ಮೂರ್ಛೆವೋದರ ನೆಟ್ಟಱಿಸಿ ಯಲ್ಲಿಯ ವಿನ್ಯಾಸಂಗಳಂ ಬೆಸಗೊಂಡೊಡವರಱಿಯದಿರ್ದೊಡವೆ ಊಸುರದೆ ಬಂದ ಬಟ್ಟೆಯುಂ ಬಜಯಂಗೆಯ್ವೆಮೆಂದು ನಿರಾಕರಿಸಿ ಕಳೆದೆಂ. ಅನ್ನೆಗವೊರ್ವಂ ರಾಜಕುಮಾರಂ ಬಂದು ದೇವರಂ ವಂದಿಸಿ ಸಿದ್ಧಶೇಷೆಯಂಕೊಂಡು ಪೂಜೆಮುಟ್ಟಿ ಪಟಮಂ ನಿಂದು ನೋಡಿ ಪೂರ್ವಭವಾನುಸ್ಮರಣಮಾಗೆ ಮೂರ್ಛಾನುಗತನಾಗಿ ಶೀತಲಕ್ರಿಯೆಗಳಿನೆಚ್ಚೆತ್ತಿರ್ದನಿಲ್ಲಿಗಾತಂದರೆಂಬುದು ಮಾಂತಂದೆನೆಂದೊಡೆನಗೆ ನಿನ್ನ ಬರೆಯದೆ ಬಂಚಿಸಿದ ವಿನ್ಯಾಸಂಗಳ ನಾತನಱಿಪಿದೊಡಾಂ ನಿನ್ನ ವಲ್ಲಭಂ ಲಲಿತಾಂಗನಪ್ಪುದುಂ ತಪ್ಪಿಲ್ಲದುದಱಿಂದಾತನನೆಂದೆಂ.

ನೀಂ ಲಲಿತಾಂಗ ಚರನಪ್ಪುದಱಿನಾ ಸ್ವಯಂಪ್ರಭೆ ನಿಮ್ಮ ಮಾವಂ ವಜ್ರದಂ

ತಂಗಂ ನಿಮ್ಮಕ್ಕೆ ಲಕ್ಷ್ಮೀಮತಿಗಂ ಶ್ರೀಮತಿಯಾಗಿ ಪುಟ್ಟಿದುದಱಿಂ ನಿನ್ನತನ್ನ ಬಯಕೆಗಳ್ ಕೂಡಿಬಂದುವೆಂಬುದು ಮಾತನೆನ್ನುಯ್ದ ಪಟಮಂ ಕೊಂಡು ತಾನೀಪಟಮಂ ಬರೆದಿತ್ತನೆಂದದಂ ತೋಱಿ ವಿವಾಹೋತ್ಸವಕ್ಕೆ ಬರ್ಪ ವಜ್ರಬಾಹುವ ವಜ್ರಜಂಘನ ಬರವನಱಿಪಿ ಬರ್ಪನ್ನೆಗ ಮರಸನವರ ಬರವಂಗಿದಿರ್ವೋಗಿ ಮುಂದಿಟ್ಟೊಡಗೊಂಡು ಬಂದುಪೊೞಲಂ ಪೊಕ್ಕಭ್ಯಾಗತ ಪ್ರತಿಪತ್ತಿಗೆಯ್ದು ಅನರ್ಘ್ಯವಸ್ತುವಂ ವಜ್ರಬಾಹುವಿಗೆ ಕೊಟ್ಟೊಡೇನುಮನೊಲ್ಲೆಂ. ನಿಮ್ಮಳಿಯಂಗೆ ಶ್ರೀಮತಿಯಂ ಕುಡುವುದೆನೆ ಪಿರಿದುತ್ಸವದಿಂ ಶ್ರೀಮತಿಗಂ ವಜ್ರಜಂಘಂಗಂ ಮದುವೆಯಂ ಮಾಡಿ ವಧೂವರರ್ಗೆ ಮೂವತ್ತಿರ್ಛಾಸಿರ್ವರ್ಮಕುಟಬದ್ಧರಿಂ ಮೂವತ್ತಿರ್ಛಾಸಿರ ಕಲ್ಯಾಣಾಭಿಷೇಕಂಗೆಯ್ದು ಅಮರಬಾಹು ಸುಬಾಹು ಪ್ರಭೃತಿಗಳಪ್ಪ ಮಕ್ಕಳ್ವೆರಸು ಉತ್ಪಲಖೇಟಕ್ಕೆ ಕಳಿಪುವುದುಂ ವಜ್ರಜಂಘನ ತಂಗೆಯಪ್ಪ ಸುಂದರಿಯುಂ ಶ್ರೀಮತಿಯಣ್ಣನಮಿತತೇಜಂಗೆ ಕೊಟ್ಟವರಂ ಪಂಡಿತೆಯುಮಂ ಪುಂಡರೀಕಿಣಿಗೆ ಕಳಿಪಿ ವಧೂವರರ್ ಸುಖಮಿರ್ಪಿನಮವರ್ಗೆ ನಾಲ್ವತ್ತೊಂಭತ್ತು ಮಕ್ಕಳ್ ಪುಟ್ಟಿದುವು. ಅನ್ನೆಗವೊಂದು ದಿವಸಂ ವಜ್ರಬಾಹುಮಹೀಶನ ಮೇಗಣನೆಲೆಯೊಳಿರ್ದು ಶರತ್ಕಾಲದ ಜಲಧರಮಂ ಕಂಡು ಇದಱಿದೊರೆಯ ಚಿತ್ರಕಲೆಯುಮಂ ಮಾಡಿಸುವೆನೆಂದು, ಬಟ್ಟೆಗವಲಗೆಯುಂ ತರಿಸಿ ತದಾಕಾರಮಂ ಬರೆವ ಮುಗಿಲ್ ಕರಗಿದುದಂ ಕಂಡು ಅದುವೆ ನಿರ್ವೇಗವಾಗಿ ವಜ್ರಜಂಘಂಗೆ ಪಟ್ಟಮಂ ಕಟ್ಟಿ ವಸುಂಧರೆವೆರಸು ಪಲರು ಪುರಸಿಯರು ಪೈಸಾಸಿರ್ವರರಸುಗಳುಂ ಶ್ರೀಮತಿಯ ಮಕ್ಕಳಪ್ಪ ನಾಲ್ವತ್ತೊಂಭತ್ತು ಮಕ್ಕಳುಂ ವೆರಸು ಯಶೋಧರ ಮುನೀಂದ್ರರ ಪಕ್ಕದೆ ತಪಮಂ ಕೈಕೊಂಡು ಮುಕ್ತಿಯುಂ ಸಾಧಿಸಿಕೊಂಡಂ

ಇತ್ತ ವಜ್ರದಂತನುಂ ಒಂದು ಮುಕುಳಿತ ನೀರಾರವಿಂದಮಂ ಪಿಡಿದು ನೋಡುತ್ತಿರ್ದಂ ಅದಱೊಳನೆ ಸತ್ತಿರ್ದ ತುಂಬಿಯುಮಂ ಕಂಡೊಂದಿಂದ್ರಿಯದ ವಿಷಯದೊಳೆಸಗಿದುದಕಿಂತಾದುದು, ಐದುಮಿಂದ್ರಿಯದ ವಿಷಯದೊಳೆಸಗುವೆಮಗೆಂ ತಕ್ಕುದೆಂದು ವಿಷಯವಿರಕ್ತನಾಗಿ ನಿಜಾಗ್ರತನೂಜಂಗೆ ಅಮಿತತೇಜಂಗೆ ರಾಜ್ಯಭಾರಮಂ ಕೊಡೆ ಮಾತನೆಂತು ಮೊಲ್ಲದಿರ್ಪೋಡುಳಿದ ಮಕ್ಕಳುಮನೊಡಂಬಡಿಸಲಾರದಮಿತತೇಜಂಗಮನುಂದರಿಗಂ ಪುಟ್ಟಿದ ಪುಂಡರೀಕನೆಂಬ ಶಿಶುಗೆ ರಾಜ್ಯಮಂ ಕೊಟ್ಟು ಸಾಸಿರ್ವರ್ ಮಕ್ಕಳು ಮಱುವತ್ತುಸಾಸಿರ್ವರರಸಿಯರು ಇಪ್ಪತ್ತುಸಾಸಿರ್ವರ್ ಮಕುಟಬದ್ಧರುಂ, ಪಂಡಿತೆಯುಂ ವೆರಸು ಯಶೋಧರ ಜಿನರ ಪ್ರಥಮ ಗಣಧರರಲ್ಲಿ ದೀಕ್ಷೆಯಂ ಕೈಕೊಂಡು ಮೋಕ್ಷಮಂ ಸಾಧಿಸಿದಂ.

ಲಕ್ಷ್ಮೀಮತಿಯುಂ ಮನುಂದರಿಯುಂ ಇರುತ್ತಿರಲ್ ಗಾಂಧರ್ವಪುರಾಧಿಪತಿ ಮಂದರಮಾಲಿಗಂ ಸುಂದರಿಗಂ ಪುಟ್ಟಿದ ಚಿಂತಾಗತಿ ಮನೋಗತಿ ಯೆಂಬ ವಿದ್ಯಾಧರರ ಕಯ್ಯೊಳ್ ಕಪ್ಪಮಂ ಬೇಡೆ ದೂತರಂ ಕಳುಪಲ್ ಅವರುಂ ವಜ್ರದಂತಂ ತಪಂಬಟ್ಟುದುಮಂ ಪುಂಡರೀಕಂಗೆ ನವರಾಜ್ಯದೊಳಾರುಂ ಬೆಸಕೆಯ್ಯದುದುಮನಱಿಪಿ ಯಟ್ಟಿದೊಡೆ ತಮ್ಮಯ್ಯನ ತನ್ನೊಡವುಟ್ಟಿದರಬ್ಯತಿಕರಮುಮಂ ಕೇಳ್ದು ಶೋಕಾಕುಲೆಯಾದ ಶ್ರೀಮತಿಯಂ ವಜ್ರಜಂಘನುಂ ಸಂತೈಸಿ ನಿಜಮಂತ್ರಿಮತಿವರನೊಳಂ ಸೇನಾನಾಯಕನ

1 ಗ. ಬಟ್ಟವಲಗ

ಕಂಪನೊಳಂ ಸೆಟ್ಟಿ ಧನಮಿತ್ರನೊಳಂ ಪುರೋಹಿತನಾನಂದನೊಳಂ ರಾಜಶ್ರೇಷ್ಠಿ ಧನಮಿತ್ರನೊಳ್ ಪರ್ಯಾಲೋಚಿಸಿ ಬೇಹಂಸೆಱಗೆ ಬಪ್ಪಂತು ನಿಯಮಿಸಿಪಯುಗಾದಿಂ ಪಯಣಂಬಂದು, ಸರ್ಪಸರೋವರಮೆಂಬ ಕೊಳನ ತಡಿಯೊಳ್ ಬೀಡಂಬಿಟ್ಟಿರ್ಪನ್ನೆಗಮಲ್ಲಿಗೆ ಧರ್ಮಧರರುಂ ಸಾಗರಸೇನರುಮೆಂಬ ಚಾರಣರ್ ಕಾಂತಾರ ಚರ್ಯಾಮಾರ್ಗದೊಳ್ ಬಪ್ಪರಂ ತಾನುಂ ಶ್ರೀಮತಿಯುಂ ಕಂಡು ನಿಲಿಸಿ ನವವಿಧ ಪುಣ್ಯಸಪ್ತಗುಣ ಸಂಪನ್ನರಾಗಿ ಚರಿಗೆಯುಂ ಮಾಡೆ ಪಂಚಾಶ್ಚರ್ಯಂ ನೆಗೞ್ದುವು. ಆಗಳ್ ಅರಸನಿವರೊಳಗೆ ಮಗನಿತುಮರಂ ಮೋಹಮಾದುದೇಕೆನೆ ವೃದ್ಧಕಂಚುಕಿ ಪೇೞ್ದರ್. ಇವರ್ಗಳ್ ನಾಲ್ವತ್ತೊಂಭತ್ತನೆಯ ಮಗಳ್ ನಿನ್ನ ಕನ್ಯೆಯರ್ ಎಂಬುದುಂ ಅರಿದೆನುಸುರಂದರೆಂದು ಬಾರಿಸಿ ತನ್ಮುನಿಯುಗಳದ ಕಾಲ್ಗೆಱಗಿದ ಬೞಿಯೊಳ್ ಪೊರಳ್ದು ದಾನಾನುಮೋದದಿಂದುಪಶಾಂತಂಗಳಾಗಿ ಮುನಿಮುಖಾವಲೋಕನಂಗೆಯ್ಯೆ, ಶಾರ್ದೂಲ ವರಾಹ ಗೋಲಾಂಗೂಲ ನಕುಲಂಗಳಂ ನೋಡುತ್ತುಮವಕ್ಕೆ ಭಕ್ಷ್ಯರೂಪಂಗಳಂ ತರಿಸಿ ನೀಡುತ್ತುಮರಸಂ ತನ್ನ ಶ್ರೀಮತಿಯ ಭವಸಂಬಂಧಮುಂ ಕೇಳ್ದು ಮತಿವರಾ ಕಂಪಾನಂದ ಧನಮಿತ್ರರೆಂಬ ನಾಲ್ವರ ಭವಾವಳಿಯುಂ ಬೆಸಗೊಂಡಡವರ್ಗವಧಿಜ್ಞಾನಿಗಳ್ ದಮವರರಿಂತೆಂದರ್.

ಮತಿವರನೀ ಭವಕ್ಕೆಯ್ದನೆಯ ಭವದೊಳ್ ಜಂಬೂದ್ವೀಪದ ಪೂರ್ವವಿದೇಹದ ಕಚ್ಛವಿಷಯದ ಪ್ರಭಾಕರೀ ಪುರದೊಳತಿಗೃದ್ಧನೆಂಬ ನರಸನತಿಲುಬ್ಧನಾಗಿ ತನ್ನೊಡಮೆಯನು ಪಾದ್ರಿಯೊಳ್[1] ಬಯ್ತು ಸತ್ತು ಪಂಕಪ್ರಭೆಯೊಳ್ ಪತ್ತು ಸಾಗರೋಪಮಂಬರಂ ದುಃಖಮನುಂಡು ಬಂದು ತನ್ನ ಮುನ್ನಿನ ಬಯ್ತ ಕೆಲದೊಳ್ ಪುಲಿಯಾಗಿ ಪುಟ್ಟಿದಂ. ಅನ್ನೆಗಮಾ ನಗರಮನಾಳ್ವ ಪ್ರೀತಿವರ್ಧನಂ ಪರರಂ ಕಾದಲ್ ಪೋದೊಡೆ ತನ್ನ ತಮ್ಮಂ ಪಡಿಗೀಱುವಾಗಿ ಪೋದೊಡಾತನುಂ ಸಾಮಾದಿಗಳಿನೊಡಂಬಡಿಸಿ, ತಂದಲ್ಲಿ ಬೀಡುಬಿಟ್ಟಿರೆ ಶಕುನದ ನಯದಿಂ ಪುರೋಹಿತ ನರಸಂಗಿಂತೆಂದಂ ಉತ್ತಮ ಪಾತ್ರದಾನದಿಂ ಕನಕಲಾಭಮುಂ ಪೂಜಾಲಾಭಮುಂ ಈಗಳೆ ನಿನಗಾದಪ್ಪುದೆಂದೊಡೆ, ಇದಿರ್ಗೆ ಮುನಿಗಳ್[2] ಚರಿಗೆವಪ್ಪಂದಮಾಡಿದೆನೆ, ಪುರೋಹಿತ ನಾನಱಿವೆನೆಂದು ಪೊೞಲ ವೀಧಿಗಳೊಳೆಲ್ಲಂ ನೀರಂ ತಳಿಯಿಸಿ, ಫಲಪುಷ್ಪಂಗಳಂ ಕೆದರಿಸಿದೊಡೆ ಚತುರಂಗುಲ ಚಾರಣ ಪಿಹಿತಾಸ್ರವ ಮುನಿಮಾಸೋಪವಾಸಂಗೆಯ್ದು ಅಪ್ರಾಸುಕಮೆಂದು ಪೊೞಲಂ ಪುಗದೆ ಬೀಡಂಪುಗೆ, ನಿಱಿಸಿದಾಗಳೆ ಪಂಚಾಶ್ಚರ್ಯಮೊಡನಾ ಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ ತೊೞಲ್ದಿರ್ದುದೆಂಬುದನಾ ಮುನಿಪನವಧಿಯಿನಱಿದು ಆ ಪ್ರೀತಿವರ್ಧನಂ ಪ್ರತಿಬೋಧಿಸುವಬಗೆಯೊಳಾ ಪುಲಿಯ ಪೂರ್ವಭವದ ವೃತ್ತಾಂತಮಂ ಕಾಲಲಪ್ಪೊಡೆ ಕಂಡೆ[3] ತೊಡೆದಿರ್ದುದುಮನಱಿಪಿ ತದ್ಗಿರಿತಟದೊಳ್ ಮುನ್ನೆ ಪೂೞ್ದ ಪೊನ್ನ ಕಡಾಹಂಗಳಂ ತೋಱಿ ಪೋಡ್ಯಂಬಟ್ಟು ಮಹಾಪೂಜೆಯುಂ ಅಲ್ಲಿ ಅರಸಂ ಮಾಡೆ ತನ್ಮುನಿಯ ಪಾದಮೂಲದೊಳ್ ಪದಿನೆಂಟು ದಿವಸಂ ನೋಂತು

1 ಕ. ಅದ್ರಿಯೊಳ್.

2 ಗ. ಘ ಗಳಲ್ಲಿ ಮುನಿಯರ್ ಎಂದಿದೆ.

3 ಗ ಘ ಗಳಲ್ಲಿ ಕಟಾಹಂಗಳಂ ಎಂದಿದೆ

ಸಮಾಧಿವಡೆದು ಮುಡುಪಿ ಶಾರ್ದೂಲಂ ಈಶಾನಕಲ್ಪದೊಳ್ ದಿವಾಕರಪ್ರಭಮೆಂಬ ವಿಮಾನದೊಳ್ ದಿವಾಕರಪ್ರಭನೆಂಬ ದೇವನಾದೊಂ. ಆ ಪ್ರೀತಿವರ್ಧನನು ಮಲ್ಲಿಯ ತಪಂಬಟ್ಟು ಮೋಕ್ಷಪದವಿಯುಂ ಪಡೆದೊಂ. ಆತನ ಮಂತ್ರಿ ಪುರೋಹಿತ ಸೇನಾಪತಿಗಳ್ ಮೂವರುಂ ನೃಪನ ದಾನಾನುಮೋದದಫಲ ದಿಂದ ಮುತ್ತರ ಕುರುವಿನೊಳಾರ್ಯರಾಗಿ, ಜೀವಿತಾಂತ್ಯದೊಳೀಶಾನಕಲ್ಪದೊಳ್ ಸೇನಾನಾಯಕನಪ್ಪಾರ್ಯಂ. ಪ್ರಭಾಕರವಿಮಾನದೊಳ್ ಪ್ರಭಾಕರನೆಂಬೊಂದೇವನಾದೊಂ. ಮಂತ್ರಿಯಪ್ಪಾರ್ಯಂ ಕಾಂಚನವಿಮಾನದೊಳ್ ಕನಕಪ್ರಭನೆಂಬೊ ಅಮರನಾದೊಂ ಪುರೋಹಿತನಪ್ಪಾರ್ಯಂ ತುಷಿತಾಖ್ಯ ವಿಮಾನದೊಳ್ ಪ್ರಭಂಜನನೆಂಬೊಂ ದೇವನಾದೊಂ ಮುನ್ನಿನ ಪೇಳ್ದ ಶಾರ್ದೂಲಚರನಪ್ಪ ದೇವಂ ಬೆರಸು ಅಂತು ನಾಲ್ವರುಂ ದೇವರ್ ನೀಂ ಲಲಿತಾಂಗದೇವನಾದಂದು ನಿನಗೆ ಪರಿವಾರದೇವರಾದೊಡಾ ಲಲಿತಾಂಗದೇವನೆ ನೀನಿಲ್ಲಿ ಬಂದು ವಜ್ರಜಂಘನಾದೆ, ನಿನ್ನ ದೇವಿ ಸ್ವಯಂಪ್ರಭೆ ಶ್ರೀಮತಿಯಾದಳ್. ಶಾರ್ದೂಲಚರ ದಿವಾಕರ ಪ್ರಭದೇವಂ ಬಂದು ಮತಿಸಾಗರಂಗಂ ಆತನಭಾರ್ಯೆ ಶ್ರೀಮತಿಯುಂ ಬಳ್ಗಂ ಮಗನಾಗಿ ನಿಮಗೆ ಮಂತ್ರಿವರನಾದೊಂ. ಪ್ರಭಾಕರಾಮರಂ ಬಂದು ಅಪರಾಜಿತಂಗಮಾರ್ಜವೆಗಂ ಮಗನಾಗಿ ನಿನಗೆ ಸೇನಾನಾಯಕನಕಂಪನಾದೊಂ ಕನಕಪ್ರಭದಿವಿಜಂ ಶ್ರುತಕೀರ್ತಿಗ ಮನಂತಮತಿಗಂ ಮಗನಾಗಿ ಪುರೋಹಿತನಾನಂದನಾದೊಂ. ಪ್ರಭಂಜನದೇವಂ ಬಂದು ಧನದತ್ತಂಗಂಧನದತ್ತೆಗಂ ಮಗನಾಗಿ ನಿನ್ನ ಸೆಟ್ಟಿ ಧನಮಿತ್ರನಾದೊಂ. ಆಸುಕಾರಣದಿಂ ಇವರೊಳ್‌ತಿಪ್ರೀತಿಯಾದರು. ಈ ಭವಕ್ಕೆಂಟನೆಯ ಭವದೊಳ್ ನೀನಾದಿ ತೀರ್ಥಂಕರನಾದುಂದು, ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೀಯಾಂಸನಕ್ಕುಂ ಈ ನಿನ್ನ ಮಂತ್ರಿ ಮತಿವರನಂದು ನಿನಗೆ ಭರತೇಶ್ವರನೆಂಬೊನಾತ್ಮಜನಕ್ಕುಂ ಈ ನಿನ್ನ ಸೇನಾನಾಯಕನಕಂಪನುಂ, ಬಾಹುಬಲಿಯುಂಬೊಂ ತನಯನಕ್ಕುಂ ಈ ಪುರೋಹಿತನಾನಂದಂ ವೃಷಭಸೇನನೆಂಬೊಂ ತನೂಜನಕ್ಕುಂ ಈ ಸೆಟ್ಟಿ ಧನಮಿತ್ರಂ ಅನಂತವೀರ್ಯನೆಂಬೊಂ ಸುತನಕ್ಕುಂ, ಎಂಬುದು ಪರಸು ಸಂತೋಷಪಟ್ಟು ಮತ್ತಮಿಂತೆಂದಂ

ನಿಮ್ಮನ್ನು ಮುಂದಿರ್ದ ಪುಲಿವಂದಿ ಕೋಡಗ ಮುಂಗುರಿಯೆಂಬ ನಾಲ್ಕುಜೀವಾವಳಿಯುಂ ಬೆಸಸಿ ಮೆಚ್ಚುವುದು ಮಂಬರ ಚಾರಣರಿಂತೆಂದರ್. ಈ ಶಾರ್ದೂಲಂ ಪೂರ್ವಜನ್ಮದೊಳ್ ವಿಷಯದ ಹಸ್ತಿನಾಪುರದ ಪರದಂ ಸಾಗರದತ್ತಂಗಂ ಆತನ ಪರದಿತಿ ಧನದತ್ತೆಗಮುಗ್ರಸೇನನೆಂಬ ಮಗನ ಪ್ರತ್ಯಾಖ್ಯಾನ ಕ್ರೋಧದಿಂ ತಿರ್ಯಗಾಯುಷ್ಯಮಂ ಕಟ್ಟಿಕೊಂಡು ಕೊಟ್ಟಾರದ ಕರಣಂಗಳ ಬಂಚಿಸಿ ಕಳ್ದ ದ್ರವ್ಯಮಂ ಸೂಳೆಗೆ ಕೊಟ್ಟೊಡರಸಂ ಪಿಡಿತರಿಸಿ ಹತಿಯಿಸೆ* ಸತ್ತು ಪುಲಿಯಾದೊಂ. ಪೋದಭವದೊಳೀವರಾಹನು ವಿಷಯದ ವಿಜಯಪುರದೊಳ್ ಅನಂದನೆಂಬ ನೃಪತಿಗಂ ವಸಂತಸೇನೆಗಂ ಹರಿವಾಹನನೆಂಬ ಮಗನ ಪ್ರತ್ಯಾಖ್ಯಾನಮಾನದೊಳ್ ತಂದೆಗವಿನೀತನಾಗಿ ಪೇಟ್ಟುದಂ ಗೆಯ್ಯದೆ ಶಿಲೆಯೊಳ್ ತಲೆಯತಾಟಿಸಿ ಸತ್ತುವರಾಹನಾದೊಂ. ಈ ವಾನರನುಂ ಮುನ್ನಿನಭವದೊಳ್ ಧ್ಯಾನಪುರದ ಪರದಂ ಕುಬೇರ ದತ್ತಂಗಂ

---

* ಗ. ಪು. ಗಳ್ಲ ಪಾಠಿಸ

ವಸುದತ್ತೆಗಂ ಸಾಗರದತ್ತನೆಂಬೊಂ ಮಗನಪ್ರತ್ಯಾಖ್ಯಾನಮಾಯೆಯಿಂ ತನ್ನತಂಗೆ
ಯೊಡವೆಯುಮಂ ವಂಚಿಸಿಕೊಂಡು ಕಳೆದು ಸತ್ತು ವಾನರನಾದಂ. ಈನಕುಳನುಂ ಪೂರ್ವ
ಜನ್ಮದೊಳ್ ಸುಪ್ರತಿಷ್ಠಪುರದೊಳಪ್ರತ್ಯಾಖ್ಯಾನ ಲೋಭಾಭಿಭೂತಂ ಲೋಲುಪನೆಂ
ಬೊಂ ಕಲ್ಲುರಿಗನಾಗಿ ಪೊೞಲ ಜಯಸೇನನೆಂಬರಸನ ಬಸದಿಗೆ ಪಟ್ಟಿಟ್ಟಿಗೆಗಳಂ ಪೂರ
ಗೆಯುಂ ಕೊಟ್ಟುಕೊಂಡೊರಸಿ ನೋೞ್ಪುದು ಮೊಂದು ಪೊನ್ನಿಟ್ಟಿಗೆಯಾದೊಡೆ ಬಿಟ್ಟ
ಯುವರ ಕಯ್ಯಿಂದಿಟ್ಟಿಗೆಗಳಂ ಕೊಂಡೊಟ್ಟಿಮತ್ತೊಂದು ದಿವಸಂ ತನ್ನ ಮಗಳ ಕೆಲ
ದೂರ್ಗೆ ಪೋಗುತ್ತುಂ ತನ್ನಮಗಂಗಿಟ್ಟಿಗೆಗೊಳ್ವಬೆಸನಂ ಪೇೞುತ್ತೊಡವನೊಂದುಮಂ
ಕೊಳದಿರೆ ಮುಳಿದವನ ತಲೆಯನೊಡೆಯೆ ಬಡಿದೆನ್ನಪಡೆಪುಗಿಡಿಸಿಕೊಂಡು ಪೋದು
ವೆಂದು ತನ್ನ ಕಾಲ್ಗಳಂ ಕಿಡಿದುಮಿಡಿದು ಮದನರಸನಱಿದು ದಂಡಿಸೆ ಸತ್ತು ಬಂದಿಲ್ಲಿನ
ಕುಳನಾದೊಂ ಇಂತೀ ಶಾರ್ದೂಲವರಾಹಗೋಲಾಂಗೂಲ ನಕುಲಂಗಳ್ ಜಾತಿ
ಸ್ಮರಂಗಳಾಗಿ ನಿನ್ನ ದಾನಾನುಮೋದದಿನನುತ್ತರೆಗೆ ಬದ್ಧಾಯುಷ್ಯಂಗಳಾದುವು.
ಅಂತು ದಿವ್ಯಮಾನುಷಗೋಚರಸುಖಂಗಳಂ ನಿನ್ನೊಡನುಣುತುಂ ನೀಂ ಭರತದೊಳ್
ಆದಿತೀರ್ಥಂಕರನಾದಂದು ಅನುಕ್ರಮದೊಳ್ ನಿನಗನಂತವೀರ್ಯಾರ್ಗಚ್ಯುತ ವೀರಸು
ವೀರರೆಂಬ ಮಕ್ಕಳಪ್ಪರೆಂದಿಂತು ಚಾರಣಮುನೀಂದ್ರರ್ ಬೆಸಸಿ ಪೋದರಾಗಳ್ ವಜ್ರ
ಜಂಘನುಂ ಶ್ರೀಮತಿಯುಂ ಮುಂದೆಪ್ಪರುಮಪ್ಪರ ಗುಣಮನೆ ಮತಿವರಾದಿಗಳೊಳ್
ನುಡಿಯುತ್ತುಮಿರ್ದು ಮಱುದಿವಸಂ ಪಯಣಂ ಬೋಗಿ ಪುಂಡರೀಕಿಣಿಯನೆಯ್ದಿ
ಲಕ್ಷ್ಮೀಮತಿಯುಮನನುಂದರಿಯುಮಂ ಸಂತೈಸಿ ಪುಂಡರೀಕಂಗೆ ನಿಷ್ಕಂಟಕಂಮಾಡಿ
ಕೊಟ್ಟು ಉತ್ಪಲಖೇಟಕ್ಕೆ ಮಗುೞೆ ವಂದು ಪಲಕಾಲಂ ರಾಜ್ಯಂಗೆಯ್ಯುತ್ತುಮಿ
ರ್ದೊಂದು ದಿವಸಂ ಶಯ್ಯಾಗೃಹದೊಳ್ ನಿದ್ರಾವಶಗತರಾದರ್.

ಅನ್ನೆಗಮಲ್ಲಿ ಮುಚ್ಚಿರ್ದ ಗವಾಕ್ಷಂಗಳಂ ತೆಱೆಯಲ್ ಮಱೆದು ಧೂಪಗುಂ
ಡಿಗೆಯೊಳಲವಱಿಯದೆ ಸಚ್ಚಿವಳನಿಕ್ಕಿದ ಕೇಶಸಂಸ್ಕಾರದ ಧೂಪದಪೊಗೆ ಪುದಿದುಕೊ
ಳೆ ವಜ್ರಜಂಘನುಂ ಶ್ರೀಮತಿಯುಂ ಪೊಗೆಸುತ್ತಿ ಸತ್ತುದಂ ನೇಸಱ್ ಮೂಡಿದಾಗಳ
ಱಿದು ಮತಿವರಾದಿಗಳವರುಮನಲ್ಲಿ ಸತ್ತತಿಯರ್ಗಾತ್ತಿಗಳುಮಂ ಸಂಸ್ಕರಿಸಿ
ಶ್ರೀಮತಿಯಮಗಂ ವಜ್ರಬಾಹುಕುಮಾರಂಗೆ ಪಟ್ಟಂಗಟ್ಟಿ ದೃಢಧರ್ಮಗುರುಗಳ
ಪಕ್ಕದೆ ತಪಂಬಟ್ಟು ಜೀವಿತಾಂತ್ಯದೊಳ್ ಅಧೋಗ್ರೈವೇಯಕದೊಳ್ ಹಲ್ಲಿಮಹರ್ದ್ಧಿ
ಮದೊಳ್ ಅಹಮಿಂದ್ರರಾದರ್

ಅಂತುವಜ್ರಜಂಘನುಂ ಶ್ರೀಮತಿಯುಂ ಪೂೞಿಯುಂಚಂಗಳುಮುತ್ತಮಪಾ
ತ್ರದ ದಾನದ ದಾನಾನುಮೋದದ ಪುಣ್ಯದಿಂದಂ ಜಂಬೂದ್ವೀಪದ ಮಂದರದ ಉತ್ತರ
ಕುರುವೆಂಬುತ್ತಮಭೋಗಭೂಮಿಯೊಳ್ ದಂಪತಿಗಳಾಗಿಪುಟ್ಟಲೊಡಮವರ ತಾ
ಯುಂ ತಂದೆಯುಂ ಸೀನುಮಾಗಳಿಕೆಯುಂಗತಜೀವಿಗಳಾದೊಡೆ ಏೞುದಿ
ವಸಂ ಪುರಾತನ ಪುಣ್ಯಕಾಮಧೇನುಸ್ತನೋಪಮಾನ ನಿಜಾಂಗುಲಿಜನಿತರಸರಸಾಯ
ನಾಸ್ವಾದದೊಳಂ ಉತ್ತಾನಶಯ್ಯೆಯೊಳಂ ಕಳಿಪಿ ಪೆಱವೇೞುದಿವಸದೊಳ್
ತೆವಳ್ದುಂ ಪೆಱವೇೞುದಿವಸದೊಳ್ ಮಣಿಮಯ ಮಹೀತಳದೊಳ್ ತಳರ್ನಡೆನಡೆದುಂ
ಪೆಱವೇೞುದಿವಸದೊಳ್ ಪದುಳಂ ನಡೆದುಂ ಪೆಱವೇೞುದಿವಸದೊಳ್ ಕಳಾಪ್ರವೀ
ಣರಾಗಿಯುಂ ಪೆಱುದಿವಸದೊಳ್ ವಿಜ್ಞಾನವಿದರ್ಗಳಾಗಿಯುಂ ಮತ್ತಮೇೞುದಿವ

ಸದೊಳ್ ಪೂರ್ಣಾಯುಷ್ಯರ ಶುಭಲಕ್ಷಣ ಲಕ್ಷಿತ ಶರೀರರ್ಗಳಾಗಿ ದಂಪತಿಗಳಿಂತು ನಾಲ್ವತ್ತೊಂಬತ್ತು ದಿವಸದೊಳ್ ಸಮಚತುರಶ್ರಸಂಸ್ಥಾನರುಂ ವಜ್ರವೃಷಭನಾರಾಚ ಸಂಹನನರುಂ ಆಱುಸಾಸಿರಬಿಲ್ ನಿಡಿಯರಾಗಿ ದಿನತ್ರಯದೊಳ್ ಬದರೀ ಫಲಮಾತ್ರಾಹಾರರುಂ ವಿಗತವಿಹಾರರುಂ ಆರೋಗ್ಯಶರೀರರುಂ ಸುಂದರಾಕಾರರುಂ ತ್ರಿಪಲ್ಯೋಪಮಾಯುರ್ಜೀವರುಮಾಗಿ ದಶವಿಧಕಲ್ಪವೃಕ್ಷಂಗಳುಂ ತಮ್ಮ ಬೇಡಿದುದ ನೆ ಕುಡೆ ಸುಖದಿನಿರ್ದು ಆರ್ಯರುಗಳಂ ವನಶ್ರೀಯುಂ ನೋಡುತಿರ್ದಂದು ಗಗನದೊಳ್ ಪೋಪ ಸೂರ್ಯಪ್ರಭನೆಂಬ ದೇವನ ವಿಮಾನಮಂ ನೋಡಿ ಪೋದ ಭವಂಗಳಂ ನೆನೆಯುತಿರ್ಪನ್ನೆಗಮವರ್ ಚಾರಣ ಮುನಿಗಳಿರ್ವರ್ ಬರ್ಪುದುಂ ಅವರ್ಗೆಱಗಿಪೊಡೆವಟ್ಟು ನಿಮ್ಮೊಳೆಮಗೆತಿ ಸ್ನೇಹಮಾವುದು, ಆ ಪೋದಭವದೊಳ್ ಬಂಧುತ್ವಮುಂಟೆಕ್ಕುಂ, ಅದನೆಮಗೆಱೆಯೆ ಬೆಸಸಿಂ, ಎಂಬುದುಂ ಅವರೊಳಗ್ರಜ ಮುನಿ ಮುಗುಳ್ನಗೆನಕು ನೀಂ ಮಹಾಬಲ ಎಂಬ ಖೇಚರನಾದ ಭವದೊಳ್ ಆಂ ನಿನಗೆ ಸಚಿವನೆಂ, ಸ್ವಯಂಬುದ್ಧನೆಂಬೆನಾಗಿ ನಿನ್ನಂ ಸಮಾಧಿ ವಿಧಿಯಂ ಮಾಡಿ ಬೞಿಯಂ ನಾಂ ಘೋರವೀರತಪಂಗೈದು ಸೌಧರ್ಮ ಕಲ್ಪದ ಸ್ವಯಂಪ್ರಭವಿಮಾನದೊಳ್ ಆಂ ಮಣಿಚೂಡದೇವನಾಗಿ ಸಾಧಿಕ ಸಾಗರೋಪಮಾಯುಷ್ಯಾಂತ್ಯದೊಳ್ ಅಲ್ಲಿಂಬಂದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯನಾಳ್ವ ಪ್ರಿಯಸೇನಂಗಂ ಸುಂದರಿಗಂ ಪ್ರೀತಿಂಕರನೆಂಬೆಂ ಮಗನಾದೆಂ, ಎನ್ನಂ ಕಿಱಿಯಂ ಇವಂ ಪ್ರೀತಿದೇವನೆಂಬೊಂ ನಾವಿರ್ವರುಂ ಸ್ವಯಂಪ್ರಭರಲ್ಲಿ ದೀಕ್ಷೆಗೊಂಡು ಚಾರಣಋದ್ಧಿಸಂಪನ್ನರುಂ ಅವಧಿಯಿಂ ನೀಂ ಇಲ್ಲಿಪುಟ್ಟಿದುದನಱಿದು ಮೋಕ್ಷಕ್ಕೆ ಮುಖ್ಯಕಾರಣ ಮಪ್ಪಸಮ್ಯಕ್ತ್ವಮಂ ಕೈಕೊಳಿಸಲ್ ಬಂದೆಂ ಎಂದು ನಿಶ್ಶಂಕಿತಾದಿಯುಕ್ತಮಪ್ಪ ಸಮ್ಯಕ್ತ್ವಮಂ ಕೈಕೊಳಿಸಿ ಶ್ರೀಮತಿಯನೆಂದರ್, ನೀಂ ಸ್ತ್ರೀರೂಪದೊಳ್ ಕೊಱರ್ದು ದೆಸೆಗಿಡಲ್ವೇಡ,

ಗಾಹೆ || ದಸುಕಟ್ಟಿ ಮೂಸು ಪುಹಪಿಸು |
ಜೋಯಿಸವಣ ಭವಣಸಂವಇಸ್ಸಿಸ್ಸು ||
ಬಾರಸಮಿದ್ಧಪ ಮಾದಿ |
ಸಮ್ಮಾಯಿಟ್ಟಿ ಣಾವ ಅಪ್ಪಣೊವ ||

ಎಂದು ಪ್ರೀತಿಂಕರಾಚಾರ್ಯರ್ ಶ್ರೀಮತ್ಯಾರ್ಯೆಯುಮಂ ಶಾರ್ದೂಲಾರ್ಯಾದಿಗಳುಮಂ ಸಮ್ಯಕ್ತ್ವಮಂ ಕೈಕೊಳಿಸಿ ಪುನರ್ದರ್ಶನಮಕ್ಕೆಂದು ಪೋಪುದುಂ ವಜ್ರಜಂಘಾರ್ಯಂ ಮಹಾಬಲನಾದಂದು ಎನ್ನಂ ಸ್ವಯಂಬುದ್ಧನಾಗಿ ಪ್ರತಿಬೋಧಿಸಿದರ್. ಈಗಳುಮೆನ್ನಂ ಪ್ರತಿಬೋಧಿಸಲ್ ಬಂದರೆಂದು ಅವರ ಧರ್ಮಾನುಗ್ರಹ ಬುದ್ಧಿಯುಮಂ ಸ್ನೇಹಸಂಬಂಧಮುಮಂ ನೆನೆಯುತಿರ್ದು ಸಮ್ಯಗ್ದರ್ಶನಮಂ ಅಸ್ಖಲಿತಮಾರಾಧಿಸಿತ್ರಿಪಲ್ಯೋಪಮಾಯುಷ್ಯಾವಸಾನದೊಳ್ ಲೋಕಾಂತರಿತರಾಗೆ ವಜ್ರಜಂಘಾರ್ಯಂ ಈಶಾನ ಕಲ್ಪದೊಳ್ ಶ್ರೀಪ್ರಭವಿಮಾನದೊಳ್ ಶ್ರೀಧರನೆಂಬೊಂ ದೇವನಾದೊಂ ಶ್ರೀಮತ್ಯಾರ್ಯೆಯುಂ ಸಮ್ಯಕ್ತ್ವಮಾಹಾತ್ಮ್ಯದಿಂ ಸ್ತ್ರೀತ್ವಮಂ ಪತ್ತುವಿಟ್ಟು ಅಲ್ಲಿಯೇ ಸ್ವಯಂಪ್ರಭ ವಿಮಾನದೊಳ್ ಸ್ವಯಂಪ್ರಭನೆಂಬೊಂ ದೇವನಾದಳ್ ಶಾರ್ದೂಲಾರ್ಯನುಂ ಮನೋಹರ ವಿಮಾನದೊಳ್ ಚಿತ್ರಾಂಗದನೆಂಬೊಂ ದೇವನಾದೊಂ

ವರಾಹಾರ್ಯಂ ನಂದನವಿಮಾನದೊಳ್ ಮಣಿಕುಂಡಲನೆಂಬ ದಿವಿಜನಾದೊಂ, ವಾನರಾರ್ಯಂ ನಂದ್ಯಾವರ್ತವಿಮಾನದೊಳ್ ಮನೋಹರನೆಂಬೊಂ ದೇವನಾದೊಂ, ನಕುಳಾರ್ಯನುಂ ಪ್ರಭಾಕರವಿಮಾನದೊಳ್ ಮನೋರಥನೆಂಬೊಂ, ದೇವನಾದೊಂ, ಅಂತನಿಬರುಂ ಸಹಾಯರ್ ಒಡನೆ ಶ್ರೀಪ್ರಭಾಚಲದೊಳ್ ಪ್ರೀತಿಂಕರಾಚಾರ್ಯರ ಕೇವಲ ಜ್ಞಾನೋತ್ಪತ್ತಿಯಾದುದನವಧಿಯಿಂದಱಿದು ದೇವನಿಕಾಯದೊಡನೆ ಪೋಗಿಪೂಜಿಸಿ ಶ್ರೀಧರದೇವನೆಂದಂ- ಜನಿಂತೋರಂತೆ ನಿಮ್ಮದಯೆಯಿಂ ಸುಖಮನುಣ್ಣುತುಂಬರ್ದೆಂ, ಆಂ ಮಹಾಬಲನಾದಂದು ಆ ನಾಲ್ವರೊಳಗೆ ಮೂವರ್ ಮಂತ್ರಿಗಳ್ ಎಲ್ಲಿಪುಟ್ಟಿದರ್, ಅದಂ ಎನಗಱಿಯೆ ಪೇಳಿಂ ಎಂದೊಡಿಂತೆಂದು ಪೇಳಿದರ್- ಸಂಭಿನ್ನನುಂ ಮಹಾಮತಿಯುಂ ನಿಗೋದಮಂ ಪೊಕ್ಕರ್, ಶತಮತಿಯುಂ ಮರಡನೆಯ ನರಕದೊಳ್ ಪುಟ್ಟಿ ದುಃಖಮನನುಭವಿಸಿದಪ್ಪಂ, ಎಂಬುದುಂ ಶ್ರೀಧರದೇವಂ ಅವರ್ಗೆನಮಸ್ಕಾರದಿಂಗೆಯ್ದು ಗುರೂಪದೇಶದಿಂದಂ ಆತನಂ ಪ್ರತಿಬೋಧಿಸಲ್ ಅಲ್ಲಿಗೆ ಪೋಗಿ ಕಂಡು ಶತಮತಿ ಚರನಾರಕನನೆಂದಂ, ನಿನ್ನ ಮಿಥ್ಯಾಜ್ಞಾನದಿಂ ಬಸಿತು ದುಃಖಮನೆಯ್ದಿದೆ ಎಂದು ಸಮ್ಯಕ್ತ್ವಮಂ ಕೈಕೊಳಿಸಿಪೋದಂ, ಆನಾರಕನುಂ ಕಾಲಾಂತರದೊಳ್ ಅಲ್ಲಿಂ ಬಂದು ಪುಷ್ಕರವರದ್ವೀಪದ ಪೂರ್ವವಿದೇಹದ ಮಂಗಳಾವತೀವಿಷಯದ ರತ್ನಸಂಚಯ ಪುರಮನಾಳ್ವ ಮಹೀಧರಚಕ್ರವರ್ತಿಗಂ ಸೌಂದರಿಗಂ ಜಯಸೇನನೆಂಬಮಗನಾಗಿ ವಿವಾಹಸಮಯದೊಳ್ ತನ್ನಂ ಆ ಶ್ರೀಧರದೇವಂಬಂದು ಮತ್ತಂ ಮೂದಲಿಸೆ ಯಮಧರ ಗುರುಗಳಪಕ್ಕದೆ ತಪಂಬಟ್ಟು ಜೀವಿತಾಂತ್ಯದೊಳ್ ಬ್ರಹ್ಮೇಂದ್ರನಾಗಿ ಪೂರ್ವೋಪಕಾರಮಂ ನೆನೆದು ಶ್ರೀಧರದೇವನಂಪೂಜಿಸಿ ಪೋದಂ ಇತ್ತ ಶ್ರೀಧರದೇವಂ ಬಂದು ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀವಿಷಯದ ಸುಸೀಮಾನಗರಮನಾಳ್ವ ಅಭಯಘೋಷ ಚಕ್ರವರ್ತಿಯ ಮೈದುನಂ ಸುಪ್ರತಿಷ್ಠಿಗಂ ಸೌಂದರ ಸುನಂದೆಗಂ ಸುವಿಧಿಯೆಂಬ ಮಗನಾದಂ ಆಗ ಮನೋರಮೆಯೆಂಬಳನ ಭಯಘೋಷ ಚಕ್ರವರ್ತಿಯ ಮಗಳಂ ಮದುವೆನಿಲ್ತಂ, ಆತಂಗಂ ಆಕೆಗಂ ಶ್ರೀಮತಿಚರಂ ಸ್ವಯಂಪ್ರಭದೇವಂ ಬಂದು ಕೇಶವನೆಂಬೊಂ ಮಗನಾದೊಂ ಮತ್ತಮಾವಿಷಯದೊಳ್ ಸುವಿಧಿಗೆ ಮಗನಪ್ಪ ಮಾಂಡಲಿಕ ವಿಭೀಷಣಂಗಂ ಪ್ರಿಯದತ್ತೆಗಂ ಚಿತ್ರಾಂಗದದೇವಂ ಬಂದು ವರದತ್ತನೆಂಬೊ ಮಗನಾದೊಂ, ನಂದಿಷೇಣಂಗ ಮನಂತಮತಿಗಂ ಮಣಿಕುಂಡಲಂ ವಾರಿಷೇಣನೆಂಬೊಂ ಮಗನಾದೊಂ ರತಿಷೇಣಮಹೀಶಂಗಂ ಚಂದ್ರಮತಿಗಂ ಮನೋಹರದೇವಂ ಚಿತ್ರಾಂಗದನೆಂಬೊಂ ಮಗನಾದೊಂ. ಪ್ರಭಂಜನರಾಜಂಗಂ ಚಿತ್ರಮಾಲಿನಿಗಂ ಮನೋರಥದೇವಂ ಶಾಂತಮದನನೆಂಬೊಂ ಮಗನಾದೊಂ. ಆಗಿ ತಮ್ಮನಿಬರು ಮೊಡನೆ ಸುಖಮನನುಭವಿಸುತಿರ್ಪನ್ನೆಗಂ, ಸುವಿಧಿ ತಮ್ಮ ಮಾವನಪ್ಪಭಯಘೋಷ ಚಕ್ರವರ್ತಿ ವಿಮಲವಾಹನ ಜಿನರವಂದನಾಭಕ್ತಿಗೆ ಪೋಗೆ ತಾನುಂ ವರದತ್ತನುಂ ವಾರಿಷೇಣನುಂ ಚಿತ್ರಾಂಗದ ಶಾಂತಮದನರುಮೆಂಬ ನಾಲ್ವರ್ ಸಹಾಯರುಂ ತನ್ನ ಮಗಂ ಕೇಶವನುಂಪೋಗಿ ಜಿನೇಂದ್ರನಂ ಬಂದಿಸಿರ್ದನ್ನೆಗಂ ಅಭಯಘೋಷ ಚಕ್ರವರ್ತಿ ಧರ್ಮಶ್ರವಣಾನಂತರಂ ನಿರ್ವೇಗವಾಗಿ ಸಾಸಿರ್ವರರಸಿಯರುಂ ಐಯ್ಸಾಸಿರ್ವರ್ ಮಕ್ಕಳುಂ ಪದಿನೆಣ್ಸಾಸಿರ್ವರರಸುಮಕ್ಕಳ್ ವೆರಸು ದೀಕ್ಷೆಯಂಕೈಕೊಂಡಂ. ಸುವಿಧಿಯುಂ ಕೇಶವನೊಳಪ್ಪ ಮೋಹದೊಳ್ ತೊಡರ್ದು ರಾಜ್ಯಮನುಳಿದು ಉಪಾಸಕನಾಗಿ;

ಗಾಹೆ॥ ದಸ್ಸಣವದ ಸಾಮಾಯಿಯ
ಪೋಸದ ಸಚ್ಚಿತ್ತರಾಯಭತ್ತೇಯ ।
ಬಹ್ಮಾರಂಭ ಪರಿಗ್ಗಹ
ಅಣುಮಣ ಮುದ್ದಿಟ್ಠ ದೇಸವಿರದೋಯ ॥

ಎಂಬೀ ಪನ್ನೆರಡು ಗುಣಸ್ಥಾನದೊಳ್ ಉತ್ಕೃಷ್ಟಂ ನೆಗಳ್ದ ಸಂಯಮಮಂ ಕೈಕೊಂಡು ಸಮಾಧಿಯಿನಚ್ಯುತೇಂದ್ರನಾದೊಂ ಕೇಶವನುಂ ಗುರುವಿಯೋಗದೊಳ್ ದೀಕ್ಷೆಯಂ ಕೈಕೊಂಡು ಅಲ್ಲಿಯೆ ಪ್ರತೀಂದ್ರನಾದೊಂ.

ಮುಂಪೇೞ್ದ ನಾಲ್ವರು ಮರಸುಮಕ್ಕಳಲ್ಲಿಯೆ ಸಾಮಾನಿಕ ದೇವರಾದರ್. ಅಂತನಿಬರುಂ ದ್ವಾವಿಂಶತಿ ಸಾಗರೋಪಮಕಾಲಂ ಸುಖಮನನುಭವಿಸಿ ಬಂದು ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ಪುಂಡರೀಕಿಣಿಯನಾಳ್ವ ವಜ್ರಸೇನಂಗಂ ಶ್ರೀಕಾಂತೆಗಂ ಅಚ್ಯುತೇಂದ್ರಂ ಬಂದು ವಜ್ರನಾಭಿ ಯೆಂಬೊಂ ಜ್ಯೇಷ್ಠ ಪುತ್ರನಾದೊಂ ಮತ್ತಮಾ ಪುಣ್ಯದಂಪತಿಗೆ ಮುಂಪೇೞ್ದ ಮತಿವರಾ ಕಂಪನಾನಂದ ಧನಮಿತ್ರರ್ ಅಧೋಗ್ರೈವೇಯಕದ ಅಹಮಿಂದ್ರರ್ ಅಲ್ಲಿಂ ಬಂದು ಸುಬಾಹು ಮಹಾಬಾಹುಪೀಠ ಮಹಾಪೀಠರೆಂಬ ತನಯರಾದರ್ ವರದತ್ತ ವಾರಿಷೇಣ ಚಿತ್ರಾಂಗದ ಶಾಂತಮದನ ಚರಸಾಮಾನಿಕದೇವರ್ ವಿಜಯ ವೈಜಯಂತ ಜಯನ್ತಾಪರಾಜಿತರೆಂಬ ತನೂಜರಾದರ್ ಅಂತೆಣ್ಬರು ಮನುಕ್ರಮದೊಳ್ ವಜ್ರನಾಭಿಗೆ ಸಹೋದರರಾದರ್ ಕೇಶವಚರಪ್ರತೀಂದ್ರಂ ಬಂದು ಆ ಪುರದೊಳ್ ಕುಬೇರಸರವಣಿಕ್ಪತಿಗಂ ಅನಂತಶ್ರೀಗಂ ಧನದೇವನೆಂಬೊಂ ಮಗನಾದೊಂ ಅಂತನಿಬರು ಮೊಡಗೂಡಿ ಬಳೆಯೆ ವಜ್ರಸೇನಮಹಾರಾಜಂ ವಜ್ರನಾಭಿಗೆ ರಾಜ್ಯಾಭಿಷೇಕಂಗೆಯ್ದು ಪರಿನಿಷ್ಕ್ರಮಣಪೂಜೆಯಿನಾಮ್ರವನೋದ್ಯಾನದೊಳ್ ಸಾಸಿರ್ವರರಸುಗಳ್ ವೆರಸು ದೀಕ್ಷೆಯಂಕೈಕೊಂಡು ಘಾತಿಕ್ಷಯದಿಂ ತೀರ್ಥಕರನಾದೊಂ ಇತ್ತ ವಜ್ರನಾಭಿಗೆ ಚಕ್ರರತ್ನಂ ಪುಟ್ಟಿದೊಡೆ ಎರಡೊಸಗೆಯುಮಂ ಮಾಡಿ ಧನದೇವಂ ಗೃಹಪತಿರತ್ನಮಾಗೆ ಷಟ್ಖಂಡಮಂ ಬಾಯ್ಕೇಳಿಸಿ ಒಟಿಯುಂ ವಿಷಯವಿರಕ್ತನಾಗಿ ವಜ್ರದಂತನೆಂಬ ತನ್ನ ಮಗಂಗೆ ಸಾಮ್ರಾಜ್ಯಮಂ ಕೊಟ್ಟು ನಿಜಗುರು ಸಮೀಪದೊಳ್ ಸಾಸಿರ್ವರ್ ಮಕ್ಕಳುಂ ಮೂವತ್ತುಸಾಸಿರ್ವರ್ ಮಕುಟಬದ್ಧರುಂ ಅಯ್ವತ್ತು ಸಾಸಿರ್ವರರಸಿಯರುಂ ಎಣ್ಬರೊಡವುಟ್ಟಿದರುಂ ಗೃಹಪತಿರತ್ನಂ ಧನದೇವನುಂ ವೆರಸು ದೀಕ್ಷೆಯಂ ಕೈಕೊಂಡು ದ್ವಾದಶತಪದೊಳ್ ನೆಗೞ್ದು ತ್ರೈಲೋಕ್ಯ ಕ್ಷೋಭಕಾರಿ ತೀರ್ಥಕರ ಪುಣ್ಯಕ್ಕೆ ಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ ಚತುರ್ದಶಪೂರ್ವಧರರಾಗಿ ಕಾಲಾಂತರದೊಳ್ ಶ್ರೀಪ್ರಭಾದ್ರಿ ಶಿಖರದೊಳ್ ಪ್ರಾಯೋಪಗಮನವಿಧಿಯಿಂ ಸರ್ವಾರ್ಥಸಿದ್ಧಿಯೊಳ್ ಅಹಮಿಂದ್ರನಾದೊಂ. ಸುಬಾಹು ಮಹಾಬಾಹು ಪ್ರಭೃತಿಗಳುಂ ಅಲ್ಲಿಯೆ ಪುಟ್ಟಿದರ್. ಅಂತು ಅನಿಬರುಂ ತ್ರಯಸ್ತ್ರಿಂಶತ್ಸಾಗರೋಪಮಾಯುಷ್ಯರುಂ ಸಮಚತುರಸ್ರಸಂಸ್ಥಾನರುಂ ಸರ್ವಾಂಗೋಪಾಂಗ ಸೌಂದರರುಂ ಶುಭಲಕ್ಷಣ ಸಹಿತರುಂ ಪ್ರಶಸ್ತವರ್ಣ ಗಂಧರಸಸ್ಪರ್ಶರುಂ ಶರಚ್ಚಂದ್ರಭಾಸುರ ದೇಹರುಂ ಅಣಿಮಾದ್ಯಷ್ಟಗುಣೋಪೇತರುಂ ಏಕರತ್ನಿಪ್ರಮಾಣೋತ್ಸೇಧರುಂ ವೈಕ್ರಿಯಿಕ ಶರೀರರುಂ ಪರಮಶುಕ್ಲಲೇಶ್ಯಾಪರಿಣಾಮರುಂ ಸಾರ್ಧಷೋಡಶಮಾಸಕೃತ ನಿಶ್ವಾಸರುಂ ತ್ರಿಸಹಸ್ರೋತ್ತರ ತ್ರಿಂಶತ್ಸಹಸ್ರ ಸಂವತ್ಸರ ಸಮಧಿ

ಗತ ಮಾನಸಾಮೃತಾಹಾರರುಂ ಸಪ್ರವೀಚಾರಾನಂತಗುಣ ನಿಷ್ಪ್ರವೀಚಾರಸುಖರುಂ ಲೋಕನಾಳಿಕಾಭ್ಯಂತರಗತಾವಧಿಜ್ಞಾನರುಂ ಸ್ವಾವಧಿಕ್ಷೇತ್ರ ಪ್ರಮಾಣ ಬಲಪ್ರಕಾಶ ವಿಕ್ರಿಯಾಶಕ್ತಿಸಂಪನ್ನರುಂ ದ್ವಿಚತ್ವಾರಿಂಶಜ್ಜ್ಞಾತಾಧಿಕ ಶುಭಕರ್ಮಸಂಭವ ಸರ್ವಾವಧಿದಿವ್ಯಭೋಗಾನುಭವ ನಿಷ್ಠರುಮಾಗಿ ಸುಖಮಿರ್ಪಿನಂ,

ಇತ್ತ ಜಂಬೂದ್ವೀಪದ ಭರತಕ್ಷೇತ್ರದೊಳ್ ಮುಂಪೇಳ್ದ ಮನುಗಳೊಳ್ ಪದಿನಾಲ್ಕನೆಯ ಮನು ನಾಭಿರಾಜಂಗಂ ಆತನರಸಿ ಮರುದೇವಿ ಮಹಾದೇವಿಗಂ ವಜ್ರನಾಭಿಚರಾಹಮಿಂದ್ರಂ ಬಂದು ಭಾವಿತೀರ್ಥಕರ ನಾದಿದೇವನಾಗಿ ಪುಟ್ಟುವುದಂ ಅವಧಿಯಿಂದಱಿದು ದೇವರಾಜಂ ಅಯೋಧ್ಯೆಯೆಂಬ ಪೊೞಲಂ ಸಮೆದು ಆದರ್ಕೆ ಸಾಕೇತಮುಂ ವಿನೀತೆಯುಂ ಭಾಸಾ ಕೌಶಲವಿಷಯವರ್ತಿಯಪ್ಪುದಱಿಂ ಸುಕೌಶಲೆಯುಂ ಎಂಬ ಪೆಸರ್ಗಳನಿಟ್ಟು. ನಾಭಿರಾಜಂಗೆ ರಾಜ್ಯಾಭಿಷೇಕಂಗೆಯ್ದು ಮರುದೇವಿಗೆ ಮಹಾದೇವಿ ಪಟ್ಟಮಂ ಕಟ್ಟಿ ಪೂಜಿಸಿ ಮುನ್ನಮಱುದಿಂಗಳುಂಟೆನೆ ವಸುಧಾರೆಯು ಮಯೋಧ್ಯಾಪುರದೊಳ್ ಸುರಿವಂತು ಧನದಂಗೆ ಬೆಸಸಿನೊಡೆ ಆ ಪದ್ಮಾದಿ ಸರೋವರ ನಿವಾಸಿನಿಯರುಂ ಅಂಗವರ್ಧನ ಧೈರ್ಯವರ್ಧನ ಸ್ಮೃತಿವರ್ಧನ ಮನೋವರ್ಧನ ಪ್ರಸಾದವರ್ಧನ ಸೌಭಾಗ್ಯವರ್ಧನ ಹೇತುಗಳಪ್ಪ ಶ್ರೀ, ಹ್ರೀ, ಧೃತೀಕೀರ್ತಿ, ಬುದ್ಧಿ, ಲಕ್ಷ್ಮಿಗಳೆಂಬಱುವರುಮಂ ರುಚಕಾಚಲದ ಪೂರ್ವ ದಕ್ಷಿಣ ಪಶ್ಚಿಮೋತ್ತರ ದಿಗ್ಭಾಗಂಗಳೆಂಬ ಕೂಟದೊಳಿರ್ಪ ಎಣ್ಬರ್ ದಿಗ್ವನಿತೆಯರುಮಂ ಉಪರಕೂಟಂಗಳೊಳಿರ್ಪನಾಲ್ವರುಂ ವಿದ್ಯುತ್ಕುಮಾರಿಯರುಮಂ ಮತ್ತಮಾನಗರಕ್ಕೆ ತಕ್ಕ ದಿಕ್ಕೂಟಂಗಳೊಳಿರ್ಪ ವಿದ್ಯುದ್ಯುವತಿ ಪುರಂಧ್ರಿಯರುಮಂ ಮತ್ತಮನೇಕ ನಗರನಿವಾಸಿನಿಯರಪ್ಪ ಅಮರ ಕಾಂತೆಯರುಮಂ ಮರುದೇವಿಗೆ ಪರಿಚಾರಿಕೆಯರಾಗಿರಲುಂ, ತೀರ್ಥಕರ ಕುಮಾರಜಾತಕರ್ಮಕರಣ ಗರ್ಭಶೋಧನಾದಿಗಳ್ಗೆ ವನಿತಾ ಗೂಢ ವ್ಯಾಪಾರಂಗಳೊಳ್ ನೆಗಳ್ವಂತುಂ ಸೌಧರ್ಮೇಂದ್ರಂ ಬೆಸಸೆ ದಿನಂಪ್ರತಿ ಧನದಂ ಮೂಱುವರೆ ಕೋಟಿ ಪಂಚರತ್ನವೃಷ್ಟಿಯುಂ ಸುರಿಯೆ, ದಿಗಂಗನೆಯರುಂ ದೇವಾಂಗನೆಯರುಂ ಇಂದ್ರಂ ಬೆಸಸಿದಂದದೊಳ್ ನೆಗೞೆ ಮತ್ತೊಂದು ದಿವಸದೊಳ್ ಮರುದೇವಿ ಚತುರ್ಥಸ್ನಾನದೊಳ್ ಸೂಟ್ಟಿರ್ದಂದು.

(ಅರ್ಧಸಮವೃತ್ತಂ) ಅಹಮಿಂದ್ರಸೌಖ್ಯಮನುಭೂಯ ಬಸಮುದಮರೇಂದ್ರಮೌಳಿಮಾ।
ಲಾತಿಲಲಿತಪದಪಂಕರುಹೇವತರತ್ಯಪಾಕೃತಮಳಾಮಳಾಂಚಿನೇ ॥
ಭುಜಕಾಚಳಾಮರವಧೂಭಿರುಪಸಿತಮಹಾಪಿನಾಂಬಿಕಾ ।
ಸ್ವಪ್ನಸಮುದಯಮಪಶ್ಯದಿಮಂ ಪರಮಂ ಪವಿತ್ರಮಪನೀತಕಲ್ಮಷಂ ॥
ಬಗಳತ್ಕಪೋಲಮದಸೌರಭಪರಿಮಿಳಿತಾಳಿಮಾಲಿಕಾ ।
ಗೀತನಿಚಿತಹೃದಯಂ ಮದಕುಂಜರಮಾಪತಂತಮಮಿತಂಶುಭಾವಹಂ ॥
ಶರದಭ್ರವಿಭ್ರಮಹೃದುದ್ಧತಘನಕಕುದಾವಭಾಸಿನಂ ।
ನಾದಬಧಿರಿತಕಕುಪ್ಸ್ವವರಾಂತರಮಾಪತಂತಮುಪಶಾಕ್ವರಂವರಂ ॥
ಗಜಮಸ್ತಕಾಸ್ರಗರುಣೀಕೃತವಿಪುಲ ವಿಲೋಲಕೇಸರಂ ।
ವಿಕ್ರಮಗುಣಾರಸಿಕಂ ಕ್ರಮಮಾಣಮುಪೇಂದ್ರವೈರಿಣಮಗಾದಗಾಂತರಂ ॥

1 ಗ ಪಲ್ಲ ರೂಪತಂತ್ರವಾಗಿಂತು ಬಂದಿದೆ

ನಿಜಪೃಷ್ಠರಸ್ಥವನಪೂರಿತ ಕನಕಘಟೋನ್ಮುಖ್ಯೈರ್ಮರ್ದೇ ।
ಭಾಧಿಪತಿಭಿರಲಮಾಪ್ಲವತೀಮಭಿಷೇಕಮಂಬುಧಿವನಾಂತರೇರಮಾಂ ॥
ದಿವಿಜೇಂದ್ರಚಾಪರುಚಿಲೀಲಮಭಿನವನಮೇರುಪಾರಿಜಾ ।
ತಾದಿಸುಮರಚಿತದಾಮಯುಗಂ ದಿಪಸೌರಭಾನುಗಮದಾರ್ನಿವೃತಂ
ಸುರದಿಗ್ವಧೂವದನಕಾಂತಮಪಿಕಳ ಕಳಾಕಳಾಪಮು ।
ತ್ಕ್ಲುಕುಮುದವನಂ ನಿಸುಧಾಚಲಕೂಟಮಂಡನಕರಂ ಸಿತಾಕರಂ ॥
ದಳಿತಾಂಬುಜಾತಸುಪನೀತ ತಿಮಿರನಿಕರಂಕರೋತ್ತರ ।
ವ್ಯಾಪ್ತಭುವನಮುಭವಂದ್ಯಮಕೃತ್ರಿಮಜ್ಯೋತಿಯೋಗಿಶದಾಂಶುಮಾಲಿನಂ ।
ಸರಸೀಪ್ರಳಾಸಿ ಝಷಯುಗ್ಮಮುದಿತಘನಮಧ್ಯಪಿಸ್ತರ ।
ದ್ಯೋಚಿರಚಿರರುಚಿದಂಡವದುತ್ಪತದಾಪ್ತಕಾಮಮಸಿರೋಧಬಂಧನಂ ॥
ಜಳದುನ್ಮದಾಳಿವೃತವಾರಿಜಪಿಹಿತಮು ಸುರಾಪಗಾ ।
ಪೂತಸಲಿಲಪರಿಪೂರಿತ ರತ್ನಮಯಘಟ ರುಗಭರುದ್ಧದಿಙ್ಮುಖ ॥
ವಿಕಸತ್ಪಯೋಜಪುಟಸ್ಪೃಶತ್ಕನಕರುಗಂಗಭೃಂಗಸಂ ।
ಗೀತಮುಖರಮಪೀಳಾಂಬು ಪಕಂಗಮರಾಜಿರಾಜಿಪರಪೂಜಿತಂ ಸರಃ ॥
ಪವನೋಚ್ಛಲದ್ವಿಫುಲವೀಚಿನಿಚಯನಿಚಿತಂ ಜಲನ್ನಿಹಾ ।
ಮತ್ಸ್ಯಮಕರನಿಕರಾತಿಭಯಂಕರಮುಚ್ಚಯಾತ್ರಿತಸದೀನ[1]ಸದೋತ್ಕರಂ ॥
ಪಟತಸುರಸ್ನಗೇಮುಪೀಜಿಮಸೃಣೀತದಿಗಂತರಂ ಕರೀಂ ।
ದ್ರಾಪಿಪಿತತ ಧೃತಮಹಾಸನಮುದ್ಯದಿನಪ್ರಭಾಪ್ರಸರತಾತಿಭಾಸುರಂ ॥
ಅವಳಂಬಮಾನಮಣಿಮೌಕ್ತಿಕಮುರಕತಘಟಿತಶೋಭಿತಂ ।
ನೇತ್ರಕುಮುದವನ ಚಂದ್ರಮಸಂ ಪವಮಾನಪತ್ಮರ್ನಿಪಮಾನಮಾಪುರಂ ॥
ಭುಜಗಾಧಿರಾಜಗುಣಕೀರ್ತನಮುಖರಭುಜಂಗಕಾಮಿನೀ ।
ಗೀತಪಿನದಮೃದುಸತರ್ನರಮ್ಯ ಮಹೇಂದ್ರಕೇಳಿನಿಳಯಂ ಮನೋಹರಂ ॥
ಕನಕಾದ್ರಿನೀಲಘನಮೌಕ್ತಿಕರುಚಿರಹರಿನ್ಮಣಿಪ್ರಭಾ ।
ಜಾಲಮಿಲಸದರುಣದ್ಯುತಿರತ್ನಸಮೂಹಮೂರ್ಧ್ವಗಗಭಸ್ತಿವಿಸ್ತೃತಂ ॥
ಪಥತಂ ಮಹದ್ಗಗನಮಂಡಲಪಿಂಜರದುದರ್ಚಿರುದ್ಧ್ವಮಂ ।
ಘೂಮರಚಿತಮಹಸಂದಹನಂ ತಪನೀಯಪಿದ್ರುಮದವಭಾಸಭಾಸುರಂ ॥

ವಸಂತತಿಲಕಂ ॥

ದೃಷ್ಟ್ವಾ ಜಿನೇಂದ್ರಜನನೀ ರಜಸೀಪರಾಮೇ ।
ಸ್ವಪ್ನಾನಿಭಾದಿಪವಮಾನಸಮಾಪನಾನ್ ॥
ಗಾಂಧರ್ವಗೀತನಿನದಾದಪನೀಯ ನಿದ್ರಾಂ ।
ಭರ್ತ್ರೇ ನಿವೇದಿತವತೀ ಪರಯಾಮುದಾತಾನ್ ॥
ತೇನಾಪಿ ತತ್ಫಲಮನುತ್ತರಮಾಹ ಚಕ್ರೇ ।
ತಸ್ಯೈ ಭವಿಷ್ಯತಿ ಸುತಸ್ತ್ರಿವಿಶ್ವದೃಶ್ವಾ ॥

1 ಕರ್ಣೇಂದ್ರಾಹಿತಸಹಿಷ್ಣುತಸಂಪಾಸಂ.

ದ್ವಾತ್ರಿಂಶದಿಂದ್ರಮುಕುಟಾರ್ಪಿತಪಾದಪೀಠಃ ।
ಕರ್ಮಾಟವೀಹುತಭುಗಂತಕರೋಽಂತಕಸ್ಯ ॥
ಉಪೇಂದ್ರವಜ್ರಂ॥ ಮನೋಜಮಾತಂಗ ಮತಂಗವೈರೀ ।
ತ್ರಿಲೋಕಚೂಡಾಮಣಿ ರಷ್ಟಕರ್ಮಭಿತ್ ॥
ಮಯೇತಿಲಬ್ಧೋಗುಣರತ್ನಭೂಷಣಃ* ।
ಸುತೋಽಷದೇವಿ ಜಗದೇಕವಂದ್ಯೇ ॥

ಇಂತು ಮರುದೇವಿ ಪೇಳ್ದ ಸ್ವಪ್ನಾನಂತರಂ ನಿಜವದನಮಂ ಗಜಂ ಪುಗುವುದಂ ಕಂಡು ಅವಧಿಜ್ಞಾನಿಯಪ್ಪ ನಾಭಿರಾಜನಿಂತೆ ಅವಱ ಫಲಂಗಳನಱಿದು ಸುಖಮಿರ್ದನಂ ಇತ್ತ ಮುಂ ಪೇಳ್ದ ಸರ್ವಾರ್ಥಸಿದ್ಧೀಶ್ವರನಾದೇವಿಯ ಗರ್ಭಕ್ಕವತರಿಸಿ ಸಂಪೂರ್ಣ ಪ್ರಸವಸಮಯದೊಳ್ ಚೈತ್ರ ಬಹುಳ ನವಮಿಯೊಳ್ ಉತ್ತರಾಷಾಢ ನಕ್ಷತ್ರದೊಳ್ ಬ್ರಹ್ಮಯೋಗದೊಳ್ ತ್ರಿಜ್ಞಾನಧರಂ ಪುಟ್ಟುವುದುಂ ಸೌಧರ್ಮೇಂದ್ರಂ ಸಿಂಹಾಸನಕಂಪಮಾಗೆ ತದವಧಿಯಿಂ ತ್ರೈಲೋಕ್ಯನಾಥನುದಯಮನಱಿವುದುಂ ಕಲ್ಪವಾಸಿಗಳ್ ಘಂಟಾಟಂಕಾರದಿಂ ಜ್ಯೋತಿಷ್ಕರ್ ಸಿಂಹನಾದದಿಂ ವ್ಯಂತರಾಮರರ್ ಭೇರೀನಿನಾದದಿಂ ಭವನವಾಸಿಗಳ್ ಶಂಖನಿನಾದದಿಂಮಱಿದು ಆತನಾಜ್ಞೆಯಿಂ ಗಜರಥಾಶ್ವವೃಷಭ ಗಾಂಧರ್ವ ನರ್ತಕೀಪದಾತಿ ಲಕ್ಷಣಮಪ್ಪ ಸಪ್ತಾನೀಕಂ ಬೆರಸು ಬರೆ ಸೌಧರ್ಮೇಂದ್ರಂ ಜನ್ಮಾಭಿಷೇಕ ಕಲ್ಯಾಣಮಂ ಮಾಡಲೆಂದು ಶಚೀಮಹಾದೇವಿವೆರಸು ಐರಾವಣಾರೂಢನಯೋಧ್ಯೆಗೆ ಬಂದು ರಾಜಭವನಮನೆಯ್ದಿ ಶಚೀಮಹಾದೇವಿ, ಮರುದೇವಿಯ ಪ್ರಸೂತಿಗೃಹಮಂ ಪೊಕ್ಕು ಮೂಱುಸೂೞ್ ಬಲಗೊಂಡು ಪೊಡೆವಟ್ಟು ಮಾಯಾನಿದ್ರೆಯಂ ಮಾಡಿ ಮಾಯಾಶಿಶುವನಿರಿಸಿ ಜಿನ ಶಿಶುವನೆತ್ತಿಕೊಂಡು ಜಗತ್ರಯದೊಳಮತಿದುರ್ಲಭಮಪ್ಪ ಜಿನರಾಜಗಾತ್ರ ಸ್ಪರ್ಶಸುಖಮಂ ಪಡೆದು ಪಿಂಡೀಕೃತತ್ರಿಭುವನ ಸುಖಮನನುಭವಿಸಿದಂತೆ ಸಂತೋಷಂಬಟ್ಟು ಮಂಗಳಧಾರಿಣಿಯರ್ವೆರಸು ತಂದಿಂದ್ರನ ಕೈಯೊಳ್ಕುಡೆ ದೇವನಿಕಾಯಂ ಜಯಜಯನಿನಾದಪೂರ್ವಕಂ ನಮಸ್ಕಾರಂಗೆಯ್ಯೆ ಸೌಧರ್ಮೇಂದ್ರಂ ಕುಮಾರನನೈರಾವಣ ಸ್ಕಂಧಗತನಂಮಾಡೆ ಕನಕಾತಪತ್ರಮನೀಶಾನೇಂದ್ರನೆತ್ತೆ ಸನತ್ಕುಮಾರಮಾಹೇಂದ್ರರ್ ಚಾಮರಗಳನಿಕ್ಕೆ ಶಂಖಪಟಹಸಂಗೀತನರ್ತನಪೂರ್ವಕಂ ಮಂದರಾಚಳಕ್ಕೆ ಬಪ್ಪಾಗಳ್ ಐರಾವತದ ಮೂವತ್ತೆರಡು ಮೊಗಂಗಳೊಂದೊಂದರೊಳೆಂಟುಕೊಂಬುಂ ಒಂದೊಂದು ಕೊಂಬಿನೊಳೊಂದು ಕೊಳನುಮೊಂದೊಂದು ಕೊಳನೊಳೊಂದಬ್ಜಿನಿಯುಮೊಂದಬ್ಜಿನಿಯೊಳ್ ಮೂವತ್ತೆರಡಬ್ಜಮುಂ ಒಂದೊಂದಬ್ಜದೊಳ್ ಮೂವತ್ತೆರಡೆಸಳುಮೊಂದೊಂದೆಸಳೊಳ್ ಮೂವತ್ತಿರ್ವರ್ ದೇವಕನ್ನೆಯರ್ ನರ್ತಿಸುತ್ತುಂ ಮೇರುವನೆಯ್ದೆ ಬಲಾಹಕನಿರ್ಮಿತ ರತ್ನಮಯ ತ್ರಿವಿಧಸೋಪಾನದಿಕ್ಕೆಲದೊಳಂ ದೇವನಿಕಾಯಂ ಬರೆ ಮಧ್ಯಮ ಸೋಪಾನದಿನೇಱಿ ಪಾಂಡುಕ ಶಿಲಾತಳದ ಪೂರ್ವೋತ್ತರದಿಗ್ಭಾಗಗತಮಪ್ಪ ಸಿಂಹಾಸನದೊಳ್ ಬಾಲಕನಂ ಪೂರ್ವಾಭಿಮುಖನಾಗಿರಿಸಿ ಸೌಧರ್ಮೇಂದ್ರೇಶಾನೇಂದ್ರರಿಕ್ಕೆಲದೊಳ್ ಬರೆ ದಕ್ಷಿಣೋತ್ತರ ದಿಗ್ಭಾಗದೊಳಿರ್ದ ದಿಕ್ಪಾಲಕರುಮನವರವರ ದಿಗ್ಭಾಗದೊಳಿರಿಸಿ ಅಷ್ಟೋತ್ತರಸಹಸ್ರ ಕನಕ

* ಗವಲ್ಲಿ ಗುಣರತ್ನ ಭೂಷಣಾ

ಕಲಶಂಗಳೊಳ್ ಸುರಸಮಿತಿ ತೀವಿತಂದ ಪಾಲ್ಗಡಲನೀರ್ಗಳಿಂ ಜಯಜಯ ನಿನಾದ ಪೂರ್ವಕ ಮಭಿಷೇಕಂಗೆಯ್ದು ಗಂಧಮಾಲ್ಯಾದಿಗಳಿಂದರ್ಚಿಸಿ ತನ್ನೆರಡುಕಣ್ಗಳೊಳಂ ನೋಡಿ ತಣಿಯದೆ ಸೌಧರ್ಮೇಂದ್ರಂ ಸಹಸ್ರಾಕ್ಷನಾಗಿ ನಿರ್ವರ್ತಿತ ಜನ್ಮಾಭಿಷೇಕನ ಯೋಧ್ಯೆಗೆ ಬಂದು ನಾಭಿರಾಜನುಮಂ ಮರುದೇವಿಯುಮಂ ಪೂಜಿಸಿ ದೇವಂಗೆಱಗಿ ಆನಂದನೃತ್ಯಮನಾಡಿಪೋದಂ

ಇತ್ತ ದೇವಿಯರುಂ ಮಜ್ಜನಮಂಡನ ಕ್ಷೀರಪಾನಾದಿ ವಿಧಿಗಳಂ ಮಾಡಿ ವಯೋನುರೂಪದಿಂ ಕುಮಾರಂಗನುಷ್ಠಿಸುತ್ತಿರ್ಪನ್ನೆಗಂ ಅಶೀತ್ಯುತ್ತರಚತುರ್ಲಕ್ಷ ಪೂರ್ವಕಾಲಪರಮಾಯುಷ್ಯನಾಗಿ ನಿಸ್ವೇದತ್ವಮುಂ ನಿರ್ಮಲತ್ವಮುಂ ಕ್ಷೀರಗೌರರುಧಿರತ್ವಮುಂ ವಜ್ರವೃಷಭನಾರಾಚಸಂಹನನಮುಂ ಸಮಚತುರಸ್ರ ಸಂಸ್ಥಾನಮುಂ ಸುರಭಿಗಂಧತ್ವಮುಂ ಸುರೂಪತೆಯುಂ ಸ್ವಸ್ತಿಕಾಂಕುಶ ಧ್ವಜತೋರಣಾದಿ ಸಹಸ್ರಾಷ್ಟಲಕ್ಷಣಮುಂ ಅಪ್ರಮಿತವೀರ್ಯತ್ವಮುಂ ಪ್ರಿಯಹಿತವಾದಿತ್ವಮುಂ ಎಂಬ ದಶವಿಧಸ್ವಭಾವಾತಿಶಯ ಸಮುತ್ಪನ್ನಮುಂ ಶಸ್ತ್ರಪಾಷಾಣವಾಯುವರ್ಷವಜ್ರಾಗ್ನಿ ಕಾಷ್ಠ ಕಂಟಕಾದಿ ಪರಘಾತಮುಂ ವಾತಪಿತ್ತಶ್ಲೇಷ್ಮ ಸನ್ನಿಪಾತ ಸಂಭವಾಮಯನೋ ಕರ್ಮೋದಯಾದ್ಯುಪಘಾತಮುಮಿಲ್ಲದೆ ಜರಾದಿ ಖೇದದಂತಮಲಾದಿರಹಿತಮುಂ ನಿರತಿಶಯೇಂದ್ರಿಯಾರ್ಥಸಮನುಗತಾಭ್ಯುದಯ ನಿಶ್ರೇಯಸಪರಮ ಸುಖಸಾಧನಮುಮಪ್ಪ ಚರಮದೇಹಮುಂ ತಾಳ್ದಿ ನವಯೌವನದೊಳ್ ಕಚ್ಛಮಹಾಕಚ್ಛರ ತಂಗೆಯರಪ್ಪ ಯಶಸ್ವತಿಯುಂ ಸುನಂದೆಯುಮಪ್ಪೀರ್ವರುಮಂ ಮದುವೆನಿಂದು ಸಂಸಾರಸುಖಮನನುಭವಿಸುತ್ತಿರ್ಪನ್ನೆಗಂ ಸುಬಾಹು ಮಹೀಪತಿ ಸರ್ವಾರ್ಥಸಿದ್ಧಿಯಿಂ ಬಂದು ಯಶಸ್ವತಿಗೆ ಭರತೇಶ್ವರನಾಗಿ ಪುಟ್ಟಿದೊಂ

ಮುಂಪೇಳ್ದ ಪೀಠಮಹಾಪೀಠ ವಿಜಯ ವೈಜಯಂತ ಜಯಂತಾಪರಾಜಿತರ್ ಸರ್ವಾರ್ಥಸಿದ್ಧಿಯಿಂ ಬಂದು ಭರತೇಶ್ವರನಿಂ ಕಿರಿಯರಾಗಿ ಕ್ರಮದೊಳ್ ವೃಷಭಸೇನಾನಂತ ವಿಜಯಾನಂತ ವೀರ್ಯಾಚ್ಯುತ ವೀರಸುವೀರರು ಮೆಂಬರಾಗಿ ಪುಟ್ಟಿದರ್ ಅಂತು ಭರತಕುಮಾರಂಬೆರಸು ವಜ್ರಕುಮಾರರಾದಿಯಾಗಿ ನೂರ್ವರ್ ಕುಮಾರರನಿಬರುಂ ಕಿರಿಯಳ್ ಬ್ರಾಹ್ಮಿಯೆಂಬ ಮಗಳುಮಂ ಯಶಸ್ವತಿ ಪಡೆಯೆ ಮುಂ ಪೇಳ್ದ ಮಹಾಬಾಹು ಮಹೀಪತಿ ಸರ್ವಾರ್ಥಸಿದ್ಧಿಯೊಳ್ ಪುಟ್ಟಿ ಬಂದು ಸುನಂದೆಗಾ ಕಾಲದ ಕಾಮದೇವಂ ಬಾಹುಬಲಿ ಕುಮಾರನೆಂಬೊ ನಾದೊಂ ಮುನ್ನ ವೃಷಭೇಶ್ವರಂ ವಜ್ರಜಂಘನಾದ ಭವದೊಳ್ ಆ ಮಹಾತ್ಮಂಗೆ ತಂಗೆಯಾದ ಅನುಂದರಿಯೆ ಕತಿಪಯ ಪರಿಭ್ರಮಣದಿಂ ಬಂದು ಬಾಹುಬಲಿ ಕುಮಾರನಿಂ ಕಿರಿಯಳ್ ಸುಂದರಿಯೆಂಬಳ್ ಮಗಳಾಗಿ ಪುಟ್ಟಿದಳ್.

ಅಂತು ಭರತಂ ಬಾಹುಬಲಿಕುಮಾರಂ ಮೊದಲಾಗೆ ನೂರ್ವರ ಕುಮಾರರುಮನಿರ್ವರು ಕನ್ನೆಯರುಮಂ ಆದಿದೇವಂ ನೋಡಿ ವಿವಿಧಾಭರಣಾಲಂಕೃತರಂ ಮಾಡಿಸಿ ಸಿದ್ಧಂನಮಯೆಂದು ಅಕಾರಾದಿ ಹಕಾರಪರ್ಯಂತಾಕ್ಷರಂಗಳಂ ಬ್ರಾಹ್ಮಿಗೆ ದಕ್ಷಿಣಹಸ್ತದಿಂ ಗಣಿತಮಂ ಸೌಂದರಿಗೆ ಎಡದಹಸ್ತದಿಂದುಪದೇಶಂಗೈದು ವಿದ್ಯಾಪರಿಪೂರ್ಣೆಯರಂ ಮಾಡಿ ಭರತಂಗೆ ಭರತಮುಮನರ್ಥಶಾಸ್ತ್ರಮುಮಂ ವೃಷಭಸೇನಂಗೆ ಗೀತವಾದ್ಯಾರ್ಥಸಂಗ್ರಹಮಪ್ಪ ಗಾಂಧರ್ವಶಾಸ್ತ್ರಮುಮಂ ಅನಂತವಿಜಯಂಗೆ ಚಿತ್ರಕಲೆಯುಮಂ

PREFACE

I have had the idea of writing an "Outlines of the History of the Kannada Language" for the past quarter of a century. Materials were not available for a long time, and the attempt had to be postponed.

Many standard works have been consulted in the preparation of the Essay. Of these the following deserve special mention, namely —

1. Volumes of the Epigraphia Karnataka edited by Mr. B. L. Rice, C. I. E.
2. Mysore and Coorg from the Inscriptions by Mr. B. L. Rice, C. I. E.
3. Early History of the Deccan by Prof. Bhandarkar.
4. Karnataka Kavi Charite by Praktana Vimarsha Vichakshana Rao Bahadur Mr. R. Narasimhachar, M.A., F.R.A.S.

This is the first attempt at writing a History of the Kannada Language, and I request all Scholars interested in the development of Kannada Literature to read the Essay carefully and to offer their suggestions for its improvement.

R. Raghunatha Rao, B.A.

ಶುದ್ಧಾಶುದ್ಧ ಪತ್ರಿಕೆ.

ಪುಟ	ಪಂಕ್ತಿ	ಅಶುದ್ಧ	ಶುದ್ಧ
332	ಕೊನೆಯದು	ದರ್ಪವಾಟಿಕೋವೇಗಗತಿಯುಂ	ದರದೊಳೆಸೆಲ್ವವಾಗಗತಿಯಿಂ
333	27	ಸಮುಲಿತ	ಸಮುಚಿತ
348	1	ಕರಳಿಂಷಂ	ಕದಳಿಂದಂ
350	23	ನೊರೆಗೆಟ್ಟರ್	ಪೊರೆಗೆಟ್ಟರ್
,,	28	ಕಾಯ್ದುತಿರ್ಪಂ	ಕಾಯ್ದುತಿರ್ಪ್ಪಂ
351	1	ಮ್ಮಹೇಂದ್ರನಪನನೆ	ಮಹೇಂದ್ರನೃಪನನ್ನೆ
354	6	ಶಕುನೋದ್ವದ್ಭೃವಿದ್ಯಾ	ಶಕುನೋದ್ಯದ್ಭೃದ್ಯವಿದ್ಯಾ
360	7	ಓಡಿಯುದಮುನ್ಸ್ಯ	ಓಡಿಯುದಮುನ್ನ
362	10	ಮೇಲುಡುವ	ಮೇಲುಮಾಡುವ
365	21	ಭುನವಂ	ಭುವನಂ
366	3	ಜಲದಂತರಾಮನಕ	ಜಲದಂಕರಾಮನಸ
,,	6	ಗೆಯ್ಯುತ್ತ್ರಮಿದು	ಗೆಯ್ಯುತ್ತ್ರಮಿದುರ್
371	27	ಘನಶಬ್ಬ್ಡಡಂಬರೋ	ಘನಶಬ್ದಾಡಂಬರೋ
382	29	ಶಿಲಾಪರವೇ	ಶಿಲಾಪರಿವೇ
387	10	ಯಲ್ಪಟ್ಟುವು	ಯಲ್ಪಟ್ಟುದು
390	19	ದ್ರಾವಿಡಭಾಷೆಯಲ್ಲಿ	ದ್ರಾವಿಡಭಾಷೆಯಲ್ಲ.


ದಕ್ಷಿಣದೇಶ
ಬೀರಾರ್
ಕೊಲ್ಹಾಪುರ
ನೆಲ್ಲೂರು
ಮದರಾಸು
ಕಾಂಚೀಪುರ
ತಂಜಾವೂರು
ಮಧುರೆ
ರಾಮೇಶ್ವರ
ಕನ್ಯಾಕುಮಾರಿ
ಹಿಂದೂ ಸಾಗರ

ಕರ್ಣಾಟ
ಭಾಷಾಚರಿತ್ರೆಯ ಹೆಗ್ಗುರುತುಗಳು.

ಈ ಉಪನ್ಯಾಸದ ಸಾರಾಂಶವು ಕಳೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಭೆಯಲ್ಲಿ ಸಭಾಸದರಿಗೆ ನಿವೇದಿಸಲ್ಪಟ್ಟಿತು.

ಇಂಗ್ಲೀಷಿನಂತೆ ಲೋಕದಲ್ಲಿ ವಿಖ್ಯಾತವಾಗಿಯೂ ಪ್ರಚುರವಾಗಿಯೂ ಇರುವ ಭಾಷೆಯು ಮತ್ತೊಂದಿಲ್ಲವೆಂದು ನಿರ್ಭಯದಿಂದ ಹೇಳಬಹುದು. ಈ ಇಂಗ್ಲೀಷು ಭಾಷೆಯು ಇಂಗ್ಲೆಂಡು, ಸ್ಕಾಟ್ಲೆಂಡು, ಐರ್ಲೆಂಡುಗಳಲ್ಲಿ ಪ್ರಚುರವಾಗಿರುವುದಲ್ಲದೆ ಉತ್ತರ ಅಮೆರಿಕಾ ಖಂಡದ ಮುಕ್ಕಾಲುಭಾಗದಲ್ಲಿಯೂ, ಆಸ್ಟ್ರೇಲಿಯಾ ಖಂಡದ ಎಲ್ಲಾಭಾಗಗಳಲ್ಲಿಯೂ, ಆಫ್ರಿಕಾ ಖಂಡದ ದಕ್ಷಿಣಭಾಗದಲ್ಲಿಯೂ ಪ್ರಚುರವಾಗಿ ಮೆರೆಯುತ್ತಿದೆ. ಯೂರೋಪು ಖಂಡದ ಮುಖ್ಯಮುಖ್ಯ ವಿಶ್ವವಿದ್ಯಾನಿಲಯಗಳಲ್ಲಿ ಇಂಗ್ಲೀಷನ್ನು ದ್ವಿತೀಯಭಾಷೆಯಾಗಿ ಕಲಿಸುತ್ತಿರುವರು. ನಮ್ಮ ಭರತಖಂಡದಲ್ಲಿ ಇಂಗ್ಲೀಷು ರಾಜಕೀಯಭಾಷೆಯಾಗಿರುವುದರಿಂದ ವಿಶ್ವವಿದ್ಯಾನಿಲಯಗಳಲ್ಲೆಲ್ಲಾ ಪ್ರಥಮಭಾಷೆಯಾಗಿ ಪಠಿಸಲ್ಪಡುತ್ತಿದೆ. ಈ ಸಂಗತಿಗಳನ್ನು ಪರ್ಯಾಲೋಚಿಸಿ ನೋಡುವಲ್ಲಿ ೨೦ ಕೋಟಿಯಷ್ಟು ಜನರು ಇಂಗ್ಲೀಷನ್ನು ತಿಳಿದವರಾಗಿದ್ದಾರೆಂದು ಹೇಳಬಹುದಾಗಿದೆ. ಇಂಗ್ಲೀಷಿನಲ್ಲಿರುವಷ್ಟು ಮಂದಿ ಮಹಾಪಂಡಿತರು ಇನ್ನಾವ ಭಾಷೆಯಲ್ಲಿಯೂ ಇಲ್ಲ. ಹೀಗಿರುವುದಾದರೂ ಇಂಗ್ಲೀಷುಭಾಷಾ ಚರಿತ್ರೆಯು ಸುಮಾರು ೨೦ ವರ್ಷಗಳ ಹಿಂದೆ ಬರೆಯಲ್ಪಟ್ಟಿತು. ಹೀಗಾದುದಕ್ಕೆ ಕಾರಣವೇನು?

೧. ಭಾಷಾಚರಿತ್ರೆಗೆ ಬೇಕಾಗುವ ಸಾಮಗ್ರಿಗಳು.

ಒಂದುಭಾಷೆಯ ಚರಿತ್ರೆಯನ್ನು ಬರೆಯಬೇಕಾದರೆ ಅನೇಕಾನೇಕ ವಿಷಯಗಳು ವ್ಯವಸ್ಥಿತಗಳಾಗಿರಬೇಕು. ಮಹಾಪುರುಷನೊಬ್ಬನ ಚರಿತ್ರೆಯನ್ನು ಬರೆಯಬೇಕಾದರೆ ಅವನ ಕುಲ ಗೋತ್ರಗಳೂ, ಮಾತಾಪಿತೃಗಳ ಶೀಲಗಳೂ, ಅವನ ಸ್ಥಿರಸಂಕಲ್ಪಗಳೂ, ಅವನ ಸಹವಾಸಿಗಳ ಶೀಲಗಳೂ, ಸಂಕಲ್ಪಗಳೂ ಗೊತ್ತಾಗಿರಬೇಕಲ್ಲವೆ? ಹಾಗೆಯೇ ಒಂದುಭಾಷೆಯ ಚರಿತ್ರೆಯನ್ನು ಬರೆಯಬೇಕಾದರೂ ಆ ಭಾಷೆಯ ಕುಲದ ವೈಲಕ್ಷಣ್ಯಗಳೂ, ಆ ಭಾಷೆಯ ಸುತ್ತಲೂ ಇರುವ ಇತರಭಾಷೆಗಳ ವೈಲಕ್ಷಣ್ಯಗಳೂ ಆ ಭಾಷೆಯ ಬೇರೆಬೇರೆ ನಾಡುಗಳ ಚಾರಿತ್ರಾಂಶಗಳೂ ಸ್ಪಷ್ಟವಾಗಿ ನಿರ್ಧಾರಿತಗಳಾಗಿರಬೇಕು.

ಭಾಷೆಗಳ ವೈಲಕ್ಷಣ್ಯಗಳನ್ನು ನಿರ್ಧರಿಸಿ ಹೇಳುವುದು ಸುಲಭಕಾರ್ಯವಲ್ಲ, ಏಕೆಂದರೆ ಶಬ್ದವಿಮರ್ಶಶಾಸ್ತ್ರದ (Philology) ಪರಿಚಯವಿದ್ದಹೊರತು ಈ ಕೆಲಸವು ಸಾಧ್ಯವಲ್ಲ. ಈ ಶಬ್ದವಿಮರ್ಶಶಾಸ್ತ್ರದ ವಿಚಾರವು ನಮ್ಮ ಭರತಖಂಡದಲ್ಲಿ ಪೂರ್ವದಲ್ಲಿ ಪ್ರಚುರವಾಗಿತ್ತೆಂದು ಹೇಳುವದಕ್ಕೆ ನಿದರ್ಶನಗಳಿರುವಹಾಗೆ ತೋರುವುದಿಲ್ಲ. ಷಡ್ಭಾಷಾ ಚಂದ್ರಿಕೆಯೊಂದು ಆಯಾಭಾಷೆಗಳ ವ್ಯಾಕರಣಸೂತ್ರಗಳನ್ನು ಮಾತ್ರ

ಒಳಕೊಂಡಿರುವದೆಂದು ಹೇಳುತ್ತಾರೆ. ಹೀಗಿದ್ದುದರಿಂದಲೇ ಭರತಖಂಡದ ಯಾವ ಭಾಷೆಯ ಚರಿತ್ರೆಯೂ ಇನ್ನೂ ಬರೆಯಲ್ಪಟ್ಟಿಲ್ಲ. ಸಂಸ್ಕೃತದ ಚರಿತ್ರೆಯೇ ನಮ್ಮ ಪೂರ್ವಕಾಲದ ವಿದ್ವಾಂಸರುಗಳಿಗೆ ತಿಳಿದಿರಲಿಲ್ಲವೆಂದು ಅನೇಕ ಪಂಡಿತರು ಅಭಿಪ್ರಾಯಪಡುತ್ತಾರೆ; ಸಂಸ್ಕೃತದಿಂದ ಮಾಗಧಿ ಮುಂತಾದ ಪ್ರಾಕೃತಭಾಷೆಗಳು ಜನಿಸಿದುವು ಎಂಬುದನ್ನು ಯುರೋಪ್, ಅಮೆರಿಕಾಖಂಡಗಳಲ್ಲಿರುವ ಸಂಸ್ಕೃತವಿದ್ವಾಂಸರುಗಳು ಒಪ್ಪಿಲ್ಲ, ಮತ್ತು ಒಪ್ಪುವಹಾಗೂ ಇಲ್ಲ

ಪ್ರಸಕ್ತವಿಷಯವಿಚಾರದಲ್ಲಿ ಕನ್ನಡವು ದ್ರಾವಿಡಭಾಷಾವರ್ಗಕ್ಕೆ ಸೇರಿರುವದು ಎಂಬುದನ್ನು ನಾವು ಜ್ಞಾಪಕದಲ್ಲಿಡಬೇಕು. ಡಾಕ್ಟರ್ ಕಾಲ್ಡ್ವೆಲ್ ಸಾಹೇಬರು ಬರೆದಿರುವ ಕಂಪಾರೆಟಿವ್ ಡ್ರವಿಡಿಯನ್ ಗ್ರಾಮರ್ (ವಿಮರ್ಶಪೂರ್ವಕವಾದ ದ್ರಾವಿಡಭಾಷೆಗಳ ವ್ಯಾಕರಣ) ಎಂಬುದು ಬೇರೆಬೇರೆ ದ್ರಾವಿಡಭಾಷೆಗಳ ವ್ಯಾಕರಣಗಳ ವಿಷಯಗಳನ್ನು ಪರಸ್ಪರ ಹೋಲಿಕೆಯಿಂದ ನಿರ್ಧರಿಸುವದರಲ್ಲಿ ಪ್ರಥಮ ಪ್ರಯತ್ನವಾಗಿದೆಯೇ ಹೊರತು ಸಿದ್ಧಾಂತಗ್ರಂಥವಾಗಿದೆಯೆಂದು ಹೇಳಲಾಗುವದಿಲ್ಲ. ಡಾಕ್ಟರ್ ಕಾಲ್ಡ್ವೇಲ್ ಸಾಹೇಬರಿಂದೀಚೆಗೆ ಮತ್ತಾರೂ ಈ ಕೆಲಸಕ್ಕೆ ಕೈ ಹಾಕಿಲ್ಲ ಈ ಸಂದರ್ಭದಲ್ಲಿ ನಾನು ಕರ್ನಾಟಕಭಾಷಾ ಚರಿತ್ರೆಯನ್ನು ಕುರಿತು ಪ್ರಸಂಗಿಸುತ್ತೇನೆಂದು ಮುಂಬರಿದು ಬಂದಿರುವದು ಸಾಹಸಕೃತ್ಯವಾಗಿರುವದಾದರೂ ನನಗಿರುವ ಕರ್ನಾಟಕಭಾಷಾಭಿಮಾನವು ಸುಮ್ಮನಿರಗೊಡದೆ ಈ ವಿದ್ವನ್ಮಂಡಲಿಯ ಮುಂದೆ ನನ್ನನ್ನು ಎಳೆದುತಂದು ನಿಲ್ಲಿಸಿರುವದು. ನನ್ನ ಪ್ರಸಂಗದಲ್ಲಿ ಅನುಚಿತ ವಿಷಯಗಳು ಕಾಣಬಂದರೂ, ಅಲ್ಲಲ್ಲಿ ಕಾಣಬರಬಹುದಾದ ಸದ್ವಿಷಯಗಳಲ್ಲಿ ದೃಷ್ಟಿಯನ್ನು ಇಟ್ಟು ನಾನು ಹೇಳುವ ವಿಷಯಗಳನ್ನು ಸಾವಧಾನದಿಂದ ಲಾಲಿಸಬೇಕೆಂದು ಬೇಡುತ್ತೇನೆ.

೨ ಕನ್ನಡದ ನೆರೆಹೊರೆಯವರು — ಕನ್ನಡದೊಡನಾಡಿಗಳು.

ಕರ್ನಾಟಕಭಾಷೆಯು ಬಹು ಪುರಾತನಭಾಷೆಯೆಂಬುದಕ್ಕೆ ಸಂದೇಹವೇನೂ ಇಲ್ಲ ಕ್ರಿಸ್ತಶಕಕ್ಕೆ ಪೂರ್ವದಲ್ಲಿಯೇ ದಕ್ಷಿಣದೇಶದಲ್ಲಿ ದ್ರಾವಿಡಭಾಷೆಗಳಾದ ತಮಿಳು, ತೆಲುಗು, ಕನ್ನಡ ಎಂಬುವು ನೆಲೆಗೊಂಡಿದ್ದುವೆಂಬುದಕ್ಕೆ ಅನೇಕ ನಿದರ್ಶನಗಳಿರುತ್ತವೆ ಕ್ರಿಸ್ತಪೂರ್ವದ ಎರಡನೆಯ ಶತಮಾನಕ್ಕೆ ಮುಂಚೆಯೇ ಮಹಾರಾಷ್ಟ್ರದಲ್ಲಿ ಆರ್ಯರು ಬಂದು ನೆಲೆಗೊಂಡು ಮಹಾರಾಷ್ಟ್ರೀಪ್ರಾಕೃತವನ್ನು ಆಡುತ್ತಿದ್ದರೆಂದು ತಿಳಿಯಬರುತ್ತದೆ. "ಪೂರ್ವದ ಪ್ರಾಕೃತಗಳಲ್ಲಿ ಮಹಾರಾಷ್ಟ್ರದಲ್ಲಿ ಪ್ರಚಾರವಾಗಿದ್ದ ಮಹಾರಾಷ್ಟ್ರಿ ಎಂಬ ಪ್ರಾಕೃತವು ಒಂದು ಮುಖ್ಯಭಾಷೆಯಾಗಿತ್ತು. ಸೇತುಬಂಧ ಎಂಬ ಗ್ರಂಥವನ್ನು ಕಾಳಿದಾಸನು ಈ ಪ್ರಾಕೃತದಲ್ಲಿ ಬರೆದನೆಂಬ ಒಂದು ಪ್ರವಾದವಿದೆ ಅಲಂಕಾರಶಾಸ್ತ್ರವನ್ನು ಬರೆದ ದಂಡಿಯು ಈ ಸಂಗತಿಯನ್ನು ಸೂಚಿಸಿರುವನು. ಸಂಸ್ಕೃತದ ನಾಟಕಗಳಲ್ಲಿರುವ ಸ್ತ್ರೀಪಾತ್ರಗಳಿಂದ ಈ ಪ್ರಾಕೃತವು ಆಡಲ್ಪಡುತ್ತದೆ ಈ ಭಾಷೆಯ ವ್ಯಾಕರಣವಿಷಯಗಳನ್ನು ವರರುಚಿಯು ಪ್ರಾಕೃತಪ್ರಕಾಶವೆಂಬ ತನ್ನ ಗ್ರಂಥದಲ್ಲಿ ನಿರೂಪಿಸಿರುವನು" ಎಂದು ಡಾಕ್ಟರ್ ರಾಮಕೃಷ್ಣ ಗೋಪಾಲ ಭಂಡಾರ್ಕರು ತಮ್ಮ (Early History of the Deccan) ಎಂಬ ಪುಸ್ತಕದ ೧೨ನೆಯ ಪುಟದಲ್ಲಿ ತಿಳಿಸುತ್ತಾರೆ.

ದ್ರಾವಿಡಭಾಷೆಗಳ ನಾಡುಗಳು.

ಕರ್ಣಾಟಭಾಷೆಯ ಚರಿತ್ರೆಯನ್ನು ತಿಳಿಯಬೇಕಾದರೆ ಬೇರೆಬೇರೆ ದ್ರಾವಿಡಭಾಷೆಗಳ ಎಲ್ಲೆಗಳನ್ನು ಸ್ಥೂಲವಾಗಿ ನೆನಪಿನಲ್ಲಿ ಇಟ್ಟುಕೊಂಡಿರಬೇಕು. ದಕ್ಷಿಣದೇಶದಲ್ಲಿ ನೀಲಗಿರಿಬೆಟ್ಟವನ್ನು ಒಂದು ಗುರುತಾಗಿಯೂ ಗೋದಾವರೀ ಮಂಜೀರಾ ನದಿಗಳ ಸಂಗಮಸ್ಥಾನವನ್ನು ಇನ್ನೊಂದು ಗುರುತಾಗಿಯೂ ಇಟ್ಟುಕೊಂಡು, ಇವೆರಡನ್ನೂ ಕೂಡಿಸುವ ಒಂದು ಗೆರೆಯನ್ನು ಎಳೆಯಬಹುದು. ಮೇಲೆಕಂಡ ಸಂಗಮಸ್ಥಾನದಿಂದ ಕೊಲ್ಹಾಪುರದ ಮಾರ್ಗವಾಗಿ ಪಶ್ಚಿಮಸಮುದ್ರತೀರಕ್ಕೆ ಒಂದು ಗೆರೆಯನ್ನು, ಮೇಲೆಕಂಡ ಸಂಗಮಸ್ಥಾನದಿಂದ ರಾಜಮಹೇಂದ್ರದ ಮಾರ್ಗವಾಗಿ ಪೂರ್ವಸಮುದ್ರತೀರಕ್ಕೆ ಒಂದು ಗೆರೆಯನ್ನು ಎಳೆಯಬಹುದು. ನೀಲಗಿರಿಯ ಬೆಟ್ಟದಿಂದ ಮದರಾಸುಪಟ್ಟಣಕ್ಕೆ ಒಂದು ಗೆರೆಯನ್ನು, ನೀಲಗಿರಿಬೆಟ್ಟದಿಂದ ಕ್ಯಾಸರಗೋಡಿಗೆ ಕೊಡಗಿನಮಾರ್ಗವಾಗಿ ಒಂದುಗೆರೆಯನ್ನು, ನೀಲಗಿರಿಬೆಟ್ಟದಿಂದ ಕನ್ಯಾಕುಮಾರಿಗೆ ಒಂದು ಗೆರೆಯನ್ನು ಎಳೆಯಬಹುದು. ಕನ್ಯಾಕುಮಾರಿಯಿಂದ ಹೊರಟು ನೀಲಗಿರಿಯಮಾರ್ಗವಾಗಿ ಒಂದು ಮದರಾಸಿನಲ್ಲಿ ನಿಲ್ಲುವಗೆರೆಗೂ ಪೂರ್ವಸಮುದ್ರತೀರಕ್ಕೂ ನಡುವೆ ಇರುವ ನಾಡು ತಮಿಳುಪ್ರಾಂತ. ಕನ್ಯಾಕುಮಾರಿಯಿಂದ ಹೊರಟು ನೀಲಗಿರಿಯಮಾರ್ಗವಾಗಿ ಒಂದು ಕ್ಯಾಸರಗೋಡಿನಲ್ಲಿ ನಿಲ್ಲುವ ಎಲ್ಲೆಯು ಮಲೆಯಾಳೀ ಭಾಷೆಯ ಎಲ್ಲೆಯಾಗಿರುತ್ತದೆ. ನೀಲಗಿರಿಬೆಟ್ಟದಿಂದ ಗೋದಾವರೀ ಮಂಜೀರಾ ಸಂಗಮಸ್ಥಾನದವರೆಗೆ ಇರುವ ಗೆರೆಯೊಂದು, ಮೇಲೆಕಂಡ ಸಂಗಮಸ್ಥಾನದಿಂದ ಹೊರಟು ರಾಜಮಹೇಂದ್ರದಲ್ಲಿ ನಿಲ್ಲುವ ಗೆರೆಯೊಂದು, ನೀಲಗಿರಿಯಬೆಟ್ಟದಿಂದ ಹೊರಟು ಮದರಾಸಿನಲ್ಲಿ ನಿಲ್ಲುವ ಗೆರೆಯೊಂದು, ಮದರಾಸಿನಿಂದ ರಾಜಮಹೇಂದ್ರದವರೆಗಿರುವ ಸಮುದ್ರತೀರವೊಂದು ಈ ಎಲ್ಲೆಗಳ ಮಧ್ಯದಲ್ಲಿರುವ ದೇಶವು ತೆಲುಗುಪ್ರಾಂತ. ನೀಲಗಿರಿಯಿಂದ ಕ್ಯಾಸರಗೋಡಿನವರೆಗೆ ಹಬ್ಬಿರುವ ಗೆರೆಯೊಂದು, ನೀಲಗಿರಿಯಿಂದ ಹೊರಟು ಗೋದಾವರೀ ಮಂಜೀರಾ ಸಂಗಮಸ್ಥಾನದಲ್ಲಿ ನಿಲ್ಲುವಗೆರೆಯೊಂದು, ಮೇಲೆಕಂಡ ಸಂಗಮಸ್ಥಾನದಿಂದ ಕೊಲ್ಹಾಪುರದಮಾರ್ಗವಾಗಿ ಸಮುದ್ರತೀರಕ್ಕೆ ಬಂದು ನಿಲ್ಲುವಗೆರೆಯೊಂದು, ಕೊಂಕಣದಿಂದ ಕ್ಯಾಸರಗೋಡಿನವರೆಗೆ ಹಬ್ಬಿರುವ ಗೆರೆಯೊಂದು- ಈ ಎಲ್ಲೆಗಳ ಮಧ್ಯದಲ್ಲಿ ಹಬ್ಬಿರುವ ಪ್ರಾಂತವು ಕರ್ಣಾಟಕಪ್ರಾಂತ. ದ್ರಾವಿಡಭಾಷೆಗಳ ಎಲ್ಲೆಗಳು ಮೇಲೆ ಹೇಳಿದರೀತಿಯಲ್ಲಿರುವದರಿಂದ ಕನ್ನಡಕ್ಕೆ ಉತ್ತರದಲ್ಲಿ ಮಹಾರಾಷ್ಟ್ರೀಪ್ರಾಕೃತವೂ, ಪೂರ್ವದಲ್ಲಿ ತೆಲುಗು, ಆಗ್ನೇಯದಲ್ಲಿ ತಮಿಳು, ನೈರುತ್ಯದಲ್ಲಿ ಮಲೆಯಾಳಿಯೂ ಇರುವದೆಂದು ಭಾವಿಸಬೇಕಾಗಿದೆ.

೩. ಕನ್ನಡ ಮತ್ತು ಕನ್ನಡದೊಡನಾಡಿಗಳ ತೌರೂರುಗಳು.

ಮೇಲ್ಕಂಡಭಾಷೆಗಳ ತೌರೂರುಗಳನ್ನು ಜ್ಞಾಪಕದಲ್ಲಿಟ್ಟಿರುವದೂ ಅವಶ್ಯಕವಾಗಿದೆ. ಮಹಾರಾಷ್ಟ್ರೀಪ್ರಾಕೃತಕ್ಕೆ ಉಜ್ಜಯಿನಿಯು ಪೂರ್ವದಲ್ಲಿ ತೌರೂರಾಗಿತ್ತು. ಕಾಲಾನಂತರದಲ್ಲಿ ಮಹಾರಾಷ್ಟ್ರೀಪ್ರಾಕೃತದಿಂದ ಹುಟ್ಟಿದ ಮಹಾರಟ್ಟಭಾಷೆಗೆ ಪೈಠಾನ್ ಎಂಬ ಪಟ್ಟಣವು ಮುಖ್ಯಸ್ಥಳವಾಯಿತು. ಕ್ರಿ. ಶ. ೧೦ನೆಯ ಶತಮಾನದಲ್ಲಿ

ಪೂನಾಪಟ್ಟಣವು ಮಹಾರಟ್ಟಿಯಿಂದ ಬಳಿದ ಮರಾಠಿಗೆ ತೌರೂರಾಯಿತು. ಶುದ್ಧ ತೆಲುಗುಭಾಷೆಗೆ ರಾಜಮಹೇಂದ್ರವೂ ಬೆಜವಾಡವೂ ಮುಖ್ಯಪಟ್ಟಣಗಳಾಗಿ ಪೂರ್ವದಿಂದಲೂ ಇವೆ. ತಮಿಳಿಗೆ ಮಧುರೆಯೂ ತಂಜಾವೂರೂ ಪೂರ್ವದಿಂದಲೂ ಮುಖ್ಯಪಟ್ಟಣಗಳಾಗಿರುವುವು. ಮಲೆಯಾಳಿಗೆ ತಿರುವಾಂಕೂರೂ ಕೊಚ್ಚಿಯೂ ಮುಖ್ಯಸ್ಥಳಗಳಾಗಿರುವುವು, ಆದರೆ ಮಲೆಯಾಳಿಯು ತಮಿಳಿಂದ ಹುಟ್ಟಿತೆಂದು ಭಾವಿಸಿರುವುದರಿಂದ ಆ ಭಾಷೆಯನ್ನು ನಾವು ಇಲ್ಲಿ ಬೇರೆಯಾಗಿ ತೆಗೆದುಕೊಳ್ಳಬೇಕಾಗಿಲ್ಲ. ಮರಾಠಿ, ಮಲೆಯಾಳಿ, ತೆಲುಗು, ತಮಿಳು ಈ ಭಾಷೆಗಳ ತೌರೂರುಗಳು ಕಾಲಕಾಲಕ್ಕೆ ಬದಲಾಯಿಸುತ್ತ ಬರಲಿಲ್ಲ, ಕನ್ನಡದವಿಷಯದಲ್ಲಾದರೊ ಹಾಗಿಲ್ಲ. ಗಂಗವಾಡಿರಾಜ್ಯವು ಪರಾಧೀನವಾಗುವವರೆಗೂ - ಎಂದರೆ ಕ್ರಿ. ಶ. ೧೦೦೪ರವರೆಗೂ- ಕನ್ನಡವು ಬೇರೆಬೇರೆ ವಿದ್ಯಮಾನಗಳಿದ್ದ ಮೂರು ಸ್ಥಳಗಳಲ್ಲಿ ಗ್ರಂಥಸ್ಥವಾಗುತ್ತಾ ಬಂತು. ಗಂಗವಾಡಿಯ ರಾಜಧಾನಿಯಾದ ತಲಕಾಡುಪ್ರಾಂತವೊಂದು, ಕೃಷ್ಣಾತುಂಗಭದ್ರಾ ಮಧ್ಯಪ್ರಾಂತವೊಂದು, ವೀರಶೈವಮತವು ಹುಟ್ಟಿದ ಹೈದರಾಬಾದಿನ ಕರ್ಣಾಟಕಪ್ರಾಂತವೊಂದು. ವೀರಶೈವಮತವು ಸ್ಥಾಪಿತವಾದ ೧೨ನೆಯ ಶತಮಾನದಲ್ಲಿ ಹೈದರಾಬಾದಿನ ಕರ್ಣಾಟಕಪ್ರಾಂತದ ಭಾಷೆಯು ಗ್ರಂಥಸ್ಥವಾಗಿ ಚಿರಸ್ಥಾಯಿಯಾಯಿತು. ಮೇಲೆಹೇಳಿದ ಮೂರು ಪ್ರಾಂತಗಳ ಪ್ರಾಶಸ್ತ್ಯವು ಹಾಳಾದಮೇಲೆ ಹೊಯ್ಸಳಬಲ್ಲಾಳರ ಕಾಲದಲ್ಲಿ ದೋರಸಮುದ್ರವು ಕನ್ನಡಕ್ಕೆ ಮುಖ್ಯನೆಲೆಯಾಯಿತು. ಹೊಯ್ಸಳ ಬಲ್ಲಾಳರ ಸಾಮ್ರಾಜ್ಯವು ಹಾಳಾದಮೇಲೆ ವಿಜಯನಗರದ ಸಂಸ್ಥಾನದ ರಾಜಧಾನಿಯು ಕನ್ನಡಕ್ಕೆ ಮುಖ್ಯಸ್ಥಳವಾಯಿತು. ಈ ಸಾಮ್ರಾಜ್ಯವು ಹಾಳಾದಮೇಲೆ ಮೈಸೂರು ಸಂಸ್ಥಾನದ ರಾಜಧಾನಿಯು ಕನ್ನಡಕ್ಕೆ ನೆಲೆಯಾಯಿತು. ಕನ್ನಡದಲ್ಲಿ ಗ್ರಂಥಸ್ಥಗಳಾದ ರೂಪಗಳು ಹೇರಳವಾಗಿರುವುದಕ್ಕೆ ಮೇಲೆಹೇಳಿದ ಬದಲಾವಣೆಗಳೇ ಮುಖ್ಯಕಾರಣಗಳಾಗಿವೆ. ಮುಂದೆಹೇಳುವ ಭಾಷಾಚರಿತ್ರೆಯನ್ನು ಓದುವುದರಿಂದ ಈ ಕಾರಣಗಳು ಕೆಲವುಮಟ್ಟಿಗೆ ತಿಳಿಯಬರುವುವು.

೪. ದಕ್ಷಿಣೋತ್ತರ ಮಾರ್ಗಗಳು.

ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ಕನ್ನಡದ ದಕ್ಷಿಣೋತ್ತರ ಮಾರ್ಗಗಳ ವಿಚಾರವನ್ನು ಮಾಡಿ ತನ್ನಕಾಲದಲ್ಲಿ-ಎಂದರೆ ಕ್ರಿ. ಶ. ೯ನೆಯ ಶತಮಾನದಲ್ಲಿ-ಇದ್ದ ಭೇದಗಳನ್ನು ಸ್ಥೂಲವಾಗಿ ತಿಳಿಸಿ ದಕ್ಷಿಣಮಾರ್ಗವೇ ಉತ್ತರಮಾರ್ಗಕ್ಕಿಂತ ಉತ್ತಮವೆಂದು ಅಭಿಪ್ರಾಯಪಟ್ಟಿದ್ದಾನೆ. ಈ ವಿಷಯವನ್ನು ಕುರಿತು ಆತನ ಗ್ರಂಥದಲ್ಲಿರುವ ಪದ್ಯಗಳಾವುವೆಂದರೆ —

ಗೀತಿಕೆ॥ ಅಱಿದು ಪೀನಂ ಮಾರ್ಗಗತಿಯುಂ ।
ತಱಿಸಲಾಗದಾಗ್ರಹಂ ಬಹುವಿಕಲ್ಪದೊಳ್ ॥
ಕುರಿತು ಪೂರ್ವ್ವ ಶಾಸ್ತ್ರಪದವಿಯುಂ ।
ತೆಱಿದಿರೆ ಪೇೞ್ವೆನಿನಿಸಂ ಕನ್ನಡದೊಳ್ ॥

ಕಂದ॥ ಕರ ಚರಣ ಶರೀರ ಶಿರೋ ।
ದರ ವದನಾದ್ಯವಯವಂಗಳಿವು ತಂತಂಮೊಳ್ ॥

ನೊರೆಕೊಂಡೆಡೆಗಳೊಳೊಳವಾ ।
ಗಿರೆಯುಂ ನರರೊವ್ವರೊವ್ವರಂ ಪೋಲದವೋಲ್ ।

ವರ ಶಬ್ದಾಲಂಕಾರದ ।
ವಿರಚನೆಗಳೊಟ್ಟುಗೊಂಡೆ ತೋರ್ಕೆಗಳಂ ತಾಂ ॥
ಪೊರೆದಿರ ಲೊಂದೊಂದರೊಳಾ ।
ಪರಮ ಕವೀಶ ಪ್ರಯೋಗ ಗತಮಾರ್ಗಂಗಳ್ ॥

ಕವಿಗಳು ಮನಾದಿ ಲೋಕೋ ।
ದ್ಭವಮಪ್ಪುದರಿಂದ ನಂತ ಗಣನಾನುಗತಂ ॥
ಸವಿಶೇಷೋಕ್ತಿಗಳು ಮನಂ ।
ತವಿಧಂಗಳನಂತ ಭೇದವದರಿಂ ಮಾರ್ಗಂ ॥

ಜನಿತ ವಿಭಾಗಂಗಳ್ವಿ ।
ಜ್ಞಾನಸಾತೀತಂಗಳಂತು ಮಾರ್ಗೋಕ್ತಿಗಳೊಳ್ ॥
ನೆನೆದಱಿಪಲಾರ್ಪ್ಪ ರಾರದ ।
ನನಿಶ್ಚಿತ ಕ್ರಮ ವಿಶೇಷ ಗುಣಯುಕ್ತಕಮಂ ॥

ಅಂತುಂ ಭೇದಮನಿನಿಸಾ ।
ಪ್ಪಂತುತ್ತರ ದಕ್ಷಿಣೋರು ಮಾರ್ಗದ್ವಯಮಾ ॥
ಚಿಂತಿತ ಪುರಾಣಕವಿ ವಿದಿ ।
ತಾಂತರಮಂ ಪೇೞ್ವೆನಱಿವ ಮಾೞ್ಕೆಯೊಳಿನ್ನಾ ॥

ನಿಗದಿತ ಕಾವ್ಯೋಕ್ತಿಗಳೊ ।
ಳ್ನೆಗೞ್ದುವು ಮಾರ್ಗಂಗಳಂತು ಮೆರಡುಕ್ತಿಗಳುಂ ॥
ಬಗೆವಾಗಳೆರಡು ಮಾೞ್ಕೆಯೊ ।
ಳೊಗೆದುವು ವಕ್ರಸ್ವಭಾವ ನಿಯುತಕ್ರಮದಿಂ ॥

ಸತತಂ ದಕ್ಷಿಣ ಮಾರ್ಗೋ ।
ದಿತೋಕ್ತಿ ಭೇದಕಗುಣಾಂ ಸ್ವಭಾವಾಖ್ಯಾನಂ ॥
ವಿದಿತೋತ್ತರ ಮಾರ್ಗಗತಂ ।
ಪ್ರತೀತ ವಕ್ರೋಕ್ತಿ ಕೃತಮನಲ್ಪ ವಿಕಲ್ಪಂ ॥   [I ೪೪-೫೧]

ಸಮ ಮಧುರನಿಬಿಡಕಾಂತ ಸು ।
ಕುಮಾರ ಸುಸಮಾಹಿತ ಪ್ರಸನ್ನೋದಾರ ॥
ಪ್ರಮಿತಗ್ರಾಮ್ಯೋಜಸ್ವಿ ॥
ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ॥

ಅವರ ವಿಪರ್ಯಯ ವೃತ್ತಿ ।
ಪ್ರವಿಭಕ್ತ ವಿಕಲ್ಪಮುಕ್ತ ಮುತ್ತರಮಾರ್ಗಂ॥
ಸವಿಶೇಷಗುಣ ಮನತಿಶಯ ।
ಧವಳೋಕ್ತಿಕ್ರಮದಿ ನೆಱೆ ಪ್ರವೇಶದ್ಧ ವದೊಳ್ ॥ (II, ೪೪-೪೫)

ನೃಪತುಂಗನು ಕಾವ್ಯದ ದಶಗುಣಭೇದಗಳನ್ನು ದಕ್ಷಿಣೋತ್ತರಮಾರ್ಗಗಳಲ್ಲಿ ತೋರಿಸಿದನಂತರದಲ್ಲಿ ಕ್ರಿಯಾರೂಪನಿಷ್ಪತ್ತಿಗಳಲ್ಲಿಯೂ ದಕ್ಷಿಣೋತ್ತರ ಮಾರ್ಗಗಳಲ್ಲಿ ಭೇದವಿರುವುದನ್ನು ತೋರಿಸುತ್ತಾನೆ. ಹೇಗೆಂದರೆ,—

ನೋಡುವೆನಾ ಮಹೀಪತಿಯ ನರ್ಥಿಗಣಾರ್ಪಿತ ಕಲ್ಪವೃಕ್ಷನಂ ॥
ಬೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ ॥
ನೀಡುಮುದಾತ್ತ ಚಾರುಗುಣನಂ ಮನದೊಳ್ಕಿಱಿನೋಟ್ಟಿನಟ್ಟಿಯೊ ।
ಳ್ಮಾಡಿರವೇಟ್ಟೆನಂಬುದಿದು ದಕ್ಷಿಣಮಾರ್ಗವಿಚಕ್ಷಣೋದಿತಂ ॥

ಸೂಡುವೆನೆಂಬುದಲ್ಲದಣ ಮಾಗದು ಸೂಟ್ಟಿನವೋಘವೆಂಬುದಂ।
ಕೊಡುವೆನೆಂಬುದಲ್ಲದಿನಿಸಾವುದು ಮಾಗದು ಕೊಟ್ಟೆನೆಂಬುದಂ ॥
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾಟ್ಟೆನೆಂಬುದಂ ।
ತೋಡುವೆನೆಂಬುದಲ್ಲದಿದಳಾಗದು ನಿಕ್ಕುವ ತೋಟ್ಟೆನೆಂಬುದಂ ॥

ಒಱಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ ।
ಕಿಱಿಸುವೆನಂತನಂತ ಸುಖಸಂಗತ ಮಂಗಳ ಕಾರಣಂಗಳಂ ॥
ತಱಿಸುವೆನಾ ಮನೋನಯನ ವಲ್ಲಭನೊಳ್ನಸದೊಂದಲಂಪಿನಿಂ ।
ನೆಱೆವೆನವೋಘವೆಂಬುದಿದು ದಕ್ಷಿಣಮಾರ್ಗವಿಶೇಷಭಾಷಿತಂ ॥

ಒಱಸೆನವೋಘ ವಿಂದುಪವನಾಂತರದಲ್ಲಿಗೆ ನಲ್ಲನಂತಗು ।
ಕ್ಕಿಱಿಪೆ ನನಾರತಂ ಸುರತರಾಗ ನಿರೂಪಣ ಕಾರಣಂಗಳಂ ॥
ತಱಿಪೆನನಾಕುಳಂ ಮನದಲಂಪಿನೊಳಾ ಮದನೋಪಮಾನನೊ ।
ಳ್ನೆಱೆವೆನಭಂಗವೆಂಬ ವಚನಂಗಳಿವುತ್ತರಮಾರ್ಗವರ್ತಿಗಳ್ ॥

ಅನುಪಮನಂ ಒಱಪ್ಪೆನನುರಾಗದೆ ನಲ್ಲನನಿಂದು ಪುಕ್ಕನಂ ।
ದನವನದಲ್ಲಿಗಲ್ಲಿಗೆ ತಱಿಪ್ಪೆನನಂಗಸುಖೋಚಿತಂಗಳಾ ॥
ನನುನಯದಿಂದಿಱಿಪ್ಪೆ ನಿನಿತುಂ ಸುರತಾಸವ ಸೇವನಾ ಸನಾ ।
ತನಸುಖದಿಂದಱಿಪ್ಪೆ ನನುರಾಗದಿ ನೆಂಬಿವಿದುತ್ತರೋತ್ತರಂ ॥

ಪಱಸುವೆನೆನ್ನದಾಂ ಪಱಪೆನೆಂಬುದಿದಾಗದು ಚಿತ್ತನಾಥನೊಳ್ ।
ಬೆಱಸುವೆನೆನ್ನದಾಂ ಬೆಱಪೆನೆಂಬುದಿದಾಗದು ಮಾರ್ಗಯುಗ್ಮದೊಳ್ ॥
ನಿರತಿಶಯಾನುಭಾವ ಭವನಪ್ಪ ಮಹಾನೃಪತುಂಗದೇವನಾ ।
ದರ್ಶಮಾಟಳಿಪೇ ಗೇಗತಿಯುಂ ತಱಿಸಳ್ಳಿದನಿಂತೆ ಕಪ್ಪಗರ್ ॥
(II ೧೦೦-೧೦೫)

ದಕ್ಷಿಣೋತ್ತರ ಮಾರ್ಗಗಳ ಭೇದವು ಕಾವ್ಯಗುಣ ದ್ಯೋತಕಗಳಾದ ಪದಬಂಧಗಳಲ್ಲಿಯೂ ಕ್ರಿಯಾರೂಪನಿಷ್ಪತ್ತಿಗಳಲ್ಲಿಯೂ ಕಾಣಬರುವುದಲ್ಲದೆ ರಸವತ್ತಾಗಿ ಬರೆವುದರಲ್ಲಿಯೂ ಕಾಣಬರುವುದನ್ನು ನೃಪತುಂಗನು ತೋರಿಸುತ್ತಾನೆ. ಹೇಗೆಂದರೆ.

ಬಗೆದು ಮಾರ್ಗದ್ವಿತಯಗ।
ತಿಗಳಂ ಪ್ರಗುಣಗುಣಗಣೋದಯಕಲ್ಪಿತಕದಿಂ॥
ಸೊಗಯಿಸುವಂತು ವಚನರಚನೆಯಿಂ।
ನೆಗಟ್ದಿರೆ ಬೆರಸಿ ಪೇಳ್ಗೆ ರಸವಿಶೇಷದೊಳ್॥

ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ।
ದ್ಗಾರಣೆಯಿಂದ ಮದ್ಭುತರಸಂ ನಿಜನೋಕ್ತಿಗಳಿಂದ ಮತ್ತೆ ಶೃಂ॥
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂ।
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ॥

ಉತ್ಸವದಿಂ ಹಾಸ್ಯರಸಮಂ ಮಧುರೋಕ್ತಿಗಳಿಂದ ಮತ್ತೆ ಭೀ।
ಭತ್ಸರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ।
ದ್ಯತ್ಸುರಸಂ ಕರಂ ಬಿಷಮ ಬಂಧನದಿಂ ನೃಪತುಂಗದೇವ ಮಾ।
ರ್ಗೋತ್ಸವ ಮೂರ್ಜಿತೋಕ್ತಿಗಳಿನಕ್ಕೆ ರೌದ್ರರಸಂ ರಸಾವಹಂ॥

ಮಾತುಗಳಾವುವಾನು ಮುಪವರ್ಣಿತ ಮಾರ್ಗಯುತ ಪ್ರಯೋಗಸಂ।
ಜಾತವಿಭಾಗದಿಂ ನೆಗಟ್ದ ಕನ್ನಡದೊಳ್ಗುಣಮಂ ತಗುಳ್ಗುಂ॥
ನೀತಿ ನಿರಂತರಾನುಗತ ವೃತ್ತಿವಿಕಲ್ಪಿತಮಂ ತದೀಯ ನಿ।
ರ್ಣೀತಿಯ ನೀತಿಚಿತ್ರ ತಳಿಸಲ್ಕೆ ಬುಧೋತ್ತಮರುಕ್ತಪೂರ್ವಕಂ॥

(II ೯೬-೯೯)

ಮನದೊಳಗಾಗಳುಂ ನಿಜಿಸದಾ ಮುಳಿಸಂ ಗತರಾಗ ಮೋಹನೊ।
ಯ್ಯನೆ ಮುನಿನಾಥನೆಂಬ ವಚನಾಂತರ ಮಿಂತಿದು ದಾಕ್ಷಿಣಾತ್ಯಕಂ॥
ಮನದೊಳಗಾಗಳುಂ ನಿಜಿಸದೊಯ್ಯನೆ ಮೋಹಮನಂತೆ ರಾಗಮುಂ।
ಮುನಿಸುಮ ನೊಲ್ಲದಂ ಮುನಿಪನೆಂಬುದಿದಕ್ಕು ಮುದೀಚ್ಯವಾಚಕಂ॥

ತ್ರಿದಶಗಣೇಶ ಮೌಳಿಮಣಿ ದೀಪನಿವೇಶಗಳೊಳ್ಮುನೀಂದ್ರನಾ।
ಪದಯುಗಳಂಗಳೊಳ್ಮದದೆ ಬಾಗುವೆನೆಂಬುದು ದಕ್ಷಿಣಾಯನಂ॥
ವಿದಿತ ಸುರಾಧಿರಾಜ ಮಕುಟಾಗ್ರ ಸಮುಲ್ಲಸಿತದೊಳ್ಮುನೀಂದ್ರನಾ।
ಪದಯುಗದೊಳ್ಮನೋಮುದದೆ ಬಾಗುವೆನೆಂಬುದಿದುತ್ತರಾಯಣಂ॥

ವಿಲಸಿತ ಸಸ್ಯಸಂಪದಭಿರಾಮ ಗುಣೋದಯ ತಾಳ್ದಿದಳ್ವರಾ।
ಲಲನೆ ವಿಶಾಲಲಕ್ಷ್ಮಿಯನ ನಾರತಮೆಂಬುದು ದಕ್ಷಿಣಾಪಥಂ।

ಜಲನಿಧಿವೇಷ್ಟಿತಾವಲಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ ।
ಲಲನೆ ವಿಶಾಲ ಲಕ್ಷ್ಮಿಯ ನನಾಕುಳವೆಂಬುದಿದುತ್ತರಾಪಥಂ ॥

(II ೧೦೭-೧೦೮)

ಸುಮಾರು ಕ್ರಿ, ಶ. ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ಬಾಳಿದ ಇಮ್ಮಡಿ ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿ ಗುಣಗಳ ಲಕ್ಷಣಗಳನ್ನು ನಿರೂಪಿಸಿ:—

ಇವು ನಿಯತಂ ದಕ್ಷಿಣ ದೇ ।
ಶವರ್ತಿಕವಿರಾಜಮಾರ್ಗದೊಳ್ ನೆಗಳ್ದುವು ॥
ತ್ತವರ ವಿಪರ್ಯಯ ವೃತ್ತಿಯು ।
ಬಣ್ಣಿಸುಗು ಮುದೀಚ್ಯಮಾರ್ಗದೊಳ್ ಪ್ರಚುರತೆಯಿಂ ॥

ವೈದರ್ಭಗೌಡಮಾರ್ಗ ವಿ ।
ಭೇದಂ ಬಗೆವೊಡೆ ಗತಾನುಗತಿಕಮಿದೆಂದೊ ॥
ಲ್ವಾದರಿಪರ್ ಕೆಲಬರ್ ಸಂ ।
ವಾದದೊಳೆರಡುಂ ಸಮರ್ಥಮಪ್ಪುದರಿಂದಂ ॥

ಎಂದು ಹೇಳಿರುತ್ತಾನೆ. "ಎರಡುಂ ಸಮರ್ಥಮಪ್ಪುದರಿಂದಂ" ಎಂಬುದನು ಮರೆಯದಿರಬೇಕು. ಭಟ್ಟಾಕಳಂಕನು ತನ್ನ ಶಬ್ದಾನುಶಾಸನದ "ಆದೇಶಃ" ಎಂಬ ೨೮೮ನೆಯ ಸೂತ್ರಕ್ಕೆ ವ್ಯಾಖ್ಯೆಯನ್ನು ಬರೆವುದರಲ್ಲಿ ಉತ್ತಮ ಪುರುಷದ ಸರ್ವನಾಮಗಳಾದ ಆನ್, ಆಮ್ ಎಂಬುವುಗಳಿಗೆ ಬದಲಾಗಿ ನಾನ್ ನಾಮ್ ಎಂಬ ರೂಪಗಳು ಉತ್ತರ ಮಾರ್ಗದ ಕನ್ನಡದಲ್ಲಿರುವುದನ್ನು ತೋರಿಸುವುದಕ್ಕೆ

ಶ್ರೀಮದನುಪಮ ಜಿನೇಂದ್ರ ಪ ।
ದಾಮರ ಕುಜಯುಗಳ ಮವನ ತಾಮರಪತಿ ಚೂ ॥
ಡಾಮಣಿ ಮರೀಚಿ ಲತಿಕೋ ।
ದ್ದಾಮಂ ನಮಗೀಗೆ ವಿಮಲ ರತ್ನತ್ರಯಮಂ ॥

ಶ್ರೀಕೇಳೀನಿಲಯಂ ನಿಜಾಂಘ್ರಿಕಮಲಂ ವಿದ್ಯಾನಟೀನಾಟ್ಯವೇ ।
ದೀಕಲ್ಪಂ ಮುಖಚಂದ್ರಬಿಂಬಮಖಿಲೋತ್ತಂ ಸಮಾಣಿಕ್ಯದೀ ॥
ಪಾಕೀರ್ಣಂ ಹರಿಪೀಠಪಾರ್ಶ್ವನೆನಿಪಂ ಪೂಜಾರ್ಹನಾರ್ಹಂತ್ಯ ಲ ।
ಕ್ಷ್ಮೀಕಾಂತಂ ಮುನಿಸುವ್ರತಂ ನಮಗೆ ಮಾಳ್ಕಿಷ್ಟಾರ್ಥಸಂಸಿದ್ಧಿಯಂ ॥

ಶ್ರೀಮದ್ಭವ್ಯಾಳಿ ಚಕ್ರಪ್ರಕರ ಸುಖಕರಂ ಸರ್ವಮಿಥ್ಯಾಂಧಕಾರ ।
ಸ್ತೋಮಪ್ರಧ್ವಂಸಿ ಬೋಧಾಮಲ ಕಿರಣಗಣೋದ್ಭಾಸಿ ಮೋಕ್ಷಾಬ್ಜಿನೀಶ ॥
ಪ್ರೇಮಂ ಸ್ಯಾದ್ವಾದಪೂರ್ವಾಚಲ ಸಮುದಿತನಾಶ್ಚರ್ಯವೃತ್ತಾಭಿರಾಮಂ ।
ಕ್ಷೇಮಾಂಗಂ ವರ್ಧಮಾನಾ ಹಿಮಕರನತಿನಿರ್ದೋಷಮಂ ಮಾಳ್ಕೆ ನಮ್ಮೊಳ್ ॥

ಎಂಬ ಉದಾಹರಣೆಗಳನ್ನು ಕೊಟ್ಟು "ಏಷ ಪಕ್ಷಪಾತಿನೋಹಿ| ದಾಕ್ಷಿಣಾತ್ಯಾ ಕವಿಜನಾ ಇತಿ। ದಕ್ಷಿಣೋತ್ತರ ಮಾರ್ಗಭೇದ ಭಿನ್ನಪ್ರಯೋಗ ಚಾತುರೀಪ್ರಪಂಚೋ ನೃಪತುಂಗ ಗ್ರಂಥೇ ದ್ರಷ್ಟವ್ಯ ಇತಿ॥" ಎಂದು ಬರೆದಿರುತ್ತಾನೆ. ದಕ್ಷಿಣಮಾರ್ಗದ ಕನ್ನಡಕ್ಕೂ ಉತ್ತರಮಾರ್ಗದ ಕನ್ನಡಕ್ಕೂ ಮುಖ್ಯಗಳಾದ ಮೂರು ಬಗೆಯ ಭೇದಗಳು ಇರುವುವೆಂಬುದು ಮೇಲಣವಿಚಾರದಿಂದ ಸ್ಪಷ್ಟಪಡುತ್ತವೆ. ಯಾವುವೆಂದರೆ—

(a) ದಕ್ಷಿಣಮಾರ್ಗದ ವ್ಯಂಜನಾಂತಶಬ್ದಗಳು ಉತ್ತರಮಾರ್ಗದಲ್ಲಿ ಸ್ವರಾಂತಗಳಾಗಿರುವುವು.

(b) ದಕ್ಷಿಣಮಾರ್ಗದ ಕನ್ನಡದಲ್ಲಿ ಱಕಾರದ ಬಳಕೆಯುಂಟು, ಉತ್ತರಮಾರ್ಗದ ಕನ್ನಡದಲ್ಲಿಲ್ಲ.

(c) ಉತ್ತರಮಾರ್ಗದಲ್ಲಿರುವ ಉತ್ತಮಪುರುಷದ ಸರ್ವನಾಮಗಳ ರೂಪಗಳು ದಕ್ಷಿಣಮಾರ್ಗದಲ್ಲಿಲ್ಲ. ಉತ್ತರಮಾರ್ಗದ ಕೆಲವು ಕ್ರಿಯಾರೂಪನಿಷ್ಪತ್ತಿಗಳು ದಕ್ಷಿಣಮಾರ್ಗದಲ್ಲಿಲ್ಲ.

ದಕ್ಷಿಣೋತ್ತರಮಾರ್ಗಗಳಿಗೆ ಪರಸ್ಪರವಾಗಿ ಇನ್ನೂ ಅನೇಕ ಭೇದಗಳಿರುತ್ತವೆ. ಅವುಗಳನ್ನು ಉತ್ತರನಾಡಿನ ಕನ್ನಡದ ಚರಿತ್ರೆಯಲ್ಲಿ ಸೋದಾಹರಣವಾಗಿ ತಿಳಿಸುತ್ತೇವೆ. ದಕ್ಷಿಣೋತ್ತರ ಮಾರ್ಗಗಳು ಪೂರ್ವದಿಂದಲೂ ಸುಪ್ರಸಿದ್ಧಗಳಾಗಿವೆ ಉತ್ತರ ದಕ್ಷಿಣೋರುಮಾರ್ಗದ್ವಯುದಾ ಚಿಂತಿತಪುರಾಣಕವಿ ವಿದಿದಾಂತರಮಂ॥ ಎಂದು ನೃಪತುಂಗನೇ ಹೇಳುತ್ತಾನೆ. ದಕ್ಷಿಣಮಾರ್ಗದ ಕನ್ನಡದಿಂದ ಉತ್ತರಮಾರ್ಗದ ಕನ್ನಡವು ಹುಟ್ಟಿತೆಂಬುದು ಸುಳ್ಳು.

೫. ಕರ್ಣಾಟಕ ಭಾಷಾಚರಿತ್ರೆಯ ವಿಭಾಗಗಳು

ಕನ್ನಡಭಾಷೆಯ ವಿದ್ಯಮಾನಗಳನ್ನು ಪರಿಶೀಲಿಸುವಲ್ಲಿ ಈ ಭಾಷಾಚರಿತ್ರೆಯನ್ನು ಕೆಳಗೆ ಹೇಳುವಂತೆ ವಿಭಾಗಿಸುವುದು ಉತ್ತಮವೆಂದು ತೋರುತ್ತದೆ. ಹೇಗೆಂದರೆ—

1. ಗಂಗರಾಜ್ಯದ ಕನ್ನಡ.
2. ನಡುವಣನಾಡಿನ ಕನ್ನಡ.
3. ಉತ್ತರನಾಡಿನ ಕನ್ನಡ.
4. ಹೊಯ್ಸಳ ಬಲ್ಲಾಳರ ಕನ್ನಡ.
5. ವಿಜಯನಗರಸಾಮ್ರಾಜ್ಯದ ಕನ್ನಡ.
6. ಮೈಸೂರುಸಂಸ್ಥಾನದ ಕನ್ನಡ

ಈ ಕ್ರಮವನ್ನು ಅನುಸರಿಸುವುದರಿಂದ ಬೇರೆಬೇರೆ ಕನ್ನಡನಾಡುಗಳಲ್ಲಿ ಕನ್ನಡವು ಅಭಿವೃದ್ಧಿಗೆ ಬಂದತೆರವು ಹೊರಪಡುವುದಲ್ಲದೆ ಈಗ ಆವಶ್ಯಕವಾಗಿರುವ ಗ್ರಾಂಥಿಕಪ್ರಯೋಗಗಳ ಏಕೀಕರಣದ ಮಾರ್ಗವೂ ಹೊರಪಡುವುದು.

೬. ಗಂಗರಾಜ್ಯದ ಕನ್ನಡ.

ಗಂಗವಾಡಿ ೯೬೦೦೦ ಸೀಮೆಯೆಂದು ಶಾಸನಗಳಲ್ಲಿ ಕಾಣಬಂದಿರುವ ರಾಜ್ಯವು ಈಗಿನ ಬೆಂಗಳೂರು ಮೈಸೂರು ಹಾಸನ ಜಿಲ್ಲೆಗಳನ್ನೂ, ಕಡೂರು ತುಮಕೂರು ಕೋಲಾರ ಜಿಲ್ಲೆಗಳ ದಕ್ಷಿಣಭಾಗಗಳನ್ನೂ ಒಳಕೊಂಡು ಕ್ರಿ. ಶ. ೧೦೦೪ರವರೆಗೂ ಸ್ವತಂತ್ರರಾಜ್ಯವಾಗಿ ಬಾಳುತ್ತಿತ್ತು. ಆಮೇಲೆ ತಮಿಳರಾಜರ ವಶದಲ್ಲಿ ಕೆಲವುಕಾಲದವರೆಗಿದ್ದು, ಆಮೇಲೆ ಹೊಯ್ಸಳರಾಜರ ಕೈವಶವಾಯಿತು. ಈ ರಾಜ್ಯದಲ್ಲಿ ತಮಿಳುಮಾಗದ ಕನ್ನಡವು ಪ್ರಚಾರವಾಗಿತ್ತು. ತಮಿಳುಭಾಷೆಯಲ್ಲಿ ೨೫ ವರ್ಗೀಯಾಕ್ಷರಗಳಿಗೆ ಬದಲಾಗಿ ೧೦ ಅಕ್ಷರಗಳನ್ನುಮಾತ್ರವೇ ಇಟ್ಟುಕೊಂಡಿದಾರೆ, ಅವೆಂದರೆ ಕವರ್ಗಕ್ಕೆ ಕ, ಙ, ಚವರ್ಗಕ್ಕೆ ಚ, ಞ; ಟವರ್ಗಕ್ಕೆ ಟ, ಣ, ತವರ್ಗಕ್ಕೆ ತ, ನ, ಪವರ್ಗಕ್ಕೆ ಪ, ಮ ಹಕಾರವನ್ನು ಬರೆದರೂ ಅದನ್ನು ಸ್ವಲ್ಪ ಹೆಚ್ಚುಕಡಮೆ ಕಕಾರವಾಗಿ ಉಚ್ಚರಿಸುತ್ತಿದ್ದರು ತಮಿಳಿನವರು ಸರಳೋಚ್ಚಾರಣೆಯವಿಧಿಯು ವಾಡಿಕೆಯಾಗಿತ್ತು. ಅಲ್ಲಿಯ ಪೂರ್ವಕನ್ನಡದ ಸ್ಥಿತಿಯನ್ನು ತಿಳಿಯುವುದಕ್ಕೆ ಕೆಲವು ಶಾಸನಗಳನ್ನು ಪರೀಕ್ಷಿಸಿ ನೋಡೋಣ.

(1) ಚಿತ್ರದುರ್ಗದ ತಾಲ್ಲೂಕಿನ ೪೨ ಮತ್ತು ೪೩. ಕಾಲ ಸುಮಾರು ೫೦೦

೪೨ ಶ್ರೀಮತ್ಕುಟಿಕ್ಕಾಪುರಾಧಿಪತೇಃ ಅಧಭಾರದ್ವಾಜವಂಶ ಧನಾಗಮಸ್ಯ
ಪುತ್ರೋಮನಾಗಮಃ ತಸ್ಯಚಸೂನು ಗುಣಮಧುರೋನಾಮ ಸತಾಂ
ತ್ಯಾಗವಾನ್ ಇತಿ ಪ್ರಶಸ್ತಿ

೪೩ ಬಣಮಣಿ ಅನ್ತ ಭೋಗಿ ಬಿಣದುಳ್ಳಣಿ ಪಲ್ಮನದೋನ್ ।
ರಣಮುಖದುಳ್ಳಕೋಲಿಂ ನೆರಿಯಕುರ್ಮಸಿನ್ತ್ಯಗುಣನ್ ॥
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣನವನ್
ಗುಣಮಧುರಾಂಕ್ಕ ದಿವ್ಯಪುರುಷನ್ ಪುರುಷಪ್ರವರನ್ ॥

ತಮಿಳಲ್ಲಿ ಪದಾಂತ್ಯದ ಅನುಸ್ವಾರಕ್ಕೆ ಬದಲಾಗಿ ನ್ ಎಂಬುದನ್ನು ಹಾಕುತ್ತಾರೆ. ಕನ್ನಡದ ಒಳ್ ಎಂಬುದು ತಮಿಳಲ್ಲಿ ಉಳ್ ಎಂಬ ರೂಪದಲ್ಲಿದೆ "ಗುಣಮಧುರಾಂಕ್ಕ" ಎಂಬಲ್ಲಿ ಕಕಾರಕ್ಕೆ ದ್ವಿತ್ವವನ್ನು ಕೊಡದಿದ್ದಪಕ್ಷಕ್ಕೆ ಪದಾಂತ್ಯದಲ್ಲಿರುವುದರಿಂದ ತಮಿಳರೀತಿಯಲ್ಲಿ ಗಕಾರೋಚ್ಚಾರಣೆಯಾಗುವದು ಅದನ್ನು ತಪ್ಪಿಸುವುದಕ್ಕಾಗಿ ಕ ಎಂಬ ಒತ್ತನ್ನು ಕೊಟ್ಟಿದೆ. ಈ ಶಾಸನಗಳನ್ನು ಈಗಿನ ಬರವಣಿಗೆಯಲ್ಲಿ ಬರೆದರೆ ಕೆಳಗಣರೀತಿಯಲ್ಲಿ ಕಾಣುವದು —

* ಕ, ಟ, ತ, ಪ ಎಂಬ ವರ್ಣಗಳು ಪದಾದಿಯಲ್ಲಿರುವಾಗಲೂ, ಪದಮಧ್ಯದಲ್ಲಿ ದ್ವಿತ್ವವನ್ನು ಹೊಂದಿದಾಗಲೂ ಪರುಷಗಳಾಗಿ (ಎಂದರೆ ಕಠಿಣಗಳಾಗಿ ಅಥವಾ ಕ್ಕ ಟ್ಟ ತ್ತ ಪ್ಪ ಗಳಾಗಿ) ಉಚ್ಚರಿಸಲ್ಪಡುವುವು. ಈ ಕ ಟ ತ ಪ ಎಂಬ ವರ್ಣಗಳೇ ಪದಮಧ್ಯದಲ್ಲಿ ದ್ವಿತ್ವವಿಲ್ಲದಿದ್ದಾಗ ಸರಳಗಳಾಗಿ (ಎಂದರೆ ಗ ಡ ದ ಬ ಗಳಾಗಿ) ಉಚ್ಚರಿಸಲ್ಪಡುವುವು. ಗ ಡ ದ ಬ ಗಳ ಉಚ್ಚಾರಣೆಯು ಪದಾದಿಯಲ್ಲಿ, ಕ್ಕ, ಟ್ಟ, ತ್ತ, ಪ್ಪಗಳ ಉಚ್ಚಾರಣೆಯು ಪದಮಧ್ಯದಲ್ಲಿಯೂ ತೋರದು. ಪದಾದಿಯಲ್ಲಿ: ಗ್ಗ, ಡ್ಡ, ದ್ದ, ಬ್ಬಗಳ

೪೭ ಶ್ರೀಮನ್ನಾಸಿಕಾಪುರಾಧಿಪತಿಃ, ಅಥ ಭಾರದ್ವಾಜವಂಶ, ಧನಾಗಮಸ್ಯ ಪುತ್ರೋ ಶ್ರೀಮನಾಗಮಃ, ತಸ್ಯಾತ್ಮಜಃ ಗುಣಮಧುರೋ ನಾಮ ಸತಾಂ ತ್ಯಾಗವಾನ್ ಇತಿ ಪ್ರಶಸ್ಯತೇ ॥

೪೮ ಪಣಮಣಿಯಂತು ಭೋಗಿ ಪಣದೊಳ್ಮಣಿ ಪಲ್ಲನದಂ।
ರಣಮುಖದೊಳ್ ಕೋಲಂ ನೆರೆಯುಕ್ತು ಮಸಿಂದ್ರಗುಣ॥
ಪ್ರಣಯಿಜನಕ್ಕೆ ಕಾಮನಸಿಕೋತ್ಪಲವರ್ಣನವಂ।
ಗುಣಮಧುರಾಂಕ ದಿವ್ಯಪುರುಷಂ ಪುರುಷಪ್ರವರಂ॥

ಪಣಮಣಿ ಎಂಬುದನ್ನು ನಾಗೇಂದ್ರ ಎಂಬ ಅರ್ಥದಲ್ಲಿ, ಪಣದೊಳ್ಮಣಿ ಎಂಬುದನ್ನು ನಾಗರತ್ನಭೂಷಣ ಎಂಬ ಅರ್ಥದಲ್ಲಿ ಪ್ರಯೋಗಿಸಿರುವಂತೆ ತೋರುತ್ತದೆ. ಪಲ್ಲನದೋನ್ ದಿವ್ಯಪುರುಷನ್ ಮುಂತಾದುವು ತಮಿಳ ಪ್ರಯೋಗಗಳು.

(೭.) ಬೌರಿಂಗಪೇಟೆಯ ೧೩. ಕ್ರಿ. ಶ. ೭೩೫. ಮಹಾವಲಿಗಳ ಕಾಲ.

ಸ್ವಸ್ತ್ಯಶೇಷಭುವನವಿದಿತ ಗಂಗಾನ್ವಯಸ್ನಾನವಾನ ಪಾಸೋದಯ ಶ್ರೀಪಾಘನ(ಪ್ರ)ವೃತ್ತರ ಪರೆಳಿನಗರನ್ನಾಡೆಪ್ಪತ್ತು ಮೂವನ್ನನಾಡ.ಂ ಮೂವತ್ತುಂ ಪೋಂಕುನ್ನಪನ್ನಿರದು ಮಾಳುತ್ತುರ(ತ್ರಿರೆ)ಮ್ಮಹಾವಲಿ ಬಾಣರಸರ್ಪೋಗೆ ಪಡೆವೋಗಿಕೊಯಾತ್ತುರಿಱದಲ್ಲಿಕೊಗಲಿಯ ಒಕ್ಕಲ್ ಶ್ರೀಬಸಿರ್ಸಯರಮಗ ಬೊಪ್ಪಗಂಗಗಾಮುಣ್ಡ ಸಿಱಿದು ಬಿಟ್ಟನಾತಂಗೆ ಪಲ್ಲವಮಸಿನುಳ್ ಬಮವಣಕೆಱೆಯುಳ್ ತ ಮರೆ ಕಟ್ಟಿನ್ನೆಲಗೆ ಮೂವತ್ತುಗೊಳಂ ಕೊಟ್ಟಿತಲ್ಲಾಡು. ಸರ್ವಪರಿಹಾರ ಪ್ರಸಾದಂಗೆಯ್ದಾರ್ ಇದಾನಳಿವೋನ್ ಪಂಚ ಮಹಾಪಾತಕನಕ್ಕುಂ ॥

ಉಚ್ಚಾರಣೆಯು ತಮಿಳಿನಲ್ಲಿ [illegible] ಇಲ್ಲ, ಪದಮಧ್ಯದಲ್ಲಿಯೂ ಇಲ್ಲ. ಸಂಸ್ಕೃತದ ವರ್ಗೀಯ ಮಹಾಪ್ರಾಣಗಳು ತಮಿಳಿನಲ್ಲಿ ಸರಳ ಪ್ರಾಣಗಳಾಗುವುದೂ ಉಂಟು. ಸರಳ ಪ್ರಾಣಗಳು ಪರುಷಗಳಾಗುವುದೂ ಉಂಟು. ಸಂಸ್ಕೃತದ ದಂತ [illegible] ಎಂದು ಉಚ್ಚರಿಸಲ್ಪಡುವುದು. [illegible] ಎಂದು ಉಚ್ಚರಿಸಲ್ಪಡುವುದು. [illegible] ತಮಿಳಿನಲ್ಲಿ [illegible] ಉಚ್ಚಾರಣೆ [illegible] ಉಚ್ಚಾರಣೆಯು [illegible] ದ್ವಿಭಾವವಿಲ್ಲದಿದ್ದಾಗ [illegible] ಪದಮಧ್ಯದಲ್ಲಿಯೂ [illegible]ಯಾಗುತ್ತದೆ. [illegible] ಎಂದು ಉಚ್ಚರಿಸಲ್ಪಡುತ್ತದೆ. [illegible] ತಮಿಳಿನಲ್ಲಿ [illegible] ಉಚ್ಚರಿಸುವುದಕ್ಕೆ [illegible] ಉಚ್ಚರಿಸುತ್ತಾರೆ. [illegible] ಎಂದು [illegible] ಉಚ್ಚರಿಸುವರು [illegible] ದ್ವಿಭಾವವನ್ನು [illegible] ಎಂದಾಗುತ್ತದೆ. ಮತ್ತು [illegible] ತಮಿಳಿನಲ್ಲಿ [illegible] ಎಂದಾಗುತ್ತದೆ. [illegible] ಅರ್ಧಮಾತ್ರಾ ಕಾಲವನ್ನು ಕೊಡುತ್ತಾರೆ.

*   *   ತಾಯುಲೂರ್ಕ್ಕಮ್ಮರಮ್ಮಗನ್ಪೆರಣ್ಣಾನ್ನೆಗಟ್ಟಾನ್.

ಶ್ರೀಮಾಧವ ಉಮ್ಮತ್ತರಸರ್ ಎಳಿನೆಗರನಾಡೆಪ್ಪತ್ತುಂ ಅವನ್ಯನಾಡುಂ ಮೂವತ್ತುಂ ಪೊಂಕುಂದು ಪನ್ನಿರಡುಂ ಆಳುತ್ತಿರೆ ಎಂಬುದು ಅನ್ವಯವಾಗಿರಬೇಕು. ಕೊಯಾತ್ತುರಿನಲ್ಲಿ ಎಂದಿರಬಹುದು ಒಳ್ ಎಂಬ ಕನ್ನಡದ ಸಪ್ತಮಿವಿಭಕ್ತಿಗೆ ಬದಲಾಗಿ ತಮಿಳಿನ ಉಳ್ ಎಂಬುದನ್ನು ಪ್ರಯೋಗಿಸಿರುವಂತೆ ತೋರುತ್ತದೆ. ಪ್ರಸಾದಂಗೆಯ್ದಾರ್ ಎಂಬ ಕನ್ನಡರೂಪಕ್ಕೆ ಬದಲಾಗಿ ಗೆಯ್ದಾರ್ ಎಂಬ ತಮಿಳರೂಪವು ಪ್ರಯೋಗಿಸಲ್ಪಟ್ಟಿದೆ. ಕೊನೆಯಪಂಕ್ತಿಯ ತಿರುಳ್ಗನ್ನಡದರೂಪವು "ತಾಯುಲೂರ ಕಮ್ಮರನಮಗಂ ಪೇರಣ್ಣಂ ನೆಗಟ್ಟಂ" ಎಂದಾಗುವುದು. ಈ ಶಾಸನದಲ್ಲಿಯೂ ತಮಿಳಿನ ಪ್ರಯೋಗಗಳು ಅನೇಕವಿವೆ.

(3) ತಿರುಮಕೂಡಲು ನರಸೀಪುರದ ತಾಲ್ಲೂಕಿನ ೧. ಕ್ರಿ.ಶ. ೭೨೬ ಗಂಗರಾಜರಕಾಲ.

ಸ್ವಸ್ತಿ ॥ ಶ್ರೀರಾಜ್ಯಂ ಪ್ರಿಥುವಿಕೊಙ್ಗಣಿ ಮುತ್ತರಸರ್ ಶ್ರೀಪುರುಷ ಮಹಾರಾಜ ಪ್ರಿಥುವೀ ರಾಜ್ಯಂಗೆಯೆ ಪ್ರಥಮವಿಜಯ ಸವ್ವತ್ಸರಂ ಕಾರ್ತಿಗೆ ಪುಣ್ಣಮೆಅನ್ತು ತಲೈಕ್ಕಾಡಾ ಇಪ್ಪತ್ತಯ್ವರ್ಕ್ಕಂ ಸಿನ್ದರಸರುಂ ದೇವಸತ್ತಿ ಅರಸರುಂ ಮನಸಿಜರುಂ ಎನ್ನಪ್ಪಂಕೆಯೆ ಪರಮಕೂಳರ್ ಮ್ರಗನ್ನಿರರಕೆಸಿಗಳಾಣತ್ತಿ ಆಗಪಳ್ಳಿಟ್ಟುಟ್ಟು ಪ್ರಸಾದಂಗೆಯ್ದಾರ್. * *

ಈ ಶಾಸನದ ಬರವಣಿಗೆಯಲ್ಲಿ ತಮಿಳಿನ ಪ್ರರುಷ ಸರಳೋಚ್ಚಾರಣಪದ್ಧತಿಯನ್ನು ಅನುಸರಿಸಿರುತ್ತಾರೆ. ತಲೈಕ್ಕಾಡು, ಎನ್ನಪ್ಪಂ ಆಣತ್ತಿ ಎಂಬುವು ತಮಿಳಮಾತುಗಳು—ತಿರುಳ್ಗನ್ನಡದಲ್ಲಿ ಇವು ತಲಕಾಡು, ಎನ್ನಪಂ, ಆಣತಿ ಎಂದಾಗುವುವು. "ಎನ್ನಪ್ಪಂಕೆಯೆ" ಎಂಬುದನ್ನು ಎನ್ನಪ್ಪಂಗೆಯೆ ಎಂದು ಓದಬೇಕು, ಏಕೆಂದರೆ ತಮಿಳಲ್ಲಿ ಅನುಸ್ವಾರದ ಮುಂದೆ ಪುರುಷೋಚ್ಚಾರಣೆಯಿಲ್ಲ.

(4) ಶಿಕಾರಿಪುರದ ತಾಲ್ಲೂಕು ನಂ. ೧೫೪. ಕಾಲ ೬೮೫. ಚಂದ್ರಕರಾಜರ ಕಾಲ.

ಸ್ವಸ್ತಿ ॥ ಶ್ರೀವಿನಯಾದಿತ್ಯ ರಾಜಾಶ್ರಯ ಶ್ರೀಪೃಥಿವೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಭಟಾರರ ಪೃಥಿವೀರಾಜ್ಯಂ ಕೆಯೆ ಶ್ರೀಪೊಗಿಲ್ಲಿಸೇನ್ದ್ರಕ ಮಹಾರಾಜರ್ ನಾಯರ್ಖಣ್ಡಮುಂಜೆಡುಗೂರಾಳೆಯನಾಳುತ್ತು ಕಾನ್ತಬೋರರಧಿಕಾರಿಗಳಾಗೆ ಅಣ್ಣಾಗಿಯಾ ಗಾವುಗರುಂ ನೀರಿಲ್ಲಿಯಾ ಸಿನ್ದೆಯ ಗಾವುಗರುಂ ಮುಖವಾಗೆ ಎರಡುಂ ನಾಟ್ಕರಾಜಶ್ರಾವಿತವಾಗೆ ಪ್ರಸಾದಂ ಕೆಯ್ದಾರ್. ಇದಾನಳಿವೊ ನ್ಪರಕಾಷಿಯ ಳುಲ್ಲಾಸಿರ ಕವಿಲೆಯುಂ ಪಾರ್ವ್ವರುಂ ಮಾನ್ಯೊಕ್ಪ ಪಞ್ಚಮಹಾಪಾತ

ಕ ಸಂಯುಕ್ತನಕ್ಕುಂ. ಇದಾನ್ಕೆಯ್ಕೆ ಈರೆಟ್ಟಿತ್ತಿಯುಳಂ ಒಕ್ಕಲ್ತನಂ ಕೆಯ್ವೊನಾವಿತ್ತಿದಲ್ಲಿ ವೆಳೆಯಾದೆ ಕೆಡುಗೆ. ಇದಾನ್ವಾದುಃಸಲ್ವೋನ್ ಪರಮಕಲ್ಯಾಣ ಭಾಗಿಗಳಾಪ್ಪೋರ್. ನೆಲನುಂ ವೆಳಗಾ ಪಾರ್ವರುಂ ಪ್ರಜೆಯುಂತಣಿಗೆಗೆ.

ಹಿಂದೆ ತೋರಿಸಿದ ತಮಿಳು ಪ್ರಯೋಗಗಳಲ್ಲದೆ ಇತರ ಪ್ರಯೋಗಗಳೂ ಈ ಶಾಸನದಲ್ಲಿವೆ. ಭಟ್ಟಾರಕ ಎಂಬುದಕ್ಕೆ ಭಟಾರ ಎಂದು ಬರೆದಿದೆ. ನಾಯುಪಿ ಣ್ಡಮುಂ ಎಂದರೆ ನಾಗರಖಂಡಮುಂ ಎಂದರ್ಥ. ತಮಿಳಲ್ಲಿ ಗಕಾರೋಚ್ಚಾರಣೆಯು ಹಕಾರಕ್ಕೂ ಯಕಾರಕ್ಕೂ ಮಧ್ಯಸ್ಥವಾಗಿರುವುದು. ವಾರಣಾಶಿಯುಳ್ಳಾಸಿರ ಕವಿಲೆಯುಂ ಎಂದರೆ ವಾರಣಾಸಿಯೊಳೊಳ್ಳಾಸಿರ ಕವಿಲೆಯುಂ ಎಂದರ್ಥ. "ವೆಳೆಯಾದೆ" ಎಂಬುದು ಬೆಳೆಯದೆ ಎಂಬುದರ ತಮಿಳುರೂಪ.

(5.) ಮೈಸೂರು ತಾಲ್ಲೋಕಿನ ೫೫. ಕಾಲ ಕ್ರಿ. ಶ. ೭೪೦. ಗಂಗರಾಜರ ಕಾಲ.

ಸ್ವಸ್ತಿ॥ ಶ್ರೀ ಕೊಙ್ಗಣಿ ಮಹಾರಾಜರ್ ಶಿರಿಪುರುಷರ್ ಪೃಥುವೀರಾಜ್ಯಂಕೆಯೆ, ಆರಟ್ಟಿಗಳರಸರ್ ಚೊತ್ತಮ್ಮನ್ ಎಡತೊರೆನಾಡು ಸಾಸಿರವುಂ ಮಾಳುತ್ತಿದುವಿಟ್ಟದು. ಒಂದಡಿಪಾನಿಯು ನೋಟುಂ ಒನ್ಪತ್ತಿ ದಿವಸಂ ಪಟ್ಟಿಙ್ಗಟಿರ್ ತಮಿಷಿಮುಟಿದಿವಸಂ ' ' ಊರುಳಿಕ್ಕುಸದೆ ಪೋಸ್ಪನ್ನು ಒಂದು ದಿವಸಂ ಮಪಸ್ಸು ಒಂದು ದಿವಸಂ ಉಣ್ಬಾದು ಇದೊನ್ಕೆಡಿಸಿದೊನ್ಪಞ್ಚಮಹಾಪಾತಕನಕ್ಕು ತನೊಕ್ಕಲುಳ್ ಪೊತ್ತಿಮಕ್ಕಳ್ ಪುಟ್ಟದೆಕೆಡುಗ

ತಮಿಳಲ್ಲಿ ರಕಾರವು ಮಾತಿನ ಮೊದಲಕ್ಷರವಾಗಿರಕೂಡದು. ರಾಮನ್ ಎಂಬುದನ್ನು ಇರಾಮನ್ ಎಂದು ಹೇಳುತ್ತಾರೆ ಎನ್ನುತ್ತಾರೆ, ಪೋಸ್ಪನ್ನು ಎಂಬುವು ತಮಿಳಮಾಗಿ. ತನೊಕ್ಕಲುಳ ಎಂದರೆ ತನ್ನೊಕ್ಕಲೊಳ್ ಎಂದರ್ಥ

(6.) ದಾವಣಗೆರೆ ತಾಲ್ಲೂಕಿನ ೧೭. ಕಾಲ ಸುಮಾರು ೮೮೯.

ಸ್ವಸ್ತಿ ಸಕನೃಪಕಾಲಾತೀತ ಸಂವತ್ಸರ ಶತಂಗಳ್ ೮೧೧ನೆಯ ಕೀಲಕ ಸಂವತ್ಸರದ ಮಾಘ ಸುದ್ಧ ಚಟ್ಟಿ ಸೋಮವಾರಂ ಪ್ರವರ್ತಿಸೆ ಸ್ವಸ್ತಿ॥ ಶ್ರೀ ಕನ್ನರ ದೇವರಾಜ್ಯ ಮುತ್ತರೋತ್ತರಂ ಸಲುತ್ತಿರೆ ' ' ಮುಟ್ಟಿಮಯ್ಯಗೆಪರಕಯ್ಯಂ ಪನ್ನಿರ್ವ್ವರ ಅರಸಿನ ಸಾಕ್ಷಿಪ್ಪಿತದೊಳ್ ಕಾಲಂ ಕಚ್ಚಿಕೊಟ್ಟ ಭೂಮಿ ' ಇವನಾವನೋರ್ವ್ವ ನಡೆಯಿಸಿದನಾತನದೆ ಧರ್ಮ ಇನ್ತಪ್ಪುದನಳಿದಾತಂ ವಾರಣಾಸಿಯೊಳಂ ಕುರುಕ್ಷೇತ್ರದೊಳುಂ ಪ್ರಯಾಗೆಯೊಳುಂ ಸಾಸಿರ್ವ್ವರುಂ ಬ್ರಾಹ್ಮಣರುಂ ಸಾಸಿರ್ವ್ವ ಕವಿಲೆಯುಮಂ ಲಿಂಗವುಮನಟಿದ ಪಾತಕ.

ತಮಿಳಲ್ಲಿ ಸಕಾರವನ್ನು ಶಕಾರದಂತೆ ಉಚ್ಚರಿಸುವುದುಂಟು. ಆದುದರಿಂದಲೇ ಮಾಘ ಶುದ್ಧ ಎಂಬುದನ್ನು ಮಾಘ ಸುದ್ಧ ಎಂದು ಬರೆದಿದೆ. ಕೊನೆಯಲ್ಲಿ ' ಪಾತ

ಕ' ಎಂಬುದಕ್ಕೆ ಬದಲಾಗಿ 'ಪಾತಕನಕ್ಕುಂ' ಎಂದಿರಬೇಕು. ಈ ಶಾಸನದಲ್ಲಿ ತಮಿಳ ಪ್ರಯೋಗಗಳಿರುವುದು ಕಡಿಮೆ.

(7.) ಮಂಡ್ಯ ತಾಲ್ಲೂಕಿನ ೧೪, ಕಾಲ ಕ್ರಿ. ಶ. ೮೯೫. ನೊಳಂಬಾಧಿರಾಜರ ಕಾಲ.

ಸ್ವಸ್ತಿ|| ಸಕನೃಪ ಕಾಲಾತೀತ ಸಮ್ವತ್ಸರಙ್ಗಳ್ ಎಣ್ಟುನೂಱ ಪದಿನೇೞನೆಯ ವರಿಷಂ ಪ್ರವರ್ತ್ತಿಸೆ, ನೊಳಂಬಾಧಿರಾಜ ಪೃಥುವೀರಾಜ್ಯಂಗೆಯೆ, ತ್ರೈರೂರ ಕೌಂಡಿಲ್ಯಗೋತ್ರದ ಗಾಮುಣ್ಡಸಾಮಿಗಳ್ ಮಗನ್ನಾಗಮ್ಮಯ್ಯ ಕಲ್ಲು ದೇಗುಲಮುಮ್ಮಾಡಿಸಿದಡೆ ಸಲಿಸಲೆನ್ದು ಕೊಟ್ಟಮಣ್ಣು ಒಕ್ಕರ್ಣ್ಣಾಗ ಅಯ್ದುವರಿಷಕ್ಕೆ ಕೂತೆ ಇಕ್ಕದೆ ಸ್ವನಮನಾಳ್ದೋರು * * ಪಞ್ಚಮಹಾಪಾತಕರಪ್ಪೋರ್.

೭ನೆಯ ಶಾಸನಕ್ಕಿಂತ ಇದರಲ್ಲಿ ತಮಿಳ್ ಪ್ರಯೋಗಗಳು ಹೆಚ್ಚಾಗಿವೆ. ಮಗನ್ನಾಗಮ್ಮಯ್ಯ ಎಂಬುದು ತಮಿಳ್‌ಮಾರ್ಗ, ಮಗಂ ನಾಗಮಯ್ಯಂ ಎಂಬುದು ಕನ್ನಡದ ಮಾರ್ಗ. "ಕಲ್ಲು ದೇಗುಲಮುಮ್ಮಾಡಿಸಿದಡೆ" ಎಂಬುದು ವ್ಯಾಕರಣ ವಿರುದ್ಧವಾಗಿ ಕಾಣುವುದು. ಇಲ್ಲಿ ಪಕ್ಷಾರ್ಥಕ್ಕೆ ಅವಕಾಶವೇ ಕಾಣಬರುವುದಿಲ್ಲ. "ಮಾಡಿಸಿಯುದಂ ಸಲಿಸಲೆಂದು" ಎಂದಿರಬೇಕಾಗಿತ್ತು.

(8.) ತಿರುಮಕೂಡಲು ನರಸೀಪುರದ ೨೬. ಕಾಲ ೧೨೯೦. ಹೊಯ್ಸಳ ಬಲ್ಲಾಳರ ಕಾಲ.

ಸ್ವಸ್ತಿ || ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತ್ಪ್ರತಾಪ ಚಕ್ರವರ್ತಿ ಹೊಯ್ಸಣ ಶ್ರೀವೀರ ನಾರಸಿಂಹದೇವರಸರು ಶ್ರೀಮದ್ರಾಜಧಾನಿ ದೊರಸಮುದ್ರದೊಳು ಪೃಥ್ವೀರಾಜ್ಯಂಗೆಯುತ್ತಮಿರೆ, ತತ್ಪಾದ ಪದ್ಮೋಪಜೀವಿ... . ಶ್ರೀ ಪೆರುಮಾಳು ಮಂತ್ರಿಗಳ್ || ಸ್ವಸ್ತಿ || ಶ್ರೀಜಯಾಭ್ಯುದಯ ಶ್ಯಕರ ವರುಷ ೧೨೧೨ ಸಂದ ವರ್ತಮಾನ ವಿಕೃತಿ ಸಂ||ಮಾರ್ಗಶಿರ ಶು||೧೧ ಮ|| ಆ ಶ್ರೀಮನ್ಮಹಾಪ್ರಧಾನಂ ಪೆರುಮಾಳಿದೇವ ದಂಡನಾಯಕರುಂ ಶ್ರೀಮತ್ಸರ್ವ ನಮಸ್ಯದಗ್ರಹಾರ ದಕ್ಷಿಣ ವಾರಣಾಸಿ ಉದ್ಭವ ಸರ್ವಜ್ಞ ಶ್ರೀರಂಗಪುರವಾದ ಮಾಇಲಂಗೆ ಎಲೆ ನಡಸುವ ಹಿಂಡಿಕಬಾಲಶಿಕ್ಷೆ ಎ ಧರ್ಮಕೆ ಆ ಮಾಇಲಂಗೆಯ ಅಶೇಷಮಹಾಜನಂಗಳ ಕೈಯಲು ಕೂಚಂಣನ ಮರಡಿಯ ದೇವಪ್ಪನವರ ಕೈಯಲು ತತ್ಕಾಲೋಚಿತ ಕ್ರಯದ್ರವ್ಯವನು ಸಾಕಲ್ಯೇನ ಹಸ್ತಸ್ಥವಾಗಿ ಕೊಟ್ಟು ಧಾರಾಪೂರ್ವಕವಾಗಿ ಕೊಂಡ ಕ್ಷೇತ್ರಲು || * * ಅನ್ತ್ರಾ ಬೆದ್ದಲು ಕಂಬ ನಾಕು ಸಾವಿರವನೂ ... . ಇಪ್ಪತ್ತಱಮನೆ ಎರಡನೂ ಇನ್ತ್ರರಹ ಕ್ಷೇತ್ರಂಗಳನೂ ಆಮಾಇಲಂಗೆಯಲು ರುಗ್ವೇದವ ನೋದಿಸುವ ಬಂದಿಕವ ಉಪಾಧ್ಯರ ಜೀವಿತಕ್ಕೆ ವರ್ಷ ೧ಕ್ಕೆ ಗದ್ಯಾಣ ೮೫ |

ನಾಗರ ಕನ್ನಡ ತಿಗುಳಾರ್ಯವ ನೋದಿಸುವ ಬಾಲಶಿಕ್ಷೆ ಉಪಾಧ್ಯರ ಜೀವಿತಕ್ಕೆ ವರ್ಷಂಗಕ್ಕೆ ಗದ್ಯಾಣ ಆಱು । ಇನ್ತೀ ಧರ್ಮಂಗಳಿಗೆ ಸಲುವಂತಾಗಿ ಆ ಪೆರುಮಾಳದೇವನಾಯಕರು ಧಾರಾಪೂರ್ವಕಂ ಮಾಡಿ ಕೊಟ್ಟರು ಈ ಗೃಹ ಕ್ಷೇತ್ರಂಗಳಿಗೆ ಊ ಈ ಕ್ಷೇತ್ರವಮಾಡುವ ಒಕ್ಕಲುಗಳಿಗೆ ಊ ಸಿದ್ಧಾಯ ಸೆಸಿ ಆಱುವಣ ಮನೆವಣ ಬಿಟ್ಟಿ ಸೂಲಗೆಯಾಣ ಅಭ್ಯಾಗತ ಕಟಕಸೆಸಿ ಹೋಗಿಪ್ಪಣ ಹೊಬಳಿಹೊಡಕೆ ಕಾಣಿಕೆ ಒಸಗೆ ಉತ್ಸಾಹ ಪಟ್ಟೆ ಏವಪುತ್ರೋತ್ಸಾಹ ಆನೆಯುಸೆಸಿ ಕುದುರೆಯುಸೆಸಿ ಊರವಳಬ್ಬಿಯು ಅರಮನೆಯಿಂ ಆತೊಳ್ಪನಾಡಿವಂ ಅಧಿಕಾರಿಇಂದಂ ಹದಿನೆಂಟರ್ನ್ಯಾಲೀ ವನ್ನಾಯ ಮುಖ್ಯವಾಗಿಏನು ಒಡದಂ ಆನುಹಾಜನಂಗಳು ಬಿದೇವಪ್ಪನವರು ತೆತ್ತು ಪರಿಹರಿಸಿಕೊಟ್ಟು ಸರ್ವಬಾಧಾಪರಿಹಾರವಾಗಿ ಸರ್ವಮಾನ್ಯವಾಗಿ ಆಚಂದ್ರಾರ್ಕಸ್ಥಾಯಿಯಾಗಿ ಈ ಧರ್ಮವ ನಡೆಸಿಕೊಡುವರು

ಈ ಶಾಸನದ ಕಾಲವನ್ನು-ಎಂದರೆ ಕ್ರಿ ಶ- ೧೩ನೆಯ ಶತಮಾನದ ಅಂತ್ಯಭಾಗವಾಗಿರುವದನ್ನು -ನೋಡಿದರೆ, ಇದರ ಬರವಣಿಗೆಯು ಅಸಮರ್ಪಕವಾಗಿ ತೋರಬರುವದು- ಶಕರ ಎಂಬುವದಕ್ಕೆ ಬದಲಾಗಿ "ಶ್ಯಕರ" ಎಂದಿದೆ-"ಮಾಯಿಲಂಗಿಯಲಿ ಎಂಬುದಕ್ಕೆ ಬದಲಾಗಿ "ಮಾಇಲಂಗಿ ಎಲಿ" ಎಂದಿದೆ ಶಿಕ್ಷೆಯ = ಶಿಕ್ಷೆಯ, ಕ್ಷೇಯ = ಕ್ಷೈಯುಲ್ಲೂ ಕ್ಷೇಯುಲ್ಲಯೂ-"ನಾಗರ ಕನ್ನಡ ತಿಗುಳಾರ್ಯವ ನೋದಿಸುವ" ಎಂಬಲ್ಲಿ ನಾಲ್ಕು ಭಾಷೆಗಳ ಹೆಸರಿಲ್ಲ. ಮೂರೇ ಭಾಷೆಗಳ ಹೆಸರುಗಳಿವೆ, ಯಾವವೆಂದರೆ— ನಾಗರ, ಕನ್ನಡ ಮತ್ತು ತಿಗುಳಾರ್ಯ. ತಿಗುಳಾರ್ಯವೆಂದರೆ ಗ್ರಂಥದ ತಮಿಳು-ಆರ್ಯ ಎಂದರೆ ಮರಾಟಿ ಎಂದು ಅರ್ಥ ಮಾಡುವದು ಇತಿಹಾಸಕ್ಕೆ ವಿರುದ್ಧವಾಗಿರುವದು. ಕ್ರಿ ಶ ೧೩ನೆಯ ಶತಮಾನದಲ್ಲಿ ಮರಾಟಿಗರ ಸಾಮ್ರಾಜ್ಯವಿರಲಿಲ್ಲ. ಗೃಹ ಕ್ಷೇತ್ರಗಳಿಗೆ ಊ ಒಕ್ಕಲುಗಳಿಗೆ ಊ ಎಂಬಲ್ಲಿ ಊ ಎಂಬುದು ಸಮುಚ್ಚಯಾರ್ಥವನ್ನು ಕೊಡುವದು. ಉತ್ತರ ಮಾರ್ಗದ ಕನ್ನಡದ ಮರ್ಯಾದಾನುಸಾರವಾಗಿ, ಗೃಹ ಕ್ಷೇತ್ರಗಳಿಗೂ " " ಒಕ್ಕಲುಗಳಿಗೂ " ಎಂದಿರಬೇಕು. ಗಂಗರಾಜರ ಸ್ವಾತಂತ್ರ್ಯವು ಹಾಳಾದಮೇಲೆಯೂ ಮಾಯಿಲಂಗಿಯಲ್ಲಿ ತಮಿಳು ವಿದ್ಯಾಭ್ಯಾಸಕ್ಕೆ ಸರ್ವಮಾನ್ಯವನ್ನು ಬಿಟ್ಟುಕೊಟ್ಟಿರುವದು ಆ ಪ್ರಾಂತದಲ್ಲಿದ್ದ ತಮಿಳರ ಪ್ರಾಬಲ್ಯವನ್ನು ತೋರಿಸುತ್ತದೆ

ಗಂಗವಾಡಿಯ ಕನ್ನಡದಲ್ಲಿ ತಮಿಳ ಮಾರ್ಗ್ಗಗಳು ಹೇರಳವಾಗಿ ಸೇರಿದ್ದ ವಿಷಯವು ಮೇಲಣ ಶಾಸನಗಳಿಂದ ಬಹು ಸ್ಪಷ್ಟವಾಗಿ ತೋರಪಡುತ್ತದೆ. ದಕ್ಷಿಣ ಮಾರ್ಗದ ಎಂಬುದನ್ನು ತಮಿಳುಮಾರ್ಗದ ಎಂದೇ ಅರ್ಥಮಾಡಬೇಕಾಗಿದೆ.

೭. ನಡುವಣನಾಡಿನ ಕನ್ನಡ.

ತುಂಗಭದ್ರಾ ಕೃಷ್ಣಾನದಿಗಳ ಮಧ್ಯದಲ್ಲಿರುವ ನಾಡುಗಳು ಕಾಂಚೀಪುರವರಾಧೀಶ್ವರರಾದ ಪಲ್ಲವರಾಜರ ಕೈಕೆಳಗೆ ಕ್ರಿ. ಶ. ಸುಮಾರು ೯ನೆಯ ಶತಮಾನದವರೆಗೂ

ಇದ್ದುವು. ಈ ಕಾಲದಲ್ಲಿ ಇಲ್ಲಿ ತಮಿಳಿನ ಪ್ರಾಬಲ್ಯವಿತ್ತು. ಗಂಗವಾಡಿಯ ಶಾಸನಗಳನ್ನು ನೋಡುವಲ್ಲಿ ಇದು ತೋರಪಡುತ್ತದೆ. ಆಮೇಲೆ ಕೆಲವು ಕಾಲದವರೆಗೆ ಮೈಸೂರಿನವರಾದ ಕದಂಬರಾಜರಸರ ಅಧೀನದಲ್ಲಿತ್ತು. ಕ್ರಿ. ಶ. ಸುಮಾರು ೬ ನೆಯ ಶತಮಾನದ ಆದಿಭಾಗದಲ್ಲಿ ಚಾಳುಕ್ಯರಾಜರ ಕೈವಶವಾಯಿತು. ಈ ಚಾಳುಕ್ಯರಾಜರಲ್ಲಿ ಇಮ್ಮಡಿ ಪುಲಕೇಶಿ ಸತ್ಯಾಶ್ರಯ ಮಹಾರಾಜನು (೬೦೯-೬೪೨) ಕದಂಬರಾಜರನ್ನು ಗೆದ್ದು ಈ ನಾಡುಗಳನ್ನು ತನ್ನ ಸ್ವಾಧೀನ ಪಡಿಸಿಕೊಂಡನು. ಚಾಳುಕ್ಯನೃಪರ ರಾಜ್ಯಗಳಲ್ಲಿ ಮಹಾರಾಷ್ಟ್ರವೂ ಕನ್ನಡನಾಡುಗಳೂ ಕೆಲವು ತೆಲುಗುನಾಡುಗಳೂ ಸೇರಿದ್ದುವು. ಚಾಳುಕ್ಯರ ಪ್ರಾಬಲ್ಯವು ಕ್ರಿ. ಶ. ೮ ನೆಯ ಶತಮಾನದ ಮಧ್ಯದವರೆಗೂ ಇತ್ತು-ಇಮ್ಮಡಿ ವಿಕ್ರಮಾದಿತ್ಯನು (೭೩೩-೭೪೭) ಕಂಚಿಯನ್ನು ಗೆದ್ದು ಸುಪ್ರಸಿದ್ಧನಾಗಿದ್ದನು. ಆಮೇಲೆ ರಾಷ್ಟ್ರಕೂಟದರಸರ ಪ್ರಾಬಲ್ಯವು ಪ್ರಾರಂಭವಾಯಿತು. ಈ ರಾಷ್ಟ್ರಕೂಟರಾಜರುಗಳಲ್ಲಿ ನೃಪತುಂಗನು (೮೧೫-೮೭೭) ಸುಪ್ರಸಿದ್ಧನಾಗಿದ್ದನು. ಈತನಿಗೆ ಅತಿಶಯಧವಳ ಎಂಬ ಹೆಸರು ಇತ್ತು. ಈತನೇ ಕವಿರಾಜಮಾರ್ಗವನ್ನು ಬರೆದಹಾಗೆ ಪ್ರತೀತಿಯಿದೆ.

ಈ ನೃಪತುಂಗನು ತನ್ನ ಕವಿರಾಜಮಾರ್ಗದ ಪ್ರಥಮಪರಿಚ್ಛೇದದಲ್ಲಿ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು
ಧಾವಲಯ ವಿಲೀನ ವಿಶದ ವಿಷಯವಿಶೇಷಂ ॥

ಅದರೊಳಗಂ ಕಿಸುವೊಳಲಾ ।
ವಿದಿತಮಹಾ ಕೊಪಣನಗರದಾ ಪುಲಿಗೆರೆಯಾ ॥
ಸದಭಿಸ್ತುತಮಪ್ಪೊಂಕುಂ ।
ದದ ನಡುವಣನಾಡೆ ನಾಡೆ ಕನ್ನಡದತಿರುಳ್ ॥

ಪದನರಿದು ನುಡಿಯಲುಂ ನುಡಿ ।
ದುದನರಿದಾರಯಲುಂ ಆರ್ಪರಾನಾಡವರ್ಗಳ್ ॥
ಚದುರರ್ ನಿಜದಿಂ ಕುರಿತೋ ।
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥

ಕುರಿತವರಲ್ಲದೆ ಮತ್ತಂ ।
ಪೆರರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ॥
ಕಿರುವಕ್ಕಳ್ಮಾಮೂಗರು ।
ಮರಿಪಲ್ಲರಿವರ್ ವಿವೇಕಮಂ ಮಾತುಗಳಂ ॥

ಜಾಣಕ್ಕಳಲ್ಲದವರುಂ ।
ಪೂಣೆಗರರಿಯದೆ ಯುಮರಿವವೊಲವಗುಣದಾ ॥
ತಾಣಮನಿನಿಸೆ ವೆಕೆಲ್ದಡೆ ।
ಮಾಣದೆ ಪಿಡಿದದನೆ ಕೃತಿಗಳಂ ಕೆಡೆನುಡಿವರ್ ॥

ಎಂದು ಹೇಳುತ್ತಾನೆ. ನೃಪತುಂಗನು ಕ್ರಿ. ಶ. ೯ನೆಯ ಶತಮಾನದಲ್ಲಿ(೮೧೫-೮೭೭) ಬಾಳಿದನೆಂಬುದನ್ನು ಜ್ಞಾಪಕದಲ್ಲಿಡಬೇಕು. ಈ ನಮ್ಮ ಕಾಲಕ್ಕೆ ಒಂದು ಸಾವಿರ ವರ್ಷಗಳ ಹಿಂದೆ ಇದ್ದ ವಿದ್ಯಾಸ್ಥಾನಗಳನ್ನು ಇವನು ವರ್ಣಿಸುತ್ತಾನೆ. ಕಾವೇರೀನದಿಗೂ ಗೋದಾವರೀನದಿಗೂ ಮಧ್ಯದಲ್ಲಿ ತುಂಗಭದ್ರಾನದಿಯೂ ಕೃಷ್ಣಾನದಿಯೂ ಹರಿಯುತ್ತವೆ. ಕನ್ನಡನಾಡುಗಳಲ್ಲಿ ನಡುವಣನಾಡಾಗಿತ್ತೆಂದು ವರ್ಣಿಸಿರುವ ಭಾಗವು ಸ್ವಲ್ಪ ಹೆಚ್ಚುಕಡಿಮೆ ತುಂಗಭದ್ರಾನದಿಗೂ ಕೃಷ್ಣಾನದಿಗೂ ಮಧ್ಯದಲ್ಲಿರುವುದು. ಕಿಸುವೊಳಲು ಎಂಬುದು ಕೃಷ್ಣಾನದಿಯ ಹತ್ತಿರ ಬಿಜಾಪುರಪ್ರಾಂತದಲ್ಲಿ ಈಗಿರುವ ಪಟ್ಟದಕಲ್ಲು ಎಂಬುದರ ಬಳಿಯಲ್ಲಿತ್ತು. ಕೊಪಣನಗರವೆಂಬುದು ಈಗ ಕೊಪ್ಪಳವೆಂಬ ಹೆಸರಿನಲ್ಲಿ ಬಳ್ಳಾರಿಗೂ ಗದಗಿಗೂ ಮಧ್ಯದಲ್ಲಿದೆ. ಪುಲಿಗೆರೆಯೆಂಬುದು ಧಾರವಾಡದ ಪ್ರಾಂತದಲ್ಲಿ ಈಗ ಲಕ್ಷ್ಮೇಶ್ವರವೆಂಬ ಹೆಸರಿನಲ್ಲಿದೆ. ಮಿರಜ್ ಸಂಸ್ಥಾನದಲ್ಲಿ ಒಂದು ಭಾಗವಾಗಿದೆ. ಒಂಕುಂದ ಅಥವಾ ಒಕ್ಕುಂದ ಎಂಬುದು ಬೆಳಗಾಂವಿನ ಪ್ರಾಂತದಲ್ಲಿದೆ. ಕ್ರಿ. ಶ. ೯೪೧ರಲ್ಲಿ ಬಾಳಿದ ಆದಿಪಂಪನು ಪುಲಿಗೆರೆಯ ತಿರುಳ್ಗನ್ನಡದಲ್ಲಿ ತನ್ನ ಗ್ರಂಥಗಳನ್ನು- ಎಂದರೆ ಆದಿಪುರಾಣವನ್ನೂ ವಿಕ್ರಮಾರ್ಜುನವಿಜಯವನ್ನೂ- ಬರೆದನು. ಕನ್ನಡದ ತಿರುಳು ಕೃಷ್ಣಾನದಿಗೂ ತುಂಗಭದ್ರೆಗೂ ನಡುವೆ ಇತ್ತೆಂದು ಸ್ಥೂಲವಾಗಿ ಜ್ಞಾಪಕದಲ್ಲಿಡಬಹುದು.

ಈ ನಡುವಣನಾಡಿನ ಕನ್ನಡದ ವಿದ್ಯಾಸ್ಥಾನಗಳು ಎಂತಿದ್ದುವೋ ಸ್ವಲ್ಪ ವಿಚಾರ ಮಾಡಿ ನೋಡೋಣ. ಗಂಗವಾಡಿಯಲ್ಲಿ ತಮಿಳಿನ ಪ್ರಭಾವವು ಪ್ರಬಲವಾಗಿದ್ದಂತೆ ಈ ನಡುವಣನಾಡಿನಲ್ಲಿ ಮಹಾರಾಷ್ಟ್ರೀಪ್ರಾಕೃತದ ಪ್ರಭಾವವು ಪ್ರಬಲವಾಗಿತ್ತು. ಈ ಪ್ರಾಬಲ್ಯದ ದೆಸೆಯಿಂದ ವರ್ಣಮಾಲೆಯು ಅಕ್ಷರಗಳ ಉಚ್ಚಾರಣೆಯು ಪ್ರಾಕೃತದಲ್ಲಿದ್ದಂತೆ ಕನ್ನಡಕ್ಕೂ ಬಂತು. ಇದು ಕನ್ನಡಕ್ಕೆ ಮಹೋಪಕಾರವಾಗಿ ಪರಿಣಮಿಸಿತು. ತಮಿಳಲ್ಲಿ ಗಕಾರೋಚ್ಚಾರಣೆಯು ಹಕಾರದಂತಿತ್ತು. ನಡುವಣನಾಡಿನ ಕನ್ನಡದಲ್ಲಿ ಹಾಗಿರಲಿಲ್ಲ. ಕನ್ನಡವು ದ್ರಾವಿಡಭಾಷಾವರ್ಗಕ್ಕೆ ಸೇರಿರುವುದನ್ನು ಪರಿಶೀಲಿಸುವಲ್ಲಿ ಸಹಜವಾಗಿ ಕನ್ನಡದಲ್ಲಿ ಸಕಾರ ಜಕಾರ ವಿವಕ್ಷೆಯು ಇರಲಿಲ್ಲವೆಂದು ತಿಳಿಯಬರುತ್ತದೆ. ತಮಿಳಿನಲ್ಲಿ ಚಕಾರವನ್ನು ಬರೆದು ಸ್ವಲ್ಪ ಹೆಚ್ಚುಕಡಿಮೆಯಾಗಿ ಅದನ್ನು ಶಕಾರವಾಗಿ ಉಚ್ಚರಿಸುತ್ತಾರೆ. ಸಕಾರಕ್ಕೆ ಬೇರೆಯಾಗಿ ತಮಿಳಲ್ಲಿ ಅಕ್ಷರವಿಲ್ಲ. ಜಕಾರೋಚ್ಚಾರಣೆಯು ತಮಿಳಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾಗಿ ಶಕಾರವಾಗಿ, ತೆಲುಗಿನಲ್ಲಿ ಕೆಲವು ಸಂದರ್ಭಗಳಲ್ಲಿ—ಎಂದರೆ ಅ ಉ ಒ ಔ ಸ್ವರಗಳು ಸೇರಿದಾಗ—ತ್ಸಕಾರವಾಗಿ ಉಚ್ಚರಿಸಲ್ಪಡುವುದು. ಕನ್ನಡದಲ್ಲಿಯಾದರೊ ಪ್ರಾಕೃತ ಸಂಬಂಧದಿಂದಲೇ ಜಕಾರ ಸಕಾರ ವಿವಕ್ಷೆಯು ಸ್ಪಷ್ಟವಾಯಿತಲ್ಲದೆ ಸಕಾರವಿರುವ ಧಾತುಗಳು ಹೇರಳವಾಗಿವೆ. ತಮಿಳಲ್ಲಿಯೂ ತೆಲಗಿನಲ್ಲಿಯೂ ದೇಶೀಯ ಪದಗಳಲ್ಲಿ ಮಹಾಪ್ರಾಣಾಕ್ಷರಗಳು ಕಾಣಬರುವುದೇಯಿಲ್ಲ. ಮಹಾರಾಷ್ಟ್ರೀ, ಪ್ರಾಕೃತದ ಸಂಬಂಧದಿಂದ ಮಹಾಪ್ರಾಣಾಕ್ಷರಗಳು ಕನ್ನಡಕ್ಕೆ ಬಂದು ಸೇರಿದುವು. ಕೇಶಿರಾಜನು

ಒಳವು ಮಹಾಪ್ರಾಣಂಗಳ್ ।
ವಿಳಸತ್ಕರ್ಣಾಟಕ ಬಾಷೆಯೊಳ್ ಕೆಲವು ನಿಜೋ ।
ಜ್ವಳವಾಗಿ… …

ಎಂದು ಹೇಳಿದ್ದಾನೆ. ಕೇಶಿರಾಜನು ಕೊಡುವ ಮಹಾಪ್ರಾಣಾಕ್ಷರದ ಪದಗಳೆಲ್ಲ ಪೂರ್ವಪ್ರಾಕೃತಪದಗಳಾಗಿವೆ. ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಪ್ರಥಮ ಸಂಪುಟದ ತೃತೀಯ ಸಂಚಿಕೆಯ ೨೭೭-೨೭೮ ನೆಯ ಪುಟಗಳಲ್ಲಿ ಈ ವಿಷಯವು ಸ್ಪಷ್ಟಪಡಿಸಲ್ಪಟ್ಟಿದೆ. ನಡುವಣನಾಡಿನಲ್ಲಿ ಮಹಾಪ್ರಾಣದೊಡನೆ ಬರೆಯುತ್ತಿದ್ದ ಖಾಣ, ಢಂಕೆ, ಧನಿ, ಭಂಗಾರ ಮುಂತಾದ ಪದಗಳು ಗಂಗವಾಡಿಯಲ್ಲಿ ಅಲ್ಪಪ್ರಾಣದೊಡನೆ ಕಾಣ, ಡಂಕೆ, ದನಿ, ಬಂಗಾರ ಎಂದು ಉಚ್ಚರಿಸಲ್ಪಡುತ್ತಿದ್ದುವು.

ನಡುವಣನಾಡಿನಲ್ಲಿ ವರ್ಗತೃತೀಯಾಕ್ಷರಗಳ ಪ್ರಯೋಗವು ಪ್ರಾಕೃತದ ಪ್ರಭಾವದಿಂದಲೂ ತೆಲುಗಿನ ಪ್ರಭಾವದಿಂದಲೂ ಹೆಚ್ಚಾಗಿ ಬಳಕೆಯಾಗಿದ್ದುದರಿಂದ ತಮಿಳಿನ ಪರುಷಸರಳೋಚ್ಚಾರಣ ವಿಧಿಯು ಅವಶ್ಯಕವಾಗಲಿಲ್ಲ. ವರ್ಗತೃತೀಯಾಕ್ಷರಗಳ ಪ್ರಭಾವವು ಪ್ರಾಕೃತ ತೆಲುಗುಗಳ ಪ್ರಚಾರದಿಂದ ನಡುವಣನಾಡಿನಲ್ಲಿ ಬಳಕೆಯಾಯಿತು. ಅನುಸ್ವಾರದ ಮುಂದಿನ ವರ್ಗ ಪ್ರಥಮೋಚ್ಚಾರಣೆಯು ತಮಿಳಲ್ಲಿಲ್ಲ; ತಮಿಳಿನ ಸ್ವಭಾವದಿಂದ ಗಂಗವಾಡಿಯಲ್ಲಿ ಎಂಕುಂದ ಎಂಬ ಹೆಸರನ್ನು ಎಕ್ಕುಂದ ಎಂದು ಮಾಡಿಕೊಂಡಿದ್ದರು. ಗಂಗವಾಡಿಯ ತಲೆಕ್ಕಾಡು, ಎಡತ್ತೊರೆ, ಪೊನ್ನಂದು ಮುಂತಾದ ಪದಗಳು ನಡುವಣನಾಡಿನಲ್ಲಿ ವರ್ಗಪ್ರಥಮದ ಪ್ರಭಾವವಿಲ್ಲದೆ ತಲಕಾಡು, ಎಡತೊರೆ, ಪೊಂಪಂದು ಎಂದು ಉಚ್ಚರಿಸಲ್ಪಟ್ಟವು. ತಮಿಳಿನ ಪರುಷ ಸರಳೋಚ್ಚಾರಣ ವಿಧಿಯು ಬಳಕೆಯಾಗದಿದ್ದುದರಿಂದಲೂ, ಮಹಾಪ್ರಾಣಾಕ್ಷರಗಳ ಪ್ರಯೋಗವು ಪ್ರಾಕೃತದ ಪ್ರಾಬಲ್ಯದಿಂದ ಬಳಕೆಯಾಗಿದ್ದುದರಿಂದಲೂ ಪದಗಳ ಸಂಸ್ಕೃತರೂಪಗಳನ್ನು ಪ್ರಯೋಗಿಸುವುದೂ ಬಳಕೆಯಾಯಿತು.

ನಡುವಣನಾಡಿನ ವಿದ್ವಾಂಸರು ಗಂಗವಾಡಿಯ ಕನ್ನಡವನ್ನು ನಿರಾಕರಿಸಲಿಲ್ಲ. ಅದನ್ನು ದಕ್ಷಿಣಮಾರ್ಗದ ಕನ್ನಡವೆಂದು ಸ್ವೀಕರಿಸಿದರು. ಕ್ರಿ. ಶ. ೬ ನೆಯ ಶತಮಾನದ ಉತ್ತರಾರ್ಧದಲ್ಲಿ ದುರ್ವಿನೀತನೆಂಬ ಗಂಗರಾಜನು ಸಂಸ್ಕೃತದ ಕಿರಾತಾರ್ಜುನೀಯಕ್ಕೆ ಕನ್ನಡದಲ್ಲಿ ಒಂದು ವ್ಯಾಖ್ಯಾನವನ್ನು ಬರೆದನು. ಇನ್ನು ಯಾವ ಗದ್ಯಗ್ರಂಥವನ್ನೂ ದುರ್ವಿನೀತನು ಬರೆದನೋ ತಿಳಿಯದು. ಹೀಗಿದ್ದರೂ ನೃಪತುಂಗನು ದುರ್ವಿನೀತನನ್ನು ಗ್ರಂಥಕರ್ತನನ್ನಾಗಿ ಒಪ್ಪಿ

ವಿಮಳೋದಯ ನಾಗಾರ್ಜುನ
ಸಮೇತ ಜಯಬಂಧು ದುರ್ವಿನೀತಾದಿಗಳೀ ॥
ಕ್ರಮದೊಳ್ ನೆಗಳ್ದ ಗದ್ಯಾ-
ಶ್ರಮಪದ ಗುರುತಾ ಪ್ರತೀತಿಯಂ ಕೆಯ್ಕೊಂಡರ್ ॥

* ಪ್ರಾಕೃತ [illegible] ಅಥವಾ ಮಹಾರಾಷ್ಟ್ರದ ಚರಿತ್ರೆಯನ್ನು [illegible] ಕ್ರಿ. ಪೂ. ೬ ನೆಯ ಶತಮಾನದಲ್ಲಿ [illegible] ಕಾಲದಲ್ಲಿ ದ್ರಾವಿಡ [illegible] ಕ್ರಿ. ಪೂ. ೩ ನೆಯ ಶತಮಾನದಲ್ಲಿ [illegible] ಕಾಲದಲ್ಲಿ ದ್ರಾವಿಡ [illegible] ಕ್ರಿ. ಪೂ. ೩ ನೆಯ ಶತಮಾನದಲ್ಲಿ [illegible] ದ್ರಾವಿಡ [illegible] ಬಂದಿದ್ದುವೆಂದು ಗೊತ್ತಾಗುತ್ತದೆ. ನಡುವಣನಾಡಿನ [illegible] ಸಂಸ್ಕೃತ ಪ್ರಾಕೃತಗಳ [illegible] ಕಾಲದಿಂದಲೂ ಇತ್ತೆನ್ನುವುದಕ್ಕೆ [illegible]

ಎಂಬ ಪದ್ಯದಲ್ಲಿ ಅತನ ಹೆಸರನ್ನು ಸೇರಿಸಿರುತ್ತಾನೆ-

ನಡುವಣನಾಡಿನ ಕನ್ನಡವು ತಿರುಳ್ಗನ್ನಡವಾಗಿದ್ದುದರಿಂದ ಕನ್ನಡದ ಲಕ್ಷಣಗ್ರಂಥಗಳು ಮೊದಲು ಈ ನಾಡಿನಲ್ಲಿ ಹುಟ್ಟುವದು ಸಹಜವಾಗಿಯೇ ಇದೆ. ನೃಪತುಂಗನ ಕವಿರಾಜಮಾರ್ಗಕ್ಕಿಂತಲೂ ಹಳೆಯದಾದ ಗ್ರಂಥವು ನಮಗೆ ಸಿಕ್ಕಿಲ್ಲ. ನಡುವಣನಾಡಿನ ತಿರುಳ್ಗನ್ನಡದ ಮಾದರಿಗಾಗಿ ಕವಿರಾಜಮಾರ್ಗದಿಂದಲೂ ಆದಿಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯ ದಿಂದಲೂ ಕೆಲವು ಪದ್ಯಗಳನ್ನು ಉದ್ಧರಿಸುತ್ತೇವೆ

ಕಾವ್ಯಪ್ರಶಂಸ.

ಪರಮಾಲಂಕಾರೋಕ್ತ
ವಿರಚನೆಗಳ್ಗೆಲ್ಲಮಾರವದನೋದರದೊ ||
ಚಿರಮುಕ್ತಾ ಪರಮುಕ್ತೇ
ಸ್ಫುರದೆಸಗೇ ಕೃತಿಯೊಳ್ಕೃತಕಾಚಾರಪರರ್ ||

ಶ್ರುತದೊಳ್ಪಾಸಿ ನೋಡುತ್ತಿಪ್ಪವೆ |
ಸತತಂ ಕಾವ್ಯಕಥಾ ಪ್ರಯೋಗಂಗಳೊಳಂ ||
ಕೃತಪರಿಚಯ ಬಲಸಪ್ಪನ |
ಸತಿಶಯಧವಳನ ಸಭಾಸದಮ್ಮಂಡಿಸುವರ್ ||

ವ್ಯಾಕರಣ ಕಾವ್ಯನಾಟಕ
ಲೋಕಕಳಾ ಸಮಯಮಾದಳಂಕೃತಿಗಳೊಳಂ ||
ವ್ಯಾಕುಳನಲ್ಲದನೇಕಂ |
ವೇಕ ಬೃಹಸ್ಪತಿಯ ನಗರಮಂ ಪುಗುತಿಪ್ಪಂ ||

ಮೃಗಪಶು ಶಕುನಿಗಣಂಗಳೂ |
ಳಗಣಿತ ನಿಜ ಜಾತಿಜನಿತ ಭಾಷೆಗಳಿಂದಂ ||
ನೆಗಳ್ದಂತಿರೆ ನರರೊಳಮು |
ಪ್ರಗಲ್ಭ ವಚನಪ್ರವೃತ್ತಿ ನೆಗಳ್ಗಂ ಸಹಜಂ ||

ಗುಣಮುಮ ದೋಷಮುಮೆಂಬೀ |
ಗಣದಮನೆತ್ತಱಗು ಸುಶ್ರುತಪ್ರಕೃತಿಜನಂ ||
ತೃಣಸಸ್ಯಭಾಸಮುಮ |
ಪ್ರಣಯಂ ಸಮವೃತ್ತಿಯಪ್ಪವೊಲ್ ಮೃಗಗಣದೊಳ್ ||

ಆದಱಿಂ ಪರಮಾಗಮ ಕೋ |
ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ ||
ಮೊದಲೊಳ್ಲಕ್ಷ್ಯಂಗಳ್ದೆ |
ಪದಪೊಳ್ಪಾರ್ಗಂ ಬೆಡಂಗುಮಕ್ಕುಮೆ ಕೃತಿಯೊಳ್ ||

ಜಡಜನಮುಮೆಲ್ಲಮೋದಂ ।
ತಡೆಯದೆ ಕಲ್ತುಂ ಗುರೂಪದೇಶಕ್ರಮದಿಂ ॥
ನುಡಿವಲ್ಮೆಯಲ್ಲದೇಂ ಕ ।
ಲ್ತೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ ॥

ಪ್ರತಿಭಾಪತ್ತ್ವಮುಮಕೃತಕ ।
ಚತುರತೆಯುಂ ಪರಮಬುಧ ಜನೋಪಾಸನಮುಂ ॥
ಕೃತಿಪರಿಚಯಮುಂ ತಕ್ಕಂ ।
ಪ್ರತೀತಿಯುಂ ವಾಗ್ವಿದಗ್ಧತಾನಿಪುಣತೆಯೊಳ್ ॥

ಪಸರಿಸಿದಾ ಬಗೆಮನಮಂ ।
ಪೊಸತಾಗಿ ನೆಗಳ್ವುಲಱಿಯನಾ ರಚನೆಯೊಳೇಂ ॥
ಬಸನಂ ತನಗಿನಿತಱಿ ಪೇ ।
ಪಸಮೇಂ ಕವರ್ದಪರುಮೊಳರೆ ಕಪಿಯಲ್ಲದರಂ ॥

ಬಗೆಬಗೆದು ಕೇಳ್ದು ಬುಧರೊಲ ।
ವೊದಗಿರೆ ಹೃದಯದೊಳೆ ತಾಳ್ದ ಮಣಿಹಾರಂಬೊಲ್ ॥
ಸೊಗಯಿಸುವ ಪಚನಪರಚನೆ ।
ನೆಗಳ್ದುಂ ಭಾಸುಪೊಡದಱಿ ಪೆಂಪತಿಸುಲಭಂ ॥

ನೆನೆನೆನೆದು ಪೆಱರ ಮಾತುಗ
ಳನೆ ನೆಗಳ್ದಿರೆ ಕೃತಿಯೊಳಿಡುವವಂ ನಗದಗುಹಾ ॥
ಧ್ವನಿ ವಿಸ್ಫೋಲನತ್ವವಚನಂ ।
ತನಗಾಗಿಸಲಱಿಯನುಚಿತ ವಾಕ್ಚತುರತೆಯುಂ ॥

ಕುಱಿವಂತು ಪೆಱರ ಬಗೆಯಂ
ತೆಱೆದಿರೆ ಪೇೞಗಱಿಪಲಾರ್ಪಂ ಮಾತಱಿವಂ ॥
ಕಿಱಿದಱೊಳೆ ಪಿರಿದುಮರ್ಥಮ ।
ನಱಿಪಲ್ಕಱಿವಾತನಾತನಿಂದುಂ ನಿಪುಣಂ ॥

ನುಡಿಯುಂ ಛಂದದೊಳೊಂದಿರೆ ।
ತೊಡರ್ಚಲಱಿವಾತ ನಾತನಿಂದಂ ಜಾಣಂ ॥
ತಡೆಯದೆ ಮಹಾರ್ಥ ಕೃತಿಗಳ ।
ನೊಡರಿಸಲಾಪ್ಪಾತನೆಲ್ಲರಿಂದಂ ಬಲ್ಲಂ ॥

ಮಾತರಿವ ಕೆಲಬರ್ಗ ।
ತೀತಳಗತ ಮನುಜರೊಳಗೆ ಮಾತಱಿವವರೊಳ್ ॥
ನೀತಿವಿದರಮಳ ಕವಿತಾ ।
ನೀತಿಯುತರ್ಕೆಲರೆ ಪರಮ ಕವಿವೃಷಭರ್ಕಳ್ ॥

ಪಾಪಮಿದು ಪುಣ್ಯಮಿದು ಹಿತ ।
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ ॥
ಖೋಪಾತ್ತಮಿದೆಂದಱಿಪುಗು ।
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್ ॥

ಲೌಕಿಕ ಸಾಮಯಿಕರೊಳನ ।
ನೇಕಮುಮಭ್ಯುದಯ ಪರಮನಿಃಶ್ರೇಯಸಮುಂ ॥
ಪ್ರಾಕಟಮುತ್ತುಂ ವಿದಿತಾ ।
ನೇಕ ಕಲಾಶ ಪ್ರಯೋಗ ಪದ ಪದ್ಧತಿಯೊಳ್ ॥

ಅಧಿಕೃತ ಸತ್ಪುರುಷಾರ್ಥ ।
ಪ್ರಧಾನ ಧರ್ಮಾರ್ಥ ಕಾಮ ಮೋಕ್ಷಂಗಳವಾ ॥
ಬುಧಜನ ವಿರಕ್ತ ಕಾವ್ಯ ।
ಪ್ರಧಾರಿತಾರ್ಥಂಗಳಖಿಳ ಭುವನ ಹಿತಂಗಳ್ ॥

ಲೋಕದೊಳದಱಿಂ ಕಾವ್ಯ ।
ಶ್ರೀಕರಮೋದ್ಯುಕ್ತನಕ್ಕೆ ಕವಿ ತಂನಱಿವಂ ॥
ತಾಕಲ್ಪಾಂತ ಸ್ಥಾಯಿ ।
ಶ್ರೀಕೀರ್ತಿವಧೂ ಪ್ರಧಾನವಲ್ಲಭನಕ್ಕುಂ ॥

ಕವಿಭಾವ ಕೃತಾನೇಕ ।
ಪ್ರವಿಭಾಗ ವಿವಿಕ್ತ ಸೂಕ್ತಮಾರ್ಗಂ ಕಾವ್ಯಂ ॥
ಸವಿಶೇಷ ಶಬ್ದರಚನಂ
ವಿವಿಧಾರ್ಥ ವ್ಯಕ್ತಿವರ್ತಿತಾಲಂಕಾರಂ ॥

(ಕವಿರಾಜಮಾರ್ಗ-ಪರಿಚ್ಛೇದ I, 4-22)

ಆದಿಪಂಪನ ಬಿರುದುಗಳು

ವೃ ॥ ಕ್ಷಿತಿಗೆ ಸಮಸ್ತ ಭಾರತಮು ಮಾದಿಪುರಾಣಮು ಮಾಗಳೊಂದಳಂ ।
ಕೃತಿಯುಮನೊಲಿದುರ್ ವೇಕಟಿ ಯುಪ್ಪೊದಪರಾದಪರೊಳ್ ಸರಸ್ವತೀ ॥
ಮತಿ ಕವಿತಾಗುಣಕ್ಕೆ ಪಡೆದಿರ್ದ್ದವರಲ್ತೆ ಕವೀಂದ್ರರಾರ್ ಸರ ।
ಸ್ವತಿಗೆ ವಿಲಾಸಮಂ ಪೊಸತುಮಾಡುವ ಪಂಪನ ವಾಗ್ವಿಲಾಸಮಂ ॥

ಕಂ ॥ ವತ್ಸಕುಲ ತಿಲಕನಘಜನ
ವತ್ಸಲನಘಮಾನಮೂರ್ತಿ ಸುಕವಿಯಶೋನಿ ॥
ಮತ್ಸರನಮೃತಮಯೋಕ್ತಿ ಶ ।
ರತ್ಸಮಯ ಸುಧಾಂಶು ವಿಶದ ಕೀರ್ತಿ ವಿತಾನಂ ॥

ವೃ ॥ ವಿದಿತಂ ಪ್ರಾತೀತಿಕಂ ಕೋಮಳಮತಿ ಸುಭಗಂ ಸುಂದರಂ ಸೂಕ್ತಿಗರ್ಭಂ,
ಮೃದುಸಂದರ್ಭಂ ವಿಚಾರಕ್ಷಮ ಮುಚಿತಪದಂ ಶ್ರವ್ಯನವ್ಯಾಕುಲಂ ವ್ಯಾ ॥

ಸ್ಫುರಿಗಂತಂ ಕಾವ್ಯವೆಂದನ್ವಿತ ಸುಕವಿಜನಂ ಮೆಚ್ಚೆ ನಿಚ್ಚಂ ಮನಂಗೊ ।
ಳ್ವುದಱಿಂದಂ ನೆಟ್ಟನೀತಂ ಸುಕವಿಜನಮನೋಮಾನಸೋತ್ತಂಸ ಹಂಸಂ ॥

ವೃ ॥ ಇದು ನಿಚ್ಚಂ ಪೊಸತರ್ಣವಂ ಬಗೆಯೆ ಗಂಭೀರಂ ಕವಿತ್ವಂ ಜಗ ।
ಕರಱಿಂದಂ ಕವಿತಾಗುಣಾರ್ಣವ ನಿರ್ಮಲೋಕ್ತಿಕೆ ಪುಣ್ಯಾತನ ।
ಭ್ಯುದಯ ಪ್ರಾಪ್ತಿನಿಮಿತ್ತ ಮುನ್ನತಯಶಂ ಸಂಸಾರದೊಳ್ಪಾರಮ ।
ಸ್ಪದಱಿಂ ಧರ್ಮಮದಂ ನಿಮಿಚ್ಚುಕದಱಿಂ ಸಂಸಾರ ಸಾರೋದಯಂ ॥

ಕಂ ॥ ಅತಿ ಸುಭಗಗೆ ಸಂದ ಸರ ।
ಸ್ವತಿ ಗೀತನ ಲಲಿತವಾಗ್ವಿಲಾಸವೆ ಸದಲಂ ।
ಕೃತಿಯುಮ್ ಶೆಸೆದಪ್ಪುದು ಜಗ ।
ತ್ಪ್ರತೀತನೀತನೆ ಸರಸ್ವತೀಮುಖ ಹಾರಂ ॥

ಆ ದಿ ಪು ರಾ ಣ

[illegible]

ವೃ ॥ ಮಸಮುಗಿಲೆಂಬ ಪೆರ್ಮೆ ಪೆಸರ್ಪಡೆ ನಿಮ್ನಘನೇನನೆಂ ಪೊಡಂ ।
ಕಿಸಿಸದರೊಳೆವ ದಗ್ಧಮಹಿಯೊಳ್ ಪದದಲ್ಲಿ ಪದಸ್ಥೆಯಾಗು ಸಂ ।
ದನದನಗಣ್ಯ ಪುಣ್ಯಧನದಂ ಪಡೆಯೆಂದಮದಕ್ಕೆ ಕೊಂಡು ತ ।
ತ್ತನುಜೆಯಗಲ್ಪದೊಳ್ ನೆಗಪಿದರ್ ಎಸಮಲ್ಕದ ಜಾತ್ಯವಾರಿಯುಂ ॥

[illegible]

ವೃ ॥ ಬಗೆದುಂ ನಿಸ್ಪೃಸ್ವರಾಯೊಳ್ಸ್ತುತಿಯ ಬಿಸಲ್ವಿಸ್ತುಹ ಸಂಬಂಧಮುಂ ನೀಂ ।
ಬಗೆದುಂ ಸಂಪನ್ನ ನೆಂದುಂ ಬಗೆದು ಮುಱಿಯುದೇನಾಸುವೆಂದಾಗಳುಂ ಮೆ ॥
ಳ್ಕಗೆ ನೀಂ ಕಲ್ಪಿಸ್ಸು ನಿಮ್ನಂ ನೆನೆದಿರ್ದುದಂತಾಗೆ ಪಾಲಿಸ್ಸುದಿಂ ತೀ
ವ್ರಗಡಾಜೀಕ್ಸ್ಟೃಯುಂ ಮುಸ್ಕುಸುರದಿಸಿತನಾಂ ಪೇಱಿದೆಂ ಪಪ್ರಬಂಧಾ ॥

ಭಗವಾ

ವೃ ॥ ಪೊಸೆಮುಡುಪ್ಪಿಕೊಳ್ವ ನೆನೆಯುತ್ತಿರಿವೆಂಬ ಸಮಸ್ತವಸ್ತುವಂ ।
ಕುಡುವ ಪಲವೊರ್ಯಿಂ ಪರಸಿ ಸೇಸೆಯನಿಕ್ಕುವ ಬದ್ಧವೇಕ್ಷಕೆ ॥
ಯ್ಸಸೆ ನಿಮಗೆಂದೊಡಂಬಡಿಪ ಸ್ವರಗಳ್ಗೆ ಕಣ್ಣನೀರ್ಗಳಿಂ ।
ಬಿಡಿಪ ಬಿಱುಪ್ರಕಾರ ಬಿಸ ಸಂಕಟವೊಂದುದಾ ಪ್ರಯಾಣದೊಳ್ ॥

ಮರುದೇವಿ,

ಕಂ ॥ ಅಳನಿಸದಡ ಮುದಕೋಕಿಳ ।
ಕಳ ನಿನದದ ಜತಿಯೊಳಭಿನಯಂ ನೆಗಟ್ಟಿನೆಗಂ ॥
ಲಳಿತಮನೇನಾಡಿಸಿದನೊ ।
ಮಳಯಾನಿಲನರ್ತಕಂ ಲತಾನರ್ತಕಿಯಾ ॥

ಸುರಹೊನ್ನೆ

ವೃ॥ ಎಸಗ್ಗಳನೆಯ್ದೆ ಕಂಪೆರಸಿ ಮುತ್ತಿನೊಳಿಲ್ಲಿ ಸುವರ್ಣ ಚೂರ್ಣಮಂ।
ಪಸರಿಸಿ ಕೇಸರಾಕೃತಿಯೊಳಿಲ್ಲಿಗೆ ಕರ್ಣಿಕೆಯುಂಡವಾಗಿ ಕೇ॥
ಲಿಸಿಕೊಸತಪ್ಪ ಪಾಣಿಕದ ಸುಸ್ವರಲಂ ಮಧು ಮಸಥಂಗೆ ಬ।
ಗ್ಗಿಸಿ ಸಮೆದಂತೆ ತೋರ್ಪುದು ಪೂಗಳೊಳಂ ಸುರಹೊನ್ನೆ ಚೆನ್ನನೋ॥

ಚಂದ್ರೋದಯ

ವೃ॥ ಇದೊಂದಿನಿಸು ಬೇಗದಿಂ ನವಜಪಾಪ್ರಸೂನಾಭ ಮಾ।
ಯ್ತದೊಂದಿನಿಸು ಬೇಗದಿಂ ಕನಕ ಕುಂಭದಂತಾಯ್ತು ಮ।
ತ್ತದೊಂದಿನಿಸು ಬೇಗದಿಂ ಸ್ಫುಟಮೃಣಾಳ ಸಂಕಾಶಮಾ।
ಯ್ತದೇಂ ಬಳೆಕೆ ಬಿಂಬಮುಜ್ಜ್ವಳಿಕೆಯೋ ಸುಧಾಸೂತಿಯಾ॥

ಚಂಪಕ

ಕಂ॥ ಪಸೆದೊಸೆ ಕಂಪಂ ಬಣ್ಣಂ
ಬಸೆಯುವ ಬಣ್ಣಮನೆ ಪಸೆದು ಪೊರ್ದಿದೆ ಕಂಪಂ॥
ಪಸೆಯುವ ಪಿದಿಲಗಲಿರದುದು।
ನೊಡವೇಳದೇಂ ಜಂಪಕಕ್ಕೆ ಪೂಗಳ್ ನೊರೆದಿಪ॥

ವಿಕ್ರಮಾರ್ಜುನ ವಿಜಯದಿಂದ.

ಶರತ್ಕಾಲ

ವೃ॥ ಕಲಹಂಸ ಕಂಪಡಂಗಿದುದು ಜಾಜಿಯ ಸೊಂಪೆಸೆದತ್ತು ಸೋಗೆಯುಂ।
ಕರ್ಣಡುಗಿದುದಂ ಕೆಯುಕುರ್ಲ ಪೊಸತಾಯ್ತು ಮುಗಿಲ್ಗಳ್ ಸಿಕ್ಕ ಕಪ್ಪುವೋ॥
ಗಡಿಸಿದುದಿಂದು ಮಂಡಳದ ಕರ್ಪೆಸೆದತ್ತು ಘನಾಗಮಂ ಮೊದ।
ಲ್ಗಡೆ ಶರದಾಗಮಂ ನೆಲೆಯೆ ಪರ್ವೆ ಸಮಸ್ತ ಮಹೀಭಾಗಮಂ॥

ಅಲ್ ಬರಿಪದೆ ಜಾಜಿಯೊಳ್ ಪಲ್ಮೊರೆಯುತ್ತಿರೆ ಹಂಸ ಪೂತಪೂ
ಗೊಳದೊಳ್ ರಾಗಿಸುತ್ತಿರೆ ಶುಕಾವಳಿ ಬಂಧುರಗಂಧಶಾಳಿ ಸಂ।
ಕುಳದೊಳ್ ಪಾಯ್ದು ಪಾಯ್ದು ನಲಿಯುತ್ತಿರೆ ಸಾರೆ ಚಕೋರಬಂದುಮಂ।
ತಳಗಳಿತಾಮೃತಾಸವಮನುಂಡುಸಿರುತ್ತಿರೆ ಪೆಲ್ವುಶಾರದಂ॥

ಚಿತ್ರ ಶರತ್ತು

ವೃ॥ ಕಿಂಕಿಣಿಯಾಗಿ ನಲ್ವಿಡಿಕೆಗಳೆಯೊಳ್ ನೆಲಮುಟ್ಟಿದ ಮೊಯ್ಯೊಳೆತ್ತಮಿ॥
ತ್ತಂ ಕೆಡೆದಿರ್ದ ಪುಣ್ಗಳಿಸಿವ ಕೆರದಂತಿರೆ ನೋಡಿ ಕಳ್ಳಿಮಂ॥
ಬಿಂಕಿನ್ನೊಳಿರ್ದ ನಟ್ಟವಣೆಗೊಲ್ಗಳ ಮೋಪೆಸೆದಿರ್ದ ಪರಿಸಿ।
ದಿಗ್ಗಾಂತದ ಶಾಸನಂ ಬರೆದ ಪೊತ್ತಗೆಯುಂ ಕಮಲಾಕರಾತ್ಮಜಂ॥

ಸ್ತ್ರೀಶೋಕ

ವೃ॥ ಇದಿರ್ವಪೆಣ್ಗಳ್ ತಿಳಿಗೊಳ್ದಿರ್ವ ಕಣ್ಬನಿ ಪೊಣದೆ ಮೋದ ಶೋಕದ ।
ಚ್ಛಿದಿರ್ದವ್ರೊಲಿರ್ದ ಬಾಸುಟಿಯನಿಟ್ಟು ಕೆಟಿಲ್ಟು ಒಟಿಲ್ಲು ಜೋಲ್ದ ಮೆ ॥
ಯ್ಯುಱುಗುವ ಪೇಗಮೊಳ್ಮೊಗಮಣಂ ದೆಸೆಗಾಣದ ನೋಟಮಾರುಮಂ ।
ಮಱುಗಿಸೆ ಬಂದುದಂದು ಕರುಣಂ ಬರೆ ವೈರಿನೃಪಾಂಗನಾಜನಂ ॥

ದುರ್ಯೋಧನ ಪ್ರಲಾಪ

ವೃ॥ ಒಡಲೆರಡೊಂದೆ ಜೀವಮಿವರ್ಗೆಂಬುದನೆಂಬುದು ಲೋಕಮೀಗಳಾ ।
ನುಡಿ ಹುಸಿಯಾಯ್ತು ನಿನ್ನಸು ಕಿರೀಟಿಯ ಶಾತಶರಂಗಳಿಂದೆ ಪೋ ॥
ಪೊಡೆನಗಿನ್ನುಮಾಯೊಡಲೊಳಿರ್ದುದು ಸಾಜಲಿಜೀವಮೆಂದೊಡಾ ।
ವೆಡೆಯೊಳೆ ನಿನ್ನೊಳೆನ್ನ ಕಡುಗೂರ್ಮೆಯುಮುಟ್ಟರು ಮಂಗವಲ್ಲಭಾ ॥

-ವಾಸಿದೇಶ

ತೆಂಕಿನಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದಗೇ ।
ಯಂಕಿವಿವೊಕ್ಕೊಡಂ ಬಿರಿದ ಮಲ್ಲಿಗೆ ಗಂಡೊಡಮಾದ ಕೆಂದಲಂ ॥
ಪಂ ಕೆಳೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ ।
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ ॥

ಗ್ರಂಥದಿಂದುದ್ಧರಿಸಿದೀ ಭಾಗಗಳ ಜತೆಗೆ ಸುಮಾರು ೧೦-೧೧ ನೆಯ ಶತಮಾನಗಳಲ್ಲಿ ಹುಟ್ಟಿದ ಒಂದೆರಡು ಶಾಸನಗಳನ್ನು ಪರೀಕ್ಷಾರ್ಥವಾಗಿ ಕೊಡುವದುಚಿತವೆಂದು ತೋರುತ್ತದೆ-

(1) ಮುಳ್ಬಾಗಲ್-೩೮ ಕಾಲ ಕ್ರಿ. ಶ. ೮೯೦.

ಕಂ॥ ಶ್ರೀವಧು ಧರೆಪೇಳ್ಕೆ ।
ರಾವನಿಪಂಗಗ್ರಮಹಿಷಿ ಭುವನಾಂಬಿಕೆ ನಾ ॥
ಗ್ಗೀವಿಯರ ದೊರೆಯೆನಿಸಿದ
ದೀವಬ್ಬರಸಿಯರದೊರೆಗೆಱ್ಬರ್ ಪೆಱರಾರ್ ॥

ವೃತ್ತ॥ ಅತಿಶಯಮಾಗೆ ತಮ್ಮ ಪ್ರಸರೊಳ್ಬಿಱ ತತ್ಪ್ರತಿನಾಮದಿಂ ಯಶೋ ।
ರ್ಜಿತಮೆನಿಪಗ್ರಹಾರಮವಿನಾಶಿನಮಸ್ಯಮ ಮಾಡಿ ರಾಜ್ಯದೊಳ್ ॥
ಸುತನನುಕೂಳನಾಗೆ ಬೆಸಕೆಯ್ಯೆ ಗುಣೋನ್ನತಿಯೊಪ್ಪಿನಿಂದರು ।
ನ್ಧತಿದೊರೆ ದೀವಳಬ್ಬರಸಿಯರ್ ಜಗತೀತಳಕೇಂ ಪವಿತ್ರರೋ ॥

ವೃ॥ ವಿದಿತಂ ಲೋಕಕ್ಕೆ ಮುನ್ನಂ ರಘುಕುಲವತಹನೋಗ್ರೇಷುವಿಂ ಕಾಯ್ದು ತೀಣಾಂ
ಕುದಿಗೊಂಡಬ್ಧಿತ್ತಗಸ್ತ್ಯಂ ಕುಡಿಯುತುಗುಟ್ಟಿನಿಂ ಕಟ್ಟುಪಟ್ಟೆಬ್ಬಿದಿನ್ನು ॥
ಪ್ಪುದು ಪೆಂಪನ್ನಾಟ್ಟಿತಿನ್ನಿನ್ನಿಱಯರೆ ಲವಣಾಂಭೋಧಿಯಂ ಪೋಲಿಸಲ್
ನೇಱದು ವೆತ್ತಾನೆತ್ತಲೆಂಬನ್ನತಿ ಬಹುಳಜಳನ್ನೀವಳಬ್ಬಾಸಮುದ್ರಂ ॥

ವೃತ್ತ॥ ಮನುಚರಿತಮ್ಮಹೇಂದ್ರನ ಪನಿನೆ ಪರೋಕ್ಷದೊಳಾಮಹಾತ್ಮ್ಯನಾ
ಜನನಿಮಹೇನ್ದ್ರನಾಮದೆಕೊಳಂ ನಿಜನಾಮದೊಳನ್ತಟಾಕಮಾ ॥
ಶನಭವನಮ್ಮಹನ್ನಭವನಂಗಳನಿಂಬಿನಿಮಾಡಿಧರ್ಮ್ಮವ ।
ರ್ದ್ಧನದೆಕನೀಯ ನಂದನರಾಜ್ಯಮನೀಕ್ಷಿಸುಗಾವಕಾಲಮುಂ ॥

ಕಂ॥ ನೆಟ್ಟನೆ ಕದಂಬ ವಂಶಂ।
ಪುಟ್ಟಿದ ಮನೆ ಪಲ್ಲವೇನ್ದ್ರನಿಜೀವನೊಳಂಬಂ ॥
ಪುಟ್ಟಿದಮಗನಿಗೆ ಮುಗಿಲಂ।
ಮುಟ್ಟಿಪುದುಂ ಪೆಂಪುದೀವಳಬ್ಬರಸಿಯರ ॥

ವ॥ ಸ್ವಸ್ತಿ ಸಮಧಿಗತಪಞ್ಚಮಹಾಶಬ್ದ ಪಲ್ಲವಾನ್ವಯ ಶ್ರೀಪೃಥ್ವೀವಲ್ಲಭ ಪಲ್ಲವಕುಲತಿಲಕಂ, ಪಲ್ಲವಾಭರಣ ನಾಹವದುರ್ಗ್ಗನಹಿತರ ಜವನವೋಘವಾಕ್ಯನ್ನೊಳಂಬ ನಾರಾಯಣ ಶ್ರೀವೀರಮಹೇನ್ದ್ರನೊಳಂಬಾಧಿರಾಜನ ಪರೋಕ್ಷದೊಳ್ ದೀವಬ್ಬರಸಿಯರ್ ಪ್ಪೊಟರಮಂಗಲದೊಳ್ ದೀವಬ್ಬೆಸಮುದ್ರಮಂ ಕಟ್ಟಿಸಿ ಯಲ್ಲಿಯ ವಿಷ್ಣುಗ್ರಿಹಮುಮ್ಮಾಡಿಸಿ ಯಾವನ್ನೃದೊಳ್ ನೊಳಂಬ ನಾರಾಯಣೇಶ್ವರಮುಮ್ಮಾಡಿಸಿ ಈದೇವರ್ಗ್ಗೆಳ ನಗರಮುಂ ಸರ್ಬ್ಬಬಾಧಾಪರಿಹಾರಮಾಡಿಕೊಟ್ಟರ್ * * ಬರೆದನ್ನಾಮಯ್ಯಂ.
* * * *

ಈ ಶಾಸನವನ್ನು ಬರೆದವರು ಗಂಗವಾಡಿಯವರಾಗಿದ್ದಂತೆ ತೋರುತ್ತದೆ ಅಲ್ಲಲ್ಲಿ ಬರವಣಿಗೆಯಲ್ಲಿ ತಮಿಳಮರ್ಯಾದೆಯು ಕಾಣಬರುವದು. ಆದರೂ ಶಾಸನದೊಕ್ಕಣೆಯು ಪ್ರೌಢವಾಗಿರುತ್ತದೆ. ಪದ್ಯದ ಛಂದಸ್ಸಿನಲ್ಲಿ ತಪ್ಪುಗಳಿವೆ.

(೨) ದಾವಣಗೆರೆ ತಾಲ್ಲೂಕಿನ ೧೩೫, ಕಾಲ ೧೧೦೯.

ಸ್ವಸ್ತಿ ॥ ಸಮಸ್ತ ಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯಕುಲತಿಳಕಂ ಚಾಳುಕ್ಯಾಭರಣಂ ಶ್ರಿಮತ್ತ್ರಿಭುವನಮಲ್ಲ ದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಗ ಚಂದ್ರಾರ್ಕ್ಕತಾರಂ ಬರಂ ಸಲುತ್ತಮಿರೆ ॥ ಸ್ವಸ್ತಿ ॥ ಸಮಧಿಗತ ಪಞ್ಚಮಹಾಸಬ್ದ ಮಹಾಮಂಡಳೇಶ್ವರಂ ಕಾಂಚೀಪುರವರೇಶ್ವರಂ ಯದುವಂಸಾಂಬರದ್ಯುಮಣಿ ಸುಭಟಚೂಡಾಮಣಿ ನಿಜ ಕುಳಕಮಳ ಮಾರ್ತ್ತಣ್ಡಂ ಪರಿಚ್ಛೇದಿಗಂಡ ರಾಜಿಗ ಚೋಳಮನೋಭಂಗಂ ಶ್ರೀಮತ್ರಿಭುವನಮಲ್ಲದೇವ ಪಾದಾಬ್ಜ ಭ್ರಿಂಗನಾಮಾದಿ ಸಮಸ್ತಪ್ರಶಸ್ತಿಸಹಿತಂ ಶ್ರಿಮನ್ಮಹಾಮಣ್ಡಳೇಶ್ವರಂ ತ್ರಿಭುವನಮಲ್ಲ ಪಾಣ್ಡ್ಯದೇವರು ನೊಳಂಬವಾಡಿಮೂವತ್ತಿಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟಪರಿಪಾಳನದಿಂ ಸುಖರಾಜ್ಯಂಗೆಯ್ಯುತ್ತಮಿರೆ । ಶ್ರೀಚಾಳುಕ್ಯವಿಕ್ರಮಕಾಲದ ೩೪ನೆಯ ವಿರೋಧಿಸಂವತ್ಸರದ ಮಾರ್ಗ್ಗಸಿರದಮಾವಾಸ್ಯೆ ಬ್ರಿಹಸ್ಪತಿವಾರ ಉತ್ತರಾಯಣಸಂಕ್ರಮಣ

ವ್ಯತೀಪಾತನಿಮಿತ್ತವಾಗಿ ಬಿಟ್ಟಧರ್ಮ । ಅತ್ತಿಗೇರಿಪನ್ನೆರಡರಬಳಿಯ ಬಾಡಂತೊಗರೆಯ ಉತ್ತರದಿಸಾಭಾಗದೆ ನೆಲಸಿಪ್ಪ ಮಾರ್ತ್ತಣ್ಡೇಸ್ವರ ದೇವಂಗೆ ದೇವದತ್ತಿಯಾಗಿ ಸಮಸ್ತಗುಣಸಂಪನ್ನಂ ಸುಜನಪ್ರಸನ್ನಂ ವಿಪ್ರಕುಳವಿಲಾಸಂ ಕೀರ್ತ್ತಿನಿವಾಸಂ ಶ್ರೀಮದರಸರ ಪೆರ್ಗ್ಗಡೆ ಉತ್ತಮ ಮೇಲೂರ ಅಳಿಯಾಣ್ಮನು ಅಲ್ಲಿಯ ಸಮಸ್ತಪ್ರಭುಗಳುಮಿದ್ದು ಆಚಾರ್ಯವಿಮಳ ಸಕ್ತಿಪಂಡಿತರ ಕಾಲಂಕರ್ಚ್ಚಿ ಧಾರಾಪೂರ್ವಕಂಮಾಡಿ ದೇವರ ನಿವೇದ್ಯಕ್ಕೆನನ್ದಾದೀವಿಗೆಗಂ ದೇವರಮುನ ಣ ಪಡಿಯಕೆಱೆಯ ಮೊತ್ತಮೊದಲೇರಿಯಲು ಬಿಟ್ಟಕೊಳಗದ್ದೆ *   * ಇನ್ತೀಧರ್ಮವುಂ ಪ್ರತಿಪಾಳಿಸಿದವರ್ಗ್ಗೆ ವಾರಣಾಸಿ ಕುರುಕ್ಷೇತ್ರ ಪ್ರಯಾಗೆಯಲು ಸಾಸಿರ್ವ್ವರು ಬ್ರಾಹ್ಮಣಂಗೆ ಭೋಜನಮಂ ಮಾಡಿ ಸಹಸ್ರಕವಿಲೆಯ ಮುಭಯಮುಖಿಗೊಟ್ಟ ಫಳಮಕ್ಕು । ಇನ್ತೀಧರ್ಮವನಳಿದವರು ವಾರಣಾಸಿ ಪ್ರಯಾಗೆ ಕುರುಕ್ಷೇತ್ರದಲು ಸಾಸಿರಬ್ರಾಹ್ಮಣರುಮ ಸಾಸಿರಕವಿಲೆಯುಮನಳಿದ ಮಹಾಪಾತಕನಕ್ಕು.

ಈ ಶಾಸನದಶೈಲಿಯು ಪ್ರೌಢವಾಗಿರುವುದು ಕೊನೆಯ ಪಂಕ್ತಿಯ ಕೊನೆಯ ಪದವು ಮಹಾಪಾತಕರಕ್ಕು ಎಂದಿರಬೇಕು ಗಂಗರಾಜರ ಕಾಲದ ಶಾಸನಗಳೊಡನೆ ಇದನ್ನು ಹೋಲಿಸಿನೋಡಿದರೆ ಅನೇಕಭೇದಗಳು ಕಾಣಬರುತ್ತವೆಯಲ್ಲವೆ?

ಚಾಳುಕ್ಯರ ಕಾಲ.

ರಾಷ್ಟ್ರಕೂಟ ರಾಜರ ಪ್ರಾಬಲ್ಯವು ಕ್ರಿ. ಶ. ೧೦ನೆಯ ಶತಮಾನದ ಅಂತ್ಯದವರೆಗೂ ಇತ್ತು. ಆಮೇಲೆ ಚಾಳುಕ್ಯರ ಪ್ರಾಬಲ್ಯವು ಮರಳಿ ಸ್ಥಾಪಿತವಾಯಿತು. ಈ ಚಾಳುಕ್ಯರಾಜರ ಕಾಲದಲ್ಲಿ ಕನ್ನಡವು ಬಹಳವಾಗಿ ಅಭಿವೃದ್ಧಿಗೆ ಬಂತು. ಚಾಳುಕ್ಯ ತೈಲಪನೂ (೯೭೩-೯೯೭) ಇಮ್ಮಡಿ ವಿಕ್ರಮಾದಿತ್ಯನೂ (೧೦೭೬-೧೧೨೬) ಬಲು ಪ್ರಸಿದ್ಧರಾಗಿದ್ದರು. ತ್ರೈಲೋಕ್ಯಮಲ್ಲನ ಕಾಲದಲ್ಲಿ (೧೧೫೦-೧೧೬೨) ಕಾಲಚುರ್‍ಯ ವಂಶದ ಬಿಜ್ಜಳನು ಚಾಳುಕ್ಯ ಸಾಮ್ರಾಜ್ಯವನ್ನು ಆಕ್ರಮಿಸಿಕೊಂಡನು. ಚಾಳುಕ್ಯ ಸಾಮ್ರಾಜ್ಯದ ಕಾಲದ ಮಹಾಮಹಾ ಕನ್ನಡ ಕವಿಗಳನ್ನೂ ಅವರ ಬಿರುದುಗಳನ್ನೂ ಗ್ರಂಥಗಳನ್ನೂ ಜ್ಞಾಪಕದಲ್ಲಿಡುವುದು. ಅವಶ್ಯಕವಾಗಿದೆ. ಆ ಮಹಾ ಕವಿಗಳಾರಾರೆಂದರೆ—

(1) ಪೊನ್ನ-ಸುಮಾರು ೯೫೦.

ಈತನಿಗೆ ಕವಿಚಕ್ರವರ್ತಿ, ಉಭಯ ಕವಿಚಕ್ರವರ್ತಿ, ಸರ್ವದೇವ ಕವೀಂದ್ರ, ಸೌಜನ್ಯಕಂದಾಂಕುರ ಎಂಬ ಬಿರುದುಗಳಿದ್ದುವು. ಈತನು ಶಾಂತಿಪುರಾಣವನ್ನೂ ಜಿನಾಕ್ಷರಮಾಲೆಯನ್ನೂ ಬರೆದನು. ಈತನಿಗೆ ಸವಣ ಎಂಬ ಹೆಸರೂ ಇತ್ತು.

ಇದಿರ್ಗೆ ಬರೆ ಪೊನ್ನಿಗಂ ಕಿಡ ।
ಸದಿರಂ ಕವಿ ಗಮಕಿ ವಾದಿ ವಾಗ್ಮಿಗಳ ಕವಿ ॥
ತ್ವದ ಗಮಕಿತ್ವದ ವಾದಿ ।
ತ್ವದ ವಾಗ್ಮಿತ್ವದ ಪೊಡರ್ಪುಮಂ ದರ್ಪಮುಮಂ ॥

ಎಂದು ಹೇಳಿಕೊಂಡಿದಾನೆ.

(೨) ಮೊದಲನೆಯ ನಾಗವರ್ಮ-ಸುಮಾರು ೯೯೦.

ಈತನಿಗೆ ಕವಿರಾಜಹಂಸ, ಬುಧಾಬ್ಜವನ ಕಳಹಂಸ, ಕಂದಕಂದರ್ಪ, ನೆಗಟ್ಟೆಗೋಜ ಎಂಬ ಬಿರುದುಗಳಿದ್ದುವು.

ರಚಿತ ಪದ ಪ್ರಸನ್ನ ಪರಿಪೂರ್ಣ ರಸಾವಹ ಮರ್ಥಯುಕ್ತ ಮಾ ।
ಗುಚಿತ ಪುರಾಣ ಮಾರ್ಗ ಪದ ಪದ್ಧತಿ ಬಂಧುರ ಬಂಧಮೊಂದಿನಂ ॥
ರಚಿಯಿಸೆ ವಾಚ್ಯವಾಚಕ ವಿಶೇಷ್ಯ ವಿಶೇಷಣ ಲಕ್ಷ್ಯ ಲಕ್ಷಣ ।
ಪ್ರಚುರತೆ ಕಾಳಿದಾಸನುಮ ನೇಳಿಸಿತೀ ಕವಿರಾಜ ಹಂಸನಾ ॥

ಎಂದು ಹೇಳಿಕೊಂಡಿದಾನೆ. ಈತನು ಕರ್ಣಾಟಕ ಛಂದೋಂಬುಧಿಯನ್ನು ಕರ್ಣಾಟಕ ಕಾದಂಬರಿಯನ್ನೂ ಬರದಿದಾನೆ.

(೩) ರನ್ನ-ಸುಮಾರು ೯೯೩

ಈತನಿಗೆ ಕವಿರತ್ನ, ಅಭಿನವ ಕವಿಚಕ್ರವರ್ತಿ, ಕವಿಕುಂಜರಾಂಕುಶ, ಕವಿಚಕ್ರವರ್ತಿ, ಉಭಯಕವಿ ಎಂಬ ಬಿರುದುಗಳಿದ್ದುವು.

ರಸಮಂ ಭಾವಮುಮಂ ಕಾ ।
ಳಸಮಂ ಕುಣಿಕೆ ಯುಮನರಿದು ಕವಿಮಾರ್ಗದೊಳಂ ॥
ಪೊಸದೇಸೆಯ ನುಡಿಗಳೊಳಂ ।
ಪೊಸಯಿಪ ಬಲ್ಮೆಗೆ ಚತುರ್ಮುಖಂ ಕವಿರತ್ನಂ ॥

ಎಂದು ಹೇಳಿಕೊಂಡಿದ್ದಾನೆ. ಈತನು ಅಜಿತಪುರಾಣವನ್ನೂ ಸಾಹಸ ಭೀಮ ವಿಜಯವನ್ನೂ ಬರೆದಿದಾನೆ

ಸಾಹಸ ಭೀಮವಿಜಯದ ಬಂಧವು ಸೊಗಸಾಗಿದೆ. ಕನ್ನಡಿಗರೆಲ್ಲರೂ ಇದನ್ನು ಓದಬಹುದಾಗಿದೆ.

(೧) ಮೊದಲನೆಯ ಗುಣವರ್ಮ-ಸುಮಾರು ೧೦೫೦.

ಗುಣವರ್ಮಂ ಸತ್ಕವಿತಾ ।
ಗುಣಮುಂ ಭವ್ಯತ್ವಗುಣಮು ಮಾತ್ಮದೊಳೊಂದಿರೆ ॥
ಕ್ಷಣಮೆನೆ ಮೆರೆದಂ ಪೆಸರಿಂ ।
ಪ್ರಣೂತಮೆನೆ ಪೇಳ್ದ ನೇಮಿನಾಥಾಸ್ಪದಮುಮಂ ॥

ಎಂದು ವಿಶ್ವಾರ್ಯ ಪಂಡಿತನು (೧೨೦೫) ಈತನನ್ನು ಕುರಿತು ಹೇಳುತ್ತಾನೆ. ಈತನು ಲಕ್ಷಣ ಗ್ರಂಥಕಾರನಾಗಿಯೂ ಇದ್ದಂತೆ ತೋರುತ್ತದೆ.

(5) ಚಂದ್ರರಾಜ-ಸುಮಾರು ೧೦೭೦

ಈತನಿಗೆ ಶ್ರೀಕವಿತಾಮುಖಮಾರ್ಗವ, ಪ್ರತ್ಯಕ್ಷಕಂದರ್ಪ, ಅಬ್ಜಾನನ ಚಂದ್ರ ಎಂಬ ಬಿರುದುಗಳಿದ್ದುವು.

ಸಕಲ ವ್ಯಾಕರಣಾರ್ಥಶಾಸ್ತ್ರ ಗಣಿತಾಲಂಕಾರ ಸತ್ಕಾವ್ಯ ನಾ ।
ಟಕ ವಾತ್ಸ್ಯಾಯನ ನೃತ್ತ ಗೀತ ಹಯಶಾಸ್ತ್ರಾದ್ವೈತ ಗಾಂಧರ್ವ ತಾ॥
ರ್ಕಕವೀಂದ್ರಾಗಮ ವೈದ್ಯ ವಾದ್ಯ ಶಕುನೋದ್ಯದ್ಧ್ಯ ವಿದ್ಯಾಕದಂ ।
ಬಕಮಂ ಚಂದ್ರ ಕವೀಂದ್ರ ನೋರ್ವನೆ ಬಲ್ಲಂ ಪೆಱರ್ ಬಲ್ಲರೇ ॥

ಎಂದು ಹೇಳಿಕೊಂಡಿದಾನೆ. ಈತನು ಮದನತಿಲಕವೆಂಬ ಗ್ರಂಥವನ್ನು ಬರೆದಿದ್ದಾನೆ. ಈತನ ಪಾಂಡಿತ್ಯವು ಅದ್ಭುತವಾದುದು.

(6) ನಾಗಚಂದ್ರ-ಸುಮಾರು ೧೧೦೫.

ಈತನಿಗೆ ಅಭಿನವಪಂಪ, ಭಾರತೀಕರ್ಣಪೂರ, ಕವಿತಾಮನೋಹರ, ಸಾಹಿತ್ಯವಿದ್ಯಾಧರ, ಚತುರ ಕವಿಜನಾಸ್ಥಾನ ರತ್ನಪ್ರದೀಪ, ಸಾಹಿತ್ಯ ಸರ್ವಜ್ಞ, ಸೂಕ್ತಿಮುಕ್ತಾವತಂಸ ಎಂಬ ಬಿರುದುಗಳಿದ್ದುವು.

ಬಗೆ ಚೇತೋಬಂಧು ಬಂಧಂ ಶ್ರವಣ ಸಹಚರಂ ಕಾಂತಿ ಕಾಂತಾಕಟಾಕ್ಷಾ।
ನುಗ ಮರ್ಥವ್ಯಕ್ತಿ ವಾಣೀಮಣಿಮಯ ಮುಕುರಂ ಶ್ಲಿಷ್ಟಮಕ್ಲಿಷ್ಟಮರ್ಥ್ಯಂ॥
ಸುಗಮಂ ಭಾವಂ ಪ್ರಸನ್ನಂ ರಸಮನವಧಿ ಮಾಧುರ್ಯ ಮಾಶ್ಚರ್ಯವೆಂದೀ।
ಜಗಮೆಲ್ಲಂ ಮೆಚ್ಚೆ ಪೇಟ್ದಂ ಚತುರಕವಿ ಜನಾಸ್ಥಾನ ರತ್ನಪ್ರದೀಪಂ ॥

ಎಂದು ಹೇಳಿಕೊಂಡಿದ್ದಾನೆ. ಈತನು ರಾಮಚಂದ್ರ ಚರಿತ ಪುರಾಣವನ್ನೂ ಮಲ್ಲಿನಾಥ ಪುರಾಣವನ್ನೂ ಬರೆದನು

(7) ನಯಸೇನ-ಸುಮಾರು ೧೧೧೨.

ಈತನಿಗೆ ಸುಕವಿನಿಕರ ಪಿಕಮಾಕಂದ, ಸುಕವಿಜನ ಮನಃ ಪದ್ಮಿನೀರಾಜಹಂಸ, ಎಂಬ ಬಿರುದುಗಳಿದ್ದುವು.

ಮಾನಿತ ಶೀಲನಿಧಾನ ನ ।
ನೂನ ಗುಣಂ ಸಕಳ ಭವ್ಯಜನ ಬುಧಜನ ಚಿ ॥
ತ್ತಾನಂದ ಕರಂ ಕೇಳ್ ನಯ ।
ಸೇನ ಬುಧಂ ಸುಕವಿನಿಕರ ಪಿಕಮಾಕಂದಂ ॥

ಎಂದು ಹೇಳಿಕೊಂಡಿದಾನೆ. ಈತನು ಧರ್ಮಾಮೃತವೆಂಬ ಗ್ರಂಥವನು ಬರೆದಿದಾನೆ.

(8) ಕರ್ಣಪಾರ್ಯ—ಸುಮಾರು ೧೧೪೦

ಈತನಿಗೆ ಪರಮಜಿನಮತಕ್ಷೀರವಾರಾಶಿಚಂದ್ರ, ಭವ್ಯವನಜವನ ಮಾರ್ತಾಂಡ,

ಸಹಜಕವಿತಾರಸೋದಯ ಎಂಬ ಬಿರುದುಗಳಿದ್ದುವು. ಈತನು ನೇಮಿನಾಥ ಪುರಾಣವನ್ನು ಬರೆದಿದಾನೆ. ಈ ಪುರಾಣದಲ್ಲಿ ಕೃಷ್ಣಾವತಾರದ ಕಥೆಯೂ, ಪಾಂಡವರ ಕಥೆಯೂ, ಭಾರತಯುದ್ಧದ ಕಥೆಯೂ ಹೇಳಿವೆ.

ಸಂದಸುವರ್ಣವೊಪ್ಪೆ ಮೃದುರೇಖೆಯನಾಂತ ಪದಪ್ರಯೋಗದಿಂ।
ಸೌಂದರಮಪ್ಪ ಸದ್ವಚನಹೃದ್ಯತೆಯಿಂ ಪುದಿದರ್ಥದೃಷ್ಟಿಯಿಂ॥
ದೊಂದಿ ಸುಪುಣ್ಯಕಾಮಿನಿಯ ಮಾಟಿಕ್ಕೆಯಿನೆಯ್ದೆ ವಿದಗ್ಧಕೋಟಿಗಾ।
ನಂದಮನಪ್ಪುಕೆಯ್ವುದೊಡೆ ಪೇಟ್ ಕೃತಿ ಸತ್ಕೃತಿಯೋ ನಿರಂತರಂ॥

ಎಂದು ಹೇಳಿಕೊಂಡಿದಾನೆ. ಈತನು ಮಾಳತೀ ಮಾಧವ ಮತ್ತು ವೀರೇಶಚರಿತ ಎಂಬ ಗ್ರಂಥಗಳನ್ನು ಬರೆದಿದಾನೆ.

(9) ಇಮ್ಮಡಿ ನಾಗವರ್ಮ—ಸುಮಾರು ೧೧೪೫.

ಈತನಿಗೆ ಅಭಿನವವರ್ಮಶರ್ಮ, ಕವಿಕರ್ಣಪೂರ, ಕವಿತಾ ಗುಣೋದಯ ಎಂಬ ಬಿರುದುಗಳಿದ್ದುವು ಈತನಿಗೆ ನಾಕಿಗ ಎಂಬ ಹೆಸರೂ ಇತ್ತು.

ಶ್ರುತದೇವೀಮುಕರಂದಕಲ್ಪಲಪನಂ ವಾಕ್ಛ್ರೀನಿವಾಸಾಂಬುಜಾ।
ಯತವಕ್ತ್ರಂ ರಸಭಾವಭಾಸುರಸಮುದ್ಯದ್ಭಾರತೀನರ್ತನೋ॥
ಚಿತರಂಗಪ್ರತಿಮಾನನಂ ಪ್ರವಿಲಸದ್ವಾಕ್ಸುಂದರೀ ಕುಂಕುಮಾಂ।
ಕಿತಕೇಳೀಭವನಾಜಿರೋಪಮಮುಖಂ ಭೂಭಾಗದೊಳ್‌ನಾಕಿಗಂ॥

ಎಂದು ಹೇಳಿಕೊಂಡಿದಾನೆ ಈತನು ಕಾವ್ಯಾವಲೋಕನ, ಕರ್ಣಾಟಭಾಷಾಭೂಷಣ, ವಸ್ತುಕೋಶ ಎಂಬ ಗ್ರಂಥಗಳನು ಬರೆದಿರುತ್ತಾನೆ

(10) ಉದಯಾದಿತ್ಯ—ಸುಮಾರು ೧೧೫೦.

ಈತನಿಗೆ ಕವಿರತ್ನಶೇಖರ, ಸಾಹಿತ್ಯವಿದ್ಯಾಧರ, ರಾಜಸುಕವಿ ರತ್ನಾಭರಣ, ಕವಿರಾಜಶೇಖರ, ಸಾಹಿತ್ಯರತ್ನಾಕರ ಎಂಬ ಬಿರುದುಗಳಿದ್ದುವು ಈತನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದಂತೆ ತೋರುತ್ತದೆ. ಈತನು ಉದಯಾದಿತ್ಯಾಲಂಕಾರವನು ಬರೆದಿರುವನು.

೬ ಉತ್ತರ ನಾಡಿನ ಕನ್ನಡ.

ಹಿಂದೆ ೪ನೆಯ ಅಂಶದಲ್ಲಿ ನಾವು ಉದ್ಧರಿಸಿ ಬರೆದಿರುವ ಪದ್ಯಗಳಿಂದ ಉತ್ತರಮಾರ್ಗವಿರುವ ಸಂಗತಿಯೊಂದು ಹೊರಪಡುತ್ತದೆ. ನೃಪತುಂಗ ಮೊದಲಾದ ಲಾಕ್ಷಣಿಕರು ಈ ಸಂಗತಿಯನ್ನು ಒಪ್ಪಿಕೊಂಡಿರುತ್ತಾರೆ. ದಕ್ಷಿಣೋತ್ತರ ಮಾರ್ಗಗಳನ್ನು ವಿಭಾಗಿಸಿ ಪ್ರತ್ಯೇಕಿಸುವ ಮೇರೆ ಯಾವುದೋ ಅದನ್ನು ಯಾರೂ ನಿರ್ದೇಶಿಸಿಲ್ಲ. ವ್ಯಾಕರಣ ಪ್ರಕ್ರಿಯೆಗಳಲ್ಲಿ ದಕ್ಷಿಣೋತ್ತರಮಾರ್ಗಗಳಿಗೆ ಇರುವ ಭೇದಗಳನ್ನೂ ನಿರ್ಧರಿಸಿ ಹೇಳಿಲ್ಲ. ದಕ್ಷಿಣೋತ್ತರ ಮಾರ್ಗಗಳುಂಟಾದುದಕ್ಕೆ ಕಾರಣವನ್ನು

ಯಾರೂ ತಿಳಿಸಿಲ್ಲ. ಹೀಗಿರುವುದರಿಂದ ಈ ವಿಷಯಗಳನ್ನು ಸಾಧ್ಯವಾಗುವಷ್ಟು ಮಟ್ಟಿಗೆ ನಾವು ವಿಚಾರಮಾಡುವುದು ಆವಶ್ಯಕವಾಗಿದೆ.

ಕಾವೇರಿಯಿಂದಮಾಗೋದಾವರಿವರಮಿರ್ಪ್ಪ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ ಎಂದು ಹೇಳಿದುದರಿಂದ ದಕ್ಷಿಣೋತ್ತರಮೇರೆಗಳು ಗೊತ್ತಾಗುವುವು. ಪೂರ್ವ ಪಶ್ಚಿಮಮೇರೆಗಳು ಗೊತ್ತಾಗುವುದಿಲ್ಲ. ನಾವು ಹಿಂದೆ ೩೪೯ನೆಯ ಪುಟದಲ್ಲಿ ನಿರ್ದೇಶಿಸಿರುವ ದ್ರಾವಿಡಭಾಷೆಗಳ ಮೇರೆಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟಿರಬೇಕು.

ದಕ್ಷಿಣದೇಶದ ಚರಿತ್ರೆಯನ್ನು ಪರಿಶೀಲಿಸುವಲ್ಲಿ ನಾವು ನೀಲಗಿರಿಯಿಂದ ಮಂಜೇರಾ ಗೋದಾವರೀ ಸಂಗಮಸ್ಥಾನಕ್ಕೆಳೆದಿರುವ ಗೆರೆಯ ಪೂರ್ವಕ್ಕಿರುವ ಕೋಲಾರ ಕಡಪ, ಕರ್ನೂಲ್, ಹೈದರಾಬಾದ್, ಬೆಜ್ವಾಡ, ರಾಜಮಹೇಂದ್ರ- ಇವುಗಳು ಬಹು ಪುರಾತನಕಾಲದಿಂದಲೂ ತೆಲುಗುರಾಜ್ಯವಾಗಿರುವುದು ಸ್ಪಷ್ಟಪಡುತ್ತದೆ ಈ ಗೆರೆಯ ಪಶ್ಚಿಮಕ್ಕಿರುವ ಮೈಸೂರು, ಬೆಂಗಳೂರು, ಹರಿಹರ, ಬಳ್ಳಾರಿ, ರಾಯಚೂರು, ಗುಲ್ಬರ್ಗ, ಬಿದರೆ ಮುಂತಾದುವು ಕನ್ನಡನಾಡುಗಳಾಗಿರುವುದೂ ಸ್ಪಷ್ಟಪಡುತ್ತದೆ. ತುಂಗಭದ್ರಾ ಕೃಷ್ಣಾನದಿಗಳ ಮಧ್ಯಪ್ರದೇಶವು ಕನ್ನಡದ ತಿರುಳೆಂದು ನೃಪತುಂಗನು ಹೇಳಿರುವುದರಿಂದ ಕೃಷ್ಣಾನದಿಗುತ್ತರದಲ್ಲಿರುವ ಗುಲ್ಬರ್ಗ ಕಲ್ಯಾಣ ಬಿದರೆ ಮುಂತಾದುವೇ ಉತ್ತರಮಾರ್ಗದ ನಾಡುಗಳಾಗಿರಬೇಕೆಂಬುದು ಸ್ಪಷ್ಟಪಡುತ್ತವೆ.

ಆಂಧ್ರರು ಗೋದಾವರೀ ಕೃಷ್ಣಾನದಿಗಳ ಪ್ರಾಂತಗಳಲ್ಲಿ, ಪಾಂಡ್ಯರು ಮಧುರೆಯಲ್ಲಿ, ಚೋಳರು ತಂಜಾವೂರಿನಲ್ಲಿ, ಕೇರಳರು ಪಶ್ಚಿಮಸಮುದ್ರತೀರದಲ್ಲಿ ಇರುವಂತೆ ರಾಮಾಯಣವು ತಿಳಿಸುತ್ತದೆ. ಆಂಧ್ರ ವಂಶೀಯರಾದ ಶಾತವಾಹನರ ಪ್ರಾಬಲ್ಯವು ಕ್ರಿ. ಪೂ. ೧೮೦ ರಲ್ಲಿ ಪ್ರಾರಂಭವಾಯಿತು ಕೃಷ್ಣಾನದೀ ತೀರದಲ್ಲಿದ್ದ ಧಾನ್ಯಕಟಕವನ್ನು ರಾಜಧಾನಿಯಾಗಿ ಮಾಡಿಕೊಂಡು ಆಂಧ್ರರು ಬಾಳಿದರು. ಇವರು ಬಹು ಪ್ರಸಿದ್ಧವಾದ ಅಮರಾವತೀಸ್ತೂಪವನ್ನು ಕಟ್ಟಿಸಿದರು. ಇವರ ಪ್ರಾಬಲ್ಯವು ತುಂಗಭದ್ರಾ ಕೃಷ್ಣಾನದಿಗಳವರೆಗೂ ಹಬ್ಬಿತ್ತು. ನಾಸಿಕದಲ್ಲಿರುವ ಒಂದು ಶಾಸನವು ಕ್ರಿ. ಶ. ೧೨೫ರಲ್ಲಿ ಆಂಧ್ರಗೌತಮೀಪುತ್ರನು ಕ್ಷತ್ರಪನಾದ ನಹಪಾಣನನ್ನು ಸೋಲಿಸಿದಂತೆ ತಿಳಿಸುತ್ತದೆ. ಕ್ಷತ್ರಪನಾದ ರುದ್ರದಾಮನೊಡನೆ ಆಂಧ್ರರು ಕ್ರಿ ಶ. ೧೫೦ರಲ್ಲಿ ಕದನವನ್ನೆಸಗಿದಂತೆ ತಿಳಿಯಬರುತ್ತದೆ ಆಂಧ್ರವಂಶೀಯರ ಶಾಖೆಯೊಂದು ವೈಜಯಂತಿ... ಪೈಠಾನದಲ್ಲಿ ರಾಜ್ಯಭಾರ ಮಾಡುತ್ತಿದ್ದಂತೆಯೂ ತಿಳಿಯಬರುತ್ತದೆ. ಕ್ರಿ. ಶ. ೪ ನೆಯ ಶತಮಾನದಲ್ಲಿ ಕಾಂಚೀಪುರವರಾಧೀಶ್ವರರಾದ ಪಲ್ಲವರ ಪ್ರಾಬಲ್ಯವು ಈ ಪ್ರಾಂತದಲ್ಲಿಯೂ ಹಬ್ಬಿದ್ದಂತೆ ಗೊತ್ತಾಗುತ್ತದೆ ಕ್ರಿ ಶ ೫ನೆಯ ಶತಮಾನದ ಅಂತ್ಯದಲ್ಲಿ ಬನವಾಸಿಯ ಕದಂಬರು ಪಲ್ಲವರ ಪ್ರಾಬಲ್ಯವನ್ನು ಹಾಳುಮಾಡಿದರು. ಕ್ರಿ. ಶ. ೬ನೆಯ ಶತಮಾನದ ಪ್ರಾರಂಭಕ್ಕೆ ಮುಂಚೆಯೇ ಚಾಳುಕ್ಯರು ಈ ಪ್ರಾಂತದಲ್ಲಿ ಪ್ರಬಲರಾದರು ಕೀರ್ತಿವರ್ಮನು (೫೬೬-೫೯೭) ಬಾದಾಮಿಯಲ್ಲಿರುವ ಪ್ರಸಿದ್ಧವಾದ ಗುಹಾದೇವಾಲಯಗಳನ್ನು ಕಟ್ಟಿಸಿ, ಬಾದಾಮಿಯನ್ನು ರಾಜಧಾನಿಯಾಗಿ ಮಾಡಿದನು ಇಮ್ಮಡಿ ಪುಲಿಕೇಶಿಯು (೬೦೯-೬೪೨) ಚಾಳುಕ್ಯರಾಜ್ಯವನ್ನು ಎಲ್ಲಾದಿಕ್ಕುಗಳಲ್ಲಿಯೂ ವಿಸ್ತರಿಸಿದನು. ಗೋದಾವರೀನದಿಗೆ ಉತ್ತರದಲ್ಲಿರುವ ಪಿಷ್ಟಪುರ ಅಥವಾ ಪಿಠಾಪುರವನ್ನು

ಗೆದ್ದನು ಈ ಮಹಾರಾಜನ ಕಾಲದಲ್ಲಿ ಚಾಳುಕ್ಯರ ಪೂರ್ವಶಾಖೆಯೊಂದುಂಟಾಯಿತು. ಪುಲಿಕೇಶಿಯು ಕೃಷ್ಣಾ ಗೋದಾವರೀ ನದಿಗಳ ಮುಖಗಳಲ್ಲಿರುವ ದೇಶವನ್ನು ಜಯಿಸಿ ಅದರ ಆಳಿಕೆಗೆ ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನನ್ನು ನೇಮಿಸಿದನು. ಈತನು ವೆಂಗಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಬಹುಕಾಲದವರೆಗೆ ರಾಜ್ಯಂಗೆಯ್ದನು ಕ್ರಿ ಶ. ೮ನೆಯ ಶತಮಾನದ ಮಧ್ಯಭಾಗದವರೆಗೂ ಚಾಳುಕ್ಯರ ಪ್ರಾಬಲ್ಯವಿತ್ತು. ಆಮೇಲೆ ರಾಷ್ಟ್ರಕೂಟದರಸರ ಪ್ರಾಬಲ್ಯವು ಪ್ರಾರಂಭವಾಯಿತು. ನೃಪತುಂಗನು (೮೧೫—೮೭೭) ಮಾನ್ಯಖೇಟ (ಮಲ್‌ಖೇದ್) ವನ್ನು ರಾಜಧಾನಿಯನ್ನಾಗಿ ಮಾಡಿದನು. ಕ್ರಿ ಶ ೧೦ನೆಯ ಶತಮಾನದ ಕೊನೆಯಕಾಲಕ್ಕೆ ಚಾಳುಕ್ಯರು ಮರಳಿ ಪ್ರಬಲರಾದರು ಕ್ರಿ ಶ. ೧೨ನೆಯ ಶತಮಾನದ ಮಧ್ಯಭಾಗದಲ್ಲಿ ಚಾಳುಕ್ಯರ ಪ್ರಾಬಲ್ಯವು ಹಾಳಾಗಿ, ಕಾಲಚುರ್ಯರ ಪ್ರಾಬಲ್ಯವು ಪ್ರಾರಂಭವಾಯಿತು. ಬಿಜ್ಜಳನ ಕಾಲದಲ್ಲಿ ವೀರಶೈವಮತವು ಸ್ಥಾಪಿತವಾಗಿ, ಉತ್ತರಮಾರ್ಗದ ಕನ್ನಡದಲ್ಲಿ ವೀರಶೈವ ಗ್ರಂಥಗಳನೇಕಗಳು ರಚಿತವಾದುವು

ಈ ಉತ್ತರನಾಡಿನ ವಿದ್ಯಮಾನಗಳನ್ನು ಪರೀಕ್ಷಿಸಿ ನೋಡೋಣ ಈ ನಾಡಿನಲ್ಲಿ ತಮಿಳುಪ್ರಜೆಯು ಯಾವಾಗಲೂ ಪ್ರಬಲವಾಗಿರಲಿಲ್ಲ, ಮತ್ತು ತಮಿಳುಭಾಷೆಯ ಪ್ರಾಬಲ್ಯವು ಹೆಚ್ಚಿರಲಿಲ್ಲ. ಇದೊಂದು ದೊಡ್ಡವಿಷಯವಾಗಿದೆ ತಮಿಳಿನ ಪರುಷ ಸರಳೋಚ್ಚಾರಣೆಯ ವಿಧಿಯು ಇಲ್ಲಿ ಪ್ರಚುರವಾಗಲಿಲ್ಲ ನಡುವಣನಾಡಿನಲ್ಲಿದ್ದಂತೆ ಇಲ್ಲಿಯೂ ಮಹಾರಾಷ್ಟ್ರೀಪ್ರಾಕೃತದ ಪ್ರಾಬಲ್ಯವು ಹೆಚ್ಚಾಗಿತ್ತು, ಏಕೆಂದರೆ ಈ ನಾಡುಗಳ ಪಶ್ಚಿಮಭಾಗದಲ್ಲಿ ಮಹಾರಾಷ್ಟ್ರದೇಶವಿರುವದು, ಮತ್ತು ಪ್ರೈರಾನ್ ಎಂಬ ಪಟ್ಟಣವು ಮಹಾರಾಷ್ಟ್ರೀಪ್ರಾಕೃತದಿಂದುದ್ಭವಿಸಿದ ಮಹಾರಟ್ಟೀಭಾಷೆಯ ತೌರೂರಾಗಿತ್ತು. ಗಂಗವಾಡಿಯಲ್ಲಿದ್ದ ತಮಿಳಿನ ಪ್ರಭಾವಕ್ಕಿಂತಲೂ ನಡುವಣನಾಡಿನಲ್ಲಿದ್ದ ಮಹಾರಾಷ್ಟ್ರೀಪ್ರಾಕೃತದ ಪ್ರಭಾವಕ್ಕಿಂತಲೂ ಅತಿಶಯವಾಗಿ ಈ ಉತ್ತರನಾಡಿನಲ್ಲಿ ತೆಲುಗಿನ ಪ್ರಾಬಲ್ಯದ ಪ್ರಭಾವವು ಮೆರೆಯಿತು. ಗಂಗವಾಡಿಯಲ್ಲಿ ತಮಿಳದೃಢಸಮ್ಮರ್ದನದಿಂದ ತಮಿಳಪದ್ಧತಿಗಳು ಕನ್ನಡಕ್ಕೆ ಸೇರಿಕೊಂಡಂತೆ, ಉತ್ತರನಾಡಿನಲ್ಲಿ ತೆಲುಗಿನ ಪದ್ಧತಿಗಳು ಕನ್ನಡಕ್ಕೆ ಸೇರಿಕೊಂಡು ಉತ್ತರನಾಡಿನ ಕನ್ನಡವು ಬೇರೆಯಾಯಿತು. ರಾಜರುಗಳ ಸಹಾಯವು ಈ ಉತ್ತರಮಾರ್ಗದ ಕನ್ನಡಕ್ಕೆ ದೊರೆಯದೆ ಇದ್ದುದರಿಂದ ಇದು ಮೂಲೆಗೆ ಬಿದ್ದಿತ್ತು.

ಕ್ರಿ. ಶ. ೧೨ ನೆಯ ಶತಮಾನದ ಮಧ್ಯಭಾಗದಲ್ಲಿ ವೀರಶೈವಮತವು ಬಸವನಿಂದ ಉದ್ಧಾರಿತವಾದಕೂಡಲೇ, ಆಮತವು ಪ್ರಸರಿಸಿದಹಾಗೆಲ್ಲಾ ಉತ್ತರಮಾರ್ಗದಲ್ಲಿ ರಚಿತವಾದ ವೀರಶೈವಗ್ರಂಥಗಳು ಇತರ ನಾಡುಗಳಲ್ಲಿ ಬಳಕೆಯಾಗುತ್ತಾಬಂದುವು. ಹೊಯ್ಸಳರಾಜರು ಜೈನಮತವನ್ನು ತ್ಯಜಿಸಿ ಶ್ರೀರಾಮಾನುಜಮತವನ್ನು ಅವಲಂಬಿಸಿದುದರಿಂದ ವೀರಶೈವಮತದ ಪ್ರಚಾರಕ್ಕೆ ಅನುಕೂಲವಾಯಿತು ಹೊಯ್ಸಳರಕಾಲಾನಂತರದಲ್ಲಿ ವಿಜಯನಗರಸಾಮ್ರಾಜ್ಯದ ಅರಸುಗಳು ಜೈನರಲ್ಲದುದರಿಂದ ವೀರಶೈವಮತದಪ್ರಚಾರಕ್ಕೆ ಅಡ್ಡಿಯಾಗಲಿಲ್ಲ. ವಿಜಯನಗರಸಾಮ್ರಾಜ್ಯವು ಹಾಳಾದಮೇಲೆ ಮೈಸೂರಿನಅರಸರು ತಾವೇಒಡೆಯರೆಂಬ ಹೆಸರನ್ನಿಟ್ಟುಕೊಂಡು ಕಾವೀಶಾಟಿಯ ಪತಾಕೆಯನು

ಇಟ್ಟುಕೊಂಡಿದ್ದುದರಿಂದ ವೀರಶೈವಮತವನ್ನು ಪ್ರೋತ್ಸಾಹಿಸುತ್ತ ಬಂದರು. ಈ ಕಾರಣಗಳದೆಸೆಯಿಂದ ಉತ್ತರಮಾರ್ಗದಕನ್ನಡವು ಕನ್ನಡನಾಡುಗಳಲ್ಲೆಲ್ಲಾ ದಕ್ಷಿಣಮಾರ್ಗದಭಾಷೆಯನ್ನು ಮೂಲೆಗೊತ್ತರಿಸಿ ಲೋಕವ್ಯವಹಾರದ ಭಾಷೆಯಾಗಿ ಶಾಶ್ವತವಾಗಿನಿಂತಿತು. ಈ ವಿಷಯಗಳು ಮುಂದಕ್ಕೆ ಈ ಚರಿತ್ರೆಯಲ್ಲಿ ಸ್ಪಷ್ಟಮಾಡಲ್ಪಡುವುವು.

ತೆಲುಗಿನ ಯಾವಯಾವ ವೈಲಕ್ಷಣ್ಯಗಳು ಕನ್ನಡಕ್ಕೆ ಸೇರಿ ಉತ್ತರಮಾರ್ಗದ ಕನ್ನಡವಾಯಿತೋ ಅವುಗಳನ್ನು ಜ್ಞಾಪಕದಲ್ಲಿಡಬೇಕು.

(a) ತೆಲುಗಿನಲ್ಲಿ ಱ ಕಾರವು ಇಲ್ಲ, ಉತ್ತರಮಾರ್ಗದ ಕನ್ನಡದಲ್ಲಿಯೂ ಱ ಕಾರವಿಲ್ಲ, ದಕ್ಷಿಣಮಾರ್ಗದ ಕನ್ನಡದಲ್ಲಿ ಱ ಕಾರವಿದೆ.

(b) ತೆಲುಗಿನಲ್ಲಿ ಧಾತುಗಳೂ ಇತರಪದಗಳೂ ಸ್ವರಾಂತವಾಗಿನಿಲ್ಲುತ್ತವೆ, ಉತ್ತರಮಾರ್ಗದ ಕನ್ನಡದಲ್ಲಿಯೂ ಎಲ್ಲಾಪದಗಳು ಸ್ವರಾಂತವಾಗಿವೆ

(c) ತೆಲುಗಿನಲ್ಲಿ ಅರ್ಧಮಾತ್ರೆಯ ಉ ಕಾರವಿಲ್ಲ, ಉತ್ತರಮಾರ್ಗದ ಕನ್ನಡದಲ್ಲಿಯೂ ಇಲ್ಲ.

(d) ಸಂಯುಕ್ತಾಕ್ಷರಗಳಲ್ಲಿ ತೆಲುಗಿನಲ್ಲಿ ಪೂರ್ವವರ್ಣಕ್ಕೆ ಪರಸವರ್ಣಾದೇಶವಾಗುತ್ತದೆ ; ಉತ್ತರಮಾರ್ಗದ ಕನ್ನಡದಲ್ಲಿಯೂ ಹೀಗೆಯೇ ಆಗುತ್ತದೆ.

(e) ತೆಲುಗಿನಲ್ಲಿ ಸುಶ್ರಾವ್ಯಸ್ವರವಿಧಿಯ ಪ್ರಾಬಲ್ಯವು ಹೆಚ್ಚು, ಉತ್ತರಮಾರ್ಗದ ಕನ್ನಡದಲ್ಲಿಯೂ ಇದರ ಪ್ರಾಬಲ್ಯವಿದೆ.

ಕರ್ನಾಟಕವ್ಯಾಕರಣೋಪನ್ಯಾಸ ಮಂಜರಿಯ ದ್ವಿತೀಯೋಪನ್ಯಾಸದಲ್ಲಿ ತೆಲುಗಿನ ಸಂಪರ್ಕದಿಂದ " ಹೊಸಗನ್ನಡವು " ಎಂದರೆ (ಉತ್ತರಮಾರ್ಗದ ಕನ್ನಡವು) ಹುಟ್ಟಿರುದನ್ನು ವಿಶದವಾಗಿ ಹೇಳಿರುತ್ತೇವೆ. ಆ ಉಪನ್ಯಾಸವನ್ನು ಓದುವುದು ಉತ್ತಮವಾಗಿದೆ.

ದಕ್ಷಿಣಮಾರ್ಗದ ಕನ್ನಡಕ್ಕೂ ಉತ್ತಮಾರ್ಗದ ಕನ್ನಡಕ್ಕೂ ಇರುವ ಮುಖ್ಯಭೇದಗಳಾವುವೆಂದರೆ-

(a) ದಕ್ಷಿಣಮಾರ್ಗದ ಬಿಂದು ಉತ್ತರಮಾರ್ಗದಲ್ಲಿ ಬಹಳವಾಗಿ ಲೋಪವಾಗುತ್ತದೆ, ಕೆಲವೆಡೆಗಳಲ್ಲಿ ನಕಾರಾದೇಶವಾಗುತ್ತದೆ, ವ್ಯಾಕರಣದ ತಂಟೆಗಳು ಹೆಚ್ಚುವ ಪಕ್ಷಕ್ಕೆ ಇದ್ದಂತೆಯೇ ಇರುತ್ತದೆ.

(b) ಉತ್ತರಮಾರ್ಗದಲ್ಲಿ ಸಕಲಪದಗಳೂ ಸ್ವರಾಂತವಾಗಿ ನಿಲ್ಲುವುವು. ಅಸ್ವರವಿಧಿಯು ಉತ್ತರಮಾರ್ಗದಲ್ಲಿಲ್ಲ. ಈ ವಿಷಯದಲ್ಲಿ ದಕ್ಷಿಣಮಾರ್ಗವು ತಮಿಳಿನ ಪದ್ಧತಿಯನ್ನು ಅನುಸರಿಸಿದೆ, ಉತ್ತರಮಾರ್ಗವು ತೆಲುಗಿನ ಪದ್ಧತಿಯನ್ನು ಅನುಸರಿಸಿದೆ.

(c) ದಕ್ಷಿಣಮಾರ್ಗದ ಮಾತುಗಳಲ್ಲಿ ಬರುವ ಸಂಯುಕ್ತಾಕ್ಷರಗಳು ಉತ್ತರಮಾರ್ಗದಲ್ಲಿ ಕೆಲವೆಡೆಗಳಲ್ಲಿ ವಿರಳವಾಗುವುವು, ಕೆಲವೆಡೆಗಳಲ್ಲಿ ಪೂರ್ವಾಕ್ಷರಕ್ಕೆ ಪರಸವರ್ಣಾದೇಶ ವಾಗುವುದು, ಮತ್ತೆ ಕೆಲವೆಡೆಗಳಲ್ಲಿ ಪೂರ್ವವರ್ಣವು ಲೋಪವಾಗುವುದು.

(d) ದಕ್ಷಿಣಮಾರ್ಗದ ಪದಗಳಲ್ಲಿರುವ ಪಕಾರಕ್ಕೆ ಉತ್ತರಮಾರ್ಗದಲ್ಲಿ ಹಕಾರವು ಬರುವುದಲ್ಲದೆ ಇನ್ನೂ ಕೆಲವೆಡೆಗಳಲ್ಲಿ ಬರುತ್ತದೆ. ಬಪ್ಪ, ತಪ್ಪ, ಇಪ್ಪ ಎಂಬುವು ಬಹ, ತಹ, ಇಹ ಎಂಬ ರೂಪವನ್ನು ಹೊಂದಿರುವುವು. ಪಕಾರಕ್ಕಾದೇಶವಾಗಿ ಬಂದ ವಕಾರಕ್ಕೆ ಬದಲಾಗಿ ಉತ್ತರಮಾರ್ಗದಲ್ಲಿ ಬಹುಳವಾಗಿ ಹ ಕಾರವನ್ನು ಪ್ರಯೋಗಿಸುತ್ತಾರೆ.

(e) ದಕ್ಷಿಣಮಾರ್ಗದಲ್ಲಿ ಸಮುಚ್ಚಯಾರ್ಥವನ್ನು ಹೇಳುವುದಕ್ಕೆ ಅಂ, ಉಂ, ಎಂಬುವಗಳನ್ನು ಪ್ರಯೋಗಿಸುವರು. ಉತ್ತರಮಾರ್ಗದಲ್ಲಿ ಊ ಉ ಎಂಬುದನ್ನು ಉಪಯೋಗಿಸುತ್ತಾರೆ ದ್ವಿತೀಯಾ ವಿಭಕ್ತಿಯಲ್ಲಿ ದಕ್ಷಿಣಮಾರ್ಗದಲ್ಲಿ ಸಮುಚ್ಚಯ ಪ್ರತ್ಯಯವನ್ನು ಪ್ರಕೃತಿಗೂ ವಿಭಕ್ತಿಗೂ ನಡುವೆ ಸೇರಿಸುವರು. ಉತ್ತರಮಾರ್ಗದಲ್ಲಿ ವಿಭಕ್ತಿಯ ಆಚೆಯೇ ಸೇರಿಸುತ್ತಾರೆ

(f) ಆಖ್ಯಾತ ಪ್ರಕರಣದ ಮುಖ್ಯ ಭೇದಗಳು

(1) ಉತ್ತರಮಾರ್ಗದ ಕವಿಗಳು ಬಹುಳವಾಗಿ ದಕ್ಷಿಣಮಾರ್ಗದ ರೂಪಕ್ಕೆ ಕೊನೆಯಲ್ಲಿ ಸ್ವರವನ್ನು ಸೇರಿಸಿ ಪ್ರಯೋಗಿಸುತ್ತಾರೆ

(2) ದಕ್ಷಿಣಮಾರ್ಗದಲ್ಲಿ ಪಕ್ಷಾರ್ಥವನ್ನು ತೋರಿಸುವ ದೊಡೆ ಎಂಬುದು ಉತ್ತರಮಾರ್ಗದಲ್ಲಿ ದಡೆ ಎಂದಾಗಿ, ಗದ್ಯಗ್ರಂಥಗಳಲ್ಲಿ ದರೆ ಎಂಬ ರೂಪದಲ್ಲಿ ನಿಂತಿದೆ.

(3) ದಕ್ಷಿಣಮಾರ್ಗದ ಒಳಂ, ಒಳರ್, ಒಳಯ್, ಒಳೆರ್, ಒಳೆನ್, ಒಳೆವು ಉಂಟು ಒಳವು—ಇವುಗಳಿಗೆಲ್ಲಾ ಉತ್ತರಮಾರ್ಗದಲ್ಲಿ ಉಂಟು ಎಂಬ ಒಂದೇ ರೂಪವಿದೆ.

ಉತ್ತರಮಾರ್ಗದ ಕನ್ನಡಕ್ಕೆಂದು ನಾವು ಕೊಡುವ ಉದಾಹರಣೆಗಳೆಲ್ಲವು ಕ್ರಿ ಶ ಸುಮಾರು ೧೧೦೦ಕ್ಕೆ ಸಂಬಂಧಪಟ್ಟಿವೆ. ಕ್ರಿ ಶ. ಸುಮಾರು ೧೧೪೫ ರಲ್ಲಿ ಜೈನ ಬ್ರಾಹ್ಮಣನಾದ ಇಮ್ಮಡಿನಾಗವರ್ಮನು ತನ್ನ ಕಾವ್ಯಾವಲೋಕನವನ್ನೂ ಕರ್ಣಾಟಭಾಷಾ ಭೂಷಣವೆಂಬ ವ್ಯಾಕರಣವನ್ನೂ ಬರೆದನು, ಇವುಗಳಲ್ಲಿ ಉತ್ತರಮಾರ್ಗದ ಪ್ರಯೋಗಗಳನ್ನು ಅವನು ಸಾಧುವೆಂದು ಸ್ವೀಕರಿಸಲಿಲ್ಲ. ನೃಪತುಂಗನಂತೆ ಇವನೂ ಉತ್ತರಮಾರ್ಗದ ಕನ್ನಡವನ್ನು ತಿರಸ್ಕರಿಸಿದನು. ಸಮಮಧುರ ನಿಬಿಡ ಕಾಂತ ಸುಕುಮಾರಾದಿ ದಶಭೇದಗಳನ್ನು ಸೋದಾಹರಣವಾಗಿ ವಿವರಿಸಿಕೊಂಡು ಬಂದು ನಾಗವರ್ಮನು ತನ್ನ ಕಾವ್ಯಾವಲೋಕನದಲ್ಲಿ॥

ಇವು ನಿಯತಂ ದಕ್ಷಿಣ ದೇ।
ಶವತೀ ಕವಿರಾಜಮಾರ್ಗದೊಳ್ ನೆಗಟ್ಟಿಂ ಮ ॥
ತ್ತವರ ವಿಪರ್ಯಯ ವೃತ್ತಿಯು ॥
ಬವಣಿಸುಗುಮುದೀಚ್ಯ ಮಾರ್ಗದೊಳ್ ಪ್ರಚುರತೆಯಿಂ ॥

ಎಂದು ಹೇಳಿರುತ್ತಾನೆ ಕ್ರಿ. ಶ ೧೧೬೦ಕ್ಕೆ ಹಿಂದೆ ಇದ್ದ ಉತ್ತರಮಾರ್ಗದ ಗ್ರಂಥಗಳು ವಾಚಕಮಂಡಲಿಯಲ್ಲಿ ಯಾರಲ್ಲಿಯಾದರೂ ಇದ್ದರೆ ಅವುಗಳನ್ನು ನಮಗೆ ದಯವಿಟ್ಟು ತಿಳಿಸಬೇಕೆಂದು ಬೇಡುತ್ತೇವೆ.

ಉತ್ತರಮಾರ್ಗದ ಪ್ರಯೋಗಗಳು

(1) ಬಸವನಪುಟ್ಟ ವಚನದಿಂದ—ಕಾಲ ಸುಮಾರು ೧೧೬೦.

ನರೆಕೆನ್ನೆಗೆ ತೆರೆಗಲ್ಲಕೆ ಶರೀರಗೂಡುವಗದ ಮುನ್ನ, ಹಲ್ಲುಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕಯ್ಯನೂರಿ ಕೋಲೂಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯುಮುಟ್ಟದ ಮುನ್ನ, ಪೂಜಿಸು ನಮ್ಮ ಕೂಡಲ ಸಂಗಮದೇವರಾ ॥

ಅರಗಿನ ಪುತ್ಥಳಿಯು ಸುರಿಯ ನಾಲಗೆಯೊಯ್ಯು ಸರಾತಾಡುವ ಸರಸಬೇಡ ಬೆಣ್ಣೆಯ ಬೆಸಕಂಗೆ ಕೆಂಡದುಂಡಿಗೆಯ ಮಾಡಿ ಕೆಳ್ಳವಾಡಿದರೆ ಹೋಹುದು ಕೂಡಲಸಂಗಮಯ್ಯನ ಶರಣರೊಡನೆ ಸರಸವಾಡಿದರೆ ಅದು ವಿರಸಕಾಣಿರಯ್ಯ ॥

ಉಳ್ಳವರು ಶಿವಾಲಯವ ಮಾಡಿಸುವರು ನಾನೇನ ಮಾಡುವೆ ಬಡವನಯ್ಯ । ಎನ್ನ ಕಾಲೇ ಕಂಭ ದೇಹವೇ ದೇಗುಲ ಶಿರ ಹೊನ್ನ ಕಳಸ ನೋಡಯ್ಯ। ಕೂಡಲಸಂಗಮದೇವಯ್ಯ ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವುಂಟೆ ? ॥

ಆಡಿಕಾಲುದಣಿಯದು ನೋಡಿಕಣ್ಣುದಣಿಯದು, ಮಾಡಿಕೈದಣಿಯದು ಹಾಡಿ ನಾಲಗೆದಣಿಯದು ಸೂಡಿತಲೆದಣಿಯದು ಬೇಡಿಮನದಣಿಯದು ಇನ್ನು ಏನಾನಿಮ್ಮ ಕೈಯಾರೆ ಪೂಜಿಸಿ ಭಜಿಸದೆ ಮನದಣಿಯಲೊಲ್ಲದು ಕೂಡಲ ಸಂಗಮದೇವಾ ನಿಮ್ಮುದರವ ಬಗಿದಾನು ಹೊಗುವ ಬರವೆನಗೆ

ಮಡಕೆಯ ದೈವವ ಮರದಲ್ಲಿಯ ದೈವವ ಬೀದಿಯಕಲ್ಲದೈವವ ಬಿಲ್ಲನಾರಿಯ ದೈವವ ಕಾಣಿದೈವಿಯ ಕೊಳಗವೆ ದೈವವ ಗಿಳಿಯ ದೈವವ ಕಾಣಿರಯ್ಯ, ದೈವ ದೈವವೆಂದು ಕಾಲಿಡಲಿಂಬಿಲ್ಲವ ದೇವನೊಬ್ಬನೆ ಕೂಡಲ ಸಂಗಮದೇವ ॥

ಜಾತಿವಿಡಿದು ಸೂತಕವನರಸುವರೆ, ಜ್ಯೋತಿವಿಡಿದು ಕತ್ತಲೆಯನರಸುವರೆ ಇದೇತಕೊ ಮರುಳು ಮಾನವ ಜಾತಿಯಲ್ಲಿ ಅಧಿಕವೆಂಬೆ ? ವಿಪ್ರಶತಕೋಟಿಯೊಳಿರ್ದಲ್ಲಿ ಫಲವೇನು ? ಭಕ್ತಶಿಖಾಮಣಿಯೆಂಬುದು ವಚನ ನಮ್ಮ ಕೂಡಲಸಂಗನ ಶರಣರ ಪರುಷವನಂಬು, ಕೆಡಬೇಡ ಮನುಜಾ !

(2) ಚೆನ್ನಬಸವನ ಮಂತ್ರಗೋಪ್ಯದಿಂದ (ಕಾಲ ಸುಮಾರು ೧೧೬೦)

ಮುಟ್ಟಿದಲ್ಲಿ ಮುಟ್ಟಲಿ ತೊಟ್ಟು ಬಿಟ್ಟ ಹಣ್ಣಿನಂತೆ ।
ಬಟ್ಟಬಯಲ ತುಟ್ಟತುದಿಯ ಮೆಟ್ಟಿನಿಂದನು ॥
ಸೃಷ್ಟಿಯಂತೆ ತನುಗುಣದಂಗ ಲಿಂಗದಾದಿಯಜಾಡು ।
ಹುಟ್ಟುಗೆಟ್ಟ ಬಟ್ಟೆಯನ್ನು ಮೆಟ್ಟಿನಿಂದನು ॥

ತನುಮನಧನವೆಂಬ ತ್ರಿವಿಧವನು ಮೂಱುಲಿಂಗ ।
ಧನವನಂಗೀಕರಿಸಿ ಅವಱೊಳರ್ಪಿಸುವನು ॥
ತನುಮುಟ್ಟಿ ಮನಮುಟ್ಟಿ ಧನಮುಟ್ಟಿ ಯರ್ಪಿಸುವ ।
ಅನುವನಱಿದಾತನೆ ತುರಿಯಕೊಪ್ಪುವನು ॥

(೩) ಮಹಾದೇವಿಯಕ್ಕನ ಸೃಷ್ಟಿಯವಚನದಿಂದ ಕಾಲ ಸುಮಾರು ೧೧೬೦

ಶಿವನೆ ತಾನೆ ಗುರುವಾಗಿ ಬಂದು ಮಹಾ ಘನಲಿಂಗವ ಸ್ವೀಕರಿಸಿಕೊಟ್ಟ ಪರಿಯೆಂತೆಂದೊಡೆ—ಆತ್ಮಗೂಡಿ ಪಂಚಭೂತಂಗಳನೆ ಷಡಂಗವೆಂದೆನಿಸಿ, ಆ ಲಿಂಗಕ್ಕೆ ಕಲೆಗಳನೆ ಷಡುಶಕ್ತಿಗಳೆನಿಸಿ, ಆ ಶಕ್ತಿಗಳಿಗೆ ಷಡ್ವಿಧ ಭಕ್ತಿಯನಳವಡಿಸಿ, ಆ ಭಕ್ತಿಗಳಿಗೆ ಭಾವ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳನೆ ಹಸ್ತಂಗಳೆಂದೆನಿಸಿ, ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ ಪಂಚಲಿಂಗಗಳನೆ ಷಡ್ವಿಧ ಲಿಂಗಗಳೆನಿಸಿ, ಆ ಲಿಂಗಗಳಿಗೆ ಷಡಕ್ಷರಿಯನೆ ಮಂತ್ರವೆಂದೆನಿಸಿ, ಆ ಮಂತ್ರಲಿಂಗಂಗಳಿಗೆ ಹೃದಯಗೂಡಿ, ಪಂಚೇಂದ್ರಿಯಗಳನೆ ಮುಖಂಗಳೆಂದೆನಿಸಿ, ಆ ಮುಖಂಗಳಿಗೆ ತನ್ಮಾತ್ರಂಗಳನೆ ದ್ರವ್ಯಪದಾರ್ಥಗಳೆಂದೆನಿಸಿ, ಆ ದ್ರವ್ಯಪದಾರ್ಥಂಗಳ ಆಯಾಯ ಮುಖದ ಲಿಂಗಗಳಲ್ಲಿ ನಿರಂತರ ಸಾವಧಾನದಿಂದ ಅರ್ಪಿತವಾಗಿ ಬೀಗಲೊಡನೆ ಅಂಗಸ್ಥಲಂಗಳಡಗಿ, ತ್ರಿವಿಧಲಿಂಗಾಂಗ ಸ್ಥಳಂಗಳುಂಬುದು ಕಾಯ ಗುರು ಪ್ರಾಣಲಿಂಗ ಜ್ಞಾನ ಜಂಗಮ ಗುರುವಿನಲ್ಲಿ ಶುದ್ಧ ಪ್ರಸಾದ ಲಿಂಗದಲ್ಲಿ ಸಿದ್ಧಪ್ರಸಾದ ಜಂಗಮದಲ್ಲಿ ಪ್ರಸಿದ್ಧವಾದ ಇಂತೀ ತ್ರಿವಿಧ ಪ್ರಸಾದ ಸಕಾರ್ಥವಾಗಿ ಮಹಾಘನ ಪರಿಪೂರ್ಣ ಪ್ರಸಾದವಳವಟ್ಟ ಶರಣಜ್ಞಾನಿಯಲ್ಲ ಅಜ್ಞಾನಿಯು ಮರವೆಯಲ್ಲ, ಶೂನ್ಯನಲ್ಲ, ನಿಶ್ಶೂನ್ಯನಲ್ಲ, ದ್ವೈತಿಯಲ್ಲ, ಅದ್ವೈತಿಯಲ್ಲ, ಇಂತೀ ಉಭಯಾತ್ಮಕ ತಾನೆಯಾಗಿ ಇಹುಕಾರಣ ಇವರ ಆಗು ಹೋಗು ಸಕಲ ಸಂಬಂಧವ ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರೇ ಬಲ್ಲರು

(೪) ಘಟ್ಟಿವಾಳಯ್ಯನ ಕಾಲಜ್ಞಾನದಿಂದ (ಕಾಲ ಸುಮಾರು ೧೧೬೦)

ಅತ್ತೆಯ ಮಾತ ಸೊಸೆ ಕೇಳಳಮ್ಮ ।
ಅತ್ತೆಯನೆ ಒತ್ತಿದು ಭಾಷೆಯಮ್ಮ ॥
ಪತಿವ್ರತವು ಕೆಟ್ಟು ಹೋದೀತಮ್ಮ ।
ಇನ್ನು ಪತಿಯಮಾತನು ಸತ್ತೆಗೊಳ್ಳರಮ್ಮ ॥

ಮುಕ್ತಿಯೆಂಬುದು ಮುಳುಗಿ ಹೋದೀತಮ್ಮ ।
ವಿರಕ್ತಿಯೆಂಬುದು ನಿಲ್ಲಲಾರದಮ್ಮ ॥
ಸೂಕ್ತಿಯೆಂಬುದು ಸವೆದುಹೋದೀತಮ್ಮ ।
ತಮ್ಮನಿತ್ಯನೇಮವು ಅಮಂಗಲವಾದೀತಮ್ಮ ॥

(೫) ಅಂಬಿಗರ ಚೌಡಯ್ಯನ ವಚನದಿಂದ (ಕಾಲ ಸುಮಾರು ೧೧೬೦)

ಭೂತ ಹೊಡೆಯಿತ್ತೆಂದು ಬಾಯ್ಗೆ ಬಂದಂತೆ ಕಾಱಿಸದು ನುಡಿವಂತೆ ಹಲಬರು ಮಂತ್ರಿಸಿ, ಛೀ ಛೀ ಯೆಂದುಗುಳ, ಥೂ ಥೂ ಎಂದುಗುಳಿ ಬಱಿದು ಝಂಕಿಸಿ ಲಜ್ಜೆ

ಗೆಡಿಸಿಕೊಂಬ ಪಾತಕಕರ್ಮಿಗೇಕೋ ಶಿವಸ್ತೋತ್ರ ಶಿವಪೂಜೆಯ ಕುರುಹು ? ಬಾಯಿ ಹುಣ್ಣು ಹುಗುಳಿಂದು ನಾರಬೇರನರೆದು ಲೇಪಿಸಿ ಕೊಂಬವಂಗೇಕೋ ವಿಭೂತಿಯ ಧಾರಣ ? ಯಂತ್ರ ಮಂತ್ರ ಮಣಿ ಮದ್ದು ಕಟ್ಟಿಕೊಂಬವಂ ಗೇ ಕೋ ಸ್ಥಾನಸ್ಥಾನದ ರುದ್ರಾಕ್ಷಿ ? ವಾತಪಿತ್ತ ಶ್ಲೇಷ್ಮವೆಂಬ ತ್ರಿದೋಷಂಗಳು ಹುಟ್ಟುತ್ತಿಂದು ದೇಹಕ್ಕುಂಟಾದ ವ್ಯಾಧಿಯಿಂದು ನಾರು ಬೇರು ಮದ್ದು ಮೂಲಿಕೆ ಹಲವು ಹಡಿಕೆಗಳ ತರಿಸಿ, ವ್ರತತಪ್ಪಬಾರದೆಂದು ಪ್ರಸಾದವ ಮಾಡಿಸಿ ಕುಡಿಯ ಕಂಟಣೆಸಿ ಕರುಳು ಹೇಸಿ, ಒಯ್ ಎಂದು ಓಕರಿಸಿ ಬಳಲುತಿಪ್ಪ ದುರಾಚಾರಿಗೇಕೋ ಅಷ್ಟಪ್ರಸಾದವೆಂದು ಮಹಪ್ರಸಾದವೆಂದು ಸಲಿಸಿ ಅಱಿವೆಯಾಯಿತ್ತೆಂದು ಕಾಲ ಬರೆಯಿಸಕೊಂಬ ಕುಱಿಗಳಿಗೇಕೋ ತ್ರಿವಿಧಪ್ರಸಾದ ? ಮುನ್ನಾ ಗುರು ಕೊಟ್ಟತೀರ್ಥಪ್ರಸಾದವನೆ ಕೀಳುಮಾಡಿ ಲೋಕವ ಬೆರದ ವೈದ್ಯಕಾರನ ಮದ್ದನೆಮೆಲುಡುವ ವ್ರತಭ್ರಷ್ಟನಬಾಯಲ್ಲಿ ಮಣ್ಣ ಹೂಯ್ವದ ನಱಿಯಡೆ ಎಲ್ಲಕ್ಕೆಯು ಉತ್ತಮ ವ್ರತಶೀಲವಂ ತಾ ಲಿಂಗದಲ್ಲಿ ನಿಷ್ಠೆಯಿಲ್ಲ ಜಂಗಮದಲ್ಲಿ ಪ್ರೇಮವಿಲ್ಲ ಪಾದೋದಕಪ್ರಸಾದದಲ್ಲಿ ವಿಶ್ವಾಸವಿಲ್ಲ ಆಚಾರದಲ್ಲಿ ದೃಢವಿಲ್ಲ—ಇಂತೀ ಮೃತ್ಯುವಿನ ಬಾಯ ತುತ್ತಾಗುತಿಹ ವ್ರತವ ಹಿಡಿವಿರ್ದ ಸರಿಯೆಂತಾಯಿತ್ತೆಂದೊಡೆ ಒಕ್ಕುಳಕ್ಕೆಂಜಲ ಬೆಕ್ಕು ನಾಯಿನರಿ ತಿಂದಂತಾಯಿ ತೆಂದಾತನೆನ್ನೊಡೆಯ ನಮ್ಮ ಅಂಬಿಗರ ಚೌಡಯ್ಯನು

(6) ರಾಘವಾಂಕನ ಬಿಱುದುಗಳು (ಕಾಲ ಸುಮಾರು ೧೧೬೫)

ಮುಂತೆಸರಿಯಿಲ್ಲೆಂದು ಪೊಗಳ್ವವರು ಪೊರಮುಟ್ಟಿ ।
ಪಿಂತವನ ಕವಿತೆಯೇನೆಂದು ನಿಂದಿಸಿ ತಮ್ಮ ।
ತೂಂತುಕವಿತೆಯ ತೂಱಸುರ್ಚಿನೆಱಿದೂಱುಗರ ನಡುವೆ ನಿಜನಿಳಯದೊಳಗೆ॥
ಮೆಂತಣಂಗೊಂತು ಕಾಟ್ಟಿ ಡದೊಳ್ವ ಕೆಪಿಯಿದೆಮ ।
ಕೊಂತಮೂಗಿನ ಕತ್ತಿಯದಟಕವಿಸಿಕರಟ ।
ದಂತ ಹಂಪೆಯರಾಘವಾಂಕಪಂಡಿತನು ಭಯಕಂ ಶರಭ ಭೇರುಂಡನು ॥

ಪೆಱರೊಡವೆಯುಂ ಕೊಂಡು ಕೃತಿಯನೇಱದಭಾಷೆ ॥
ಪೆಱರಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ ।
ಪೆಱರದೈವವ ನುತಿಸದಿಹ ಭಾಷೆ ಪೆಱರಪೇದವನಿರೀಕ್ಷಿಸದಭಾಷೆ ॥
ಪೆಱರನಿಂದಿಸಿ ತನ್ನ ಹೊಗಳಿಕೊಳ್ಳದ ಭಾಷೆ ।
ಪೆಱರವಧುವಂಕಂಡು ಮನವೆಳಸದಿಹಭಾಷೆ ॥
ಪೆಱರವಸ್ತುವ ತೃಣಕೆಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು ॥

(7) ರಾಘವಾಂಕನ ಹರಿಶ್ಚಂದ್ರಕಾವ್ಯದ ಕಥಾಬೀಜ

ವಸುಧಾಧಿಪತಿ ಹರಿಶ್ಚಂದ್ರ ಘನಸತ್ಯನೆಂ ।
ದೊಸೆದು ವಾಸಿಷ್ಠನಿಂದ್ರಂಗೆನಲು ಕಾಶಿಕಂ ।
ಹುಸಿಮಾಡಿಪೆನೆಂದು ಭಾಷೆಯನಿತ್ತು ಧರೆಗೆ ಬಂದವನಿಪನ ಸತಿಸುತರನು ॥

ಅಸುವಂತ್ಯವೆನೆ ನಿಗ್ರಹಂಮಾಡಿಯೊಪ್ಪದಿರೆ ।
ಶಶಿಮೌಳಿ ಶ್ರೀವಿಶ್ವನಾಥ ಭೂಪಂಗೆ ಕರು ।
ಣಿಸಿ ಸಕಲಸಾಮ್ರಾಜ್ಯವಿಶ್ರಾಂತನಂ ಮೆಱೆದಕೃತಿ ಪುಣ್ಯದಾಕೃತಿಯಿದು ॥

(8) ರಾಘವಾಂಕನ ಸೋಮನಾಥಚರಿತೆಯಿಂದ.

ತೆಂಗುಗಳು

ಹಂಗಮುಗುಚುವೆನೆಂದು ಭೂಮಿ ಕೈನೀಡಿ ಮೇ ।
ಘಂಗಳಿಗೆ ಕೊಡುವಮೃತಕಲಶ ಸಂಕುಲವೊ ಗಗ ।
ನಾಂಗಣದೊಳುರೆ ಸುಳಿವ ವಿದ್ಯಾಧರಾಳಿಗೆ ವಸಂತನಿಟ್ಟ ಜವಟಿಗೆಯೊ ॥
ಜಂಗುಳಿಯೊ ಕಡಲ ಕಡೆವಂದು ಹುಟ್ಟಿದ ಸುಧಾ ।
ಧ್ವಂಗಳಂ ತಮತಮಗೆ ಕೊಂಡೊಯ್ಯುತಿರೆ ಭೂಲ ।
ತಾಂಗಿ ತೆಗೆದಿತ್ತ ರಸರತ್ನವೊ ಎನಿಸಿ ಪಣ್ತ ತೆಂಗೆಸೆದುವು ॥

ನಕ್ಷತ್ರಗಳು

ಕಡಲಸಿಡಿವನಿಯೊ ಮೇಘಾವಳಿಯ ತತ್ತಿಗಳೊ ।
ಪೊಡವಿಯೆಡೆಯನು ನೋಡ್ಪ ಗಗನರಂಧ್ರವೊ ಅಲುಗ ।
ಗುಡದಂತೆ ಕೀಲಿಸಿದ ವಜ್ರವೊಳೆಗಳೊ ನಭದಲತೆ ಹಬ್ಬಿಯೊಗೆದ ನನೆಯೋ ॥
ಕಡುಹಸಿದು ಮೆಂದು ಶಶಿಯುಲ್ಲಾ ಚಕೋರಕ್ಕೆ ।
ಕೊಡುವ ಸವಿದುತ್ತುಗಳೊ ಸಿಡಿವಸೀಮುತ್ತುಗಳೊ ।
ತಡೆಯದೆ ವಿಚಾರಿಸೆನೆ ತಾರಾಳಿಯೆಸೆದುವಾಜಗದ ಜನಮೆಱೆಯುತಿರಲು ॥

(9) ರಾಘವಾಂಕನ ಸಿದ್ಧರಾಮಪುರಾಣದಿಂದ.

ವಸಂತ

ಪೊಸವಾಗಿ ಮದವಾಱೆ ಮಾವಂಕುರಂದೋಱೆ ।
ಯಸುಕೆತಳಿರಂಪೇಱೆ ಲತೆಸನೆಗಳಂ ಸೇಱೆ ।
ಕುಸುಮ ರಜವಂತೂಱೆ ತುಂಬಿಸುತ್ತಂಪಾಱೆ ತಂಗಾಳಿತಂಪೇಱೆ ॥
ಸಸಿಗೆ ಕಳೆಯೇಱೆ ಕೋಕಿಲರವಂಪಾಱೆ ಕಾ ।
ಮಸರಂಗಳೂಱೆ ವಿರಹಿಗಳಬಾಯೂಱೆ ಮಾ ।
ಮಸಕದಿಂ ಬಂದನು ವಸಂತನು ವಿಯೋಗಿಹೃತ್ಸ್ವಾಂತನು ಸುಖಾಶ್ರಾಂತನು ।

ಮಳೆಗಾಲ

ಇನನೋಡೆ ನವಿಲಾಡೆ ವಿರಹಿಗಳುಕೂಡೆ ಭೂ ।
ಬನಹಾಡೆ ತೃಣಮೂಡೆ ಹಂಸೆಗಳುಬಾಡೆ ಕಪ ॥
ವನಸೊವಡುತೀಡೆ ಚಾದಗೆನೋಡೆ ಘನನಾಡೆ ಧರೆಗಂಬುಸೇಡೆ ಸಿಡಿಲು ॥
ದನಿಮಾಡೆ ಧರೆಕೂಡೆ ಬೆಳೆಗಳಂಸೂಡೆ ನೆಲೆ ।
ಯನು ನದಿಗಳೀಡಾಡೆ ಬರ್ಷಕಾಗಾಲವೊ ।
ಯ್ಯನೆಮೊಳೆತ್ತು ದನ್ನಿದೋಱೆ ಮಾಱೆ ಮೊಳಗಂ ಕೇಳೆ ತೋಱೆತ್ತು ದುರ್ದಿನವನು ॥

(10) ಕೆರೆಯ ಪದ್ಮರಸನ ದೀಕ್ಷಾಬೋಧೆಯಿಂದ (ಕಾಲ ಸು. ೧೧೬೫).

ಕುಲಮದನಿರಸನ

ಕುಲಮಂ ವಿಚಾರಿಪೊಡೆ ನೆಲೆಯಿಲ್ಲ ಫಲವಿಲ್ಲ ।
ನೆಲೆಯನರಿವೊಡೆ ಶುದ್ಧಹೊಲೆಯೈಸೆ ಕುಲವೆಲ್ಲ ।
ಕಾಯಕ್ಕೆ ಕುಲವೊ ಜೀವಕ್ಕೆ ಕುಲವೊ ಪೇಳು ।
ಈಯೆರಡರೊಳಗೆ ಇನ್ನಾವುದಕೆ ಕುಲ ಪೇಳು ।
ಕಾಯವಾವೊಡೆ ಶುದ್ಧಹೊಲೆಯಾಗಿ ಕುಲವಿಲ್ಲ ।
ವಾಯುವಹ ಜೀವ ನಿರವಯವಾಗಿ ಕುಲವಿಲ್ಲ ।
ತಂದೆತಾಯಿಗಳುಭಯ ಬಂದು ಸಂಪುಟದಿಂದ ।
ಬಂದೆನೆಂಬೊಂದು ಮದವೇಕೆ ನೀನುಡಿವಂದ ।
ಅಕ್ಕಟೀ ಕುಲವಿಡಿದು ಸತ್ಕುಲಕೆ ಹೋರುವವೆ ।
ದಕ್ಕಿದೊಡೆ ಶುದ್ಧಹೊಲೆಗಕ್ಕೆ ಮಾತಾಡುವವೆ ॥

೯. ಹೊಯ್ಸಳ ಸಾಮ್ರಾಜ್ಯದ ಕನ್ನಡ.

ಹೊಯ್ಸಳರು ಮೈಸೂರಿನವರು, ಇವರ ವಂಶವು ಸುಮಾರು ೨೦೦ ವರುಷಗಳವರೆಗೆ (೧೧೪೦-೧೩೪೦) ಮಹಾ ಪದವಿಯನ್ನು ಅನುಭವಿಸಿತು. ಇವರ ಆಳ್ತನವು ಕೃಷ್ಣಾನದಿಯವರೆಗೂ ಹಬ್ಬಿತ್ತು. ವಿಷ್ಣುವರ್ಧನನಿಗೆ (೧೧೧೧-೧೧೪೧) ತಳಕಾಡು ಗೊಂಡ ಎಂಬ ಬಿರುದು, ಇಮ್ಮಡಿ ವೀರ ಬಲ್ಲಾಳನಿಗೆ (೧೧೭೫-೧೨೨೦) ದಕ್ಷಿಣ ಚಕ್ರವರ್ತಿ ಎಂಬ ಬಿರುದು, ಇಮ್ಮಡಿ ನರಸಿಂಹನಿಗೆ (೧೨೨೦-೧೨೩೫) ಚೋಳ ರಾಜ್ಯ ಪ್ರತಿಷ್ಠಾಚಾರ್ಯ ಎಂಬ ಬಿರುದು ಇದ್ದುವು.

ಮುಂದೆ ಕೊಡುವ ಶಾಸನಗಳು ಹೊಯ್ಸಳರ ಸಾಮ್ರಾಜ್ಯ ಪದವಿಯನ್ನೂ ಕನ್ನಡದ ಉನ್ನತ ಸ್ಥಿತಿಯನ್ನೂ ತೋರಪಡಿಸುವುವು.

(1) ಮುಳವಳ್ಳಿಯ ೩೧. ಕಾಲ ಕ್ರಿ. ಶ. ೧೧೧೭ ವಿಷ್ಣುವರ್ಧನನ ಕಾಲ.

ಸ್ವಸ್ತಿ ॥ ಸಮಧಿಗತ ಪಂಚಮಹಾಶಬ್ದಂ ಮಹಾಮಂಡಲೇಶ್ವರಂ ದ್ವಾರಾವತೀಪುರವರಾಧೀಶ್ವರ ಯಾದವಕುಲಾಂಬರದ್ಯುಮಣಿ ಸಮ್ಯಕ್ತ್ವ ಚೂಡಾಮಣಿ ಮಲಪರೊಳ್ಗಂಡಾದ್ಯನೇಕ ನಾಮಾವಳೀ ಸಮಾಳಂಕೃತರಪ್ಪ ಶ್ರೀಮತ್ತ್ರಿಭುವನಮಲ್ಲ ತಳಕಾಡುಗೊಂಡ ಭುಜಬಳ ವೀರಗಂಗ ವಿಷ್ಣುವರ್ಧನಹೊಯ್ಸಳ ದೇವರು (ರ) ವಿಜಯರಾಜ್ಯ ಪ್ರವರ್ಧಮಾನ ಮಾಚಂದ್ರಾರ್ಕ ತಾರಂ ಸಲುತ್ತಿರೆ ತತ್ಪಾದಪದ್ಮೋಪಜೀವಿ ॥

ಜನತಾಧಾರ ನುದಾರ ನನ್ಯವನಿತಾದೂರಂ ವಚಃಸುಂದರೀ ।
ಘನವೃತ್ತಸ್ತನ ಹಾರನುಗ್ರ ರಣಧೀರಂ ಮಾರನೇನೆಂದಪೈ ॥

ಜನಕಂ ತಾನೆನೆ ಮಾಕಣಬ್ಬೆ ವಿಬುಧ ಪ್ರಖ್ಯಾತ ಧರ್ಮಪ್ರಿಯಾ ।
ಕ್ಕೆನಿಕಾಮಾತ್ತ ಚರಿತ್ರೆ ತಾಯೆನಲಿದೇನೇ ಚಂ ಮಹಾಧನ್ಯನೋ ॥

ಉತ್ತಮ ಗುಣತತಿ ವನಿತಾ ।
ವೃತ್ತಿಯುನೊಳಕೊಂಡೊಡೆ ಜಗಮೆಲ್ಲಂ ಕೈ ॥
ಮೆತ್ತುವಿನ ಮಮಳ ಗುಣ ಸಂ ।
ಪತ್ತಿಗೆ ಜಗದೊಳಗೆ ಪೋಚಿಕಬ್ಬೆಯೆ ನೋಂತಳ್ ॥

ಅನ್ತೆನಿಪ ಪೋಚಿರಾಜನ ಪೋಚಿಕಬ್ಬೆಯ ಪುತ್ರಂ ಶ್ರೀಮನ್ಮಹಾಪ್ರಧಾನಂ ದಂಡನಾಯಕ ದ್ರೋಹಘರಟ್ಟ ಗಂಗರಾಜ ಚೋಳನ ಸಾಮನ್ತ... ತಳಕಾಡ ಬೀಡಿನೊಳ್ ಪಡಿಯಿಪ್ಪಂತಿಮ್ಮ ಚೋಳಂ ಕೊಟ್ಟ ನಾಡಂ ಕೊಡದೆ ಕಾದಿಕೊಳ್ವೆನೆ ವಿಜಗೀಷು ವೃತ್ತಿಯಿಂದೆತ್ತಿ ಬಳ್ಳ(ಳ) ನೆರದುಂ ಸಾರ್ಚಿದಲ್ಲಿ ॥

ಇತ್ತಗ ಭೂಮಿಭಾಗದೊಳದನ್ಯರದೇಕೆ ಭವತ್ಪ್ರತಾಪ ಸಂ ।
ಪತ್ತಿಯ ವರ್ಣನಾವಿಧಿಗೆ ಗಂಗ ಚಮೂಪ ಜಿಗೀಷು ವೃತ್ತಿಯಿಂ ।
ದೆತ್ತಿದ ನಿನ್ನ ಕೈಯ್ಯುಸಿಸಿ ತಾಸಿಯ ತಾಮೊನೆ ಪನ್ನಚಾರನೆ ।

ತ್ತುತ್ತಿರೆ ಪೋಗಿ ಕಂಚಿ ಗುಹೆಯಿಪ್ಪಿನ ಮೋಡಿದದಾಮನೆಯ್ದನೆ ॥ ಪೊಂದೆಮೆಯ್ಯ್ಯಾಳೆಯ್ದಿ ನರಸಿಂಗವರ್ಮ್ಮಮೊದಲಾದ ಚೋಳನ ಸಾಮನ್ತರೆಲ್ಲರಂ ಬೆಂಕೊಂಡು ನಾಡಾದುದೆಲ್ಲಮನೇಕ ಚ್ಛತ್ರಂ ಮಾಡಿಕುಡೆ ಕೃತಜ್ಞಂ ವಿಷ್ಣುನೃಪತಿಮೆಚ್ಚಿದೆಂ ಬೇಡಿಕೊಳ್ಳೆನೆ-

ಅವನಿಪನೆನಗಿತ್ತಪನೆಂ ।
ದವರಿವರವೊಲುಳಿದವಸ್ತುವಂ ಬೇಡಮೆಭೂ ॥
ಭುವನಂ ಬಣ್ಣಿಸೆತಿಪ್ಪು ।
ರವೃತ್ತಿಯುಂ ಬೇಡಿದಂಜಿನಾರ್ಚನಲುಬ್ಧಂ ॥

ಅನ್ತು ಬೇಡಿಕೊಂಡ (ಡು) ಪಡೆದಾಗಾಜಲೂರು ನಾಡುಂಗೆಱೆಯೊಳಗಾದ ತಿಪ್ಪೂರವೃತ್ತಿಯುಂ ಶಕವರ್ಷ ೧೦೩೯ನೆಯ ಹೇಮಳಂಬಿ ಸಂವತ್ಸರ ದುತ್ತರಾಯಣ ಸಂಕ್ರಮಣದಂದು ತಮ್ಮ ಗುರುಗಳು ಶ್ರೀ ಮೂಲಸಂಘದ ಕಾಣೂರ್ಗಣದ ತಿಂತ್ರಿಣಿ ಕಗಚ್ಛದ ಶ್ರೀಮನ್ಮೇಘ ಚಂದ್ರ ಸಿದ್ಧಾಂತ ದೇವರಕಾಲಂಕ ಚ್ಚಿಧಾರಾಪೂರ್ಬ್ಬಕಂ ಮಾಡಿಬಿಟ್ಟದತ್ತಿ ॥

(2) ತಿರುಮಕೂಡಲು ನರಸೀಪುರದ ೧೦೬ ಕಾಲ 1180 ಇಮ್ಮಡಿವೀರಬಲ್ಲಾಳನ ಕಾಲ.

ಸ್ವಸ್ತಿ॥ ಸಮಧಿಗತ ಪಂಚಮಹಾ ಶಬ್ದಮಹಾ ಮಂಡಲೇಶ್ವರಂ, ದ್ವಾರಾವತೀಪುರವರಾಧೀಶ್ವರಂ, ವಾಸಂತಿಕಾದೇವಿ ಲಬ್ಧವರಪ್ರಸಾದ

ಮೃಗವಮದಾವೆಳೆದ ಶ್ರೀಮನ್ಮಹಾಮಂಡಲೇಶ್ವರಂ ತಳಕಾಡು ಗಂಗವಾಡಿ ನೊಳಂಬವಾಡಿ ಬನವಸೆ ಹಾನಂಗಲ್ಲುಗೊಂಡ, ಭುಜಬಳ ವೀರಗಂಗ, ಸನಿವಾರಸಿದ್ಧಿ, ಗಿರಿದುರ್ಗಮಲ್ಲ, ಚಲದಂಕರಾಮನ ಕಹಾಯ ಸೂರನಿಶ್ಯಂಕ ಪ್ರತಾಪ ಹೊಯ್ಸಳವೀರ ಬಲ್ಲಾಳದೇವರು ಶ್ರೀಮದ್ರಾಜಧಾನಿ ದೋರಸಮುದ್ರದ ನೆಲೆವೀಡಿನೊಳು ಸುಖಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯ್ಯುತ್ತ ಎರದುತಿರಮುಕೂಡಲು ಶ್ರೀ ಯಗಸ್ತ್ಯೇಶ್ವರದೇವರ ದಿಬ್ಯಾಂಗ ಭೋಗನಿವೇದ್ಯಾರ್ತ್ಥವಾಗಿ ಯೆಡತೊರೆನಾಡತುಂಬಲ ಆತುಂಬಲದ ಕಾಲುಹಳ್ಳಿ ಸಬ್ಬವಾಣಿಯ ಹಳ್ಳಿ ಸಟ್ಟಿಗವುಡನ ಹಳ್ಳಿ ಬಾಚಗವುಡನಹಳ್ಳಿ ಇಸ್ತೀ ಹಳ್ಳಿಗಳೊಳಗಾದ ಚತುಸ್ಸೀಮೆಯ ಭೂಮಿಯುಂ ... ಸರ್ವನಮಸ್ಯದತ್ತಿಯಾಗಿ ಶ್ರೀ ವೀರಬಲ್ಲಾಳ ದೇವರು ದಾರಾಪೂರ್ವಕಂ ಮಾಡಿಕೊಟ್ಟರು ... ಹೆಗ್ಗಡೆ ಬಮ್ಮದೇವನ ಅಳಿಯ ನಾಗದೇವನ ಬರಹ ಮಂಗಳ ಮಹಾ ಶ್ರೀ ಶ್ರೀ ಶ್ರೀ

(೩) ಸಿಕಾರಿಪುರದ ೧೧೫. ಕಾಲ ೧೧೯೩ ಇಮ್ಮಡಿ ವೀರಬಲ್ಲಾಳನ ಕಾಲ.

... ಆ ಚಕ್ರೇಶ್ವರಂ (ವೀರಬಲ್ಲಾಳದೇವಂ) ಉತ್ತರದಿಗ್ಭಾಗಕ್ಕೆ ಬಿಜಯಂಗೆಯ್ದು ಲೊಕ್ಕಿಗುಂಡಿಯ ನೆಲವೀಡಿನೊಳ್ ಸುಖಸಂಕಥಾ ವಿನೋದದಿಂ ಪೃಥ್ವೀರಾಜ್ಯಂಗೆಯುತ್ತಮಿರೆ। ತತ್ಪಾದಪದ್ಮೋಪಜೀವಿ ಶ್ರೀಮನ್ಮಹಾಪ್ರಧಾನಂ ಸರ್ವಾಧಿಕಾರಿ ಮಹಾಪಸಾಯಿತಂ ಯಾದವಕಟಕ ರಕ್ಷಪಾಳಕಂ ರಿಪುನೃಪಬೇಂಟೆಕಾಱಂ ಪರಮಂಡಳ ಸೂಱೆಕಾಱಂ ಶ್ರೀವಿಷ್ಣನಾಥದೇವ ದಿಬ್ಯ ಶ್ರೀಪಾದಪದ್ಮಾರಾಧಕಂ ಪರಬಳಸಾಧಕಂ ವೈರಿಘರಟ್ಟಂ ರಣರಂಗಭೈರವಂ ಮಹಾಪ್ರಚಂಡ ದಂಡನಾಯಕಂ ವೈರಿಭಯದಾಯಕನಪ್ಪ ಯೆಱೆಯಣ್ಣನ ನಿರ್ಮಳ ವಂಶಾನ್ವಯಮೆಂತೆಂದಡೆ ॥

ವೃ॥ ಜನನುತ ಮಾರಮಯ್ಯನ ಮಿಳಾವನಿ ಪಾವನ ನಾತನ ಪ್ರಿಯಾಂ।
ಗನೆ ಪತಿಭಕ್ತೆ ಕೋಮಳೆ ಲಸದ್ಗುಣೆ ನಾಗಲದೇವಿಯುಗ್ರ್ಗ ಬಂ॥
ಮ್ಮನು ಗುಣವಮ್ಮನಾದ ಸುತನಾತನ ತಂಮನುದಾತ್ತಕೀರ್ತಿ ಸಂ।
ಜನಕನೆನಲ್ಕೆ ಪೇಳೆಱಗಂ ನನನಾವಳಿಾ ಪೆತ್ತಳುರ್ಬ್ಬಿಯೊಳ್ ॥

ಕಂ॥ ಮೇಲೆನಿಸಿದ ಬಲವಂತಂ।
ಬಾಲೆಯು ಬಳಿಯುಂ ಪವಿತ್ರಮಾಡಲು ಪಿರಿದುಂ॥
ಲೀಲೆ ಯೊಳೆ ಪುಟ್ಟಿದಂ ಬುಧ।
ಗಾಲೆಯು ಪೆನಿಸಲ್ಕೆ ಧರೆಯೊಳೆಜಿಗ ಚಮೂಪಂ ॥

ವ॥ ಅಚಮೂನಾಥಂ ಬನವಸೆ ಪಂನಿಚ್ಛಾಸಿರದ ರಾಜಧಾನಿ ಬಲಿಪುರದ ಶ್ರೀಮದ್ದಕ್ಷಿಣ ಕೇದಾರೇಶ್ವರ ದೇವರ ಪೂಜೆ ನೈವೇದ್ಯ ನಂದಾ

ದೀವಿಗೆ ಚೈತ್ರ ಪವಿತ್ರಾದ್ಯನೇಕ ಭೋಗಕ್ಕಂ ತಪೋಧನರಾಹಾರಕ್ಕಂ ಖಂಡ ಸ್ಫುಟಿತ ಜೀರ್ಣೋದ್ಧಾರವಿಂತಿನಿತಕ್ಕಂ ತನ್ನಾಳ್ಕೆಯ ಸಾಂತಳಿಗೆ ನಾಡಮುದ್ಧಕುಂ ದಾನಿಯ ವೃತ್ತಿಯೊಳಗಣ ಚೀಯನ ಸಾಲಿವೂರಂ ಪೊಕ್ಕದ ಮೊದಲ ಗದ್ಯಾಣಂ ಹದಿನೆಂಟಕ್ಕೆ ಸರ್ವನಮಸ್ಯ ಕಟ್ಟುಗುತ್ತಗೆ ಪಿಂಡಾದಾನ ಸರ್ವ್ವಬಾಧಾ ಪರಿಹಾರವಾಚಂದ್ರಾರ್ಕ್ಕಸ್ಥಾಯಿಯಾಗಿ ಸಲುವಂತಾಗಿ ಸಕವರ್ಷ ೧೧೧೪ನೆಯ ಪರಿಧಾವಿ ಸಂವತ್ಸರದ ಪುಷ್ಯ ಬಹುಳ ೫ ಶುಕ್ರವಾರ ವುತ್ತರಾಯಣ ಸಂಕ್ರಮಣದಂದು ಶ್ರೀಮದ್ರಾಜಗುರು ವಾಮಶಕ್ತಿದೇವರ ಶ್ರೀಪಾದ ಪ್ರಕ್ಷಾಳನಂಗೆಯ್ದು ತನ್ನ ಮಹಾರಾಜನಿಂ ಧಾರಾಪೂರ್ವ್ವಕಂ ಮಾಡಿಸಿಕೊಟ್ಟರು.

ಈ ಧರ್ಮ್ಮಮಂ ಪ್ರತಿಪಾಲಿಸಿದಂಗೆ ಗಂಗಾ ಯಮುನಾ ಸಂಗಮದಲು ವೇದವೇದಾಂಗ ವಿತ್ತಮರಪ್ಪ ಬ್ರಾಹ್ಮಣರ್ಗೆ ಕೋಟಿ ಗೋವುಗಳಂ ಸ್ವರ್ಣರತ್ನಾಲಂಕಾರ ಸಹಿತವಾಗಿ ಕೊಟ್ಟ ಫಳವಕ್ಕು ॥ ಇವನಳಿವಂಗಾ ತೀರ್ತ್ಥದೊಳಾ ಬ್ರಾಹ್ಮಣರುಮನಾ ಕಪಿಲೆಗಳುಮುಂ ವಧಿಯಿಸಿದ ಫಳವಕ್ಕು। * * ಕವಿರಾಜರಪಂಡಿತ ಮಾಳಿಯನ ಕವಿತೆ ಕಲ್ಲೋಜ ಚಟ್ಟಿಯನ ಲಿಖಿತ.

(4) ಹೊಳಲ್ಕೆರೆ 121. ಕಾಲಸುಮಾರು 1240 ವೀರಸೋಮೇಶ್ವರನಕಾಲ

ಸ್ವಸ್ತಿ ॥ ಸಮಧಿಗತ ಪಂಚಮಹಾಸಬ್ದ ಮಹಾಮಂಡಲೇಶ್ವರಂ ದ್ವಾರಾವತೀ ಪುರವರಾಧೀಶ್ವರಂ ಯಾದವಕುಲಾಂಬರದ್ಧಿ (ದ್ಯು?) ಮಣಿ ಸಮ್ಯುಕ್ತ (ಕ್ತ್ವ) ಸೂತ್ರ ಚೂಡಾಮಣಿ ಮಲ್ಪರೊಳ್ಗಂಡ ಪ್ರಾಯಶಾದ್ಯನೇಕ ನಾಮಾವಳಿ ಸಮಾಳಾಂ (ಳಂ) ಕೃತಸಮೇತಂ ಶ್ರೀಮತ್ರಿಭುವನಮಲ್ಲ ವೀರಗಂಗ ಹೊಯ್ಸಣದೇವರು ತ್ತರೋತ್ತರ ಪ್ರವರ್ಧಮಾನಮಾ ಚಂದ್ರಾರ್ಕತಾರಂ ಬರಂಸಲುತ್ತಮಿರೆ ಗಂಗವಾಡಿ ತೊಂಭತಾರು ಸಾಸಿರಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂ ಗೆಯ್ದು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ವುತ್ತಮಿರಲು ಸಕವರುಷದ ೧೧೭೭ನೆಯ ನಳಸಂವಛರದ ಪುಶ್ಯಸುಧ ಪಂಚಮಿ ಬ್ರಿಹವಾರ ಉತ್ತರಾಯಣ ಸಂಕ್ರಾಂತಿಯಂದು ಸಮಸ್ತವಸುಮತೀತಳಖ್ಯಾತಂ ಗಂಗಾನ್ವಯ ಪ್ರಸೂತಂ ಕೊಂಗುಳಿವರ್ಮ್ಮ ಧರ್ಮ ಮಹಾರಾಜಾಧಿರಾಜ ವಂದಿಜನಕಲ್ಪಭೂಜ ಕೋಳಾಲ ಪುರವರಾಧೀಸ್ವರಂ ವೀಲಮಹೇಸ್ವರಂ ಮದಗಜೇಂದ್ರಲಾಂಚ (ಛ) ನಂ ವಿನಯೋಗ ಕಾಂಚನಂ ಪದುಮಾವತೀ ದೇವಿ ಲಬ್ಧವರಪ್ರಸಾದ ವಿಗ್ರಮದಾಮೋದಂ ನಂನಿಯಗಂಗಂ ಜಯದುತ್ತರಂಗಂ ಗಂಗಕುಳಕಮಳ ಮಾರ್ತಾಂಡಂ ಗಂಗಗಾಂಗೇಯಂ ಕವಿಗಮಕಿವಾದಿ ವಾಗ್ಮಿಪ್ರಿಯಂ ಶಿವಪಾದಾರಾಧಕಂ ಪರಬಲ ಸಾಧಕಂ ಗಂಡಪ್ರಚಂಡಂ ಕೋದಂಡಪಾತ್ರಂ ಪರಬಳಧೂರ್ತ ನೇ

ಕಾಂಗವೀರ ಸಾಹಸಸೂರ ಶರಣಾಗತವಜ್ರಪಂಜರಂ ವೈರಿದಿಕ್ಕುಂಜರಂ ಆಹವಜತ್ತಲಟ್ಟಂ ವೈರಿಘರಟ್ಟಂ ಪರನಾರೀ ಸಹೋದರಂ ವೀರವೃಕೋದರಂ ಸಮಸ್ತ ನಾಮಾವಳೀ ಸಮಾಳಂಕೃತ ಸಮೇತಂ ಶ್ರೀಮನ್ಮಹಾಮಂಡಳೇಶ್ವರಂ ಗಂಗರಸರು ಅರಬಲವೆಪ್ಪತ್ತುಮಂ ಮೇಲಾಳ್ಕಿಮಂನೆಯ ಸಹಿತಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂದಾಳುತ್ತಮಿರೆ * * ವಿಷ್ಣು ವರ್ಧನ ನಗ್ರತನೂಜ ನರಸಿಂಘ ಭೂಪಾಲಕಂ ಸರಧಿಬ್ಯಾವೇಷ್ಟಿತೋರ್ವೀಪತಿಯೆನಿಸಿ ಸುಖಂಬಾಳ್ಗೆ ಚಂದ್ರಾರ್ಕತಾರಂಬರಂ ಸುರರಾಜಂ ಲೀಲೆಯಿಂದಂ ಯದುಕುಳತಿಳಕಂ ವೀರ ಸಂಗ್ರಾಮರಾಮಂ ಪಿರಿದುಂ ವಿಕ್ರಾಂತದಿಂದಂ ನಿಜವಿಜಯ ವಿಭುಜವಿಜಾಂಗಂ ಭೂಮಂಡಳೇಶಂ ನರಸಿಂಹಂ ಭೂಮಿಪಾಳಂ ಸ್ಥಿರಲಕ್ಷ್ಮೀವಲ್ಲಭಂ ಹೊಯ್ಸಳೇಶಂ ॥

ಆತನ ತನಯನ ತೋಳ್ವಲ ವೆಂತೆಂದೊಡೆ

ಜಯಜಾಯಾ ಪ್ರಿಯವಲ್ಲಭಂ ಸಕಲ ಭೂಭೃನ್ಮಸ್ತಕನ್ಯಸ್ತಪಾ।
ದಯುಗಂ ದೋರ್ವಳವ್ಯಸ್ತ ಸಪ್ರತಿಮನತ್ಯುದಾರ ಯಶೋರ್ಜಿತೋ ॥
ದಯನತ್ಯದ್ಭುತವಿಕ್ರಮಂ ರಿಪುಬಳ ಪ್ರಧ್ವಂಸ ನಿಸ್ಸೀಸನಿ।
ರ್ದಯನಿಸ್ತ್ರಿಂಶನಿಖ ...ಳಂನಿಯಮದಿಂ ಬಲ್ಲಾಳ ಭೂಪಾಳಕಂ ॥ * *

ಅಂತೆನಿಸಿದ ಶ್ರೀಮನ್ಮಹಾಮಂಡಲೇಶ್ವರಂ ತಳಕಾಡು ಗಂಗವಾಡಿ ನೊಣಂಬವಾಡಿ ಬನವಸ ಹಾನುಂಗಲ್ಲು ಕೊಂಡ ಭುಜಬಳವೀರಗಂಗನಸಹಾಯಶೂರಂ ಸನಿವಾರಸಿದ್ಧಿ ಗಿರಿದುರ್ಗಮಲ್ಲ ಚಲದಂಕರಾಮ ನಿಶ್ಶಂಕಪ್ರತಾಪ ಹೊಯ್ಸಣವೀರ ಬಲ್ಲಾಳದೇವರು ಗಂಗವಾಡಿ ೯೬೦೦೦ ತೊಂಭತ್ತಾರು ಸಾಸಿರಮುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನಂಗೆಯ್ದು ದೋರಸಮುದ್ರದ ನೆಲೆವೀಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ

ಸ್ವಸ್ತಿ॥ ಸಮಸ್ತಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ಪರಮೇಶ್ವರಂ ಯಾದವ ಕುಲಾಂಬರದ್ಯುಮಣಿ ಸರ್ವಜ್ಞ ಚೂಡಾಮಣಿ ಮಲೆರಾಜರಾಜಂ ಮಲಪರೊಳ್ಗಂಡ ಗಂಡಭೇರುಂಡ ಕದನಪ್ರಚಂಡನ ಸಹಾಯಶೂರನೇ ಕಾಂಗವೀರ ಶನಿವಾರ ಸಿದ್ಧಿ ಗಿರಿದುರ್ಗಮಲ್ಲ ಚಲದಂಕರಾಮ ವೈರಿಭಕಂಠೀರವ ಮಗರರಾಜ್ಯ ನಿರ್ಮೂಲ ಪಾಂಡ್ಯದಿಶಾಪಟ್ಟ ಚೋಳರಾಜ್ಯ ಪ್ರತಿಷ್ಠಾಚಾರ್ಯ ನಿಶ್ಶಂಕ ಪ್ರತಾಪ ಚಕ್ರವರ್ತಿ ಹೊಯ್ಸಣ ಭುಜಭಲ ವೀರಸೋಮೇಶ್ವರ ದೇವರು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ।

ತತ್ಪಾದಾರಾಧಕಂ ಶ್ರೀಮನ್ನಿರುಗುಂದ ಚಟಯ್ಯನಾಯಕನ ಪ್ರತಾಪ ವೆಂತೆಂದಡೆ-

ಉಡಿಗುಂ ಸಿಂಘದ ದಾಡೆಯುಂ ಚಟುಳ್ಳನಲು ಸಂಕ್ರುದ್ಧನಾಗೇಂದ್ರನಂ
ಪೊಡೆಗುಂ ದೋಃಪನೆವೇರಿವಪ್ಪಿ ಕವಿತಪರ್ಣಂಭೋಧಿಯುಂ ಕೋಪದಿಂ
ಕುಡಿಗುಂ ಸುಜನೆನೋಡೆ ನಾಡಮುಳಿಸಿಂ ಮಾಹಾಂತ ಮಾ
ರ್ಪಡೆಯುಂ ಚಟನಾಯಕಂ ತಪಿಸನೇ ಸಂಗ್ರಾಮರಂಗಾಗ್ರದೊಳ್ *

ಈ ನಾಲ್ಕನೆಯ ಶಾಸನದಲ್ಲಿ ಲೇಖನದ ತಪ್ಪುಗಳು ಅನೇಕವಿರುವವು. ಆದರೂ ಶಾಸನದ ಪದಗಾಂಭೀರ್ಯವು ಬಹಳ ಚೆನ್ನಾಗಿದೆ. ಹೊಯ್ಸಳರ ಸಾರ್ವಭೌಮ ಪದವಿಯು ಸ್ಪಷ್ಟ ಪಡುತ್ತದೆ.

ಹೊಯ್ಸಳರ ಕಾಲದಲ್ಲಿ ಕರ್ಣಾಟಭಾಷೆಯ ಲಕ್ಷಣಗ್ರಂಥಗಳು ಹುಟ್ಟಿ ಭಾಷಾ ಸಂಸ್ಕರಣವು ಚೆನ್ನಾಗಿ ನಡೆಯಿತು. ಕಾವ್ಯಾವಲೋಕನವನ್ನೂ ಕರ್ಣಾಟಭಾಷಾ ಭೂಷಣವನ್ನೂ ಬರೆದ ಇಮ್ಮಡಿ ನಾಗವರ್ಮನು ಸುಮಾರು ೧೧೪೫ರಲ್ಲಿ ಬಾಳಿದನೆಂದು ತಿಳಿಯುಬರುತ್ತದೆ. ಆ ಕಾಲದಲ್ಲಿ ಹೊಯ್ಸಳರು ಚಾಳುಕ್ಯರಾಜರನ್ನು ಜಯಿಸಿರಲಿಲ್ಲ. ನಾಗವರ್ಮನು ಉತ್ತರಮಾರ್ಗದ ಕನ್ನಡವನ್ನು ಅಸಾಧುವೆಂದು ಭಾವಿಸಿದ್ದನು. ಸುಮಾರು ೧೨೦೦ರಲ್ಲಿ ಬಾಳಿದ ಕವಿಕಾಮನು ಶೃಂಗಾರರತ್ನಾಕರವೆಂಬ ಗ್ರಂಥವನ್ನು ಬರೆದನು.

ಭವಪಾದಾಂಬುಜಷಟ್ಪದಂ ನವರಸವ್ಯಾಪಾರಮುಂ ಭಾವಸಂ ।
ಭವಮುಂ ನಾಯಕನಾಯಿಕಾಸವಿಸಪೇಸಂಭೋಗ ತದ್ವಿಪ್ರಲಂ ॥
ಭವಿಪ್ರಸ್ತುತ ವೃತ್ತಿಕಾದಿರಸ ಶಾಸ್ತ್ರೋದ್ಭೂತಸನ್ಮಾರ್ಗವ್ಯ ।
ತ್ತಿಕಲ್ಪಂಗಳುಮಂ ಮುಸಂಗೊಳಿಸಿದಂ ಶೃಂಗಾರರತ್ನಾಕರಂ ॥

ಶ್ರೀನಿಧಿ ವಿವೇಕನಿಧಿ ಕವಿ ।
ತಾನಿಧಿ ಸೌಭಾಗ್ಯನಿಧಿ ಯಶೋನಿಧಿ ಪರಂ॥
ದ್ಯಾನಿಧಿ ವಿಳಾಸನಿಧಿ ಮಹಿ ।
ಮಾನಿಧಿ ಮಾನನಿಧಿ ದಾನನಿಧಿ ಕವಿಕಾಮಂ ॥

ಎಂದು ಹೇಳಿಕೊಂಡಿದಾನೆ. ಭಾವರಸಪ್ರಪಂಚವನ್ನು ವರ್ಣಿಸುವ ಗ್ರಂಥವು ಕನ್ನಡದಲ್ಲಿ ಇದಕ್ಕೆ ಮೊದಲಿರಲಿಲ್ಲ. ಸುಮಾರು ೧೨೬೦ರಲ್ಲಿ ಬಾಳಿದ ಕೇಶಿರಾಜನು ಶಬ್ದಮಣಿದರ್ಪಣವೆಂಬ ವ್ಯಾಕರಣವನ್ನು ಬರೆದನು. ಇವನೂ ನಾಗವರ್ಮನ ಮಾರ್ಗವನ್ನೇ ಅನುಸರಿಸಿ ದಕ್ಷಿಣಮಾರ್ಗದ ಪ್ರಯೋಗಗಳನೇಕವನ್ನು ಸೇರಿಸಿರುತ್ತಾನೆ. ಇವನಕಾಲಕ್ಕೆ ಮುಂಚೆಯೇ ಉತ್ತರಮಾರ್ಗದ ಕನ್ನಡವು ಬುಧಜನಸ್ವೀಕೃತವಾಗಿತ್ತು, ಏಕೆಂದರೆ-ಸುಮಾರು ೧೧೬೧ರಲ್ಲಿ ಬಾಳಿದ ಮತ್ತು ಉತ್ತರಮಾರ್ಗಕವಿಯೂ ಆಗಿದ್ದ ರಾಘವಾಂಕನು ಹೊಯ್ಸಳರ ಆಸ್ಥಾನದಲ್ಲಿ ಬಹುಮಾನವನ್ನು ಹೊಂದಿದ್ದನು. ಶಾಸನಗಳಲ್ಲಿಯೂ ಉತ್ತರಮಾರ್ಗದ ಕನ್ನಡವು ಬಳಕೆಗೆಬರುತ್ತಿತ್ತು, ಆದರೂ ಕೇಶಿರಾಜನು ತನ್ನ ಕಾಲದ ಕನ್ನಡಕ್ಕೆ ವ್ಯಾಕರಣವನ್ನು ಬರೆವುದಕ್ಕೆ ಬದಲಾಗಿ

ಗಜಗನ ಗುಣನಂದಿಯ ಮನ ।
ಸಿಜನಸಗನ ಚಂದ್ರಭಟ್ಟಗುಣವರ್ಮ ಶ್ರೀ ॥
ವಿಜಯುರ ಹೊನ್ನನ ಹಂಪನ ।
ಸುಜನೋತ್ತಂಸನ ಸುಮಾರ್ಗವಿದಕ್ಕೊಳಿಲಕ್ಷ್ಯಂ ॥

ಎಂದು ಹೇಳಿಕೊಂಡು ಉತ್ತರಮಾರ್ಗವನ್ನು ನಿರಾಕರಿಸಿದನು. ಸುಮಾರು ೧೧೭೫ರಲ್ಲಿ ಹೊಯ್ಸಲರಾಜರ ಆಸ್ಥಾನದಲ್ಲಿ ಸನ್ಮಾನಿತನಾಗಿದ್ದ ಮತ್ತು ಕರ್ನಾಟಕಾವ್ಯಲಕ್ಷಣದೀಕ್ಷಾಚಾರ್ಯನೆಂಬ ಮಹಾಬಿರುದನ್ನು ಪಡೆದಿದ್ದ ಹರೀಶ್ವರನ ಹೆಸರನ್ನು ಕೇಶಿರಾಜನು ಬಿಟ್ಟಿರುವುದನ್ನು ನೋಡಿದರೆ ಈತನಿಗೆ ಮತದ್ವೇಷವಿರಲಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಎಂತೂ ಕನ್ನಡದಲ್ಲಿ ಹೊಯ್ಸಳರಾಜರಕಾಲದಲ್ಲಿ ಉತ್ಕೃಷ್ಟಗಳಾದ ಲಕ್ಷಣಗ್ರಂಥಗಳು ಹುಟ್ಟಿದುವು

ಹೊಯ್ಸಳರ ಸಾಮ್ರಾಜ್ಯಕಾಲದಲ್ಲಿ ಅನೇಕ ಮಹಾಕವಿಗಳು ಕನ್ನಡದ ವಾಙ್ಮಯಸಂಪತ್ತನ್ನು ಅತಿಶಯವಾಗಿ ವೃದ್ಧಿಗೊಳಿಸಿರುವರು. ಹೊಯ್ಸಳ ಕಾಲವನ್ನು ಕನ್ನಡದ ಉದ್ಗ್ರಂಥಗಳ ಸುಗ್ಗಿಯಕಾಲವೆಂದು ಹೇಳಿದರೂ ಅತಿಶಯೋಕ್ತಿಯಾಗುವುದಿಲ್ಲ ಪ್ರಸಿದ್ಧರಾದ ಕೆಲವು ಕವಿಗಳ ಹೆಸರುಗಳನ್ನೂ ಅವರ ಬಿರುದುಗಳನ್ನೂ ಅವರ ಗ್ರಂಥಗಳನ್ನೂ ಇಲ್ಲಿ ಹೇಳುವುದು ಉಚಿತವೆಂದು ತೋರುತ್ತದೆ. ಅವರಾರೆಂದರೆ—

(1) ಹರೀಶ್ವರ—ಕಾಲ ಸುಮಾರು ೧೧೬೫.

ಈತನು ವೀರಶೈವನು "ಸರಸಕವಿಸಾರ್ವಭೌಮಂ ಚತುರಕವಿ ಚತುರ್ಮುಖಂ ಭಾವಕವಿಭಾಳಲೋಚನಂ ವರ್ಣಕಕವಿಕರ್ಣಾವತಂಸಂ ವಸ್ತುಕಕವಿಮಸ್ತಕನ್ಯಸ್ತಹಸ್ತಂ ಅದಟಕವಿಮಾನಮರ್ದನಂ ಗರ್ವಿತಕವಿಗಿರಿವಜ್ರದಂಡಂ ಉಭಯಕವಿಶರಭಭೇರುಂಡಂ ವರ್ತಮಾನಕವಿ ವೇಶ್ಯಾ ಭುಜಂಗಂ ಕರ್ಣಾಟಕಾವ್ಯಲಕ್ಷಣದೀಕ್ಷಾಚಾರ್ಯ ಶಿವಯೋಗಿ ಚಕ್ರೇಶ್ವರ ಲೋಕಾರಾಧ್ಯ ಸಾಕಾರ ಸುಧರ್ಮ ಮರ್ತ್ಯಲೋಕದಮಹಾದೇವ" ಎಂದು ವರ್ಣಿಸಲ್ಪಟ್ಟಿರುವನು.

ಗಿರಿಜಾಕಲ್ಯಾಣ, ಪಂಪಾಶತಕ, ಶಿವಗಣದ ರಗಳೆ ಮುಂತಾದುವುಗಳನ್ನು ಬರೆದಿದಾನೆ.

(2) ನೇಮಿಚಂದ್ರ—ಕಾಲ ೧೧೭೦.

ಕಲಾಕಾಂತ, ಕವಿರಾಜಮಲ್ಲ, ಕವಿಧವಳ, ಶೃಂಗಾರಕಾರಾಗೃಹ, ಕವಿರಾಜಕುಂಜರ, ಸಾಹಿತ್ಯವಿದ್ಯಾಧರ, ವಿದ್ಯಾವಧೂವಲ್ಲಭ, ಸುಕವಿಕಂಠಾಭರಣ, ವಿಶ್ವವಿದ್ಯಾವಿನೋದ, ಭಾರತೀಚಿತ್ತಚೋರ, ಚತುರ್ಭಾಷಾಕವಿಚಕ್ರವರ್ತಿ, ಸುಕರಕವಿಶೇಖರ, ಕೃತಕುಲದೀಪ ಮುಂತಾದ ಬಿರುದುಗಳು ಈತನಿಗಿದ್ದುವು.

ಈತನು ಲೀಲಾವತಿ ನೇಮಿನಾಥಪುರಾಣ ಎಂಬುವುಗಳನ್ನು ಬರೆದಿದ್ದಾನೆ. ವೀರಬಲ್ಲಾಳನ ಪ್ರಧಾನನಾದ ಸೆಟ್ಟಿವಳ್ಳ ಪದ್ಮನಾಭನಿಗಾಗಿ ನೇಮಿನಾಥಪುರಾಣವನು ಬರೆದಂತೆ ಹೇಳುತ್ತಾನೆ.

(೩) ರುದ್ರಭಟ್ಟ-ಸುಮಾರು ೧೧೮೦.

ಈತನಿಗೆ ಕೃತಿಕಾರದಾಢ್ಯ, ಚಂದ್ರಾತಪ, ಕವಿರಾಜ ಎಂಬ ಬಿರುದುಗಳಿದ್ದುವು. ಈತನು ಜಗನ್ನಾಥವಿಜಯವನ್ನು ಪ್ರೌಢಸರಣಿಯಲ್ಲಿ ಬರೆದಿರುತ್ತಾನೆ, ಭಟ್ಟಾಕಳಂಕನು ತನ್ನ ವ್ಯಾಕರಣದಲ್ಲಿ ಈತನ ಪದ್ಯಗಳನ್ನು ಉದಾಹರಿಸಿರುತ್ತಾನೆ.

(೪) ಅಗ್ಗಳ- ಸುಮಾರು ೧೧೮೯

ಈತನಿಗೆ ಜೈನಜನಮನೋಹರ ಚರಿತ, ಕವಿಕುಳಕಳಭವ್ರಾತಯೂಥಾಧಿನಾಥ ಕಾವ್ಯನೌಕರ್ಣಧಾರ, ಭಾರತೀಭಾಳನೇತ್ರ, ಸಾಹಿತ್ಯವಿದ್ಯಾವಿನೋದ, ಜಿನಸಮಯ ಸರಸ್ಸಾರಕೇಳೀಮರಾಳ, ಸುಲಲಿತ ಕವಿತಾನರ್ತಕೀನೃತ್ಯರಂಗ, ಎಂಬ ಬಿರುದುಗಳಿದ್ದಂತೆ ಕಾಣಬರುತ್ತದೆ. ಈತನು ಚಂದ್ರಪ್ರಭಾಪುರಾಣವನ್ನು ಬರೆದಿರುತ್ತಾನೆ. ಈತನನ್ನು ಅನೇಕ ಕವಿಗಳು ಸ್ತುತಿಸುತ್ತಾರೆ.

(೫) ಆಚಣ್ಣ- ಸುಮಾರು ೧೧೯೫

ಈತನಿಗೆ ವಾಣೀವಲ್ಲಭ, ಪಂಚಪರಮಗುರು ಪದಪನತ ಎಂಬ ಬಿರುದುಗಳಿದ್ದುವು. ಈತನು ವರ್ಧಮಾನಪುರಾಣವನ್ನು ಬರೆದಿದಾನೆ—ಈತನ ಕಾವ್ಯವು ಪ್ರಾಸಯಮಕಾದಿ ಶಬ್ದಾಲಂಕಾರಭೂಯಿಷ್ಠವಾಗಿದೆ

(6) ದೇವಕವಿ—ಸುಮಾರು ೧೨೦೦

ಈತನು ಕುಸುಮಾವಳಿ ಎಂಬ ಗ್ರಂಥವನ್ನು ಬರೆದಿರುತ್ತಾನೆ.

ಸುಕೃತಿಶ್ರೀಭಾಮಿನೀಮಂಗಳ ಮಣಿಮಯದಾಮಂ ಬುಧಸ್ತುತ್ಯಸಾಹಿ ।
ತ್ಯಕಳಾಸಂದೋಹಸೀಮಂ ಸುಕವಿಸುಕರಕೇರಾಸ್ಯ ಪುಷ್ಪಾವಳೀಕ ॥
ಲ್ಪಕುಜಾರಾಮಂ ಸ್ವಕೀಯಾನ್ವಯಕುವಲಯಸಂಪ್ರೇಮಸೋಮಂ ಸದಾಚಾ ।
ರಕನಲ್ಲಕ್ಷ್ಮೀಲಲಾಮಂ ಕೃತಿರತಿರಮಣಂ ಸಾಹಸೋದ್ದಾಮಭೀಮಂ ॥

ಎಂಬ ಪದ್ಯದಲ್ಲಿ ತಕ್ಕ ಕವಿತಾಚಾತುರ್ಯವನ್ನು ತಿಳಿಸಿದಾನೆ.

(7) ಪಾರ್ಶ್ವಪಂಡಿತ- ಸುಮಾರು ೧೨೦೫.

ಈತನು ಸೌಂದತ್ತಿಯ ರಟ್ಟರಾಜವಂಶಕ್ಕೆ ಸೇರಿದ ನಾಲ್ವಡಿಕಾರ್ತವೀರ್ಯ ರಾಜನಲ್ಲಿ ಆಸ್ಥಾನಕವಿಯಾಗಿದ್ದಿರಬಹುದು ಈತನಿಗೆ ಸುಕವಿಜನಮನೋಹರ್ಷ ಸಸ್ಯಪ್ರವರ್ಷಂ, ವಿಬುಧಜನಮನಃಪದ್ಮಿನೀ ಪದ್ಮಮಿತ್ರಂ, ಕವಿಕುಳತಿಲಕಂ ಎಂಬ ಬಿರುದುಗಳಿದ್ದುವು.

ಘನಶಬ್ದಾಡಂಬರೋತ್ಪತ್ತಿಯಿನಖಿಳರಸೋತ್ಪಾದನಪ್ರೌಢಿಯಿಂ ಸ ।
ಜ್ಜನಚೇತಶ್ಚಾತಕಾಸ್ವಾದಿತವಚನಸುಧಾಬಿಂದುಸಂದೋಹದಿಂ ಭೂ ॥
ವನುತಶ್ರೀಕೀರ್ತಿವಲ್ಲೀಜನನವಿಭವದಿಂ ಪಟ್ಟಿಸಲ್ ನೆಟ್ಟನಿಂತೀ ।

ತನೆ ಸಂಪಚ್ಛ್ರಾರುಮೇಘಂ ಸುಕವಿಜನಮನೋಹರ್ಷ ಸಸ್ಯಪ್ರವರ್ಷಂ ||

ಪ್ರಕಟಪ್ರಜ್ಞೋದಯ ವ್ಯಾಪೃತವಿಪ್ರಳಪದಾರ್ಥತ್ವದಿಂ ದುಷ್ಕೃತೌ |
ಶಿಕರ್ದೃಕ್ಸಂಪಾದಿತಾಂಧತ್ವದಿ ನಮಳತೆಯಿಂ ಲೋಕದೀಪಪ್ರರೂಪಾ ||
ಧಿಕವಿಖ್ಯಾತತ್ವದೀತಂ ಬಗೆಯೆ ಜಗದೊಳಾನಂದಮಂ ಭವ್ಯಚಕ್ರಾ |
ಹ್ವಕುಳಕ್ಕೊಳ್ದೀವಸೆಂಪಿಂ ವಿಬುಧಜನಮನಃಪದ್ಮಿನೀ ಪದ್ಮಮಿತ್ರಂ ||

ಎಂದು ಹೇಳಿಕೊಂಡಿದ್ದಾನೆ ಈತನು ಪಾರ್ಶ್ವನಾಥ ಪುರಾಣವನ್ನು ಬರೆದಿರುವನು.

(8) ಜನ್ನ-ಸುಮಾರು ೧೨೦೯

ಕನ್ನರ ನಾದರದಿಂ ಕುಡೆ |
ಹೊನ್ನಂ ಮನಸೊಸೆದು ತ್ರೈಲಪಂ ಕುಡೆರನ್ನಂ ||
ಮನ್ನಿಸಿ ಬಲ್ಲಾಳಂ ಕುಡೆ |
ಜನ್ನಂ ಕವಿಚಕ್ರವರ್ತಿ ಪೆಸರಂ ತಳೆದಂ ||

ಎಂದು ಹೇಳಿಕೊಂಡಿರುವನು ಈತನಿಗೆ ಸಾಹಿತ್ಯರತ್ನಾಕರ, ಕವಿಭಾಳಲೋಚನ, ಕವಿಚಕ್ರವರ್ತಿ, ವಿನೇಯಜನಮುಖತಿಲಕ, ರಾಜವಿದ್ವತ್ಸಭಾ ಕಲಹಂಸ, ಕವಿವೃಂದಾರಕವಾಸವ, ಕವಿಕಲ್ಪಲತಾಮಂದಾರ, ಎಂಬ ಬಿರುದುಗಳು ಇದ್ದುವು ಈತನು ಯಶೋಧರಚರಿತೆ, ಅನಂತನಾಥ ಪುರಾಣ, ಸ್ಮರತಂತ್ರ ಎಂಬ ಗ್ರಂಥಗಳನ್ನು ಬರೆದಿರುತ್ತಾನೆ

(9) ಸೋಮರಾಜ-ಸುಮಾರು ೧೨೨೨.

ಈತನು ವೀರಶೈವಕವಿ, ತಾನು ಪರಮಜ್ಞಾನಿ ಸೋಮರಾಜನೆಂದು ಹೇಳಿಕೊಂಡಿದಾನೆ ಶೃಂಗಾರ ಸಾರ ಅಥವಾ ಉದ್ಭಟಕಾವ್ಯವೆಂಬ ಗ್ರಂಥವನ್ನು ಬರೆದಿರುವನು. ಇದು ಪ್ರೌಢಕಾವ್ಯ.

(10) ಶಿಶುಮಾಯಣ-ಸುಮಾರು ೧೨೩೨

ಸಾಂಗತ್ಯಕವಿಗಳಲ್ಲಿ ಈತನೇ ಮೊದಲನೆಯವನು. ಸಾಂಗತ್ಯದಲ್ಲಿ ಅನೇಕ ಜೈನ ವೀರಶೈವ ಬ್ರಾಹ್ಮಣ ಗ್ರಂಥಗಳು ಹುಟ್ಟಿವೆ. ಈತನು ತ್ರಿಪುರದಹನ ಸಾಂಗತ್ಯವನ್ನೂ ಅಂಜನಾ ಚರಿತ್ರೆಯನ್ನೂ ಬರೆದಿರುವನು.

(11) ಕಮಲಭವ-ಸುಮಾರು ೧೨೩೫

ಈತನಿಗೆ ಕವಿಕಂಜಗರ್ಭ ಸೂಕ್ತಿ ಸಂದರ್ಭಗರ್ಭ ಎಂಬ ಬಿರುದುಗಳಿರುವುವು. ಈತನು ಶಾಂತೀಶ್ವರ ಪುರಾಣವನ್ನು ಬರೆದಿರುವನು.

ವಿಮಳ ವಿಭಾಸ್ವದೇಕಮುಖಸುನ್ನತ ಸನ್ಮತಿ ಸುಪ್ರಕಾಶನು |
ತ್ತಮ ಚರಿತಾಂಚಿತಂ ಸಕಳ ಜೀವ ಹಿತಾಗಮವರ್ಧನಿ ಕೃತೋ ||

ದ್ಯಮಾನಮದಾತ್ಮನ ಪ್ರತಿಕಠಂ ದಿಟಮೆಂದೊಲವಿಂದ ಮಜಸ್ತ್ರೀಯೆ ।
ಕಮಲ ಭವಾಸ್ಯಪದ್ಮಮನೆ ಪೊರ್ದಿದಳಿಂಗಡ ವಾಣಿಜಾಣೆಯೊ ॥

ಎಂದು ಹೇಳಿಕೊಂಡಿರುವನು

(12) ಆಂಡಯ್ಯ-ಸುಮಾರು ೧೨೩೫.

ಈತನು ಸಂಸ್ಕೃತರೂಪದ ಪದಗಳಿಲ್ಲದಂತೆ ತದ್ಭವದೇಶ್ಯ ಪದಗಳಿಂದಲೇ ಕಬ್ಬಿಗರಕಾವ ಎಂಬ ಗ್ರಂಥವನ್ನು ಬರೆದಿರುವನು ತನ್ನ ಗ್ರಂಥವು ದೇಶಿಯ ಗೊತ್ತು, ಜಾಣ್ನುಡಿಯ ತಾಯ್ಪನೆ ನುಣ್ಪುರುಳೇಳ್ಗೆ ಎಂದು ಹೇಳಿಕೊಂಡಿರುವನು

(13) ಮಹಾಬಲಕವಿ-ಸುಮಾರು ೧೨೫೪

ಈತನಿಗೆ ಸಹಜಕವಿಮನೋಗೇಹ ಮಾಣಿಕ್ಯದೀಪ ವಿಶ್ವವಿದ್ಯಾವಿರಿಂಚ ಎಂಬ ಬಿರುದುಗಳಿರುವವು.

ಲೌಕಿಕ ಪಾರಮಾರ್ಥಿಕ ವಿಚಾರ ವಿಚಕ್ಷಣ ನಿಂದ್ರಚಂದ್ರ ವ್ಯಾ ।
ಯಾಕರಣ ಪ್ರಭಾವವಚನಾಗಮ ವಾಕ್ಪತಿ ತರ್ಕಷಟ್ಪ್ರ ಶಿ ॥
ಕ್ಷಾಕರಣೀಯ ಕರ್ತೃ ಬಹುಭೇದದಲಂಕರಣಾಭಿಧಾನ ಮಾ ।
ಲಾಕುಶಲಂ ಮಹಾಬಳಕವೀಶ್ವರ ನುತ್ಸವ ದುಂದುಭಿಸ್ವರಂ ॥

ಎಂದು ಹೇಳಿಕೊಂಡಿರುವನು ಈತನು ನೇಮಿನಾಥ ಪುರಾಣವನ್ನು ಬರೆದಿರುತ್ತಾನೆ ಇದರಲ್ಲಿ ಹರಿವಂಶ ಕುರುವಂಶಗಳ ಕಥೆ ಹೇಳಿದೆ

(14) ಕುಮುದೇಂದು-ಸುಮಾರು ೧೨೭೫.

ಈತನಿಗೆ ಪರವಾದಿ ಗಿರಿವಜ್ರ, ಸರಸಕವಿ ತಿಲಕ ಎಂಬ ಬಿರುದುಗಳಿದ್ದುವು. ಈತನು ಕುಮುದೇಂದು ರಾಮಾಯಣವನ್ನು ಬರೆದಿರುತ್ತಾನೆ. ಎಲ್ಲಾ ಜಾತಿಯ ಷಟ್ಪದಿಗಳೂ ಈಗ್ರಂಥದಲ್ಲಿ ಕಾಣಬರುತ್ತವೆ

(15) ಚೌಂಡರಸ-ಸುಮಾರು ೧೩೦೦

ಈತನಿಗೆ ಸರಸಕವಿ, ಕವಿರಾಜಶೇಖರ ಎಂಬ ಬಿರುದುಗಳಿದ್ದುವು. ಈತನು ಅಭಿನವದಶ ಕುಮಾರ ಚರಿತವನ್ನು ಬರೆದಿದಾನೆ ಈತನ ಕವಿತಾಶೈಲಿಯು ಲಕ್ಷಣ ಬದ್ಧವಾಗಿರುವುದು

(16) ನಾಗರಾಜ-ಸುಮಾರು ೧೩೩೧.

ಈತನಿಗೆ ಸುಲಲಿತ ಕವಿತಾಕಲ್ಪವಲ್ಲೀ ವಸಂತ, ಭಾರತೀ ಭಾಳನೇತ್ರ, ಸರಸ್ವತೀಮುಖ ತಿಲಕ, ಕವಿಮುಖಮುಕುರ ಎಂಬ ಬಿರುದುಗಳಿದ್ದುವ ಈತನು ಪುಣ್ಯಾಶ್ರವ ಚಂಪುವನ್ನು ಬರೆದಿರುತ್ತಾನೆ.

ಹೊಯ್ಸಳರ ಕಾಲದಲ್ಲಿದ್ದಷ್ಟು ಮಹಾಮಹಾ ಕವಿಗಳು ರಾಷ್ಟ್ರಕೂಟ ಚಾಳುಕ್ಯರ ಕಾಲದಲ್ಲಿರಲಿಲ್ಲ. ನಾವು ತೋರಿಸಿರುವಂತೆ ರಾಷ್ಟ್ರಕೂಟದ ಮತ್ತು ಚಾಳುಕ್ಯರ ಸಾಮ್ರಾಜ್ಯದಲ್ಲಿ-ಎಂದರೆ ಸುಮಾರು ೩೫೦ ವರುಷಗಳ ಕಾಲದಲ್ಲಿ- ಸುಮಾರು ಹನ್ನೆರಡು ಮಂದಿ ಮಹಾಮಹಾ ಕವಿಗಳೂ ಲಕ್ಷಣಜ್ಞರೂ ಬಾಳಿದರು, ಹೊಯ್ಸಳರ ಸಾಮ್ರಾಜ್ಯದ ಇನ್ನೂರು ವರುಷದಲ್ಲಿ ಸುಮಾರು ಇಪ್ಪತ್ತುಮಂದಿ ಮಹಾಕವಿಗಳೂ ಲಕ್ಷಣಜ್ಞರೂ ಬಾಳಿದರು ಚಾಳುಕ್ಯರ ಕಾಲದ ಕನ್ನಡವನ್ನು ಇಮ್ಮಡಿ ನಾಗವರ್ಮನ ಕರ್ನಾಟಕ ಭಾಷಾ ಭೂಷಣದಿಂದ ತಿಳಿಯಬಹುದು ಹೊಯ್ಸಳರ ಸಾಮ್ರಾಜ್ಯದ ಕನ್ನಡವನ್ನು ಕೇಶಿರಾಜನ ಶಬ್ದಮಣಿದರ್ಪಣದಿಂದ ತಿಳಿಯಬಹುದು ರಾಷ್ಟ್ರಕೂಟ ಚಾಳುಕ್ಯರ ಕಾಲದಲ್ಲಿ ಕರ್ನಾಟಕ ಭಾಷಾವನಿತೆಯು ಬಾಲ್ಯಾವಸ್ಥೆಯಲ್ಲಿದ್ದಳೆಂದೂ ಹೊಯ್ಸಳರ ಸಾಮ್ರಾಜ್ಯದಲ್ಲಿ ಪ್ರೌಢಸ್ತ್ರೀಯಾದಳೆಂದೂ ಹೇಳಬಹುದಾಗಿದೆ. ಕರ್ಣಾಟ ಭಾಷಾಬಾಲೆಯನ್ನು ಪ್ರೌಢಸ್ತ್ರೀಯಾಗುವಂತೆ ಪೋಷಿಸಿ ಬೆಳೆಯಿಸಿದವರು ಮೈಸೂರು ಸೀಮೆಯವರು ಎಂದರೆ ಅತಿಶಯೋಕ್ತಿಯಾಗುವುದಿಲ್ಲ.

೧೦. ವಿಜಯನಗರ ಸಾಮ್ರಾಜ್ಯದ ಕನ್ನಡ

ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ (೧೩೧೦) ಮುಸಲ್ಮಾನರು ದಕ್ಷಿಣದೇಶಗಳನ್ನು ಆಕ್ರಮಿಸಿಕೊಳ್ಳುವುದಕ್ಕೆ ಪ್ರಾರಂಭಿಸಿದರು. ಹೊಯ್ಸಳ ಬಲ್ಲಾಳರ ಸಾಮ್ರಾಜ್ಯವು ೧೩೨೭ರಲ್ಲಿ ಹಾಳಾಯಿತು ೧೩೪೭ರಲ್ಲಿ ಮುಸಲ್ಮಾನರ ಬಹಮನಿ ಸಂಸ್ಥಾನವು ಸ್ಥಾಪಿತವಾಯಿತು ಉತ್ತರಮಾರ್ಗದ ನಾಡುಗಳೂ ತಿರುಳ್ಗನ್ನಡದ ನಾಡುಗಳೂ ಮುಸಲ್ಮಾನರ ಆಳಿಕೆಗೊಳಗಾಗಲು ಕನ್ನಡದ ಬೆಳೆವಳಿಯು ಆ ಪ್ರಾಂತಗಳಲ್ಲಿ ನಿಂತುಹೋಯಿತೆಂದು ಹೇಳಬಹುದು. ಧಾರವಾಡ ಪ್ರಾಂತವೂ ಬಿಜಾಪುರದ ಸುಲ್ತಾನನ ಆಳಿಕೆಗೊಳಪಟ್ಟಿತು ವಿಜಯನಗರ ಸಾಮ್ರಾಜ್ಯದ ನಾಡುಗಳು ತುಂಗಭದ್ರಾ ಕೃಷ್ಣಾನದಿಗಳ ದಕ್ಷಿಣಕ್ಕೆ ಇದ್ದುವಾದುದರಿಂದ ಕನ್ನಡವು ಇವರರಾಜ್ಯದಲ್ಲಿ ದಕ್ಷಿಣೋತ್ತರ ಮಿಶ್ರಮಾರ್ಗದಲ್ಲಿ ಬೆಳೆಯುತ್ತ ಬಂತು. ವಿಜಯನಗರ ಸಾಮ್ರಾಜ್ಯದ ಕನ್ನಡದ ಸ್ಥಿತಿಯನ್ನು ಕೆಳಗಣ ಶಾಸನಗಳಿಂದ ತಿಳಿಯಬಹುದು ಲೋಕ ವ್ಯವಹಾರದ ಕನ್ನಡವು ಉತ್ತರಮಾರ್ಗದ ಕನ್ನಡವಾಯಿತು ಗ್ರಂಥಸ್ಥ ಕನ್ನಡವು ಮಿಶ್ರಮಾರ್ಗದ ಕನ್ನಡವಾಯಿತು. ವಿಜಯನಗರದ ರಾಜರು ಕನ್ನಡವನ್ನೂ ತೆಲುಗನ್ನೂ ಆಡುತ್ತಿದ್ದರು, ಅವರ ರಾಜಧಾನಿಯು ಕನ್ನಡದೇಶದಲ್ಲಿತ್ತು.

(1) ಶಿಕಾರಿಪುರತಾಲ್ಲೂಕಿನ 282. ಕಾಲ 1368 ಬುಕ್ಕರಕಾಲ.

ಓಂಸ್ವಸ್ತಿ॥ ಶ್ರೀಮಜಯಾಭ್ಯುದಯ ಶಕವರ್ಷ೧೨೯೧ನೇ ಕೀಲಕಸಂವ
ತ್ಸರದ ಕಾರ್ತಿಕಶುದ್ಧ ೧ ಭಾನುವಾರದಲು ಶ್ರೀಮನ್ಮಹಾರಾಜಾಧಿರಾಜ
ಶ್ರೀ ವೀರ ಬುಕ್ಕರಾಯರ ಶ್ರೀಮನ್ಮಹಾಪ್ರಧಾನ ಮಾದರಸ ಒಡೆಯರಿಗೆ
ಬನವಸೆಯನಾಡ ಪನಿಚ್ಛಾಸರದ ಒಳಗಣ ಗುತ್ತಿಯ ರಾಜ್ಯದ ಹದಿನೆಂ
ಟು ಕಂಪಣಕೆ ಮುಖ್ಯರಪ್ಪರುಂ ಸಕಲಗುಣಾಲಂಕೃತರುಂನು ಆದು
ತಪ್ಪರುಂ ಧರ್ಮಪ್ರತಿಪಾಲಕರುಮಪ್ಪ ಒಡನಾಡ ಶ್ರೀಮದನಾದಿಯ

ಓಲೆಯಗ್ರಹಾರದ ಯಲಸಿಯರಾಮಣ್ಣ * * ಹಂನಿಹಳ್ಳಿಯ ನಾಡ ಆಗಟೂರ ಚಿಕ್ಕಗೌಡನೊಳಗಾದ ಸಮಸ್ತಗೌಡು ಪ್ರಜೆಗಳು ತವೊಳು ಸರ್ವಸನ್ಮತರಾಗಿ ಮಾದರಸ ಒಡೆಯರು ಮಾಡುವ ಧರ್ಮನಿಮಿತ್ತವಾಗಿ ಕೊಟ್ಟ ಕ್ರಯಪತ್ರದ ಕ್ರಮವೆಂತೆಂದರೆ.

ನಮ್ಮ ಹದಿನೆಂಟು ಕಂಪಣದ ಒಳಗಣ ನಾಗರ ಖಂಡೆಯದ ಎಪ್ಪತ್ತರ ಒಳಗಣ ಮುಚ್ಚುಂಡಿಯ ಕುಳತೆವಟ್ಟಸಹಿತವಾಗಿ ವರಹಗ ೬೦ ಆಕಾಲುವಳಿ ಮುತ್ತಹಳ್ಳಿಯ ಕುಳವರಹಗ ೧೦ ಉಭಯಂ ವರಹಗ ೪೦ ಅಕ್ಷರದಲ್ಲು ವರಹ ನಾಲ್ವತ್ತು ಹೊನ್ನಿಗೆ ಯಥೋಕ್ತವಹ ಕ್ರಯ ಐದುಮಡಿಯಾಗಿ ವರಹಗ ೨೦೦ ಅಕ್ಷರದಲ್ಲು ವರಹಗ ಇನ್ನೂರು ಹೊಂನನೂ ಕೊಂಡು ನಮ್ಮ ಹದಿನೆಂಟು ಕಂಪಣಕ್ಕೆ ಹದಿನೆಂಟು ಉಡುಗೊರೆಯನೂ ಕೊಂಡು ಆ ಹೊಂ(ನನೂ)ಉಡುಗೊಂರೆಯನೂ ನಾವೆಲ್ಲರೂ ಸಧೆ ಮರಿಯಾದೆಯಲೂ ಹ(ಂಚಿ) ಕೊಂಡುವೊದಲು ಕುಳವರಹಗ ೪೦ ಹೊಂನನೂ ...ಹದಿನೆಂಟು ಕಂಪಣದವೇಲೆ ಹಾಸರಸಿ ಬರಸಿಕೊಂಡು ಮಾದರಸ ಒಡೆಯರು ಮಾಡುವ ಧರ್ಮಕ್ಕೆ ನಾವು ಕೊಟ್ಟೆಲು * *

"ಒಡೆಯರಿಗೆ" ರಾಮಂಣ," ಪ್ರಜೆಗಳು" ಅಕ್ಷರದಲು" ಇವೆಲ್ಲವೂ ಉತ್ತರ ಮಾರ್ಗದ ಪ್ರಯೋಗಗಳು.

(2). ಶ್ರೀರಂಗಪಟ್ಟಣ ತಾಲ್ಲೂಕಿನ 86. ಕಾಲ 1476 ವಿಜಯನಗರದ ವಿರೂಪಾಕ್ಷರ ಕಾಲ.

ಸ್ವಸ್ತಿ॥ ಶ್ರೀ ಜಯಾಭ್ಯುದಯ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಅರಿರಾಯರ ವಿಭಾಡ, ಭಾಷೆಗೆತಪ್ಪುವ ರಾಯರಗಂಡ, ಚತುಸ್ಸಮುದ್ರಾಧಿಪತಿ, ಶ್ರೀವೀರ ಪ್ರತಾಪ, ಶ್ರೀ ವಿರೂಪಾಕ್ಷ ಮಹಾರಾಯರು ಸುಗಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯಿ ಉತ್ತಿರಲು ॥ ಶಕವರುಷ । ೧೩೯೮ನೆಯ ವರ್ತಮಾನವಾಹ ವಿರೋಧಿಸಂವತ್ಸರದ ಆಶ್ವೀಜ ಬಹುಳ--- ಪುಣ್ಯಕಾಲದಲು * * ದಕ್ಷಿಣ ಬದರಿಕಾಶ್ರಮ ಶ್ರೀ ಯಾದವಗಿರಿಯಾದ ತಿರುನಾರಾಯಣ ಪುರದ ಶ್ರೀ ನಾರಾಯಣದೇವರ ದಿವ್ಯ ಲಕ್ಷುಮಿದೇವಿಯರು ಶಟಗೋಪ ಮುನಿವರ ಕಯಿಂಕರ್ಯ ಪಾರಂಗತರಾದ ನಾಚಿಯಾರಮ್ಮನವರು ಕುರು—ವಳಂಪಡಿಯ ಪರಮವಯಿದಿಕ ಶ್ರೀವಯಿಷ್ಣವ ಮಹಾಜನಂಗಳಿಗೆ ಕೊಟ್ಟಧರ್ಮ.

(3). ನಂಜನಗೂಡು ತಾಲ್ಲೂಕಿನ 195. ಕಾಲ 1513 ವಿಜಯನಗರ ಕೃಷ್ಣರಾಯರ ಕಾಲ.

ಸ್ವಸ್ತಿ॥ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀಮನ್ಮಹಾಮೇದಿನೀ ಮೀಸೆಯರ ಗಂಡ, ಕಠಾರಿಸಾಳುವ ಶ್ರೀಮದ್ದಕ್ಷಿಣಸಮುದ್ರಾಧಿಪತಿ ನಾರಸಿಂಹವರ್ಮ್ಮ ಮಹಾಧಿರಾಜ ತತ್ಪುತ್ರ ಪಿತುರನ್ವಾಗತ ಸಕಲ--- ಜನಾನಂದ ಸಂದೋಹ ಶೌರ್ಯಪರಾಕ್ರಮೋದಾರ ಸಕಲ ದೇಶಾಧೀಶ್ವರ ಮಣಿಮುಕುಟ ಚರಣಾರವಿಂದ ಶ್ರೀಮತ್ಕೃಷ್ಣವರ್ಮ ಮಹಾರಾಜಂ ಪೃಥ್ವೀರಾಜ್ಯಂಗೆಯಿ ಉತ್ತರಲು। ಶ್ರೀಮತು ದಕ್ಷಿಣವಾರಣಾಸಿಯಾದ ತ್ರಿಮಕೂಟದಲ್ಲಿ ಅಗಸ್ತ್ಯನಾಥದೇವರ ಸನ್ನಿಧಿಯಲು ಶಾಲಿವಾಹನಶಕ ವರುಷಂಗತೇಷು ೧೪೩೫ ಸಂದುವರ್ತಮಾನ ಶ್ರೀಮುಖಸಂವತ್ಸರದ ಆಶ್ವಯುಜ ಶುದ್ಧ ೧೦ ಆದಿವಾರದಲು ಶ್ರೀಕೃಷ್ಣದೇವ ಮಹಾರಾಯರ ನಿರೂಪದಿಂದ ಮಹಾಪ್ರಧಾನ ಸಾಳುವ ತಿಂಮರಸರ ತಂಮಂದಿರಾದ ಸಾಳುವ ಗೋವಿಂದರಾಜ ಒಡೆಯರು ಉಂಮತೂರ ತಿರುಮಲೆದೇವರ ಅಂಗರಂಗ ಭೋಗಕ್ಕೆ ಆ ಪುಣ್ಯಕಾಲದಲ್ಲಿ ಸಹಿರಣ್ಯೋದಕ ಧಾರಾಪೂರ್ವಕವಾಗಿ ಮಾಡಿದ ಧರ್ಮಕಾರ್ಯ

ಮಹಾರಾಷ್ಟ್ರದಿಂದ ಹುಟ್ಟಿದ ಮರಾಠೀಭಾಷೆಯು ಸುಮಾರು ಕ್ರಿ. ಶ. ೧೨-೧೩ನೆಯ ಶತಮಾನಗಳಲ್ಲಿ ಗ್ರಂಥಸ್ಥವಾಗಿ ಅದರ ವಾಙ್ಮಯವು ಬೆಳೆಯುತ್ತಾ ಬಂದಿತು. ಮಸ್ತುಭಾಪು ಭಾಪ್ರ, ಭಾಪುರೆ ಮುಂತಾದ ಅನೇಕಾನೇಕ ಮರಾಠಿ ಶಬ್ದಗಳು ಕನ್ನಡಕೆ ಸೇರುತ್ತಬಂದುವು ವಿಜಯನಗರದ ರಾಜರು ಬಿಜಾಪುರ, ಗೋಲ್ಕೊಂಡ, ಬೀದರ್ ಮುಂತಾದ ಮುಸಲ್ಮಾನ ರಾಜರೊಡನೆ ಕದನವೆಸಗುತ್ತ ಬಂದುದರಿಂದ ರಾಜಕೀಯಸಂಬಂಧವಾದ ಮಾತುಗಳು ಕನ್ನಡಕ್ಕೆ ಸೇರುವುದಕ್ಕೆ ಪ್ರಾರಂಭವಾಯಿತು.

ವಿಜಯನಗರದ ರಾಜ್ಯಗಳಲ್ಲಿ ದ್ರಾವಿಡಭಾಷೆಗಳೆಲ್ಲವೂ ಇದ್ದುವು ಇಮ್ಮಡಿ ಹರಿಹರರಾಯರು (೧೩೭೭-೧೪೦೪) ಕರ್ನಾಟಕವಿದ್ಯಾವಿಲಾಸರೆಂಬ ಹೆಸರನ್ನು ಪಡೆದಿದ್ದರು. ಕೃಷ್ಣರಾಯರು (೧೫೦೯-೧೫೨೯) ಸಂಸ್ಕೃತವನ್ನೂ ತೆಲುಗನ್ನೂ ವಿಶೇಷವಾಗಿ ಪ್ರೋತ್ಸಾಹಿಸಿದರು ವಿಜಯನಗರದ ಅರಸರು ತೆಲುಗರಾದುದರಿಂದ ತೆಲುಗು ಭಾಷೆಯು ಬಹಳ ಪ್ರೋತ್ಸಾಹವನ್ನು ಹೊಂದಿತು ಈ ಅರಸರು ದಕ್ಷಿಣಮಾರ್ಗದ ಕನ್ನಡವನ್ನು ಮೆಚ್ಚಿದಹಾಗೆ ತೋರುವುದಿಲ್ಲ ಚಾಳುಕ್ಯರಾಜರು ದಕ್ಷಿಣಮಾರ್ಗದ ಕನ್ನಡವನ್ನು ಪರಿಪೋಷಿಸುತ್ತಿದ್ದಂತೆ ಉತ್ತರ ನಾಡಿನಲ್ಲಿ ಬೆಳೆದ ಉತ್ತರಮಾರ್ಗದ ಕನ್ನಡವನ್ನು ವಿಜಯನಗರದ ಅರಸರು ಪರಿಪೋಷಿಸಿದರೆಂದು ಹೇಳಬಹುದಾಗಿದೆ. ಬಸವಪುರಾಣ, ಚೆನ್ನಬಸವಪುರಾಣ, ತೊರವೆರಾಮಾಯಣ, ನಿತ್ಯಾತ್ಮಕ ಯೋಗಿಯ ಭಾಗವತ, ಕುಮಾರವ್ಯಾಸನ ಭಾರತ, ತಿಮ್ಮಣ್ಣನ ಭಾರತ, ರಸರತ್ನಾಕರ—ಈ ಉದ್ಗ್ರಂಥಗಳು ಈ ಅರಸರ ಆಳಿಕೆಯಲ್ಲಿ ಹುಟ್ಟಿದುವು

ಈಕಾಲದ ಕನ್ನಡದ ಮಾದರಿಗಾಗಿ ಬಸವಪುರಾಣ, ಕುಮಾರವ್ಯಾಸನ ಭಾರತ, ಶುಕಯೋಗಿಯ ಭಾಗವತ— ಇವುಗಳಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ

ಭೀಮಕವಿಯ ಬಸವಪುರಾಣದಿಂದ (ಕಾಲ ಸುಮಾರು ೧೩೬೯) .

[illegible] ಕವಿತಾಚಾತುರ್ಯ

ವೇರಪದ ವಪಶಬ್ದ ವಚನ ।
ತಾತ್ಪರ ಪ್ರಥಮೋಪಮೆ ಯುತಿ ಪದ ।
ಪೂರಕಂ ದುಸ್ಸಂಧಿ ಯತಿಬದ್ಧಂ ವಿರುದ್ಧಾರ್ಥ ॥
ನೀರಸಂ ಶೈಥಿಲ್ಯವರ್ಣಂ ।
ಕಾರಕವಿರಹಿತಂ ಕ್ರಿಯಾಳಂ ।
ಕಾರಹೀನವೆನಿಪ್ಪ ಪೊಳ್ಳಂ ತೊಱೆ ಕಳೆದಿಂತು ॥

ಸರಸ ಮೃದುತರ ಯಮಕ ಗಮಕ ।
ಸರ ಸಮಾಸ ಪ್ರಾಸ ದೇಶೀ ।
ಸರಣೆ ಶಬ್ದಾರ್ಥೋಪಮ ಚಾತುರ್ಯ ಮಾಧುರ್ಯಂ ॥
ಸರಳಪದಶಯ್ಯಾ ದೃಢವಾಕ್ಯ ।
ಕರಣಯುತ ಲಾಲಿತ್ಯ ನಿಯಮಮಾ ।
ಸ್ಫುರ ಲಕ್ಷಣ ಭಾವಮಾಗಿರೆ ರಚಿಸುವೆಂ ಕೃತಿಯಾ ॥

ನಾಗಲಾಂಬಿಕೆಯ ಸೌಂದರ್ಯ.

ಕಂದದೆಂದುಂ ದಿನದಿನಕೆ ಕಳೆ ।
ಗುಂದದೆಂದುಂ ರಾಹುಬಾಧೆಯೊ ।
ಳೊಂದದೆಂದುಂ ಹುಣ್ಣಿಮೆಯದಿನದಂದು ಶರದಿಂದು ॥
ಕುಂದಗಂಧಿಯ ವದನರುಚಿಗೊರೆ ।
ಸಂದುಸಂದವೆನಿಪ್ಪುದೆಲೆವೆಱೆ ।
ಯಿಂದಸತಿಕಾಂತಿಯೊಳೆಸೆವುದಬಲೆಯ ಮಿಸುಪ ನೊಸಲು ॥

ಮದನಿಕಂ ಪುಟ್ಟಿದ ತಳಿರೊ ಸು ।
ಟ್ಟಿದವೆಱಗದರಲೊ ಶುಕಂ ಮು ।
ಟ್ಟಿದ ಫಳವೊ ಗಱಿಮುಟ್ಟದಂಗಜನಂಪೊ ಕಳಹಂಸೆ ॥
ಕದುಕಿದ ಮೃಣಾಳವೊ ಶರಧಿಯು ।
ಪ್ಪುದಕವೊಂದದ ಮಣಿಯೊ ಫಣಿಪಿಡಿ ।
ಯದ ಸುಧಾಕರಬಿಂಬವೋ ಅವಳೆಸೆವ ಕನ್ನಿಕೆಯೋ ॥

ಬಸವಸ್ತುತಿ.

ಅಚ್ಚ ಶಿವನೊಂದಚ್ಚು ಭಕ್ತಿಯು ।
ನೆಚ್ಚು ಶರಣರವುಚ್ಚು ಹಿರಿಯರ ।
ಮೆಚ್ಚು ಸತ್ಯದಕೆಚ್ಚು ಪರವಾದಿಗಳೆದೆಯ ಕಿಚ್ಚು
ಉಚ್ಚರಿಸುವವರಿಚ್ಚು ಕುಜನರ ।
ಬೆಚ್ಚು ಶಾಂತಿಯ ಹೆಚ್ಚು ಧೂರ್ತರ ।
ಕೊಚ್ಚು ಕಲಿತನದಚ್ಚು ಸುಖಕಣಿ ಮುಚ್ಚುಮರೆಯಿಲ್ಲ ॥

ಇಗಳಲ್ಲಿ ದಕ್ಷಿಣಮಾರ್ಗದ ಪ್ರಯೋಗಗಳು ಸ್ವಲ್ಪ ಹೆಚ್ಚಾಗಿ ಸೇರಿವೆ,

ಕನ್ನಡ ಭಾಗವತದಿಂದ.

ದೇವಕಿಯ ಸುತರಾಗಿ ಯದುಭೂ ।
ಪಾವಳಿಯ ಮಧ್ಯದಲಿ ಘನತೇ ।
ಜೋವಿಸಿಪ್ಪರು ರಾಮಕೃಷ್ಣರು ಚಾರುಮೂರ್ತಿಗಳು ॥
ಸೇವಕರು ಸುರವರರು ನಾವ್ನೃಪ ।
ಜೀವಿಗಳು ತತ್ವದಕೆ ನೀನೀ ।
ಗೀವ್ರದಾರಾಮಂಗೆ ಮಗಳ ಮಗನೆ ಹೋಗೆಂದ ॥

ಎನೆ ಹಸಾದವೆನುತ್ತಲಿನೃಪನಾ ।
ವನಜಭವನಡಿಗೆರಗಿ ಬೀಳ್ಕೊಂ ।
ಡನುಪಮನು ನಡೆತಂದನಂದಾ ದ್ವಾರಕಾಪುರಕೆ ॥
ಮನದೊಳಗೆ ನಾಚುತ್ತ ತನ್ನಯ ।
ತನುಜೆಯನು ತಂದಿತ್ತನಬುಜಾ ।
ಸನನ ನೇಮದಲಚ್ಯುತಾಗ್ರಜ ನೆನಿಪ ರಾಮಂಗೆ ॥

ನಿಲುಕೆಮುಗಿಲನು ಮುಟ್ಟಿವಾಮದ ।
ವಳಗೆಯನು ನೋಡುತ್ತ ಮಕುಟವ ।
ನೊಲೆದು ವಿಸ್ಮಿತನಾಗಿ ಹರಹರ ಯೋಗಶಕ್ತಿಗಳ ॥
ಬಲುಹದೆಂತುಟೊ ಕಂದಳದ ನೇ ।
ಗಿಲಲಿ ಕುಸಿದಡೆ ಕಾಂತೆ ಸಮಕೋ ।
ಮಲಸಮಂಜಸ ರೂಪೆಯಾದಳು ನಿಮಿಷಮಾತ್ರದಲಿ ॥

ಭಲರೆ ಭಾಪುರೆ ಯೋಗ ಸಿದ್ಧಿಯು ।
ಗುರುವಲಾ ಮಝುರೇ ಯೆನುತ ಸುರ ।
ಲಲನೆಯರು ಹೊಗಳುತ್ತ ಕರೆದರು ಪುಷ್ಪವೃಷ್ಟಿಗಳ ।

ತೆಳಗೆ ಕೋರಣ ವಾದ್ಯಕನ್ನಡಿ ।
ಕಳಸ ಪಥವದಲಂದು ತತ್ಪುರ ।
ದೊಳಗೆ ಮೆರೆದುದು ರಾಮನ್ಹಿ ಪಾಟಿಕ ಮಹೋತ್ಸಾಹ ॥

(ಸಂಧಿ ೩೫, ಪದ್ಯ ೮-೧೧)

ಈ ಪದ್ಯಗಳಲ್ಲಿ ಉತ್ತರದವಾರ್ಗಗಳೇ ಹೆಚ್ಚಾಗಿವೆ. ಕೊನೆಯ ಪದ್ಯದಲ್ಲಿ ಪುರಾಣಿಯ ಮಾತುಗಳಿವೆ.

ಕುಮಾರವ್ಯಾಸನ ಭಾರತದಿಂದ-ವಿರಾಟಪರ್ವ

ಇತ್ತಲುಜುಣನ ಸುತ್ತರನ ಬಂ ।
ಒತ್ತಿಬಂದನು ಹೋದೆಯಾದಡೆ ।
ಕಿತ್ತು ಒಸುಡುವೆ ನಿನ್ನ ತಲೆಯನು ನಿಲ್ಲುನಿಲ್ಲೆನುತಾ ॥
ಮೃತ್ಯುವೋ ಸಾರಥಿಯೊ ಪಾಪಿಯು ।
ನೆತ್ತಣಿಂದವೆ ಮಾಡಿಕೊಂಡೆನೆ ।
ಸುತ್ತ ಮರಳಿದು ನೋಡಿ ನಿಲ್ಲದೆ ಮುತ್ತಿ ಸ್ವಪರದಾ ॥

ಇಟ್ಟಣಿಸಿ ನರನೂರು ಹಜ್ಜೆಯೊ ।
ಳಟ್ಟಿ ಪಿಡಿದನಿದೇನ ಮಾಡಿದೆ ।
ಹುಟ್ಟಿದೆಯೊ ಹಾದರಕೆ ಕ್ಷತ್ರಿಯ ಜಜನ್ಮೋ ನೀನು ॥
ಧಿಟ್ಟತನವಾಗಿ ಹೆಂಗಳಿದಿರಲಿ ।
ಹೊಟ್ಟುಗುಟ್ಟಿದೆ ಹಗೆಗಳಿದಿರಲಿ ।
ಒಟ್ಟಿಕೊಂಡೆ ದುರಾತ್ಮ ಮುರಿದೆ ಪರಾಟನಸ್ವಯವಾ ॥

ಹಲುಗಿರಿದು ಬಾಯೊಳಗೆ ಬೆರಳ ।
ನ್ನಿಳುಕಿ ತಲೆವಾಗಿದನು ಸಾರಥಿ ।
ಕಳುಹು ಕಳೆಯದಿರು ನಿನ್ನ ಬಸುರಲಿ ಮರಳಿ ಬಂದವನು ॥
ಕೊಳುಗುಳದೊಳೇ ಯೊಡ್ಡಮುರಿವ ।
ಗ್ಗಳೆಯ ರುಂಟೋ ಲೋಗರಿಂದವೆ ।
ಕೊಲಿಸದಿರು ನಿಕ್ಕುತ್ತಿಕೆಡುಹು ಕರಾರಯಿದೆ ಯೆಂದಾ॥ (VII, ೧೮-೧೮)

ಈ ಪದ್ಯಗಳಲ್ಲಿ ದಕ್ಷಿಣೋತ್ತರ ಮಾರ್ಗಗಳೆರಡೂ ಇರುವುವು.

೧೧. ಮೈಸೂರು ರಾಜ್ಯದ ಕನ್ನಡ.

ತಾಳೀಕೋಟೆ ಯುದ್ಧದಲ್ಲಿ (೧೫೬೫) ವಿಜಯನಗರ ಸಾಮ್ರಾಜ್ಯವು ಹಾಳಾಯಿತು. ವಿಜಯನಗರದ ಅರಸರ ಒಂದು ಶಾಖೆಯು ಶ್ರೀರಂಗಪಟ್ಟಣದಲ್ಲಿ ೧೬೧೦ರವರೆಗಿತ್ತು. ರಾಜವೊಡೆಯರವರು ಶ್ರೀರಂಗಪಟ್ಟಣವನ್ನು ತಮ್ಮವಶ ಮಾಡಿಕೊಂಡು

ಅದನ್ನು ರಾಜಧಾನಿಯನ್ನಾಗಿ ಮಾಡಿದರು ಕಂಠೀರವನರಸರಾಜರು (೧೬೩೮-೧೬೫೯) ಮತ್ತು ದೊಡ್ಡದೇವರಾಜಒಡೆಯರವರು (೧೬೫೯-೧೬೭೨) ರಾಜ್ಯವನ್ನು ನಾನಾ ದಿಕ್ಕುಗಳಲ್ಲಿ ವಿಸ್ತರಿಸಿದರು ಚಿಕ್ಕದೇವರಾಜಒಡೆಯರು (೧೬೭೨-೧೭೦೪) ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಯಶೋವಂತರಾಗಿ ಬಾಳಿದರು. ಇವರ ಆಸ್ಥಾನದಲ್ಲಿದ್ದ ತಿರುಮಲಾರ್ಯರೂ ಸಿಂಗರಾರ್ಯರೂ ಚಿಕ್ಕುಪಾಧ್ಯಾಯರೂ ಕನ್ನಡದಲ್ಲಿ ಅನೇಕಾನೇಕ ಗ್ರಂಥಗಳನ್ನು ಬರೆದರು ಕೆಲವು ದಕ್ಷಿಣಮಾರ್ಗದಲ್ಲಿವೆ, ಮತ್ತೆ ಕೆಲವು ಮಿಶ್ರಮಾರ್ಗ ದಲ್ಲಿವೆ ದೊಡ್ಡಕೃಷ್ಣರಾಜಒಡೆಯರವರು (೧೭೧೪-೧೭೩೧) ಮುಸಲ್ಮಾನರಕೈಗೆ ರಾಜ್ಯಭಾರವನ್ನು ವಹಿಸಿದರು ಹೈದರ್ ಮತ್ತು ಟಿಪ್ಪು-ಇವರಿಬ್ಬರೂ ೧೭೬೧ರಿಂದ ೧೭೯೯ರವರೆಗೆ ರಾಜ್ಯವನ್ನಾಳಿದರು. ಮುಮ್ಮಡಿಕೃಷ್ಣರಾಜಒಡೆಯರವರು ೧೮೩೧ ರಲ್ಲಿ ರಾಜ್ಯಭಾರವನ್ನು ಇಂಗ್ಲೀಷರಿಗೊಪ್ಪಿಸಿದರು ೧೮೩೧ರಿಂದ ೧೮೮೧ರವರೆಗೆ ಇಂಗ್ಲೀಷರು ಮೈಸೂರುರಾಜ್ಯದಲ್ಲಿ ವಿದ್ಯಾಶಾಲೆಗಳನ್ನು ಸ್ಥಾಪಿಸಿ ರಾಜ್ಯಭಾರವನ್ನು ಮಾಡಿದರು. ೧೮೮೧ರಲ್ಲಿ ಚಾಮರಾಜೇಂದ್ರಒಡೆಯರವರಿಗೆ ರಾಜ್ಯಾಧಿಕಾರವು ಕೊಡಲ್ಪಟ್ಟಿತು. ಇವರ ಆಳಿಕೆಯಲ್ಲಿ ವಿದ್ಯಾಶಾಲೆಗಳು ಹೆಚ್ಚಿದುದಲ್ಲದೆ ಅನೇಕ ನಾಟಕ ಮುಂತಾದುವು ಬರೆಯಲ್ಪಟ್ಟು, ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹವುಂಟಾಯಿತು ಈಗ ಆಳುತ್ತಿರುವ ನಮ್ಮ ನಾಲ್ವಡಿಕೃಷ್ಣರಾಜೇಂದ್ರಒಡೆಯರವರು ಕರ್ನಾಟಭಾಷಾಭಿಮಾನಿಗಳಾಗಿ ಮೆರೆಯುತ್ತ ಮೈಸೂರು ಯೂನಿವರ್ಶಿಟಿಯನ್ನು ೧೯೧೬ರಲ್ಲಿ ಸ್ಥಾಪಿಸಿದರು ಇನ್ನು ಮುಂದಕ್ಕೆ ಕನ್ನಡವು ಅತಿಶಯತರಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ

೧೭ ಮತ್ತು ೧೮ನೆಯ ಶತಮಾನಗಳಲ್ಲಿದ್ದ ಮೈಸೂರುಸಂಸ್ಥಾನದ ಕನ್ನಡ ವನ್ನು ತೋರಿಸುವುದಕ್ಕೆ ಎರಡು ಶಾಸನಗಳನ್ನು ಕೊಡುತ್ತೇವೆ

(1). ಮೈಸೂರುತಾಲ್ಲೂಕಿನ 7. ಕಾಲ 1685 ಚಿಕ್ಕದೇವರಾಜ ಒಡೆಯರ ಕಾಲ.

ಸ್ವಸ್ತಿ॥ ಶ್ರೀವಿಜಯಾಭ್ಯುದಯ ಶಾಲೀವಾಹನಶಕ ವರುಷ ೧೬೦೭ ಸಂದವರ್ತಮಾನನಾದ ಕ್ರೋಧನನಾಮ ಸಂವತ್ಸರದ ಶ್ರಾವಣ ಬಹುಳ ೮ಲ್ಲೂ ಆತ್ರೇಯಗೋತ್ರದ ಅಶ್ವಲಾಯನ ಸೂತ್ರದ ರುಕ್‌ಶಾಖೆಯ ಮೈಸೂರು ಚಾಮರಸ ಒಡೆಯರೈಯನವರ ಪ್ರಪೌತ್ರರಾದ ಹಿರಿದೇವರಾಜ ವೊಡೆಯರೈಯನವರ ಪೌತ್ರರಾದ ದೊಡ್ಡದೇವರಾಜ ಒಡೆಯರೈಯನವರ ಪುತ್ರರಾದ ಜಗದೇಕಾಂಬರ ಗಂಡ ಲೋಕೈಕವೀರ ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಪ್ರೌಢಪ್ರತಾಪನಪ್ರತಿಮವೀರ ನರಪತಿ ಶ್ರೀಚಿಕದೇವ ಮಹಾರಾಜ ಒಡೆಯರೈಯನವರು ನಂಮ್ಮ ದೊಡ್ಡ ಅರಸಿನವರುಮಾಡಿದ ದೇವರಾಯ ಅಗ್ರಹಾರದಲ್ಲಿ ನಮ್ಮ ಮುಖ್ಯಾಶ್ರಿತ ಅಳಗ ಶಿಂಗರೈಯ್ಯಂಗಾರಿಗೆ ಪ್ರಸನ್ನರಾದ ಗೋವರ್ಧನೋದ್ಧರಣ ಗೋಪಾಲಸ್ವಾಮಿಯವರ ಶ್ರೀ ಭಂಡಾರಕ್ಕೆ ಬರಸಿಕೊ

ಟ್ಟ ಭೂದಾನ ಶಿಲಾಶಾಸನ ಕ್ರಮವೆಂತೆಂದರೆ- ಈ ಗೋಪಾಲಸ್ವಾಮಿಯವರ ನಿತ್ಯಕಟ್ಲೆ ಅಮೃತಪಡಿ ದೀಪಾರಾಧನೆಗೆ ನಮಗೆ ವಿಕ್ರಮಾರ್ಜಿತವಾಗಿ ವಂಶಾನುಕ್ರಮವಾಗಿ ನಡದುಬರುವ ಮೈಸೂರ ಹೋಬಳಿ ಕೆಂಪನಹಳ್ಳಿ ಸ್ಥಳದ ಮಾಣಿಕಪುರದ ಗ್ರಾಮದಲ್ಲಿ ತಿರುಮಲೈಯ್ಯಂಗಾರಿಗೆ ಧಾರೆಯನೆರೆದುಕೊಟ್ಟ ತೋಟಸ್ಥಳ ಹೊರತಾಗಿ ಮಿಕ್ಕಿನ ಆಸಕಲ ಸ್ವಾಮ್ಯ ಸಹಾ ಈ ಮಾಣಿಕಪುರದ ಗ್ರಾಮ ೧ ಇದಕ್ಕೆ ಹೊಂದಿಸಿ ಕೊಟ್ಟ ಈ ಕೃಷ್ಣ ಜಯಂತೀ ಪುಣ್ಯಕಾಲದಲ್ಲಿ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಧಾರೆಯನೆರದು ಕೊಟ್ಟ ಪಾದಕಾರಣ ಈ ಗ್ರಾಮಕ್ಕೆ ಸಲ್ಲುವಾ ಚತುಸ್ಸೀಮೆ ಇದಕ್ಕೆ ಹೊಂದಿಸಿಕೊಟ್ಟ ಮಾರಗೌಡನಹಳ್ಳಿ ಕಂಪುರದಲ್ಲಿ ಭೂಮಿಸಹಾ ಈ ಚತುಸ್ಸೀಮೆಯೊಳಗುಳ್ಳ ನಿಧಿನಿಕ್ಷೇಪ ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯಂಗಳೆಂಬ ಅಷ್ಟಭೋಗ ತೇಜ ಸ್ವಾಮ್ಯಂಗಳು ಈ ಗೋಪಾಲ ಸ್ವಾಮಿಯವರ ಶ್ರೀ ಭಂಡಾರಕ್ಕೆ ಆ ಚಂದ್ರಾರ್ಕವಾಗಿ ಸಲುವದು ಯೆಂದು ಬರಸಿಕೊಟ್ಟ ಶಿಲಾಶಾಸನ

(2) ಶ್ರೀರಂಗಪಟ್ಟಣದ 64. ಕಾಲ ಸುಮಾರು 1722 ಮೈಸೂರು ರಾಜರು

ವೃತ್ತ ॥ ಜಗದೊಳ್ ಶ್ರೀ ಚಿಕದೇವನಿಂ ಪಿರಿಯರಿಲ್ಲೆತ್ತಾನು ಮುಂಟಾದೊಡಂ ॥
ಒಗೆಗೊಳ್ಗುಂ ಪಳವಾತಿನೊಳ್ಗೊರೆಯುಮಿಲ್ಲೆತ್ತಾನು ಮುಂಟಾದೊಡಂ ॥
ಒಗೆಗೊಳ್ಗುಂ ಪ್ರತಿಬಿಂಬದೊಳ್ ಮಱೆಪರಿಲ್ಲೆತ್ತಾನು ಮುಂಟಾದೊಡಂ
ಬಗೆಗೊಳ್ಗುಂ ಪ್ರಣಯಾಪರಾಧ ವಿಧದೊಳ್ ಮೆಯ್ಯೋರದಿನ್ನೆಲ್ಲಿಯುಂ ॥

ವೃತ್ತ ॥ ಬಳಿಸಲ್ಸೈನ್ಯದಲ್ಲಿ ಚಿಕದೇವನೃಪಾಲನ ಕೈಯ ನಾದಕಂ ।
ಪೊಳೆದೊಡನಾಂತು ಕುತ್ತಿಕರುಳಂ ಭರದಿಂ ತಿರಿದುರ್ಚಿ ರಾಜಸಂ ।
ಕುಳಮನೆ ಪೊಯ್ದು ಕಾಯ್ದು ಮಮರೇಶನಗೆಲ್ದು ಪುರಪ್ರಜಂಗಳಂ ॥
ಸೆಳೆದೆಡೆಯಾಡುಗುಂ ಮಿಳಿರಶಿಕ್ಷಿಪ ಕೃಷ್ಣನ ಲೀಲೆಯಂತೆವೊಲ್ ॥

ಕಂದ॥ ರಂಗಂ ಬೊಕ್ಕರಿಮಣಿಮುಕು ।
ಟಂಗಳನುದುರಿಸುತೆ ಖಡ್ಗನರ್ತಕಿ ಘುರದೊಳ್ ॥
ರಿಂಗಣ ಗುಣಿದಕ್ಕಾಡೆ ಜ ।
ಯಾಂಗನೆ ಚಿಕದೇವರಾಯನುನ್ನತಭುಜದಾ ॥

ವೃತ್ತ ॥ ವಲಿತಾರಾತಿ ಶಿರಾಂಕುರ ಪ್ರತಿಸರಾಲಂಕಾರೆ ಸಂಭಿನ್ನಕೃ ।
ತ್ತಿಲಸಚ್ಚಿತ್ರಪಟೀಪರೀತೇ ರಿಪುಹೃತ್ಪಂಕೇರುಹೋತ್ತಂಸ ಮುಂ ॥
ಜುಳಿಸೊಂಪಿಂ ಚಿಕದೇವ ಖಡ್ಗವಧು ಗಾಢೋತ್ಸಾಹದಿಂ ದುರ್ಗದಾಂ ।
ತ್ರಲತಾಮಾಲೆಯನಿಟ್ಟಳೆಂದು ಜಯಕಾಂತಂಗಾಹವೋದ್ವಾಹದೊಳ್ ॥

ವೃತ್ತ॥ ದಳಿತಾರಾತಿ ಶಿರಃ ಕಪಾಲತತಿ ಭೃಂಗಾರಂಗಳಂ ವಿದ್ವಿಷ ।
ದ್ಗಳಶೃಂಗಂಗಳನಂ ಸಖಂಡಿತ ಸಿರಾಹಂಶಂಗಳಂ ದೇಹಿಯುಂ ॥
ತಳೆದೊಳ್ಪಿಂ ಚಿಕದೇವ ಖಡ್ಗವಧು ರಕ್ತಾಸಾರಕಾಶ್ಮೀರದೊಳ್ ।
ಕುಳಿಯಂ ಸೂಸಿದಳಾಹವೋತ್ಸವದೊಳಾಶಾಕಾಮಿಸೀ ಬೃಂದದೊಳ್ ॥

ಕಂದ॥ ನಂದಕಮುರುಕೀರ್ತಿಲತಾ ।
ಕಂದಕಮತಿದರ್ಪಿತಾರಿ ಭೂಭೃದ್ವನಿತಾ ॥
ಕ್ರಂದಕಮಾಶ್ರಿತ ಜನತಾ ।
ನಂದಕಮೀ ಖಡ್ಗಮವನಿ ಸಂಕ್ರಂದನನಾ ॥

ವೃತ್ತ॥ ಮಯನೋ ಶಂಬರನೋ ದಶಾಸ್ಯಸುತನೋ ಮಾರೀಚನೋ ಯೆಂಬಿನಂ ।
ಭಯದಿಂದಾಗಳೆ ಡಿಳ್ಳಿ ಭಾಗನಗರ ಪ್ರಾಂತಂಗಳೊಳ್ನಾಡಗರ್ ॥
ಜಯಜೀಯೆಂದಿವರಿಟ್ಟ ಕಪ್ಪದೊದವಿಂ ಪೆಂಪೇರಿ ಬಂದಾ ಶಿವಾ ।
ಜಿಯ ಸೊರ್ಕ್ಕಂ ಮುರಿದಿಕ್ಕಿಯ ಪ್ರತಿಮವೀರಾಭಿಖ್ಯೆಯಂ ತಾಳ್ದಿದಂ ॥

ವೃತ್ತಂ॥ ಒಂದುದೆಶೆಯೊಳ್ ತುರುಕರೊಂದುಕಡೆಯೊಳ್ಪ್ರರಸ ।
ರೊಂದೆಡೆಯೊಳಾರೆಯರ ಬೃಂದಮಳಲಿಂಬೇ ॥
ರೊಂದು ಬಳಿಯೊಳ್ತಿಗುಳರೊಂದಿರವಿನೊಳ್ಕೊಡಗ ।
ರೊಂದು ಕೆಲದೊಳ್ಮಲೆಗರೊಂದುವೆರೆದೆಲ್ಲರ್ ।
ಸಂವಣಿಸಿ ಕಾಳಗಕೆ ಮುಂದುವರಿವನ್ನಮಥ ।
ಟಿಂದವರ ಧಟ್ಟುಗಳ ಪಂದಲೆಗಳಂ ದಿಗ್ ॥
ಬೃಂದ ಬಲಿಯುತ್ತು ಗೆಲವಿಂಪೆ ಚಿಕದೇವ ನೃಪ ।
ನಂದ ಮಿಗೆ ಪೆರ್ಜಸಮನೊಂದಿ ಸೊಗನಾಳ್ದಂ ॥

ಬಳಸಿಯುಂ ಪೊಂಮುಗೂಡಿ ಪರಿತಂದ ರಿಪುಕ್ಷಿತಿಪಾಲ ವರ್ಗಮಂ ।
ಫಳಿಲನೆ ಪೊಯ್ದು ನೆಂದೊತಮ ಪೆಸರ್ಯೆ ಅಪ್ರತಿಮಂಗಿದಿರ್ದಾ ॥
ಬಳಯುತರಪ್ಪ ಬಲ್ಮುತು ಪುಶಾಹನನೆದಲುಶಾತನಂಕರಂ ।
ಮುಳುಗಿಸಿ ಪ್ಯೆಪೆತ್ತುನೆಗಳ್ದಂ ಜಗದೊಳ್ ಚಿಕದೇವಭೂವರಂ ॥

ವೃತ್ತ॥ ಗಂಡರಗಂಡ ನುರ್ಕುವರಮಕ್ಕಳಗಂಡ ಸಿದಿರ್ಚಿಕೈದುಕೈ ।
ಗೊಂಡರಗಂಡ ನಾಡಿನುಡಿ ತಪ್ಪುವರಾಯರಗಂಡ ನಾಹವೋ ॥
ದ್ದಂಡರಗಂಡನೆಂಬ ಪಲವುಂ ಬಿರುದುಂ ಚಿಕದೇವರಾಯನೊಳ್ ।
ಮಂಡಿತಮಲ್ತೆ ಪೊತ್ತಪೊದಲೊಂದಿದ ಸತ್ಯಪರಾಕ್ರಮಾಂಕದಿಂ ॥

* * *

ಇಂತೀ ಸೀಮಾಪ್ರದೇಶ ಪ್ರತಿಷ್ಠಾಪಿತ ವಾಮನಮುದ್ರ ಶಿಲಾಪರವೇ
ಷ್ಟಿತಗಳಾಗಿ ಯಾದವಪುರೀ ಅಗ್ರಹಾರಕ್ಕೆ ಸಲುವ ಇಪ್ಪತ್ತುಮೂರು

ಗ್ರಾಮಂಗಳ ಚತುಸ್ಸೀಮೆಯೊಳಗುಂಟಾದ ಗದ್ದೆ ಬೆದ್ದಲು ತೋಟ ತಡಿಕೆ ಬಣೆ ಉಚ್ಚುಕಟ್ಟು ಕಾಡಾರಂಭ ನೀರಾರಂಭ ಮಗ್ಗ ಮನೆವಣ ಸುಂಕ ಪೊಮ್ಮು ಸುವರ್ಣಾದಾಯ ಕಾಣಿಕೆ ಬೇಡಿಗೆ ಹುಲ್ಲುಹಣ ಹೊಗೆಕಾಣಿಕೆ ಕುರಿದೆರೆಗೆ ಜಾತಿಗೂಟ ದೇವರಾಯುವಟ್ಟ ಹೆಚ್ಚು ಬೇಡಿಗೆ ಗ್ರಾಮಾದಾಯ ಚರಾದಾಯ ಹೊರಾದಾಯ ಇವು ಮೊದಲಾದ ಆ ಸಕಲ ಸ್ವಾಮ್ಯವನ್ನು ಊಳಿಗಮಾನ್ಯದ ಅರೆವಾಸಿಯನ್ನು ಕೂಡಾ ಈ ಯಾದವಪುರದಗ್ರಹಾರದ ನೂರಹನ್ನೆರಡು ವೃತ್ತಿ ಮಹಾಜನಂಗಳು ಸರ್ವಮಾನ್ಯವಾಗಿ ಶಾಶ್ವತವಾಗಿ ತಂತಂಮ ಪುತ್ರಪೌತ್ರ ಪಾರಂಪರ್ಯವಾಗಿ ಆ ಚಂದ್ರಾರ್ಕಸ್ಥಾಯಿಗಳಾಗಿ ಈ ಭೂಮ್ಯಾಕಾಶಂಗಳುಳ್ಳನ್ನೆಗಂ ನಿರಾಬಾಧವಾಗಿ ಸುಖದಿಂದನುಭವಿಸಿಕೊಂಡಿಹರು ಇಂತೀ ಇಪ್ಪತ್ತುಮೂರು ಗ್ರಾಮಂಗಳ ಚತುಸ್ಸೀಮೆಗಳಲ್ಲಿರುವ ನಿಧಿನಿಕ್ಷೇಪ ಜಲಪಾಷಾಣ ಅಕ್ಷೀಣ್ಯಾಗಾಮಿ ಸಿದ್ಧಸಾಧ್ಯಂಗಳೆಂಬ ಅಷ್ಟಭೋಗತೇಜಸ್ವಾಮ್ಯಂಗಳಂ ಈ ನೂರಹನ್ನೆರಡು ವೃತ್ತಿ ಮಹಾಜನಂಗಳ್ಗೆ ಶಾಶ್ವತವಾಗಿ ಸಲುವುದು, ಇಲ್ಲಿಂದಂ ಮುಂದೆ ಈ ನೂರಹನ್ನೆರಡು ವೃತ್ತಿಯ ಮಹಾಜನಂಗಳ್ಮಾಡುವ ಅಧಿಕ್ರಯದಾನ ಪರಿವರ್ತನಂಗಳೆಂಬ ವ್ಯವಹಾರ ಚತುಷ್ಟಯಕ್ಕಂ ಯೋಗ್ಯವಾಗಿ ಸಲ್ಲುವುದು ಇಂದು ಮೊದಲು ಈ ಇಪ್ಪತ್ತುಮೂರು ಗ್ರಾಮಗಳಲ್ಲಿಯುಂಟಾದ ಆ ಸಕಲ ಸ್ವಾಮ್ಯವನ್ನು ಈ ನೂರಹನ್ನೆರಡು ವೃತ್ತಿಯ ಮಹಾಜನಂಗಳೆಲ್ಲರುಮಿವರಿವರ ಪುತ್ರಪೌತ್ರ ಪಾರಂಪರ್ಯವಾಗಿ ಆ ಚಂದ್ರಾರ್ಕವುಂ ಶಾಶ್ವತವಾಗಿ ಸುಖದಿಂದನುಭವಿಸಿಕೊಂಡಿಹರು ಎಂದು ಅತ್ರೇಯಗೋತ್ರ ತ್ರಿಪುರಾಲಂಕಾರ ಕಲ್ಪಶಾಖಿಯುಂ ಆಶ್ವಲಾಯನ ಸೂತ್ರ ಶೋಭಾವಹ ಸುಪರ್ವಮಣಿಯುಂ ಋಕ್ಶಾಖಾಪ್ರಖ್ಯಾಪಕ ಸುಧಾರಸ ಫಲಮುಮೆನಿಸಿ ಪ್ರಸಿದ್ಧಿವೆತ್ತ ಚಿಕದೇವ ಮಹಾರಾಜೊಡೆಯರವರ ಪೌತ್ರರುಂ ಕಂಠೀರವ ನರಸರಾಜೊಡೆಯರವರ ಪುತ್ರರುಂ ಚೆಲ್ವಾಜಮ್ಮಾಂಬಾ ಗರ್ಭಮುಕ್ತಾಂಭೋಧಿರಾಕಾಸುಧಾಕರರುಮೆನಿಸಿ ಸಕಲರ ಸಲಹುತ್ತ ಮಹಿಯುಂ ಪಾಲಿಸುತ್ತಮಿಪ್ಪ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಬಿರುದೆಂತೆಂಬರ ಗಂಡ ಧರಣೀವರಾಹ ಬಿರುವನುದ್ದಂಡ ದೋರ್ದಂಡ ಸಂಗ್ರಾಮರಾಮ ಯಾದವಕುಲೋದ್ಧರಣ ಧುರೀಣ ಕರ್ಣಾಟಕ ಚಕ್ರವರ್ತಿ ಸಕಲಕಲಾಪ್ರವೀಣ ಶ್ರೀ ವೈಷ್ಣವಮತ ಪ್ರತಿಷ್ಠಾಪಕ ಶ್ರೀ ವೇಂಕಟಾಚಲನಿವಾಸ ಶ್ರೀನಿವಾಸ ಚರಣಾರವಿಂದ ಕರುಣಾವಿಧಾಯಕ ಕೈಂಕರ್ಯ ಧೌರೇಯನುಂ ಶ್ರೀ ಶ್ರೀನಿವಾಸ ಪರಮಹಂಸ ಪರಿವ್ರಾಜಕ ಪ್ರವರಾಂಘ್ರಿ ಸರಸೀರುಹಸಾಂದ್ರ ಮಕರಂದ ರಸಾಸ್ವಾದ ಸಂವರ್ಧಿತ ಭೃಂಗರಾಜನುಂ। ದೈನಂದಿನ ಪೂರ್ವಾರ್ಕಸ್ಥ ವಿಶ್ರಾಣಿತಾನೇಕ ಮಹಾದಾನ ಸಂತಾನನುಂ ಶೌರ್ಯೈಕ ನಿಧಾನನುಂ ಶರಣಾಗತ ಪರಿತ್ರಾಣ

ಪಾರಾಯಣನುಂ ಸಂತತ ಸಂತತಾತ್ಮೀಯ ಕೀರ್ತಿ ಸುಧಾಧವಳಿತಾಖಿ
ಲ ಭುವನ ಭವನಸ್ತೋಮನುಂ ನಿರಂಕುಶ ಬಲಪರಾಕ್ರಮ ಪ್ರಚಂಡ
ನಿಜಭುಜಾದಂಡ ಪ್ರಕಂಪಿತ ನಂದಕಾಖ್ಯೋದ್ದಂಡ ಮಂಡಲಾಗ್ರಪ್ರ
ಭೂತ ಪ್ರತಾಪಾನಲ ಕೀಲಾವಳಿ ಶಲಭಾಯಿತಾಹಿತಮಹಾರಾಷ್ಟ್ರಭೂ
ಪಾಲಜಾಲನುಂ ದುರ್ದಾಂತ ಸಾಮಂತ ಭೂಕಾಂತ ಮೌಳಿಮಣಿಘೃಣಿ
ನೀರಾಜಿತನಿಜ ಚರಣ ತರುಣ ಪ್ರವಾಳನುಂ ರಿಪುಜಯೈಕ ಲೀಲನುಂ
ವೀರರೊಳ್ಗಂಡನು ಮಂತೆಂಬರಗಂಡನು ಮೆನಿಸಿ ಸಮಹಿತ ಮಹೀ
ಶೂರಾಪ್ರತಿಮ ಕೃಷ್ಣರಾಜೊಡೆಯರವರು ಸಕಲ ಜಗದ್ರಕ್ಷಣಾ ಪರಾ
ಯಣ ಶ್ರೀಮನ್ನಾರಾಯಣ ಪ್ರೀತ್ಯರ್ಥವಾಗಿ ಸೋಮೋಪರಾಗ ಪುಣ್ಯ
ಕಾಲದಲ್ಲಿ ತಂಮ ಪಿತೃಪಿತಾಮಹಾದಿ ಮಹಾರಾಜರೆಲ್ಲರ್ಗಂ ಶ್ರೀಮ
ದ್ವೈಕುಂಠಲೋಕಾವಾಪ್ತಿಯಾಗಲೆಂದುಭಯ ಕಾವೇರೀ ಮಧ್ಯದ
ಗೌತಮಕ್ಷೇತ್ರದ ಪಶ್ಚಿಮ ರಂಗನಾಥಸ್ವಾಮಿಯವರ ಚರಣಾರವಿಂದ
ಸನ್ನಿಧಿಯಲ್ಲಿ ನಾನಾಗೋತ್ರದ ನಾನಾಸೂತ್ರದ ನಾನಾವಿಚಿತ್ರಶಾಖೆ
ಯ ನಾನಾವಿಧ ನಾಮಧೇಯರಾದಿ ಯಾದವಪುರೀ ಅಗ್ರಹಾರದ
ನೂರಹನ್ನೆರಡುವೃತ್ತಿ ಮಹಾಜನಂಗಳ್ಗಿವಾ ಇಪ್ಪತ್ತುಮೂರು
ಗ್ರಾಮಗಳಂ ಸಹಿರಣ್ಯೋದಕವಾಗಿ ಶ್ರೀಕೃಷ್ಣಾರ್ಪಣಾ ಬುದ್ಧಿಯಿಂ
ಧಾರೆಯನೆರೆದು ಕೊಟ್ಟು ತಾವು ಮಾಡಿದೀ ಯಗ್ರಹಾರಂ ಶಾಶ್ವತ
ವಾಗಿ ಆ ಚಂದ್ರಾರ್ಕವುಂ ಸರ್ವ ಸಾಮಾನ್ಯವಾಗಿ ನಡೆಯುತ್ತಿರಲಿ
ಯೆಂದು ಧರಣೀ ವರಾಹ ಮುದ್ರಾಸಹಿತವಾಗಿ ಸ್ವಹಸ್ತಾಕ್ಷರಂಗಳಿಂ
ಸ್ವನಾಮ ಸಂಚಿಹ್ನತಂಗೆಯ್ದು ಬರಸಿ ಕೊಟ್ಟ ಭೂದಾನ ತಾಮ್ರಶಾ
ಸನಂ। * * ಶ್ರೀರಾಮಾಯಣ ಭಾರತ ಪಾರಾಯಣ ಸಹಿತ
ವೃತ್ತಿನಾ ಕೃತಿನಾ ಕವಿನಾ ತಿರುಮಲೆಯಾಚಾರ್ಯೇಣೇದಂ ತಾಮ್ರ
ಶಾಸನಂ ಲಿಖಿತಂ

ಮೈಸೂರು ಸಂಸ್ಥಾನದ ಚಿತ್ರಮಾರ್ಗದ ಕನ್ನಡವನ್ನು ತೋರಿಸುವುದಕ್ಕೆ ಕರ್ಣ ವೃತ್ತಾಂತಕಥೆಯಿಂದ ಕೆಲವು ಪದ್ಯಗಳನ್ನು ಉದ್ಧರಿಸುತ್ತೇವೆ. ಈ ಗ್ರಂಥವನ್ನು ಬರೆದಕವಿ ಪ್ರಧಾನಿ ತಿರುಮಲಾರ್ಯನು. ಈತನು ರಾಜವೊಡೆಯರಕಾಲದಲ್ಲಿ (೧೫೭೮-೧೬೧೭) ಬಾಳಿದನು.

ಸಾಂಗತ್ಯ ॥ ಒಡನೆ ಭೀಮನು ಧರ್ಮಜನ ವೈರಾಗ್ಯದ ।
ನುಡಿಯನಾಲಿಸಿ ಕೋಪವೆರಸಿ ॥
ಸಿಡಿಮಿಡಿಗೊಳುತ ಬಲುತೆ ನೋವುತೆ ನೀತಿ ।
ಎಡೆದು ನಿಷ್ಠುರವನಾಡಿದನು ॥

ಬಿಡದೆ ವೇದವನೋದಿ ಬೇಗ ಲೌಕಿಕ ।
ಮುಡುಗಿದ ವಿಪ್ರನಂದದಲಿ ॥

ಬಡಮನದಿಂ ಬಸವಳಿದು ಬಾಯ್ಬಿಡುವುದು |
ಜಡತನವಿದು ಜಾಣ್ಮೆಯಲ್ಲ ॥ (XI. 1-2)

*   *   *   *

ಒಱಿದೆ ಬಾವಿಯ ತೋಡಿ ನೀರ್ಕೆಸಱಾಗಿ ನೀ |
ರೋಱಿವನಿತರೊಳು ಸೈರಿಸದೆ ॥
ತೋಱಿದೆದ್ದು ತುಟಿಬಾಯ್ದೂಱಿ ತಾ ಬಳಲುವ |
ತೆಱನಾದುದೀ ನಮ್ಮ ನಡತೆ ॥

ಬೆಳ್ಳಿದವೋಲಿ ಬೆಳೆದ ಬಲುಮರದೊಂದು |
ತುಟ್ಟತುದಿಯು ಕೊಂಬನೇಱಿ ॥
ಮುಟ್ಟಿಬೇಸಿನ ಹಳಯನು ಕೊಯ್ಯುದೆ ಕೈ |
ಪಟ್ಟವೊಲೀ ನಮ್ಮನಡತೆ ॥

ಪಸಿದುಣಾಳಿಸಿ ಪಲವು ಕೋಟಲೆಗಳಿಂ |
ಬಸಗೆಯ್ದ ಪರಮಾನ್ನವನು ॥
ಪಸುಟು ಪೀದಿಯೊಳು ಭಕ್ಷವ ಬೇಡುವಂದದಿ |
ಹಸನಾದುದೀ ನಮ್ಮನಡತೆ ॥

ಬಗೆದಂದು ಬಯಸಿ ಬಳಲಿ ಚಿಂತೆಸಂತಾಪ |
ಮಿಗೆ ಯತ್ನದಿಂದೆ ಕೈ ಪಿಡಿದ ॥
ಸೊಗಸುಗಾತಿಯು ಸೋಂಕ ಸುಪಿಸದೆ ಮುನಿದೇಳ್ವ |
ಬಗೆಯಾದುದೀ ನಮ್ಮನಡತೆ ॥

ಧರೆಯೊಳು ತಮಗಿದಿರಾದ ಬಲ್ಪಗೆಗಳ |
ಶಿರಗಳಕೊಯ್ದು ಸೆಂಡಾಡಿ ॥
ಮರಳಿ ತನ್ನೊಡಲನು ತಿಂದೀಡಾಡುವ |
ಪರಿಯಾದುದೀ ನಮ್ಮನಡತೆ ॥

ಸಾಸಿರಗಾವುದಕೈದಿ ತನ್ನಿಷ್ಟಾರ್ಥ |
ಕೈಸಾರುವ ಸಮಯದೊಳು ॥
ರೋಸಿ ಪಸುಟು ಮರಳುವ ತೆಱದೊಳು ಮಿಗೆ |
ಲೇಸಾದುದೀ ನಮ್ಮನಡತೆ ॥

ಪರಮ ಜಾಡ್ಯದೊಳು ಪಲುಬುವ ನಿನ್ನನು |
ಪಿರಿಯಣ್ಣನೆಂದನುಸರಿಸಿ ॥
ಮರುಳುಗೊಂಡಂತಿರುವೆಮ್ಮನು ಲೋಕದ |
ಪರು ನಿಂದಿಸದೆ ಮಾಣ್ಬವರೆ ॥ (XI 10—16)

೧೨. ಅನ್ಯಭಾಷಾಸಂಪರ್ಕ.

ಕನ್ನಡಕ್ಕೆ ಅನ್ಯಭಾಷೆಗಳ ಮಾತುಗಳೂ ಪದ್ಧತಿಗಳೂ ಮೊದಲಿಂದಲೂ ಸೇರುತ್ತ ಬಂದಿವೆ. ಈ ವಿಷಯವನ್ನು ಸ್ವಲ್ಪಮಟ್ಟಿಗೆ ವಿಚಾರಮಾಡುವುದು ಉಚಿತವಾಗಿರುತ್ತದೆ

(1) ಸಂಸ್ಕೃತದ ಪ್ರಭಾವ.

ದ್ರಾವಿಡಭಾಷೆಗಳಿರುವ ನಾಡುಗಳ ನಾಗರಿಕತೆಗೆ ಸಂಸ್ಕೃತವೆ ಪ್ರಾಣವಾಯು ಪ್ರಾಯವಾಗಿರುವುದರಿಂದ ಸಂಸ್ಕೃತದ ಸಹಾಯವಿಲ್ಲದೆ ಕನ್ನಡವನ್ನು ಬರೆವುದು ಸಾಗುವದೇ ಇಲ್ಲ. ಕರ್ನಾಟಕಕವಿಗಳೆಲ್ಲರೂ ಸಂಸ್ಕೃತವನ್ನು ಹೇರಳವಾಗಿ ಉಪಯೋಗಿಸಿಯೆ ಇದ್ದಾರೆ. ಆಂಡಯ್ಯನು ಸಂಸ್ಕೃತರೂಪದ ಪದಗಳನ್ನು ಪ್ರಯೋಗಿಸದೆ ತನ್ನ ಕಾವ್ಯವನ್ನು ಬರೆಯುತ್ತೇನೆಂದು ಶಪಥಮಾಡಿ ಕಬ್ಬಿಗರಕಾವ ಎಂಬ ಗ್ರಂಥವನ್ನು ಬರೆದಿರುತ್ತಾನೆ. ತದ್ಭವರೂಪದ ಪದಗಳನ್ನು ಉಪಯೋಗಿಸಿದ ಮಾತ್ರಕ್ಕೆ ಅಚ್ಚಗನ್ನಡದ ಪದಗಳಿಂದ ಕಾವ್ಯವನ್ನು ರಚಿಸಿದಹಾಗಾಯಿತೆ? ಇದೂ ಅಲ್ಲದೆ ಆಂಡಯ್ಯನ ದಾರಿಯನ್ನು ಇತರಕವಿಗಳು ಅನುಸರಿಸಲಿಲ್ಲ. ಕ್ರಿ. ಶ. ೧೧೧೨ರಲ್ಲಿ ಬಾಳಿದ ನಯಸೇನನು

> ಪೊಸಗನ್ನಡದಿಂ ವ್ಯಾವ।
> ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ॥
> ತಿಸಿ ಕೂಡಲಾರದಕಟ।
> ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ॥
>
> ಸಕ್ಕದಮಂ ಪೇೞ್ವೊಡೆ ನೆಱೆ।
> ಸಕ್ಕದಮಂ ಪೇೞ್ಗೆ ಶುದ್ಧಕನ್ನಡದೊಳ್ ತಂ॥
> ದಿಕ್ಕುವುದೆ ಸಕ್ಕದಂಗಳ।
> ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ॥

ಎಂದು ಹೇಳುವ ಬುದ್ಧಿವಾದವನ್ನು ಸ್ವೀಕರಿಸುವದು ಗ್ರಂಥಕರ್ತೃಗಳ ಕರ್ತವ್ಯವಾಗಿರುತ್ತದೆ. ಭಾಷಾಸರಣಿಗೆ ಹೊಂದದ ಸಂಸ್ಕೃತ ಪದಗಳನ್ನೂ ದೀರ್ಘಸಮಾಸಗಳನ್ನೂ ಕನ್ನಡದ ಬರವಣಿಗೆಯಲ್ಲಿ ಬಿಡಬೇಕು.

(2) ಮಹಾರಾಷ್ಟ್ರೀ ಪ್ರಾಕೃತದ ಮತ್ತು ಮರಾಠಿಯ ಪ್ರಭಾವ

ಮಹಾರಾಷ್ಟ್ರೀಪ್ರಾಕೃತದ ಮಾತುಗಳು ಹೇರಳವಾಗಿ ನಡುವಣನಾಡಿನ ಕನ್ನಡಕ್ಕೆ ಸೇರಿದ ವಿಷಯವನ್ನೂ ಪ್ರಾಕೃತದ ಇತರ ವೈಲಕ್ಷಣ್ಯಗಳಿಂದ ಕನ್ನಡಕ್ಕಾದ ಪ್ರಯೋಜನವನ್ನೂ ಹಿಂದೆ ತಿಳಿಸಿದ್ದೇವೆ. ಮರಾಠಿಯಿಂದ ಅನೇಕಾನೇಕ ಮಾತುಗಳು ಕ್ರಿ. ಶ. ೧೭ನೆಯ ಶತಮಾನದಿಂದ ಬಹಳವಾಗಿ ಸೇರುತ್ತಾ ಬಂದಿವೆ. ಮರಾಠಿಯ ಸಮ್ಮರ್ದನದಿಂದ ನಡುವಣನಾಡಿನಲ್ಲಿಯೂ ಮತ್ತು ಕೆಲವು ಉತ್ತರನಾಡುಗಳಲ್ಲಿಯೂ ಕನ್ನಡದ ಮರ್ಯಾದೆಯೂ ಬರವಣಿಗೆಯ ಕ್ರಮವೂ ವಾಕ್ಯರಚನಾ ವಿಧಾನವೂ ಕೆಡು

ತ್ತ ಬಂದಿದೆಯೆಂದೂ ಹೇಳಬೇಕಾಗಿದೆ. ಮುಂದೆ ಕೊಡುವ "ಮುಂಬೈ ಅಧಿಪತ್ಯದ ಕನ್ನಡದ ದುರವಸ್ಥೆ" ಎಂಬ ಭಾಗದಲ್ಲಿ ಇದಕ್ಕೆ ನಿದರ್ಶನವು ದೊರೆಯದು.

(3) ಹಿಂದುಸ್ತಾನಿಯ ಪ್ರಭಾವ

ಮುಸಲ್ಮಾನರು ಇಂಡಿಯಾದೇಶಕ್ಕೆ ಕ್ರಿ. ಶ. ೮ನೆಯ ಶತಮಾನದಲ್ಲಿ ಬಂದು ಕ್ರಿ. ಶ. ೧೨ನೆಯ ಶತಮಾನದಲ್ಲಿ ತಮ್ಮ ಪ್ರಾಬಲ್ಯವನ್ನು ಉತ್ತರದೇಶದಲ್ಲಿ ಸ್ಥಾಪಿಸಿ, ೧೪ನೆಯ ಶತಮಾನದ ಪೂರ್ವಾರ್ಧದಲ್ಲಿ — ಎಂದರೆ ೧೩೪೭ರಲ್ಲಿ — ಪೂರ್ವದಲ್ಲಿ ಚಾಳುಕ್ಯರ ರಾಜ್ಯವಾಗಿದ್ದ ಸೀಮೆಯನ್ನು ಗೆದ್ದು ಬಾಮನಿ ಸಂಸ್ಥಾನವನ್ನು ಸ್ಥಾಪಿಸಿದರು. ಉತ್ತರತ್ರದಲ್ಲಿ ಈ ಬಾಮನಿ ಸಂಸ್ಥಾನವು ಗೋವಳ್ಕೊಂಡ, ಬೀದರ್, ಬಿಜಾಪುರ, ಅಹಮ್ಮದ್‌ನಗರ, ಬೇರಾರ್ ಎಂಬ ಐದು ಮುಸಲ್ಮಾನ್ ಸಂಸ್ಥಾನವಾಗಿ ಒಡೆಯಲ್ಪಟ್ಟವು. ಬೀದರ್, ಬಿಜಾಪುರ ಸಂಸ್ಥಾನಗಳಲ್ಲಿ ಕನ್ನಡದ ನಡುನಾಡುಗಳೂ ಉತ್ತರನಾಡುಗಳೂ ಸೇರಿಹೋದುವು. ತುಂಗಭದ್ರಾನದಿಯು ಬಿಜಾಪುರದ ದಕ್ಷಿಣಮೇರೆಯಾಗಿತ್ತು. ಮುಸಲ್ಮಾನರ ಆಳಿಕೆಯು ದಕ್ಷಿಣದೇಶದಲ್ಲಿ ಸುಮಾರು ೬೦೦ ವರುಷಗಳವರೆಗೂ ಪ್ರಬಲವಾಗಿತ್ತು. ಹಿಂದುಸ್ತಾನಿಯ ಮಾತುಗಳು ದ್ರಾವಿಡಭಾಷೆಗಳೊಳಗೆಲ್ಲಾ ಸೇರಿ ವಿಶೇಷವಾಗಿ ಬಳಕೆಗೂ ಬಂದಿವೆ. ಮುಸಲ್ಮಾನರು ಈಗ ಹಿಂದೂ ಜನಾಂಗದಲ್ಲಿ ಕಲೆತಿರುವುದರಿಂದ ಹಿಂದುಸ್ತಾನಿಮಾತುಗಳಿಗೆ ಬಹಿಷ್ಕಾರವನ್ನು ಹಾಕಿ ಹೊರಕ್ಕೆ ತಳ್ಳುವುದು ಸಾಧ್ಯವೇ ಅಲ್ಲ. ಕನ್ನಡಕ್ಕೆ ಸಾಸಿರಾರು ಲೆಕ್ಕದಲ್ಲಿ ಹಿಂದುಸ್ತಾನಿಯ ಮಾತುಗಳು ಸೇರಿರುವಾದರೂ, ವಾಕ್ಯರಚನಾಕ್ರಮವನ್ನು ಅವು ಬದಲಾಯಿಸಿಲ್ಲ. ಹೀಗಿರುವುದರಿಂದ ಹಿಂದುಸ್ತಾನಿಯಿಂದ ಕನ್ನಡದ ಬರವಣಿಗೆ ಕೆಟ್ಟಿತೆಂದು ಹೇಳುವುದಕ್ಕೆ ತಕ್ಕಷ್ಟು ಕಾರಣವಿಲ್ಲವೆಂದು ತೋರುತ್ತದೆ.

(4) ಇಂಗ್ಲೀಷಿನ ಪ್ರಭಾವ

ಇಂಗ್ಲೀಷರು ವ್ಯಾಪಾರದ ಸಂಘದವರಾಗಿ ಕ್ರಿ. ಶ. ೧೭ನೆಯ ಶತಮಾನದಲ್ಲಿ ಇಂಡಿಯಾದೇಶಕ್ಕೆ ಬಂದರು. ೧೮ನೆಯ ಶತಮಾನದ ಮಧ್ಯದಲ್ಲಿ ಮುಸಲ್ಮಾನ್ ಹಿಂದೂರಾಜರುಗಳ ಕದನಗಳಲ್ಲಿ ತಮಗನುಕೂಲವಾದ ಪಕ್ಷವನ್ನು ಸೇರಿ ತಮ್ಮ ಪ್ರಾಬಲ್ಯವನ್ನು ವೃದ್ಧಿಪಡಿಸುತ್ತಾ ಬಂದರು. ಟೀಪ್ಪುವಿನ ರಾಜ್ಯವನ್ನು ಹಾಳುಮಾಡಿದಾಗ ಕನ್ನಡನಾಡುಗಳ ಅನೇಕಭಾಗಗಳು ಇವರ ಕೈವಶವಾದುವು. ಕ್ರಿ. ಶ. ೧೮೨೦ನೆಯ ವರ್ಷದಹೊತ್ತಿಗೆ ಪೇಶ್ವೆಯವರ ರಾಜ್ಯವೂ ಇವರ ಕೈವಶವಾಯಿತು. ಹಿಂದೂರಾಜರೂ ಮುಸಲ್ಮಾನ್ ಸುಲ್ತಾನರುಗಳೂ ಇಂಗ್ಲೀಷರಸಂಗಡ ಕರಾರುಗಳನ್ನು ಮಾಡಿಕೊಂಡು ಅವರ ಪೋಷಣೆಗೊಳಪಟ್ಟರು. ಈಗ ಇಂಡಿಯಾಚಕ್ರಾಧಿಪತ್ಯವು ಭರತಖಂಡವೆಲ್ಲವನ್ನೂ ಬರ್ಮಾದೇಶವನ್ನೂ ಒಳಕೊಂಡಿದೆ. ೧೮೫೭ರಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ದೇಶಭಾಷೆಗಳಿಗೆಲ್ಲಾ ವಿಶೇಷ ಪ್ರೋತ್ಸಾಹವನ್ನುಂಟುಮಾಡಿದರು. ಇಂಗ್ಲೀಷು ನ್ಯೂಸ್‌ಪೇಪರುಗಳಿಂದ ಪ್ರಪಂಚದ ಇತರ ಭಾಗಗಳ ವಿದ್ಯಮಾನಗಳೆಲ್ಲಾ ಜನರಿಗೆ ತಿಳಿಯುತ್ತಾ ಬಂದುವು. ಹಿಂದಿನಕಾಲದಲ್ಲಿ ಸಂಸ್ಕೃತವು ಕನ್ನಡಕ್ಕೆ ಎಷ್ಟು ಸಹಾಯಮಾಡಿತೋ ಹಾಗೆಯೇ ಇಂಗ್ಲೀಷೂ ಈಗ ದೇಶಭಾಷೆಗಳಿಗೆ ಸಹಾ

ಯಮಾಡುತ್ತಿದೆ. ಅನೇಕಾನೇಕರಿಗೆ ಇಂಗ್ಲೀಷಿನಲ್ಲಿರುವಷ್ಟು ಪಾಂಡಿತ್ಯವು ತಮ್ಮ ಮಾತೃಭಾಷೆಯಲ್ಲಿರುವುದಿಲ್ಲ. ಹೊಸಹೊಸ ಸಾಮಾನುಗಳೂ, ಹೊಸಹೊಸ ವಿಚಾರಗಳೂ, ಹೊಸಹೊಸ ಶಾಸ್ತ್ರಗಳೂ, ಹೊಸಹೊಸ ಯಂತ್ರಗಳೂ ಇಂಗ್ಲೀಷರ ಮೂಲಕ ಜನರ ತಿಳಿವಳಿಕೆಗೆ ಬರುತ್ತಲಿವೆ. ಇವುಗಳಿಗೆ ಲೋಕದಲ್ಲಿ ಬಳಕೆಯಾಗಿರುವ ಇಂಗ್ಲೀಷು ಮಾತುಗಳನ್ನು ಬಿಟ್ಟು ಹೊಸಮಾತುಗಳನ್ನು ಸೃಷ್ಟಿಸುವುದಕ್ಕೆ ಯತ್ನಿಸುವುದು ವಿವೇಕವೆಂದೆನಿಸಿಕೊಳ್ಳುವುದಿಲ್ಲ. ನೂರಾರು ಲೆಕ್ಕಗಳಲ್ಲಿ ಇಂಗ್ಲೀಷು ಮಾತುಗಳು ಸೇರುತ್ತಲೇ ಇರುವುವು. ಸಂಸ್ಕೃತದ ಮಾತುಗಳನ್ನು ಸಂಸ್ಕೃತ ರೂಪದಲ್ಲಿಯೇ ಸೇರಿಸಿಕೊಳ್ಳುತ್ತ ಬಂದಿರುವಂತೆ ಇವುಗಳನ್ನೂ ಇಂಗ್ಲೀಷು ರೂಪದಲ್ಲಿಯೇ ಸೇರಿಸಿಕೊಳ್ಳುವುದು ಉತ್ತಮವಾಗಿದೆ, ಆದರೆ ಇಂಗ್ಲೀಷಿನ ವಾಕ್ಯರಚನಾಕ್ರಮವು ಕನ್ನಡಕ್ಕೆ ಸೇರದಿರುವಂತೆ ನೋಡಿಕೊಳ್ಳಬೇಕು ವಾರ್ತಾಪತ್ರಿಕೆಗಳ ಬರವಣಿಗೆಯಿಂದ ಮತ್ತು ಇಂಗ್ಲೀಷನ್ನು ಕಲಿತವರ ಭಾಷಾಂತರಗಳಿಂದ ಇಂಗ್ಲೀಷಿನ ವಾಕ್ಯರಚನಾ ವಿಧಾನವು ಕನ್ನಡಕ್ಕೆ ಸೇರುತ್ತ ಬಂದಿದೆ ಈ ಚಾಲನ್ನು ಹೋಗಲಾಡಿಸುವುದಕ್ಕೆ ಸರ್ವಪ್ರಯತ್ನವನ್ನೂ ಮಾಡಬೇಕು

೧೪ ಕೆಲವು ಕನ್ನಡ ನಾಡುಗಳ ದುರ್ದಶೆ.

ಈ ಉಪನ್ಯಾಸವು ಕರ್ನಾಟಕ ಭಾಷಾಚರಿತ್ರೆಯ ಹೆಗ್ಗುರುತುಗಳನ್ನು ಮಾತ್ರ ತಿಳಿಸುವುದಾಗಿರುವುದರಿಂದ ಉಳಿದಿರುವ ಕೆಲವು ಮುಖ್ಯಾಂಶಗಳನ್ನು ಬಹು ಸಂಕ್ಷೇಪವಾಗಿ ತಿಳಿಸುತ್ತೇವೆ. ಅವಾವುವೆಂದರೆ

(1) ಹೈದರಾಬಾದಿನ ಕನ್ನಡದ ದುರವಸ್ಥೆ.

ಹೈದರಾಬಾದು ಸಂಸ್ಥಾನದಲ್ಲಿ ೧೯೧೧ ನೆಯ ಖಾನೇಷುಮಾರಿಯ ಪ್ರಕಾರ, ೧,೩೩,೭೪,೦೦೦ ಜನರಿರುವರು. ಇವರಲ್ಲಿ ೬೩,೬೮,೦೦೦ ಮಂದಿ ತೆಲುಗನ್ನು ೩೫,೦೦,೦೦೦ ಮಂದಿ ಮರಾಠಿಯನ್ನು ೧೬,೮೦,೦೦೦ ಮಂದಿ ಕನ್ನಡವನ್ನು, ೧೪,೬೭,೦೦೦ ಮಂದಿ ಹಿಂದೂಸ್ತಾನಿಯನ್ನು ಆಡುತ್ತಾರೆ. ರಾಜಕೀಯ ಭಾಷೆಯು ಕನ್ನಡವಲ್ಲವಾದುದರಿಂದ ಕನ್ನಡಕ್ಕೆ ಪ್ರಾಶಸ್ತ್ಯವೇ ಇಲ್ಲ.

ಹೈದರಾಬಾದಿನ ಕರ್ನಾಟಕಪ್ರಾಂತದಲ್ಲಿ ಕ್ರಿ. ಶ ೧೨ನೆಯ ಶತಮಾನದಲ್ಲಿ ವೀರಶೈವಮತವೂ ವೀರಶೈವ ಮತಗ್ರಂಥಗಳನೇಕಗಳೂ ಹುಟ್ಟಿದುವು. ಈ ಪ್ರಾಂತವು ಕ್ರಿ ಶ. ೧೪ನೆಯ ಶತಮಾನದ ಮಧ್ಯಭಾಗದಲ್ಲಿ ಬಾಮನೀ ಸಂಸ್ಥಾನಕ್ಕೆ ಸೇರಿತು. ಆಮೇಲೆ ಕೆಲವು ಕಾಲದವರೆಗೆ ಬಿಜಾಪುರದ ಸುಲ್ತಾನರ ಆಳಿಕೆಯಲ್ಲಿತ್ತು. ಆಮೇಲೆ ಹೈದರಾಬಾದು ಸಂಸ್ಥಾನಕ್ಕೆ ಸೇರಿತು. ಎಂತೂ ೫೦೦ ವರುಷಗಳಿಂದ ಮುಸಲ್ಮಾನರ ರಾಜ್ಯಕ್ಕೆ ಸೇರಿ, ಕನ್ನಡ ವಿದ್ಯಾಶಾಲೆಗಳಾವುವೂ ಇಲ್ಲದೆ ಭಾಷೆಯು ಬಹು ಬಹು ಹೀನಸ್ಥಿತಿಗೆ ಬಂದಿದೆ ಈ ನಾಡಿನ ಜನರು ಕನ್ನಡ ಉದ್ಗ್ರಂಥಗಳ ವ್ಯಾಸಂಗವನ್ನು ಬಿಟ್ಟಿರುವರು. ಹೈದರಾಬಾದಿನ ನೈಜಾಮರವರು ಇಂಗ್ಲೀಷರಂತೆ ಕನ್ನಡ ವಿದ್ಯಾ

ಶಾಲೆಗಳನ್ನು ಸ್ಥಾಪಿಸಿ ಕರ್ನಾಟಕ ಭಾಷೆಗೆ ಪ್ರೋತ್ಸಾಹವನ್ನುಂಟುಮಾಡಿದ ಹೊರತು ಈ ನಾಡಿನ ಕನ್ನಡವು ಪೂರ್ವದ ಸ್ಥಿತಿಯನ್ನೈದಲಾರದು. B. ಎಂಬ ಅನುಬಂಧವನ್ನು ನೋಡಿರಿ.

(2) ಮುಂಬೈ ಅಧಿಪತ್ಯದ ಕನ್ನಡದ ದುರವಸ್ಥೆ.

ಮುಂಬೈ ಅಧಿಪತ್ಯದ ಜನಸಂಖ್ಯೆ ೧೯೧೧ನೆಯ ಖಾನೇಸುಮಾರಿಯ ಪ್ರಕಾರ ೧,೯೬,೭೪,೦೦೦. ೯೦,೧೬,೦೦೦ ಮಂದಿ ಮರಾಠಿಯನ್ನು, ೩೩,೪೭,೦೦೦ ಮಂದಿ ಗುಜರಾತಿಯನ್ನು, ೩೪,೯೭,೦೦೦ ಮಂದಿ ಸಿಂಧಿಯನ್ನು, ೨೪,೬೨,೦೦೦ ಮಂದಿ ಕನ್ನಡವನ್ನು, ೯,೦೨,೦೦೦ ಮಂದಿ ಹಿಂದುಸ್ತಾನಿಯನ್ನು ಆಡುತ್ತಿರುವರು. ಮುಂಬೈ ಅಧಿಪತ್ಯದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯವಿಲ್ಲವೆಂಬುದು ಮೇಲಣ ಸಂಖ್ಯೆಗಳಿಂದ ಸ್ಪಷ್ಟವಾಗುತ್ತದೆ. ಕನ್ನಡಿಗರು ವಿಜಾಪುರ ಧಾರವಾಡ ಬೆಳಗಾವಿ ಮತ್ತು ಕಾರವಾರ ಡಿಸ್ಟ್ರಿಕ್ಟುಗಳಲ್ಲಿ ವಾಸವಾಗಿದ್ದಾರೆ.

ಮುಂಬೈ ಅಧಿಪತ್ಯದಲ್ಲಿ ಸೋಲಾಪುರ ಡಿಸ್ಟ್ರಿಕ್ಟೂ ಕೊಲ್ಹಾಪುರ ಸಂಸ್ಥಾನವೂ ಇರುವುವು. ಇವು ಪೂರ್ವದಲ್ಲಿ ಕನ್ನಡ ನಾಡುಗಳಾಗಿದ್ದುವು ' ಈಗ ಇಲ್ಲಿಯವರು ತಾವು ಕನ್ನಡಿಗರಲ್ಲವೆಂದೂ, ತಾವು ಮರಾಟಿಗರೆಂದೂ ಹೇಳಿಕೊಳ್ಳುತ್ತಿರುವರು ಚಾಳ್ಕೆ, ಶೇಲಾರ್, ಕದಂ, ಮೋರೆ, ಜಾಧವ್, ರಾಷ್ಟ್ರಕುಂಟ ಮುಂತಾದ ವಂಶೀಯರೆಂದು ಹೇಳಿಕೊಳ್ಳುವವರು ಮರಾಟಿಗರಲ್ಲವೆಂದು ತೋರಿಸುವುದಕ್ಕಾಗಿ ಶಿವಾನಂದಯೋಗೀಶ್ವರರು ಮರಾಠೀ ವಂಶಾವಳಿ ಎಂಬ ಪುಸ್ತಕವನ್ನು ಬರೆದು ಚಾಳುಕ್ಯ ಎಂಬುದು ಚಾಳ್ಕೆ, ಶಿಲಾಹಾರ ಎಂಬುದು ಶೇಲಾರ್, ಕದಂಬ ಎಂಬುದು ಕದಂ, ಮೌರ್ಯ ಎಂಬುದು ಮೋರೆ, ಯಾದವ ಎಂಬುದು ಜಾಧವ್, ರಾಷ್ಟ್ರಕೂಟ ಎಂಬುದು ರಾಷ್ಟ್ರಕುಂಟ ಎಂಬುದಾಗಿರುವಂತೆ ತೋರಿಸಿರುತ್ತಾರೆ ಚಾಳುಕ್ಯಭೂಪತಿಯಾದ ಭೂಲೋಕಮಲ್ಲನು (೧೧೨೬-೧೧೩೮) ಮಾನಸೋಲ್ಲಾಸ ಎಂಬ ಗ್ರಂಥದಲ್ಲಿ ಅನೇಕ ಕನ್ನಡ ಲಾವಣಿಗಳನ್ನು ಸೇರಿಸಿರುವನು. ಕೊಲ್ಹಾಪುರದಲ್ಲಿರುವ ಜೈನಮಠದಲ್ಲಿ ಕನ್ನಡದಕ್ಷರದಲ್ಲಿ ಬರೆದಿರುವ ಅನೇಕ ಪುಸ್ತಕಗಳಿವೆ ಗುಣವರ್ಮನೆಂಬ ಪ್ರಸಿದ್ಧ ಕವಿ ತನ್ನ ಉದ್ಯೋಗಸಾರವೆಂಬ ಗ್ರಂಥವನ್ನು ಕೊಲ್ಹಾಪುರದಲ್ಲಿರುವ ಚಂದ್ರನಾಥ ಬಸ್ತಿಯಲ್ಲಿ ಪೂರಯಿಸಿದೆನೆಂದು ಹೇಳಿಕೊಂಡಿರುತ್ತಾನೆ ಕೊಲ್ಹಾಪುರದ ಸಂಸ್ಥಾನದಲ್ಲಿರುವ ಊರುಗಳ ಹೆಸರುಗಳು ಕನ್ನಡದ ಹೆಸರುಗಳಾಗಿವೆ. ಕೊಲ್ಹಾಪುರದ ಲಕ್ಷ್ಮೀಸೇನಮಠಾಧಿಪತಿಗಳು ಈಗಲೂ ತಮ್ಮ ನಿರೂಪಗಳನ್ನು ಕನ್ನಡದಲ್ಲಿಯೇ ಬರೆದು ಶಿಷ್ಯರಿಗೆ ಕಳುಹಿಸುತ್ತಿದ್ದಾರೆ— ಇಂತಹ ಸಂಸ್ಥಾನದಲ್ಲಿ ಈಗ ಕನ್ನಡದ ವಿದ್ಯಾಶಾಲೆಗಳೇ ಇಲ್ಲ! ಕನ್ನಡರಾಷ್ಟ್ರವಾಗಿದ್ದ ಸೋಲಾಪುರದಲ್ಲಿಯೂ ಈಗ ಕನ್ನಡಪಾಠಶಾಲೆಗಳಿಲ್ಲ" ಎಂದು ಮ|| ಕೆ ಬಿ ಪಾಠಕರವರು ಕವಿರಾಜಮಾರ್ಗದ ಪೀಠಿಕೆಯಲ್ಲಿ ಬರೆದಿರುತ್ತಾರೆ. ದಕ್ಷಿಣ ಮಹಾರಾಷ್ಟ್ರಸಂಸ್ಥಾನಗಳಲ್ಲಿಯೂ ಕನ್ನಡವು ಪ್ರೋತ್ಸಾಹವಿಲ್ಲದೆ ಹೆಸರಿಗೆ ಮಾತ್ರ ಇದೆ ಎಂದು ಹೇಳಬಹುದು.

ತುಂಗಭದ್ರಾ ಕೃಷ್ಣಾನದಿಗಳ ಮಧ್ಯದಲ್ಲಿರುವ ನಡುವಣನಾಡುಗಳು ಕ್ರಿ. ಶ. ೧೪ನೆಯ ಶತಮಾನದ ಮಧ್ಯದಲ್ಲಿ ಬಾಮಿನಿ ಸಂಸ್ಥಾನಕ್ಕೆ ಸೇರಿದುವು. ಬಿಜಾಪುರ

ಸಂಸ್ಥಾನವು ಪ್ರತ್ಯೇಕವಾದಮೇಲೆ ಆ ಸಂಸ್ಥಾನಕ್ಕೆ ಈ ನಾಡುಗಳು ಸೇರಿದುವು. ಮುಸಲ್ಮಾನರು ಕನ್ನಡಕ್ಕೆ ಯಾವಬಗೆಯ ಪ್ರೋತ್ಸಾಹವನ್ನೂ ಕೊಡಲಿಲ್ಲ. ಬಿಜಾಪುರ ಸಂಸ್ಥಾನವು ಹಾಳಾದಮೇಲೆ ಮಹಾರಾಷ್ಟ್ರಸಾಮ್ರಾಜ್ಯಕ್ಕೆ ಈ ನಾಡುಗಳು ಸೇರಿದುವು. ಮರಾಠೀಭಾಷೆಯು ಕ್ರಿ. ಶ. ೧೭-೧೮ ಶತಮಾನದಲ್ಲಿ ಗ್ರಂಥಸ್ಥವಾಯಿತೆಂದು ಹೇಳಬಹುದು. ಛತ್ರಪತಿ ಶಿವಾಜಿಯಕಾಲದಲ್ಲಿ ಮರಾಠಿಗೆ ವಿಶೇಷಪ್ರೋತ್ಸಾಹ ವುಂಟಾಯಿತು. ಶಾನುಭೋಗರ ಲೆಕ್ಕಗಳೂ ಮರಾಠಿಯಲ್ಲಿಯೇ ಇರಬೇಕೆಂದು ಶಿವಾಜಿಯು ಶಾಸನಮಾಡಿದಮೇಲೆ ಈ ನಾಡಿನವರು ಪೂರ್ವದ ತಿರುಳ್ಗನ್ನಡದ ಗ್ರಂಥಾವಲೋಕನವನ್ನು ಬಿಟ್ಟಂತೆ ತೋರುತ್ತದೆ. ಇಂಗ್ಲೀಷರು ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ವಿದ್ಯಾಶಾಲೆಗಳನ್ನು ಸ್ಥಾಪಿಸುವವರೆಗೂ ಕನ್ನಡ ಭಾಷಾಗ್ರಂಥಗಳ ವ್ಯಾಸಂಗವೇ ಇರಲಿಲ್ಲ. ವಿದ್ಯಾಶಾಲೆಗಳು ಸ್ಥಾಪಿತವಾದಾಗ ಗ್ರಾಂಥಿಕ ಪ್ರಯೋಗಗಳನ್ನು ಕಲಿಸುವದಕ್ಕೆ ಬದಲಾಗಿ ತಾವು ತಾವು ಮಾತನಾಡುವ ರೂಪಗಳನ್ನು ಕಲಿಸುವದಕ್ಕೆ ಪ್ರಾರಂಭಿಸಿದರು. ಶಾಲಾವ್ಯಾಕರಣವು ಪೂರ್ವಮರ್ಯಾದೆಯನ್ನು ಅನುಸರಿಸಿ ಬರೆಯಲ್ಪಡಲಿಲ್ಲ. ಕರ್ನಾಟಕ ವಿದ್ಯಾವರ್ಧಕಸಂಘವು ಹುಟ್ಟಿದಮೇಲೆ ಈ ನಾಡಿನ ಕನ್ನಡವು ಕೊಂಚಮಟ್ಟಿಗೆ ಶುದ್ಧವಾಗುವದಕ್ಕೆ ಪ್ರಾರಂಭವಾಯಿತು. ಇವರ ಬರವಣಿಗೆಯ ಕ್ರಮವು ಮರಾಠಿಯನ್ನು ಅನುಸರಿಸಿರುವಂತೆ ತೋರುತ್ತದೆ. ವ್ಯಂಜನಾಂತಪದಗಳನ್ನು ಸ್ವರಾಂತವಾಗಿ ಬರೆಯುತ್ತಿರುವರು, ಹೆಡ್‌ಮಾಸ್ತರ್ ಎಂಬುದನ್ನು "ಹೆಡಮಾಸ್ತರ" ಎಂದು ಬರೆಯುತ್ತಾರೆ. ಸ್ವರಾಂತಪದಗಳನ್ನು ವ್ಯಂಜನಾಂತವಾಗಿ ಉಚ್ಚರಿಸುತ್ತಾರೆ; ರಾಮರಾಮ ಎಂದು ಬರೆದು ರಾಮ್‌ರಾಮ್ ಎಂದು ಉಚ್ಚರಿಸುವರು ಮರಾಠಿಯು ದ್ರಾವಿಡಭಾಷೆಯಲ್ಲಿ ಅದರ ಮಾರ್ಗಕ್ಕು ಕನ್ನಡದ ಮಾರ್ಗಕ್ಕೂ ಬಹುಭೇದವಿದೆ. ಇವರ ವಾಕ್ಯರಚನಾ ವಿನ್ಯಾಸವು, ಕರ್ನಾಟಕದ ಸಹಜ ಮಾರ್ಗವನ್ನು ಬಿಟ್ಟಿರುವಂತೆ ನಮಗೆ ತೋರುತ್ತದೆ. ಉದಾಹರಣೆಗಾಗಿ ಮುಂಬಯಿ ವಿದ್ಯಾಭ್ಯಾಸದ ಇಲಾಖೆಯ ಪ್ರಥಮ ಪುಸ್ತಕದ ಪ್ರಥಮ ಪಾಠವನ್ನು ತೆಗೆದುಕೊಳ್ಳಬಹುದು. ಆಪಾಠವೆಂತಿರುವದೆಂದರೆ —

ಹಬ್ಬ.

ಕೃಷ್ಣ—ನೀನು ಯಾಕೆ ತಣ್ಣಗೆ ಕುಳಿತಿರುವೆ? ನೋಡು, ನಾನು ಎರಕೊಂಡು ಹೊಸ ಅರವೆ ತೊಟ್ಟುಕೊಂಡು ಬಂದೆನು. ಇಂದು ದಸರೆಹಬ್ಬ.

ರಾಮ—ಹೌದು, ನನಗೂ ಅವ್ವನು ಎಣ್ಣೆಹೊಸಿ, ಎರೆದಿರುವಳು. ಆಕೆಯು ಕೈತೀರದಕೂಡಲೆ ಹೊಸ ಅರವೆ ತೆಗೆದುಕೊಡುವಳು.

ಕೃಷ್ಣ—ಈಗ ದೇಸಾಯಿಯರ ಕುದುರೆ ಸಿಂಗಾರಾಗಿ ಬರುವದು. ಊದುತ್ತ ಬಾರಿಸುತ್ತ ಊರೊಳಗೆ ಆ ಕುದುರೆ ಮೆರಿಸುವರು ನೋಡೋಣನಡೆ.

ರಾಮ—ತುಸುತಡೆ; ಅಜ್ಜನು ಈ ಮಾಲೆ ಪೋಣಿಸೆಂದು ಹೇಳಿರುವನು. ಆತನ ಆಜ್ಞೆಯನ್ನು ಮೀರಲಾರೆನು, ಈ ಮಾಲೆ ಆದಕೂಡಲೆ ಬರುವೆನು.

ಕೃಷ್ಣ—ಛೀ! ಹೊತ್ತಾಗುವದು. ಅಗೋ ನೋಡು, ವಾಲಗದ ಸ್ವರವು ಕೇಳಬರುತ್ತದೆ.

ರಾಮ—ಹೌದು, ಆ ಮೆರವಣಿಗೆಯು ಈ ಹಾದಿಯಿಂದಲೇ ಹೋಗುವದು; ನಾವು ಕಟ್ಟೆಯ ಮೇಲೆ ನಿಂತು ನೋಡುವರಾಯಿತು. ಇಗೋ! ಈ ಮೂಲೆಯಾಯಿತು ಹೋಗೋಣ.

ಕೃಷ್ಣ—ಆಹಾ! ಈ ಕುದುರೆಯು ಎಷ್ಟು ಸಡಗರದಿಂದ ಕುಣಿಯುತ್ತ ಬರುತ್ತದೆ! ಇದರ ಕಾಲ ಕಡಗ, ತುರಾಯಿ, ಮೈಮೇಲಿನ ಪೀತಾಂಬರ, ಇವು ಎಷ್ಟು ಚಂದ ಕಾಣುತ್ತವೆ!

ರಾಮ—ಹೌದು, ಈ ಕುದುರೆ ಬಲು ಚಂದವದೆ ಇಕೊ! ಈ ಹುಡುಗರು ಎಷ್ಟು ಧಡಲ್ಬಾಜಿ ಹಾರಿಸುತ್ತಾರೆ, ಇದರ ಲೆಕ್ಕವೇ ಆಗದು

ಕೃಷ್ಣ—ಇಂದು ಸಂಜೆಗೆ ದೇವರು ಹೊರಡುವದು. ಆಗ ಈ ಕುದುರೆಗೆ ಜೀನು ಹಾಕಿ ದೇಸಾಯಿಯವರು ಹತ್ತುವರು ನಾನೂ ಅಣ್ಣನೂ ದೇವರ ಸಂಗಡ ಹೋಗುವೆವು.

ರಾಮ—ಹಾ! ತಿಳಿಯಿತು. ಈ ದಿನ ಒಂಗಾರ ಕೊಡಬೇಕು! ನಾನೂ ಬರುವೆನು, ಬಿಟ್ಟು ಹೋಗಬೇಡ.

ಮೇಲಣ ವಾಕ್ಸರಣಿಯಲ್ಲಿ, ವ್ಯಾಕರಣವೂ ಇಲ್ಲ ಪದವ್ಯುತ್ಪತ್ತಿಯೂ ಯಿಲ್ಲ, ಅರ್ಥಪುಷ್ಟಿಯೂ ಇಲ್ಲ. ಕಾವ್ಯ ಲಕ್ಷಣವೂ ಇಲ್ಲ ಪುಸ್ತಕಗಳನ್ನು ಬರೆವವರು ಕಾವ್ಯ ಪ್ರಯೋಗ ಪರಿಣತ ಮತಿಗಳಾಗಿರಲೇ ಬೇಕು

ಮುಂಬೈ ಅಧಿಪತ್ಯದ ಕನ್ನಡದ ಅಭಿವೃದ್ಧಿಗೆ ಬಾರದಿರುವುದಕ್ಕೆ ಪ್ರಬಲವಾದ ಮತ್ತೊಂದು ಕಾರಣವಿದೆ ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಮಾತ್ರ ಕನ್ನಡದ ವ್ಯಾಸಂಗವನ್ನು ಇಟ್ಟಿರುತ್ತಾರೆ ಬಿ. ಎ. ಪರೀಕ್ಷೆಗೆ ಕನ್ನಡವನ್ನು ಇಟ್ಟಿಲ್ಲ ಹೀಗಿರುವದರಿಂದ ಕರ್ನಾಟಕದ ಗ್ರಂಥಗಳ ವ್ಯಾಸಂಗವು ವಿದ್ಯಾವಂತರಲ್ಲಿ ಕಡಿಮೆಯಾಗಿರುವದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಕನ್ನಡವು ಪೂರ್ವದ ಉನ್ನತ ಸ್ಥಿತಿಯನ್ನು ಮತ್ತೊಮ್ಮೆ ಪಡೆವುದೆಂದು ನಾವು ನಂಬಿದೇವೆ.

(3) ಮದರಾಸಾಧಿಪತ್ಯದ ಕನ್ನಡದ ಸ್ಥಿತಿ.

ಮದರಾಸಾಧಿಪತ್ಯದ ಜನಸಂಖ್ಯೆ ೪,೧೪,೦೫,೦೦೦. ತಮಿಳನ್ನು ೧,೬೬,೯೨,೦೦೦; ತೆಲುಗನ್ನು ೧,೫೭,೩೬,೦೦೦, ಮಲೆಯಾಳಿಯನ್ನು ೩೦,೯೯,೦೦೦, ಕನ್ನಡವನ್ನು ೧೫,೯೦,೦೦೦, ಹಿಂದೂಸ್ತಾನಿಯನ್ನು ೯,೬೫,೦೦೦, ತುಳುವನ್ನು ೫,೧೪,೦೦೦ ಜನರು ಮಾತನಾಡುತ್ತಿರುವರು. ಕನ್ನಡವನ್ನು ಮುಖ್ಯವಾಗಿ ಬಳ್ಳಾರಿ, ದಕ್ಷಿಣ ಕನ್ನಡಿಯ ಮತ್ತು ಕೊಯಮುತ್ತೂರು ಡಿಸ್ಟ್ರಿಕ್ಟುಗಳ ಜನರು ಮಾತನಾಡುತ್ತಿರುವರು ದಕ್ಷಿಣ

ಕನ್ನಡೀಯದ ಕನ್ನಡವು ತುಳುವ ಸಂಪರ್ಕದಿಂದ ಕೆಟ್ಟಿದೆ. ದಕ್ಷಿಣಕನ್ನಡೀಯವೂ ಬಳ್ಳಾರಿಯೂ ಬಿಜಾಪುರದ ಸುಲ್ತಾನರ ಆಳಿಕೆಗೆ ಬಹುಕಾಲ ಒಳಪಟ್ಟಿದ್ದುವು.

ಮದರಾಸಿನ ವಿಶ್ವವಿದ್ಯಾನಿಲಯದಲ್ಲಿ ಬಿ. ಎ. ಪರೀಕ್ಷೆಗೆ ಕನ್ನಡ ಗ್ರಂಥಗಳನ್ನು ನಿಯಮಿಸುತ್ತಾ ಬಂದಿರುವರು. ಹೀಗೆ ೬೦ ವರುಷಗಳಿಂದಲೂ ನಡೆಯುತ್ತಾ ಬಂದಿರುವುದರಿಂದ ಮದರಾಸಾಧಿಪತ್ಯದ ವಿದ್ಯಾವಂತರಿಗೆ ಕರ್ನಾಟಕಗ್ರಂಥ ಪರಿಚಯವು ಕೊಂಚ ಮಟ್ಟಿಗಿರುವುದು. ಹೀಗಿರುವುದರಿಂದ ಮುಂಬೈ ಆಧಿಪತ್ಯದ ಕನ್ನಡದಷ್ಟು ಮದರಾಸಾಧಿಪತ್ಯದ ಕನ್ನಡವು ಕೆಟ್ಟಿಲ್ಲ. ಆದರೂ ಮದರಾಸಾಧಿಪತ್ಯದ ಕನ್ನಡವನ್ನು ಅರ್ವಾಚೀನ ತಿರುಳ್ಗನ್ನಡವೆಂದು ಹೇಳಲಾಗುವುದಿಲ್ಲ.

೧೪. ಅರ್ವಾಚೀನದ ತಿರುಳ್ಗನ್ನಡ.

ಹೈದರಾಬಾದಿನ ಕನ್ನಡ ನಾಡುಗಳಿಗೂ ಮುಂಬೈ ಆಧಿಪತ್ಯದ ಕನ್ನಡ ನಾಡುಗಳಿಗೂ ಮದರಾಸಾಧಿಪತ್ಯದ ಕನ್ನಡನಾಡುಗಳಿಗೂ ಪ್ರಾಪ್ತವಾದ ದುರ್ದಶೆಯು ಮೈಸೂರುಸಂಸ್ಥಾನಕ್ಕೆ ಪ್ರಾಪ್ತವಾಗಲಿಲ್ಲ. ಕ್ರಿ. ಶ. 1005 ರವರೆಗೆ ಗಂಗವಾಡಿಯು ತುಳುವಮಾರ್ಗವನ್ನು ಅನುಸರಿಸಿಕೊಂಡಿತ್ತು. ಗಂಗವಾಡಿಯ ಶಾಸನಗಳಿಂದ ಇದು ಸ್ಪಷ್ಟ ಪಡುತ್ತದೆ. ನಡುವಣನಾಡಿನಲ್ಲಿ ತಿರುಳ್ಗನ್ನಡದ ಹುಟ್ಟಿ ಕ್ರಿ. ಶ. ಒಂಬತ್ತು, ಹತ್ತು ಮತ್ತು ಹನ್ನೊಂದನೆಯ ಶತಮಾನಗಳಲ್ಲಿ ರಾಷ್ಟ್ರಕೂಟದ ಅರಸರ ಮತ್ತು ಚಾಳುಕ್ಯ ಭೂಪತಿಗಳ ಪ್ರಾಬಲ್ಯದಲ್ಲಿ ಪ್ರವರ್ಧಮಾನದಶೆಗೆ ಬಂತು. ಚಾಳುಕ್ಯರ ಆಳಿಕೆಯಲ್ಲಿ ಗಂಗವಾಡಿಯು ಕ್ರಿ. ಶ. 12ನೆಯ ಶತಮಾನದ ಮಧ್ಯಭಾಗದವರೆಗೂ ಇದ್ದುದರಿಂದ ತಿರುಳ್ಗನ್ನಡವು ಮೈಸೂರ ಪ್ರಾಂತದಲ್ಲಿ ಪ್ರಚುರವಾಯಿತು. ಇದೂ ಶಾಸನಗಳಿಂದ ಸ್ಪಷ್ಟ ಪಡುತ್ತದೆ. ಕ್ರಿ. ಶ. 12 ನೆಯ ಶತಮಾನದಿಂದ 14 ನೆಯ ಶತಮಾನದ ಮಧ್ಯಭಾಗದವರೆಗೆ ಮೈಸೂರಿನವರಾದ ಹೊಯ್ಸಳ ಬಲ್ಲಾಳರ ಲಾಲನ ಪಾಲನದಲ್ಲಿ ಕರ್ನಾಟಕ ಬಾಲೆಯು ಪ್ರೌಢಸ್ತ್ರೀಯಾಗಿ ಶೋಭಿಸಿದಳು. ಇದು ಕನ್ನಡಗ್ರಂಥಗಳ ಚರಿತ್ರೆಯಿಂದ ಸ್ಪಷ್ಟಪಡುತ್ತದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯು ತುಂಗಭದ್ರಾತೀರದಲ್ಲಿಯೇ ಇದ್ದುದರಿಂದ ಈ ಅರಸರೂ ಮುಕ್ಕಾಲು ಪಾಲು ಮೈಸೂರಿನವರೇ ಆಗಿದ್ದರು. ಇದಲ್ಲದೆ ವಿಜಯನಗರದ ಮಹಾರಾಜರ ಹಿರಿಯಮಗನು ಮುಳುಬಾಗಿಲಲ್ಲಿ ರಾಜನ ಪ್ರತಿನಿಧಿಯಾಗಿರುತ್ತಿದ್ದನು, ಇನ್ನೊಬ್ಬ ಮಗನು ಮಲೆನಾಡಿನಲ್ಲಿ ಪ್ರತಿನಿಧಿಯಾಗಿರುತ್ತಿದ್ದನು. ಕ್ರಿ. ಶ. ಹದಿನೈದನೆಯ ಶತಮಾನದಂತ್ಯದಿಂದ ವಿಜಯನಗರದರಸರ ಪ್ರತಿನಿಧಿಗಳು ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡರು. ತಾಳಿಕೋಟೆ ಯುದ್ಧವಾದನಂತರದಲ್ಲಿ ರಾಮರಾಜನವಂಶದವರು ಕೆಲವು ಕಾಲದವರೆಗೆ ಮೈಸೂರು ಪ್ರಾಂತದಲ್ಲಿಯೇ ವಾಸಮಾಡುತ್ತಿದ್ದರು. 1550 ರಿಂದ 1600 ರವರೆಗೂ ವಿಜಯನಗರದ ಅರಸರ ಆಳಿಕೆಯು ಮೈಸೂರಲ್ಲಿತ್ತು. ಈ ಅರಸರು ಉತ್ತರಮಾರ್ಗದ ಕನ್ನಡವನ್ನು ಮೈಸೂರುರಾಷ್ಟ್ರದಲ್ಲಿ ಪ್ರಚಾರಕ್ಕೆ ತಂದರು. ದಕ್ಷಿಣಮಾರ್ಗದ ಕನ್ನಡವೇ ಮೊದಲಿಂದಲೂ ಪ್ರಚುರವಾಗಿದ್ದ ಮೈಸೂರು ಪ್ರಾಂತಕ್ಕೆ ಉತ್ತರಮಾರ್ಗದ ಕನ್ನಡವು ಹೊಸದಾಗಿ ಬಂದುದರಿಂದ ಇದಕ್ಕೆ ಹೊಸಗನ್ನಡವೆಂಬ ಹೆಸರು ಬಂತು. ಹೊಸಗನ್ನ

ಡವೆಂದರೆ ಹೊಸದಾಗಿ ಬಂದ ಕನ್ನಡವೆಂದರ್ಥ, ಆಧುನಿಕ ಕಾಲದಲ್ಲಿ ಹುಟ್ಟಿದ ಕನ್ನಡವೆಂದರ್ಥವಲ್ಲ. ಈ ಕನ್ನಡವು ರಾಜಕೀಯ ವ್ಯವಹಾರದ ಭಾಷೆಯಾಯಿತು, ಈ ಸಂಗತಿಯೂ ಶಾಸನಗಳಿಂದ ಹೊರಪಡುತ್ತದೆ. ಮೈಸೂರು ರಾಜರುಗಳು ಸ್ವತಂತ್ರ ರಾಜರಾದಮೇಲೆ ಮೈಸೂರು ಪ್ರಾಂತದಲ್ಲಿ ದಕ್ಷಿಣಮಾರ್ಗದ ತಿರುಳ್ಗನ್ನಡವೂ, ಉತ್ತರಮಾರ್ಗದ ಕನ್ನಡವೂ, ಇವೆರಡೂ ಬೆರೆದಿರುವ ಮಿಶ್ರಮಾರ್ಗದ ಕನ್ನಡವೂ ಪ್ರಚಾರದಲ್ಲಿದ್ದುವು; ಹೀಗಿದ್ದುದಕ್ಕೆ ಚಿಕ್ಕದೇವರಾಜಒಡೆಯರವರ ಕಾಲವೇ ಸಾಕ್ಷಿಯಾಗಿರುತ್ತದೆ. ತಿರುಮಲಾರ್ಯರು ಅಪ್ರತಿಮವೀರ ಚರಿತೆಯನ್ನು ದಕ್ಷಿಣಮಾರ್ಗದಲ್ಲಿ ಬರೆದರು, ಚಿಕ್ಕುಪಾಧ್ಯಾಯರು ಗದ್ಯಗ್ರಂಥಗಳನ್ನು ಉತ್ತರಮಾರ್ಗದಲ್ಲಿ ಬರೆದರು, ಹೊನ್ನಮ್ಮನು ಹದಿಬದೆಯ ಧರ್ಮವನ್ನು ಮಿಶ್ರಮಾರ್ಗದಲ್ಲಿ ಬರೆದಳು. ಶಾಸನಗಳಲ್ಲಿ ಪದ್ಯಭಾಗವು ದಕ್ಷಿಣಮಾರ್ಗದಲ್ಲಿ, ಗದ್ಯಭಾಗವು ಉತ್ತರಮಾರ್ಗದಲ್ಲಿ ಬರೆಯಲ್ಪಟ್ಟಿವೆ. ೧೭೬೧ ರಿಂದ ೧೭೯೯ ರ ವರೆಗೆ ಹೈದರನೂ ಟೀಪುವೂ ರಾಜ್ಯಭಾರವನ್ನು ಮಾಡಿದರು. ಹಿಂದುಸ್ತಾನಿಯ ಮಾತುಗಳು ಹೇರಳವಾಗಿ ಭಾಷೆಗೆ ಸೇರಿದುವೇ ಹೊರತು, ವಾಕ್ಯರಚನಾರೀತಿಯು ಬದಲಾಗಲಿಲ್ಲ. ಮುಮ್ಮಡಿ ಕೃಷ್ಣರಾಜಒಡೆಯರವರ ಕಾಲದಲ್ಲಿ (೧೭೯೯-೧೮೬೮) ಮುದ್ರಾಮಂಜೂಷ ಮುಂತಾದ ಗ್ರಂಥಗಳನೇಕಗಳು ಹುಟ್ಟಿದುವು. ಚಾಮರಾಜೇಂದ್ರ ಒಡೆಯರವರ ಕಾಲದಲ್ಲಿ ಕನ್ನಡದಲ್ಲಿ ಶಾಕುಂತಳ ಮುಂತಾದ ಅನೇಕನಾಟಕಗಳು ಹೊಸದಾಗಿ ಬರೆಯಲ್ಪಟ್ಟುವು. ನಾಲ್ವಡಿ ಕೃಷ್ಣರಾಜಒಡೆಯರವರ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾಯಿತು. ಪರಿಶೀಲಿಸಿನೋಡುವಲ್ಲಿ ಕನ್ನಡ ಭಾಷೆಯು ಮೈಸೂರಿನವರಿಂದ ಪರಿಪೋಷಿತವಾಗಿರುವಷ್ಟು ಇತರ ನಾಡವರಿಂದ ಪರಿಪೋಷಿತವಾಗಿಲ್ಲ. ಸುಮಾರು ಎರಡುಸಾವಿರ ವರುಷಗಳಿಂದಲೂ ಮೈಸೂರು ಪ್ರಾಂತದಲ್ಲಿ ಕನ್ನಡವು ಪರಿಪೋಷಿತವಾಗಿ ಬಾಳುತ್ತ ಬಂದಿದೆ. ಹೀಗಿರುವುದರಿಂದ ಮೈಸೂರು ಪ್ರಾಂತದ ಕನ್ನಡವೇ ಅರ್ವಾಚೀನ ತಿರುಳ್ಗನ್ನಡವಾಗಿರುವುದೆಂದು ಹೇಳಲು ಲವಲೇಶವೂ ಸಂದೇಹಪಡಬೇಕಾಗಿಲ್ಲ. ಕನ್ನಡ ವ್ಯಾಸಂಗಕ್ಕಿರುವ ಉತ್ಕೃಷ್ಟವಾದ ಏರ್ಪಾಡುಗಳು ಮೈಸೂರಲ್ಲಿರುವಂತೆ ಮತ್ತೆಲ್ಲಿಯೂ ಇಲ್ಲ. ಪಂಡಿತಪರೀಕ್ಷೆಯು ಮೈಸೂರಲ್ಲಿ ಏರ್ಪಟ್ಟಂದಿನಿಂದ ಮೈಸೂರಲ್ಲಿ ಕನ್ನಡವು ಉನ್ನತತರಸ್ಥಿತಿಗೆ ಬಂದಿರುವುದು. ಕನ್ನಡನಾಡುಗಳವರೆಲ್ಲರೂ ಮೈಸೂರು ಪ್ರಾಂತದ ಕನ್ನಡವನ್ನು ತಿರುಳ್ಗನ್ನಡವಾಗಿ ಭಾವಿಸಿ ಸನ್ಮಾನಿಸುವುದು ನ್ಯಾಯವಾಗಿದೆ.

೧೫. ಉಪಸಂಹಾರ

ಈಗ ಕನ್ನಡ ನಾಡುಗಳು ಬೇರೆ ಬೇರೆಯಾಗಿರುವ ನಾಲ್ಕು ಸರ್ಕಾರಗಳಿಗೆ ಸೇರಿವೆ - ಮೈಸೂರು ಸರ್ಕಾರ, ಮುಂಬಯಿ ಸರ್ಕಾರ, ಮದರಾಸು ಸರ್ಕಾರ ಮತ್ತು

* ಡಾ|| ಫ್ಲೀಟ್ ಸಾಹೇಬರು ಕರ್ನಾಟಕ ದೇಶದ ಚರಿತ್ರೆಯ ವಿಚಾರವನ್ನು ಮಾಡಿದಾಗ ಪ್ರಕಾರ ಶಾಸನಗಳ ಪೂರ್ವದ ಕಾಲಗನ್ನಡ ಹಳಗನ್ನಡ, ಹೊಸಗನ್ನಡ ಎಂಬ ವಿಭಾಗವು ತಪ್ಪು ಎಂಬುದು ಮೇಲಿನವಾಕ್ಯಗಳಿಂದ ಸ್ಪಷ್ಟವಾಗುತ್ತದೆ. ಇವರು ಹೇಳುವ ಪೂರ್ವದ ಹಳಗನ್ನಡದ ಕಾಲದಲ್ಲಿಯೂ, ಉತ್ತರದಲ್ಲಿ ಹೊಸಗನ್ನಡವೆಂಬ ಹೆಸರನ್ನು ಪಡೆದ ಉತ್ತರ ಮಾರ್ಗದ ಕನ್ನಡವು ಕೃಷ್ಣಾನದಿಗುತ್ತರದಲ್ಲಿ ಬಾಳುತ್ತಲಿತ್ತು; ಮೈಸೂರು ಪ್ರಾಂತಕ್ಕೆ ಮಾತ್ರ ಬಂದಿರಲಿಲ್ಲ.

ಹೈದರಾಬಾದು ಸರ್ಕಾರ. ಈ ನಾಲ್ಕು ಸಂಸ್ಥಾನಗಳ ಆಧುನಿಕ ಗ್ರಾಂಥಿಕರೂಪಗಳು ಬೇರೆ ಬೇರೆಯಾಗಿವೆ. ಈ ಭೇದಗಳು ಹೋದಹೊರತು ಹೊರವಳಯದ ಕನ್ನಡವು ಉತ್ಕೃಷ್ಟಸ್ಥಿತಿಗೆ ಬರುವದಿಲ್ಲ. ಈ ಭೇದಗಳು ಹೋಗಬೇಕಾದರೆ ಎಲ್ಲಾ ಸಂಸ್ಥಾನದವರೂ ಸರ್ವಸಮ್ಮತವಾದ ಗ್ರಾಂಥಿಕ ಕನ್ನಡವನ್ನೇ ಪಾಠಶಾಲೆಗಳಲ್ಲಿ ಕಲಿಸಬೇಕು. ಈ ಉಪಾಯವನ್ನು ಬಿಟ್ಟರೆ ಮತ್ತಾವ ಉಪಾಯವೂ ಇಲ್ಲ.* ಇಂಗ್ಲೀಷು ಪಾಠಶಾಲೆಗಳಲ್ಲಿ ಗ್ರಾಂಥಿಕವಾದ ಇಂಗ್ಲಿಷನ್ನೇ ಕಲಿಸುತ್ತಿರುವಂತೆ ಕನ್ನಡ ಪಾಠಶಾಲೆಗಳಲ್ಲಿ ಗ್ರಾಂಥಿಕ ಕನ್ನಡವನ್ನೇ ಕಲಿಸಬೇಕು.

ಈ ಉಪನ್ಯಾಸವನ್ನು ಇಲ್ಲಿಗೆ ನಿಲ್ಲಿಸುವದು ಉತ್ತಮವಾಗಿದೆ. ಇದರಲ್ಲಿರುವ ಕೊರತೆಗಳನ್ನು ನಾನು ಚೆನ್ನಾಗಿ ಬಲ್ಲೆನು. ಹೈದರಾಬಾದಿನ ಕರ್ಣಾಟಕ ಶಾಸನಗಳು ನಮಗೆ ಸಿಕ್ಕಲಿಲ್ಲ. ಧಾರವಾಡ ಮುಂತಾದ ಡಿಸ್ಟ್ರಿಕ್ಟುಗಳ ಶಾಸನಗಳೂ ನಮಗೆ ದೊರೆಯಲಿಲ್ಲ. ಇವುಗಳನ್ನು ಪರೀಕ್ಷಿಸಿದಮೇಲೆ ಈ ಉಪನ್ಯಾಸದ ಕೆಲವಂಶಗಳನ್ನು ಕೊಂಚ ಮಟ್ಟಿಗೆ ಬದಲಾಯಿಸಬೇಕಾಗಬಹುದು. ಮಾರ್ಗಪ್ರದರ್ಶಕವಾಗಿರಲೆಂದು ನಾನು ಈ ಉಪನ್ಯಾಸವನ್ನು ಬರೆದಿರುತ್ತೇನೆ. ವಿದ್ವಾಂಸರು ಈ ಉಪನ್ಯಾಸದ ಮಾರ್ಗವನ್ನು ಅನುಮೋದಿಸುವದಾದರೆ ಇತರ ಕೊರತೆಗಳನ್ನು ಮುಂದಕ್ಕೆ ನಿವಾರಿಸಿಕೊಳ್ಳಬಹುದು.

ರಾ—ರಘುನಾಥರಾಯ.

---

* ೧೯೧೬ನೆಯ ವರುಷದಲ್ಲಿ ಕರ್ಣಾಟಕ ಸಾಹಿತ್ಯಪರಿಷತ್ತಿನವರು "ಗ್ರಾಂಥಿಕ ರೂಪಗಳ ಏಕೀಕರಣ" ಎಂಬ ವಿಷಯವನ್ನು ನಿಯಮಿಸಿ, ಅದರಮೇಲೆ ವಿದ್ವಾಂಸರು ಉಪನ್ಯಾಸಗಳನ್ನು ಬರೆದು ಕಳುಹಿಸಬೇಕೆಂದೂ, ಉತ್ತಮವಾದ ಉಪನ್ಯಾಸಕ್ಕೆ ಒಂದುನೂರು ರೂಪಾಯಿಯ ಬಹುಮಾನವನ್ನು ಕೊಡುವುದಾಗಿಯೂ ಪ್ರಕಟಿಸಿದರು. ಉಪನ್ಯಾಸಕರು ಕರ್ಣಾಟಕ ಭಾಷಾ ಚರಿತ್ರೆಯ ಗೋಜಿಗೆ ಹೋಗದೆ, ತಮತಮಗೆ ತೋರಿದ ಕೆಲವು ಯುಕ್ತಿಗಳನ್ನು ಸೇರಿಸಿ ಉಪನ್ಯಾಸಗಳನ್ನು ಬರೆದಿರುವರು. ಈ ಉಪನ್ಯಾಸಗಳಲ್ಲಿ ಮೂರು ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ದ್ವಿತೀಯ ತೃತೀಯ ಸಂಚಿಕೆಗಳಲ್ಲಿ ಪ್ರಕಟಿಸಲ್ಪಟ್ಟಿವೆ. ವಾಚಕರು ಅವುಗಳನ್ನು ನೋಡಬಹುದು.

ಅನುಬಂಧಗಳು.

A. ಭರತಖಂಡದಲ್ಲಿ ಕನ್ನಡಕ್ಕಿರುವ ಸ್ಥಾನ.

ಭರತ ಖಂಡದಲ್ಲಿ ಜನರು ಆಡುತ್ತಿರುವ ಭಾಷೆಗಳ ಸಂಖ್ಯೆ ಇನ್ನೂರಕ್ಕಿಂತಲೂ ಅಧಿಕವಾಗಿರುತ್ತದೆ, ಆದರೆ ಕೊಡಗಿ ತುಳುವ ಮುಂತಾದ ಅನೇಕ ಭಾಷೆಗಳು ಗ್ರಂಥಸ್ಥವಾಗಿಲ್ಲ. ಅವುಗಳನ್ನಾಡುವ ಜನರ ಸಂಖ್ಯೆಯೂ ವಿಶೇಷವಾಗಿಲ್ಲ. 25 ಲಕ್ಷಜನರು ಆಡುವ ಭಾಷೆಯು ಸುಪ್ರಸಿದ್ಧವೆಂದು ಇಟ್ಟುಕೊಳ್ಳುವ ಪಕ್ಷಕ್ಕೆ ಕೆಳಗೆ ಕೊಡುವ ಭಾಷೆಗಳು ಇಂಡಿಯಾ ಚಕ್ರಾಧಿಪತ್ಯದಲ್ಲಿ ಸುಪ್ರಸಿದ್ಧಗಳಾಗಿರುವುವು. ಯಾವುವೆಂದರೆ,—

	ಭಾಷೆಯ ಹೆಸರು.	ಆಡುವವರ ಸಂಖ್ಯೆ.
1.	ಹಿಂದಿ ಮತ್ತು ಹಿಂದುಸ್ಥಾನಿ	9,84,64,000
2.	ಬಂಗಾಳಿ	4,83,68,000
3.	ತೆಲುಗು	2,35,43,000
4.	ಮರಾಠಿ . .	1,98,07,000
5.	ತಮಿಳು	1,81,28,000
6.	ಪಂಜಾಬಿ	1,58,77,000
7.	ರಾಜಸ್ಥಾನಿ	1,40,68,000
8.	ಗುಜರಾತಿ . .	1,06,82,000
9.	ಕನ್ನಡ	1,05,26,000
10	ಒಢ್ರಭಾಷೆ	1,01,62,000
11.	ಬರ್ಮೀಸ್ ಭಾಷೆ . ..	78,93,000
12.	ಮಲೆಯಾಳಿ	67,92,000
13	ಪಶ್ಚಿಮದ ಪಂಜಾಬಿ	47,79,000
14.	ಸಿಂಧಿ	36,70.000
15.	ಖವಾರಿ	33,57,000

ಇಂಡಿಯಾ ಸಾಮ್ರಾಜ್ಯದ ಭಾಷೆಗಳಲ್ಲಿ ಹತ್ತು ಭಾಷೆಗಳು ಬಹು ಪ್ರಸಿದ್ಧಗಳಾಗಿ ಒಂದು ಕೋಟಿಗಿಂತಲೂ ಹೆಚ್ಚಾದ ಜನರಿಂದ ಆಡಲ್ಪಡುತ್ತಿವೆ. ಆ ವರ್ಗದಲ್ಲಿ ಕನ್ನಡವೂ ಸೇರಿದೆ.

---

* ಇದರೊಳಗೆ ಪೂರ್ವದ ಹಿಂದಿಯೂ ಪಶ್ಚಿಮದ ಹಿಂದಿಯೂ ಸೇರಿವೆ.

B. ಕನ್ನಡ ದೊಡನಾಡಿಗಳ ವಿವರ.

(a) ವೈಸೂರು ಸಂಸ್ಥಾನದಲ್ಲಿ

ನಾಡುಗಳು	ಜನಸಂಖ್ಯೆ	ಕನ್ನಡ	ತಮಿಳು	ತೆಲುಗು	ಮರಾಠಿ	ಹಿಂದುಸ್ತಾನಿ
ವೈಸೂರು ಡಿಸ್ಟ್ರಿಕ್ಟು	12,71,000	11,95,000	15,500	18,600	7,000	34,000
ಬೆಂಗಳೂರು ,,	7,59,000	4,86,000	47,600	1,59,800	11,000	49,000
ಕೋಲಾರ ,,	7,31,000	1,89,000	45,100	4,39,000	8,000	48,000
ಚಿತ್ರದುರ್ಗ ,,	5,64,000	4,12,000	2,000	1,10,400	6,000	24,000
ತುಮಕೂರು ,,	7,35,000	5,78,000	4,400	1,07,200	6,000	35,000
ಹಾಸನ ,,	5,80,000	5,28,000	10,300	12,500	3,000	17,000
ಕಡೂರು ,,	3,38,000	2,69,000	5,600	9,400	4,000	15,000
ಶಿವಮೊಗ್ಗ ,,	5,17,000	4,20,000	4,000	14,700	15,000	34,000
ವೈಸೂರು ಪಟ್ಟಣ	71,300	37,000	8,000	6,800	4,500	14,000
ಬೆಂಗಳೂರು ,,	88,600	28,000	19,100	20,800	9,000	11,000
ಬೆಂಗಳೂರು ಕಂಟೋನ್ಮೆಂಟ್	1,00,800	6,000	42,000	16,600	3,600	23,000

(b) ಮದರಾಸ್ ಆಧಿಪತ್ಯದಲ್ಲಿ

ಶಾಲ್ಯದ ಡಿಸ್ಟ್ರಿಕ್ಟು	17,67,000	1,34,000	13,20,000	2,59,000	5,600	38,500
ಕೊಯಮುತ್ತೂರು ,,	21,16,000	2,58,000	13,63,000	4,66,000	2,600	21,200
ದ ಕನ್ನಡೀಯ ,,	11,95,000	2,24,000	1,000	829	36,200	18,500
ಬಳ್ಳಾರಿ ,,	9,69,000	5,34,000	6,900	3,21,000	11,500	79,500

(c) ಹೈದರಾಬಾದ್ ಸಂಸ್ಥಾನದಲ್ಲಿ

ನಾಡುಗಳು	ಜನಸಂಖ್ಯೆ	ಕನ್ನಡ	ತಮಿಳು	ತೆಲುಗು	ಮರಾಠಿ	ಹಿಂದುಸ್ತಾನಿ
ಗುಲ್ಬರ್ಗ ಡಿಸ್ಟ್ರಿಕ್ಟು	11,51,000	6,80,600	767	2,29,700	37,800	1,68,800
ರಾಯಚೂರು ,,	9,97,000	6,25,700	790	2,82,500	3,300	77,700
ಬೀದರ್ ,,	8,90,000	2,73,400	36	1,44,200	3,30,300	1,29,500
ಹೈದರಾಬಾದು ಪಟ್ಟಣ	5,00,600	2,300	18,900	1,85,300	15,700	2,44,700

(d) ಮುಂಬೈ ಆಧಿಪತ್ಯದಲ್ಲಿ.

ನಾಡುಗಳು	ಜನಸಂಖ್ಯೆ	ಕನ್ನಡ	ತಮಿಳು	ತೆಲುಗು	ಮರಾಠಿ	ಹಿಂದುಸ್ತಾನಿ
ಉ. ಕನ್ನಡಿಯ ಡಿಸ್ಟ್ರಿಕ್ಟು*	4,30,000	2,41,000	ಗೊತ್ತಿಲ್ಲ†	ಗೊತ್ತಿಲ್ಲ†	1,65,000	20,000
ಧಾರ್ವಾಡ ,,	10,26,000	8,29,000			41,000	1,11,000
ಬೆಳಗಾವು ,,	9,44,000	6,20,000			2,35,000	71,000
ಬಿಜಾಪುರ ,,	8,63,000	7,05,000			31,000	86,000
ದ ಮಹಾರಾಷ್ಟ್ರ ಸಂಸ್ಥಾನಗಳು	6,18,000	3,27,000			2,32,000	46,000
ಕೊಲ್ಹಾಪುರ ಸಂ.	8,33,000	1,31,000			6,65,000	31,000
ಸೋಲಾಪುರ ಡಿ.	7,68,000	49,000			6,33,000	56,000

* ದಕ್ಷಿಣ ಕನ್ನಡಿಯ ಡಿಸ್ಟ್ರಿಕ್ಟಿನಲ್ಲಿ 2,37,000 ಜನರು ಮಲೆಯಾಳವನ್ನು, 2,45,000 ಜನರು ತುಳವ ಭಾಷೆಯನ್ನು ಆಡುತ್ತಾರೆ.

† ತಮಿಳರ ಮತ್ತು ತೆಲುಗರ ಸಂಖ್ಯೆಗಳು ನಮಗೆ ದೊರೆಯಲಿಲ್ಲ.

ಕರ್ನಾಟಕ ಸಾಹಿತ್ಯ ಪರಿಷತ್ತಿನ ವಿಷಯ.

I ಚಂದಾಹಣ.

೧೯೧೭ನೆಯ ಇಸವಿ ಅಕ್ಟೋಬರ್ ೧ನೆಯ ತಾರೀಖಿನಿಂದ ಡಿಸೆಂಬರ್ ತಿಂಗಳ ಅಂತ್ಯದವರೆಗೆ ಪರಿಷತ್ತಿನ ಸದಸ್ಯರುಗಳಿಂದ ಬಂದಿರುವ ಚಂದಾಹಣದ ಪಟ್ಟಿ.

೧-೧೦-೧೯೧೭	ಮ॥ ರಾ॥	ಸಿ ವಾಸುದೇವಯ್ಯನವರು	೨೪-೦-೦
೪-೧೦-೧೯೧೭	,,	ಬಿ. ವೆಂಕಟಾಚಾರ್ ಬಿ.ಎ. ಮೈಸೂರು	೫-೦-೦
೨೨-೧೦-೧೯೧೭	,,	ಕೆ. ನಂಜುಂಡಶಾಸ್ತ್ರಿಗಳು	೪-೦-೦
೨೪-೧೦-೧೯೧೭	,,	ಎಂ. ರಘುನಾಥರಾಯರು, ಪುತ್ತೂರು	೪-೦-೦
೨೫-೧೦-೧೯೧೭	,,	ಎಚ್ ನಾರಾಯಣರಾಯರು ಬಿ.ಎ.ಬಿ.ಎಲ್. ಚಾಂದ್ರ.	೫-೦-೦
,,	,,	ಎಂ. ಅನಂತರಾಯರು, ಪುತ್ತೂರು.	೪-೦-೦
೨-೧೧-೧೯೧೭	,,	ಎಂ ಹನುಮಂತರಾಯರು, ಚನ್ನಪಟ್ಣ.	೫-೦-೦
,,	,,	ಸಿ ಎನ್. ವೆಂಕಪ್ಪಯ್ಯನವರು ಬಿ.ಎ.ಬಿ.ಎಲ್ ಮಡಿಕೇರಿ.	೪-೦-೦
೩-೧೧-೧೯೧೭	,,	ಸಿ ರಾಮರಾಯರು, ಬೆಂಗಳೂರು.	೫-೦-೦
೪-೧೧-೧೯೧೭	,,	ಎನ್. ವೆಂಕಟೇಶಯ್ಯಂಗಾರ್ಯರು	೧೦-೦-೦
೧೧-೧೧-೧೯೧೭	,,	ಎ. ರಾಮರಾಯರು, ಬಳ್ಳಾರಿ.	೪-೦-೦
೧೯-೧೧-೧೯೧೭	,,	ಕೆ. ಶ್ರೀ ನರಸಿಂಹಯ್ಯನವರು ಎಂ ಎ ಎಲ್. ಟಿ. ಶಿವಮೊಗ್ಗ.	೫೦-೦-೦
,,	,,	ಎಚ್. ಹನುಮಂತಯ್ಯ, ಚಾಣಾವರ.	೪-೦-೦
೨೦-೧೧-೧೯೧೭	,	ಪಿ ಭೀಮಾಚಾರ್ ಎಂ.ಎ ಬಳ್ಳಾರಿ.	೪-೦-೦
೪-೧೨-೧೯೧೭	,,	ಪಿ. ಕೃಷ್ಣಪ್ಪನವರು ಎಂ. ಎ.	೪-೦-೦
೩೧-೧೨-೧೯೧೭	,,	ಎಂ ಚನ್ನಕೃಷ್ಣಪ್ಪನವರು, ಗೌರಿಬಿದನೂರು	೪-೦-೦
		ಜುಮ್ಲಾ.	೧೪೦-೦-೦
		ಹಿಂದೆ ವಸೂಲಾದ ಮೊತ್ತ.	೨೦೬೮-೦-೦
		ಜುಮ್ಲಾ	೨೨೦೮-೦-೦

II ಪರಿಷತ್ಪತ್ರಿಕೆಯ ಚಂದಾ.

ಪರಿಷತ್ಪತ್ರಿಕೆಯ ಚಂದಾದಾರರಿಂದ ವಸೂಲಾದ ಮೊಬಲಗು.

೧-೧೦-೧೯೧೭ ಮ॥ ರಾ॥ ಆರ್. ಎನ್. ಸೂರ್ಯನಾರಾಯಣ, ಚಾಣಾವರ ೩-೦-೦

ಕರ್ಣಾಟಕ ಸಾಹಿತ್ಯ ಪರಿಷತ್ತಿನ ವಿಷಯ.

III. ಪರಿಷತ್ತಿನ ಪುಸ್ತಕಭಂಡಾರ.

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಪುಸ್ತಕಭಂಡಾರಕ್ಕೆ ಉಚಿತವಾಗಿ ಕಳುಹಿಸಿರುವ ಗ್ರಂಥಗಳ ಮತ್ತು ದಾತೃಗಳ ಪಟ್ಟಿ.

ಗ್ರಂಥಗಳ ಹೆಸರು	ದಾತೃಗಳು.
ಛಂದೋಮಾಲಿಕೆ (೨ ಪ್ರತಿ)	ಪಂಡಿತ ಕೆ ಶ್ರೀನಿವಾಸರಾಘವಾಚಾರ್ಯರು.
ಚಿತ್ತೂರು ಮೊದಲನೆಯ ಜೋಹರ್	ಮ॥ರಾ॥ ಕೆ. ಲಕ್ಷ್ಮೀನಾರಾಯಣಭಟ್ಟರು.
ನಗೆಗೇಡು	ಮ॥ ರಾ॥ ಶ್ರೀಕಂಠಮ್ಯಾನಸರು.
ಪೂರ್ಣಕಲಾ	ಶ್ರೀ ತಿರುಮಲಮ್ಮ.
ಬಸವಪುರಾಣ	ಮುನ್ಸಿಫ್ ಪಂಡಿತ ರಂಗಾಚಾರ್ಯರವರು
ಜೈಮಿನಿ (ಕೈಬರಹದ ಹಸ್ತಪ್ರತಿ)	ಮ॥ ರಾ॥ ಎಂ ಶಾಮರಾಯಪ್ರತಿ.
ಕವಿಜನಾಶ್ರಯವು	
ಜೈಮಿನಿ ಭಾರತವು	
ಯುದ್ಧಮಲ್ಲುನಿ ಬೆಜವಾಡ ಶಿಲಾಶಾಸನ	ಆಂಧ್ರಸಾಹಿತ್ಯಪರಿಷತ್ತಿನಿಂದ ಪ್ರಕಟಿಸಲ್ಪಟ್ಟು ಉಚಿತವಾಗಿ ಕೊಡಲ್ಪಟ್ಟಿವೆ
ನೀತಿ ಸೀಸಪದ್ಯ ಶತಕವು	
ವಿಪ್ರನಾರಾಯಣ ಚರಿತ[ಮು	

IV. ಪತ್ರಿಕೆಗಳ ವಿಮರ್ಶೆ.

1. **ಹಿತಚಿಂತಕ**- ಈ ಮಾಸಪತ್ರಿಕೆಯು ಒಂದು ವರ್ಷದಿಂದ ಹೊರಡುತ್ತಿದೆ ಇದರಸಂಪಾದಕರು ರಾಜಕೀಯ ವಿಷಯಗಳಿಗೂ ಹರೆಯದವರಾದ ಸ್ತ್ರೀಪುರುಷರಿಗೆ ಮಾತ್ರ ಮನೋರಂಜನೆಮಾಡುವ ವಿಷಯಗಳಿಗೂ ಇದರಲ್ಲಿ ಅವಕಾಶಕೊಡುವದಿಲ್ಲವೆಂದು ತಿಳಿಸಿರುತ್ತಾರೆ. ಇದರ ಹತ್ತನೆಯ ಹನ್ನೊಂದನೆಯ ಸಂಚಿಕೆಗಳಲ್ಲಿ ಪ್ರಕಟಿಸಿರುವ "ಧರ್ಮ" ಎಂಬ ವಿಚಾರವು ಶ್ರುತಿ ಸ್ಮೃತಿ ವಚನಗಳ ಆಧಾರಗಳಿಂದ ಬರೆಯಲ್ಪಟ್ಟಿದೆ. ಹನ್ನೊಂದನೆಯ ಸಂಚಿಕೆಯಲ್ಲಿರುವ ಭರತಖಂಡದ 'ಸಾಂಪತ್ತಿಕಸ್ಥಿತಿ" ಎಂಬುದು ಸರ್ವರ ಅವಲೋಕನೆಗೂ ತಕ್ಕುದಾಗಿರುತ್ತದೆ. ಅಪೂರ್ಣಗಳಾದ ಇತರ ಉಪಯುಕ್ತ ವಿಷಯಗಳು ಪ್ರಕಟವಾಗಿವೆ ಇದರ ವರ್ಷದ ಚಂದಾ (ಅಂಚೆಯ ವೆಚ್ಚವು ಸೇರಿ, ರೂ ೧ ೮-೦)

ಸಂಪಾದಕ, "ಹಿತಚಿಂತಕ" ನನಗುಂಡಿಕೊಪ್ಪ-ಪೋ-ದೊಡವಾಡ—ಈ ವಿಳಾಸದಿಂದ ಬೇಕಾದವರು ಪತ್ರಿಕೆಯನ್ನು ಪಡೆಯಬಹುದು.

2. **ವಿದ್ಯೋದಯ**- ಇದರ ಎರಡು ಸಂಚಿಕೆಗಳು ನಮ್ಮ ಹಸ್ತಗತವಾಗಿರುವುವ. ಈ ಮಾಸಪತ್ರಿಕೆಯು ವಿದ್ಯಾರ್ಥಿಗಳಿಗೆ ಬೇಕಾದ ವಿಷಯಗಳಿಂದ ಅಡಕವಾಗಿರುವುದು ಈ ಸಂಚಿಕೆಗಳಲ್ಲಿ 'ಅಲೆಗ್ಸಾಂಡರ್ ದಿಗ್ರೇಟ್' 'ಕರ್ಮದೇವಿ' ಎಂಬ ಎರಡು ವಚನ ಗ್ರಂಥಗಳು ಪ್ರಾರಂಭಿಸಲ್ಪಟ್ಟಿರುತ್ತವೆ. "ಮುದ್ರಣ' "ಆರೋಗ್ಯ" ಎಂಬ ಹೆಸರಿನ ಎರಡು ಲೇಖನಗಳನ್ನು ಸಂಪಾದಕರು ಇವುಗಳಲ್ಲಿ ಪ್ರಕ

ಟಿಸಿದ್ದಾರೆ. ಇದು ವಿದ್ಯಾರ್ಥಿಗಳಿಗೋಸುಗವೇ ಪ್ರಕಟವಾಗುವ ಮಾಸಪತ್ರವಾದುದರಿಂದ ಇದರಲ್ಲಿ ಭಾಷಾದೋಷಗಳೂ, ಮುದ್ರಣ ಸ್ಖಾಲಿತ್ಯಗಳೂ ಇಲ್ಲದಂತೆ ನೋಡಿಕೊಳ್ಳುವದು ಸಂಪಾದಕರ ಕರ್ತವ್ಯವು. ವಿದ್ಯಾರ್ಥಿಗಳಿಗೆ ಬೇಕಾದ ಪ್ರಬಂಧ ಮುಂತಾದ ವಿಷಯಗಳನ್ನು ಪ್ರಕಟಿಸುವದಾಗಿ ಸಂಪಾದಕರು ಸಂಕಲ್ಪಿಸಿರುವದು ಸ್ತುತ್ಯವು. ಇದರ ಚಂದಾ ಸಾಮಾನ್ಯರಿಗೆ ರೂ. ೧-೮-೦, ವಿದ್ಯಾರ್ಥಿಗಳಿಗೆ ರೂ. ೧-೦-೦. ವಿದ್ಯೋದಯ ಆಫೀಸ್ " ಭವಾನ್ಯಾಶ್ರಯ " ಬೆಂಗಳೂರು ಸಿಟಿ—ಎಂಬ ವಿಳಾಸಕ್ಕೆ ಬರೆದು ಬೇಕಾದವರು ಪತ್ರಿಕೆಯನ್ನು ಪಡೆಯಬಹುದು

೩. **ಸರಸ್ವತಿ**- ಇದೊಂದು ಲಕ್ಷ್ಯ ಪತ್ರಿಕೆ ಇದು ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಶ್ರೀ॥ ಕಲ್ಯಾಣಮ್ಮನವರಿಂದ ಪ್ರಕಟಿಸಲ್ಪಟ್ಟಿರುವದು. ಇದರ ಎರಡನೆಯ ಸಂಚಿಕೆಯಿಂದ ಐದು ಸಂಚಿಕೆಗಳನ್ನು ನಾವು ಸಂತೋಷದಿಂದ ಓದಿದೆವು. ಸ್ತ್ರೀಯರ ಕರ್ತವ್ಯ, ಶಿಶುಪೋಷಣ, ಸುಭಾಷಿತಗಳು ಮೊದಲಾದುವು ಸ್ತ್ರೀಯರೂ ಇತರರೂ ಓದತಕ್ಕುವುಗಳಾಗಿವೆ. ವಸುಂಧರೆ ಯೆಂಬ ಲೇಖನವು ವಸುಂಧರೆಯ ಪತಿಭಕ್ತಿಯನ್ನು ತಿಳಿಯಿಸುವದಲ್ಲದೆ ವಾಚಕರ ಮನಸ್ಸನ್ನು ಕರಗಿಸತಕ್ಕದ್ದೂ ಆಗಿರುವದು

ಅಲ್ಲಲ್ಲಿ ವಿದ್ಯಾವತಿಯರಾದ ಆರ್ಯಮಹಿಳೆಯರ ಭಾವಚಿತ್ರಗಳು ಕೊಡಲ್ಪಟ್ಟಿರುವುವು. ಆರನೆಯ ಸಂಚಿಕೆಯ ಮೊದಲಲ್ಲಿ ಎರಡು ಕಂದಗಳಿರುತ್ತವೆ. ಇವುಗಳಲ್ಲಿ ಇರುವ ಕೊರತೆಗಳನ್ನು ಸುಲಭವಾಗಿ ಸಂಪಾದಕಿಯರು ಹೋಗಲಾಡಿಸಬಹುದಾಗಿದ್ದಿತು. ಅಲ್ಲಲ್ಲಿ ಮುದ್ರಣಸ್ಖಾಲಿತ್ಯಗಳು ಕಾಣಬರುತ್ತವೆ. ಅಂತಹ ಕೊರತೆಗಳಿಗೆ ಸಂಪಾದಕಿಯರು ಮುಂದೆ ಅವಕಾಶ ಕೊಡಲಾರರು. ಇದರ ಚಂದಾ ರೂ. ೩-೦-೦

ಶ್ರೀ॥ ಆರ್. ಕಲ್ಯಾಣಮ್ಮ, ಎಡಿಟರ್ ಮತ್ತು ಮ್ಯಾನೇಜರ್, ಸರಸ್ವತಿ, ಚಾಮರಾಜಪೇಟೆ, ಬೆಂಗಳೂರು ಸಿಟಿ—ಎಂಬ ವಿಳಾಸದಿಂದ ಪತ್ರಿಕೆಯನ್ನು ಪಡೆಯಬಹುದು.

V ಗ್ರಂಥ ವಿಮರ್ಶೆ.

1. **ನಗೆಗೇಡು**- ಇದು ಶ್ರೀ॥ ದ್ವಿಜೇಂದ್ರಲಾಲ ರಾಯರವರು ಬರೆದ ವಿರಹ ಎಂಬ ಬಂಗಾಳಿಯ ಪುಸ್ತಕದ ಕನ್ನಡಭಾಷೆಯ ಪರಿವರ್ತನೆ ಇದು ' ಅಕ್ಷರಾಂಜಲಿ " ಎಂಬ ಮಾಸಪತ್ರಿಕೆಯ ಮೂರನೆಯ ಸಂಪುಟದಲ್ಲಿ ಅಕ್ಷರಾಂಜಲಿಯ ಸಂಪಾದಕರಿಂದ ಪ್ರಕಟಿತವಾಗಿರುತ್ತದೆ ಸಂಸಾರದಲ್ಲಿ ಪತಿಪತ್ನಿಯರಿಗೆ—ಅದರಲ್ಲಿಯೂ ಮೂರನೆಯ ನಾಲ್ಕನೆಯ ಸಂಬಂಧ ಮಾಡಿಕೊಳ್ಳತಕ್ಕವರಿಗೆ—ಬರುವ ಅವಸ್ಥೆಗಳೂ ಅನುಭವಗಳೂ ಪರಸ್ಪರ ಸಲ್ಲಾಪಗಳಮೂಲಕ ಇದರಲ್ಲಿ ವ್ಯಕ್ತಪಡಿಸಲ್ಪಟ್ಟಿವೆ ಕಥಾಸಂವಿಧಾನವು ಸಂಗತವಾಗಿರುವದು. ವಾಚಕರು ಬೇಸರಾದ ವೇಳೆಯಲ್ಲಿ ಓದಬಹುದಾದ ಪುಸ್ತಕ. ಗ್ರಂಥದ ಕೊನೆಯಲ್ಲಿ ಇರುವ ಪದ್ಯಗಳಲ್ಲಿ ಹೇಗೆಯೋ ಒಂದೆರಡು ಕಡೆ ಇದ್ದಿರುವ ಕೊರತೆಗಳನ್ನು ಸಂಪಾದಕರು ದ್ವಿತೀಯಮುದ್ರಣದಲ್ಲಿ ಸರಿಮಾಡಿಕೊಳ್ಳಬಹುದು. ಪರಿವರ್ತನಕಾರರ ಬರವಣಿಗೆಯ ಲಾಲಿತ್ಯಕ್ಕೆ ಸಂತೋಷಿಸುತ್ತೇವೆ. ಇದರಬೆಲೆ ರೂ. ೦-೧೨-೦, ಗ್ರಂಥವು ಮೈಸೂರು ಅಕ್ಷರಾಲಯದಲ್ಲಿ ದೊರೆಯುವದು

2. **ಶ್ರೀಮತ್ಸುಂದರಕಾಂಡ ತತ್ತ್ವಸಂಗ್ರಹವು.** ಶ್ರೀಮದ್ರಾಮಾಯಣದ ಸುಂದರಕಾಂಡದ ತತ್ತ್ವವನ್ನು ಸಂಗ್ರಹಿಸಿ ತಿಳಿಯಿಸುವ ಈ ಪುಸ್ತಕವು ಬೆಂಗಳೂರು

ಚಾಮರಾಜಪೇಟೆಯ ಐದನೆಯ ಬೀದಿಯಲ್ಲಿರುವ ರಿ|| ಸೀ|| ಅ|| ಕೆ|| ಮ|| ರಾ|| ಸಿ. ರಾಮರಾಯರವರಿಂದ ರಚಿತವಾದದು. ಈ ಪುಸ್ತಕದಲ್ಲಿ ಸುಂದರಕಾಂಡವೆಂಬ ಹೆಸರು ಶ್ರೀಮದ್ರಾಮಾಯಣದ ಐದನೆಯ ಕಾಂಡಕ್ಕೆ ಬರಲು ಇರುವ ಕಾರಣಗಳನ್ನು ಗ್ರಂಥಕರ್ತರು ಆಧಾರಗಳೊಡನೆ ವಿಚಾರಮಾಡಿರುತ್ತಾರೆ.

ಇದಲ್ಲದೆ ಇದರಲ್ಲಿ ಉಕ್ತವಾಗಿರುವ ಪತಿವ್ರತಾಧರ್ಮವೂ ದೂತ ಧರ್ಮವೂ ಈ ಗ್ರಂಥದ ಗೌರವವನ್ನು ಹೆಚ್ಚಿಸುತ್ತವೆ. ಈ ವಿಚಾರದಲ್ಲಿ ಗ್ರಂಥಕರ್ತರು ಉಪಯೋಗಿಸಿರುವ ಶ್ಲೋಕ ರತ್ನಗಳಲ್ಲಿ ಒಂದೆರಡನ್ನು ವಾಚಕರ ಮುಂದಿಡುವೆವು. ಅವರೇ ಬೆಲೆ ಕಟ್ಟಬಹುದು

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್ ॥
ಅಕಾರ್ಯಂ ನ ಮಯಾ ಕಾರ್ಯಮೇಕಪತ್ನ್ಯಾ ವಿಗರ್ಹಿತಂ ।
ಕುಲಂ ಸಂಪ್ರಾಪ್ತಯಾ ಪುಣ್ಯಂ ಕುಲೇ ಮಹತಿ ಜಾತಯಾ ॥

ಈ ಪುಸ್ತಕದಲ್ಲಿ ಪುತ್ತ್ಯಾವ, ಆದ್ದರಿಂದ, ಮೂರನೇಲಿ ಬ್ರಮ್ಹಾಂಡ ಮೊದಲಾದ ಭಾಷಾದೋಷಗಳು ಕಾಣುವವು. ಇವನ್ನು ಗ್ರಂಥಕರ್ತರು ದ್ವಿತೀಯ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದು.

೩. **ಚಿತ್ತೂರು ಮೊದಲನೆಯ ಜೋಹರ್ ಅಥವಾ ಪದ್ಮಿನಿ**- ಇದು ಮಹಾರಾಷ್ಟ್ರ ಭಾಷೆಯಲ್ಲಿರುವ ಚಿತ್ತೂರು ಇತಿಹಾಸದ ಕರ್ಣಾಟಕ ಭಾಷಾಂತರ. ಇಂತಹ ಗ್ರಂಥವನ್ನು ಕನ್ನಡಕ್ಕೆ ತಂದುಕೊಟ್ಟ ಶ್ರೀ|| ತೀರ್ಥಹಳ್ಳಿ ಕೆ. ಲಕ್ಷ್ಮೀನಾರಾಯಣ ಭಟ್ಟರಿಗೆ ಕೃತಜ್ಞರಾಗಿರುತ್ತೇವೆ. ಈ ಪುಸ್ತಕವನ್ನು ಓದಲು ಪ್ರಾರಂಭಿಸಿದರೆ ಮುಗಿಸುವವರೆಗೂ ಪುಸ್ತಕವನ್ನು ಕೆಳಗಿರಿಸಲು ಮನಬರುವುದಿಲ್ಲ. ಸುಲ್ತಾನ್ ಅಲ್ಲಾವುದೀನನಿಗೆ ಪದ್ಮಿನಿಯಲ್ಲಿ ಆಶೆ ಹುಟ್ಟಿದುದರಿಂದ ಆದ ಅನರ್ಥರಾಶಿಯ ವಿಚಾರವು ಇದರಲ್ಲಿ ವಿವೃತವಾಗಿದೆ. ವೀರರಸವೂ ಕರುಣಾರಸವೂ ತುಂಬಿವೆ. ರಾಜಪುತ್ರ ಸ್ತ್ರೀಯರ ಪಾತಿವ್ರತ್ಯ ಮಹಿಮೆಯೂ, ಶೌರ್ಯ ಧೈರ್ಯಾದಿಗಳೂ ವಾಚಕರಿಗೆ ಆಶ್ಚರ್ಯವನ್ನು ಉಂಟು ಮಾಡುತ್ತವೆ. ಪೀಠಿಕೆಯ ನಾಲ್ಕನೆಯ ಐದನೆಯ ಕಂದಗಳೂ ಮೊದಲನೆಯ ಪ್ರಕರಣದ ಒಂದನೆಯ ಕಂದವೂ ಲಕ್ಷಣಾನುಸಾರವಾಗಿಲ್ಲ. ಶೃತ, ಫಲಹಾರ, ತಿಳಿಯುತ್ತ, ಆದದ್ದು, ವಿನಹಾ ಮುಂತಾದ ಅಶುದ್ಧ ಪದಗಳಿರುತ್ತವೆ. ಇವನ್ನು ಗ್ರಂಥಕರ್ತರು ದ್ವಿತೀಯ ಮುದ್ರಣದಲ್ಲಿ ಸರಿಪಡಿಸಿಕೊಳ್ಳಬಹುದು. ಮೈಸೂರು ಮಧುರವಾಣಿಯ ಗ್ರಂಥಮಾಲೆಯಲ್ಲಿ ಇಪ್ಪತ್ತು ಮೂರನೆಯ ಅಂಕವುಳ್ಳದಾಗಿ ಪ್ರಕಟವಾಗಿದೆ. ಇದರ ಬೆಲೆ ರೂ ೧—೦—೦

ವಿವಿಧವಿಷಯ ವಿಮರ್ಶೆ.

ಚಾಮುಂಡರಾಯ ಪುರಾಣದ ಆದಿಪುರಾಣದ ಭಾಗವನ್ನು ಪರಿಷತ್ತಿನ ವಿದ್ವಾಂಸರು ಅನೇಕ ಪ್ರತಿಗಳ ಸಹಾಯದಿಂದ ಬಹುಶ್ರಮಪಟ್ಟು ಪರಿಷ್ಕರಿಸಿರುತ್ತಾರೆ. ಜೈನಮತಕ್ಕೆ ಸಂಬಂಧಪಡುವ ಅನೇಕ ವಿಷಯಗಳು ಆದಿಪುರಾಣದಿಂದ ಹೊರಪಡುವುದರಿಂದ ಅದನ್ನು ಮುಂದಿನ ಪತ್ರಿಕೆಯ ಸಂಚಿಕೆಯಲ್ಲಿ ಪೂರಯಿಸಬೇಕೆಂದು ಸಂಕಲ್ಪಿಸಿದೆ

*

ಕರ್ನಾಟಕಭಾಷಾ ಚರಿತ್ರೆಯ ಹೆಗ್ಗುರುತುಗಳೆಂಬ ಮ॥ ರಘುನಾಥರಾಯರ ಉಪನ್ಯಾಸವು ಈ ಸಂಚಿಕೆಯಲ್ಲಿ ೭೦ ಪುಟಗಳನ್ನು ಒಳಕೊಂಡಿದೆ. ಈಗಿನವರೆಗೂ ವಿದ್ವಾಂಸರಾರೂ ಈ ವಿಷಯವನ್ನು ಕುರಿತು ಬರೆದಿಲ್ಲ. ಕನ್ನಡ ನಾಡುಗಳ ಎಲ್ಲೆಮಾನಗಳನ್ನು ತಿಳಿಸುವುದಕ್ಕೂ ಚರಿತ್ರಾಂಶಗಳನ್ನು ಸ್ಪಷ್ಟಪಡಿಸುವುದಕ್ಕೂ ರಾಯರವರು ಒಂದು ನಕ್ಷೆಯನ್ನು (ಮ್ಯಾಪನ್ನು) ತಯಾರುಮಾಡಿರುತ್ತಾರೆ- ಇದು ಬಹು ಉಪಯುಕ್ತವಾಗಿರುವುದು ಅರ್ವಾಚೀನದ ತಿರುಳ್ಗನ್ನಡದ ನಿರ್ಧಾರಣೆಗೆ ರಾಯರವರು ಕಾನೇಷುಮಾರಿಯ ಲೆಕ್ಕಗಳನ್ನು ಕೊಟ್ಟಿರುತ್ತಾರೆ ಇದರ ಪ್ರಯೋಜನವೂ ಅತಿಶಯವಾಗಿರುವುದು ಈ ಉಪನ್ಯಾಸದಲ್ಲಿ ರಾಯರವರು ಅನೇಕಾನೇಕ ಹೊಸವಿಷಯಗಳನ್ನು ಹೊರಪಡಿಸಿರುತ್ತಾರಾದುದರಿಂದ ವಿದ್ವಾಂಸರು ಸಾವಧಾನದಿಂದ ಇದನ್ನು ಓದಿ ಇದರ ಗುಣದೋಷಕಥನವನ್ನು ಮಾಡಿ ಕರ್ನಾಟಕ ಭಾಷಾ ಚರಿತ್ರೆಯ ನಿಜಾಂಶಗಳನ್ನು ಸಕಾರಣವಾಗಿ ರಾಯರವರಂತೆ ನಿರ್ಧರಿಸುವರೆಂದು ನಂಬಿದೇವೆ

* * *

ಮೈಸೂರು ಟ್ರೇನಿಂಗ್ ಕಾಲೇಜಿನಲ್ಲಿ ಪಂಡಿತರಾಗಿರುವ ವಿದ್ವಾನ್ ಶ್ರೀನಿವಾಸರಾಘವಾಚಾರ್ಯರವರು ಆದಿಪಂಪನ ಆದಿಪುರಾಣವನ್ನೂ ಭಾರತವನ್ನೂ ಪಠಿಸಿ ಅವುಗಳಲ್ಲಿರುವ ಕ್ಲಿಷ್ಟಪದಗಳಿಗೆ ಅರ್ಥವನ್ನು ಸಾಧ್ಯವಾಗುವ ಮಟ್ಟಿಗೆ ಬರೆದಿರುತ್ತಾರೆ. ಈ ಕ್ಲಿಷ್ಟಪದಗಳ ನಿಘಂಟನ್ನು ಪರಿಷತ್ಪತ್ರಿಕೆಯ ಮುಂದಿನ ಸಂಚಿಕೆಗಳಲ್ಲಿ ಮೂರುಮೂರು ಫಾರಮ್ಮಿನ ಪ್ರಕಾರ ಮುದ್ರಿಸಬೇಕೆಂದು ನಿಶ್ಚಿತವಾಗಿದೆ.

* * *

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಪರಿಷತ್ತಿನ ಪುಸ್ತಕ ಭಂಡಾರಕ್ಕೆ ೨೩೭ ಪುಸ್ತಕಗಳನ್ನು ಉಚಿತವಾಗಿ ದಯಪಾಲಿಸಿರುವರು. ಸಂಸ್ಕೃತ ಗ್ರಂಥಗಳೂ, ಇಂಗ್ಲೀಷು ಪುಸ್ತಕಗಳೂ, ಕನ್ನಡದ ಪುಸ್ತಕಗಳೂ ಇವುಗಳಲ್ಲಿ ಸೇರಿವೆ. ಶ್ರೀ ಶಂಕರಾಚಾರ್ಯರವರ ಗ್ರಂಥಗಳು ೨೨ ಸಂಪುಟಗಳಲ್ಲಿ ಮುದ್ರಿತವಾಗಿವೆ. ಅನೇಕ ಪುಸ್ತಕಗಳು ಉದ್ಗ್ರಂಥಗಳಾಗಿವೆ. ಈ ಮಹೋಪಕಾರವನ್ನು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರು ಪರಿಷತ್ತಿಗೆ ಮಾಡಿದುದಕ್ಕೆ ಪರಿಷತ್ತಿನವರು ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾರೆ.